ಕರ್ನಾಟಕ ವಿಧಾನಸಭೆ

# ಸದನ ಸಮಿತಿ

## (2014–2016)

## (ಹದಿನಾಲ್ಕನೇ ವಿಧಾನಸಭೆ)

ಬೆಂಗಳೂರು ಮತ್ತು ಮೈಸೂರು ತಡೆ ರಹಿತ ರಸ್ತೆ ನಿರ್ಮಾಣ, ನಗರಗಳ ಅಭಿವೃದ್ಧಿ, ಬೆಂಗಳೂರು ಸುತ್ತ ಮುತ್ತ ರಾಷ್ಟ್ರೀಯ ಹೆದ್ದಾರಿಗಳ ಸಂಪರ್ಕ ಕಲ್ಪಿಸುವ ಪೆರಿಫೆರಲ್ ರಿಂಗ್ ರಸ್ತೆ ಹಾಗೂ ಲಿಂಕ್ ರಸ್ತೆ ನಿರ್ಮಾಣಕ್ಕೆ ಸಂಬಂಧಿಸಿದಂತೆ, ಖಾಸಗಿ ಸಹಭಾಗಿತ್ವದಲ್ಲಿ ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್‌ಪ್ರೈಸಸ್ (ನೈಸ್) ಹಾಗೂ ನಂದಿ ಎಕಾನಾಮಿಕ್ ಕಾರಿಡಾರ್ ಎಂಟರ್‌ಪ್ರೈಸಸ್ (ನೀಸ್) ಸಂಸ್ಥೆಗಳ ಸಹಯೋಗದೊಂದಿಗೆ ಅನುಷ್ಠಾನಗೊಳಿಸುತ್ತಿರುವ ಯೋಜನೆ ಪರಿಶೀಲನೆಗೆ ರಚಿಸಲಾಗಿರುವ ಸದನ ಸಮಿತಿಯ ಶಿಫಾರಸ್ಸುಗಳನ್ನೊಳಗೊಂಡ ವರದಿ

# ಸದನ ಸಮಿತಿಯ ವರದಿ

ವಿಧಾನಸಭೆಯಲ್ಲಿ ಮಂಡಿಸಿದ ದಿನಾಂಕ: 02/12/16

ಕರ್ನಾಟಕ ವಿಧಾನಸಭೆಯ ಸಚಿವಾಲಯ,
ವಿಧಾನಸೌಧ, ಬೆಂಗಳೂರು

# ಸದನ ಸಮಿತಿ

## (2014-2016)

## (ಹದಿನಾಲ್ಕನೇ ವಿಧಾನಸಭೆ)

ಬೆಂಗಳೂರು ಮತ್ತು ಮೈಸೂರು ತಡೆ ರಹಿತ ರಸ್ತೆ ನಿರ್ಮಾಣ, ನಗರಗಳ ಅಭಿವೃದ್ಧಿ, ಬೆಂಗಳೂರು ಸುತ್ತ ಮುತ್ತ ರಾಷ್ಟ್ರೀಯ ಹೆದ್ದಾರಿಗಳ ಸಂಪರ್ಕ ಕಲ್ಪಿಸುವ ಪೆರಿಫೆರಲ್ ರಿಂಗ್ ರಸ್ತೆ ಹಾಗೂ ಲಿಂಕ್ ರಸ್ತೆ ನಿರ್ಮಾಣಕ್ಕೆ ಸಂಬಂಧಿಸಿದಂತೆ, ಖಾಸಗಿ ಸಹಭಾಗಿತ್ವದಲ್ಲಿ ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್‌ಪ್ರೈಸಸ್ (ನೈಸ್) ಹಾಗೂ ನಂದಿ ಎಕಾನಾಮಿಕ್ ಕಾರಿಡಾರ್ ಎಂಟರ್‌ಪ್ರೈಸಸ್ (ನೀಸ್) ಸಂಸ್ಥೆಗಳ ಸಹಯೋಗದೊಂದಿಗೆ ಅನುಷ್ಠಾನಗೊಳಿಸುತ್ತಿರುವ ಯೋಜನೆ ಪರಿಶೀಲನೆಗೆ ರಚಿಸಲಾಗಿರುವ ಸದನ ಸಮಿತಿಯ ಶಿಫಾರಸ್ಸುಗಳನ್ನೊಳಗೊಂಡ ವರದಿ

## ಸದನ ಸಮಿತಿಯ ವರದಿ

ವಿಧಾನಸಭೆಯಲ್ಲಿ ಮಂಡಿಸಿದ ದಿನಾಂಕ: 02/12/16

ಕರ್ನಾಟಕ ವಿಧಾನಸಭೆಯ ಸಚಿವಾಲಯ,
ವಿಧಾನಸೌಧ, ಬೆಂಗಳೂರು

F1(O)

# ಸದನ ಸಮಿತಿ

## (2014–2016)

(ದಿನಾಂಕ:04.09.2014 ರಂದು ರಚನೆಗೊಂಡಿತು)

ಅಧ್ಯಕ್ಷರು:

ಶ್ರೀ ಟಿ.ಬಿ. ಜಯಚಂದ್ರ,
ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಸಣ್ಣ ನೀರಾವರಿ ಸಚಿವರು

ಮಾನ್ಯ ವಿಧಾನಸಭೆಯ ಸದಸ್ಯರು ಹಾಗೂ ಸಮಿತಿಯ ಸದಸ್ಯರು:

ಶ್ರೀಯುತರುಗಳಾದ:

1. ಬಸವರಾಜ ರಾಯರೆಡ್ಡಿ, ಮಾನ್ಯ ಉನ್ನತ ಶಿಕ್ಷಣ ಸಚಿವರು
2. ಪ್ರಿಯಾಂಕ ಖರ್ಗೆ, ಮಾನ್ಯ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು
3. ಜೆ.ಆರ್. ಲೋಬೋ
4. ಡಾ॥ ರಫೀಕ್ ಅಹಮದ್ ಎಸ್
5. ಎಸ್.ಟಿ. ಸೋಮಶೇಖರ್
6. ಎಸ್.ಆರ್. ವಿಶ್ವನಾಥ್
7. ಸತೀಶ್ ರೆಡ್ಡಿ ಎಂ.
8. ಕೆ.ಎಂ. ಶಿವಲಿಂಗೇಗೌಡ
9. ಪಿ.ಆರ್. ಸುಧಾಕರ್ ಲಾಲ್
10. ಬಿ.ಆರ್. ಪಾಟೀಲ್

ಕರ್ನಾಟಕ ವಿಧಾನಸಭೆಯ ಅಧಿಕಾರಿಗಳು:

ಶ್ರೀಯುತರುಗಳಾದ

1. ಪಿ. ಓಂಪ್ರಕಾಶ್, ಕಾರ್ಯದರ್ಶಿ (30.04.2015ರವರೆಗೆ)
2. ಎಂ. ಗುರುರಾಜ್, ಕಾರ್ಯದರ್ಶಿ (02.05.2015 ರಿಂದ 31.08.2015 ರವರೆಗೆ)
3. ಜಯತೀರ್ಥ ಪಿ. ಗಲಗಲಿ, ಕಾರ್ಯದರ್ಶಿ (ಪ್ರ), 01.09.2015 ರಿಂದ 31.10.2015ರವರೆಗೆ)
4. ಎಸ್.ವೈ. ಕುಳಗೇರಿ, ಕಾರ್ಯದರ್ಶಿ (ಪ್ರ), (02.11.2015 ರಿಂದ 29.02.2016ರವರೆಗೆ)
5. ಎಸ್. ಮೂರ್ತಿ, ಕಾರ್ಯದರ್ಶಿ (ಪ್ರ)
6. ನ.ಶಿ. ಸುದರ್ಶನ್, ಉಪ ಕಾರ್ಯದರ್ಶಿ
7. ಯು. ಗೋಪಾಲ್, ಅಧೀನ ಕಾರ್ಯದರ್ಶಿ
8. ಶ್ರೀಮತಿ ಆಶಾ ಎಂ.ಎಂ., ಶಾಖಾಧಿಕಾರಿ

## ವಿಷಯ ಸೂಚಿ


| ವರದಿಯ ಕ್ರಮ ಸಂಖ್ಯೆ | ಶೀರ್ಷಿಕೆ | ಪುಟ ಸಂಖ್ಯೆ |
|---|---|---|
| | ಸಮಿತಿ ರಚನೆ | ಅ |
| | ಪ್ರಸ್ತಾವನೆ | iii-vi |
| | ಸದನ ಸಮಿತಿಯು ತೆಗೆದುಕೊಂಡ ಕ್ರಮಗಳು | vii-ix |
| | ಯೋಜನೆಯ ಹಿನ್ನೆಲೆ | xi-xxi |
| | ವಿವಿಧ ಸ್ತರದ ನ್ಯಾಯಾಲಯಗಳಲ್ಲಿ ಬಾಕಿ ಇರುವ/ಇತ್ಯರ್ಥವಾಗಿರುವ/ಚಾಲ್ತಿಯಲ್ಲಿರುವ ಅಥವಾ ಮಧ್ಯಂತರ ಆದೇಶದ ನಿರ್ಬಂಧನೆಗೆ ಒಳಪಟ್ಟಿರುವ ಪ್ರಮುಖ ಪ್ರಕರಣಗಳ ವಿವರಗಳು: | xxiii-xxxvii |
| | ಕ್ರಿಯಾ ಒಪ್ಪಂದದ ಅನುಚ್ಛೇಧಗಳ ಸಾಧಕ ಬಾಧಕಗಳು ಹಾಗೂ ಪಾಲನೆಯ ಬಗ್ಗೆ ಸಮಿತಿಯ ವಿಶ್ಲೇಷಣೆ ಹಾಗೂ ಶಿಫಾರಸ್ಸುಗಳು | 1 |
| I. | ಅನುಚ್ಛೇಧ -1 : ವರದಿಯ ಅರ್ಥೈಸುವಿಕೆ ವ್ಯಾಖ್ಯಾನಗಳ ಬಗ್ಗೆ | 1-2 |
| II. | ಅನುಚ್ಛೇಧ-2: ಪೂರ್ವಭಾವಿ ಷರತ್ತುಗಳ ಪಾಲನೆ ಹಾಗೂ ನಿರ್ವಹಣೆಯ ಬಗ್ಗೆ | 2-16 |
| III. | ಅನುಚ್ಛೇಧ 3 – ರಾಜ್ಯ ಸರ್ಕಾರದ ಕರ್ತವ್ಯಗಳು | 16-20 |
| IV. | ಅನುಚ್ಛೇಧ-3.2 – ಭೂಮಿಯ ನಿರ್ವಹಣೆಗೆ ಸಂಬಂಧಿಸಿದಂತೆ ಖಾಸಗಿ ಪಾಲುದಾರರು ಹಾಗೂ ಸರ್ಕಾರ ನಿರ್ವಹಿಸಬೇಕಾದ ಜವಾಬ್ದಾರಿ ಹಾಗೂ ಕರ್ತವ್ಯಗಳು | 20-22 |
| V. | ಅನುಚ್ಛೇಧ – 3.2.3. – ಜಮೀನಿನ ವಾಣಿಜ್ಯ ಅಥವಾ ಕೈಗಾರಿಕಾ ಬಳಕೆ, ವಲಯೀಕರಣ ಇತ್ಯಾದಿಗಳ ಬಗ್ಗೆ ಕ್ರಿಯಾ ಒಪ್ಪಂದದ ಹಿನ್ನೆಲೆಯಲ್ಲಿ ಅಥವಾ ಚಾಲ್ತಿಯಲ್ಲಿರುವ ಅಧಿನಿಯಮಗಳ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರದ ಪಾತ್ರ. | 22-27 |
| VI. | ಅನುಚ್ಛೇಧ 3.2.4 – ರಾಜ್ಯ ಸರ್ಕಾರವು ಸ್ಪಷ್ಟ, ಅಧಿಕೃತ ಹಾಗೂ ಮಾರಾಟಕ್ಕೆ ಅರ್ಹವಿರುವ, ಋಣಭಾರ ರಹಿತವಾದ ಜಮೀನನ್ನು ನೀಡುವ ಬಗ್ಗೆ. | 27-35 |
| VII. | ಅನುಚ್ಛೇಧ – 3.3– ಟೋಲ್ ರಸ್ತೆ | 35 |
| VIII. | ಅನುಚ್ಛೇಧ – 3.3.2 – ಟೋಲ್ ಪ್ರಾಧಿಕಾರದ ಅಧಿನಿಯಮವನ್ನು ಜಾರಿಗೊಳಿಸಲು ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮಗಳ ಬಗ್ಗೆ. | 35-41 |

| ವರದಿಯ ಕ್ರಮ ಸಂಖ್ಯೆ | ಶೀರ್ಷಿಕೆ | ಪುಟ ಸಂಖ್ಯೆ |
|---|---|---|
| IX. | ಅನುಚ್ಛೇಧ - 3.8.3 –ಇಂಟರ್ ಛೇಂಜ್‌ಗಳು, ಟೋಲ್ ರಸ್ತೆಗಳ ಆಗಮನ ಮತ್ತು ನಿರ್ಗಮನ ಪ್ರದೇಶ, ನಗರ ಸಮುಚ್ಛಯ ಇತ್ಯಾದಿಗಳಲ್ಲಿ ಹಸಿರುವ ವಲಯದ ನಿರ್ವಹಣೆ ಬಗ್ಗೆ. | 41-44 |
| X. | ಅನುಚ್ಛೇದ-4.1.2 | 44-53 |
| XI. | ಅನುಚ್ಛೇಧ 5.1.1.1 –ಖಾಸಗಿ ಜಮೀನಿನ ಭೂಸ್ವಾಧೀನ ಹಾಗೂ ಪರಿಹಾರ ಪಾವತಿಯ ಮಾನದಂಡಗಳ ಬಗ್ಗೆ. | 53-62 |
| XII. | ಅನುಚ್ಛೇಧ - 5.1.1.2 – ಖಾಸಗಿ ಜಮೀನನ್ನು ಹಸ್ತಾಂತರಿಸುವ ಬಗ್ಗೆ | 63-64 |
| XIII. | ಅನುಚ್ಛೇಧ – 5.1.2 - ಸರ್ಕಾರಿ ಜಮೀನನ್ನು ಹಸ್ತಾಂತರಿಸುವ ಬಗ್ಗೆ. | 64-65 |
| XIV. | ಅನುಚ್ಛೇಧ 5.1.2.1 - ಸರ್ಕಾರಿ ಜಮೀನಿನ ಹಸ್ತಾಂತರದ ಬಗ್ಗೆ | 65-68 |
| XV. | ಅನುಚ್ಛೇಧ 5.1.2.2 – ಸರ್ಕಾರಿ ಜಮೀನಿನ ಖರೀದಿ ದರಗಳನ್ನು ನಿಗದಿಪಡಿಸುವ ಬಗ್ಗೆ. | 68-69 |
| XVI. | ಅನುಚ್ಛೇಧ – 6.1 – ಟೋಲ್ ರಸ್ತೆಯ ನಿರ್ವಹಣೆಯ ಬಗ್ಗೆ | 69-75 |
| XVII. | ಅನುಚ್ಛೇಧ – 6.3 – ವಿನ್ಯಾಸದ ಜವಾಬ್ದಾರಿಗಳು | 75-78 |
| XVIII. | ಅನುಚ್ಛೇಧ 6.6.1– ಯೋಜನೆಯನ್ನು ಸಂಪೂರ್ಣಗೊಳಿಸಲು ಕ್ರಿಯಾ ಒಪ್ಪಂದದ ಅನುಗುಣವಾಗಿ ನಿಗದಿಪಡಿಸಿರುವ ಕಾಲಮಿತಿಯ ವಿವರಗಳನ್ನು ಈ ಅನುಚ್ಛೇಧದಡಿ ನೀಡಲಾಗಿದೆ. ಈ ಮಿತಿಗಳನ್ನು ಕ್ರಿಯಾ ಒಪ್ಪಂದದ ಅನುಗುಣವಾಗಿ ನಮೂದಿಸಿದ್ದು, 06/10/1999 ರ ಪೂರಕ ಒಪ್ಪಂದದ ಮುಖಾಂತರ ಭೌತಿಕ ಗುರಿಯನ್ನು ಪರಿಷ್ಕರಿಸಲಾಗಿದೆ. | 78 |
| XIX. | ಅನುಚ್ಛೇಧ – 7 - ನಗರ ಸಮುಚ್ಛಯಗಳ ಬಗ್ಗೆ | 79-81 |
| XX. | ಅನುಚ್ಛೇಧ – 8.3 – ವಿದ್ಯುತ್ ಉತ್ಪಾದನೆಯ ಬಗ್ಗೆ ಒಪ್ಪಂದವನ್ನು ಖಾಸಗಿ ಪಾಲುದಾರರ ಜಾರಿಗೊಳಿಸುವ ಸೌಲಭ್ಯವನ್ನು ಕಲ್ಪಿಸುವ ಬಗ್ಗೆ. | 81-82 |

| ವರದಿಯ ಕ್ರಮ ಸಂಖ್ಯೆ | ಶೀರ್ಷಿಕೆ | ಪುಟ ಸಂಖ್ಯೆ |
|---|---|---|
| XXI. | ಅನುಚ್ಛೇಧ – 9.4 – ದೂರಸಂಪರ್ಕ ಕಲ್ಪಿಸುವ ಬಗ್ಗೆ. | 82 |
| XXII. | ಅನುಚ್ಛೇಧ – 10 –ಯೋಜನೆಗೆ ಅವಶ್ಯಕವಿರುವ ನೀರಿನ ಸರಬರಾಜು ಹಾಗೂ ಸಂಸ್ಕರಣೆ | 83–85 |
| XXIII. | ಅನುಚ್ಛೇಧ -11 – ಸಮೂಹ ಸಂಸ್ಥೆಗಳು ಹಾಗೂ ಸಮೂಹ ಸಂಸ್ಥೆಗಳ ಭಾಗಿದಾರರು ನಿರ್ವಹಿಸಬೇಕಾಗಿರುವ ಬಂಡವಾಳ ಹೂಡಿಕೆಯ ಬಗ್ಗೆ ಸಮಿತಿಯ ವಿಶ್ಲೇಷಣೆ ಹಾಗೂ ಶಿಫಾರಸ್ಸುಗಳು. | 85–89 |
| XXIV. | ಕ್ರಿಯಾ ಒಪ್ಪಂದದ ಅನುಚ್ಛೇಧ 12 ರ ಅಡಿಯಲ್ಲಿ ತೆರಿಗೆ ವಿನಾಯಿತಿಗೆ ಸಂಬಂಧಿಸಿದಂತೆ ಸಮಿತಿಯ ವಿಶ್ಲೇಷಣೆ ಹಾಗೂ ಶಿಫಾರಸ್ಸುಗಳು: | 89–103 |
| XXV. | ಬಿ.ಎಂ.ಐ.ಸಿ. ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ನಡೆಸಿರುವ ಗಣಿಗಾರಿಕೆ ಹಾಗೂ ಇದರಿಂದಾಗಿ ಖಾಸಗಿ ಪಾಲುದಾರರಿಗೆ ಆಗಿರುವ ಅನುದ್ದೇಶಿತ ಲಾಭಗಳು | 103–117 |
| XXVI. | ಅನುಚ್ಛೇಧ – 13 – ಮನವಿಗಳು ಹಾಗೂ ಖಾತ್ರಿಗಳು | 117–118 |
| XXVII. | ಅನುಚ್ಛೇಧ – 15.4–FORCE MAJEUREಷರತ್ತುಗಳ ಬಗ್ಗೆ. | 118–119 |
| XXVIII. | ಅನುಚ್ಛೇಧ 16.1–ಅನುಷ್ಠಾನದ ವೈಫಲ್ಯತೆಗಳು ಹಾಗೂ ಯೋಜನೆಯನ್ನು ಅಂತ್ಯಗೊಳಿಸಲು ಜಾರಿಗೊಳಿಸಬೇಕಾದ ಪ್ರಕ್ರಿಯೆಗಳ ಬಗ್ಗೆ ಸಮಿತಿಯ ವಿಶ್ಲೇಷಣೆ ಹಾಗೂ ಶಿಫಾರಸ್ಸುಗಳು: | 119–121 |
| XXIX. | ಅನುಚ್ಛೇಧ 16.2.1–ಯೋಜನಾ ಅನುಷ್ಠಾನದ ಭೌತಿಕ ಪ್ರಗತಿಯ ಸಾಧನೆಯಲ್ಲಿ ಆಗುವ ವೈಫಲ್ಯತೆಗೆ ಖಾಸಗಿ ಪಾಲುದಾರರ ಮೇಲೆ ನಿಗದಿಪಡಿಸಬಹುದಾದ ಜವಾಬ್ದಾರಿಗಳು | 121–122 |
| XXX. | ಅನುಚ್ಛೇಧ – 17.6 – ಕ್ಯಾರಿಯಿಂಗ್ ಕಾಸ್ಟ್ಸ್ ಇತ್ಯರ್ಥದಲ್ಲಿ ಪ್ರಗತಿ ಹಾಗೂ ಅನುಷ್ಠಾನದ ವಿವರಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುವ ಬಗ್ಗೆ. | 122 |
| XXXI. | ಅನುಚ್ಛೇಧ – 18.3.2 – ವಿವಾದಗಳ ಬಗ್ಗೆ | 122–123 |
| XXXII. | ಅನುಚ್ಛೇಧ 18.3.2.2 –ವಿವಾದಗಳನ್ನು ಇತ್ಯರ್ಥಗೊಳಿಸಲು ನಿಗದಿಪಡಿಸಿರುವ ಸ್ಥಳದ ಬಗ್ಗೆ | 124 |

| ವರದಿಯ ಕ್ರಮ ಸಂಖ್ಯೆ | ಶೀರ್ಷಿಕೆ | ಪುಟ ಸಂಖ್ಯೆ |
|---|---|---|
| XXXIII. | ಅನುಚ್ಛೇಧ-20– ಅಸ್ಸೈನ್‌ಮೆಂಟ್ - ನೈಸೆಲ್ ಸಂಸ್ಥೆಯು ನೀಸೆಲ್ ಸಂಸ್ಥೆಗೆ ವಹಿಸಿರುವ ಘಟಕ-1 ರ ಕಾಮಗಾರಿಗಳು ಹಾಗೂ ತ್ರಿಪಕ್ಷೀಯ ಒಪ್ಪಂದದ ಬಗ್ಗೆ | 124-134 |
| XXXIV. | ಅನುಚ್ಛೇಧ-22 - ಸಾಮಾನ್ಯ ಷರತ್ತುಗಳು | 134-137 |
| XXXV. | ಅನುಚ್ಛೇಧ 22.2 -- ತಿದ್ದುಪಡಿಗಳು ಹಾಗೂ ಪೂರಕ ಒಪ್ಪಂದಗಳ ಬಗ್ಗೆ ಸಮಿತಿಯ ವಿಶ್ಲೇಷಣೆ ಹಾಗೂ ಶಿಫಾರಸ್ಸುಗಳು: | 137-145 |
| XXXVI. | ಬಿ.ಎಂ.ಐ.ಸಿ. ಯೋಜನೆಯ ಅನುಷ್ಠಾನದಲ್ಲಿ ಭೂಮಿ ನಿರ್ವಹಣೆಯ ಬಗ್ಗೆ ಸಮಿತಿಯ ವಿಶ್ಲೇಷಣೆ ಹಾಗೂ ಶಿಫಾರಸ್ಸುಗಳು. | 145-155 |
| XXXVII. | ಕೆ.ಐ.ಎ.ಡಿ.ಬಿ. ಅಧಿನಿಯಮಗಳ ಅನುಗುಣವಾಗಿ ಭೂಸ್ವಾಧೀನ ಪ್ರಕ್ರಿಯೆಯ ವಿವಿಧ ಸ್ತರಗಳಲ್ಲಿ ಅಂತಿಮ ತೀರ್ಪಿಗೆ ಬಾಕಿ ಇರುವ ಖಾಸಗಿ ಜಮೀನಿನ ಬಗ್ಗೆ ಸಮಿತಿಯ ವಿಶ್ಲೇಷಣೆ ಹಾಗೂ ಶಿಫಾರಸ್ಸುಗಳು: | 155-157 |
| XXXVIII. | ನಗರ ಸಮುಚ್ಛಯಗಳು--ಖಾಸಗಿ ಜಮೀನು | 158-164 |
| XXXIX. | ಕ್ರಿಯಾ ಒಪ್ಪಂದದಲ್ಲಿ ನಮೂದಿಸಿರುವ ಪಂಕ್ತೀಕರಣಕ್ಕೆ ವಿಭಿನ್ನವಾದ ಓ.ಡಿ.ಪಿ. ಪಂಕ್ತೀಕರಣವನ್ನು ಜಾರಿಗೊಳಿಸಿರುವ ಬಗ್ಗೆ. | 164-165 |
| XL. | ಖಾಸಗಿ ಪಾಲುದಾರರು ಸೋಮಶೇಖರ ರೆಡ್ಡಿ ತೀರ್ಪಿಗೆ ವ್ಯತಿರಿಕ್ತವಾಗಿ ಕೆ.ಐ.ಎ.ಡಿ.ಬಿ. ಮುಖಾಂತರ ವಿವಿಧ ಸ್ತರಗಳಲ್ಲಿ ಸ್ವಾಧೀನಪಡಿಸಿಕೊಂಡಿರುವ ಭೂಮಿಯ ವಿವರಗಳು ಕೆಳಕಂಡಂತಿದೆ: | 165-170 |
| XLI. | ಓ.ಡಿ.ಪಿ. ಪಂಕ್ತೀಕರಣದಲ್ಲಿ ಖಾಸಗಿ ಪಾಲುದಾರರ ಪಾತ್ರ | 170-173 |
| XLII. | ಕೆರೆಗಳನ್ನು ಹಸ್ತಾಂತರಿಸಿರುವ ಬಗ್ಗೆ: | 173-177 |
| XLIII. | ನಗರ ಸಮುಚ್ಛಯವನ್ನು ಸ್ಥಳಾಂತರಿಸಿರುವ ಬಗ್ಗೆ: | 177-179 |
| XLIV. | ಬಿ.ಎಂ.ಐ.ಸಿ. ಯೋಜನಾ ಪ್ರದೇಶವನ್ನು ರಚಿಸಿರುವ ಬಗ್ಗೆ | 179-180 |
| XLV. | ಸಮಿತಿಯ ಸ್ಥಳ ಪರಿವೀಕ್ಷಣೆ | 180-188 |
| XLVI. | ಕಡತಗಳು ನಾಪತ್ತೆಯಾಗಿರುವ ಬಗ್ಗೆ : | 188-192 |
| XLVII. | ಸಮಿತಿಯ ಕ್ರೋಢೀಕೃತ ಶಿಫಾರಸ್ಸುಗಳು | 192-249 |

| ವರದಿಯ ಕ್ರಮ ಸಂಖ್ಯೆ | ಶೀರ್ಷಿಕೆ | ಪುಟ ಸಂಖ್ಯೆ |
|---|---|---|
| | ಅನುಬಂಧಗಳು | |
| 1. | ಬಿ.ಎಂ.ಐ.ಸಿ.ಪಿ. ಕ್ರಿಯಾ ಒಪ್ಪಂದದ ಪ್ರತಿ | 251-338 |
| 2. | ಶ್ರೀ ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನ ಕಂಡಿಕೆ 15, 51 ಹಾಗೂ 75 ರ ಪ್ರತಿ | 339-346 |
| 3. | ನ್ಯಾಯಾಲಯದ ಪ್ರಕರಣಗಳ ವಿವರ | 347-370 |
| 4. | ಕ್ರಿಯಾ ಒಪ್ಪಂದ ಹಾಗೂ ಪೂರಕ ಕ್ರಿಯಾ ಒಪ್ಪಂದದಂತೆ ಗುರಿ ಹಾಗೂ ಸಾಧನೆಯ ವಿವರ | 371-374 |
| 5. | ಕೆ.ಐ.ಎ.ಡಿ.ಬಿ. ಅಧಿಕಾರಿಗಳ ಪಟ್ಟಿ | 375-384 |
| 6. | ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳ ಪಟ್ಟಿ | 385-390 |
| 7. | ಸದನ ಸಮಿತಿಯ ಸಭೆಗಳ ದಿನಾಂಕಗಳ ತಃಖ್ತೆ | 391 |

# ಸದನ ಸಮಿತಿಯ ವರದಿ

<u>ಪ್ರಸ್ತಾವನೆ</u>

ದಿನಾಂಕ 03.04.1997ರಂದು ಕರ್ನಾಟಕ ರಾಜ್ಯ ಸರ್ಕಾರ ನೈಸೆಲ್ ಕಂಪನಿ ಜೊತೆ ಕ್ರಿಯಾ ಒಪ್ಪಂದವನ್ನು ಮಾಡಿಕೊಂಡಿದ್ದು, ಅದರಂತೆ ನೈಸೆಲ್ ಕಂಪನಿಯು 111 ಕಿ.ಮೀ. ಬೆಂಗಳೂರಿನಿಂದ ಮೈಸೂರಿನವರೆಗೆ ವೇಗದ ರಸ್ತೆ, ಬೆಂಗಳೂರಿನಲ್ಲಿ 41 ಕಿ.ಮೀ. ಪೆರಿಫೆರಲ್ ರಸ್ತೆ, ಬೆಂಗಳೂರಿನಲ್ಲಿ 9.8 ಕಿ.ಮೀ. ಲಿಂಕ್ ರಸ್ತೆ ಹಾಗೂ ನಿಯೋಜಿತ ಸ್ಥಳದಲ್ಲಿ 5 ಉಪ ನಗರಗಳನ್ನು 13237 ಎಕರೆ ಖಾಸಗಿ ಜಮೀನು ಹಾಗೂ 6956 ಎಕರೆ ಸರ್ಕಾರಿ ಜಮೀನಿನಲ್ಲಿ ನಿರ್ಮಾಣ ಮಾಡಬೇಕಾಗಿರುತ್ತದೆ. ಯೋಜನೆಯನ್ನು ನಿರ್ಮಿಸಲು ನೈಸೆಲ್ ಕಂಪನಿ ಎಲ್ಲಾ ಸಂಪನ್ಮೂಲಗಳನ್ನು ಸ್ವಂತವಾಗಿ ಭರಿಸಬೇಕಾಗಿರುತ್ತದೆ. ಹಾಗೂ ಸರ್ಕಾರದಿಂದ ಯಾವುದೇ ಹಣವನ್ನು ತೊಡಗಿಸುವಂತಿಲ್ಲವೆಂದು ಒಪ್ಪಂದವಾಗಿರುತ್ತದೆ. ನೈಸೆಲ್ ಕಂಪನಿಯು ಸುಮಾರು 162 ಕಿ.ಮೀ. ಸಿಮೆಂಟ್ ರಸ್ತೆಯನ್ನು, 5 ನಗರ ಸಮುಚ್ಛಯಗಳಲ್ಲಿ ಅಭಿವೃದ್ಧಿಪಡಿಸಿದ ನಿವೇಶನಗಳನ್ನು ಮಾರಾಟ ಮಾಡಿ ಬಂಡವಾಳವನ್ನು ಮತ್ತು ಲಾಭವನ್ನು ಪಡೆಯಬಹುದಾಗಿರುತ್ತದೆ. ಇದರ ಜೊತೆಗೆ 30 ವರ್ಷಗಳ ಕಾಲ 162 ಕಿ.ಮೀ ರಸ್ತೆ ಸುಂಕವನ್ನೂ ಸಹ ಸಂಗ್ರಹ ಮಾಡಬಹುದಾಗಿರುತ್ತದೆ.

ಈ ಯೋಜನೆಯ ಅಡಿಯಲ್ಲಿ ಸಾಧಿಸಲಾದ ಪ್ರಗತಿಯು 19 ವರ್ಷಗಳ ವಿಳಂಬದ ನಂತರವೂ ನಿರಾಶದಾಯಕವಾಗಿದೆ. ಕ್ರಿಯಾ ಒಪ್ಪಂದ ಜಾರಿಯಾದ 6 ತಿಂಗಳ ಅವಧಿಯೊಳಗೆ ಈ ಯೋಜನೆಗೆ ಸಂಬಂಧಿಸಿದಂತೆ ಪ್ರಥಮ ಸಾರ್ವಜನಿಕ ಹಿತಾಸಕ್ತಿಯ ದಾವೆಯನ್ನು ಮಾನ್ಯ ಉಚ್ಛ ನ್ಯಾಯಾಲಯದ ಮುಂದೆ ಹೂಡಲಾಗಿದ್ದು, ಸಾರ್ವತ್ರಿಕವಾಗಿ ಈ ದಾವೆಯನ್ನು **"ಸೋಮಶೇಖರರೆಡ್ಡಿ ಪ್ರಕರಣ"** ಎಂದು ಗುರುತಿಸಲಾಗಿದೆ. ಪ್ರಸ್ತಾವಿತ ತೀರ್ಪಿನಲ್ಲಿ ಕ್ರಿಯಾ ಒಪ್ಪಂದದ ಸಿಂಧುತ್ವವನ್ನು ದೃಢೀಕರಿಸಲಾಗಿದೆ. ಕ್ರಿಯಾ ಒಪ್ಪಂದದಲ್ಲಿ ಹಾಗೂ ಸೋಮಶೇಖರ ರೆಡ್ಡಿ ಪ್ರಕರಣದಲ್ಲಿ ನಮೂದಿಸಲಾದ ಸರ್ಕಾರಿ ಜಮೀನಿನ ಅವಶ್ಯಕತೆ ಸತತವಾಗಿ ಮಾರ್ಪಾಡಾಗಿದೆ. ಯೋಜನಾ ಅನುಷ್ಠಾನದ ಧ್ಯೇಯೋದ್ದೇಶಗಳನ್ನು ಸಾಧಿಸುವಲ್ಲಿ ಕ್ಲಿಷ್ಟತೆಯುಂಟಾಗಿದ್ದು, ಬೆಂಗಳೂರು ಹಾಗೂ ಮೈಸೂರು ನಡುವೆ ಸಮಗ್ರ ಮೂಲಭೂತ ಸೌಕರ್ಯವನ್ನೊಳಗೊಂಡ ವೇಗದ ಹೆದ್ದಾರಿಯನ್ನು ನಿರ್ಮಿಸುವ ಸರ್ಕಾರದ ಆಶೋತ್ತರಗಳು ಹಾಗೂ ಧ್ಯೇಯೋದ್ದೇಶಗಳು ಸಾಕಾರವಾಗದೆ ನೆನಗುದಿಗೆ ಬಿದ್ದಿದೆ ಎಂದು ಸದನದಲ್ಲಿ ಚರ್ಚಿಸಲಾಗಿತ್ತು. ಯೋಜನೆಯ ಭೂಮಿ ನಿರ್ವಹಣೆ, ಕ್ರಿಯಾ ಒಪ್ಪಂದದ ನಿರ್ವಹಣೆ, ಪಾಲನೆ ಹಾಗೂ ಅನುಷ್ಠಾನ, ಯೋಜನಾ ಅನುಷ್ಠಾನದಲ್ಲಿ ಭಾಗಿಯಾಗಿರುವ ಸರ್ಕಾರದ ವಿವಿಧ ಇಲಾಖೆಗಳ ನಡುವೆ ಸಮನ್ವಯತೆಯ ಕೊರತೆ ಇತ್ಯಾದಿಗಳು ಈ ಪರಿಸ್ಥಿತಿಗೆ ಕಾರಣವಾಗಿದೆ ಎಂದು ಆರೋಪಿಸಲಾಗಿತ್ತು. ಏತನ್ಮಧ್ಯೆ, ಖಾಸಗಿ ಪಾಲುದಾರರು ಯೋಜನೆಯ ರಸ್ತೆಯ ಅಭಿವೃದ್ಧಿಗಿಂತ, ಸೆಕ್ಷನ್ 'ಎ' ಸ್ತರದಲ್ಲಿ ರಸ್ತೆಯ ಅಕ್ಕಪಕ್ಕದಲ್ಲಿ ಲಭ್ಯವಿರುವ ಜಮೀನಿನ ವಹಿವಾಟುಗಳಿಗೆ ಹೆಚ್ಚುವರಿ ಆದ್ಯತೆ ನೀಡುತ್ತಿರುವ ಬಗ್ಗೆ ಸಾರ್ವಜನಿಕ ಪ್ರತಿರೋಧ ವ್ಯಾಪಕವಾಗಿದ್ದು, ಅಂತಹ ವಿಚಾರಗಳು ಕರ್ನಾಟಕ ವಿಧಾನ ಸಭೆಯ ಆಗಸ್ಟ್, 2014ರ ಅಧಿವೇಶನದಲ್ಲಿ ಈ ಯೋಜನೆಯ ಸಾಧಕ-ಬಾಧಕಗಳು, ವೈಫಲ್ಯತೆಗಳು, ಅನಧಿಕೃತ ವಹಿವಾಟುಗಳು ಹಾಗೂ ಕ್ರಿಯಾ ಒಪ್ಪಂದದ ಉಲ್ಲಂಘನೆಯ ಬಗ್ಗೆ ಮಾನ್ಯ ಸದಸ್ಯರು ವ್ಯಾಪಕವಾಗಿ ಚರ್ಚಿಸಿರುತ್ತಾರೆ. ಸನ್ಮಾನ್ಯ ಸಭಾಧ್ಯಕ್ಷರು ಕೋರಿಕೆಯನ್ನು ಪರಿಗಣಿಸಿ ಮಾನ್ಯ ಸದಸ್ಯರಿಗೆ ಈ ಯೋಜನೆಯ ಬಗ್ಗೆ ಚರ್ಚೆ ಕೈಗೊಳ್ಳಲು ಅನುಮೋದನೆಯನ್ನು ನೀಡಿರುತ್ತಾರೆ. ಪ್ರಮುಖವಾಗಿ ಖಾಸಗಿ ಪಾಲುದಾರರಿಂದ ಸರ್ಕಾರದ ಬೊಕ್ಕಸಕ್ಕೆ ಆಗುತ್ತಿರುವ ನಷ್ಟ, ಕಾಂಕ್ರೀಟ್ ರಸ್ತೆಯ ಬದಲಾಗಿ ಡಾಂಬರುರಸ್ತೆಯ ನಿರ್ಮಾಣ, ತಾಂತ್ರಿಕ ಮಾನದಂಡಗಳ ಉಲ್ಲಂಘನೆ, ಕ್ರಿಯಾ ಒಪ್ಪಂದದ ಉಲ್ಲಂಘನೆ, ಭೂಮಾಲೀಕರ ಶೋಷಣೆ, ಇತ್ಯಾದಿಗಳ

ಬಗ್ಗೆ ಸದಸ್ಯರು ಚರ್ಚಿಸಿದ್ದು, ಈ [illegible] ನಿಷ್ಪಕ್ಷಪಾತವಾದ ತನಿಖೆ ಅವಶ್ಯಕತೆ ಇರುವ ಹಿನ್ನೆಲೆಯಲ್ಲಿ ಸದನ ಸಮಿ[illegible]ರುತ್ತಾರೆ. ಈ ಕೋರಿಕೆಯನ್ನು ಮನ್ನಿಸಿ ದಿನಾಂಕ 04.09.2014ರ ಲಘು [illegible] ಈ ಕೆಳಕಂಡ ಸದಸ್ಯರನ್ನೊಳಗೊಂಡ ಸಮಿತಿಯನ್ನು ರಚಿಸಲಾಗಿದೆ.

ಶ್ರೀಯುತರುಗಳಾದ:

| | |
|---|---|
| 1. ಟಿ.ಬಿ ಜಯಚಂದ್ರ | [illegible] ನ್ಯಾಯ ಮತ್ತು ಮಾನವ ಹಕ್ಕುಗಳು, [illegible] ವ್ಯವಹಾರಗಳು, ಸಣ್ಣ ನೀರಾವರಿ ಸಚಿವರು [illegible] ಅಧ್ಯಕ್ಷರು. |
| 2. ಬಸವರಾಜ ರಾಯರೆಡ್ಡಿ | [illegible] ಶಿಕ್ಷಣ ಸಚಿವರು ಮತ್ತು ಸಮಿತಿಯಸದಸ್ಯರು. |
| 3. ಪ್ರಿಯಾಂಕ್ ಎಂ ಖರ್ಗೆ | [illegible] ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ [illegible] ಮತ್ತು ಸಮಿತಿಯ ಸದಸ್ಯರು. |
| 4. ಜೆ.ಆರ್. ಲೋಬೋ | [illegible] ಸದಸ್ಯರು ಮತ್ತು ಸಮಿತಿಯ ಸದಸ್ಯರು |
| 5. ಡಾ: ರಫೀಕ್ ಅಹಮದ್ [illegible] | -ಸ- |
| 6. ಎಸ್.ಟಿ. ಸೋಮಶೇಖರ್ | -ಸ- |
| 7. ಎಸ್.ಆರ್. ವಿಶ್ವನಾಥ್ | -ಸ- |
| 8. ಸತೀಶ್ ರೆಡ್ಡಿ ಎಂ. | -ಸ- |
| 9. ಕೆ.ಎಂ. ಶಿವಲಿಂಗೇಗೌಡ | -ಸ- |
| 10. ಪಿ.ಆರ್. ಸುಧಾಕರ್ ಲಾಲ್ | -ಸ- |
| 11. ಬಿ.ಆರ್. ಪಾಟೀಲ್ | -ಸ- |

ಸದನ ಸಮಿತಿಯು ಈವರೆವಿಗೂ [illegible] ದಿನಾಂಕವಾರು ವಿವರಗಳನ್ನು <u>ಅನುಬಂಧ-1</u> ರಲ್ಲಿ ನೀಡಲಾಗಿದೆ.

ಸದನ ಸಮಿತಿಯು ಈ ಕೆಳಕಂಡ ಮೂರು ಅಂಶಗಳ ಬಗ್ಗೆ ತನಿಖೆಯನ್ನು ನಡೆಸಿ ವಿವರವಾದ ವರದಿಯನ್ನು ನೀಡುವಂತೆ ಸನ್ಮಾನ್ಯ ಸಭಾಧ್ಯಕ್ಷರು ಆದೇಶ ಮಾಡಿರುತ್ತಾರೆ.

1. ದಿನಾಂಕ 03.04.1997ರ ಕ್ರಿಯಾ ಒಪ್ಪಂದವನ್ನು ಅನುಷ್ಠಾನ ಮಾಡುವಲ್ಲಿ ಉಂಟಾಗಿರುವ ಅಕ್ರಮಗಳ ವಿವರಣೆ.
2. ದಿನಾಂಕ 03.04.1997ರ ಕ್ರಿಯಾ ಒಪ್ಪಂದದಂತೆ ಯೋಜನೆಯನ್ನು ಅಭಿವೃದ್ಧಿ ಪಡಿಸದೆ ಇರುವುದರ ಬಗ್ಗೆ.
3. ದಿನಾಂಕ 03.04.1997ರ ಕ್ರಿಯಾ ಒಪ್ಪಂದವನ್ನು ಹಾಗೂ ಉಚ್ಚ ನ್ಯಾಯಾಲಯದ ಆದೇಶ ಮತ್ತು ಸರ್ವೋಚ್ಛ ನ್ಯಾಯಾಲಯದ ಆದೇಶಗಳನ್ನು ಉಲ್ಲಂಘಿಸಿರುವ ಬಗ್ಗೆ.

## ಸದನ ಸಮಿತಿಯ ಪ್ರಮುಖ ಪರಿಶೀಲನಾ ಅಂಶಗಳು ಮತ್ತು ಕ್ರಮಗಳು

ದಿನಾಂಕ 04.09.2014ರ ಲಘು ಪ್ರಕಟಣೆಯಂತೆ ಬಿ.ಎಂ.ಐ.ಸಿ. ಯೋಜನೆಯ ಕುರಿತು 03.04.1997ರ ಒಪ್ಪಂದವನ್ನು ಜಾರಿಗೊಳಿಸುವಲ್ಲಿ ನಡೆದಿರಬಹುದಾದ ಅಕ್ರಮಗಳ ಬಗ್ಗೆ ಹಾಗೂ ಉಚ್ಛ ನ್ಯಾಯಾಲಯ ಮತ್ತು ಸರ್ವೋಚ್ಛ ನ್ಯಾಯಾಲಯದ ಆದೇಶಗಳನ್ನು ಉಲ್ಲಂಘಿಸಿರುವ ಬಗ್ಗೆ ತನಿಖೆ ನಡೆಸುವ ಸಲುವಾಗಿ ದಿನಾಂಕ 12.09.2014ರಂದು ನಡೆಸಲಾದ ಸಮಿತಿಯ ಸಭೆಯ ನಿರ್ಧಾರಗಳ ಅನುಗುಣವಾಗಿ ಸದನ ಸಮಿತಿಯ ಪ್ರಮುಖ ಪರಿಶೀಲನಾ ಅಂಶಗಳು ಕೆಳಕಂಡಂತಿದೆ:

1. ನೈಸ್ ಸಂಸ್ಥೆಯು ಈ ಹಿಂದೆ ಮಾಡಿಕೊಂಡ ಒಪ್ಪಂದದ ರೀತ್ಯಾ ಸ್ವಾಧೀನಪಡಿಸಿಕೊಳ್ಳಲು ನಿಗದಿಪಡಿಸಲಾದ ಸರ್ಕಾರಿ ಭೂಮಿಯ ವಿಸ್ತೀರ್ಣವನ್ನು ಕಡಿತಗೊಳಿಸಿ ಖಾಸಗಿ ಜಮೀನುಗಳನ್ನು ಹೆಚ್ಚುವರಿಯಾಗಿ ಸ್ವಾಧೀನಪಡಿಸಿಕೊಳ್ಳುತ್ತಿರುವ ಬಗ್ಗೆ ಸಮಗ್ರವಾಗಿ ಪರಿಶೀಲಿಸುವುದು.

2. ನೈಸ್ ಸಂಸ್ಥೆಯು ಬೆಂಗಳೂರು-ಮೈಸೂರು ನಡುವೆ ಎಕ್ಸ್‌ಪ್ರೆಸ್ ವೇ ನಿರ್ಮಿಸಲು ಒಪ್ಪಿಕೊಂಡಿದ್ದು, ಅದನ್ನು ಕಾರ್ಯಗತಗೊಳಿಸಲು ನೀಸ್ ಎಂಬ ಸಂಸ್ಥೆಗೆ ವಹಿಸಿದ್ದು, ಅದರ ಸಕ್ಷಮತೆಯ ಕುರಿತು ಸಮಗ್ರವಾಗಿ ಪರಿಶೀಲಿಸುವುದು.

3. ನೈಸ್ ಸಂಸ್ಥೆಯು ಹೆದ್ದಾರಿಯನ್ನು ನಿರ್ಮಿಸಲು ಹಾಗೂ ಅದರ ಸುತ್ತಮುತ್ತ ಪರಿವೃತ್ತ ರಸ್ತೆ ಹಾಗೂ ಕೂಡು ರಸ್ತೆಗಳನ್ನು ನಿರ್ಮಿಸಲು ಅವಶ್ಯಕತೆಗಿಂತ ಹೆಚ್ಚಿನ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡಿದ್ದು ಈ ಕುರಿತು ಸಮಗ್ರವಾಗಿ ಪರಿಶೀಲಿಸುವುದು.

4. ನೈಸ್ ಸಂಸ್ಥೆಯು ಒಪ್ಪಂದದ ಪ್ರಕಾರ ನಿಗದಿತ ಅವಧಿಯಲ್ಲಿ ನಿರ್ದಿಷ್ಟ ಉದ್ದದ ರಸ್ತೆಯನ್ನು ನಿರ್ಮಿಸಬೇಕಿದ್ದು, ಅದನ್ನು ಪೂರ್ಣಗೊಳಿಸದೆ ಇರುವ ಕುರಿತು ಪರಿಶೀಲಿಸುವುದು ಹಾಗೂ ಒಪ್ಪಂದದ ರೀತ್ಯಾ ರಸ್ತೆಯನ್ನು ಪೂರ್ಣಗೊಳಿಸಲು ಆರ್ಥಿಕ ವರ್ಷವನ್ನು ನಿಗದಿಪಡಿಸುವಲ್ಲಿ ಆಗಿರುವ ಅಕ್ರಮದ ಕುರಿತು ಪರಿಶೀಲಿಸುವುದು,

5. ನೈಸ್ ಸಂಸ್ಥೆಯು ಒಪ್ಪಂದದ ರೀತ್ಯ ರಸ್ತೆಗಳನ್ನು ನಿರ್ಮಿಸಿದೆಯೇ ಹಾಗೂ ಅದಕ್ಕೆ ತಕ್ಕ ರೀತಿಯಲ್ಲಿ ಮಾರ್ಗ ಶುಲ್ಕವನ್ನು ನಿಗದಿ ಪಡಿಸಿ ಸಂಗ್ರಹಿಸುತ್ತಿದೆಯೇ ಎಂಬುದರ ಕುರಿತು ಪರಿಶೀಲಿಸುವುದು.

6. ನೈಸ್ ಸಂಸ್ಥೆಯು ರಸ್ತೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಭೂಮಿಗಳನ್ನು ಯಾವ ರೀತಿ ನಿರ್ವಹಿಸಿದೆ, ಹಾಗೂ ರಸ್ತೆಗಳನ್ನು ನಿರ್ಮಿಸಿದ ನಂತರ ೩೦ ವರ್ಷಗಳ ಕಾಲ ನಿರ್ವಹಿಸಿ ನಂತರ ಸರ್ಕಾರಕ್ಕೆ ಹಿಂದಿರುಗಿಸಬೇಕಾಗಿದ್ದು, ಅಂತಹ ರಸ್ತೆ ನಿರ್ಮಾಣಕ್ಕೆ ಸ್ವಾಧೀನಪಡಿಸಿಕೊಂಡ ಎಲ್ಲಾ ಭೂಮಿಯನ್ನು ಉಪಯೋಗಿಸಿಕೊಂಡಿದೆಯೇ ಅಥವಾ ಅದರಲ್ಲಿನ ಅನುಪಯುಕ್ತ ಭೂಮಿಯನ್ನು ಯಾವ ರೀತಿ ಬಳಕೆ ಮಾಡಿದೆ ಎಂಬುದರ ಕುರಿತು ಸಮಗ್ರವಾಗಿ ಪರಿಶೀಲಿಸುವುದು.

7. ನೈಸ್ ಸಂಸ್ಥೆಯು ನಿರ್ಮಿಸುವ ಹೆದ್ದಾರಿಗೆ ಕೂಡು ರಸ್ತೆಗಳನ್ನು ನಿರ್ಮಿಸಿದ್ದು, ಅದರ ಸುತ್ತಮುತ್ತ ಇರುವ ಭೂಮಿಯನ್ನು ಒಪ್ಪಂದದಲ್ಲಿ ನಿಗದಿಪಡಿಸಿಲ್ಲದಿದ್ದರೂ ಅವುಗಳನ್ನು ಮಾರಾಟ ಮಾಡಿದೆ ಎಂಬ ಆರೋಪದ ಬಗ್ಗೆ ಪರಿಶೀಲಿಸುವುದು.

8. ನೈಸ್ ಸಂಸ್ಥೆಯು ಒಪ್ಪಂದದ ಪ್ರಕಾರ 5 ಟೌನ್‌ಶಿಪ್‌ಗಳನ್ನು ಅಭಿವೃದ್ಧಿಪಡಿಸಿ ವಿಕ್ರಯ ಮಾಡಬಹುದಾಗಿದ್ದು, ಅಂತಹ ಭೂಸ್ವಾಧೀನಕ್ಕೆ ಸ್ಟ್ಯಾಂಪ್ ಡ್ಯೂಟಿಯನ್ನು ವಿನಾಯಿತಿ ನೀಡಲಾಗಿದ್ದು, ಆದರೆ ಸದರಿ ಸಂಸ್ಥೆಯು ರಸ್ತೆ ನಿರ್ಮಾಣಕ್ಕೆ ಸ್ವಾಧೀನಪಡಿಸಿಕೊಳ್ಳಲಾದ ಭೂಮಿಯನ್ನು ಮಾರಾಟ ಮಾಡುತ್ತಿದ್ದು, ಅಂತಹ ವ್ಯವಹರಣೆಗಳಿಗೂ ಈ ವಿನಾಯಿತಿಯನ್ನು ಉಪಯೋಗಿಸಿಕೊಳ್ಳುವ ಮೂಲಕ ಸೌಲಭ್ಯವನ್ನು ದುರುಪಯೋಗಪಡಿಸಿಕೊಳ್ಳುತ್ತಿರುವ ಬಗ್ಗೆ ಪರಿಶೀಲಿಸುವುದು.

9. ನೈಸ್ ಸಂಸ್ಥೆಯು ತನ್ನ ಎಲ್ಲಾ ಯೋಜನೆಗಳಲ್ಲಿ ನಕ್ಷೆಗಳನ್ನು ಬಿಎಂಐಸಿಎಪಿಎ ಪ್ರಾಧಿಕಾರದ ಅನುಮೋದನೆಯನ್ನು ಪಡೆದು ಅಳವಡಿಸಿದೆಯೇ ಎಂಬುದರ ಕುರಿತು ಸಮಗ್ರವಾಗಿ ಪರಿಶೀಲಿಸುವುದು.

# ಸದನ ಸಮಿತಿಯು ತೆಗೆದುಕೊಂಡ ಕ್ರಮಗಳು

ಕರ್ನಾಟಕ ವಿಧಾನಮಂಡಲದ ಕಾರ್ಯವಿಧಾನ ನಡವಳಿಕೆಗಳ ನಿಯಮಗಳ ನಿಯಮ 229ರ ಅನುಗುಣವಾಗಿ ಸಮಿತಿಯ ಪರಿವೀಕ್ಷಣೆಯ ಸಂದರ್ಭದಲ್ಲಿ ಗಮನಿಸಲಾದ ಇತರೆ ಪ್ರಮುಖ ಅಂಶಗಳನ್ನು ಸಹ ಈ ವರದಿಯಲ್ಲಿ ಸೇರ್ಪಡೆ ಮಾಡಲಾಗಿದೆ.

ಸಮಿತಿಯು ಲೋಕೋಪಯೋಗಿ ಇಲಾಖೆ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಕಾನೂನು ಇಲಾಖೆ, ನಗರಾಭಿವೃದ್ಧಿ ಇಲಾಖೆ, ಕಂದಾಯ ಇಲಾಖೆ, ಅರಣ್ಯ ಇಲಾಖೆ, ಸಣ್ಣ ನೀರಾವರಿ ಇಲಾಖೆ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಮತ್ತು ಬೆಂಗಳೂರು ಮೈಸೂರು ಇನ್ ಫ್ರಾಸ್ಟ್ರಕ್ಚರ್ ಕಾರಿಡಾರ್ ಸ್ಥಳೀಯ ಯೋಜನಾ ಪ್ರಾಧಿಕಾರ ಇಲಾಖೆಗಳೊಡನೆ ಪ್ರಸ್ತಾವಿತ ಅಂಶಗಳ ಹಿನ್ನೆಲೆಯಲ್ಲಿ ವ್ಯಾಪಕ ವಿಚಾರ ವಿನಿಯಮವನ್ನು ನಡೆಸಿದೆ. ಹಲವಾರು ಪ್ರಕರಣಗಳಲ್ಲಿ ಸಮಿತಿಯ ಮಾನ್ಯ ಸದಸ್ಯರುಗಳು ನೀಡಿರುವ ಪ್ರಶ್ನಾವಳಿಗಳ ಮುಖಾಂತರ ಸ್ಪಷ್ಟೀಕರಣ ಹಾಗೂ ಮಾಹಿತಿಯನ್ನು ವಿವಿಧ ಇಲಾಖೆಗಳಿಂದ ಕ್ರೋಢೀಕರಿಸಲಾಗಿದೆ. ಯೋಜನೆಯು ಕಾನೂನು ಸಂದಿಗ್ದತೆಯಲ್ಲಿ ಸಿಲುಕಿ ಯೋಜನಾ ಅನುಷ್ಠಾನದ ಪ್ರಮುಖ ಅಂಶಗಳು ಹಾಗೂ ಕ್ರಿಯಾ ಒಪ್ಪಂದದ ಹಲವಾರು ಪ್ರತಿಪಾದನೆಗಳು ನ್ಯಾಯಾಲಯದ ತೀರ್ಪಿನ ನಿರ್ಬಂಧನೆಗಳಿಗೆ ಒಳಪಟ್ಟಿರುವುದನ್ನು ಸಮಿತಿ ಪ್ರಾಥಮಿಕ ಸಭೆಗಳಲ್ಲಿ ಚರ್ಚಿಸಿತು, ಈ ಹಿನ್ನೆಲೆಯಲ್ಲಿ, ಸರ್ವೋಚ್ಛ ನ್ಯಾಯಾಲಯವೂ ಒಳಗೊಂಡಂತೆ ವಿವಿಧ ಸ್ತರದ ನ್ಯಾಯಾಲಯಗಳಲ್ಲಿ ಬಾಕಿ ಇರುವ, ಇತ್ಯರ್ಥವಾದ, ಮಧ್ಯಂತರ ಆದೇಶ ಅಥವಾ ತಡೆಯಾಜ್ಞೆ ವ್ಯಾಪ್ತಿಗೆ ಒಳಪಟ್ಟಿರುವ ನ್ಯಾಯಾಲಯದ ಪ್ರಕರಣಗಳನ್ನು ಕಾನೂನಾತ್ಮಕವಾಗಿ ಹಾಗೂ ತಾಂತ್ರಿಕವಾಗಿ ವಿಶ್ಲೇಷಿಸಲು ಜಸ್ಟೀಸ್ ನಾಗಮೋಹನ್‌ದಾಸ್, ನಿವೃತ್ತ ನ್ಯಾಯಾಧೀಶರನ್ನು ಕಾನೂನು ಸಲಹೆಗಾರರಾಗಿ ನೇಮಕ ಮಾಡಲಾಗಿರುತ್ತದೆ, ಕಾನೂನು ಸಲಹೆಗಾರರು ಸಮಿತಿಯು ಕೋರಿರುವ ಸಂದಿಗ್ಧ ಅಂಶಗಳಿಗೆ ಸ್ಪಷ್ಟೀಕರಣ ಹಾಗೂ ಅಭಿಪ್ರಾಯವನ್ನು ಒದಗಿಸಿರುತ್ತಾರೆ.

ಇದಕ್ಕೆ ಪೂರಕವಾಗಿ ಸಮಿತಿಯು ನೈಸೆಲ್/ನೀಸೆಲ್ ಸಂಸ್ಥೆ ಹಲವಾರು ಮೂಲಗಳಿಂದ ಅನಧಿಕೃತ ಆದಾಯವನ್ನು ಹೊಂದಿದೆ ಎಂಬ ಅಭಿಪ್ರಾಯ ಯೋಜನಾ ಸಂತ್ರಸ್ತರಲ್ಲಿ ಹಾಗೂ ಆಸಕ್ತಿತ ಸಾರ್ವಜನಿಕರಲ್ಲಿ ವ್ಯಾಪಕವಾಗಿರುವುದನ್ನು ಪರಿಗಣಿಸಿತು. ಈ ಹಿನ್ನೆಲೆಯಲ್ಲಿ, ಯೋಜನೆಯ ಮೇಲಿನ ಹೂಡಿಕೆಯ ಪ್ರತಿಫಲ ಯೋಜನಾ ತಾಂತ್ರಿಕ ವರದಿಯ ನಿರೂಪಣೆಗೆ ವ್ಯತಿರಿಕ್ತವಾಗಿರುವ ಸಾಧ್ಯತೆ ಇರುವುದರಿಂದ ಪ್ರಸಕ್ತ ಸ್ಥಿತಿಗತಿಗಳಲ್ಲಿ ಯೋಜನೆಯ ಆರ್ಥಿಕ ವಿಶ್ಲೇಷಣೆಯನ್ನು ಕೈಗೊಳ್ಳಲು ತೀರ್ಮಾನಿಸಲಾಯಿತು. ಮೂಲಭೂತವಾಗಿ ಯೋಜನೆಯ Net Present Value ಮತ್ತು Internal Rate of Returnಗಳ ಪರಿಷ್ಕರಣೆ, ಕ್ರಿಯಾ ಒಪ್ಪಂದ, ಸೋಷಿಯೋ ಎಕನಾಮಿಕ್ ಸರ್ವೆ ಹಾಗೂ ಯೋಜನಾ ತಾಂತ್ರಿಕ ವರದಿಗಳ ಆಧಾರದ ಮೇಲೆ ಆರ್ಥಿಕ ಆಯಾಮಗಳ ವಿಶ್ಲೇಷಣೆ, ಪುನರ್ವಸತಿ ಮತ್ತು ಪುನರ್ ನಿರ್ಮಾಣ, ಪ್ರಸ್ತಾವನೆಗಳ ಅನುಷ್ಠಾನ, ಇತ್ಯಾದಿಗಳನ್ನು ವಿಶ್ಲೇಷಿಸಲು Institute for Social and Economic Change ಸಂಸ್ಥೆಗೆ ವಹಿಸಲು ನಿರ್ಧರಿಸಲಾಯಿತು. ಈ ಸಂಸ್ಥೆಯು ದಿನಾಂಕ 23.12.2015ರಂದು ವರದಿಯನ್ನು ಸಮಿತಿಗೆ ಸಲ್ಲಿಸಿದ್ದು, ವರದಿಯ ಪ್ರಮುಖ ಅಂಶಗಳನ್ನು ಸಮಿತಿಯು 3.4.1997ರ

ಒಪ್ಪಂದವನ್ನು ಸೋಮಶೇಖರ ರೆಡ್ಡಿ ಪ್ರಕರಣದ ನ್ಯಾಯಾಲಯದ ಆದೇಶದಂತೆ ಜಮೀನುಗಳನ್ನು ವಶಪಡಿಸಿಕೊಳ್ಳುವಲ್ಲಿ ವ್ಯತ್ಯಾಸ ಉಂಟಾಗಿದೆಯೇ ಎಂಬುದರ ಬಗ್ಗೆ ಮಾಹಿತಿಗಳನ್ನು ಸಂಗ್ರಹಿಸಲು ಸಮಿತಿಯು ಅವಲೋಕಿಸಿತು.

ಸದನ ಸಮಿತಿಯು ಅನುಬಂಧದಲ್ಲಿ ವಿವಿಧ ಸ್ತರದ ನ್ಯಾಯಾಲಯದಲ್ಲಿ ಬಾಕಿ ಇರುವ ಹಾಗೂ ಇತ್ಯರ್ಥವಾಗದ ಪ್ರಕರಣಗಳ ತಃಖ್ತೆಯನ್ನು ನೀಡಿದೆ. ಸಮಿತಿಯ ಶಿಫಾರಸ್ಸುಗಳು ಸರ್ವೋಚ್ಛ ನ್ಯಾಯಾಲಯದಲ್ಲಿ ಬಾಕಿ ಇರುವ ನ್ಯಾಯಾಂಗ ನಿಂಧನೆ ಪ್ರಕರಣಗಳು ಹಾಗೂ ವಿವಿಧ ಸ್ತರದ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳ ತೀರ್ಪು, ಮಧ್ಯಂತರ ಆದೇಶಗಳು, ತಡೆಯಾಜ್ಞೆಗಳ ನಿರ್ಬಂಧನೆಗೆ ಒಳಪಟ್ಟಿರುತ್ತದೆ. ನ್ಯಾಯಾಲಯದ ಪ್ರಕರಣಗಳಲ್ಲಿ ಕಕ್ಷಿದಾರರ ಮನವಿ/ಪರಿಹಾರದ ಆಧಾರದ ಮೇಲೆ ಹಾಗೂ ಅದಕ್ಕೆ ಸೀಮಿತವಾಗಿರುವಂತೆ ತೀರ್ಪುಗಳನ್ನು ನೀಡುವುದು ಸಾಮಾನ್ಯ ಜ್ಞಾನವಾಗಿರುತ್ತದೆ. ಸದನ ಸಮಿತಿ ಸಮಗ್ರವಾಗಿ ಯೋಜನಾ ಅನುಷ್ಠಾನದ ಸಾಧಕ-ಬಾಧಕಗಳನ್ನು ವಿಶ್ಲೇಷಿಸಿದ್ದು, ಅನುಷ್ಠಾನದ ಜವಾಬ್ದಾರಿಯನ್ನು ನಿರ್ವಹಿಸುತ್ತಿರುವ ಇಲಾಖೆಗಳ ಸಮಗ್ರ ಸಮನ್ವಯತೆ, ಯೋಜನಾ ಅನುಷ್ಠಾನದಲ್ಲಿ ಪ್ರಮುಖ ಸಂದಿಗ್ಧತೆಗಳು, ಇತ್ಯಾದಿಗಳನ್ನು ಚಾರಿತ್ರಿಕವಾಗಿ ವಿಶ್ಲೇಷಿಸಿರುವ ಹಿನ್ನೆಲೆಯಲ್ಲಿ ಸಮಿತಿಯ ಶಿಫಾರಸ್ಸುಗಳು ಹಾಗೂ ನಿರ್ಧಾರಗಳು ವ್ಯಾಪಕ ಕ್ಷೇತ್ರವ್ಯಾಪ್ತಿಗೆ ಒಳಪಡುವುದು ಸಹಜವಾಗಿರುತ್ತದೆ. ಆದಾಗ್ಯೂ, ಸಮಿತಿ ನಿರ್ಧಾರ ಹಾಗೂ ಶಿಫಾರಸ್ಸುಗಳನ್ನು ಸಾಧ್ಯವಾದ ಮಟ್ಟಿಗೆ ನ್ಯಾಯಾಲಯಗಳ ತೀರ್ಪುಗಳು ಹಾಗೂ ನಿರ್ದೇಶನಗಳ ವ್ಯಾಪ್ತಿಗೆ ಒಳಪಡುವಂತೆ ಇತ್ಯರ್ಥಗೊಳಿಸಲು ಪ್ರಾಮಾಣಿಕ ಪ್ರಯತ್ನವನ್ನು ಮಾಡಲಾಗಿದೆ. ಈ ವರದಿಯಲ್ಲಿ ಪ್ರತಿಪಾದಿಸಿರುವ ಉಲ್ಲೇಖಗಳು, ಅಂಶಗಳು, ವಿಶ್ಲೇಷಣೆಗಳು, ಸ್ಪಷ್ಟೀಕರಣಗಳು ಹಾಗೂ ಶಿಫಾರಸ್ಸುಗಳನ್ನು "without prejudice to settled or pending cases before various Courts of Law" ಎಂದು ಪರಿಗಣಿಸಬೇಕೆಂದು ಸಮಿತಿಯು ತೀರ್ಮಾನಿಸಿದೆ. ಕ್ರಿಯಾ ಒಪ್ಪಂದದ ಅನುಚ್ಛೇಧ 22.1 ರ ಅನುಗುಣವಾಗಿ ಕ್ರಿಯಾ ಒಪ್ಪಂದದ ನಿರ್ವಹಣೆಯ ಭಾಷೆ "ಇಂಗ್ಲೀಷ್" ಎಂದು ಉಲ್ಲೇಖಿಸಲಾಗಿದೆ. ಈ ವರದಿಯಲ್ಲಿ ಕ್ರಿಯಾ ಒಪ್ಪಂದದ ಪ್ರಮುಖ ಅನುಚ್ಛೇಧದ ಧ್ಯೇಯೋದ್ಧೇಶಗಳ ಬಗ್ಗೆ ಸಂಕ್ಷಿಪ್ತ ಪ್ರತಿಪಾದನೆ ಇದೆ. ಕ್ರಿಯಾ ಒಪ್ಪಂದದ ಅನುಚ್ಛೇಧದ ವಾಸ್ತವಿಕ ಪ್ರತಿಪಾದನೆಗಳ ಬಗ್ಗೆ ದ್ವಂದ್ವ ಉದ್ಭವಿಸಿದಲ್ಲಿ "ಇಂಗ್ಲೀಷ್" ಆವರ್ತವನ್ನು ಸಮರ್ಪಕ ಎಂದು ಪರಿಗಣಿಸಬೇಕಾಗುವುದು.

ಕ್ರಿಯಾ ಒಪ್ಪಂದದ ನಿರ್ದಿಷ್ಟ ಹಾಗೂ ಸ್ಪಷ್ಟ ಉಲ್ಲಂಘನೆಯಿಂದಾಗಿ ನೈಸೆಲ್/ನೀಸೆಲ್ ಸಂಸ್ಥೆಗೆ ಆಗಿರುವ ಅನುದ್ದೇಶಿತ ಲಾಭ/ ಆದಾಯಗಳ ವಿವರಗಳನ್ನು ಸಮಿತಿ ವಿಶ್ಲೇಷಿಸಿ ಸಮರ್ಪಕ ಶಿಫಾರಸ್ಸುಗಳನ್ನು ಈ ವರದಿಯಲ್ಲಿ ಸೇರ್ಪಡೆ ಮಾಡಿದೆ.

ಸದನ ಸಮಿತಿಯು 12.08.2016, 29.08.2016, 17.09.2016, 26.09.2016, 27.09.2016, 18.11.2016, 21.11.2016, 22.11.2016 ಹಾಗೂ 24.11.2016 ರಂದು ಕ.'ಡು ವರದಿಯ ಬಗ್ಗೆ ಚರ್ಚೆ ಕೈಗೊಂಡಿದ್ದು, ಸಮಿತಿಯ ನಿರ್ದೇಶನಗಳ ಅನುಸಾರವಾಗಿ ವರದಿಯನ್ನು ಇತ್ಯರ್ಥಗೊಳಿಸಲಾಗಿದೆ.

F2(*)

ಈ ವರದಿಯಲ್ಲಿ ಮಾಡಿರುವ ವಿಶ್ಲೇಷಣೆಗಳು ಹಾಗೂ ಶಿಫಾರಸ್ಸುಗಳು ಯೋಜನಾ ಅನುಷ್ಠಾನದ ಜವಾಬ್ದಾರಿಯನ್ನು ನಿರ್ವಹಿಸುತ್ತಿರುವ ವಿವಿಧ ಇಲಾಖೆಗಳಿಂದ ಸ್ವೀಕೃತವಾಗಿರುವ ಮಾಹಿತಿ/ಸ್ಪಷ್ಟೀಕರಣದ ದಾಖಲಾತಿಗಳ ಮೇಲೆ ಆಧಾರಿತವಾಗಿದೆ. ಪ್ರಸ್ತಾವಿತ ದಾಖಲಾತಿಗಳ ಆಧಾರದ ಮೇಲೆ ಸಮಿತಿಯು ವ್ಯಾಪಕ ಚರ್ಚೆ ಕೈಗೊಂಡಿದ್ದು, ಇಲಾಖಾ ಸಾಕ್ಷಿಗಳ ಹೇಳಿಕೆ, ಸಮಿತಿಯ ನಡಾವಳಿ, ತೀರ್ಮಾನ ಹಾಗೂ ನಿರ್ದೇಶನಗಳ ಅನುಗುಣವಾಗಿ ವರದಿಯನ್ನು ಇತ್ಯರ್ಥಗೊಳಿಸಲಾಗಿದೆ. ನ್ಯಾಯಾಲಯದ ಪ್ರಕರಣಗಳಿಗೆ ಸಂಬಂಧಿಸಿದಂತೆ ಮಾನ್ಯ ನಿವೃತ್ತ ನ್ಯಾಯಮೂರ್ತಿ ಶ್ರೀ ಹೆಚ್.ಎನ್. ನಾಗಮೋಹನದಾಸ್, ಸಮಿತಿಯ ಕಾನೂನು ಸಲಹೆಗಾರರು, ಇವರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ವರದಿಯಲ್ಲಿನ ವಿಶ್ಲೇಷಣೆ ಹಾಗೂ ಶಿಫಾರಸ್ಸುಗಳನ್ನು ಇತ್ಯರ್ಥಗೊಳಿಸಲಾಗಿದೆ.

ಸಮಿತಿಯು ತನ್ನ ಕಾರ್ಯಕಲಾಪಗಳಲ್ಲಿ ಸಕ್ರಿಯವಾಗಿ ಸಹಕಾರ ನೀಡಿದ ಲೋಕೋಪಯೋಗಿ ಇಲಾಖೆ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಕಾನೂನು ಇಲಾಖೆ, ನಗರಾಭಿವೃದ್ಧಿ ಇಲಾಖೆ, ಕಂದಾಯ ಇಲಾಖೆ, ಅರಣ್ಯ ಇಲಾಖೆ, ಸಣ್ಣ ನೀರಾವರಿ ಇಲಾಖೆ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಮತ್ತು ಬೆಂಗಳೂರು ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಸ್ಥಳೀಯ ಯೋಜನಾ ಪ್ರಾಧಿಕಾರದ ಅಧಿಕಾರಿ/ಸಿಬ್ಬಂದಿ ವರ್ಗದವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತದೆ. ಕಾನೂನು ಸಲಹೆಗಾರರಾದ ಸನ್ಮಾನ್ಯ ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್, ಕರ್ನಾಟಕ ಉಚ್ಚ ನ್ಯಾಯಾಲಯ ಹಾಗೂ ಪ್ರೊಫೆಸರ್ ಕೃಷ್ಣರಾಜ್, ಐಸೆಕ್. ಇವರುಗಳ ಸಲಹೆ ಹಾಗೂ ವೃತ್ತಿಪರ ಬೆಂಬಲಕ್ಕೆ ಸಮಿತಿಯು ಕೃತಜ್ಞವಾಗಿರುತ್ತದೆ.

ಅಧ್ಯಕ್ಷರು,
ನೈಸ್ ಸದನ ಸಮಿತಿ

ಬೆಳಗಾವಿ

ದಿನಾಂಕ 24.11.2016

## ಯೋಜನೆಯ ಹಿನ್ನೆಲೆ

ಬೆಂಗಳೂರು ನಗರವು ಕರ್ನಾಟಕ ರಾಜಧಾನಿಯಾಗಿದ್ದು, ಬೆಂಗಳೂರಿನಿಂದ 130 ಕಿ.ಮೀ. ದೂರದಲ್ಲಿರುವ ಮೈಸೂರು, ರಾಜ್ಯದ ಚಾರಿತ್ರಿಕ ಹಾಗೂ ಪಾರಂಪರಿಕ ಕೇಂದ್ರ ಎಂದು ಪ್ರಸಿದ್ಧಿಯಾಗಿದೆ. ಈ ನಗರಗಳ ನಡುವೆ ವಾಹನ ಸಂಚಾರ ದಟ್ಟಣೆ ಗರಿಷ್ಠ ಮಟ್ಟದಲ್ಲಿದೆ. ವಾರ್ಷಿಕವಾಗಿ ವಾಹನ ಸಂಚಾರದ ದಟ್ಟಣೆಯ ಪ್ರಗತಿ ದರವೂ ಸಹ ಅನಿಯಂತ್ರಿತವಾಗಿ ಹೆಚ್ಚುವರಿಯಾಗುತ್ತಿದೆ. ಈ ಎರಡೂ ನಗರಗಳ ನಡುವೆ ಇರುವ ವಾಹನ ದಟ್ಟಣೆಯಿಂದಾಗಿ ವಾಹನ ಸಂಚಾರವು ಕಷ್ಟಕರವಾಗಿದೆ. ಅಪಘಾತಗಳ ಸಂಖ್ಯೆಯೂ ಸಹ ಪ್ರಗತಿಪರವಾಗಿ ಹೆಚ್ಚಾಗುತ್ತಿದೆ. ಈ ಹಿನ್ನೆಲೆಯಲ್ಲಿ 1988 ರಲ್ಲಿ ಬೆಂಗಳೂರು ಹಾಗೂ ಮೈಸೂರು ನಡುವೆ ವೇಗದ ಹೆದ್ದಾರಿಯನ್ನು ನಿರ್ಮಿಸುವ ಪ್ರಸ್ತಾವನೆಯನ್ನು ಪರಿಗಣಿಸಲಾಯಿತು. ತತ್ಸಂಬಂಧವಾಗಿ ಖಾಸಗಿ ಮೂಲಗಳಿಂದ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಯೋಜನಾ ವರದಿಯನ್ನು ತಯಾರಿಸಲಾಯಿತು. ಈ ವರದಿಯ ಅನುಗುಣವಾಗಿ ಖಾಸಗಿ ಪಾಲುದಾರರ ಯೋಜನೆಯ ನಿರ್ಮಾಣ ಹಾಗೂ ನಿರ್ವಹಣೆಗೆ ಬಂಡವಾಳವನ್ನು ಹೂಡಿ ಟೋಲ್ ಮುಖಾಂತರ ಹೂಡಿಕೆ ಹಾಗೂ ಲಾಭಾಂಶವನ್ನು ಹಿಂಪಡೆಯುವ ಬಗ್ಗೆ ಪ್ರತಿಪಾದಿಸಲಾಗಿತ್ತು. ಈ ಆಧಾರದ ಮೇಲೆ ಟೆಂಡರ್‌ಗಳನ್ನು ಆಹ್ವಾನಿಸಿದ್ದು, ಕೇವಲ ಒಂದು ಸಂಸ್ಥೆ ಈ ಟೆಂಡರ್ ಪ್ರಕಟಣೆಗೆ ಪ್ರತಿಕ್ರಿಯಿಸಿ ಪ್ರಸ್ತಾವನೆಯನ್ನು ಸಲ್ಲಿಸಿತ್ತು. ಆದರೆ ಈ ಪ್ರಸ್ತಾವನೆಯಲ್ಲಿ ಹಲವಾರು ನಿರ್ಬಂಧನೆಗಳನ್ನು ನಿರೂಪಿಸಿದ್ದು, ಪ್ರಮುಖವಾಗಿ ಯೋಜನೆಗೆ ಅವಶ್ಯಕವಿರುವ ಭೂಮಿಯ ಭೂಸ್ವಾಧೀನ ವೆಚ್ಚವನ್ನು ಸರ್ಕಾರವೇ ಭರಿಸಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಲಾಗಿತ್ತು. ಇದಲ್ಲದೆ, ಸರ್ಕಾರವು ಸಮಾನಾಂತರವಾಗಿ ಬೇರೆ ಮಾರ್ಗಗಳನ್ನು ನಿರ್ಮಿಸುವುದನ್ನು ಪ್ರತಿಬಂಧಿಸಲಾಗಿತ್ತು. ಈ ನಿರ್ಬಂಧನೆ ಅಥವಾ ಷರತ್ತುಗಳು ಅನುಕೂಲಕರವಾಗದೇ ಇರುವ ಹಿನ್ನೆಲೆಯಲ್ಲಿ ಈ ಪ್ರಸ್ತಾವನೆಯನ್ನು ಕೆಲವು ಕಾಲಕ್ಕೆ ಸ್ಥಗಿತಗೊಳಿಸಲಾಯಿತು. ತದನಂತರ ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್ ಪ್ರಾಧಿಕಾರದ ಮುಖಾಂತರ ವೇಗದ ಹೆದ್ದಾರಿಯನ್ನು ನಿರ್ಮಿಸುವ ಬಗ್ಗೆ ಸರ್ವೇಕ್ಷಣೆಯನ್ನು ಕೈಗೊಳ್ಳಲಾಯಿತು. ಈ ಬ್ಯಾಂಕಿನ ವರದಿಯ ಅನುಗುಣವಾಗಿ ಸರ್ಕಾರವು ಈ ಯೋಜನೆಯ ಪ್ರತಿಶತ 20ರಷ್ಟು ವೆಚ್ಚವನ್ನು ಭರಿಸಬೇಕಾಗಿತ್ತು. ಇದಲ್ಲದೆ, ಭೂಸ್ವಾಧೀನ ವೆಚ್ಚವನ್ನೂ ಸಹ ಸರ್ಕಾರವೇ ಭರಿಸುವ ಬಗ್ಗೆ ಪ್ರತಿಪಾದನೆ ಇತ್ತು.

ಈ ಹಿನ್ನೆಲೆಯಲ್ಲಿ ಸರ್ಕಾರವು ಸತತವಾಗಿ Build Own Operate and Transfer ವ್ಯವಸ್ಥೆಯಡಿಯಲ್ಲಿ ಯಾವುದೇ ಸಮೂಹ ಸಂಸ್ಥೆಯಿಂದ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಸತತವಾಗಿ ಪ್ರಯತ್ನಗಳನ್ನು ಮಾಡುತ್ತಿತ್ತು. BOOT ವ್ಯವಸ್ಥೆಯಡಿಯಲ್ಲಿ ಭೂಸ್ವಾಧೀನ ವೆಚ್ಚವೂ ಒಳಗೊಂಡಂತೆ ಸಂಪೂರ್ಣವಾಗಿ ಯೋಜನಾ ವೆಚ್ಚ ಹಾಗೂ ನಿರ್ವಹಣಾ ವೆಚ್ಚವನ್ನು ಸ್ವಂತ ಸಂಪನ್ಮೂಲಗಳಿಂದ ಖಾಸಗಿ ಪಾಲುದಾರರು ಭರಿಸಿ ಅವರ ಲಾಭಾಂಶ ಹಾಗೂ ಹೂಡಿಕೆಯನ್ನು ಟೋಲ್ ಸಂಗ್ರಹಣೆಯ ಮೂಲಕ ಸರಿದೂಗಿಸುವ ಪರಿಕಲ್ಪನೆ ಇದೆ. ಭಾರತ ಸರ್ಕಾರವು ಜಾರಿಗೊಳಿಸಿದ Liberalisation, Privatisation ಹಾಗೂ Globalisation ನೀತಿ ನಿರ್ಧಾರಗಳ ಅಡಿಯಲ್ಲಿ ಹಲವಾರು ಸಮೂಹ ಸಂಸ್ಥೆಗಳು ಈ ಯೋಜನೆಯ ಬಗ್ಗೆ ಆಸಕ್ತಿಯನ್ನು ವ್ಯಕ್ತಪಡಿಸಿದವು.

Bangalore Mysore Infrastructure Corridar ಯೋಜನೆಯ ಕುರಿತು ಪ್ರಥಮ ಸ್ತರದಲ್ಲಿ ಎಲ್. ಅಂಡ್ ಟಿ. ಮತ್ತು ರೆನಾಂಗ್ ಸಂಸ್ಥೆಗಳು ಈ ಪ್ರಸ್ತಾವನೆಗೆ ಸ್ಪಂದಿಸಿದ್ದು, ಈ ಪೈಕಿ ರೆನಾಂಗ್

ಸಂಸ್ಥೆಯು ಕರಡು ಒಪ್ಪಂದವನ್ನೂ ಸಹ ಸಲ್ಲಿಸಿತ್ತು. ಈ ಒಪ್ಪಂದವನ್ನು ಲೋಕೋಪಯೋಗಿ ಇಲಾಖೆಯ ಅಂದಿನ ಕಾರ್ಯದರ್ಶಿಗಳು ವಿಶ್ಲೇಷಿಸಿರುತ್ತಾರೆ. ದಿನಾಂಕ 14.02.1995ರ ಪತ್ರದ ಮುಖಾಂತರ ವಿಶೇಷಾಧಿಕಾರಿ, ಲೋಕೋಪಯೋಗಿ ಇಲಾಖೆ ಇವರು ಒಂದು ಸವಿವರವಾದ ಟಿಪ್ಪಣಿಯನ್ನು ಸಲ್ಲಿಸಿ ಒಡಂಬಡಿಕೆಯ ಷರತ್ತುಗಳು ರಾಜ್ಯದ ಹಿತಾಸಕ್ತಿಗೆ ಅನುಕೂಲವಾಗಿರುವುದಿಲ್ಲ ಎಂದು ತಿಳಿಸಿರುತ್ತಾರೆ. ರೆನಾಂಗ್ ಸಂಸ್ಥೆಯು ಮೆ: ಕನ್ಸಲ್ಟಿಂಗ್ ಇಂಜಿನೀಯರಿಂಗ್ ಸರ್ವೀಸಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್, ದೆಹಲಿ ಇವರ ಮುಖಾಂತರ ಯೋಜನೆಯನ್ನು ಅನುಷ್ಠಾನಗೊಳಿಸಲು ಪ್ರತಿಪಾದಿಸಿರುತ್ತಾರೆ. ಪ್ರಮುಖವಾಗಿ ಯೋಜನೆಯ ಅನುಷ್ಠಾನದ ತಾಂತ್ರಿಕ ಮಾನದಂಡಗಳು, ಸ್ತರಗಳು ಇತ್ಯಾದಿಗಳನ್ನು ಸಂಪೂರ್ಣವಾಗಿ ಖಾಸಗಿ ಪಾಲುದಾರರೇ ನಿರ್ವಹಿಸುವ ಬಗ್ಗೆ ಒಪ್ಪಂದದಲ್ಲಿ ನಮೂದಿಸಲಾಗಿದೆ. ಇದಲ್ಲದೆ, ಯೋಜನಾ ಅನುಷ್ಠಾನದಅವಧಿಯಲ್ಲಿ ಪ್ರಸ್ತಾವಿತ ಯೋಜನೆಯ ಬಗ್ಗೆ ಬೇರೆ ಯಾವುದೇ ವ್ಯವಹಾರ ಅಥವಾ ಕರಾರನ್ನು ಮಾಡಕೂಡದೆಂಬ ಷರತ್ತನ್ನು ವಿಧಿಸಲಾಗಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರದ ಸಾರ್ವಭೌಮತ್ವಕ್ಕೆ ಧಕ್ಕೆಯಾಗುವಂತಹ ಷರತ್ತುಗಳನ್ನು ವಿಧಿಸಿರುವುದರಿಂದ ಈ ಪ್ರಸ್ತಾವನೆಯನ್ನು ನಕಾರಾತ್ಮಕ ಎಂದು ತಿರಸ್ಕರಿಸಲಾಗಿದೆ. ಲೋಕೋಪಯೋಗಿ ಇಲಾಖೆಯವರು ದಿನಾಂಕ 20.02.1995 ರಂದು ಮೆ:ಕಲ್ಯಾಣಿ ಗ್ರೂಪ್ ಸಮೂಹ ಸಂಸ್ಥೆಗಳೊಂದಿಗೆ ಒಡಂಬಡಿಕೆ ಜಾರಿಗೊಳಿಸಿರುತ್ತಾರೆ. ದಿನಾಂಕ 20.02.1995 ರಂದು ಒಡಂಬಡಿಕೆ ಜಾರಿಗೊಂಡ ನಂತರ 29.04.1995 ರಂದು ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಈ ಯೋಜನೆಯ ನಿರ್ವಹಣೆಯ ಬಗ್ಗೆ ತೀರ್ಮಾನ ಕೈಗೊಳ್ಳಲಾಗಿದೆ ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ.

ಏತನ್ಮಧ್ಯೆ, ಅಮೇರಿಕಾ ರಾಷ್ಟ್ರದ ಮೆಸಚ್‌ಹ್ಯೂಸೆಟ್ಸ್ ರಾಜ್ಯದ ಘನತೆವೆತ್ತ ರಾಜ್ಯಪಾಲರು ಭಾರತಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ದಿನಾಂಕ 20.02.1995 ರಂದು ಕರ್ನಾಟಕದ ಮಾನ್ಯ ಮುಖ್ಯಮಂತ್ರಿಗಳೊಡನೆ ಈ ಬಗ್ಗೆ ವಿಚಾರ ವಿನಿಮಯವನ್ನು ನಡೆಸಿದರು. ಈ ಚರ್ಚೆಯ ಫಲಶೃತಿಯಾಗಿ ಕರ್ನಾಟಕ ಸರ್ಕಾರವು ಮೆ: ವಿ.ಹೆಚ್.ಬಿ., ಅಮೇರಿಕಾದ ಸ್ಟ್ಯಾಬ್ ಇಂಜಿನೀಯರಿಂಗ್ ಸಮೂಹ ಸಂಸ್ಥೆ ಹಾಗೂ ಕಲ್ಯಾಣಿ ಗ್ರೂಪ್ ಸಮುಚ್ಛಯದೊಡನೆ ಮೆಸಚ್‌ಹ್ಯೂಸೆಟ್ಸ್ ರಾಜ್ಯಪಾಲರ ಘನ ಉಪಸ್ಥಿತಿಯಲ್ಲಿ ಒಡಂಬಡಿಕೆಯನ್ನು ಜಾರಿಗೊಳಿಸಲಾಯಿತು. ಈ ಒಡಂಬಡಿಕೆಯ ಅನುಗುಣವಾಗಿ ಈ ಸಮೂಹ ಸಂಸ್ಥೆಗಳು ಪ್ರಾಥಮಿಕ ಸರ್ವೇಕ್ಷಣೆ ಹಾಗೂ ಆರ್ಥಿಕ ಸಮೀಕ್ಷೆಯನ್ನು ಬೆಂಗಳೂರು-ಮೈಸೂರು ವೇಗದ ಹೆದ್ದಾರಿ ಯೋಜನಾ ಅನುಷ್ಠಾನದ ಹಿನ್ನೆಲೆಯಲ್ಲಿ ಕೈಗೊಂಡು ಯೋಜನೆಯ ಸಾಧಕ ಬಾಧಕಗಳಿಗೆ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಬೇಕಾಗಿತ್ತು. ದಿನಾಂಕ 29.04.1995 ರಂದು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಲೋಕೋಪಯೋಗಿ ಸಚಿವರು, ವ್ಯವಸ್ಥಾಪಕ ನಿರ್ದೇಶಕರು, ಭಾರತ್ ಫೋರ್ಜ್ ಲಿಮಿಟೆಡ್, ಅಧ್ಯಕ್ಷರು, ಸ್ಟ್ಯಾಬ್ ಇಂಜಿನೀಯರಿಂಗ್ ಮತ್ತು ಕನ್‌ಸ್ಟ್ರಕ್ಷನ್ ಹಾಗೂ ನಿರ್ದೇಶಕರು, ಕಲ್ಯಾಣಿ ಸ್ಟೀಲ್ಸ್ ಇವರ ಉಪಸ್ಥಿತಿಯಲ್ಲಿ ಸಭೆಯನ್ನು ನಡೆಸಿ 2 ತಿಂಗಳ ಒಳಗೆ ಪ್ರಸ್ತಾವನೆಯನ್ನು ಸಲ್ಲಿಸುವ ಬಗ್ಗೆ ತೀರ್ಮಾನಿಸಲಾಯಿತು.

ಪ್ರಸ್ತಾವಿತ ಸಮುಚ್ಛಯ ಸಂಸ್ಥೆಗಳು ಸಲ್ಲಿಸುವ ಯೋಜನಾ ವರದಿಯನ್ನು ವಿಶ್ಲೇಷಿಸಿ, ಸಬಲಗೊಳಿಸಿ ಸೂಕ್ತ ಶಿಫಾರಸ್ಸುಗಳನ್ನು ಮಾಡುವ ಹಿತದೃಷ್ಟಿಯಿಂದ ಮಾನ್ಯ ಲೋಕೋಪಯೋಗಿ ಸಚಿವರ ಅಧ್ಯಕ್ಷತೆಯಲ್ಲಿ 05.06.1995 ರಂದು ಉನ್ನತ ಮಟ್ಟದ ಸಮಿತಿಯನ್ನು ರಚಿಸಲಾಯಿತು. ಪ್ರಧಾನ ಕಾರ್ಯದರ್ಶಿ,

ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಪ್ರಧಾನ ಕಾರ್ಯದರ್ಶಿ, ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ, ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, ಮುಖ್ಯ ಅಭಿಯಂತರರು, ದಕ್ಷಿಣ ವಲಯ, ಕೆ.ಎಸ್.ಎಸ್.ಐ.ಡಿ.ಸಿ., ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು ಈ ಸಮಿತಿಯ ಅಧಿಕೃತ ಸದಸ್ಯರಾಗಿದ್ದರು. ಅಧ್ಯಕ್ಷರು, ತಾಂತ್ರಿಕ ಸಲಹಾ ಸಮಿತಿ (ನೀರಾವರಿ) ಇವರು ಪದನಿಮಿತ್ತ ಸದಸ್ಯರಾಗಿದ್ದರು. ಏತನ್ಮಧ್ಯೆ, ಖಾಸಗಿ ಸಮೂಹದ ಸಮುಚ್ಛಯ ಸಂಸ್ಥೆಗಳು 26.08.1995 ರಂದು ಬೆಂಗಳೂರು-ಮೈಸೂರು ಮೂಲಭೂತ ಸೌಕರ್ಯ ಅಭಿವೃದ್ಧಿ ಯೋಜನೆಯ ವರದಿಯನ್ನು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಸಲ್ಲಿಸಿದ್ದು, ಈ ಸಂದರ್ಭದಲ್ಲಿ ಮಾನ್ಯ ಆರ್ಥಿಕ ಸಚಿವರು, ಕಂದಾಯ ಸಚಿವರು, ಲೋಕೋಪಯೋಗಿ ಸಚಿವರು, ಭಾರೀ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಭಾರೀ ನೀರಾವರಿ ಸಚಿವರು ಉಪಸ್ಥಿತರಿದ್ದರು. ಸಮೂಹ ಸಮುಚ್ಛಯ ಸಲ್ಲಿಸಿದ ಯೋಜನಾ ತಾಂತ್ರಿಕ ವರದಿಯಲ್ಲಿ ಬೆಂಗಳೂರು-ಮೈಸೂರು ಹೆದ್ದಾರಿ ನಿರ್ಮಿಸುವ ಬಗ್ಗೆ, ಬೆಂಗಳೂರಿನಲ್ಲಿ ಪೆರಿಫೆರಲ್ ಮತ್ತು ಲಿಂಕ್ ರಸ್ತೆ ನಿರ್ಮಿಸುವ ಬಗ್ಗೆ, ಬೆಂಗಳೂರು ಮತ್ತು ಮೈಸೂರಿನ ಕೆಲವು ಕಡೆ ಮೇಲ್ಸೇತುವೆ ರಸ್ತೆ ಮತ್ತು 7 ಉಪ ನಗರಗಳ ನಿರ್ಮಾಣ ಮಾಡಲು ಅಂದಾಜು 25 ಸಾವಿರ ಎಕರೆ ಜಮೀನು ಸರ್ಕಾರವು ವಶಪಡಿಸಿಕೊಡುವುದರ ಬಗ್ಗೆ ಉಲ್ಲೇಖವಾಗಿರುತ್ತದೆ ಹಾಗೂ ರಸ್ತೆಯ ಪಂಕ್ತೀಕರಣಗಳು ಮತ್ತು 7 ಉಪನಗರಗಳ ನಿಗದಿತ ಸ್ಥಳಗಳ ಬಗ್ಗೆ ನಿಖರವಾಗಿ ಉಲ್ಲೇಖಿಸಲಾಗಿರುತ್ತದೆ. ಉನ್ನತ ಮಟ್ಟದ ಸಮಿತಿಯು ಸಭೆ ಸೇರಿ ಯೋಜನಾ ವರದಿಯ ಪ್ರಗತಿಯನ್ನು ಪರಿವೀಕ್ಷಿಸಿ ಸೂಕ್ತ ಸಲಹೆ ಹಾಗೂ ಸ್ಪಷ್ಟೀಕರಣವನ್ನು ನೀಡುತ್ತಿತ್ತು. ಪ್ರಸ್ತಾವಿತ ಸಂದರ್ಭದಲ್ಲಿ ಉನ್ನತ ಮಟ್ಟದ ಸಮಿತಿಯ ಸದಸ್ಯರೂ ಸಹ ಉಪಸ್ಥಿತರಿದ್ದು, ವಿಸ್ತೃತ ಚರ್ಚೆಯ ನಂತರ 12.10.1995 ರಂದು ಯೋಜನಾ ವರದಿಯನ್ನು ಉನ್ನತ ಮಟ್ಟದ ಸಮಿತಿ ಸರ್ಕಾರಕ್ಕೆ ಸಲ್ಲಿಸಿತು. ಸಚಿವ ಸಂಪುಟದ ಉಪ ಸಮಿತಿಯು 06.11.1995 ರಂದು ಸಭೆ ಸೇರಿ ವಿದೇಶಿ ಬಂಡವಾಳ ಹೂಡಿಕೆಯ ಪ್ರಕರಣಗಳನ್ನು ಪರಿಶೀಲಿಸುವ ಸಂದರ್ಭದಲ್ಲಿ ಈ ವರದಿಯನ್ನು ಸಚಿವ ಸಂಪುಟದ ಮುಂದೆ ಮಂಡಿಸಲು ತೀರ್ಮಾನಿಸಿತು. ಅಲ್ಲದೆ, ಆರ್ಥಿಕ ಇಲಾಖೆಯ ಅಭಿಪ್ರಾಯವನ್ನೂ ಸಂಗ್ರಹಿಸಿ ಸಚಿವ ಸಂಪುಟದ ಮುಂದೆ ಮಂಡಿಸಲು ತೀರ್ಮಾನಿಸಲಾಯಿತು.

ತದನಂತರ ದಿನಾಂಕ 09.11.1995ರಂದು ಸಚಿವ ಸಂಪುಟವು ಆರ್ಥಿಕ ಇಲಾಖೆಯ ಅಭಿಪ್ರಾಯವನ್ನು ಹಾಗೂ ಉನ್ನತ ಮಟ್ಟದ ಸಮಿತಿಯ ಅಭಿಪ್ರಾಯವನ್ನು ಮತ್ತು ಸಚಿವ ಸಂಪುಟದ ಉಪಸಮಿತಿಯ ಅಭಿಪ್ರಾಯವನ್ನೂ ಕ್ರೋಢೀಕರಿಸಿ ಯೋಜನಾ ತಾಂತ್ರಿಕ ವರದಿಯಲ್ಲಿನ ರಸ್ತೆಗಳಿಗೆ ಮತ್ತು 7 ಉಪನಗರಗಳ ಬದಲಾಗಿ 5 ಉಪನಗರಗಳನ್ನು ಅಭಿವೃದ್ಧಿಪಡಿಸುವಂತೆ ಸಮೂಹ ಮತ್ತು ಸಂಸ್ಥೆಗಳ ಪರವಾಗಿ ಸಚಿವ ಸಂಪುಟವು ಅನುಮೋದನೆ ನೀಡಿತು. ದಿನಾಂಕ 20.11.1995ರಂದು ಸಚಿವ ಸಂಪುಟದ ಅನುಮೋದನೆಯಂತೆ ಆದೇಶವನ್ನು ಹೊರಡಿಸಿ, ಆದೇಶದಂತೆ ಬೆಂಗಳೂರು-ಮೈಸೂರು ಮೂಲಭೂತ ಸೌಕರ್ಯ ಕಾರಿಡಾರ್ ಯೋಜನೆಗೆ ಸರ್ಕಾರವು ಅನುಮೋದನೆ ನೀಡಿರುವುದನ್ನು ಖಚಿತಪಡಿಸಿತು.

ಯೋಜನಾ ಅನುಷ್ಠಾನಕ್ಕೆ ಕಂಪನಿಗಳ ಅಧಿನಿಯಮ 1956 ರ ಅಡಿಯಲ್ಲಿ ನೋಂದಾಯಿತವಾದ ಸಂಸ್ಥೆ ಅತ್ಯವಶ್ಯಕವಾಗಿದ್ದರಿಂದ ನೈಸೆಲ್ ಎಂಬ ಸಂಸ್ಥೆಯನ್ನು 1996 ರಲ್ಲಿ ಸೃಜಿಸಲಾಯಿತು. ಈ ನೈಸೆಲ್ ಕಂಪನಿಯಲ್ಲಿ ಬಂಡವಾಳವನ್ನು ಹೂಡುವುದಾಗಿ 09.09.1996ರಲ್ಲಿ Consent and

Acknowledgment ಒಪ್ಪಂದವನ್ನು ಮಾಡಿಕೊಂಡು ವಿದೇಶಿ ಸಮುಚ್ಛಯ ಸಂಸ್ಥೆಗಳು ತನ್ನ ಜವಾಬ್ದಾರಿಯನ್ನು ಮತ್ತು ದಿನಾಂಕ 20.11.1995ರ ಸರ್ಕಾರದ ಆದೇಶದ ಸಂಪೂರ್ಣ ಹಕ್ಕನ್ನು ನೈಸೆಲ್ ಸಂಸ್ಥೆಗೆ ವರ್ಗಾವಣೆ ಮಾಡಿರುತ್ತಾರೆ ಮತ್ತು ಈ ಒಡಂಬಡಿಕೆಯ ಅನುಗುಣವಾಗಿ ಮೂಲ ಸಂಸ್ಥೆಗಳಾದ ಕಲ್ಯಾಣಿ ಗ್ರೂಪ್, ವಿ.ಹೆಚ್.ಬಿ. ಮತ್ತು ಸ್ಯಾಬ್ ಇಂಜಿನೀಯರಿಂಗ್ ಒಟ್ಟಾರೆ ಶೇಕಡ 15ರಷ್ಟು Beneficial Equity Interest ಅನ್ನು ಸದಾ ಕಾಲ ನೈಸೆಲ್ ಸಂಸ್ಥೆಯಲ್ಲಿ ಹೊಂದಿರುವುದಾಗಿ ಒಪ್ಪಂದವನ್ನು ಮಾಡಲಾಗಿದೆ. ದಿನಾಂಕ 22.03.1996ರ ಸರ್ಕಾರಿ ಆದೇಶದ ಅನುಗುಣವಾಗಿ ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಎಸ್.ಐ.ಡಿ.ಸಿ. ಅವರ ಅಧ್ಯಕ್ಷತೆಯಲ್ಲಿ ಯೋಜನಾ ಪರಿವೀಕ್ಷಣೆಗಾಗಿ ಪ್ರಮುಖ ಅಧಿಕಾರಿಗಳ ಸಮಿತಿಯನ್ನು ರಚಿಸಲಾಯಿತು. ದಿನಾಂಕ 22.05.1996ರಂದು ನಡೆಸಲಾದ ಎರಡನೇ ಸಭೆಯಲ್ಲಿ ಕ್ರಿಯಾ ಸಮಿತಿಯನ್ನು ರಚಿಸಲಾಯಿತು. ದಿನಾಂಕ 22.05.1996ರಂದು ನಡೆಸಲಾದ ಎರಡನೇ ಸಭೆಯಲ್ಲಿ ಕ್ರಿಯಾ ಒಪ್ಪಂದದ ಷರತ್ತು ಹಾಗೂ ನಿಬಂಧನೆಗಳನ್ನು ಇತ್ಯರ್ಥಗೊಳಿಸಲು ಟಾಸ್ಕ್ ಫೋರ್ಸ್ ಸೃಜಿಸಲು ನಿರ್ಧರಿಸಲಾಯಿತು. ಇದೇ ಸ್ತರದಲ್ಲಿ ಸರ್ಕಾರವನ್ನು ಪ್ರತಿನಿಧಿಸಲು ನ್ಯಾಯವಾದಿಗಳನ್ನು ನೇಮಿಸುವ ನಿರ್ಧಾರವನ್ನು ಕೈಗೊಳ್ಳಲಾಯಿತು. ದಿನಾಂಕ 12.06.1995ರಂದು ನಡೆಸಲಾದ ಸಭೆಯಲ್ಲಿ ಕರ್ನಾಟಕ ಭೂ ಕಂದಾಯ ಅಧಿನಿಯಮದಡಿ ತುರ್ತು ಪರಿಸ್ಥಿತಿಯ ಷರತ್ತಿನ ಆಧಾರದ ಮೇಲೆ ಭೂ ಸ್ವಾಧೀನವನ್ನು ಜಾರಿಗೊಳಿಸುವ ಬಗ್ಗೆ ಪ್ರತಿಪಾದಿಸಲಾಯಿತು. ದಿನಾಂಕ 19.06.1996, 05.07.1996 ಹಾಗೂ 12.07.1996ರ ಉಪ ಸಮಿತಿಯ ಸಭೆಗಳಲ್ಲಿ ಮೆ: ಆರ್ಥರ್ ಆಂಡರ್ ಸನ್ ಸಂಸ್ಥೆಯನ್ನು ಕಾನೂನು ಸಲಹೆಗಾರರನ್ನಾಗಿ ನೇಮಿಸುವ ಪ್ರಸ್ತಾವನೆಯನ್ನು ಪರಿಗಣಿಸಲಾಯಿತು. ದಿನಾಂಕ 20.07.1996 ರಂದು ನಡೆಸಲಾದ ಸಮಿತಿಯ ಸಭೆಯಲ್ಲಿ ಮೆ: ಆರ್ಥರ್ ಆಂಡರ್ ಸನ್ ಸಂಸ್ಥೆ ನೀಡುವ ಶಿಫಾರಸ್ಸುಗಳನ್ನು ಅಂಗೀಕರಿಸುವ ಬಗ್ಗೆ ನಿರ್ಧಾರ ಕೈಗೊಳ್ಳಲಾಯಿತು. ದಿನಾಂಕ 27.07.1996 ರಂದು ಕರಡು ಕ್ರಿಯಾ ಒಪ್ಪಂದವನ್ನು ಈ ಸಂಸ್ಥೆಗೆ ವಿಶ್ಲೇಷಣೆ ಹಾಗೂ ಅಭಿಪ್ರಾಯಕ್ಕಾಗಿ ಸಲ್ಲಿಸಲಾಯಿತು. ದಿನಾಂಕ 09.09.1996 ರಂದು ನಡೆಸಲಾದ ಪ್ರಸ್ತಾವಿತ ಸಮಿತಿಯ ಸಭೆಯಲ್ಲಿ ಸರ್ಕಾರದ ಕಾರ್ಯದರ್ಶಿ (ಯೋಜನೆ) ಇವರ ನೇತೃತ್ವದಲ್ಲಿ ಉಪ ಕಾರ್ಯದರ್ಶಿ, ಆರ್ಥಿಕ ಇಲಾಖೆ, ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, ಡಿ.ಜಿ.ಎಂ., ಕೆ.ಎಸ್.ಎಸ್.ಐ.ಡಿ.ಸಿ. ಈ ಅಧಿಕಾರಿಗಳು ಮುಂಬರುವ 5 ದಿನಗಳಲ್ಲಿ ಮೆ: ಆರ್ಥರ್ ಆಂಡರ್ ಸನ್ ಸಂಸ್ಥೆಯ ಪ್ರತಿನಿಧಿಗಳ ಉಪಸ್ಥಿತಿಯಲ್ಲಿ ಖಾಸಗಿ ಪಾಲುದಾರರೊಡನೆ ಕರಡು ಕ್ರಿಯಾ ಒಪ್ಪಂದದ ಬಗ್ಗೆ ಚರ್ಚೆ ಕೈಗೊಂಡು ಪರಿಷ್ಕೃತ ಕರಡನ್ನು ಪರಿಗಣನೆಗೆ ಪ್ರಮುಖ ಅಧಿಕಾರಿಗಳ ಸಮಿತಿಗೆ ಸಲ್ಲಿಸುವಂತೆ ನಿರ್ದೇಶಿಸಲಾಯಿತು.

ಈ ದಾಖಲಾತಿಯ ಅನುಗುಣವಾಗಿ ಕಲ್ಯಾಣಿ ಸಮೂಹ ಸಂಸ್ಥೆ, ಸ್ಯಾಬ್ ಇಂಜಿನೀಯರಿಂಗ್ ಹಾಗೂ ವಿ.ಹೆಚ್.ಬಿ. ಸಂಸ್ಥೆಗಳು ಕರ್ನಾಟಕ ಸರ್ಕಾರದ ಸಹಮತಿ ಹಾಗೂ ಒಪ್ಪಿಗೆಯೊಡನೆ ಮೂಲಭೂತ ಸೌಕರ್ಯ ಯೋಜನೆಯನ್ನು ಒಪ್ಪಂದದಲ್ಲಿ ಪ್ರತಿಪಾದಿಸಿರುವಂತೆ ಸಂಪೂರ್ಣವಾಗಿ ನೈಸೆಲ್ ಸಂಸ್ಥೆಗೆ ಹಸ್ತಾಂತರಿಸಲಾಗಿದೆ ಎಂದು ಉಲ್ಲೇಖಿಸಲಾಗಿತ್ತು. ಪ್ರಸ್ತಾವಿತ ಒಪ್ಪಂದದ ಅನುಷ್ಠಾನ, ವ್ಯಾಖ್ಯಾನ, ಇತ್ಯಾದಿ ಅಂಶಗಳನ್ನು ಭಾರತ ದೇಶದ ಕಾನೂನು ವ್ಯಾಪ್ತಿಯಡಿಯಲ್ಲಿ ನಿರ್ವಹಿಸುವ ಬಗ್ಗೆ ಪ್ರತಿಪಾದಿಸಲಾಯಿತು. ದಿನಾಂಕ 08.10.1996ರಂದು ಕಾನೂನು ಸಲಹೆಗಾರರು ವರದಿಯನ್ನು ಸಲ್ಲಿಸಿದರು. ವಿದೇಶಿ ಸಮುಚ್ಛಯ ಸಂಸ್ಥೆಯ ಪರವಾಗಿ ಇರುವ [illegible] ಒಪ್ಪಂದದ ಕರಡು ಎಂಬ

ಅಭಿಪ್ರಾಯವನ್ನು ಕಾನೂನು ಸಲಹೆಗಾರರು ನೀಡಿರುತ್ತಾರೆ. ದಿನಾಂಕ 14.11.1996ರಂದು ಮೆ: ಭಾರತ್ ಫೋರ್ಜ್ ಲಿಮಿಟೆಡ್ ಅವರು ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ಇವರಿಗೆ ಹಾಗೂ ಜಿಲ್ಲಾಧಿಕಾರಿಗಳಿಗೆ ಅವಶ್ಯಕ ಜಮೀನಿನ ಮಾಹಿತಿಯನ್ನು ಒದಗಿಸಿರುವುದಾಗಿ ಸ್ಪಷ್ಟೀಕರಿಸಿದರು. ದಿನಾಂಕ 26.11.1996 ರಂದು ಇದೇ ಸಂಸ್ಥೆ ಅವಶ್ಯಕವಿರುವ ಸರ್ಕಾರಿ ಜಮೀನಿಗೆ ಅನ್ವಯಿಸುವಂತೆ ವಿವರಗಳನ್ನು ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆಗೆ ಸಲ್ಲಿಸಿದರು. ದಿನಾಂಕ 07.12.1996ರಂದು ಮಾನ್ಯ ಲೋಕೋಪಯೋಗಿ ಸಚಿವರ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟದ ಉಪ ಸಮಿತಿಯನ್ನು ರಚಿಸಲಾಯಿತು. ದಿನಾಂಕ 21.12.1996ರಂದು Bharath Forge Limited ಸಂಸ್ಥೆ ಕ್ರಿಯಾ ಒಪ್ಪಂದಕ್ಕೆ ನೈಸೆಲ್ ಸಂಸ್ಥೆ ಸಹಿ ಮಾಡುವ ಬಗ್ಗೆ ಸಹಮತಿಯನ್ನು ಕೋರಿತು.

ಆರ್ಥಿಕ ಇಲಾಖೆಯು ಕರಡು ಒಪ್ಪಂದಕ್ಕೆ ಹಲವಾರು ಬದಲಾವಣೆಗಳನ್ನು ಸೂಚಿಸಿ ನೈಸೆಲ್ ಕಂಪನಿ ಜೊತೆ ಒಪ್ಪಂದ ಮಾಡಿಕೊಳ್ಳುವುದರ ಬಗ್ಗೆ ಅಭಿಪ್ರಾಯವನ್ನು ನೀಡಿರುತ್ತದೆ. ಇದೇ ಸಮಯದಲ್ಲಿ ಸಚಿವ ಸಂಪುಟದ ಉಪ ಸಮಿತಿಯು ನಾಲ್ಕಾರು ಬಾರಿ ಸಭೆಯನ್ನು ನಡೆಸಿ ವಿದೇಶಿ ಸಮುಚ್ಛಯ ಮಂಡಿಸಿದ್ದ ಕರಡು ಒಪ್ಪಂದದ ಕರಾರುಗಳ ಬಗ್ಗೆ ಅವಲೋಕಿಸಿ ಸೂಕ್ತ ಮಾರ್ಪಾಟುಗಳನ್ನು ಮಾಡಿ ಅಂತಿಮವಾಗಿಕರಡು ಕರಾರು ಒಪ್ಪಂದವನ್ನು ತಯಾರಿಸಿ ಅದನ್ನು ಮತ್ತೊಮ್ಮೆ ಆರ್ಥರ್ ಆಂಡರ್‌ಸನ್ ವಕೀಲರಿಂದ ಅನುಮೋದನೆ ಪಡೆದುಕೊಂಡು ಸಚಿವ ಸಂಪುಟದ ಅನುಮೋದನೆಗೆ ಮಂಡಿಸಬೇಕೆಂದು ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿಯವರಿಗೆ ಸೂಚನೆಯನ್ನು ನೀಡಿರುತ್ತದೆ. ಸಚಿವ ಸಂಪುಟದ ಉಪ ಸಮಿತಿ ಸೂಚಿಸಿದ ಬದಲಾವಣೆಗಳನ್ನು ರೂಪಿಸಿ ಲೋಕೋಪಯೋಗಿ ಇಲಾಖೆ ಅಂತಿಮ ಕರಡು ಒಪ್ಪಂದವನ್ನು ತಯಾರಿಸಿ ಸಚಿವ ಸಂಪುಟದ ಅನುಮೋದನೆಗಾಗಿ ಮಂಡಿಸಿತು. ದಿನಾಂಕ 17.03.1997ರಲ್ಲಿ ಸಚಿವ ಸಂಪುಟವು ಅಂತಿಮ ಕರಡು ಒಪ್ಪಂದಕ್ಕೆ ಅನುಮೋದನೆ ನೀಡಿದ್ದು, ವಿದೇಶಿ ಸಮುಚ್ಛಯ ಸಂಸ್ಥೆಗಳನ್ನೇ ಒಳಗೊಂಡು ಸ್ಥಾಪನೆಯಾಗಿರುವ ನೈಸೆಲ್ ಕಂಪನಿ ಜೊತೆಯಲ್ಲಿ ಒಪ್ಪಂದವನ್ನು ಮಾಡಿಕೊಳ್ಳುವಂತೆ ಸಚಿವ ಸಂಪುಟವು ಅನುಮೋದನೆ ನೀಡಿದೆ. ಸಚಿವ ಸಂಪುಟದ ತೀರ್ಮಾನದಂತೆ ದಿನಾಂಕ 27.03.1997ರಂದು ಆದೇಶವನ್ನು ಹೊರಡಿಸಲಾಗಿದ್ದು, ಅದರಂತೆ ರಾಜ್ಯ ಸರ್ಕಾರದ ಪರವಾಗಿ ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿಗಳು ನೈಸೆಲ್ ಸಂಸ್ಥೆಯೊಡನೆ ಒಪ್ಪಂದವನ್ನು ಮಾಡಿಕೊಳ್ಳುವಂತೆ ಆದೇಶ ಹೊರಡಿಸಲಾಗಿದೆ. ಇದರ ಪ್ರಕಾರ ದಿನಾಂಕ 03.04.1997ರಂದು ಕ್ರಿಯಾ ಒಪ್ಪಂದವನ್ನು ಕರ್ನಾಟಕ ಸರ್ಕಾರವು ನೈಸೆಲ್ ಕಂಪನಿ ಜೊತೆಗೆ ಮಾಡಿಕೊಂಡು ಯೋಜನೆಯನ್ನು ಜಾರಿಗೊಳಿಸುವ ಸಲುವಾಗಿ 13,237 ಎಕರೆ ಖಾಸಗಿ ಜಮೀನು, 6956 ಎಕರೆ ಸರ್ಕಾರಿ ಜಮೀನು ಸೇರಿದಂತೆ ಒಟ್ಟು 20193 ಎಕರೆ ಜಮೀನನ್ನು ನೈಸೆಲ್ ಕಂಪನಿಗೆ ಹಸ್ತಾಂತರಿಸಲು ಸರ್ಕಾರ ಒಪ್ಪಿಕೊಂಡಿತು. ಈ 20193 ಎಕರೆ ಜಮೀನಿನಲ್ಲಿ ಕ್ರಿಯಾ ಒಪ್ಪಂದದ ಅನುಗುಣವಾಗಿ 6999 ಎಕರೆ ಜಮೀನನ್ನು ರಸ್ತೆ ನಿರ್ಮಿಸಲು ಮತ್ತು 13194 ಎಕರೆ ಜಮೀನನ್ನು 5 ಉಪನಗರಗಳನ್ನು ನಿರ್ಮಿಸಲು ಬಳಸಿಕೊಳ್ಳಬೇಕಾಗುವುದು.

ಸಂಕ್ಷಿಪ್ತವಾಗಿ ಈ ಯೋಜನೆಯ ಅಡಿಯಲ್ಲಿ ಬೆಂಗಳೂರು ಹಾಗೂ ಮೈಸೂರಿನ ನಡುವೆ 111 ಕಿ.ಮೀ. ಉದ್ದದ 4 ಪಥದ ವೇಗದ ಹೆದ್ದಾರಿಯನ್ನು ನಿರ್ಮಿಸಲು ಪ್ರತಿಪಾದಿಸಿದ್ದು, ಈ ಹೆದ್ದಾರಿಯನ್ನು 6 ಪಥಕ್ಕೆ ವಿಸ್ತರಿಸುವ ಅವಕಾಶವನ್ನು ಕಲ್ಪಿಸುವ ಬಗ್ಗೆ ಪ್ರತಿಪಾದಿಸಲಾಗಿದೆ. ಇದಕ್ಕೆ ಪೂರಕವಾಗಿ

ಬೆಂಗಳೂರಿನ ವಾಹನ ದಟ್ಟಣೆಯನ್ನು ಚದುರಿಸಲು ಬೆಂಗಳೂರು - ಹೊಸೂರು ರಾಷ್ಟ್ರೀಯ ಹೆದ್ದಾರಿ (ಎನ್.ಹೆಚ್.-7), ಬೆಂಗಳೂರು - ಪುಣೆ ರಾಷ್ಟ್ರೀಯ ಹೆದ್ದಾರಿ (ಎನ್.ಹೆಚ್.-4) ಹಾಗೂ ಬೆಂಗಳೂರು - ಮಂಗಳೂರು ರಾಷ್ಟ್ರೀಯ ಹೆದ್ದಾರಿ (ಎನ್.ಹೆಚ್.-48) ಈ ಪಥಗಳ ನಡುವೆ ಪೆರಿಫರೆಲ್ ರಸ್ತೆ ಮುಖಾಂತರ ಸಂಪರ್ಕವನ್ನು ಕಲ್ಪಿಸಲು ಉದ್ದೇಶಿಸಲಾಗಿತ್ತು.

ಬೆಂಗಳೂರು ನಗರದ ಕೇಂದ್ರ ವಲಯಕ್ಕೆ ಸುಲಲಿತವಾಗಿ ಸಂಪರ್ಕ ಸಾಧಿಸಲು ಒಂದು ಪ್ರತ್ಯೇಕ ಉನ್ನತ ಮಟ್ಟದ ರಸ್ತೆಯನ್ನು ನಿರ್ಮಿಸಲು ಉದ್ದೇಶಿಸಲಾಗಿದೆ. ಮೈಸೂರಿನ ಬಳಿ ಸಂಪರ್ಕ ರಸ್ತೆಯನ್ನು ಮೈಸೂರು ನಗರಕ್ಕೆ ಕಲ್ಪಿಸಲು ಉದ್ದೇಶಿಸಲಾಗಿದೆ. ಈ ಎಲ್ಲಾ ರಸ್ತೆಯ ಪಥಗಳು ವೇಗದ ಹೆದ್ದಾರಿಗಳಾಗಿದ್ದು, ಬೇರೆ ಯಾವುದೇ ರಸ್ತೆಗಳಿಂದ ಈ ಪಥಕ್ಕೆ ಅಡಚಣೆಯುಂಟಾಗದಂತೆ (Grade Separator) ವಿನ್ಯಾಸಿಸಲು ಉದ್ದೇಶಿಸಲಾಗಿದೆ. ಬೇರೆ ರಸ್ತೆಗಳು ವೇಗದ ಹೆದ್ದಾರಿಯ ಮೇಲ್ಮಟ್ಟದಲ್ಲಿ ಅಥವಾ ಕೆಳಮಟ್ಟದಲ್ಲಿ ಹಾದು ಹೋಗುವ ಪ್ರಸ್ತಾವನೆ ಇದೆ. ವೇಗದ ಹೆದ್ದಾರಿಯ ಪಥದಲ್ಲಿ 7 ನಗರ ಸಮುಚ್ಛಯಗಳ ನಿರ್ಮಾಣದ ಬಗ್ಗೆ ಪ್ರತಿಪಾದಿಸಲಾಗಿದೆ. ಈ ನಗರ ಸಮುಚ್ಛಯಗಳನ್ನು ಕಾರ್ಪೋರೇಟ್ ಕೇಂದ್ರ, ವಾಣಿಜ್ಯ ಕೇಂದ್ರ, ಕೈಗಾರಿಕಾ ಕೇಂದ್ರ, ತೋಟಗಾರಿಕೆ ಹಾಗೂ ಮಾರುಕಟ್ಟೆ ಕೇಂದ್ರ, ಪಾರಂಪರಿಕ ಕೇಂದ್ರ, ಕೃಷಿ ಕೇಂದ್ರ ಹಾಗೂ ಪರಿಸರ ಪ್ರವಾಸಿ ಕೇಂದ್ರ ಎಂದು ವರ್ಗೀಕರಿಸಲಾಗಿದೆ. ಈ ನಗರಗಳಲ್ಲಿ ಕುಡಿಯುವ ನೀರು ಹಾಗೂ ಸ್ವಂತ ಮೂಲಗಳಿಂದ ವಿದ್ಯುಚ್ಛಕ್ತಿ ಉತ್ಪಾದಿಸುವ ಸೌಲಭ್ಯವನ್ನು ಕಲ್ಪಿಸುವ ಬಗ್ಗೆ ಯೋಜನಾ ವರದಿಯಲ್ಲಿ ಪ್ರತಿಪಾದಿಸಲಾಗಿದೆ. ಉತ್ಪಾದನೆಯಾಗಿರುವ ಕೊಳಚೆ ನೀರನ್ನು ಸಂಸ್ಕರಿಸಿ ಮರುಬಳಕೆ ಮಾಡುವ ಪ್ರಸ್ತಾವನೆ ಇದೆ. ಕುಡಿಯುವ ಉದ್ದೇಶಕ್ಕಾಗಿ ಕಾವೇರಿ ನೀರನ್ನು ಬಳಸುವ ಪ್ರಸ್ತಾವನೆ ಇದ್ದು, ಅದನ್ನು ರದ್ದುಗೊಳಿಸಲಾಗಿದೆ. ಮೂಲಭೂತವಾಗಿ ಈ ನಗರ ಸಮುಚ್ಛಯಗಳನ್ನು ಬೆಂಗಳೂರಿನ ಜನಸಂಖ್ಯೆಯ ಸಾಂಧ್ರತೆಯನ್ನು ವಿತರಿಸುವ ಉದ್ದೇಶದಿಂದ ಸೃಜಿಸುವ ಹಿನ್ನೆಲೆಯಲ್ಲಿ ಕುಡಿಯುವ ನೀರಿಗೆ ಸಂದಿಗ್ಧತೆ ಉಂಟಾಗುವುದಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಲಾಗಿದೆ. ಆರ್ಥಿಕ ಇಲಾಖೆಯು ಈ ಪ್ರಸ್ತಾವನೆಯನ್ನು ಪರಿಗಣಿಸಿ ಹೂಡಿಕೆ ಮೇಲಿನ ಪ್ರತಿಫಲ ಹಾಗೂ ಇತರೆ ಆರ್ಥಿಕ ಆಯಾಮಗಳ ಹಿನ್ನೆಲೆಯಲ್ಲಿ 5 ನಗರ ಸಮುಚ್ಛಯಗಳನ್ನು ನಿರ್ಮಿಸಲು ಅನುಮೋದನೆ ನೀಡಿದೆ. ಅಂತಿಮವಾಗಿ ಅನುಮೋದಿತ ಕ್ರಿಯಾ ಯೋಜನೆಯ ಅನುಗುಣವಾಗಿ ನಗರ ಸಮುಚ್ಛಯಗಳ ವಿವರಗಳು ಕೆಳಕಂಡಂತಿದೆ:

1. ಬಿಡದಿಯ ಬಳಿ ಕಾರ್ಪೋರೇಟ್ ಕೇಂದ್ರ.
2. ಬಿಡದಿಯ ಬಳಿ ವಾಣಿಜ್ಯ ಕೇಂದ್ರ
3. ರಾಮನಗರದ ಬಳಿ ಕೈಗಾರಿಕಾ ಕೇಂದ್ರ
4. ರಾಮನಗರದ ಬಳಿ ಪಾರಂಪರಿಕ ಕೇಂದ್ರ
5. ಶ್ರೀರಂಗಪಟ್ಟಣದ ಬಳಿ ಪರಿಸರ ಪ್ರವಾಸಿ ಕೇಂದ್ರ

ದಿನಾಂಕ 03.04.1997ರ ಒಪ್ಪಂದದ ನಂತರ ಹಾಗೂ ಸೋಮಶೇಖರರೆಡ್ಡಿ ಪ್ರಕರಣದ ನ್ಯಾಯಾಲಯದ ಆದೇಶದ ನಂತರ ಬಿ.ಎಂ.ಐ.ಸಿ. ಯೋಜನೆಯನ್ನು ಅದರಲ್ಲೂ 162 ಕಿ.ಮೀ ರಸ್ತೆಯನ್ನು 3 ಭಾಗಗಳನ್ನಾಗಿ ನೈಸಲ್ ಕಂಪನಿಯ ಕೋರಿಕೆಯ ಮೇಲೆ ವಿಭಜಿಸಲಾಗಿದೆ. ಅದನ್ನು ಸೆಕ್ಷನ್-ಎ, ಸೆಕ್ಷನ್-ಬಿ ಮತ್ತು ಸೆಕ್ಷನ್-ಸಿ ಎಂದು ವರ್ಗೀಕರಿಸಲಾಗಿದೆ.

*ನೈಸೆಲ್ ಸಂಸ್ಥೆಯು 29.03.2004 ರಂದು ಫೈನಾನ್ಷಿಯಲ್ ಕ್ಲೋಷರ್ ಸಾಧಿಸಿದ್ದು, (ಫೈನಾನ್ಷಿಯಲ್ ಕ್ಲೋಷರ್ ದಾಖಲಾತಿ ಅಂದರೆ, ಹಣಕಾಸು ಸಂಸ್ಥೆಗಳಿಂದ ಬಂಡವಾಳ ಹೂಡಿಕೆಗೆ ಸಾಲ ಪಡೆಯಲು ಸಲ್ಲಿಸಿರುವ ಖಾತ್ರಿಗಳು, ಸಂಸ್ಕರಣೆಯ ವಿವರಗಳು, ಮೌಲ್ಯಮಾಪನ ಹಾಗೂ ಮಂಜೂರಾತಿ ವಿವರಗಳನ್ನೊಳಗೊಂಡ ಸಮಗ್ರ ವರದಿ) ಈ ದಿನಾಂಕದಿಂದ ಅನ್ವಯವಾಗುವಂತೆ ಗುರಿಗಳನ್ನು ನಿಗದಿಗೊಳಿಸಲಾಗಿದೆ. ಅಂದರೆ, ಯೋಜನೆಯ ಅನುಷ್ಠಾನಕ್ಕೆ ಅವಶ್ಯಕವಿರುವ ಬಂಡವಾಳ ಸ್ವರೂಪದ ಹೂಡಿಕೆಯ ಮೊತ್ತವನ್ನು ಪ್ರಥಮ ಸ್ತರದಲ್ಲಿ ಸಾಲದ ಮುಖಾಂತರ ಪಡೆಯಲು ಆರ್ಥಿಕ ಸಂಸ್ಥೆಗಳು 29.03.2004 ರಂದು ನೈಸೆಲ್ ಒಡನೆ ಒಪ್ಪಂದವನ್ನು ಜಾರಿಗೊಳಿಸಿರುತ್ತದೆ.*

ಸೆಕ್ಷನ್- ಎ ಎಂದರೆ:

ಮೂಲ ಕ್ರಿಯಾ ಒಪ್ಪಂದದ ಫೇಸ್-1 ಮತ್ತು ಫೇಸ್-2 ಅಂದರೆ 9.8 ಕಿ.ಮೀ. ಲಿಂಕ್ ರಸ್ತೆ, 41 ಕಿ.ಮೀ. ಪೆರಿಫೆರಲ್ ರಸ್ತೆ ಹಾಗೂ 13 ಕಿ.ಮೀ. ವೇಗದ ಹೆದ್ದಾರಿ.

ಸೆಕ್ಷನ್ 'ಎ' ಕಾಮಗಾರಿಗಳನ್ನು ಫೈನಾನ್ಷಿಯಲ್ ಕ್ಲೋಷರ್ ಸಾಧಿಸಿದ 8 ವರ್ಷಗಳ ಅವಧಿಯೊಳಗೆ ಸಂಪೂರ್ಣಗೊಳಿಸಬೇಕಾಗಿತ್ತು. ಅಂದರೆ, ದಿನಾಂಕ 28.03.2012 ರೊಳಗಾಗಿ ಈ ಕಾಮಗಾರಿಗಳನ್ನು ಸಂಪೂರ್ಣಗೊಳಿಸಬೇಕಾಗಿತ್ತು.

ಸೆಕ್ಷನ್ –ಬಿ ಎಂದರೆ:

24 ಕಿ.ಮೀ.ಗಳ ವೇಗದ ಹೆದ್ದಾರಿ ಬಿಡದಿಯಿಂದ (ಕಿ.ಮೀ. 12) ಯಿಂದ ಚನ್ನಪಟ್ಟಣ (ಕಿ.ಮೀ. 36)

ಈ ಸ್ತರವನ್ನು ಫೈನಾನ್ಷಿಯಲ್ ಕ್ಲೋಷರ್ ಸಾಧಿಸಿದ 10 ವರ್ಷದ ಒಳಗೆ ಅಂದರೆ, ದಿನಾಂಕ 28.03.2014ರೊಳಗೆ ಸಂಪೂರ್ಣಗೊಳಿಸಬೇಕಾಗಿತ್ತು.

ಸೆಕ್ಷನ್ –ಸಿ ಎಂದರೆ:

75 ಕಿ.ಮೀ.ಗಳ ವೇಗದ ಹೆದ್ದಾರಿ– ಚನ್ನಪಟ್ಟಣ 36 ಕಿ.ಮೀ.ಗಳಿಂದ ಮೈಸೂರು 111 ಕಿ.ಮೀ.ವರೆಗೆ. ಮೈಸೂರು ಬದಿಯ 3.1 ಕಿ.ಮೀ. ಲಿಂಕ್ ರಸ್ತೆ ಹಾಗೂ ಲಿಂಕ್ ರಸ್ತೆಯ ಮೇಲ್ಸೇತುವೆ ಭಾಗ.

ಪ್ರಸಕ್ತ ಸಂದರ್ಭದಲ್ಲಿ ನೈಸೆಲ್ ಮತ್ತು ನೀಸೆಲ್ ಕಂಪನಿ ಸೆಕ್ಷನ್ 'ಎ' ಭಾಗದ ರಸ್ತೆಯನ್ನು ಮಾತ್ರ ನಿರ್ಮಾಣ ಮಾಡುತ್ತಿದೆ ಮತ್ತು ಈ ಭಾಗದಲ್ಲಿ ಯೋಜನೆಯನ್ನು ಅನುಷ್ಠಾನ ಮಾಡುವಾಗ ಅನೇಕ ವ್ಯತ್ಯಾಸಗಳು ಇರುವುದಾಗಿ ಆರೋಪಗಳನ್ನು ವಿಧಾನಮಂಡಲದಲ್ಲಿ ಮಾಡಲಾಗಿತ್ತು.

ಪ್ರಸ್ತಾವಿತ 162 ಕಿ.ಮೀ. ಸಿಮೆಂಟ್ ರಸ್ತೆಯನ್ನು ಫೈನಾನ್ಷಿಯಲ್ ಕ್ಲೋಷರ್ ಸಾಧಿಸಿದ 10 ವರ್ಷದ ಒಳಗಾಗಿ ಸಂಪೂರ್ಣಗೊಳಿಸಬೇಕಾಗಿತ್ತು. ನೈಸೆಲ್ ಮತ್ತು ನೀಸೆಲ್ ಕಂಪನಿಯು ದಿನಾಂಕ 29.03.2004ರಂದು ಫೈನಾನ್ಷಿಯಲ್ ಕ್ಲೋಷರ್ ಪಡೆದುಕೊಂಡಿರುತ್ತದೆ, ಅಂದರೆ, ದಿನಾಂಕ 28.03.2014ರ ಒಳಗಾಗಿ ಸೆಕ್ಷನ್–ಎ, ಸೆಕ್ಷನ್–ಬಿ ಮತ್ತು ಸೆಕ್ಷನ್–ಸಿ ನಲ್ಲಿ ಬರುವ ಎಲ್ಲಾ 162 ಕಿ.ಮೀ. ಸಿಮೆಂಟ್ ರಸ್ತೆಯನ್ನು ಸಂಪೂರ್ಣಗೊಳಿಸಬೇಕಾಗಿತ್ತು.

ನಗರ ಸಮುಚ್ಚಯಗಳನ್ನು ಸಂಪೂರ್ಣಗೊಳಿಸಲು 12 ವರ್ಷಗಳ ಅವಧಿಯನ್ನು ನೀಡಿದ್ದು ಸೋಮಶೇಖರರೆಡ್ಡಿ ಪ್ರಕರಣದಲ್ಲುಚ್ಚ ನ್ಯಾಯಾಲಯದ ನಿರ್ದೇಶನಗಳ ಅನುಗುಣವಾಗಿ

162 ಕಿ.ಮೀ. ಟೋಲ್ ರಸ್ತೆ ಸಂಪೂರ್ಣಗೊಂಡ ನಂತರ ನಗರ ಸಮುಚ್ಛಯಗಳನ್ನು ನಿರ್ಮಿಸಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ, ನಗರ ಸಮುಚ್ಛಯಗಳನ್ನು 2026ರ ಒಳಗಾಗಿ ನೈಸಲ್ ಸಂಸ್ಥೆ ಸಂಪೂರ್ಣಗೊಳಿಸಬೇಕಾಗುತ್ತದೆ.

***ವಾಸ್ತವಿಕವಾಗಿ 2016ರ ಅಂತ್ಯಕ್ಕೆ ಸಾಧಿಸಲಾದ ಭೌತಿಕ ಪ್ರಗತಿಯ ವಿವರಗಳು ಕೆಳಕಂಡಂತಿದೆ:***

**ಬೆಂಗಳೂರಿನಲ್ಲಿ 41 ಕಿ.ಮೀ. ಗಳ ಪೆರಿಫೆರಲ್ ರಸ್ತೆ, 8 ಕಿ.ಮೀ. ಲಿಂಕ್ ರಸ್ತೆ ಹಾಗೂ 5 ಕಿ.ಮಿ. ವೇಗದ ಹೆದ್ದಾರಿಯನ್ನು ಸೆಕ್ಷನ್ 'ಎ' ಅಡಿಯಲ್ಲಿ ಭೌತಿಕವಾಗಿ ಸಂಪೂರ್ಣಗೊಳಿಸಲಾಗಿದೆ. ಈ ಪೈಕಿ ಸುಮಾರು8 ಕಿ.ಮೀ. ಲಿಂಕ್ ರಸ್ತೆ ಹಾಗೂ 5 ಕಿ.ಮೀ. ಪೆರಿಫೆರಲ್ ರಸ್ತೆಯನ್ನು ಸಿಮೆಂಟ್‌ನಿಂದ ನಿರ್ಮಿಸಿದ್ದು,ಉಳಿದ ಭಾಗದ ಪೆರಿಫೆರಲ್ ರಸ್ತೆಯನ್ನು ಡಾಂಬರೀಕೃತ ರಸ್ತೆಯನ್ನಾಗಿ ನಿರ್ಮಿಸಲಾಗಿದೆ. 13 ಕಿ.ಮೀ. ವೇಗದ ಹೆದ್ದಾರಿಯ ಪೈಕಿ5 ಕಿ.ಮೀ. ವೇಗದ ಹೆದ್ದಾರಿ ಸಾರ್ವಜನಿಕರು ಉಪಯೋಗಿಸುವ ಸ್ಥಿತಿಯಲ್ಲಿರುವುದಿಲ್ಲ.**

ನೈಸೆಲ್/ನೀಸೆಲ್ ಸಂಸ್ಥೆಯು ಸಾಧಿಸಬೇಕಾದ ಭೌತಿಕ ಪ್ರಗತಿಯ ಗುರಿಗಳನ್ನು ಕ್ರಿಯಾ ಒಪ್ಪಂದದ ಅನುಚ್ಛೇದ 6.6.3ರಲ್ಲಿ ಪ್ರತಿಪಾದಿಸಲಾಗಿದೆ. ಆದರೆ, ಸೆಕ್ಷನ್-ಎ ಭಾಗಕ್ಕೆ ಸಂಬಂಧಿಸಿದಂತೆ ನೈಸೆಲ್ ಹಾಗೂ ನೀಸೆಲ್ ಸಂಸ್ಥೆಯು ದಿನಾಂಕ 06.08.2002ರಂದು ಸರ್ಕಾರದ ಜೊತೆ ಮಾಡಿಕೊಂಡಿರುವ ತ್ರಿಪಕ್ಷೀಯ ಒಪ್ಪಂದದ ಅನುಗುಣವಾಗಿ ದಿನಾಂಕ 29.03.2012ರ ಒಳಗಾಗಿ ನಗರ ಸಮುಚ್ಛಯ-1 ಅನ್ನು ಒಳಗೊಂಡಂತೆ ಸೆಕ್ಷನ್- ಎ ಭಾಗದ ಸುಮಾರು 64 ಕಿ.ಮೀ. ಸಿಮೆಂಟ್ ರಸ್ತೆಯನ್ನು ಸಂಪೂರ್ಣಗೊಳಿಸಬೇಕಾಗಿರುತ್ತದೆ.

ಯೋಜನಾ ಅನುಷ್ಠಾನಕ್ಕೆ ಸರ್ವೋಚ್ಛ ನ್ಯಾಯಾಲಯವು ದೃಢೀಕರಿಸಿರುವ ಕ್ರಿಯಾ ಒಪ್ಪಂದದ ಅನುಗುಣವಾಗಿ 20,193 ಎಕರೆಗಳ ಜಮೀನಿನ ಅವಶ್ಯಕತೆಯಿದ್ದು, ಈ ಪೈಕಿ 6,956 ಎಕರೆಗಳು ಸರ್ಕಾರಿ ಜಮೀನಾಗಿರುತ್ತದೆ. ಉಳಿದ 13,237 ಎಕರೆಗಳು ಖಾಸಗಿ ಜಮೀನಾಗಿರುತ್ತದೆ. ಕ್ರಿಯಾ ಒಪ್ಪಂದದ ಅನುಗುಣವಾಗಿ ಟೋಲ್ ರಸ್ತೆ ನಿರ್ಮಾಣಕ್ಕೆ ಎಕ್ಸ್‌ಪ್ರೆಸ್‌ವೇ ಒಳಗೊಂಡಂತೆ 6,999 ಎಕರೆಗಳ ಜಮೀನಿನ ಅವಶ್ಯಕತೆ ಇರುತ್ತದೆ. 5 ಉಪನಗರ ಸಮುಚ್ಛಯ ನಿರ್ಮಾಣಕ್ಕೆ 13,194 ಎಕರೆಗಳನ್ನು ನೀಡಬೇಕಾಗಿರುತ್ತದೆ. ಕ್ರಿಯಾ ಒಪ್ಪಂದದ ಷೆಡ್ಯೂಲ್-1ರಲ್ಲಿ ನಮೂದಿಸಿರುವ ಘಟಕಾವಾರು ಹಾಗೂ ಪ್ರವರ್ಗವಾರು ವಿವರಗಳನ್ನು ಕೆಳಕಂಡಂತಿದೆ:

(ಎಕರೆಗಳಲ್ಲಿ)

| ಯೋಜನಾ ಅನುಷ್ಠಾನದ ಘಟಕ | ಸರ್ಕಾರಿ ಜಮೀನು | ಖಾಸಗಿ ಜಮೀನು | ಒಟ್ಟು (ಪ್ರತಿಶತ) |
|---|---|---|---|
| ಟೋಲ್ ರಸ್ತೆ | 1499 | 5500 | 6999(34.66%) |
| ನಗರ ಸಮುಚ್ಛಯಗಳು | | | |
| ಕಾರ್ಪೋರೇಟ್ ಕೇಂದ್ರ | 328 | 2447 | 2775(13.74%) |
| ವಾಣಿಜ್ಯ ಕೇಂದ್ರ | 614 | 1222 | 1636(9.09%) |
| ಕೈಗಾರಿಕಾ ಕೇಂದ್ರ | 684 | 931 | 1615(8%) |
| ಪಾರಂಪರಿಕ ಕೇಂದ್ರ | 2592 | 90 | 2682(13.28%) |
| ಪರಿಸರ ಪ್ರವಾಸ ಕೇಂದ್ರ | 1239 | 3047 | 4286(21.22%) |
| ಒಟ್ಟು | 6956 | 13237 | 20,193 |

1995-96 ರ ದರಗಳಲ್ಲಿ ಅಂದಾಜು ನಿರ್ಮಾಣ ವೆಚ್ಚ ಯೋಜನಾ ತಾಂತ್ರಿಕ ವರದಿಯ ಅನುಗುಣವಾಗಿ ರೂ.1272ಕೋಟಿ ರೂ.ಗಳೆಂದು ಅಂದಾಜಿಸಲಾಗಿದೆ. ಯೋಜನೆಯ ಆರ್ಥಿಕ ಮೌಲ್ಯ ಮಾಪನವನ್ನು ಪ್ರಥಮ ಸ್ತರದಲ್ಲಿ ಕಲ್ಯಾಣಿ ಸಮೂಹ ಸಂಸ್ಥೆಗಳು ಸಲ್ಲಿಸಿದ್ದು, ಈ ವರದಿಯನ್ನು ಆರ್ಥಿಕ ಇಲಾಖೆ ಪರಾಮರ್ಶಿಸಿದೆ. ಸುತ್ತೋಲೆ ದಿನಾಂಕ 07.11.1995 ರ ಮುಖಾಂತರ ಪ್ರಥಮ ಸ್ತರದಲ್ಲಿ 15.2% ಐ.ಆರ್.ಆರ್. ಮತ್ತು 45.12 ಕೋಟಿ ರೂ.ಗಳ ಎನ್.ಪಿ.ವಿ. ಹೊಂದಿದ್ದು, 15908 ಎಕರೆಗಳ ಅವಶ್ಯಕತೆಯಿರುವ ಯೋಜನಾ ಅನುಷ್ಠಾನ ಸಮರ್ಪಕ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಲಾಗಿದೆ. ಆದರೆ ವಾಸ್ತವಿಕವಾಗಿ 17.52% ಐ.ಆರ್. ಆರ್. ಇರುವ ಹಾಗೂ 146.10 ಕೋಟಿ ರೂ.ಗಳ ಎನ್.ಪಿ.ವಿ. ಇರುವ 20,193 ಎಕರೆಗಳ ಅವಶ್ಯಕತೆ ಇರುವ ಪ್ರಸ್ತಾವನೆಯನ್ನು ಅನುಮೋದಿಸಲಾಗಿದೆ. ಈ ಐ.ಆರ್.ಆರ್. ಹಾಗೂ ಎನ್.ಪಿ.ವಿ. ಗಳು ಪ್ರಸಕ್ತ ಸ್ಥಿತಿಯಲ್ಲಿ ಅಪ್ರಸ್ತುತವಾಗಿರುವ ಬಗ್ಗೆ ವರದಿಯಲ್ಲಿ ಚರ್ಚಿಸಲಾಗಿದೆ.

ಈ ಯೋಜನಾ ಕಾಮಗಾರಿಗಳನ್ನು ಸಂಪೂರ್ಣವಾಗಿ ಖಾಸಗಿ ಪಾಲುದಾರರು ತಮ್ಮ ಸ್ವಂತ ಸಂಪನ್ಮೂಲಗಳಿಂದ ನಿರ್ಮಿಸಿ 30 ವರ್ಷಗಳ ಅವಧಿಯಲ್ಲಿ ವೆಚ್ಚ ಹಾಗೂ ಲಾಭಾಂಶವನ್ನು ಟೋಲ್ ಮುಖಾಂತರ ಹಿಂಪಡೆಯುವ ಸೌಲಭ್ಯವನ್ನು ಕಲ್ಪಿಸಲಾಗಿದೆ. ಯೋಜನಾ ವರದಿಯ ಅನುಗುಣವಾಗಿ ಭೂಸ್ವಾಧೀನ ವೆಚ್ಚವನ್ನೂ ಸಹ ಖಾಸಗಿ ಪಾಲುದಾರರು ಭರಿಸಬೇಕಾಗಿದೆ. ಭಾರೀ ಪ್ರಮಾಣದ ಹೂಡಿಕೆಯನ್ನು ಪರಿಗಣಿಸಿ ಕೇವಲ ವೇಗದ ಹೆದ್ದಾರಿಯ ಬದಲು ಸಮಗ್ರ ಮೂಲಭೂತ ಸೌಕರ್ಯ ಯೋಜನೆಯೆಂದು ಯೋಜನೆಯ ರೂಪುರೇಷೆಗಳನ್ನು ಪರಿಷ್ಕರಿಸಿ ವೇಗದ ಹೆದ್ದಾರಿಯ ಪಥದ ಮೇಲೆ ಪ್ರತಿಪಾದಿಸಿದ 5 ನಗರ ಸಮುಚ್ಛಯಗಳನ್ನು ಅಭಿವೃದ್ಧಿಪಡಿಸಲು ನಿರ್ಧರಿಸಲಾಗಿದೆ. ಇದರಂತೆ, ಖಾಸಗಿ ಪಾಲುದಾರರಿಗೆ 5 ನಗರ ಸಮುಚ್ಛಯಗಳಲ್ಲಿ ಅಭಿವೃದ್ಧಿಪಡಿಸಿದ ನಿವೇಶನಗಳ ಮಾರಾಟದಿಂದ ಬರುವ ಆದಾಯ ಮೂಲ ಆದಾಯವಾಗಿರುತ್ತದೆ. ಏಕೆಂದರೆ, ನಗರ ಸಮುಚ್ಛಯಗಳಲ್ಲಿ ಅಭಿವೃದ್ಧಿಪಡಿಸಲಾದ ನಿವೇಶನಗಳನ್ನು ಮಾರಾಟ ಮಾಡುವ ಸೌಲಭ್ಯವನ್ನು ನೀಡಲಾಗಿದೆ. ಅಂದರೆ, ಕ್ರಿಯಾ ಒಪ್ಪಂದದ ಅನುಗುಣವಾಗಿ ಖಾಸಗಿ ಪಾಲುದಾರರಿಗೆ ಟೋಲ್ ಸಂಗ್ರಹಣೆ ಹಾಗೂ ನಗರ ಸಮುಚ್ಛಯಗಳ ನಿವೇಶನದ ಮಾರಾಟದ ಸ್ವೀಕೃತಿ ಅಧಿಕೃತ ಆದಾಯವಾಗಿರುತ್ತದೆ. ಯೋಜನೆಯ ತಾಂತ್ರಿಕ ವರದಿಯಲ್ಲಿ ಈ ಅಂಶಗಳನ್ನು ಪರಿಗಣಿಸಿ ಹೂಡಿಕೆ, ಹೂಡಿಕೆ ಮೇಲಿನ ಪ್ರತಿಫಲ, ಪ್ರತಿಫಲದ ದರ ಹಾಗೂ ಲಾಭಾಂಶವನ್ನು ಇತ್ಯರ್ಥಗೊಳಿಸಲಾಗಿದೆ.

ಯೋಜನಾ ವರದಿ ಹಾಗೂ ಸರ್ಕಾರದ ನಿರ್ಧಾರಗಳ ಅನುಗುಣವಾಗಿ ಈ ಯೋಜನಾ ಅನುಷ್ಠಾನಕ್ಕೆ ಸರ್ಕಾರದ ವತಿಯಿಂದ ಯಾವುದೇ ವೆಚ್ಚವನ್ನು ಭರಿಸುವ ಉದ್ದೇಶವಿರುವುದಿಲ್ಲ. ಯೋಜನಾ ಸಂತ್ರಸ್ತರ ಪ್ರತಿ ಕುಟುಂಬಕ್ಕೂ ಒಂದು ಉದ್ಯೋಗವನ್ನು ಒದಗಿಸುವ ಅಥವಾ ಪರ್ಯಾಯವಾಗಿ ಜಮೀನನ್ನು ಒದಗಿಸುವ, ಸಮರ್ಪಕ ವೆಚ್ಚವನ್ನು ಭರಿಸುವ ಅಥವಾ ಮನೆಯನ್ನು ಆರ್ಥಿಕ ಬೆಂಬಲದ ಮುಖಾಂತರ ನಿರ್ಮಾಣ ಮಾಡುವ ಸೌಲಭ್ಯವನ್ನು ಕಲ್ಪಿಸುವ ಬಗ್ಗೆ ಪ್ರಸ್ತಾಪಿಸಲಾಗಿದೆ.

ಯೋಜನಾ ಅನುಷ್ಠಾನದ ಭೂಸ್ವಾಧೀನದ ಪ್ರಕ್ರಿಯೆಯನ್ನು ನಿರ್ವಹಿಸಲು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ಜವಾಬ್ದಾರಿಯನ್ನು ನೀಡಲಾಗಿದೆ. ಒಂದು ಅಥವಾ ಎರಡು ಭೂಸ್ವಾಧೀನಾಧಿಕಾರಿಗಳನ್ನು ಮತ್ತು ವಿಶೇಷ ಭೂಸ್ವಾಧೀನಾಧಿಕಾರಿಗಳನ್ನು ಸರ್ಕಾರ ನೇಮಕ ಮಾಡಿರುತ್ತದೆ. ಇದಕ್ಕೆ ಪೂರಕವಾಗಿ ಕೆ.ಐ.ಎ.ಡಿ.ಬಿ ಕಾಯ್ದೆ ಹಾಗೂ ಇನ್ನಿತರೆ ಕಾಯ್ದೆಗಳಿಗೆ ಬಿ.ಎಂ.ಐ.ಸಿ.

ಯೋಜನೆಯ ಪೂರಕವಾಗಿ ನಿಯಮಾವಳಿಗಳಿಗೆ ಅವಶ್ಯಕವಿರುವ ತಿದ್ದುಪಡಿ, ಮಾರ್ಪಾಡುಗಳನ್ನೂ ಸಹ ಜಾರಿಗೊಳಿಸಲಾಗಿದೆ.

ಪ್ರಸ್ತಾವಿತ ಸರ್ಕಾರಿ ಆದೇಶದ ಅನುಗುಣವಾಗಿ 5 ನಗರ ಸಮುಚ್ಛಯಗಳನ್ನು ವೇಗದ ಹೆದ್ದಾರಿಯ ನಿರ್ಮಾಣಕ್ಕೆ ಸಮಾನಾಂತರವಾಗಿ ಅಭಿವೃದ್ಧಿಪಡಿಸುವ ಬಗ್ಗೆ ಮತ್ತು 162 ಕಿ.ಮೀ. ರಸ್ತೆಯನ್ನು ನಿರ್ಮಾಣ ಮಾಡುವ ನಿಟ್ಟಿನಲ್ಲಿ ಬಂಡವಾಳ ಹೂಡಿಕೆದಾರರಾದ ನೈಸೆಲ್ ಕಂಪನಿಗೆ ವಿವಿಧ ಇಲಾಖೆಗಳಿಂದ ಪರವಾನಗಿಯನ್ನು ಪಡೆದುಕೊಳ್ಳುವಲ್ಲಿ ಯಾವುದೇ ತೊಂದರೆ ಹಾಗೂ ವಿಳಂಬವಾಗಬಾರದೆಂದು ಕರ್ನಾಟಕ ಸರ್ಕಾರವು ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಸ್ಥಳೀಯ ಯೋಜನಾ ಪ್ರಾಧಿಕಾರವನ್ನು ಸ್ಥಾಪಿಸಿದೆ. ಈ ಪ್ರಾಧಿಕಾರವು ದಿನಾಂಕ 12.02.2004ರಂದು ಸುಮಾರು 701 ಚದರ ಕಿ.ಮೀ. ವ್ಯಾಪ್ತಿಯ ಯೋಜನಾ ಪ್ರದೇಶದ ಓ.ಡಿ.ಪಿ. (**Outline Develepment Plan**) ಯನ್ನು ಅನುಷ್ಠಾನಗೊಳಿಸಲಾಗಿದೆ. ಆದರೆ, ಓ.ಡಿ.ಪಿ. ಯಲ್ಲಿ 20193 ಎಕರೆ ಬಿ.ಎಂ.ಐ.ಸಿ. ಯೋಜನಾ ಪ್ರದೇಶದ ಗಡಿಗಳನ್ನು ಗುರುತಿಸಿರುವುದಿಲ್ಲ ಹಾಗೂ ದಿನಾಂಕ 03.04.1997ರ ಒಪ್ಪಂದದಲ್ಲಿ ಇರುವ ರಸ್ತೆಗಳ ಪಂಕ್ತೀಕರಣವನ್ನು ಈ ಓ.ಡಿ.ಪಿ. ಯಲ್ಲಿ ವ್ಯಾಪಕವಾಗಿ ಮಾರ್ಪಾಡು ಮಾಡಲಾಗಿದೆ.

ಬಿ.ಎಂ.ಐ.ಸಿ ಯೋಜನಾ ಪ್ರಾಧಿಕಾರದ ಓ.ಡಿ.ಪಿ. ಗೆ ಸರ್ಕಾರವು ದಿನಾಂಕ 12.02.2004 ರಂದು ಅನುಮೋದನೆ ನೀಡಿದ್ದು, ಇದರ ಪೂರ್ವದಲ್ಲಿಯೇ ಕೆ.ಐ.ಎ.ಡಿ.ಬಿ. ಯು 1999ರಿಂದ ಓ.ಡಿ.ಪಿ. ಪಂಕ್ತೀಕರಣಕ್ಕೆ ಅನುಗುಣವಾಗಿ ಭೂಸ್ವಾಧೀನ ಜಾರಿಗೊಳಿಸಿರುವುದು ವಿಪರ್ಯಾಸವಾಗಿದೆ. 13237 ಎಕರೆ ಖಾಸಗಿ ಜಮೀನಿನಬದಲಾಗಿ ಕೆ.ಐ.ಎ.ಡಿ.ಬಿ.ಯು 1999ರಿಂದ ನಿಯತಕಾಲಿಕವಾಗಿ ಸುಮಾರು 20942 ಎಕರೆ ಜಮೀನಿಗೆ ಪ್ರಾರಂಭಿಕ ಅಧಿಸೂಚನೆಯನ್ನು ಹೊರಡಿಸಿರುತ್ತದೆ. ಇದರ ಪೈಕಿ ಸುಮಾರು 2278 ಎಕರೆ ಜಮೀನನ್ನು ಅಧಿಸೂಚನೆಯಿಂದ 2004ರಲ್ಲಿ ಕೈಬಿಡಲಾಗಿದೆ. ಅಂದರೆ ಸುಮಾರು 4981 ಎಕರೆ ಖಾಸಗೀ ಜಮೀನಿಗೆ ಹೆಚ್ಚಾಗಿ ಅಧಿಸೂಚನೆಯನ್ನು 28(1) ಕಾಯ್ದೆ ಅಡಿಯಲ್ಲಿ ಹೊರಡಿಸಲಾಗಿದೆ. ಸೆಕ್ಷನ್-ಎ ಭಾಗದ ಪೆರಿಫೆರಲ್ ರಸ್ತೆ ಹಾಗೂ ಲಿಂಕ್ ರಸ್ತೆಗೆ ನೈಸಲ್ ಮತ್ತು ನೀಸಲ್ ಕಂಪನಿಯ ಮನವಿಗಳನ್ನು ಪುರಸ್ಕರಿಸಿ ಕೆ.ಐ.ಎ.ಡಿ.ಬಿ.ಯು ಸುಮಾರು 2645 ಎಕರೆ ಖಾಸಗೀ ಜಮೀನಿಗೆ ಕೆ.ಐ.ಎ.ಡಿ.ಕಾಯ್ದೆ 28(4) ರಂತೆ ಅಧಿಸೂಚನೆಗಳನ್ನು ಹೊರಡಿಸಿ ಜಮೀನುಗಳನ್ನು ವಶಪಡಿಸಿಕೊಳ್ಳಲಾಗಿದೆ. ಇಂತಹ ಅಧಿಸೂಚನೆಗಳನ್ನು ಹೊರಡಿಸುವಾಗ ನೈಸಲ್ ಮತ್ತು ನೀಸಲ್ ಕಂಪನಿಗೆ ಹಸ್ತಾಂತರಿಸಿರುವ ಸರ್ಕಾರಿ ಜಮೀನುಗಳನ್ನು ಗಣನೆಗೆ ತೆಗೆದುಕೊಳ್ಳದೆ ಖಾಸಗಿ ಜಮೀನುಗಳನ್ನು ವಶಪಡಿಸಿಕೊಂಡಿರುವುದು ಕಂಡುಬಂದಿದೆ. ಅನೇಕ ರೈತರು ತಮ್ಮ ಜಮೀನುಗಳನ್ನು ವಶಪಡಿಸಿಕೊಳ್ಳಬಾರದೆಂದು ಉಚ್ಛನ್ಯಾಯಾಲಯದಲ್ಲಿ 2003ರಲ್ಲಿ ಪ್ರಕರಣ ಹೂಡಿರುತ್ತಾರೆ. ಸಾರ್ವಜನಿಕ ಹಿತದೃಷ್ಠಿಯಿಂದ ಈ ಜಮೀನುಗಳು ಅವಶ್ಯವೆಂದು ಉಚ್ಛನ್ಯಾಯಾಲಯ ದಿನಾಂಕ 28.02.2005ರಲ್ಲಿ ರೈತರ ಮನವಿಗಳನ್ನು ತಿರಸ್ಕರಿಸಿದೆ. ಅಲ್ಲದೆ, ಅನೇಕ ರೈತರು ಸರ್ವೋಚ್ಛ ನ್ಯಾಯಾಲಯದ ಮುಂದೆ ಮೇಲ್ಮನವಿಯನ್ನು ಸಲ್ಲಿಸಿ ದಿನಾಂಕ 20.04.2006ರಲ್ಲಿ ಆದೇಶವು ಹೊರಬಂದಿರುತ್ತದೆ. ಮಾಜಿ ಶಾಸಕರುಗಳಾದ ಶ್ರೀ ಜೆ.ಸಿ. ಮಾಧುಸ್ವಾಮಿ ಮತ್ತು ಶ್ರೀ ಜಿ.ವಿ. ಶ್ರೀರಾಮರೆಡ್ಡಿಯವರು ದಿನಾಂಕ 03.04.1997ರ ಒಪ್ಪಂದವನ್ನು ಪ್ರಶ್ನಿಸಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದು, ಉಚ್ಛನ್ಯಾಯಾಲಯ ದಿನಾಂಕ 03.05.2005 ರಂದು ಅರ್ಜಿಯನ್ನು ವಜಾಗೊಳಿಸಿ 50

ಸಾವಿರ ರೂ.ಗಳ ದಂಡವನ್ನು ವಿಧಿಸಿರುತ್ತದೆ. ದಿನಾಂಕ 03.05.2005ರ ಉಚ್ಛ ನ್ಯಾಯಲಯದ ಆದೇಶವನ್ನು ಪ್ರಶ್ನಿಸಿ ರಾಜ್ಯ ಸರ್ಕಾರ,ಶ್ರೀ ಜೆ.ಸಿ. ಮಾಧುಸ್ವಾಮಿ ಮತ್ತು ಶ್ರೀ ಜಿ.ವಿ. ಶ್ರೀರಾಮರೆಡ್ಡಿರವರು ಸರ್ವೋಚ್ಛ ನ್ಯಾಯಾಲಯದ ಮುಂದೆ ಮೇಲ್ಮನವಿಯನ್ನು ಸಲ್ಲಿಸಿದ್ದು,ಸರ್ವೋಚ್ಛ ನ್ಯಾಯಾಲಯ ಈ ಮನವಿಯನ್ನು ತಿರಸ್ಕರಿಸಿ ರಾಜ್ಯ ಸರ್ಕಾರಕ್ಕೆ 5 ಲಕ್ಷ ರೂ.ಗಳ ದಂಡವನ್ನು ವಿಧಿಸಿರುತ್ತದೆ ಮತ್ತು ಶ್ರೀ ಜೆ.ಸಿ. ಮಾಧುಸ್ವಾಮಿ ಮತ್ತು ಶ್ರೀ ಜಿ.ವಿ. ಶ್ರೀರಾಮರೆಡ್ಡಿಯವರಿಗೆ 50 ಸಾವಿರ ರೂ.ಗಳ ದಂಡವನ್ನು ದೃಢೀಕರಿಸಿರುತ್ತದೆ.

ದಿನಾಂಕ 20.04.2006ರ ಸರ್ವೋಚ್ಛ ನ್ಯಾಯಾಲಯದ ಹಾಗೂ ಸೋಮಶೇಖರರೆಡ್ಡಿ ಪ್ರಕರಣದ ತೀರ್ಮಾನಗಳ ಅನುಗುಣವಾಗಿ ಯೋಜನಾ ಅನುಷ್ಠಾನವನ್ನು ಜಾರಿಗೊಳಿಸುವಂತೆ ಸರ್ಕಾರ ನೈಸೆಲ್/ನೀಸೆಲ್ ಕಂಪನಿಗೆ ಪತ್ರಗಳನ್ನು ಬರೆದಿರುವುದು ಸಮಿತಿಯ ಗಮನಕ್ಕೆ ಬಂದಿದೆ. ಈ ಪ್ರತಿಪಾದನೆಗಳನ್ನು ನ್ಯಾಯಾಂಗದ ತೀರ್ಪಿನ ಉಲ್ಲಂಘನೆ ಎಂದು ಅರ್ಥೈಸಿ ಖಾಸಗಿ ಪಾಲುದಾರರು ಕರ್ನಾಟಕ ಸರ್ಕಾರದ ವಿರುದ್ಧ ನ್ಯಾಯಾಂಗ ನಿಂದನಾ ಅರ್ಜಿಯನ್ನು 2007 ರಲ್ಲಿ ಸಲ್ಲಿಸಿದ್ದು, ಈ ಪ್ರಕರಣಗಳು ಇತ್ಯರ್ಥವಾಗಬೇಕಾಗಿದೆ.

***ವಿವಿಧ ಸ್ತರದ ನ್ಯಾಯಾಲಯಗಳಲ್ಲಿ ಬಾಕಿ ಇರುವ/ಇತ್ಯರ್ಥವಾಗಿರುವ/ಚಾಲ್ತಿಯಲ್ಲಿರುವ ಅಥವಾ ಮಧ್ಯಂತರ ಆದೇಶದ ನಿರ್ಬಂಧನೆಗೆ ಒಳಪಟ್ಟಿರುವ ಪ್ರಮುಖ ಪ್ರಕರಣಗಳ ವಿವರಗಳು:***

1. WP.ಸಂಖ್ಯೆ.29221/1997 – ಇದೊಂದು ಸಾರ್ವಜನಿಕ ಹಿತಾಸಕ್ತಿಯ ಆಧಾರದ ಮೇಲೆ ದಾಖಲಿಸಲಾದ ಪ್ರಕರಣವಾಗಿರುತ್ತದೆ. ಶ್ರೀ ಸೋಮಶೇಖರ ರೆಡ್ಡಿ, ಸರ್ಕಾರದ ನಿವೃತ್ತ ಮುಖ್ಯ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಇವರು ಈ ಪ್ರಕರಣದಲ್ಲಿ ನೈಸೆಲ್ ಸಂಸ್ಥೆಗೆ ಅವಶ್ಯಕತೆಗಿಂತ ಹೆಚ್ಚುವರಿ ಜಮೀನನ್ನು ನೀಡಿರುವ ಬಗ್ಗೆ ಆತಂಕವನ್ನು ವ್ಯಕ್ತಪಡಿಸಿ ಪರಿಹಾರವನ್ನು ಕೋರಿರುತ್ತಾರೆ. ಮಾನದಂಡಗಳ ಅನುಗುಣವಾಗಿ 111 ಕಿ.ಮೀ. ವೇಗದ ಹೆದ್ದಾರಿಯನ್ನು ಜಾರಿಗೊಳಿಸಲು ವಾಸ್ತವಿಕವಾಗಿ 2775 ಎಕರೆ ವಿಸ್ತೀರ್ಣದ ಜಮೀನಿನ ಅವಶ್ಯಕತೆಯಿದ್ದು, ಇದರ ವಿರುದ್ಧ ಕ್ರಿಯಾ ಒಪ್ಪಂದದಲ್ಲಿ 6999 ಎಕರೆ ವಿಸ್ತೀರ್ಣದ ಜಮೀನನ್ನು ನೀಡಲು ಪ್ರಸ್ತಾಪಿಸಿರುವ ಬಗ್ಗೆ ದಾವೆಯನ್ನು ಹೂಡಲಾಗಿದೆ. ಪ್ರಮುಖವಾಗಿ ಟೋಲ್ ರಸ್ತೆ ಹಾಗೂ ವೇಗದ ಹೆದ್ದಾರಿಗೆ ನೀಡಲಾಗಿರುವ 6999 ಎಕರೆ ವಿಸ್ತೀರ್ಣದ ಜಮೀನನ್ನು Real Estate ಅಭಿವೃದ್ಧಿಗಾಗಿ ಖಾಸಗಿ ಪಾಲುದಾರರು ಬಳಸುವ ಸಾಧ್ಯತೆ ಇದೆ ಎಂದು ಪ್ರತಿಪಾದಿಸಲಾಗಿದೆ. ಈ ಪ್ರಕರಣಕ್ಕೆ ಪ್ರತಿಕ್ರಿಯಿಸಿರುವ ಸರ್ಕಾರ ಹಾಗೂ ನೈಸೆಲ್ ಸಂಸ್ಥೆ ಯೋಜನೆಯ ಅಡಿಯಲ್ಲಿ ನೀಡಲು ಉದ್ದೇಶಿಸಲಾಗಿರುವ 6999 ಎಕರೆ ವಿಸ್ತೀರ್ಣದ ಜಮೀನನ್ನು ಬೇರೆ ಯಾವುದೇ ಉದ್ದೇಶಗಳಿಗೆ ಬಳಕೆ ಮಾಡುವುದಿಲ್ಲವೆಂದು ಪ್ರಮಾಣೀಕರಿಸಿರುತ್ತಾರೆ. ಇದಕ್ಕೆ ಪೂರಕವಾಗಿ ಟೋಲ್ ರಸ್ತೆಗೆ ಅನ್ವಯಿಸುವಂತೆ ಟೋಲ್ ದರಗಳ ಸ್ವೀಕೃತಿಯನ್ನು ಹೊರತುಪಡಿಸಿ ಬೇರೆ ಮೂಲಗಳಿಂದ ಅಥವಾ ಸ್ವರೂಪದ ಆದಾಯ ಉತ್ಪನ್ನವಾಗುವುದಿಲ್ಲವೆಂದು ದೃಢೀಕರಿಸಿದೆ. ಈ ಎಲ್ಲಾ ಅಂಶಗಳನ್ನು ಅಮೂಲಾಗ್ರವಾಗಿ ಪರಿಶೀಲಿಸಿದ ನಂತರ, ಉಚ್ಛ ನ್ಯಾಯಾಲಯವು ಈ ಯೋಜನೆಯ ಅಡಿಯಲ್ಲಿ ಯಾವುದೇ ಹೆಚ್ಚುವರಿ ಜಮೀನು ನೀಡಿರುವುದಿಲ್ಲವೆಂದು ತೀರ್ಮಾನಿಸಿದೆ. ಇದಕ್ಕೆ ಪೂರಕವಾಗಿ 13,237 ಎಕರೆ ವಿಸ್ತೀರ್ಣದ ಖಾಸಗಿ ಜಮೀನು ಹಾಗೂ 6956 ಎಕರೆ ವಿಸ್ತೀರ್ಣದ ಸರ್ಕಾರ ಜಮೀನಿನ ಅವಶ್ಯಕತೆಯನ್ನು ಉಚ್ಛ ನ್ಯಾಯಾಲಯವು ದೃಢೀಕರಿಸಿದೆ ಹಾಗೂ ಯೋಜನೆಯ ಸಮಗ್ರ ಅವಶ್ಯಕತೆ 20,193 ಎಕರೆಗಳು ಎಂದು ನಿರ್ಧರಿಸಿದೆ. ಈ ಹಿನ್ನೆಲೆಯಲ್ಲಿ 21.09.1998 ರಂದು ಈ ರಿಟ್ ಅರ್ಜಿಯನ್ನು ವಜಾ ಮಾಡಲಾಗಿದೆ. ಈ ತೀರ್ಪಿನ ಕಂಡಿಕೆ 75 ರಲ್ಲಿ ಈ ರೀತಿ ಹೇಳಲಾಗಿದೆ. "As we do not find outselves in agreement with the contentions raised by the Petitioners, question of holding a CBI Enquiry for any act of omission or commission of Respondant No.2 does not araise". ಈ ತೀರ್ಪನ್ನು ಕ್ರಿಯಾ ಒಪ್ಪಂದದ ಸಮರ್ಪಕತೆಯನ್ನು ಪ್ರಶ್ನಿಸಿರುವ ಹಿನ್ನೆಲೆಯಲ್ಲಿ 21.09.1998 ರಂದು ನೀಡಲಾಗಿದೆ. 1998 ರಿಂದ ಯೋಜನಾ ಅನುಷ್ಠಾನದಲ್ಲಿ ಕ್ರಿಯಾ ಒಪ್ಪಂದದ ಹಿನ್ನೆಲೆಯಲ್ಲಿ ಆಗಿರುವ ಉಲ್ಲಂಘನೆಗಳ ಆಧಾರದ ಮೇಲೆ ಈ ವರದಿಯನ್ನು ಇತ್ಯರ್ಥಪಡಿಸಲಾಗಿದ್ದು, ಏತನ್ಮಧ್ಯೆ ಆಗಿರುವ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಸಮಿತಿಯ ಶಿಫಾರಸ್ಸುಗಳನ್ನು ಇತ್ಯರ್ಥಗೊಳಿಸಲಾಗಿದೆ.

2. WA ಸಂಖ್ಯೆ. 72/2004 ಹಾಗೂ ಸಂಬಂಧಿತ ಅರ್ಜಿಗಳು – ಇದರಲ್ಲಿ ಕೆ.ಐ.ಎ.ಡಿ.ಬಿ. ಸಂಸ್ಥೆಯು ನಿಯಮ 28(4)ರ ಅಡಿಯಲ್ಲಿ 2550 ಎಕರೆ ಖಾಸಗಿ ಜಮೀನನ್ನು ಪೆರಿಫರೆಲ್ ರಸ್ತೆ ಮತ್ತು

F3(O)

ಲಿಂಕ್ ರಸ್ತೆಗಾಗಿ ಸ್ವಾಧೀನಪಡಿಸಿಕೊಳ್ಳಲು ಅಧಿಸೂಚನೆಯನ್ನು ಜಾರಿಗೊಳಿಸಿದ್ದು, ಈ ಅಧಿಸೂಚನೆಯನ್ನು ಭೂ ಮಾಲೀಕರು ಉಚ್ಛ ನ್ಯಾಯಾಲಯದಲ್ಲಿ ಪ್ರಶ್ನಿಸಿರುತ್ತಾರೆ. ಪ್ರಮುಖವಾಗಿ ಪ್ರಸ್ತಾವಿತ ಜಮೀನು ಯೋಜನಾ ಅನುಷ್ಠಾನಕ್ಕೆ ಅವಶ್ಯಕತೆಯಿರುವುದಿಲ್ಲ ಹಾಗೂ ಪ್ರಸ್ತಾವಿತ ಭೂ ಸ್ವಾಧೀನದಿಂದ ಜೀವನೋಪಾಯಕ್ಕೆ ಧಕ್ಕೆಯುಂಟಾಗುತ್ತದೆ ಎಂಬುದು ಅರ್ಜಿದಾರರ ಪ್ರತಿಪಾದನೆಯಾಗಿತ್ತು. ಇದಕ್ಕೆ ಸ್ಪಂದಿಸಿದ ಕೆ.ಐ.ಎ.ಡಿ.ಬಿ. ಸಂಸ್ಥೆಯು ಆಕ್ಷೇಪಣೆಗಳನ್ನು ಸಲ್ಲಿಸುವಾಗ ಇದೊಂದು ಸಾರ್ವಜನಿಕ ಹಿತಾಸಕ್ತಿಯ ಯೋಜನೆಯಾಗಿರುವುದರಿಂದ ಹಾಗೂ ಯೋಜನೆಗೆ ಭೂಮಿಯ ಅವಶ್ಯಕತೆಗಳು ಈಗಾಗಲೇ ಸೋಮಶೇಖರ ರೆಡ್ಡಿ ಪ್ರಕರಣದಲ್ಲಿ ದೃಢೀಕೃತವಾಗಿರುವ ಹಿನ್ನೆಲೆಯಲ್ಲಿ ಪ್ರಕರಣವನ್ನು ರದ್ದುಮಾಡಬೇಕೆಂದು ಕೋರಿದ್ದರು. ಈ ಪ್ರಕರಣದಲ್ಲಿ ನೈಸೆಲ್ ಸಂಸ್ಥೆ ನೀಡಲಾಗುವ ಒಟ್ಟು ಭೂಮಿಯ ವಿಸ್ತೀರ್ಣದಲ್ಲಿ ಪ್ರತಿಶತ 60 ಅನ್ನು ರಸ್ತೆಗಳ ನಿರ್ಮಾಣಕ್ಕೆ ಬಳಸಿ ಉಳಿದ ಪ್ರತಿಶತ 40 ಅನ್ನು ನಗರ ಸಮುಚ್ಛಯಗಳ ಅಭಿವೃದ್ಧಿಗಾಗಿ ಬಳಸುವುದಾಗಿ ಪ್ರಮಾಣ ಪತ್ರದ ಮುಖಾಂತರ ದೃಢೀಕರಿಸಿದೆ. 18.12.2003 ರಂದು ಉಚ್ಛ ನ್ಯಾಯಾಲಯವು ನಗರ ಸಮುಚ್ಛಯಕ್ಕೆ ಅವಶ್ಯಕವಿರುವ ಪ್ರತಿಶತ 40 ರಷ್ಟು ಜಮೀನಿನ ಬಳಕೆಯ ಬಗ್ಗೆ ಅಸಹಮತಿಯನ್ನು ವ್ಯಕ್ತಪಡಿಸಿತು. ಉಳಿದಂತೆ ಟೋಲ್ ರಸ್ತೆಯ ನಿರ್ಮಾಣಕ್ಕಾಗಿ ಪ್ರತಿಶತ 60 ರಷ್ಟು ಜಮೀನಿನ ಅವಶ್ಯಕತೆಯನ್ನು ದೃಢೀಕರಿಸಿತು.

3. ಪ್ರಸ್ತಾವಿತ ಉಚ್ಛ ನ್ಯಾಯಾಲಯದ ತೀರ್ಪನ್ನು ಡಿವಿಷನ್ ಬೆಂಚ್‌ನಲ್ಲಿ ಮೇಲ್ಮನವಿಯ ಮುಖಾಂತರ ಪ್ರಶ್ನಿಸಿ, ಕೆ.ಐ.ಎ.ಡಿ.ಬಿ., ನೈಸೆಲ್/ನೀಸೆಲ್ ಸಂಸ್ಥೆ 2550 ಎಕರೆ ಖಾಸಗಿ ಜಮೀನನ್ನು ಪೆರಿಫರೆಲ್ ರಸ್ತೆ, ಲಿಂಕ್ ರಸ್ತೆ, ಸರ್ವೀಸ್ ರಸ್ತೆ, ನಿರ್ವಹಣಾ ಪ್ರದೇಶ, ರ್‍ಯಾಂಪ್‌ಗಳು ಹಾಗೂ ಇಂಟರ್ ಛೇಂಜ್‌ಗಳಿಗಾಗಿ ಸ್ವಾಧೀನಪಡಿಸಿಕೊಳ್ಳಲಾಗಿದೆ ಎಂದು ಪ್ರತಿಪಾದಿಸಲಾಗಿದೆ. ಕೆ.ಐ.ಎ.ಡಿ.ಬಿ., ನೈಸೆಲ್/ನೀಸೆಲ್ ಸಂಸ್ಥೆ ಬಿ.ಎಂ.ಐ.ಸಿ. ಯೋಜನೆ ಸಾರ್ವಜನಿಕ ಹಿತಾಸಕ್ತಿಯ ಗುರುತರ ಯೋಜನೆಯಾಗಿದ್ದು, ಈ ಅಂಶವನ್ನು ಉಚ್ಛ ನ್ಯಾಯಾಲಯವು ಸೋಮಶೇಖರ ರೆಡ್ಡಿ ಪ್ರಕರಣದಲ್ಲಿ ದೃಢೀಕರಿಸಲಾಗಿದೆ ಎಂಬ ವಾದವನ್ನು ಮಂಡಿಸಿತು. ಈ ಹಿನ್ನೆಲೆಯಲ್ಲಿ ಪೆರಿಫರೆಲ್ ರಸ್ತೆ, ಲಿಂಕ್ ರಸ್ತೆ, ಇತ್ಯಾದಿಗಳಿಗೆ ಜಾರಿಗೊಳಿಸಿರುವ 2550 ಎಕರೆ ಖಾಸಗಿ ಜಮೀನಿನ ಸ್ವಾಧೀನ ಪ್ರಕ್ರಿಯೆ ಕಾನೂನು ಬಾಹಿರವಲ್ಲ ಎಂಬ ವಾದವನ್ನು ಮಂಡಿಸಲಾಯಿತು. ನೈಸೆಲ್/ನೀಸೆಲ್ ಸಂಸ್ಥೆಗಳು ಭೂ ಮಾಲೀಕರು ಭೂಸ್ವಾಧೀನ ಪ್ರಕ್ರಿಯೆಯಲ್ಲಿ ದುರುದ್ದೇಶಪೂರ್ವಕ ಹಿನ್ನೆಲೆಯನ್ನು ಸಾಬೀತುಪಡಿಸುವಲ್ಲಿ ವಿಫಲವಾಗಿದ್ದಾರೆಂದು ಪ್ರತಿಪಾದಿಸಿತು. ಈ ಹಿನ್ನೆಲೆಯಲ್ಲಿ 18.12.2003 ರಂದು ಉಚ್ಛ ನ್ಯಾಯಾಲಯದ ಏಕ ಸದಸ್ಯ ಪೀಠ ನೀಡಿರುವ ತೀರ್ಪನ್ನು ರದ್ದುಗೊಳಿಸುವಂತೆ ತೀರ್ಪು ನೀಡಿತು. ಈ ಎಲ್ಲಾ ಅಂಶಗಳನ್ನು ಪರಿಗಣಿಸಿ ಉಚ್ಛ ನ್ಯಾಯಾಲಯದ ಡಿವಿಷನ್ ಬೆಂಚ್ ಏಕ ಸದಸ್ಯ ಪೀಠದ ಆದೇಶವನ್ನು ರದ್ದುಗೊಳಿಸಿ ಪ್ರಸ್ತಾವಿತ ಸ್ವಾಧೀನ ಪ್ರಕ್ರಿಯೆಯನ್ನು ದೃಢೀಕರಿಸಿತು.

4. WP ಸಂಖ್ಯೆ.45334/2004 ಮತ್ತು WP ಸಂಖ್ಯೆ.45386/2004 –All India Manufacturers Organisation ಸಂಸ್ಥೆಯು ಸಾರ್ವಜನಿಕ ಹಿತಾಸಕ್ತಿಯ ಪ್ರಕರಣದ ಮುಖಾಂತರ 03.04.1997 ರಂದು ಜಾರಿಗೊಳಿಸಲಾದ ಕ್ರಿಯಾ ಒಪ್ಪಂದವನ್ನು ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನ ಹಿನ್ನೆಲೆಯಲ್ಲಿ ಅನುಷ್ಠಾನಗೊಳಿಸುವಂತೆ ದಾಖಲಿಸಲಾಗಿದೆ. ಇದಕ್ಕೆ

ಪೂರಕವಾಗಿ ಶ್ರೀಯುತರುಗಳಾದ ಮಾಧುಸ್ವಾಮಿ ಹಾಗೂ ಜಿ.ವಿ. ಶ್ರೀರಾಮರೆಡ್ಡಿ, ಶಾಸಕರುಗಳು 03.04.1997ರ ಕ್ರಿಯಾ ಒಪ್ಪಂದವನ್ನು ಈ ಕೆಳಕಂಡ ಆಧಾರದ ಮೇಲೆ ಪ್ರಶ್ನಿಸಿ ಪ್ರಕರಣವನ್ನು ದಾಖಲಿಸಿದರು:

i. ಕಾನೂನು ಬಾಹಿರ ಉಲ್ಲೇಖಗಳು
ii. ಅನಧಿಕೃತ ಪ್ರಸ್ತಾವನೆಗಳು
iii. ವಂಚನೆ ಹಾಗೂ ಮೋಸ
iv. ಸರ್ಕಾರಿ ಜಮೀನಿನ ಅಡಮಾನ
v. ICICI ಬ್ಯಾಂಕ್ ಮುಖಾಂತರ 150 ಕೋಟಿ ರೂ.ಗಳ ಬಂಡವಾಳ ಹೂಡಿಕೆ ಸಾಲ
vi. De-Notification ಪ್ರಕ್ರಿಯೆಯಲ್ಲಿ ತಾರತಮ್ಯ
vii. ಹೆಚ್ಚುವರಿ ಜಮೀನಿನ ಸ್ವಾಧೀನ.

ಉಚ್ಛ ನ್ಯಾಯಾಲಯವು 03.05.2005 ರಂದು ಸವಿವರವಾದ ಆದೇಶವನ್ನು ತೀರ್ಪಿನ ಮುಖಾಂತರ ಜಾರಿಗೊಳಿಸಿತು. ಪ್ರಮುಖವಾಗಿ ಈ ತೀರ್ಪಿನಡಿಯಲ್ಲಿ ಶ್ರೀಯುತರುಗಳಾದ ಮಾಧುಸ್ವಾಮಿ ಹಾಗೂ ಜಿ.ವಿ. ಶ್ರೀರಾಮರೆಡ್ಡಿ ಇವರು ಮಾಡಿರುವ ಆರೋಪಗಳನ್ನು ರದ್ದುಗೊಳಿಸಲಾಯಿತು. ಉಚ್ಛ ನ್ಯಾಯಾಲಯವು ಕ್ರಿಯಾ ಒಪ್ಪಂದದ ಸಿಂಧುತ್ವವನ್ನು ಈಗಾಗಲೇ ಸೋಮಶೇಖರ ರೆಡ್ಡಿ ಪ್ರಕರಣದಲ್ಲಿ ದೃಢೀಕರಿಸಿರುವ ಹಿನ್ನೆಲೆಯಲ್ಲಿ "Res-Judicata" ಆಧಾರದ ಮೇಲೆ ಅರ್ಜಿಯನ್ನು ವಜಾ ಮಾಡಲಾಯಿತು. ಏತನ್ಮಧ್ಯೆ, ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನ ಪ್ರಮುಖ ಅಂಶಗಳನ್ನು ಪುನರುಚ್ಛಿಸಲಾಯಿತು. ಉಚ್ಛ ನ್ಯಾಯಾಲಯವು ಸರ್ಕಾರವು ಹೆಚ್ಚುವರಿ ಜಮೀನಿನ ವಿಷಯನ್ನು ತನಿಖೆ ಮಾಡಲು ನೇಮಿಸಿದ ಕೆ.ಸಿ. ರೆಡ್ಡಿ ಆಯೋಗದ ಬಗ್ಗೆ ತೀವ್ರ ಆಕ್ಷೇಪಣೆಯನ್ನು ವ್ಯಕ್ತಪಡಿಸಿತು. ಕೆ.ಸಿ. ರೆಡ್ಡಿ ಆಯೋಗದ ವರದಿಯ ಮೇಲೆ ಕೈಗೊಳ್ಳಬಹುದಾದ ಕ್ರಮ ಸಂಪೂರ್ಣವಾಗಿ ಅಧಿಕಾರದತ್ತ ಸಮಿತಿಯ ವ್ಯಾಪ್ತಿಗೆ ಒಳಪಟ್ಟಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಲಾಯಿತು. ಈ ಪ್ರಕರಣದಲ್ಲಿ ಉಚ್ಛ ನ್ಯಾಯಾಲಯವು ಶ್ರೀಯುತರುಗಳಾದ ಮಾಧುಸ್ವಾಮಿ ಹಾಗೂ ಜಿ.ವಿ. ಶ್ರೀರಾಮರೆಡ್ಡಿ ಇವರುಗಳ ಪ್ರತಿನಿಧಿತ್ವವನ್ನು ಸರ್ಕಾರವು ಪರೋಕ್ಷವಾಗಿ ಬಳಸುತ್ತಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿತು. ಕ್ರಿಯಾ ಒಪ್ಪಂದವು ಯಾವುದೇ ಆಯಾಮದಲ್ಲಿ ದುರುದ್ದೇಶಪೂರ್ವಕವಾಗಿದ್ದಲ್ಲಿ, ಇದನ್ನು ರದ್ದುಪಡಿಸುವ ಅಧಿಕಾರ ಸರ್ಕಾರಕ್ಕಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿತು. ಶ್ರೀಯುತರುಗಳಾದ ಜೆ.ಸಿ. ಮಾಧುಸ್ವಾಮಿ ಹಾಗೂ ಜಿ.ವಿ. ಶ್ರೀರಾಮರೆಡ್ಡಿ ಮತ್ತು ಎ.ಐ.ಎಂ.ಓ. ಸಂಸ್ಥೆಗಳು ಈ ಯೋಜನೆಯನ್ನು ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನ ಅನುಗುಣವಾಗಿ ಅನುಷ್ಠಾನಗೊಳಿಸಬೇಕೆಂದು ಕೋರಿರುವ ಹಿನ್ನೆಲೆಯಲ್ಲಿ ಉಚ್ಛ ನ್ಯಾಯಾಲಯವು ಕ್ರಿಯಾ ಒಪ್ಪಂದವನ್ನು ತಾತ್ವಿಕವಾಗಿ ಹಾಗೂ ವಾಸ್ತವಿಕವಾಗಿ ಸೋಮಶೇಖರ ರೆಡ್ಡಿ ತೀರ್ಪಿನ ಅನುಗುಣವಾಗಿ ಪಾಲಿಸುವಂತೆ ನಿರ್ದೇಶಿಸಿತು. ಈ ಪ್ರಕರಣದಲ್ಲಿ ಶ್ರೀಯುತರುಗಳಾದ ಜೆ.ಸಿ. ಮಾಧುಸ್ವಾಮಿ ಹಾಗೂ ಜಿ.ವಿ. ಶ್ರೀರಾಮರೆಡ್ಡಿ ಇವರುಗಳಿಗೆ 50 ಸಾವಿರ ರೂ.ಗಳ ದಂಡವನ್ನು ವಿಧಿಸಲಾಯಿತು.

5. ಸಿವಿಲ್ ಅಪೀಲ್ ಸಂಖ್ಯೆ.3492-94/2005 – ಕರ್ನಾಟಕ ಸರ್ಕಾರವು 03.05.2005 ರ ಮೇಲೆ ಉಲ್ಲೇಖಿಸಿರುವ ತೀರ್ಪನ್ನು ಪ್ರಶ್ನಿಸಿ ಮೇಲ್ಮನವಿಯನ್ನು ಸಲ್ಲಿಸಿತು. ಶ್ರೀಯುತರುಗಳಾದ ಜೆ.ಸಿ. ಮಾಧುಸ್ವಾಮಿ ಹಾಗೂ ಜಿ.ವಿ. ಶ್ರೀರಾಮರೆಡ್ಡಿ ಇವರುಗಳೂ ಸಹಾ ಪ್ರಸ್ತಾವಿತ ತೀರ್ಪನ್ನು ಪ್ರಶ್ನಿಸಿ ಮೇಲ್ಮನವಿಯನ್ನು ಸಲ್ಲಿಸಿದರು. ಹಲವಾರು ಭೂ ಮಾಲೀಕರು ಉಚ್ಛ ನ್ಯಾಯಾಲಯದ

28.02.2005ರ ತೀರ್ಪನ್ನು ಪ್ರಶ್ನಿಸಿ ಮೇಲ್ಮನವಿಯನ್ನು ಸಲ್ಲಿಸಿದರು. ಪ್ರಸ್ತಾವಿತ ಮೇಲ್ಮನವಿಯಲ್ಲಿ ರಾಜ್ಯ ಸರ್ಕಾರವು ಯೋಜನಾ ವರದಿಯ ಅನುಗುಣವಾಗಿ 5119 ಎಕರೆ ವಿಸ್ತೀರ್ಣದ ಜಮೀನಿನ ಅವಶ್ಯಕತೆಯಿದ್ದು, ಇದಕ್ಕೆ ಬದಲಾಗಿ 6999 ಎಕರೆ ಜಮೀನನ್ನು ನೀಡಿರುವ ಬಗ್ಗೆ ಪ್ರಶ್ನಿಸಿದರು. ಇದಲ್ಲದೆ, 31.07.1997ರಲ್ಲಿ ಜಾರಿಗೊಳಿಸಲಾದ ತಃಖ್ತೆಯಲ್ಲಿ 49,000 ಎಕರೆ ವಿಸ್ತೀರ್ಣದ ಜಮೀನಿನ ಅವಶ್ಯಕತೆಯ ಬಗ್ಗೆ ಪ್ರತಿಪಾದಿಸಿರುವ ಬಗ್ಗೆ ಉಲ್ಲೇಖಿಸಲಾಯಿತು. ಈ ಹಿನ್ನೆಲೆಯಲ್ಲಿ ಯೋಜನಾ ಅನುಷ್ಠಾನದಲ್ಲಿ ಹಲವಾರು ಅಕ್ರಮಗಳು ಹಾಗೂ ಕಾನೂನು ಬಾಹಿರ ನಿರ್ಧಾರಗಳನ್ನು ದುರುದ್ದೇಶಪೂರ್ವಕವಾಗಿ ಕೈಗೊಂಡಿರುವ ಬಗ್ಗೆ ಉಲ್ಲೇಖಿಸಲಾಯಿತು. ಭೂಮಾಲೀಕರು ಟೋಲ್ ರಸ್ತೆಯ ಪಥದಿಂದ ಬಹುತೇಕವಾಗಿ ದೂರದಲ್ಲಿರುವ ಜಮೀನಿನ ಸ್ವಾಧೀನದ ಬಗ್ಗೆ ಪ್ರಶ್ನಿಸಿದರು. ಸರ್ವೋಚ್ಚ ನ್ಯಾಯಾಲಯವು ಉಚ್ಚ ನ್ಯಾಯಾಲಯದ ತೀರ್ಪನ್ನು ದೃಢೀಕರಿಸಿ ಭೂಮಾಲೀಕರ ಅರ್ಜಿಯನ್ನು ಕ್ಷುಲ್ಲಕ ಹಾಗೂ ಆಧಾರರಹಿತ ಎಂಬ ಆಧಾರದ ಮೇಲೆ ತಿರಸ್ಕರಿಸಿತು. ಇದಲ್ಲದೆ, ಸರ್ವೋಚ್ಚ ನ್ಯಾಯಾಲಯವು ಉಚ್ಚ ನ್ಯಾಯಾಲಯ 03.02.2005 ರಂದು ನೀಡಿರುವ ತೀರ್ಪನ್ನು ಪುನರುಚ್ಚಿಸಿತು. ಹಾಗೂ ಶ್ರೀಯುತರುಗಳಾದ ಜೆ.ಸಿ. ಮಾಧುಸ್ವಾಮಿ ಹಾಗೂ ಜಿ.ವಿ. ಶ್ರೀರಾಮರೆಡ್ಡಿ ಇವರುಗಳ ಮೇಲೆ ವಿಧಿಸಿರುವ ದಂಡವನ್ನು ದೃಢೀಕರಿಸಿತು. ಅಂತಿಮವಾಗಿ ಸರ್ವೋಚ್ಚ ನ್ಯಾಯಾಲಯವು ರಾಜ್ಯ ಸರ್ಕಾರದ ಮೇಲೆ 5 ಲಕ್ಷ ರೂ.ಗಳ ದಂಡವನ್ನು ವಿಧಿಸಿತು. ಈ ಪ್ರಕರಣದಲ್ಲಿ ರಾಜ್ಯ ಸರ್ಕಾರವು ಸೋಮಶೇಖರ ರೆಡ್ಡಿ ಪ್ರಕರಣದ ವಾದ ವಿವಾದಗಳಲ್ಲಿ ಕ್ರಿಯಾ ಒಪ್ಪಂದವನ್ನು ಅಕ್ಷರಶ: ಪಾಲಿಸುವ ಬಗ್ಗೆ ಸ್ವಯಂ ಪ್ರೇರಿತವಾಗಿ ದೃಢೀಕರಿಸಿರುವ ಹಿನ್ನೆಲೆಯಲ್ಲಿ ದಂಡವನ್ನು ವಿಧಿಸಲಾಯಿತು. ಸರ್ವೋಚ್ಚ ನ್ಯಾಯಾಲಯವು "RES-Judicata" ನಿರ್ಬಂಧನೆಗಳು ಸೋಮಶೇಖರ ರೆಡ್ಡಿ ಪ್ರಕರಣಗಳಿಗೆ ಅನ್ವಯಿಸುವಂತೆ ಆ ಪ್ರಕರಣದಲ್ಲಿ ಪ್ರತಿಪಾದಿಸಲಾದ ಯಾವುದೇ ಅಂಶಗಳು ಅಥವಾ ಇತ್ಯರ್ಥವಾದ ವಿಷಯಗಳ ಬಗ್ಗೆ ಪುನರ್ ಪರಿಶೀಲನೆ ಸಿಂಧುವಾಗುವುದಿಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸಿತು. ಇದಕ್ಕೆ ಪೂರಕವಾಗಿ ಅಧಿಕಾರದತ್ತ ಸಮಿತಿಯನ್ನು ಹೊರತುಪಡಿಸಿ ಬೇರೆ ಆಯೋಗವನ್ನು ಯೋಜನೆಯ ಸಾಧಕ ಬಾಧಕಗಳನ್ನು ವಿಶ್ಲೇಷಿಸಲು ನೇಮಿಸಿರುವುದನ್ನು ರದ್ದುಗೊಳಿಸಿತು. ನಿರ್ದಿಷ್ಟವಾಗಿ ನ್ಯಾಯಾಲಯವು ಕೆ.ಸಿ. ರೆಡ್ಡಿ ಅವರು ಉನ್ನತ ಮಟ್ಟದ ಸಮಿತಿ ಸದಸ್ಯರ ಸಾಮರ್ಥ್ಯದಲ್ಲಿ ಜಮೀನಿನ ಅವಶ್ಯಕತೆಯನ್ನು ಅಧಿಕೃತವಾಗಿ ಅನುಮೋದಿಸಿರುವ ಹಿನ್ನೆಲೆಯಲ್ಲಿ, ಇದೇ ವ್ಯಕ್ತಿಯ ಮುಖಾಂತರ ಹೆಚ್ಚುವರಿ ಜಮೀನಿನ ಬಗ್ಗೆ ತನಿಖೆ ಜಾರಿಗೊಳಿಸುವುದು ಅಸಮರ್ಪಕ ಎಂದು ಸರ್ವೋಚ್ಚ ನ್ಯಾಯಾಲಯವು ನಿರ್ಧರಿಸಿತು. ಯೋಜನೆಗೆ ಅವಶ್ಯಕವಿರುವ ಭೂಮಿಯನ್ನು ವೈಜ್ಞಾನಿಕವಾಗಿ ಸರ್ವೇಕ್ಷಣೆ ಮಾಡಿ ಇತ್ಯರ್ಥಗೊಳಿಸಿ ಕ್ರೋಢೀಕರಿಸಿರುವ ಹಿನ್ನೆಲೆಯಲ್ಲಿ ಸರ್ವೋಚ್ಚ ನ್ಯಾಯಾಲಯವೂ ಸಹ ಈ ವಿಷಯದಲ್ಲಿ ಹಸ್ತಕ್ಷೇಪ ಮಾಡುವುದು ಸೂಕ್ತವಲ್ಲವೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿತು. ಸರ್ವೋಚ್ಚ ನ್ಯಾಯಾಲಯವು ಅಂತಿಮ ಆದೇಶವನ್ನು 20.04.2006 ರಂದು ನೀಡಿತು.

6. ಸರ್ವೋಚ್ಚ ನ್ಯಾಯಾಲಯದ ತೀರ್ಪಿಗೆ ಮರುಪರಿಶೀಲನಾ ಅರ್ಜಿಯನ್ನು ಸಲ್ಲಿಸಿದ್ದು ಈ ಅರ್ಜಿಯನ್ನು ರದ್ದುಗೊಳಿಸಲಾಯಿತು.

7. ನ್ಯಾಯಾಂಗ ನಿಂದನೆಯ ಅರ್ಜಿ 144/2006 ಮತ್ತು 96/2007 – ಈ ಪ್ರಕರಣವನ್ನು ದಕ್ಷಿಣಾಮೂರ್ತಿ ಎಂಬ ವ್ಯಕ್ತಿಯೊಬ್ಬರು 20.04.2006ರ ಸರ್ವೋಚ್ಚ ನ್ಯಾಯಾಲಯದ

ನಿರ್ದೇಶನವನ್ನು ಪಾಲಿಸದೇ ಇರುವ ಬಗ್ಗೆ ದಾಖಲಿಸಲಾಗಿದೆ. ಇದೇ ಆಧಾರದ ಮೇಲೆ ನೈಸೆಲ್ ಸಂಸ್ಥೆಯೂ ಕೂಡ ನ್ಯಾಯಾಂಗ ನಿಂದನೆಯ ಅರ್ಜಿಯನ್ನು ಸಲ್ಲಿಸಿದೆ. ಯೋಜನೆಯ ಅಧಿಕಾರದತ್ತ ಸಮಿತಿಯು ತನ್ನ 11, 12 ಹಾಗೂ 13ನೇ ಸಭೆಗಳಲ್ಲಿ ಈ ಯೋಜನೆಗೆ ಹೆಚ್ಚುವರಿಯಾಗಿ ಜಮೀನನ್ನು ನೀಡಿರುವುದನ್ನು ದೃಢೀಕರಿಸಿದೆ. ತತ್ಸಂಬಂಧವಾಗಿ ಈ ಆಧಾರದ ಮೇಲೆ ಸರ್ವೋಚ್ಛ ನ್ಯಾಯಾಲಯದ ಮುಂದೆ ಪ್ರಮಾಣ ಪತ್ರಗಳನ್ನೂ ಸಹ ಸಲ್ಲಿಸಲಾಗಿದೆ. ರಾಜ್ಯ ಸರ್ಕಾರವು ಈ ಯೋಜನೆಯನ್ನು ಓ.ಡಿ.ಪಿ. ಅನುಗುಣವಾಗಿ ಸಂಪೂರ್ಣಗೊಳಿಸಲು ಅನುಮತಿ ನೀಡುವಂತೆ ಸರ್ವೋಚ್ಛ ನ್ಯಾಯಾಲಯವನ್ನು ಕೋರಿರುವುದು ಈ ಪ್ರಕರಣದ ವಿಶಿಷ್ಟತೆಯಾಗಿದೆ. ತತ್ಪರಿಣಾಮವಾಗಿ ಸರ್ವೋಚ್ಛ ನ್ಯಾಯಾಲಯವು ಓ.ಡಿ.ಪಿ. ಅನುಗುಣವಾಗಿ ಖಾಸಗಿ ಪಾಲುದಾರರಿಗೆ ಜಮೀನನ್ನು ನೀಡುವಂತೆ ನಿರ್ದೇಶಿಸಿದೆ. ಈ ಪ್ರಕರಣದಲ್ಲಿ ನೈಸೆಲ್ ಸಂಸ್ಥೆಯು ಪೆರಿಫೆರಲ್ ಮತ್ತು ಲಿಂಕ್ ರಸ್ತೆಗೆ ಎಲ್ಲಾ ಜಮೀನನ್ನು ಹಸ್ತಾಂತರಿಸುವಂತೆ ಕೋರಿದೆ. ಸರ್ಕಾರ ಮತ್ತು ನೈಸೆಲ್ ಸಂಸ್ಥೆ ಕೋರಿರುವ ಜಮೀನಿನ ವ್ಯಾಪ್ತಿಗಳಲ್ಲಿ ವ್ಯಾಪಕ ವ್ಯತ್ಯಾಸಗಳಿರುವ ಹಿನ್ನೆಲೆಯಲ್ಲಿ ಸರ್ವೋಚ್ಛ ನ್ಯಾಯಾಲಯವು ಈ ಪ್ರಕರಣದಲ್ಲಿ ವಾಸ್ತವಿಕ ದ್ವಂದ್ವಗಳಿದೆ ಎಂದು ದೃಢೀಕರಿಸಿತು. ಈ ಸಂದಿಗ್ಧತೆಯನ್ನು ನಿವಾರಿಸಲು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯ ಉನ್ನತ ಮಟ್ಟದ ಸಮಿತಿ ಕ್ರಮ ಕೈಗೊಳ್ಳಬೇಕೆಂದು ನಿರ್ದೇಶಿಸಿತು. ತತ್ಸಂಬಂಧವಾಗಿ 20.07.2010 ರಂದು ನಡೆಸಲಾದ ಉನ್ನತ ಮಟ್ಟದ ಸಮಿತಿಯ ಸಭೆಯಲ್ಲಿ ನೈಸೆಲ್ ಸಂಸ್ಥೆಗೆ ಪೆರಿಫೆರಲ್ ರಸ್ತೆಗೆ ಅನ್ವಯಿಸುವಂತೆ 554 ಎಕರೆ ಜಮೀನನ್ನು ಹೆಚ್ಚುವರಿಯಾಗಿ ನೀಡಿರುವುದನ್ನು ಸಮಿತಿ ದೃಢೀಕರಿಸಿತು. ಈ ಹಿನ್ನೆಲೆಯಲ್ಲಿ ನೈಸೆಲ್ ಸಂಸ್ಥೆ ಕೋರಿರುವ ಬಾಕಿ 776 ಎಕರೆ ವಿಸ್ತೀರ್ಣದ ಜಮೀನಿನ ಹಸ್ತಾಂತರದ ಅವಶ್ಯಕತೆ ಇರುವುದಿಲ್ಲ ಎಂದು ತೀರ್ಮಾನಿಸಿತು. ಈ ಸಂದರ್ಭದಲ್ಲಿ ರಾಜ್ಯ ಸರ್ಕಾರವು ಸರ್ವೋಚ್ಛ ನ್ಯಾಯಾಲಯದ ಮುಂದೆ ಸೋಮಶೇಖರ ರೆಡ್ಡಿ ತೀರ್ಪನ್ನು ಯಥಾವತ್ತಾಗಿ ಪಾಲಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಪ್ರಮಾಣೀಕರಿಸಿತು. ನೈಸೆಲ್ ಸಂಸ್ಥೆಯೂ ಸಹ ಸರ್ವೋಚ್ಛ ನ್ಯಾಯಾಲಯಕ್ಕೆ ಸೋಮಶೇಖರ ರೆಡ್ಡಿ ತೀರ್ಪು ಹಾಗೂ ಕ್ರಿಯಾ ಒಪ್ಪಂದದಲ್ಲಿ ಪ್ರತಿಪಾದಿಸಿರುವ ಜಮೀನಿನ ಹೊರತಾಗಿ ಬೇರೆ ಅಥವಾ ಹೆಚ್ಚುವರಿ ಜಮೀನನ್ನು ಅಪೇಕ್ಷಿಸುವುದಿಲ್ಲವೆಂದು ಪ್ರತಿಪಾದಿಸಿತು. ಈ ಆಧಾರದ ಮೇಲೆ ಸರ್ವೋಚ್ಛ ನ್ಯಾಯಾಲಯವು 18.01.2011 ರಂದು ಉಚ್ಛ ನ್ಯಾಯಾಲಯಕ್ಕೆ ಒಂದು ವಿಶೇಷ ಪೀಠವನ್ನು ಸೃಜಿಸಿ ಬಾಕಿ ಇರುವ ಪ್ರಕರಣಗಳನ್ನು ಇತ್ಯರ್ಥಗೊಳಿಸುವಂತೆ ಸೂಚಿಸಿತು. ನ್ಯಾಯಾಂಗ ನಿಂದನೆ ಪ್ರಕರಣ ಸರ್ವೋಚ್ಛ ನ್ಯಾಯಾಲಯದಲ್ಲಿ ಪ್ರಸಕ್ತ ಸ್ತರದಲ್ಲಿಯೇ ಇತ್ಯರ್ಥವಾಗದೆ ಉಳಿದಿದೆ.

8. WP ಸಂಖ್ಯೆ.3327/2006 – ಕರ್ನಾಟಕ ವಿಧಾನಸಭೆಯಲ್ಲಿ ಜೂನ್ 2006 ರಲ್ಲಿ ಬಿ.ಎಂ.ಐ.ಸಿ. ಯೋಜನಾ ಅನುಷ್ಠಾನದ ಬಗ್ಗೆ ವ್ಯಾಪಕವಾಗಿ ಚರ್ಚಿಸಲಾಗಿದ್ದು, ಹಲವಾರು ಶಾಸಕರು ಸಿ.ಬಿ.ಐ. ತನಿಖೆಯನ್ನು ಕೋರಿದರು. ಈ ಹಿನ್ನೆಲೆಯಲ್ಲಿ ಸರ್ಕಾರವು ಮಾನ್ಯ ನ್ಯಾಯಮೂರ್ತಿ ಬಿ.ಸಿ. ಪಟೇಲ್ ತನಿಖಾ ಆಯೋಗವನ್ನು ನೇಮಕ ಮಾಡಿತು. ನೈಸೆಲ್ ಸಂಸ್ಥೆಯು ಸರ್ವೋಚ್ಛ ನ್ಯಾಯಾಲಯದ ಮುಂದೆ ವಿಚಾರಣಾ ಆಯೋಗವನ್ನು ರದ್ದುಗೊಳಿಸುವಂತೆ ಮನವಿಯನ್ನು ಸಲ್ಲಿಸಿದ್ದು, ಇದರ ವಿರುದ್ಧ ತಡೆಯಾಜ್ಞೆಯನ್ನು ನೀಡಲಾಯಿತು. ತದನಂತರ 2008 ರಲ್ಲಿ ವಿಚಾರಣಾ ಆಯೋಗವನ್ನು ಸರ್ಕಾರವು ಹಿಂಪಡೆಯಿತು. ಈ ಆಧಾರದ ಮೇಲೆ ನೈಸೆಲ್ ಸಂಸ್ಥೆಯು ಈ ಪ್ರಕರಣವನ್ನು ಸರ್ವೋಚ್ಛ ನ್ಯಾಯಾಲಯದಿಂದ ಹಿಂಪಡೆಯಿತು.

9. WP ಸಂಖ್ಯೆ.2881/2008 – ಮುನೇಗೌಡ ಎಂಬ ವ್ಯಕ್ತಿಯೊಬ್ಬರು ಸಾರ್ವಜನಿಕ ಹಿತಾಸಕ್ತಿ ಪ್ರಕರಣವನ್ನು ದಾಖಲಿಸಿದರು. ಈ ಪ್ರಕರಣದಲ್ಲಿ ಬಿ.ಎಂ.ಐ.ಸಿ. ಯೋಜನೆಯನ್ನು ಸೋಮಶೇಖರ ರೆಡ್ಡಿ ತೀರ್ಪಿನ ಕಂಡಿಕೆ 51ರ ಅನುಗುಣವಾಗಿ ಅನುಷ್ಠಾನಗೊಳಿಸುವಂತೆ ಕೋರಲಾಗಿತ್ತು. ಉಚ್ಛ ನ್ಯಾಯಾಲಯವು ಈ ಕೋರಿಕೆಯನ್ನು ಪರಿಗಣಿಸಿ ರಾಜ್ಯ ಸರ್ಕಾರಕ್ಕೆ ಸೋಮಶೇಖರ ರೆಡ್ಡಿ ತೀರ್ಪಿನ ಅನುಗುಣವಾಗಿ ಯೋಜನೆಯನ್ನು ಅನುಷ್ಠಾನಗೊಳಿಸುವಂತೆ ನಿರ್ದೇಶನ ನೀಡಿ ರಿಟ್ ಅರ್ಜಿಯನ್ನು ವಜಾ ಮಾಡಿತು.

10. WP ಸಂಖ್ಯೆ.23593/2008 – ಕನ್ನಡದ ಖ್ಯಾತ ಸಾಹಿತಿ ಹಾಗೂ ಜ್ಞಾನಪೀಠ ಪುರಸ್ಕೃತರಾದ ದಿವಂಗತ ಯು.ಆರ್. ಅನಂತಮೂರ್ತಿಯವರು, ಬಿ.ಎಂ.ಐ.ಸಿ. ಯೋಜನೆಯ ಅನುಷ್ಠಾನದಲ್ಲಾಗಿರುವ ಅವ್ಯವಹಾರಗಳ ಬಗ್ಗೆ ಈ ಪ್ರಕರಣವನ್ನು ದಾಖಲಿಸಿದರು. ಈ ಪ್ರಕರಣವನ್ನು ನ್ಯಾಯಾಂಗ ನಿಂದನೆ ಪ್ರಕರಣ 96/2007ರ ಜೊತೆಗೆ ಸೇರ್ಪಡೆ ಮಾಡಲಾಗಿದೆ.

11. WP ಸಂಖ್ಯೆ.573/2009 – ದಲಿತ ಸಂಘರ್ಷ ಸಮಿತಿಯ ಪರವಾಗಿ ಶ್ರೀ ವಿ. ನಾಗರಾಜ್ ಎನ್ನುವವರು ಸಾರ್ವಜನಿಕ ಹಿತಾಸಕ್ತಿ ಅಡಿಯಲ್ಲಿ ಈ ಪ್ರಕರಣವನ್ನು ಹೂಡಿದರು. ಈ ಪ್ರಕರಣದಲ್ಲಿ ನೈಸೆಲ್/ನೀಸೆಲ್ ಸಂಸ್ಥೆ ಕಾಂಕ್ರೀಟ್ ರಸ್ತೆಯ ಬದಲಾಗಿ ಡಾಂಬರು ರಸ್ತೆಯನ್ನು ಅನುಷ್ಠಾನಗೊಳಿಸಿರುವ ಹಿನ್ನೆಲೆಯಲ್ಲಿ ಟೋಲ್ ವಿಧಿಸಿ ಸಂಗ್ರಹಿಸುವ ಅಧಿಕಾರವಿಲ್ಲವೆಂದು ಪ್ರತಿಪಾದಿಸಲಾಯಿತು. ಇದಲ್ಲದೆ, ಟೋಲ್ ರಸ್ತೆ ಬಿ.ಡಿ.ಎ. ನಿರ್ಮಿಸಿರುವ ಪೆರಿಫರಲ್ ರಸ್ತೆಯ ಪಥದಲ್ಲಿ ಅನುಷ್ಠಾನಗೊಳಿಸಬೇಕಾಗಿತ್ತು ಎಂದು ವಾದಿಸಲಾಯಿತು. ಉಚ್ಛ ನ್ಯಾಯಾಲಯವು ಈ ಪ್ರಕರಣವನ್ನು ರದ್ದು ಮಾಡಿತು.

12. SLP ಸಂಖ್ಯೆ.12880/2009 – ಮೇಲೆ ಉಲ್ಲೇಖಿಸಿರುವ ತೀರ್ಪನ್ನು ಪ್ರಶ್ನಿಸಿ ಸರ್ವೋಚ್ಛ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ದಾಖಲಿಸಲಾಯಿತು. ಸರ್ವೋಚ್ಛ ನ್ಯಾಯಾಲಯವು ಈ ಪ್ರಕರಣವನ್ನು ರದ್ದುಗೊಳಿಸಿತು. ಈ ಹಿನ್ನೆಲೆಯಲ್ಲಿ ನೈಸೆಲ್ ಸಂಸ್ಥೆ ಅನುಷ್ಠಾನಗೊಳಿಸಿರುವ ಪೆರಿಫರಲ್ ಮತ್ತು ಲಿಂಕ್ ರಸ್ತೆಯ ಪಥಗಳಿಗೆ ಸಂಬಂಧಿಸಿದ ವಿವಾದವು ತಾರ್ಕಿಕ ಅಂತ್ಯಕ್ಕೆ ತಲುಪಿದ್ದು, ಇದನ್ನು ಪ್ರಶ್ನಿಸಲು ಸಾಧ್ಯವಿಲ್ಲ ಎಂದು ಆದೇಶಿಸಿತು.

13. WP ಸಂಖ್ಯೆ.1771/2009 –ಮಾಜಿ ಪ್ರಧಾನಿ ಶ್ರೀ ಹೆಚ್.ಡಿ. ದೇವೇಗೌಡ ಅವರು ಬಿ.ಎಂ.ಐ.ಸಿ. ಯೋಜನಾ ಅನುಷ್ಠಾನದಲ್ಲಾಗಿರುವ ವ್ಯಾಪಕ ಅವ್ಯವಹಾರಗಳ ಬಗ್ಗೆ ಒಂದು ಪುಸ್ತಕವನ್ನು ಪ್ರಕಟಿಸಿದರು. ಈ ಪ್ರಕಟಣೆಯ ಉಲ್ಲೇಖಗಳ ಆಧಾರದ ಮೇಲೆ ಉಚ್ಛ ನ್ಯಾಯಾಲಯವು 02.02.2009 ರಂದು ಸಾರ್ವಜನಿಕ ಹಿತಾಸಕ್ತಿ ಪ್ರಕರಣವನ್ನು ಸ್ವಯಂಪ್ರೇರಿತವಾಗಿ ದಾಖಲಿಸಿ, ಬಿ.ಎಂ.ಐ.ಸಿ. ಯೋಜನಾ ಅನುಷ್ಠಾನದ ಅವ್ಯವಹಾರಗಳ ಬಗ್ಗೆ ಲೋಕಾಯುಕ್ತ ವತಿಯಿಂದ ತನಿಖೆ ಜಾರಿಗೊಳಿಸುವಂತೆ ಆದೇಶಿಸಿತು.

14. SLP ಸಂಖ್ಯೆ.3312/2009 - ನೈಸೆಲ್ ಸಂಸ್ಥೆಯು ಈ SLP ಮುಖಾಂತರ WP ಸಂಖ್ಯೆ.1234/2009 ಕ್ಕೆ ಅನ್ವಯಿಸುವಂತೆ ಸರ್ವೋಚ್ಛ ನ್ಯಾಯಾಲಯದಿಂದ ತಡೆಯಾಜ್ಞೆಯನ್ನು ಪಡೆಯಿತು.

15. WP ಸಂಖ್ಯೆ. 3438/2010 ಮತ್ತು ಇತರ ಪ್ರಕರಣಗಳು- ಮಾನ್ಯ ಉಚ್ಛ ನ್ಯಾಯಾಲಯವು ಬಾಕಿ ಇರುವ ಎಲ್ಲಾ ಪ್ರಕರಣಗಳನ್ನು ಹಾಗೂ ಮೇಲ್ಮನವಿಗಳನ್ನು ಇತ್ಯರ್ಥಗೊಳಿಸಲು ಒಂದು ವಿಶೇಷ ಪೀಠವನ್ನು ಸೃಜಿಸಿತು. ಉಚ್ಛ ನ್ಯಾಯಾಲಯವು ಭೂಮಾಲೀಕರ/ನೈಸೆಲ್ ಮತ್ತು ಸರ್ಕಾರದ ವಾದ ಪ್ರತಿವಾದಗಳನ್ನು ಪರಿಗಣಿಸಿ ಅಂತಿಮ ತೀರ್ಪನ್ನು ದಿನಾಂಕ 15.06.2011 ರಂದು ಪ್ರಕಟಿಸಿತು. ಈ ತೀರ್ಪಿನಲ್ಲಿ ಭೂಸ್ವಾಧೀನವನ್ನು ಕೆಲವು ಗಂಭೀರ ಕಂಡಿಕೆಗಳೊಂದಿಗೆ ದೃಢೀಕರಿಸಲಾಯಿತು. ಪ್ರಮುಖ ಅಂಶಗಳು ಕೆಳಕಂಡಂತಿದೆ:

i. ಯೋಜನೆಗೆ ಅವಶ್ಯವಿರುವ ಭೂಮಿಯನ್ನು ಈವರೆವಿಗೂ ಗುರುತಿಸಿರುವುದಿಲ್ಲ.
ii. ನೈಸ್ ಸಂಸ್ಥೆಯ ನೌಕರರ ಪರವಾಗಿ ನೀಡಲಾಗಿರುವ ಖರೀದಿ ನಿರಾಪೇಕ್ಷಣಾ ಪತ್ರಗಳ ಬಗ್ಗೆ ತನಿಖೆಯ ಅವಶ್ಯಕತೆ ಇದೆ. ಏಕೆಂದರೆ, ಈ ನಿರಾಪೇಕ್ಷಣಾ ಪತ್ರವನ್ನು ಸ್ವಾಧೀನಪಡಿಸಿಕೊಳ್ಳಲಾದ ಭೂಮಿಯ ಖರೀದಿಗೆ ನೀಡಲಾಗಿದೆ.
iii. 14,337 ಎಕರೆ ಖಾಸಗಿ ಜಮೀನಿಗೆ ನೀಡಲಾದ ಮುದ್ರಾಂಕ ಮತ್ತು ನೋಂದಣಿ ಶುಲ್ಕ ರಿಯಾಯಿತಿಯ ಬಗ್ಗೆ ತನಿಖೆಯ ಅವಶ್ಯಕತೆ ಇದೆ. ಏಕೆಂದರೆ, ಈ ನಿರ್ಧಾರ ಸಚಿವ ಸಂಪುಟದ ನಿರ್ಧಾರಗಳಿಗೆ ವ್ಯತಿರಿಕ್ತವಾಗಿದೆ. ಹಾಗೂ ಖಾಸಗಿ ಜಮೀನಿನ ವಿಸ್ತೀರ್ಣವನ್ನು ತಪ್ಪಾಗಿ ದೃಢೀಕರಿಸಲಾಗಿದೆ.
iv. ಬಿ.ಎಂ.ಐ.ಸಿ. ಯೋಜನೆಯ ರಸ್ತೆಯ ಪಥವನ್ನು 12.02.2004ರ ಓ.ಡಿ.ಪಿ ಅನುಗುಣವಾಗಿ ದೃಢೀಕರಿಸಲಾಗಿದೆ.

ಈ ನಿರ್ಧಾರಗಳ ಪೈಕಿ ಕ್ರಮ ಸಂಖ್ಯೆ 4 ರಲ್ಲಿ ಉಲ್ಲೇಖಿಸಿರುವ ನಿರ್ಧಾರ ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನ ವಿರುದ್ಧವಾಗಿರುತ್ತದೆ. ಏಕೆಂದರೆ, ಸರ್ವೋಚ್ಛ ನ್ಯಾಯಾಲಯವು ಸೋಮಶೇಖರ ರೆಡ್ಡಿ ತೀರ್ಪನ್ನು ದೃಢೀಕರಿಸಿದ್ದು, ಕ್ರಿಯಾ ಒಪ್ಪಂದವನ್ನು ವಾಸ್ತವಿಕವಾಗಿ ಹಾಗೂ ತಾತ್ವಿಕವಾಗಿ ಪಾಲಿಸಬೇಕು ಎಂದು ನಿರ್ದೇಶಿಸಿದೆ. ಈ ತೀರ್ಪಿನ ಹಿನ್ನೆಲೆಯಲ್ಲಿ ಪ್ರಸ್ತಾವಿತ ಪ್ರಕರಣದಲ್ಲಿ Principles of Res-Judicata ನ್ಯಾಯಾಂಗದಿಂದಲೇ ಉಲ್ಲಂಘನೆಯಾಗಿದೆ ಎಂಬ ಅಭಿಪ್ರಾಯ ಮೇಲ್ನೋಟಕ್ಕೆ ವ್ಯಕ್ತವಾಗುತ್ತದೆ. ಆದಾಗ್ಯೂ, ಪ್ರಸಕ್ತ ಸ್ಥಿತಿಯಲ್ಲಿ ಈ ಪ್ರಕರಣದ ಇನ್ನೂ ತಾರ್ಕಿಕ ಅಂತ್ಯಕ್ಕೆ ತಲುಪದೇ ಇರುವ ಹಿನ್ನೆಲೆಯಲ್ಲಿ ಸಮಿತಿಯು ಈ ಪ್ರಕರಣಕ್ಕೆ ಸಂಬಂಧಿಸಿದ ಮೇಲ್ಮನವಿಯ ತೀರ್ಪಿಗೆ ಬದ್ಧವಾಗಿರುತ್ತದೆ.

16. SLP ಸಂಖ್ಯೆ.36477/2011 - ನೈಸೆಲ್ ಸಂಸ್ಥೆಯು ಉಚ್ಛ ನ್ಯಾಯಾಲಯದ ಮೇಲೆ ಉಲ್ಲೇಖಿಸಿರುವ 15/06/2011ರ ತೀರ್ಪಿನ ಚುನಾಯಿತ ಕಂಡಿಕೆಗಳನ್ನು ರದ್ದುಪಡಿಸುವಂತೆ ಕೋರಿ ಈ ದಾವೆಯನ್ನು ಹೂಡಿರುತ್ತದೆ. ಸಮಾನಾಂತರವಾಗಿ ಕೆಲವು ಆಸಕ್ತ ಭೂಮಾಲೀಕರು 15.06.2011ರ ತೀರ್ಪನ್ನು ಪ್ರಶ್ನಿಸಿ ಸರ್ವೋಚ್ಛ ನ್ಯಾಯಾಲಯದ ಮುಂದೆ ಮನವಿಯನ್ನು

ಸಲ್ಲಿಸಿರುತ್ತಾರೆ. ಸರ್ವೋಚ್ಛ ನ್ಯಾಯಾಲಯವು ಈ ಮನವಿಯನ್ನು ಪುರಸ್ಕರಿಸಿ ಪ್ರಕರಣ ಪ್ರಗತಿಯಲ್ಲಿದೆ.

ಉಚ್ಛ ನ್ಯಾಯಾಲಯದ ಹಾಗೂ ಸರ್ವೋಚ್ಛ ನ್ಯಾಯಾಲಯದ ತೀರ್ಪು/ಆದೇಶಗಳಿಗೆ ಸಂಬಂಧಿಸಿದಂತೆ ಸಮಿತಿಯ ವಿಶ್ಲೇಷಣೆ ಈ ಕೆಳಕಂಡಂತಿದೆ:

1. ಶ್ರೀ ಜೆ.ಸಿ. ಮಾಧುಸ್ವಾಮಿ ಹಾಗೂ ಶ್ರೀ ಜಿ.ವಿ. ಶ್ರೀರಾಮರೆಡ್ಡಿ ಪ್ರಕರಣದಲ್ಲಿ ಉಚ್ಛ ನ್ಯಾಯಾಲಯವು 50 ಸಾವಿರ ರೂ.ಗಳ ದಂಡವನ್ನು ವಿಧಿಸಿರುವುದನ್ನು ಸಮಿತಿಯು ಗಮನಿಸಿದೆ. ಕ್ರಿಯಾ ಒಪ್ಪಂದವನ್ನು ಪ್ರಶ್ನಿಸಿರುವ ಆಧಾರದ ಮೇಲೆ ಈ ದಂಡವನ್ನು ವಿಧಿಸಲಾಗಿದೆ. ಸಮಾನಾಂತರವಾಗಿ ಸರ್ವೋಚ್ಛ ನ್ಯಾಯಾಲಯವು ರಾಜ್ಯ ಸರ್ಕಾರದ ಮೇಲೆ ಕ್ರಿಯಾ ಒಪ್ಪಂದವನ್ನು ಪ್ರಶ್ನಿಸಿರುವ ಆಧಾರದ ಮೇಲೆ 5 ಲಕ್ಷ ರೂ.ಗಳ ದಂಡವನ್ನು ವಿಧಿಸಿರುವುದನ್ನು ಸಮಿತಿ ಗಮನಿಸಿದೆ.

2. ಕರ್ನಾಟಕ ಸರ್ಕಾರವು ರಿಟ್ ಅರ್ಜಿ ಸಂಖ್ಯೆ.96/2007ಕ್ಕೆ ಸಂಬಂಧಿಸಿದಂತೆ ಯೋಜನೆಯನ್ನು ಸೋಮಶೇಖರ ರೆಡ್ಡಿ ತೀರ್ಪಿನ ಅನುಗುಣವಾಗಿ ಹಾಗೂ ಉಚ್ಛ ನ್ಯಾಯಾಲಯದ ಹಾಗೂ ಸರ್ವೋಚ್ಛ ನ್ಯಾಯಾಲಯದ ತೀರ್ಪಿಗನುಗುಣವಾಗಿ ಅನುಷ್ಠಾನಗೊಳಿಸುವುದಾಗಿ ಪ್ರಮಾಣ ಪತ್ರವನ್ನು ನೀಡಿರುವುದನ್ನು ಸಮಿತಿ ಗಮನಿಸಿದೆ. ಇದಕ್ಕೆ ಪೂರಕವಾಗಿ ರಾಜ್ಯ ಸರ್ಕಾರವು ಸರ್ವೋಚ್ಛ ನ್ಯಾಯಾಲಯದ ಮುಂದೆಯೂ ಸಹ ಮೂಲವಾಗಿ ಸೃಜನೆಯಾದ ಯೋಜನೆಯ ಅನುಗುಣವಾಗಿ, ವಾಸ್ತವಿಕವಾಗಿ ಹಾಗೂ ತಾತ್ವಿಕವಾಗಿ ಸೋಮಶೇಖರ ರೆಡ್ಡಿ ತೀರ್ಪಿನ ಪ್ರಕರಣದ ಅನುಗುಣವಾಗಿ ಯೋಜನೆಯನ್ನು ಅನುಷ್ಠಾನಗೊಳಿಸುವುದಾಗಿ ಪ್ರಮಾಣೀಕರಿಸಿದೆ.

3. ಮೇಲೆ ವಿವರಿಸಿರುವ ಅಂಶಗಳಿಗೆ ಪೂರಕವಾಗಿ ನೈಸೆಲ್ ಸಂಸ್ಥೆ ಹಲವಾರು ಪ್ರಕರಣಗಳಲ್ಲಿ ಜಮೀನಿನ ಅವಶ್ಯಕತೆಯನ್ನು 20,193 ಎಕರೆಗಳಿಗೆ ಸೀಮಿತಗೊಳಿಸುವುದಾಗಿ ಪ್ರಮಾಣೀಕರಿಸಿರುವುದನ್ನು ಸಮಿತಿ ಗಮನಿಸಿದೆ. ನೈಸೆಲ್ ಸಂಸ್ಥೆಯು ಉಚ್ಛ ನ್ಯಾಯಾಲಯ ಹಾಗೂ ಸರ್ವೋಚ್ಛ ನ್ಯಾಯಾಲಯಗಳ ಮುಂದೆ ಕ್ರಿಯಾ ಒಪ್ಪಂದದಲ್ಲಿ ಉಲ್ಲೇಖಿಸಲಾಗಿರುವ 20,193 ಎಕರೆಯನ್ನು ಹೊರತುಪಡಿಸಿ ಹೆಚ್ಚುವರಿ ಅಥವಾ ವಿಭಿನ್ನವಾದ ಜಮೀನಿಗೆ ಬೇಡಿಕೆ ಸಲ್ಲಿಸುವುದಿಲ್ಲ ಎಂದು ಪ್ರಮಾಣೀಕರಿಸಿರುವುದನ್ನು ಸಮಿತಿ ಗಮನಿಸಿದೆ. ಸಮಿತಿಯು 18.01.2011ರಂದು ನೈಸೆಲ್ ಸಂಸ್ಥೆಯು ಸರ್ವೋಚ್ಛ ನ್ಯಾಯಾಲಯದ ಮುಂದೆ ಇದೇ ಆಧಾರದ ಮೇಲೆ ನೀಡಿರುವ ಧ್ಯೇಯೋದ್ದೇಶಗಳನ್ನು ಸಮಿತಿ ಪರಿಗಣಿಸಿದೆ. ನೈಸೆಲ್ ಸಂಸ್ಥೆ ಕ್ರಿಯಾ ಒಪ್ಪಂದದ ಅನುಗುಣವಾಗಿ ಯೋಜನಾ ಅನುಷ್ಠಾನಕ್ಕೆ ಬದ್ಧವಾಗಿರುವ ಅಂಶವನ್ನು ಸಮಿತಿ ಗಮನಿಸಿದೆ. ಈ ಹಿನ್ನೆಲೆಯಲ್ಲಿ ಭೂಮಿ ನಿರ್ವಹಣೆಗೆ ಸಂಬಂಧಿಸಿದಂತೆ ವಿವಾದ ತಾರ್ಕಿಕ ಅಂತ್ಯಕ್ಕೆ ತಲುಪಿದೆ ಎಂದು ಸಮಿತಿ ತೀರ್ಮಾನಿಸುತ್ತದೆ.

4. ಸಮಿತಿಯು ಸರ್ವೋಚ್ಛ ನ್ಯಾಯಾಲಯ ಹಾಗೂಉಚ್ಛ ನ್ಯಾಯಾಲಯಗಳ ಮುಂದೆ ನೀಡಿರುವ ಪ್ರಮಾಣ ಪತ್ರಗಳನ್ನು ಗಮನಿಸಿದಾಗ ಬಿ.ಎಂ.ಐ.ಸಿ. ಯೋಜನೆಯ ಭೂಮಿ ನಿರ್ವಹಣೆ ವಿವಾದಾತ್ಮಕ ಹಂತವನ್ನು ತಲುಪಿರುವುದು ಅನಪೇಕ್ಷಿತ ಸಂದಿಗ್ಧತೆಗೆ ಕಾರಣವಾಗಿದೆ ಎಂದು ತೀರ್ಮಾನಿಸುತ್ತದೆ. ಈ ಹಿನ್ನೆಲೆಯಲ್ಲಿ ಸಮಿತಿಯು ತೀರ್ಪನ್ನು ಅವಲೋಕನ ಮಾಡುವ

ಹಿತದೃಷ್ಟಿಯಿಂದ ಈ ಕೆಳಕಂಡ ಪ್ರಶ್ನೆಗಳಿಗೆ ತಾರ್ಕಿಕ ಹಾಗೂ ಕಾನೂನು ಬದ್ಧ ತೀರ್ಮಾನಗಳನ್ನು ಕೈಗೊಳ್ಳುವುದು ಅವಶ್ಯಕ ಎಂದು ತೀರ್ಮಾನಿಸುತ್ತದೆ:

i. ಸರ್ವೋಚ್ಚ ನ್ಯಾಯಾಲಯವು 20.04.2006 ರಂದು ನೀಡಿರುವ ಅಂತಿಮ ತೀರ್ಪಿನ ಹಿನ್ನೆಲೆಯಲ್ಲಿ, ಉದ್ಭವಿಸಿರುವ ವಿವಾದಗಳಿಗೆ ಕಾರಣಗಳೇನು?

ii. ಕ್ರಿಯಾ ಒಪ್ಪಂದದ ಅನುಗುಣವಾಗಿ ನೈಸೆಲ್ ಸಂಸ್ಥೆ 13,237 ಎಕರೆಗಳ ಖಾಸಗಿ ಜಮೀನನ್ನು ಪಡೆಯುವುದಕ್ಕೆ ಸೀಮಿತವಾಗಿದೆಯೇ?

iii. ಇದೇ ರೀತಿ 6,956 ಎಕರೆಗಳ ಸರ್ಕಾರಿ ಜಮೀನನ್ನು ಯೋಜನಾ ಅನುಷ್ಠಾನಕ್ಕೆ ಪಡೆಯುವುದಕ್ಕಾಗಿ ನೈಸೆಲ್ ಸಂಸ್ಥೆ ಸೀಮಿತವಾಗಿದೆಯೇ?

iv. ಖಾಸಗಿ ಪಾಲುದಾರರು ಹಾಗೂ ರಾಜ್ಯ ಸರ್ಕಾರ ಈ ಎರಡೂ ಭಾಗಿದಾರರು ಕ್ರಿಯಾ ಒಪ್ಪಂದವನ್ನು ಸೋಮಶೇಖರ ರೆಡ್ಡಿ ತೀರ್ಪಿನ ಅನುಗುಣವಾಗಿ ಪಾಲಿಸಲು ಬದ್ಧವಾಗಿರುವಾಗ ನೈಸೆಲ್ ಸಂಸ್ಥೆ ರಾಜ್ಯ ಸರ್ಕಾರದ ವಿರುದ್ಧ ಸರ್ವೋಚ್ಚ ನ್ಯಾಯಾಲಯದಲ್ಲಿ ನ್ಯಾಯಾಂಗ ನಿಂದನೆ ಅರ್ಜಿ ದಾಖಲಿಸಲು ಕಾರಣಗಳೇನು?

ಮೇಲೆ ಪ್ರತಿಪಾದಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸಮಿತಿಯು ಕ್ರಿಯಾ ಒಪ್ಪಂದ ಹಾಗೂ ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನ ಆಧಾರದ ಮೇಲೆಒಪ್ಪಂದದ ನಿರ್ವಹಣೆ, ಭೂಮಿ ನಿರ್ವಹಣೆ ಹಾಗೂ ಯೋಜನಾ ಅನುಷ್ಠಾನದ ಸಮಗ್ರ ನೀತಿ ನಿರ್ಧಾರಗಳು, ಪರಿಷ್ಕರಣೆಗಳು, ತಿದ್ದುಪಡಿಗಳು, ವಾಸ್ತವಿಕ ಸ್ಥಿತಿಗತಿಗಳು ಈ ಅಂಶಗಳ ಹಿನ್ನೆಲೆಯಲ್ಲಿ ಈ ವರದಿಯಲ್ಲಿ ವಿಶ್ಲೇಷಣೆಯನ್ನು ಕೈಗೊಳ್ಳಲಾಗಿದೆ.

ಆದಾಗ್ಯೂ, ಸಮಿತಿಯು ಯೋಜನಾ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಟೋಲ್ ರಸ್ತೆಗೆ 6999 ಎಕರೆಗಳ ಅವಶ್ಯಕತೆ ಹಾಗೂ 5 ನಗರ ಸಮುಚ್ಚಯಗಳಿಗೆ 13,194 ಎಕರೆಗಳ ಅವಶ್ಯಕತೆ ಅಂದರೆ ಕ್ರೋಢೀಕೃತವಾಗಿ 20,193 ಎಕರೆ ವಿಸ್ತೀರ್ಣದ ಜಮೀನಿನ ಅವಶ್ಯಕತೆಯನ್ನು ವಿಶ್ಲೇಷಿಸುವುದು ಅಸಮರ್ಪಕ ಎಂದು ತೀರ್ಮಾನಿಸುತ್ತದೆ. ಏಕೆಂದರೆ, ಈಗಾಗಲೇ ಸೋಮಶೇಖರ ರೆಡ್ಡಿ ಹಾಗೂ ಇದಕ್ಕೆ ಸಂಬಂಧಿತ ವಿವಿಧ ಸ್ತರದ ನ್ಯಾಯಾಲಯಗಳ ತೀರ್ಪಿನಡಿಯಲ್ಲಿ ಈ ವಿಷಯ ಇತ್ಯರ್ಥವಾಗಿದೆ. ***ಈ ಎಲ್ಲಾ ಅಂಶಗಳ ಹಿನ್ನಲೆಯಲ್ಲಿ ಈ ವರದಿಯಲ್ಲಿ ಮಾಡಿರುವ ವಿಶ್ಲೇಷಣೆ, ಶಿಫಾರಸ್ಸು, ತೀರ್ಮಾನ ಹಾಗೂ ಅಭಿಪ್ರಾಯಗಳು ಉಚ್ಛ ನ್ಯಾಯಾಲಯದ ಹಾಗೂ ಸರ್ವೋಚ್ಛ ನ್ಯಾಯಾಲಯದ ತೀರ್ಪು ಹಾಗೂ ಆದೇಶದ ನಿರ್ಬಂಧನೆಗಳಿಗೆ ಒಳಪಟ್ಟಿರುವುದು ಅತ್ಯಾವಶ್ಯಕ ಎಂದು ಸಮಿತಿ ತೀರ್ಮಾನಿಸುತ್ತದೆ. ತೆರವಾಗದ ತಡೆಯಾಜ್ಞೆಗಳು, ಮೇಲ್ಮನವಿಗಳು, ಮಧ್ಯಂತರ ಆದೇಶಗಳು ಹಾಗೂ ಇತ್ಯರ್ಥವಾಗದ/ಬಾಕಿ ಇರುವ ನ್ಯಾಯಾಂಗ ನಿಂದನೆಯ ಪ್ರಕರಣಗಳ ಅಂತಿಮ ತೀರ್ಪು ಹಾಗೂ ಆದೇಶಗಳ ನಿರ್ಬಂಧನೆಗೆ ಈ ವರದಿ ಒಳಪಟ್ಟಿರುತ್ತದೆ.***

ಉಚ್ಛ ನ್ಯಾಯಾಲಯಗಳ ಹಾಗೂ ಸನ್ಮಾನ್ಯ ಸರ್ವೋಚ್ಛ ನ್ಯಾಯಾಲಯಗಳ ತೀರ್ಪಿನ ವ್ಯಾಖ್ಯಾನದ ಪ್ರಮುಖ ಅಂಶಗಳು:

1. ಶ್ರೀಯುತರುಗಳಾದ ಜಿ.ವಿ. ಶ್ರೀರಾಮರೆಡ್ಡಿ ಹಾಗೂ ಜೆ.ಸಿ. ಮಾಧುಸ್ವಾಮಿ ಇವರಿಗೆ ಉಚ್ಛ ನ್ಯಾಯಾಲಯದಲ್ಲಿ ಕ್ರಿಯಾ ಒಪ್ಪಂದವನ್ನು ಪ್ರಶ್ನಿಸಿರುವ ಆಧಾರದ ಮೇಲೆ 50000 ರೂ.ಗಳ ದಂಡವನ್ನು ವಿಧಿಸಿರುವುದನ್ನು ಸಮಿತಿಯು ಗಮನಿಸಿದೆ. ಸೋಮಶೇಖರ ರೆಡ್ಡಿ ಪ್ರಕರಣದ

ತೀರ್ಪಿನಲ್ಲಿ ಇತ್ಯರ್ಥವಾದ ಆದೇಶದ ವಿರುದ್ಧ ಪ್ರಕರಣ ದಾಖಲಿಸಿರುವ ಆಧಾರದ ಮೇಲೆ ಈ ಕ್ರಮವನ್ನು ಕೈಗೊಳ್ಳಲಾಗಿದೆ. ಮುಂದುವರಿದಂತೆ ಸರ್ವೋಚ್ಛ ನ್ಯಾಯಾಲಯವು ರಾಜ್ಯ ಸರ್ಕಾರಕ್ಕೆ 03.04.1997 ರಂದು ಜಾರಿಗೊಳಿಸಲಾದ ಕ್ರಿಯಾ ಒಪ್ಪಂದದಲ್ಲಿ ಉಲ್ಲೇಖಿಸಲಾದ ಜಮೀನನ್ನು ಕಡಿತಗೊಳಿಸಲು ಪ್ರಯತ್ನಿಸಿದೆ ಎಂಬ ಆಧಾರದ ಮೇಲೆ 5 ಲಕ್ಷ ರೂ.ಗಳ ದಂಡವನ್ನು ವಿಧಿಸಿರುವುದನ್ನು ಸಮಿತಿಯು ಗಮನಿಸಿದೆ.

2. ರಾಜ್ಯ ಸರ್ಕಾರವು ಸರ್ವೋಚ್ಛ ನ್ಯಾಯಾಲಯದ ಬಳಿ ನ್ಯಾಯಾಂಗ ನಿಂದನೆ ಪ್ರಕರಣ 96/2007 ಕ್ಕೆ ಅನ್ವಯಿಸುವಂತೆ, ಕ್ರಿಯಾ ಒಪ್ಪಂದವನ್ನು ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನ ಅನುಗುಣವಾಗಿ ಅಕ್ಷರಶ: ಹಾಗೂ ತಾತ್ವಿಕವಾಗಿ ಅನುಷ್ಠಾನಗೊಳಿಸುವುದಾಗಿ ಪ್ರಮಾಣೀಕರಿಸಿರುವುದನ್ನು ಸಮಿತಿ ಗಮನಿಸಿದೆ. ಇದಕ್ಕೆ ಪೂರಕವಾಗಿ ರಾಜ್ಯ ಸರ್ಕಾರವು ವಿವಿಧ ಪ್ರಕರಣಗಳಲ್ಲಿ ಕ್ರಿಯಾ ಒಪ್ಪಂದವನ್ನು ಮೂಲವಾಗಿ ಸೃಜಿಸಲಾದ ಸ್ವರೂಪದಲ್ಲಿ ಹಾಗೂ ಉಚ್ಛ ನ್ಯಾಯಾಲಯವು ಸೋಮಶೇಖರ ರೆಡ್ಡಿ ತೀರ್ಪಿನ ಅನುಗುಣವಾಗಿ ಅನುಷ್ಠಾನಗೊಳಿಸುವುದಾಗಿ ಪ್ರಮಾಣೀಕರಿಸಿದೆ.

3. ಇದಕ್ಕೆ ಪೂರಕವಾಗಿ ಸಮಿತಿಯು ನೈಸೆಲ್ ಸಂಸ್ಥೆಯು ಯೋಜನಾ ಅನುಷ್ಠಾನಕ್ಕೆ ಜವಾಬ್ದಾರಿಯುತರಾದ ವಿವಿಧ ಇಲಾಖೆಗಳಿಗೆ ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನ ಅನುಗುಣವಾಗಿ 20,193 ಎಕರೆಗಳಿಗೆ ಜಮೀನಿನ ಅವಶ್ಯಕತೆಯನ್ನು ಕಟ್ಟುನಿಟ್ಟಾಗಿ ನಿರ್ಬಂಧಿಸುವುದಾಗಿ ಉಲ್ಲೇಖಿಸಿರುವುದನ್ನು ಸಮಿತಿಯು ಗಮನಿಸಿದೆ. ಇದೇ ಸ್ತರದಲ್ಲಿ ಸರ್ವೋಚ್ಛ ನ್ಯಾಯಾಲಯ ಹಾಗೂ ಉಚ್ಛ ನ್ಯಾಯಾಲಯಗಳ ಮುಂದೆ ನೈಸೆಲ್ ಸಂಸ್ಥೆಯು ತೀರ್ಪಿಗೆ ಬದ್ಧರಾಗಿ ಯೋಜನೆಯನ್ನು ಅನುಷ್ಠಾನಗೊಳಿಸುವುದಾಗಿ ಪ್ರಮಾಣೀಕರಿಸಿರುವುದನ್ನು ಸಮಿತಿಯು ಗಮನಿಸಿದೆ. ಸರ್ವೋಚ್ಛ ನ್ಯಾಯಾಲಯದ ಮುಂದೆ 18.01.2011 ರಂದು ನೈಸೆಲ್ ಸಂಸ್ಥೆಯು ಕ್ರಿಯಾ ಒಪ್ಪಂದವನ್ನು ಯಥಾವತ್ತಾಗಿ ಪಾಲಿಸುವುದಾಗಿ ಪ್ರಮಾಣೀಕರಿಸಿದೆ.

4. ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಈ ಯೋಜನೆಯ ಪಾಲುದಾರರಾದ ನೈಸೆಲ್/ನೀಸೆಲ್ ಹಾಗೂ ರಾಜ್ಯ ಸರ್ಕಾರ ಕ್ರಿಯಾ ಒಪ್ಪಂದವನ್ನು ತಾತ್ವಿಕವಾಗಿ ಹಾಗೂ ಅಕ್ಷರಶ: ಪಾಲಿಸುವುದಕ್ಕೆ ಬದ್ಧರಾಗಿರುವುದು ಸ್ಪಷ್ಟವಾಗಿದೆ. ಈ ಹಿನ್ನೆಲೆಯಲ್ಲಿ ಸಮಿತಿಯು ಪ್ರಸಕ್ತ ವಿವಾದಾತ್ಮಕ ಬೆಳವಣಿಗೆಗಳನ್ನು ಸಮಿತಿಯ ಕಾರ್ಯವ್ಯಾಪ್ತಿಯ ಮಿತಿಗಳಿಗೆ ಒಳಪಟ್ಟಂತೆ ಈ ಕೆಳಕಂಡಂತೆ ವಿಶ್ಲೇಷಿಸುತ್ತದೆ:

***03.04.1997 ರಂದು ಅನುಷ್ಠಾನಗೊಳಿಸಲಾದ ಕ್ರಿಯಾ ಒಪ್ಪಂದದ ಷೆಡ್ಯೂಲ್-1 ಅನುಗುಣವಾಗಿ 6999 ಎಕರೆ ಸರ್ಕಾರಿ ಜಮೀನು ಹಾಗೂ 13.124 ಖಾಸಗಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವ ಅವಶ್ಯಕತೆಯಿರುತ್ತದೆ. ಈ ಅಂತಿ ಅಂಶಗಳನ್ನು ಸರ್ವೋಚ್ಛ ನ್ಯಾಯಾಲಯವು ಹಾಗೂ ಉಚ್ಛ ನ್ಯಾಯಾಲಯವು ಸೋಮಶೇಖರ ರೆಡ್ಡಿ ತೀರ್ಪಿನ ಅನುಗುಣವಾಗಿ ದೃಢೀಕರಿಸಿ ನಿರ್ದೇಶನಗಳನ್ನು ಜಾರಿಗೊಳಿಸಿದೆ.***

ಆದಾಗ್ಯೂ, ದಿನಾಂಕ 14.10.1998 ರಂದು ಖಾಸಗಿ ಪಾಲುದಾರರು ಕೆ.ಐ.ಎ.ಡಿ.ಬಿ. ಸಂಸ್ಥೆಯೊಡನೆ 23,846 ಎಕರೆ ಖಾಸಗಿ ಜಮೀನಿನ ಸ್ವಾಧೀನಕ್ಕೆ ಒಪ್ಪಂದವನ್ನು ಜಾರಿಗೊಳಿಸಿರುತ್ತಾರೆ. ಇದಕ್ಕೆ ಪೂರಕವಾಗಿ ದಿನಾಂಕ 23.11.1999 ರಂದು 5688 ಎಕರೆ ಸರ್ಕಾರಿ ಜಮೀನನ್ನು ಯೋಜನೆಗೆ ಹಸ್ತಾಂತರಿಸುವ ಬಗ್ಗೆ ಒಡಂಬಡಿಕೆಯನ್ನು ಜಾರಿಗೊಳಿಸಲಾಗಿದೆ.

ಮೂಲವಾಗಿ ದಿನಾಂಕ 03.06.1997 ರಂದು ಯೋಜನಾ ಸಮನ್ವಯತೆಯ ಸಮಗ್ರ ಜವಾಬ್ದಾರಿಯನ್ನು ಹೊಂದಿರುವ ಲೋಕೋಪಯೋಗಿ ಇಲಾಖೆಯು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಗೆ ಗ್ರಾಮಗಳು

ಹಾಗೂ ಸರ್ವೆ ನಂಬರುಗಳನ್ನೊಳಗೊಂಡ ತ:ಖ್ತೆಯ ಮುಖಾಂತರ ಜಮೀನಿನ ಅವಶ್ಯಕತೆಯನ್ನು ಸಲ್ಲಿಸಿರುತ್ತಾರೆ. ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯು ಈ ತ:ಖ್ತೆಯನ್ನು 14.07.1997 ರಂದು ಕೆ.ಐ.ಎ.ಡಿ.ಬಿ. ಸಂಸ್ಥೆಗೆ ಹಸ್ತಾಂತರಿಸಿದೆ. ಕೆ.ಐ.ಎ.ಡಿ.ಬಿ. ಸಂಸ್ಥೆಯು ಈ ವಿವರಗಳನ್ನು ಕಡೆಗಣಿಸಿ ಯೋಜನಾ ಸಂಸ್ಥೆಯ ಕೋರಿಕೆಯ ಅನುಗುಣವಾಗಿ ಭೂ ಸ್ವಾಧೀನವನ್ನು ಜಾರಿಗೊಳಿಸಿರುವುದು ಸಮಿತಿಗೆ ಸ್ಪಷ್ಟವಾಗಿದೆ. ಏಕೆಂದರೆ, 22.05.2004ರ ಉಲ್ಲೇಖದಲ್ಲಿ ವಿಶೇಷ ಜಿಲ್ಲಾಧಿಕಾರಿ (ಭೂಸ್ವಾಧೀನ), ಕೆ.ಐ.ಎ.ಡಿ.ಬಿ. ಇವರು ಭೂಸ್ವಾಧೀನ ಅಧಿಸೂಚನೆಯನ್ನು ಖಾಸಗಿ ಪಾಲುದಾರರು ಸಲ್ಲಿಸಿರುವ ಅವಶ್ಯಕತೆಯ ಅನುಗುಣವಾಗಿ ಜಾರಿಗೊಳಿಸಿರುವುದಾಗಿ ದೃಢೀಕರಿಸಿರುತ್ತಾರೆ. ಇದಕ್ಕೆ ಪೂರಕವಾಗಿ ಭೂಸ್ವಾಧೀನವನ್ನು ಲೋಕೋಪಯೋಗಿ ಇಲಾಖೆ ಅನುಮೋದಿಸಿದ ಯಾವುದೇ ತಾಂತ್ರಿಕ ವಿನ್ಯಾಸ, ನಕ್ಷೆಯ ಆಧಾರದ ಮೇಲೆ ಅಥವಾ ಯೋಜನಾ ವರದಿಯ ಆಧಾರದ ಮೇಲೆ ಜಾರಿಗೊಳಿಸಲಾಗಿಲ್ಲ ಎಂದು ದೃಢೀಕರಿಸಿರುತ್ತಾರೆ. ಈ ವೈಫಲ್ಯತೆಯಿಂದಾಗಿ ಕೆ.ಐ.ಎ.ಡಿ.ಬಿ. ಅಧಿನಿಯಮ 3(1)ರ ಅಡಿಯಲ್ಲಿ 29,267.33 ಎಕರೆಗಳ ಜಮೀನಿನ ಸ್ವಾಧೀನಕ್ಕೆ ಕ್ರಮ ಜಾರಿಗೊಳಿಸಿರುವುದು ಸಮಿತಿಗೆ ಸ್ಪಷ್ಟವಾಗಿದೆ. 2ನೇ ಹಂತದಲ್ಲಿ 28(1)ರ ಅಡಿಯಲ್ಲಿ 18,818.36 ಎಕರೆ ಜಮೀನಿನ ವಿಸ್ತೀರ್ಣಕ್ಕೆ ನೋಟೀಸನ್ನು ಜಾರಿಗೊಳಿಸಲಾಗಿದೆ. ಈ ವಿಸ್ತೀರ್ಣ ಕ್ರಿಯಾ ಒಪ್ಪಂದದಲ್ಲಿ ದೃಢೀಕರಿಸಲಾದ ಜಮೀನಿಗಿಂತ ಹೆಚ್ಚುವರಿಯಾಗಿರುತ್ತದೆ.

ಮುಂದುವರಿದಂತೆ ಪ್ರಸ್ತಾವಿತ 28(1) ಅಧಿಸೂಚನೆಯ ವಿರುದ್ಧ 4810.04 ಎಕರೆಗಳಿಗೆ 28(4) ಅಂತಿಮ ಅಧಿಸೂಚನೆಯನ್ನು ಜಾರಿಗೊಳಿಸಲಾಗಿದೆ. ಈ ಜಮೀನನ್ನು ಯೋಜನೆಯ ಸೆಕ್ಷನ್ 'ಎ' ಹಾಗೂ ಟೌನ್‌ಶಿಪ್ ಅಭಿವೃದ್ಧಿಗಾಗಿ ಸ್ವಾಧೀನಪಡಿಸಿಕೊಳ್ಳಲಾಗಿದೆ ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. ವಾಸ್ತವಿಕವಾಗಿ ಮಂಡಳಿಯು 2158.27 ಎಕರೆ ಜಮೀನನ್ನು ಖಾಸಗಿ ಪಾಲುದಾರರಿಗೆ ಹಸ್ತಾಂತರಿಸಿದ್ದು, ಈ ಪೈಕಿ 1824.16 ಎಕರೆ ಜಮೀನಿಗೆ ಅನ್ವಯಿಸುವಂತೆ ಪರಿಹಾರವನ್ನು ಘೋಷಿಸಲಾಗಿದೆ. ಬಾಕಿ 344.03 ಎಕರೆಗಳಿಗೆ ಸಂಬಂಧಿಸಿದಂತೆ ಪರಿಹಾರದ ಘೋಷಣೆ ಬಾಕಿ ಇರುತ್ತದೆ.

344.03 ಎಕರೆ ಜಮೀನಿಗೆ ಅನ್ವಯಿಸುವಂತೆ ಪರಿಹಾರ ಘೋಷಣೆಯ ವಿಳಂಬವನ್ನು ಪ್ರಶ್ನಿಸಿ ಖಾಸಗಿ ಪಾಲುದಾರರು ಉಚ್ಛ ನ್ಯಾಯಾಲಯದ ಮುಂದೆ ರಿಟ್ ಅರ್ಜಿ ಸಂಖ್ಯೆ. 35638-35639/2012 ಅನ್ನು ದಾಖಲಿಸಿರುತ್ತಾರೆ. ಈ ಪ್ರಕರಣದಲ್ಲಿ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಭೂಸ್ವಾಧೀನಾಧಿಕಾರಿ 1 ಮತ್ತು 2 ಇವರನ್ನು ಪ್ರತಿವಾದಿಗಳನ್ನಾಗಿ ಸೂಚಿಸಲಾಗಿದೆ. ಆದರೆ ಯೋಜನಾ ಅನುಷ್ಠಾನದ ಸಮಗ್ರ ಸಮನ್ವಯತೆಯ ಜವಾಬ್ದಾರಿಯನ್ನು ಹೊಂದಿರುವ ಲೋಕೋಪಯೋಗಿ ಇಲಾಖೆಯನ್ನು ಈ ರಿಟ್ ಅರ್ಜಿಯಲ್ಲಿ ಸೇರ್ಪಡೆ ಮಾಡಿರುವುದಿಲ್ಲ. ತತ್ಸಂಬಂಧವಾಗಿ ಮಧ್ಯಂತರ ಪ್ರಮಾಣ ಪತ್ರ 4/2013ರ ಮುಖಾಂತರ ಕೆ.ಐ.ಎ.ಡಿ.ಬಿ. ಸಂಸ್ಥೆಯು ಈ ವೈಫಲ್ಯತೆಯ ಬಗ್ಗೆ ಉಚ್ಛ ನ್ಯಾಯಾಲಯಕ್ಕೆ ಮನವಿಯನ್ನು ಸಲ್ಲಿಸಿರುತ್ತದೆ. ಉಚ್ಛ ನ್ಯಾಯಾಲಯವು ಈ ಮನವಿಯನ್ನು ತಿರಸ್ಕರಿಸಿ ದಿನಾಂಕ 29.11.2013 ರಂದು ಸಂಬಂಧಿತ ಭೂಸ್ವಾಧೀನಾಧಿಕಾರಿಗಳಿಗೆ ಪರಿಹಾರವನ್ನು 6 ತಿಂಗಳೊಳಗಾಗಿ ಘೋಷಿಸುವಂತೆ ನಿರ್ದೇಶಿಸಿರುವುದನ್ನು ಸಮಿತಿಯು ಗಮನಿಸಿದೆ.

ಈ ಹಿನ್ನೆಲೆಯಲ್ಲಿ ದಿನಾಂಕ 29.11.2013ರ ತೀರ್ಪಿಗೆ ಲಗತ್ತಿಸಲಾದ ಅನುಬಂಧ-ಎ ರಲ್ಲಿ ಉಲ್ಲೇಖಿಸಲಾದ ಜಮೀನಿನ ವಿವರಗಳನ್ನು ಲೋಕೋಪಯೋಗಿ ಇಲಾಖೆ ಪರಿಶೀಲಿಸಿದೆ. ಈ ಪರಿಶೀಲನೆಯ ಅನುಗುಣವಾಗಿ ಪರಿಹಾರ ಘೋಷಿಸಲು ಬಾಕಿ ಇರುವ 344.03 ಎಕರೆಗಳ ಖಾಸಗಿ ಜಮೀನಿನ ಪೈಕಿ 103.32 ಎಕರೆ ವಿಸ್ತೀರ್ಣದ ಜಮೀನು ತಳಕುಪ್ಪೆ ಹಾಗೂ ಭೀಮನಹಳ್ಳಿ ವ್ಯಾಪಿಯಲ್ಲಿದ್ದು, ಬೆಂಗಳೂರಿನಿಂದ ಹೊರಡುವ 13.5 ಕಿ.ಮೀ. ಎಕ್ಸ್‌ಪ್ರೆಸ್ ವೇ ನಿರ್ಮಾಣಕ್ಕೆ ಅವಶ್ಯಕತೆ ಇದೆ ಎಂಬ

ಅಭಿಪ್ರಾಯ ವ್ಯಕ್ತವಾಗುತ್ತದೆ. ಕೆ.ಐ.ಎ.ಡಿ.ಬಿ. ಅಧಿನಿಯಮ 28(2)ರ ಅಡಿಯಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಪರಿಹಾರ ಸಲಹಾ ಸಮಿತಿಯು 19.07.2014 ರಂದು ಈ ಜಮೀನಿಗೆ ನೀಡಬಹುದಾದ ಪರಿಹಾರದ ಬಗ್ಗೆ ತೀರ್ಮಾನವನ್ನು ಕೈಗೊಂಡಿರುವುದು ದಾಖಲಾತಿಗಳಿಂದ ಸಮಿತಿಗೆ ಸ್ಪಷ್ಟವಾಗಿದೆ. ಪ್ರಸ್ತಾವಿತ ಸಭೆಯಲ್ಲಿ ನೈಸೆಲ್ ಹಾಗೂ ನೀಸೆಲ್ ಸಂಸ್ಥೆಗಳ ಪ್ರತಿನಿಧಿಗಳು ಪಾಲ್ಗೊಂಡಿರುತ್ತಾರೆ. ಆದರೆ ನಡವಳಿಗಳಲ್ಲಿ ಹಾಜರಾತಿಯನ್ನು ದಾಖಲಿಸಿರುವುದಿಲ್ಲ. ಬಾಕಿ ಇರುವ 240 ಎಕರೆ ಜಮೀನಿನ ಪೈಕಿ 143 ಎಕರೆಗಳು ಪೆರಿಫರೆಲ್ ರಸ್ತೆಯ ವ್ಯಾಪ್ತಿಗೆ ಒಳಪಟ್ಟಿದ್ದು, 60 ಎಕರೆ ಲಿಂಕ್ ರಸ್ತೆಯ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಎಕ್ಸ್‌ಪ್ರೆಸ್ ವೇಗೆ ಸಂಬಂಧಿಸಿದಂತೆ 336.09 ಎಕರೆ ವಿಸ್ತೀರ್ಣದ ಜಮೀನಿನ ಅವಶ್ಯಕತೆ ಇರುತ್ತದೆ. ವಾಸ್ತವಿಕವಾಗಿ 112.01 ಎಕರೆ ಜಮೀನು ಯೋಜನಾ ಅನುಷ್ಠಾನಕ್ಕೆ ಅವಶ್ಯಕತೆಯಿದ್ದು, ಉಳಿದ 127.28 ಎಕರೆ ಜಮೀನು ಯೋಜನಾ ಅನುಷ್ಠಾನದ ಯಾವುದೇ ಘಟಕಕ್ಕೆ ಅವಶ್ಯಕವಿಲ್ಲದಿರುವುದರಿಂದ ಕ್ರಿಯಾ ಒಪ್ಪಂದದ ಹೊರತಾಗಿದೆ ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. ಈ ಅಂಶವನ್ನು ಗಮನಿಸಿದಾಗ 20.04.2006 ರಂದು ಸರ್ವೋಚ್ಛ ನ್ಯಾಯಾಲಯವು ನೀಡಿರುವ ಆದೇಶಕ್ಕೆ ವ್ಯತಿರಿಕ್ತವಾಗಿ ಹೆಚ್ಚುವರಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. ನಿರ್ದಿಷ್ಟವಾಗಿ 18.01.2011 ರಂದು ಖಾಸಗಿ ಪಾಲುದಾರರ ವಕೀಲರು ಕ್ರಿಯಾ ಒಪ್ಪಂದಕ್ಕೆ ವಿಭಿನ್ನವಾಗಿ ಅಥವಾ ಹೆಚ್ಚುವರಿಯಾಗಿ ಯಾವುದೇ ಜಮೀನನ್ನು ಪಡೆಯುವುದಿಲ್ಲವೆಂದು ಮಾಡಿರುವ ಪ್ರತಿಪಾದನೆಯ ಸ್ಪಷ್ಟ ಹಾಗೂ ನೇರ ಉಲ್ಲಂಘನೆಯಾಗಿರುತ್ತದೆ.

ಈ ಅಂಶವನ್ನು ಕ್ರಿಯಾ ಒಪ್ಪಂದದ ಅನುಚ್ಛೇದ 22.2 ಹಿನ್ನೆಲೆಯಲ್ಲಿ ವಿಶ್ಲೇಷಿಸುವುದು ಅವಶ್ಯಕವೆಂದು ಸಮಿತಿ ತೀರ್ಮಾನಿಸುತ್ತದೆ. ಈ ಅನುಚ್ಛೇದದ ಅನುಗುಣವಾಗಿ ಕ್ರಿಯಾ ಒಪ್ಪಂದಕ್ಕೆ ಜಾರಿಗೊಳಿಸಲಾಗುವ ಪರಿಷ್ಕರಣೆಗಳು, ತಿದ್ದುಪಡಿಗಳು, ಪೂರಕ ಒಪ್ಪಂದಗಳು ಖಾಸಗಿ ಹಾಗೂ ಸರ್ಕಾರಿ ಪಾಲುದಾರರ ಅಧಿಕೃತ ಪ್ರತಿನಿಧಿಗಳ ಸಹಿಯ ನಿರ್ಬಂಧನೆಗೆ ಒಳಪಟ್ಟಿರುತ್ತದೆ. ಇದಲ್ಲದೆ, ಕಾನೂನು ಇಲಾಖೆಯು ಟಿಪ್ಪಣಿ ಸಂಖ್ಯೆ.ಲಾ/234/ಅಭಿಪ್ರಾಯ-2/1999 ದಿನಾಂಕ 23.04.1999ರ ಮುಖಾಂತರ ಕ್ರಿಯಾ ಒಪ್ಪಂದದಲ್ಲಿ ಜಾರಿಗೊಳಿಸಲಾಗುವ ಬದಲಾವಣೆಗಳನ್ನು ಸಚಿವ ಸಂಪುಟದ ಅನುಮೋದನೆಯೊಂದಿಗೆ ಜಾರಿಗೊಳಿಸುವುದು ಕಡ್ಡಾಯ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತದೆ. ಮೂಲ ಒಪ್ಪಂದವನ್ನು ಸಚಿವ ಸಂಪುಟ ಸಮಗ್ರವಾಗಿ ಪರಿಗಣಿಸಿ, ಅನುಮೋದಿಸಿರುವ ಹಿನ್ನೆಲೆಯಲ್ಲಿ ಈ ಅಭಿಪ್ರಾಯವನ್ನು ನೀಡಲಾಗಿದೆ. ಈ ಹಿನ್ನೆಲೆಯಲ್ಲಿ ಯೋಜನಾ ತಾಂತ್ರಿಕ ವರದಿಯಲ್ಲಿ ನಮೂದಿಸಲಾದ ಸರ್ವೆ ನಂಬರುಗಳು ಹಾಗೂ ಗ್ರಾಮಗಳನ್ನು ಟೌನ್‌ಶಿಪ್‌ಗೆ ಅನ್ವಯಿಸುವಂತೆ ಬದಲಾವಣೆ ಮಾಡಿರುವುದು ಕ್ರಿಯಾ ಒಪ್ಪಂದವನ್ನು ಪರಿಷ್ಕರಣೆ ಅಥವಾ ತಿದ್ದುಪಡಿ ಮಾಡಿದಂತೆ ಎಂದು ಸಮಿತಿಯು ತೀರ್ಮಾನಿಸುತ್ತದೆ. ಅನುಚ್ಛೇದ 22.2ರ ಅನುಗುಣವಾಗಿ ಹಾಗೂ ಕಾನೂನು ಇಲಾಖೆಯ ಅಭಿಪ್ರಾಯದ ಅನುಗುಣವಾಗಿ ಈ ಮಾರ್ಪಾಡುಗಳು ಅಥವಾ ಬದಲಾವಣೆಗಳನ್ನು ಸಚಿವ ಸಂಪುಟದ ಅನುಮೋದನೆಯ ನಂತರ ಜಾರಿಗೊಳಿಸಬೇಕಾಗಿರುವುದು ಅತ್ಯವಶ್ಯಕ ಎಂದು ಸಮಿತಿ ತೀರ್ಮಾನಿಸುತ್ತದೆ. ಇದಲ್ಲದೆ, ಈ ಬದಲಾವಣೆಗಳಿಗೆ ಅನ್ವಯಿಸುವಂತೆ ಖಾಸಗಿ ಪಾಲುದಾರರು ಯಾವುದೇ ಪೂರಕ ಒಪ್ಪಂದವನ್ನು ಜಾರಿಗೊಳಿಸಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಟೋಲ್ ರಸ್ತೆ ಹಾಗೂ ನಗರ ಸಮುಚ್ಛಯ-1 ಕ್ಕೆ ಅನ್ವಯಿಸುವಂತೆ ಜಾರಿಗೊಳಿಸಲಾದ ಬದಲಾವಣೆಗಳು ಮಾನ್ಯ ಉಚ್ಛ ನ್ಯಾಯಾಲಯದ ದಾವೆ ಸಂಖ್ಯೆ.45324/2004 ದಿನಾಂಕ 03.05.2005 ರ ಕಂಡಿಕೆ ಸಂಖ್ಯೆ.29ರ ನಿರ್ಬಂಧನೆಗೆ ಒಳಪಟ್ಟಿದೆ ಎಂಬ ಅಭಿಪ್ರಾಯ ಸಮಿತಿಗೆ ಮೇಲ್ನೋಟಕ್ಕೆ ವ್ಯಕ್ತವಾಗುತ್ತದೆ. ಏಕೆಂದರೆ, ಈ ತೀರ್ಪಿನ ಪ್ರಮುಖ ಅಂಶ ಕೆಳಕಂಡಂತಿರುತ್ತದೆ:

"ಕ್ರಿಯಾ ಒಪ್ಪಂದವನ್ನು ಸಕ್ಷಮ ಎಂದು ತೀರ್ಮಾನಿಸಲಾಗಿದೆ. ಕ್ರಿಯಾ ಒಪ್ಪಂದದ ಶೆಡ್ಯೂಲ್-1 ಅದರ ಒಂದು ಅವಿಭಾಜ್ಯ ಅಂಗವಾಗಿದೆ. ಈ ವಿಷಯಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯವು ಅಂತಿಮ ನಿರ್ಧಾರವನ್ನು ಪ್ರಕಟಿಸಿದ್ದು, ರಾಜ್ಯ ಸರ್ಕಾರವಾಗಲೀ, ಜೆ.ಸಿ. ಮಾಧುಸ್ವಾಮಿಯವರಾಗಲೀ, ಇತರರಾಗಲೀ ಅಥವಾ ಈ ನ್ಯಾಯಾಲಯವಾಗಲೀ ಪುನ: ಪರಿಶೀಲಿಸುವುದು ಸಾಧ್ಯವಿರುವುದಿಲ್ಲ".

ಈ ಕಂಡಿಕೆಯನ್ನು ಗಮನಿಸಿದಾಗ ದಿನಾಂಕ 12.02.2004 ರ ಓ.ಡಿ.ಪಿ. ಅಲೈನ್‌ಮೆಂಟ್ ಸಹ ಕ್ರಿಯಾ ಒಪ್ಪಂದದ ಶೆಡ್ಯೂಲ್-1ಗೆ ವ್ಯತಿರಿಕ್ತವಾಗಿರುವುದನ್ನು ಸಮಿತಿಯು ಗಮನಿಸುವುದು ಅನಿವಾರ್ಯವಾಗುತ್ತದೆ. ಉಚ್ಚ ನ್ಯಾಯಾಲಯವು 21.09.1998 ರಂದು ಸೋಮಶೇಖರ ರೆಡ್ಡಿ ಪ್ರಕರಣದಲ್ಲಿ ಟೌನ್‌ಶಿಪ್‌ಗಳನ್ನು ಎಕ್ಸ್‌ಪ್ರೆಸ್ ವೇ ಸಂಪೂರ್ಣಗೊಳಿಸಿದ ನಂತರ ಜಾರಿಗೊಳಿಸಬೇಕೆಂದು ನಿರ್ದೇಶಿಸಿದೆ. ಆದರೆ, ಈವರೆವಿಗೂ ಸಾಧಿಸಲಾದ ಭೌತಿಕ ಪ್ರಗತಿಯನ್ನು ಗಮನಿಸಿದಲ್ಲಿ ಎಕ್ಸ್‌ಪ್ರೆಸ್ ವೇ ಭಾಗದಲ್ಲಿ ಕೇವಲ 5 ಕಿ.ಮೀ. ವ್ಯಾಪ್ತಿಗೆ ರಸ್ತೆಯನ್ನು ಸಂಪೂರ್ಣಗೊಳಿಸಿದ್ದು, ಈ ಬೆಳವಣಿಗೆ ನ್ಯಾಯಾಲಯಗಳ ತೀರ್ಪಿಗೆ ವ್ಯತಿರಿಕ್ತವಾಗಿದೆ ಎಂಬ ಅಭಿಪ್ರಾಯ ಮೇಲ್ನೋಟಕ್ಕೆ ವ್ಯಕ್ತವಾಗುತ್ತದೆ. ಈ ಹಿನ್ನೆಲೆಯಲ್ಲಿ ಸಮಿತಿಯು ಈ ಕೆಳಕಂಡಂತೆ ಶಿಫಾರಸ್ಸುಗಳನ್ನು ಮಾಡುತ್ತದೆ:

1. ಪ್ರಕರಣ 3638-39/2012 ರಲ್ಲಿ ಲೋಕೋಪಯೋಗಿ ಇಲಾಖೆಯನ್ನು ಸೇರ್ಪಡೆ ಮಾಡುವ ಪ್ರಸ್ತಾವನೆಯನ್ನು ಕಾನೂನು ಇಲಾಖೆಯು ಈ ಕೂಡಲೇ ಪರಿಗಣಿಸುವುದು ಅವಶ್ಯಕ.

2. ನ್ಯಾಯಾಂಗ ನಿಂದನೆ ಪ್ರಕರಣ 144/2006 ಹಾಗೂ 96/2007 ಈ ಪ್ರಕರಣಗಳನ್ನು ಇತ್ಯರ್ಥಗೊಳಿಸುವ ಪೂರ್ವದಲ್ಲಿ ಕ್ರಿಯಾ ಒಪ್ಪಂದದ ನೇರ ಹಾಗೂ ಸ್ಪಷ್ಟ ಉಲ್ಲಂಘನೆಗೆ ಸಂಬಂಧಿಸಿದಂತೆ ಸಂಬಂಧಿತ ನ್ಯಾಯಾಲಯಗಳಿಗೆ ಪ್ರತಿಪಾದನೆಗಳನ್ನು ಮಂಡಿಸುವುದು.

3. 20.04.2006 ರಂದು ಸರ್ವೋಚ್ಚ ನ್ಯಾಯಾಲಯದ ಮುಂದೆ ತೀರ್ಪಿನ ಅನುಗುಣವಾಗಿ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ಇರುವ ಸಂದಿಗ್ಧತೆಯ ಬಗ್ಗೆ ಸಲ್ಲಿಸಿರುವ ಪ್ರಮಾಣ ಪತ್ರಗಳಿಗೆ ಖಾಸಗಿ ಪಾಲುದಾರರಿಂದ ಪ್ರತ್ಯುತ್ತರವನ್ನು ತ್ವರಿತವಾಗಿ ಪಡೆಯುವುದು.

4. ಈಗಾಗಲೇ ಖಾಸಗಿ ಪಾಲುದಾರರಿಗೆ ಹಸ್ತಾಂತರಿಸಿರುವ ಜಮೀನು ಕ್ರಿಯಾ ಒಪ್ಪಂದಕ್ಕಿಂತ ಹೆಚ್ಚುವರಿಯಾಗಿರುವ ಅಥವಾ ವಿಭಿನ್ನವಾಗಿರುವ ಪ್ರಕರಣಗಳಲ್ಲಿ ಕ್ರಿಯಾ ಒಪ್ಪಂದದ ಉಲ್ಲಂಘನೆಯ ಆಧಾರದ ಮೇಲೆ ಪ್ರಕರಣವನ್ನು ಹೂಡುವುದು.

5. *ನ್ಯಾಯಾಂಗ ನಿಂದನೆ ಪ್ರಕರಣ 96/2007 ಹಾಗೂ 144/2006 ಅನ್ನು ತ್ವರಿತವಾಗಿ ನಿಗದಿತ ಕಾಲಮಿತಿಯಲ್ಲಿ ಇತ್ಯರ್ಥಗೊಳಿಸಲು ಕ್ರಮ ಕೈಗೊಳ್ಳುವುದು.*

ಮೂಲಭೂತವಾಗಿ ದಿನಾಂಕ 20.11.1995 ರ ಆದೇಶದ ಅನುಗುಣವಾಗಿ ರಾಜ್ಯ ಸರ್ಕಾರವು ಟೋಲ್ ರಸ್ತೆ ನಿರ್ಮಾಣಕ್ಕೆ 5,119 ಎಕರೆ ವಿಸ್ತೀರ್ಣದ ಜಮೀನಿನ ಅವಶ್ಯಕತೆಯನ್ನು ದೃಢೀಕರಿಸಿದೆ. ಸಚಿವ ಸಂಪುಟದ ಟಿಪ್ಪಣಿ ಸಂಖ್ಯೆ ಲೋಇ:32:ಸಿಎಸ್‌ಆರ್:95 ಮಾರ್ಚ್ 1997 ಅನ್ನು ಅವಲೋಕಿಸಿದಾಗ

5119 ಎಕರೆಗಳ ಬದಲಾಗಿ ಟೋಲ್ ರಸ್ತೆಗೆ 6999 ಎಕರೆಗಳನ್ನು ನೀಡುವ ಬಗ್ಗೆ ಯಾವುದೇ ಉಲ್ಲೇಖವಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಲೋಕೋಪಯೋಗಿ ಇಲಾಖೆಯು 6999 ಎಕರೆಗಳ ಅವಶ್ಯಕತೆಯ ಬಗ್ಗೆ ಸಚಿವ ಸಂಪುಟದ ಅನುಮೋದನೆಯನ್ನು ಪಡೆಯದೇ ಇರುವುದು ವ್ಯಕ್ತವಾಗುತ್ತದೆ. ಆದಾಗ್ಯೂ, ಕ್ರಿಯಾ ಒಪ್ಪಂದದ ಶೆಡ್ಯೂಲ್-1 ರ ಅಡಿಯಲ್ಲಿ ಟೋಲ್ ರಸ್ತೆಯ ಅವಶ್ಯಕತೆಯನ್ನು 6999 ಎಕರೆಗಳು ಎಂದು ನಮೂದಿಸಲಾಗಿದೆ. ಇದೊಂದು ಪ್ರಮುಖ ಗುರುತರ ಲೋಪ ಹಾಗೂ ವ್ಯತ್ಯಾಸ ಎಂದು ಸಮಿತಿ ತೀರ್ಮಾನಿಸುತ್ತದೆ. ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನಲ್ಲಿ ಉಚ್ಛ ಹಾಗೂ ಸರ್ವೋಚ್ಛ ನ್ಯಾಯಾಲಯವು ಯೋಜನಾ ಅನುಷ್ಠಾನಕ್ಕೆ ಅವಶ್ಯಕವಿರುವ ವಿಸ್ತೀರ್ಣವನ್ನು ಅಂತಿಮವಾಗಿ ಇತ್ಯರ್ಥಗೊಳಿಸಿರುವ ಹಿನ್ನೆಲೆಯಲ್ಲಿ ಸಮಿತಿಯು ಈ ವ್ಯತ್ಯಾಸದ ಬಗ್ಗೆ ವಿಶ್ಲೇಷಿಸುವುದು ಅಸಮರ್ಪಕ ಎಂದು ಅನಿವಾರ್ಯವಾಗಿ ತೀರ್ಮಾನಿಸುತ್ತದೆ. ವಾಸ್ತವಿಕವಾಗಿ ಕರಡು ಕ್ರಿಯಾ ಒಪ್ಪಂದ ಹಾಗೂ ಇದರ ಆಧಾರದ ಮೇಲೆ ಲೋಕೋಪಯೋಗಿ ಇಲಾಖೆ ಇತ್ಯರ್ಥಗೊಳಿಸಿದ ಅಂತಿಮ ಕರಡುಗಳ ಅಲಭ್ಯತೆಯ ಹಿನ್ನೆಲೆಯಲ್ಲಿ ಈ ತಿದ್ದುಪಡಿಗೆ ಅಥವಾ ಪರಿಷ್ಕರಣೆಗೆ ಯಾವ ಸ್ತರದಲ್ಲಿ ಕ್ರಮ ಕೈಗೊಳ್ಳಲಾಗಿದೆ ಎಂಬುವುದನ್ನು ಇತ್ಯರ್ಥಗೊಳಿಸುವಲ್ಲಿ ಸಮಿತಿ ನಿಸ್ಸಹಾಯಕವಾಗಿದೆ. ಸಚಿವ ಸಂಪುಟವು ಸೂಚಿಸಿದ ತಿದ್ದುಪಡಿ ಅಥವಾ ಪರಿಷ್ಕರಣೆಗಳನ್ನು ಒಳಗೊಂಡ ಕರಡು ಕ್ರಿಯಾ ಒಪ್ಪಂದ ಕಡತಗಳಲ್ಲಿ ಲಭ್ಯವಿಲ್ಲದೇ ಇರುವುದನ್ನು ಸಮಿತಿ ಖೇದದಿಂದ ಗಮನಿಸಿದೆ.

ಕೆ.ಐ.ಎ.ಡಿ.ಬಿ. ಸಂಸ್ಥೆಯು 14.10.1998 ರಂದು 23,846 ಎಕರೆಗಳ ಖಾಸಗಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಜಾರಿಗೊಳಿಸಿರುವ ಒಡಂಬಡಿಕೆಯನ್ನು ಸಮಿತಿಯು ಗಮನಿಸಿದೆ. ಕ್ರಿಯಾ ಒಪ್ಪಂದದ ಅನುಗುಣವಾಗಿ ಹಾಗೂ ಸೋಮಶೇಖರ ರೆಡ್ಡಿ ತೀರ್ಪಿನ ಪ್ರಕರಣದ ಅನುಗುಣವಾಗಿ ಖಾಸಗಿ ಪಾಲುದಾರರಿಗೆ 13237 ಎಕರೆಗಳನ್ನು ಸ್ವಾಧೀನಪಡಿಸಿಕೊಳ್ಳುವ ಅವಶ್ಯಕತೆಯಿದೆ. ವಾಸ್ತವಿಕವಾಗಿ ಕ್ರಿಯಾ ಒಪ್ಪಂದದಲ್ಲಿ ಭೂಸ್ವಾಧೀನ ಪ್ರಕ್ರಿಯೆಗೆ ಅನ್ವಯಿಸುವಂತೆ ಕೆ.ಐ.ಎ.ಡಿ.ಬಿ. ಸಂಸ್ಥೆಯನ್ನು ಸಕ್ಷಮ ಪ್ರಾಧಿಕಾರವೆಂದು ನಾಮ ನಿರ್ದೇಶನ ಮಾಡಿರುವುದನ್ನು ಸಮಿತಿಯು ಗಮನಿಸಿದೆ. ಆದಾಗ್ಯೂ, ಕ್ರಿಯಾ ಒಪ್ಪಂದವನ್ನು ಉಲ್ಲಂಘಿಸಿ 14.10.1998 ರಂದು ಸಚಿವ ಸಂಪುಟದ ಅನುಮೋದನೆಯನ್ನು ಪಡೆಯದೇ ನೈಸೆಲ್ ಸಂಸ್ಥೆಯೊಡನೆ ಖಾಸಗಿ ಜಮೀನಿನ ಸ್ವಾಧೀನಕ್ಕಾಗಿ ಒಡಂಬಡಿಕೆಯನ್ನು ಜಾರಿಗೊಳಿಸುವುದು ಅಕ್ಷಮ್ಯ ಅಪರಾಧವೆಂದು ಸಮಿತಿಯು ತೀರ್ಮಾನಿಸುತ್ತದೆ. ಈ ಪ್ರಕರಣದಲ್ಲಿ ಸರ್ಕಾರದ ಅಧಿಕಾರದತ್ತ ಸಮಿತಿಯು ಕೆ.ಐ.ಎ.ಡಿ.ಬಿ. ಸಂಸ್ಥೆಗೆ ಒಡಂಬಡಿಕೆ ಹಾಗೂ ಸ್ವಾಧೀನ ಪ್ರಕ್ರಿಯೆಗೆ ಸಚಿವ ಸಂಪುಟದ ಅನುಮೋದನೆಯನ್ನು ಪೂರ್ವಭಾವಿಯಾಗಿ ಪಡೆಯುವಂತೆ ನಿರ್ದೇಶಿಸಿರುವುದು ದಾಖಲಾತಿಗಳಿಂದ ಸಮಿತಿಗೆ ಸ್ಪಷ್ಟವಾಗಿದೆ. ಕೆ.ಐ.ಎ.ಡಿ.ಬಿ. ಸಂಸ್ಥೆಯು ಈ ನಿರ್ದೇಶನವನ್ನು ಉಲ್ಲಂಘಿಸಿ ಸ್ವಯಂ ಪ್ರೇರಿತವಾಗಿ ಒಡಂಬಡಿಕೆಯನ್ನು ಜಾರಿಗೊಳಿಸಿರುವುದು ಅಧಿಕಾರದ ದುರ್ಬಳಕೆ ಅಥವಾ ದುರುಪಯೋಗ ಎಂದು ಸಮಿತಿ ತೀರ್ಮಾನಿಸುತ್ತದೆ. ಕ್ರಿಯಾ ಒಪ್ಪಂದಕ್ಕೆ ವ್ಯತಿರಿಕ್ತವಾಗಿ ಅವಶ್ಯಕತೆಗಿಂತ ಹೆಚ್ಚುವರಿಯಾಗಿ 28(1) ಅಧಿಸೂಚನೆಯಡಿ ಸ್ವಾಧೀನಪಡಿಸಿಕೊಂಡಿರುವ ಜಮೀನಿನಿಂದಾಗಿ ಭೂ ಮಾಲೀಕರು ಅನಿವಾರ್ಯ ಹಾಗೂ ಅನಪೇಕ್ಷಿತ ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಸಮಿತಿಯು ಅಭಿಪ್ರಾಯಪಡುತ್ತದೆ. ಈ ಪ್ರಕರಣದಲ್ಲಿ ಅಧಿಕಾರದತ್ತ ಸಮಿತಿಯು 23,846 ಎಕರೆಗಳ ಖಾಸಗಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವ ಬಗ್ಗೆ ನಿರ್ದಿಷ್ಟ ನಿರ್ದೇಶನವನ್ನು ನೀಡಿರುವುದಿಲ್ಲ.

ಸಮಗ್ರವಾಗಿ ವಿಶ್ಲೇಷಿಸುವುದಾದರೆ ಖಾಸಗಿ ಜಮೀನಿನ ಭೂಸ್ವಾಧೀನ ಹಾಗೂ ಸರ್ಕಾರಿ ಜಮೀನಿನ ಹಸ್ತಾಂತರ, ಮೊದಲನೇ ನಗರ ಸಮುಚ್ಛಯದ ಸ್ಥಳಾಂತರ, ಪಂಕ್ತೀಕರಣದ ಬದಲಾವಣೆ, ಸೆಕ್ಷನ್ 'ಎ' ವ್ಯಾಪ್ತಿಯಲ್ಲಿ ನಿರ್ದಿಷ್ಟವಾಗಿ ಇಂಟರ್ ಛೇಂಜ್ ವ್ಯಾಪ್ತಿಯಲ್ಲಿ ಜಮೀನಿನ ಮಾರಾಟ ಸೌಲಭ್ಯ, ಬಂಡವಾಳ

ಹೂಡಿಕೆಯ ನಿರ್ವಹಣೆ, ಯೋಜನೆಯ ವಿಭಜೀಕರಣ ಹಾಗೂ ಸಮಾನಾಂತರವಾಗಿ ವೇಗದ ಹೆದ್ದಾರಿ ಹಾಗೂ ನಗರ ಸಮುಚ್ಛಯಗಳ ಅಭಿವೃದ್ಧಿಯನ್ನು ಕೈಗೊಳ್ಳುವಲ್ಲಿನ ವೈಫಲ್ಯತೆ ಈ ಅಂಶಗಳಲ್ಲಿ ನೈಸೆಲ್/ನೀಸೆಲ್ ಸಂಸ್ಥೆಯು ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನ ಸಂಬಂಧಿತ ನಿರ್ಧಾರಗಳು ಹಾಗೂ ನಿರ್ದೇಶನಗಳನ್ನು ಉಲ್ಲಂಘಿಸುವಲ್ಲಿ ಪಾತ್ರ ವಹಿಸಿರುವುದು ಅಥವಾ ಈ ಗುರುತರ ಬದಲಾವಣೆಗಳನ್ನು ಪ್ರಸ್ತಾವಿತ ತೀರ್ಪಿನ ಹಿನ್ನೆಲೆಯಲ್ಲಿ ಪರಿಗಣಿಸದೇ ಇರುವುದು ಚಾರಿತ್ರಿಕ ಬೆಳವಣಿಗೆಗಳಿಂದ ಸಮಿತಿಗೆ ಸ್ಪಷ್ಟವಾಗಿದೆ. ಈ ಹಿನ್ನೆಲೆಯಲ್ಲಿ ನ್ಯಾಯಾಲಯದ ತೀರ್ಪಿನ ಅನುಷ್ಠಾನ ಹಾಗೂ ಪಾಲನೆಯ ಬಗ್ಗೆ ಕ್ರಿಯಾ ಒಪ್ಪಂದದ ಸಂಬಂಧಿತ ಅನುಚ್ಛೇಧವಡಿ ಈ ವಿಶ್ಲೇಷಣೆಯನ್ನು ಕೈಗೊಳ್ಳಲಾಗಿದೆ.

***ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನ ಕಂಡಿಕೆ 51 ರ ಅನುಗುಣವಾಗಿ ಪೆರಿಫೆರಲ್ ರಸ್ತೆ ಹಾಗೂ ಪೂರಕ ಅಭಿವೃದ್ಧಿಗಳಿಗೆ 2193 ಎಕರೆ ಜಮೀನಿನ ಅವಶ್ಯಕತೆಯಿರುತ್ತದೆ. ಆದರೆ ಈವರೆವಿಗೂ ಮಂಡಳಿಯು ಈ ಸ್ತರಕ್ಕೆ 2747 ಎಕರೆಗಳನ್ನು ನೀಡಿರುವುದು ದಾಖಲಾತಿಗಳಿಂದ ಸಮಿತಿಗೆ ಸ್ಪಷ್ಟವಾಗಿದೆ. ಅಂದರೆ, ನ್ಯಾಯಾಲಯದ ತೀರ್ಪಿಗೆ ವ್ಯತಿರಿಕ್ತವಾಗಿ 554 ಎಕರೆ ಜಮೀನನ್ನು ಹೆಚ್ಚುವರಿಯಾಗಿ ನೀಡಿರುವುದು ಸ್ಪಷ್ಟವಾಗಿದೆ.***

## *ಕ್ರಿಯಾ ಒಪ್ಪಂದದ ಅನುಚ್ಛೇಧಗಳ ಸಾಧಕ ಬಾಧಕಗಳು ಹಾಗೂ ಪಾಲನೆಯ ಬಗ್ಗೆ ಸಮಿತಿಯ ವಿಶ್ಲೇಷಣೆ ಹಾಗೂ ಶಿಫಾರಸ್ಸುಗಳು*

### *ಪರಿಚಯದ "4th whereas clause" ಬಗ್ಗೆ*

ಈ ಷರತ್ತನ್ನು ವಿಶ್ಲೇಷಿಸಿ ವ್ಯಾಖ್ಯಾನಿಸುವುದು ಅತ್ಯವಶ್ಯಕವೆಂದು ಸಮಿತಿ ತೀರ್ಮಾನಿಸುತ್ತದೆ. ಏಕೆಂದರೆ, ಈ ವರದಿಯ ಒಂದು ಭಾಗದಲ್ಲಿ ಟೋಲ್ ರಸ್ತೆ ನಿರ್ಮಾಣದಲ್ಲಿ ಅದರಲ್ಲೂ ನಿರ್ಧಿಷ್ಟವಾಗಿ ಪೆರಿಫರೆಲ್ ರಸ್ತೆ ಮತ್ತು ಲಿಂಕ್ ರಸ್ತೆ ನಿರ್ಮಾಣದಲ್ಲಿ ಕಾಂಕ್ರೀಟ್ ಪಥದ ಬದಲಾಗಿ ಡಾಂಬರು ರಸ್ತೆಯನ್ನು ನಿರ್ಮಾಣ ಮಾಡಲಾಗಿದೆ ಎಂದು ಪ್ರತಿಪಾದಿಸಲಾಗಿದೆ. ಕಾಂಕ್ರೀಟ್ ರಸ್ತೆ ನಿರ್ಮಾಣಕ್ಕೆ ಸಂಬಂಧಿಸಿದಂತೆ ತಾಂತ್ರಿಕ ವರದಿಯ ಕಂಡಿಕೆ 6.4.1.1 ರಲ್ಲಿ ಉಲ್ಲೇಖಿಸಿರುವ ವಿನ್ಯಾಸವನ್ನು ಪಾಲಿಸುವುದು ನೈಸೆಲ್/ನೀಸ್ ಸಂಸ್ಥೆಯ ಅಧಿಕೃತ ಕರ್ತವ್ಯವಾಗಿರುತ್ತದೆ ಎಂದು ಪ್ರಸ್ತಾಪಿಸಲಾಗಿರುತ್ತದೆ. ಈ ವಿಶ್ಲೇಷಣೆಯು ತಾಂತ್ರಿಕ ವರದಿಯ ಮಾನದಂಡಗಳ ಆಧಾರದ ಮೇಲೆ ಅವಲಂಬಿತವಾಗಿರುವುದರಿಂದ ತಾಂತ್ರಿಕ ವರದಿ ಕ್ರಿಯಾ ಒಪ್ಪಂದದ ಒಂದು ಅವಿಭಾಜ್ಯ ಅಂಗವೇ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಪ್ರಸ್ತಾವಿತ ಷರತ್ತನ್ನು ಉಲ್ಲೇಖಿಸಿದಾಗ ಬಿ.ಎಂ.ಐ.ಸಿ. ಯೋಜನಾ ವ್ಯಾಪ್ತಿಯ ಸಮಗ್ರ ಮೂಲಭೂತ ಸೌಕರ್ಯಗಳು ಸಮರ್ಪಕವಾಗಿ ಅಭಿವೃದ್ಧಿಯಾಗಬೇಕಾದರೆ ಅಥವಾ ಕೈಗಾರಿಕೆ ಹಾಗೂ ವಾಣಿಜ್ಯ ಬಳಕೆಗೆ ಸದುಪಯೋಗವಾಗಲು ಯೋಜನೆಯ ತಾಂತ್ರಿಕ ವರದಿಯಲ್ಲಿ ಪ್ರತಿಪಾದಿಸಿರುವ ಮಾನದಂಡಗಳನ್ನು ಪಾಲಿಸುವುದು ಅತ್ಯವಶ್ಯಕ ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. ಈ ಷರತ್ತನ್ನು ಕ್ರಿಯಾ ಒಪ್ಪಂದದ 7ನೇ ಷರತ್ತಿನ ಉಲ್ಲೇಖದೊಂದಿಗೆ ವಿಶ್ಲೇಷಿಸುವುದು ಅವಶ್ಯಕವಾಗುತ್ತದೆ. 7ನೇ ಷರತ್ತಿನಡಿಯಲ್ಲಿ ರಾಜ್ಯ ಸರ್ಕಾರವು ಆದೇಶ ಸಂಖ್ಯೆ.ಪಿ.ಡಬ್ಲ್ಯು.ಡಿ.32/ಸಿಎಸ್‌ಆರ್/95 ದಿನಾಂಕ 20.11.1995 ಮುಖಾಂತರ ಖಾಸಗಿ ಪಾಲುದಾರರಿಗೆ ಬಿ.ಎಂ.ಐ.ಸಿ. ಕಾರಿಡಾರ್ ಯೋಜನೆಯನ್ನು ನಿರೂಪಿತ ಸಮೂಹವು ಯೋಜನಾ ತಾಂತ್ರಿಕ ವರದಿಯ ಅನುಗುಣವಾಗಿ ಜಾರಿಗೊಳಿಸುವಂತೆ ನಿರ್ದೇಶಿಸಿದೆ. ಈ ಎರಡೂ ಅಂಶಗಳನ್ನು ಪರಿಗಣಿಸಿದಾಗ ಯೋಜನಾ ತಾಂತ್ರಿಕ ವರದಿಯು ಕ್ರಿಯಾ ಒಪ್ಪಂದದ ಅನುಗುಣವಾಗಿ ಹಾಗೂ ಸರ್ಕಾರದ ಉಲ್ಲೇಖಿತ ಆದೇಶದ ಅನುಗುಣವಾಗಿ ಕ್ರಿಯಾ ಒಪ್ಪಂದದ ಒಂದು ಅವಿಭಾಜ್ಯ ಅಂಗವಾಗಿದೆ ಎಂದು ಸಮಿತಿ ತೀರ್ಮಾನಿಸುತ್ತದೆ. ಈ ಹಿನ್ನೆಲೆಯಲ್ಲಿ 03.04.1997ರ ಕ್ರಿಯಾ ಒಪ್ಪಂದವನ್ನು ಆಗಸ್ಟ್ 1995 ರಲ್ಲಿ ಸಲ್ಲಿಸಲಾದ ಯೋಜನಾ ತಾಂತ್ರಿಕ ವರದಿಯೊಂದಿಗೆ ಓದಿಕೊಂಡು ಅನುಷ್ಠಾನ ಮಾಡುವುದು ಖಾಸಗಿ ಪಾಲುದಾರರ ಕರ್ತವ್ಯ ಎಂದು ಸಮಿತಿ ತೀರ್ಮಾನಿಸುತ್ತದೆ. ಇದಕ್ಕೆ ಪೂರಕವಾಗಿ ಯೋಜನಾ ತಾಂತ್ರಿಕ ವರದಿಯು ಕ್ರಿಯಾ ಒಪ್ಪಂದದ ಒಂದು ಅವಿಭಾಜ್ಯ ಅಂಗವೆಂದು ಸಮಿತಿ ತೀರ್ಮಾನಿಸುತ್ತದೆ. ಈ ಹಿನ್ನೆಲೆಯಲ್ಲಿ ಈ ವರದಿಯಲ್ಲಿ ಯೋಜನಾ ತಾಂತ್ರಿಕ ವರದಿಗೆ ಕ್ರಿಯಾ ಒಪ್ಪಂದಕ್ಕೆ ಸಮಾನವಾದ ಆದ್ಯತೆ ಹಾಗೂ ಪರಿಗಣನೆ ನೀಡಲಾಗಿದೆ. ಈ ವರದಿಯ ವಿವಿಧ ಭಾಗಗಳಲ್ಲಿ ಪ್ರತಿಪಾದಿಸಿರುವಂತೆ ಯೋಜನಾ ತಾಂತ್ರಿಕ ವರದಿಯ ಮಾನದಂಡಗಳ ಅನುಗುಣವಾಗಿ ಸೆಕ್ಷನ್ 'ಎ' ವ್ಯಾಪ್ತಿಯಲ್ಲಿ ಖಾಸಗಿ ಪಾಲುದಾರರು ಈವರೆವಿಗೂ ರಸ್ತೆಗಳನ್ನು ನಿರ್ಮಿಸಿರುವುದಿಲ್ಲ.

### I. *ಅನುಚ್ಛೇಧ –1 : ವರದಿಯ ಅರ್ಥೈಸುವಿಕೆ ವ್ಯಾಖ್ಯಾನಗಳ ಬಗ್ಗೆ*

ಕ್ರಿಯಾ ಒಪ್ಪಂದದ ಈ ಉಪ ಷರತ್ತಿನ ಅನುಗುಣವಾಗಿ ಕ್ರಿಯಾ ಒಪ್ಪಂದದ ಉಲ್ಲೇಖಗಳು ಹಾಗೂ ಕ್ರಿಯಾ ಒಪ್ಪಂದಕ್ಕೆ ಪೂರಕ ದಾಖಲಾತಿಗಳಾದ ಅನುಚ್ಛೇಧಗಳು, ಶೆಡ್ಯೂಲುಗಳು, ಕಂಡಿಕೆಗಳು, ಉಪ ಕಂಡಿಕೆಗಳು ಇತ್ಯಾದಿಗಳ ಉಲ್ಲೇಖಗಳನ್ನು ಒಂದೇ ಸ್ತರದ ಉಲ್ಲೇಖ ಎಂದು ಪರಿಗಣಿಸಲು ಅವಕಾಶ

ಕಲ್ಪಿಸಲಾಗಿದೆ. ಆದಾಗ್ಯೂ, "Unless the context otherwise requires" ಎಂಬ ನಿರ್ಬಂಧನೆಯನ್ನು ವಿಧಿಸಲಾಗಿದೆ. ಅಂದರೆ, ಕ್ರಿಯಾ ಒಪ್ಪಂದದ ಪೂರಕ ಉಲ್ಲೇಖಗಳ ಅಥವಾ ದಾಖಲಾತಿಗಳ Interpretation ಪರಿಸ್ಥಿತಿಯ ಅನುಗುಣವಾಗಿ ಮಾಡಬೇಕಾಗುವುದು. ಈ ವಿವರಣೆಯ ಹಿನ್ನೆಲೆಯಲ್ಲಿ ಕ್ರಿಯಾ ಒಪ್ಪಂದದ ಪೂರಕ ದಾಖಲಾತಿಗಳಾದ ಶೆಡ್ಯೂಲ್‌ಗಳನ್ನು ವಿಶ್ಲೇಷಿಸಲಾಗಿದೆ. ವಾಸ್ತವಿಕವಾಗಿ 6 ಶೆಡ್ಯೂಲುಗಳಿದ್ದು, ಈ ಶೆಡ್ಯೂಲುಗಳಲ್ಲಿ ಯೋಜನೆಯ ವಿವಿಧ ಘಟಕಗಳಲ್ಲಿ ಪಾಲಿಸಬೇಕಾದ ವಿಧಿವಿಧಾನಗಳ ಬಗ್ಗೆ ವಿವರಗಳನ್ನು ಉಲ್ಲೇಖಿಸಲಾಗಿದೆ. ಈ ವರದಿಯಲ್ಲಿ ಕ್ರಿಯಾ ಒಪ್ಪಂದದ ಮೂಲ ಅನುಚ್ಛೇಧಗಳ ಉದ್ದೇಶ ಹಾಗೂ ಉಲ್ಲೇಖಗಳ ಅನುಗುಣವಾಗಿ ಪೂರಕ ದಾಖಲಾತಿಗಳ ವಿವರಣೆಯನ್ನು ಅರ್ಥೈಸಲಾಗಿದೆ. ಈ ರೀತಿಯ ವಿವರಣೆ ನಿರ್ದಿಷ್ಟವಾಗಿ ಕ್ರಿಯಾ ಒಪ್ಪಂದದ ಶೆಡ್ಯೂಲ್-1 ಮತ್ತು ಶೆಡ್ಯೂಲ್-4 ಗಳಿಗೆ ಅನ್ವಯಿಸುತ್ತದೆ. ಈ ಷರತ್ತಿನ ಅನುಗುಣವಾಗಿ ಸಂದರ್ಭಾನುಸಾರವಾಗಿ ಕ್ರಿಯಾ ಒಪ್ಪಂದದ ಷರತ್ತುಗಳ ಸ್ವರೂಪದ ಬದಲಾವಣೆಗೆ ಅವಕಾಶವನ್ನು ವಿಸ್ತರಿಸುವ ಪ್ರಯತ್ನವನ್ನು ಮಾಡಲಾಗಿದೆ. **ಈ ನಿರ್ಬಂಧದಿಂದ ಕ್ರಿಯಾ ಒಪ್ಪಂದದ ಅನುಚ್ಛೇಧಗಳನ್ನು ವಿವಿಧ ಸಂದರ್ಭಗಳಲ್ಲಿ, ವಿವಿಧ ಸ್ವರೂಪಗಳಲ್ಲಿ ಅರ್ಥೈಸಲು ಅವಕಾಶವಿದ್ದು, ಕ್ರಿಯಾ ಒಪ್ಪಂದದ ವ್ಯಾಖ್ಯಾನ ಗೊಂದಲಮಯವಾಗುತ್ತದೆ ಎಂದು ಸಮಿತಿ ತೀರ್ಮಾನಿಸುತ್ತದೆ. ಈ ಹಿನ್ನೆಲೆಯಲ್ಲಿ "Unless the context otherwise requires" ಎಂಬ ನಿರ್ಬಂಧನೆಯನ್ನು ಕ್ರಿಯಾ ಒಪ್ಪಂದದಿಂದ ಸೂಕ್ತ ತಿದ್ದುಪಡಿಯ ಮುಖಾಂತರ ಹಿಂಪಡೆಯುವ ಪ್ರಸ್ತಾವನೆಯನ್ನು ಸರ್ಕಾರವು ಪರಿಗಣಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಈ ವರದಿಯಲ್ಲಿ ವಿಶ್ಲೇಷಿಸಿರುವಂತೆ ಭೂಮಿ ನಿರ್ವಹಣೆಗೆ ಸಂಬಂಧಿಸಿದಂತೆ ಅನುಚ್ಛೇಧ-1 ಹಾಗೂ ನಗರ ಸಮುಚ್ಛಯಗಳು ಮತ್ತು ಪೂರಕ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಅನುಚ್ಛೇಧ-4 ಅನ್ನು ಖಾಸಗಿ ಪಾಲುದಾರರು ಉಲ್ಲಂಘಿಸಿರುವುದು ಸ್ಪಷ್ಟವಾಗಿದೆ. ಈ ವ್ಯಾಖ್ಯಾನಗಳ ಅನುಗುಣವಾಗಿ ಅನುಚ್ಛೇಧಗಳ ಉಲ್ಲಂಘನೆ ಕ್ರಿಯಾ ಒಪ್ಪಂದದ ಉಲ್ಲಂಘನೆ ಎಂದು ಅರ್ಥೈಸಬೇಕಾಗುತ್ತದೆ.**

ಕ್ರಿಯಾ ಒಪ್ಪಂದದ 1(e) ಉಪ ಅನುಚ್ಛೇಧವು ಸ್ವಯಂ ವ್ಯತಿರಿಕ್ತವಾಗಿದೆ ಎಂದು ಸಮಿತಿ ತೀರ್ಮಾನಿಸುತ್ತದೆ. ಸಾಮಾನ್ಯವಾಗಿ include ಅಥವಾ including ಎಂಬ ಪದ ಬಳಕೆಯಾದ ತಕ್ಷಣವೇ ಯಾವ ಯಾವ ಅಂಶಗಳು ಸೇರ್ಪಡೆಯಾಗಿದೆ ಎಂದು ಉಲ್ಲೇಖಿಸಲಾಗುತ್ತದೆ. ಆದರೆ, ಈ ಪದಗಳ ಅರ್ಥವನ್ನು ವಿಸ್ತರಿಸಿ ಯಾವುದೇ ಇತಿಮಿತಿಗಳಿಲ್ಲದೆ ಅಥವಾ includes ಕ್ವಾಲಿಫೈ ಮಾಡುವ ಅಂಶಗಳಿಗೂ ಸಹ ಸೀಮಿತವಾಗಿರದೆ, ಅಂದರೆ "but not limited to" ಎಂದು ವ್ಯಾಖ್ಯಾನಿಸಲಾಗಿದೆ. ಇದರಿಂದಾಗಿ includes ಎಂಬ ಪದವು ಅರ್ಥಹೀನವಾಗುತ್ತದೆ. **ಈ ರೀತಿಯ interpretation ಗಳಿಂದಾಗಿ ಖಾಸಗಿ ಪಾಲುದಾರರು ಕ್ರಿಯಾ ಒಪ್ಪಂದದ ಯಾವುದೇ ಭಾಗದಲ್ಲಿ ಈ ಪದ ಬಳಕೆಯಾದಾಗ ಇದು ಸಾರ್ವತ್ರಿಕವಾಗಿ ಅಳವಡಿಕೆಯಾಗುತ್ತದೆ ಎಂದು ಅರ್ಥೈಸಿ ಹಕ್ಕುಗಳನ್ನು ಜಾರಿಗೊಳಿಸಬಹುದಾಗಿದೆ. ಆದುದರಿಂದ ಕ್ರಿಯಾ ಒಪ್ಪಂದದಲ್ಲಿ ಈ ರೀತಿ ಸಾರ್ವತ್ರಿಕವಾಗಿ ಅಥವಾ ಇತಿಮಿತಿಯಿಲ್ಲದೇ ಸೌಲಭ್ಯಗಳನ್ನು ವಿಸ್ತರಿಸುವ ಪದಗಳನ್ನು ನಿರ್ಬಂಧಿಸಲು (ಉದಾಹರಣೆ- ಇತ್ಯಾದಿ) ಸರ್ಕಾರವು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.**ಏಕೆಂದರೆ, "Without Limitation" ಅಥವಾ "but not limited to" ಎಂಬ ಪದವನ್ನು ಬಳಸಿದಲ್ಲಿ, ಕ್ರಿಯಾ ಒಪ್ಪಂದದ ನಿರ್ಬಂಧನೆಗಳು ಅರ್ಥಹೀನವಾಗುತ್ತದೆ ಎಂದು ಸಮಿತಿಯು ಅಭಿಪ್ರಾಯ ಪಡುತ್ತದೆ.

### *II. <u>ಅನುಚ್ಛೇಧ-2: ಪೂರ್ವಭಾವಿ ಷರತ್ತುಗಳ ಪಾಲನೆ ಹಾಗೂ ನಿರ್ವಹಣೆಯ ಬಗ್ಗೆ</u>*

*ಕ್ರಿಯಾ ಒಪ್ಪಂದದ ಅನುಚ್ಛೇಧ 2.1.1 ರಲ್ಲಿ ಖಾಸಗಿ ಪಾಲುದಾರರು ಪಾಲಿಸಬೇಕಾದ ಪೂರ್ವಭಾವಿ ಷರತ್ತುಗಳನ್ನು ಉಲ್ಲೇಖಿಸಲಾಗಿದೆ. ಈ ಷರತ್ತುಗಳು ಭೂಸ್ವಾಧೀನ ಫೇಸ್-1 ರಸ್ತೆ ಮತ್ತು ಫೇಸ್-2 ರಸ್ತೆಗಳಿಗೆ ಅನ್ವಯಿಸುತ್ತದೆ. ಈ ಅನುಚ್ಛೇಧದ ಅವಿಭಾಜ್ಯ ಅಂಗವಾಗಿರುವ ಶೆಡ್ಯೂಲ್-2 ವಿಶ್ಲೇಷಿಸಿದಲ್ಲಿ,*

F4 (★)

***ಈ ಕೆಳಕಂಡ ಅನುಮತಿಗಳನ್ನು ಖಾಸಗಿ ಪಾಲುದಾರರು ಯೋಜನಾ ಅನುಷ್ಠಾನದ ಪೂರ್ವದಲ್ಲಿ ಪಡೆಯಬೇಕಾಗಿರುತ್ತದೆ:***

1. ಪರಿಸರ ಸಂರಕ್ಷಣೆ ಕಾಯಿದೆ 1986ರ ಅಡಿಯಲ್ಲಿ ಅನುಮೋದನೆ, ಪರಿಸರ ಸಂರಕ್ಷಣಾ ಕಾಯಿದೆ 1986ರ ನಿಯಮ 5(3)ರ ಅಡಿಯಲ್ಲಿ ಸಹಮತಿ, ನೀರು ಮಾಲಿನ್ಯ ಹಾಗೂ ನಿಯಂತ್ರಣ ಕಾಯಿದೆ, ಗಾಳಿ ಮಾಲಿನ್ಯ ಹಾಗೂ ನಿಯಂತ್ರಣ ಕಾಯಿದೆಗಳ ಅಡಿಯಲ್ಲಿ ತೀರುವಳಿ.

ರಾಜ್ಯ ಸರ್ಕಾರವು ಪರಿಸರ ಮಾಲಿನ್ಯ ನಿಯಂತ್ರಣ ಕಾಯಿದೆಯಡಿ ತೀರುವಳಿ ಪಡೆಯಲು ಕೇಂದ್ರ ಸರ್ಕಾರಕ್ಕೆ ಪತ್ರ ವ್ಯವಹಾರ ನಡೆಸಿದ್ದು, ರಾಜ್ಯ ಸರ್ಕಾರವು ಪ್ರತಿಪಾದಿಸಿರುವ ಪ್ರಮುಖ ಅಂಶ ಕೆಳಕಂಡಂತಿದೆ:

**"ಯೋಜನೆಯನ್ನು ಅನುಮೋದಿಸುವ ಪೂರ್ವದಲ್ಲಿ ಕರ್ನಾಟಕ ಸರ್ಕಾರವು ತಾಂತ್ರಿಕ ಮಾನದಂಡಗಳು ಹಾಗೂ ಸಂಬಂಧಿತ ನಿರೂಪಣೆಗಳನ್ನು ಖಾಸಗಿ ಪಾಲುದಾರರು ನಿರ್ವಹಿಸುವ ನಿರ್ಬಂಧನೆಗೆ ಒಳಪಟ್ಟಿರಬೇಕು. ನೈಸೆಲ್ ಸಂಸ್ಥೆಯು ವಿನ್ಯಾಸಗಳು ಹಾಗೂ ತಾಂತ್ರಿಕ ಮಾನದಂಡಗಳನ್ನು ಲೋಕೋಪಯೋಗಿ ಇಲಾಖೆಯ ಅನುಮೋದನೆಯೊಂದಿಗೆ ಜಾರಿಗೊಳಿಸಬೇಕಾಗುವುದು. ಟೋಲ್ ರಿಯಾಯಿತಿ 30 ವರ್ಷಗಳ ಅವಧಿಯ ನಂತರ ಅಂತ್ಯಗೊಳ್ಳುವುದರಿಂದ ರಾಜ್ಯ ಸರ್ಕಾರವು ಇಂಡಿಯನ್ ರೋಡ್ ಕಾಂಗ್ರೆಸ್ ಹಾಗೂ ಇತರೆ ಮಾಪನಗಳ ಅನುಸಾರವಾಗಿ ರಸ್ತೆಯ ಸುರಕ್ಷತೆಯನ್ನು ನಿರ್ವಹಿಸಿರುವುದನ್ನು ದೃಢೀಕರಿಸಿಕೊಳ್ಳಬೇಕಾಗುವುದು. ಈ ಹಿನ್ನೆಲೆಯಲ್ಲಿ ಐ.ಆರ್.ಸಿ. ಮಾನದಂಡಗಳು ಹಾಗೂ ಸಂಬಂಧಿತ ಮಾಪನಗಳನ್ನು ಅಳವಡಿಸಿರುವುದನ್ನು ದೃಢೀಕರಿಸಿಕೊಳ್ಳುವುದು ರಾಜ್ಯ ಸರ್ಕಾರದ ಕರ್ತವ್ಯವಾಗಿರುತ್ತದೆ".**

ಈ ಸ್ಪಷ್ಟೀಕರಣದ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರವು ದಿನಾಂಕ 08.08.2001ರ ಉಲ್ಲೇಖದ ಮುಖಾಂತರ ಪರಿಸರ ಮಾಲಿನ್ಯ ನಿಯಂತ್ರಣದ ಹಾಗೂ ಪರಿಸರ ಸಂರಕ್ಷಣಾ ಅಧಿನಿಯಮ ಮತ್ತು ಇ.ಐ.ಎ. ಅಡಿಯಲ್ಲಿ ಕೆಲವು ಷರತ್ತುಗಳನ್ನು ವಿಧಿಸಿ ಅನುಮತಿ ನೀಡಿರುವುದನ್ನು ಸಮಿತಿಯು ಗಮನಿಸಿದೆ. ಈ ಪೈಕಿ ಪ್ರಮುಖವಾದ ಅಂಶ ಕೆಳಕಂಡಂತಿದೆ:

**"ಸಮಗ್ರ ವಿನ್ಯಾಸಗಳನ್ನು ಲೋಕೋಪಯೋಗಿ ಇಲಾಖೆಯ ಅಧಿಕೃತ ಅನುಮೋದನೆಯೊಂದಿಗೆ ಜಾರಿಗೊಳಿಸಬೇಕು. ಕರ್ನಾಟಕ ಸರ್ಕಾರವು ಐ.ಆರ್.ಸಿ. ಮಾನದಂಡಗಳ ಅನುಗುಣವಾಗಿ ವಿನ್ಯಾಸವನ್ನು ಇತ್ಯರ್ಥಗೊಳಿಸಿರುವುದನ್ನು ಅನುಷ್ಠಾನದ ಹಂತದವರೆಗೂ ದೃಢೀಕರಿಸಿಕೊಳ್ಳಬೇಕು".**

ಕ್ರಿಯಾ ಒಪ್ಪಂದದ ಅನುಚ್ಛೇಧ 2.1.1 ರಂತೆ ಫೇಸ್-1 ಮತ್ತು ಫೇಸ್-2 ರಸ್ತೆ ಕಾಮಗಾರಿ ಪ್ರಾರಂಭ ಮಾಡುವ ಪೂರ್ವದಲ್ಲಿ ಸರ್ಕಾರ ಮತ್ತು ನೈಸೆಲ್ ಸಂಸ್ಥೆಯು ಒಪ್ಪಂದದ ಶೆಡ್ಯೂಲ್-2 ರಲ್ಲಿರುವಂತೆ ಇನ್ಫಾಸ್ಟ್ರಕ್ಚರ್ ಕಾರಿಡಾರ್ ಯೋಜನೆಗೆ ಸಂಬಂಧಪಟ್ಟಂತೆ ಚಾಲ್ತಿಯಲ್ಲಿರುವ ಅಧಿನಿಯಮ ಹಾಗೂ ನಿಯಮಾವಳಿಗಳ ಅಡಿಯಲ್ಲಿ ತೀರುವಳಿ/ಮಂಜೂರಾತಿಗಳಿಗೆ ಪ್ರಸ್ತಾವನೆಗಳನ್ನು ಸಲ್ಲಿಸಿ ಪೂರ್ವಭಾವಿಯಾಗಿ ಮಂಜೂರಾತಿಗಳನ್ನು ಪಡೆಯತಕ್ಕದ್ದು ಎಂದು ಉಲ್ಲೇಖಿಸಲಾಗಿದೆ. ಈ ಹಿನ್ನೆಲೆಯಲ್ಲಿ ನೈಸೆಲ್ ಕಂಪನಿ ಹಾಗೂ ಲೋಕೋಪಯೋಗಿ ಇಲಾಖೆ ಜಂಟಿಯಾಗಿ ಒಪ್ಪಂದದ ಶೆಡ್ಯೂಲ್-2 ರ ಅನುಗುಣವಾಗಿ ಯೋಜನಾ ಅನುಷ್ಠಾನದ ವಿವಿಧ ಸ್ತರಗಳಿಗೆ ಈ

ಉದ್ದೇಶಕ್ಕಾಗಿಯೇ ನಿರ್ದಿಷ್ಟವಾಗಿ ಸೃಜಿಸಲಾದ ಬಿ.ಎಂ.ಐ.ಸಿ.ಎ.ಪಿ.ಎ. ಯಿಂದ ಮಂಜೂರಾತಿಗಳನ್ನು ಪಡೆಯುವುದು ಅವಶ್ಯಕವಾಗಿರುತ್ತದೆ.

ಈ ಷರತ್ತನ್ನು ಅವಲೋಕಿಸಿದಾಗ ನೈಸೆಲ್ ಸಂಸ್ಥೆಗೆ ಫೇಸ್-1 ಮತ್ತು ಫೇಸ್-2 ರಸ್ತೆ ವಿನ್ಯಾಸಕ್ಕೆ ಲೋಕೋಪಯೋಗಿ ಇಲಾಖೆಯ ಅಧಿಕೃತ ಅನುಮೋದನೆಯನ್ನು ಪೂರ್ವಭಾವಿಯಾಗಿ ಪಡೆಯುವುದು ಕಡ್ಡಾಯವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ನೈಸೆಲ್ ಸಂಸ್ಥೆಯು 16.07.2002 ರಂದು ಫೇಸ್-1 ಮತ್ತು ಫೇಸ್-2 ರಸ್ತೆಗಳಿಗೆ ಸಂಬಂಧಿಸಿದಂತೆ ನಕ್ಷೆಯನ್ನು ಮಾತ್ರ ಸಲ್ಲಿಸಿರುವುದನ್ನು ಸಮಿತಿ ಗಮನಿಸಿದೆ. ಲೋಕೋಪಯೋಗಿ ಇಲಾಖೆಯ ಮುಖ್ಯ ಅಭಿಯಂತರರು ದಿನಾಂಕ 20.07.2002 ರಂದು ಈ ಪ್ರಸ್ತಾವನೆಗೆ ಈ ಕೆಳಗೆ ಉಲ್ಲೇಖಿಸಿರುವ ನಿರ್ಬಂಧನೆಗೆ ಒಳಪಟ್ಟಂತೆ ಸಹಮತಿಯನ್ನು ವ್ಯಕ್ತಪಡಿಸಿರುವುದನ್ನು ಸಮಿತಿ ದಾಖಲಾತಿಗಳಿಂದ ಗಮನಿಸಿದೆ:

"ದಿನಾಂಕ 12.06.2002 ರಂದು ನಡೆಸಲಾದ ಉನ್ನತ ಅಧಿಕಾರದತ್ತ ಸಭೆಯಲ್ಲಿ ತಾಂತ್ರಿಕ ವಿಷಯಗಳಿಗೆ ಸಂಬಂಧಿಸಿದಂತೆ ನೈಸೆಲ್ ಸಂಸ್ಥೆಯ ಪ್ರಸ್ತಾವನೆಯು ಅನುಮೋದನೆಗೆ ಅರ್ಹವಾಗಿದೆ" ಎಂದು ತೀರ್ಮಾನಿಸಲಾಗಿದೆ. ಖಾಸಗಿ ಪಾಲುದಾರರು 16.07.2002 ರಂದು ನಕ್ಷೆಗಳನ್ನು ಸೆಕ್ಷನ್ 'ಎ' ಗೆ ಅನ್ವಯಿಸುವಂತೆ ಇಂಡೆಕ್ಸ್ ಮ್ಯಾಪಿನೊಂದಿಗೆ ಸಲ್ಲಿಸಿರುವುದನ್ನು ಸಮಿತಿ ಗಮನಿಸಿದೆ. ಈ ಸ್ಥೂಲ ವಿವರಗಳನ್ನು ನೈಸೆಲ್ ಸಂಸ್ಥೆಯ ಇಂಜಿನೀಯರುಗಳೊಂದಿಗೆ ದಿನಾಂಕ 19.07.2002 ರಂದು ಚರ್ಚಿಸಲಾಗಿದ್ದು, 5 ನಕ್ಷೆಗಳನ್ನೊಳಗೊಂಡ ಒಂದು ಪಟ್ಟಿಗೆ ತಾತ್ವಿಕ ಅನುಮೋದನೆಯನ್ನು ಕೇವಲ ರಸ್ತೆಯ ಪಥಕ್ಕೆ ಅನ್ವಯಿಸುವಂತೆ ನೀಡಿರುವುದನ್ನು ಸಮಿತಿ ಗಮನಿಸಿದೆ. ಅಂದರೆ, ಈ ತಾತ್ವಿಕ ಅನುಮೋದನೆಯಲ್ಲಿ ತಾಂತ್ರಿಕ ವಿನ್ಯಾಸ ಹಾಗೂ ಅಳವಡಿಸಲಾದ ವಿನ್ಯಾಸಗಳಲ್ಲಿ ಮಾನದಂಡಗಳ ಪಾಲನೆಯ ಬಗ್ಗೆ ಲೋಕೋಪಯೋಗಿ ಇಲಾಖೆ ಯಾವುದೇ ಸ್ಪಷ್ಟೀಕರಣವನ್ನು ನೀಡಿರುವುದಿಲ್ಲ. 13 ವರ್ಷಗಳ ನಂತರವೂ ಕ್ರಿಯಾ ಒಪ್ಪಂದದ ಮಾನದಂಡಗಳ ಅನುಗುಣವಾಗಿ ಸಮಗ್ರ ವಿನ್ಯಾಸ ಹಾಗೂ ತಾಂತ್ರಿಕ ಮಾನದಂಡಗಳನ್ನೊಳಗೊಂಡ ನಕ್ಷೆಗೆ ಸರ್ಕಾರದಿಂದ ಖಾಸಗಿ ಪಾಲುದಾರರು ಅಧಿಕೃತವಾಗಿ ಅನುಮೋದನೆಯನ್ನು ಪಡೆಯದೇ ಇರುವುದು ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿಗಳ ಹೇಳಿಕೆಯಿಂದ ಸಮಿತಿಗೆ ಮನದಟ್ಟಾಗಿದೆ. ಈ ಹಿನ್ನೆಲೆಯಲ್ಲಿ ನೈಸೆಲ್/ನೀಸ್ ಸಂಸ್ಥೆಯು ಕ್ರಿಯಾ ಒಪ್ಪಂದದ ಅನುಚ್ಛೇಧ 2.1.1 ನ್ನು ಸಂಪೂರ್ಣವಾಗಿ ಉಲ್ಲಂಘಿಸಿರುವುದು ಸ್ವಯಂ ವೇದ್ಯವಾಗಿದೆ. ಲೋಕೋಪಯೋಗಿ ಇಲಾಖೆಯ ಮುಖ್ಯ ಅಭಿಯಂತರರು ನೈಸ್ ಕಂಪನಿ ಸಲ್ಲಿಸಿದ ನಕಾಶೆಗಳನ್ನು ಪರಿಶೀಲಿಸುವಾಗ ಒಪ್ಪಂದದ ಅವಿಭಾಜ್ಯ ಅಂಗವಾಗಿರುವ ಯೋಜನಾ ತಾಂತ್ರಿಕ ವರದಿಯ ಪಂಕ್ತೀಕರಣಕ್ಕೆ ಅನುಗುಣವಾಗಿ ಈ ನಕಾಶೆಗಳು ಇರುವ ಬಗ್ಗೆ ದೃಢೀಕರಿಸಿಕೊಳ್ಳುವಲ್ಲಿ ವಿಫಲವಾಗಿರುವುದು ಸ್ಪಷ್ಟವಾಗಿದೆ. ಮುಖ್ಯ ಅಭಿಯಂತರರು ಯೋಜನಾ ಸ್ಥಳಕ್ಕೆ ತಾತ್ವಿಕ ಅನುಮೋದನೆ ನೀಡುವ ಪೂರ್ವದಲ್ಲಿ ಭೇಟಿ ನೀಡಿರುವ ಬಗ್ಗೆ ಸಮಿತಿಗೆ ನಿರ್ದಿಷ್ಟ ಮಾಹಿತಿ ಇರುವುದಿಲ್ಲ. ತಾತ್ವಿಕ ಅನುಮೋದನೆ ಆಧಾರದ ಮೇಲೆ ಅನುಷ್ಠಾನಗೊಳಿಸಲಾಗಿರುವ ಫೇಸ್-1 ಮತ್ತು ಫೇಸ್-2 ಯೋಜನಾ ಕಾಮಗಾರಿಗಳು ಅಥವಾ ಬದಲಾಯಿತ ಸನ್ನಿವೇಶದಲ್ಲಿ ಸೆಕ್ಷನ್ 'ಎ' ಘಟಕದ ಕಾಮಗಾರಿಗಳ ಅನುಷ್ಠಾನವನ್ನು ಅನಧಿಕೃತವಾಗಿ ಜಾರಿಗೊಳಿಸಲಾಗಿದೆ ಎಂದು ಸಮಿತಿ ತೀರ್ಮಾನಿಸುತ್ತದೆ. ಮೂಲಭೂತವಾಗಿ 03.04.1997 ರ ಒಪ್ಪಂದದ ತಾಂತ್ರಿಕ ಯೋಜನಾ ವರದಿಯ ಪಂಕ್ತೀಕರಣ ಹಾಗೂ ಪ್ರಸ್ತುತವಾಗಿ ನೈಸೆಲ್/ನೀಸೆಲ್ ಸಂಸ್ಥೆ ಅನುಷ್ಠಾನಗೊಳಿಸಿರುವ ಪಂಕ್ತೀಕರಣ ವಿಭಿನ್ನವಾಗಿದ್ದು, ಈ ಬಗ್ಗೆ ಅನುಚ್ಛೇಧ 6 ರಡಿಯಲ್ಲಿ ವಿಶ್ಲೇಷಿಸಲಾಗಿದೆ. ವಾಸ್ತವಿಕವಾಗಿ ಕ್ರಿಯಾ ಒಪ್ಪಂದದ ಅನುಚ್ಛೇಧ 6.3.1ರ ಅನುಗುಣವಾಗಿ

ಖಾಸಗಿ ಪಾಲುದಾರರು ವಿನ್ಯಾಸವನ್ನು ಕ್ರಿಯಾ ಒಪ್ಪಂದದ ಮಾಪನಗಳಿಗೆ ಅನುಗುಣವಾಗಿ ಇತ್ಯರ್ಥಗೊಳಿಸಬೇಕಾಗುವುದು. ಖಾಸಗಿ ಪಾಲುದಾರರು ಅನುಷ್ಠಾನಗೊಳಿಸುತ್ತಿರುವ ಟೋಲ್ ರಸ್ತೆಗೆ ಸಂಬಂಧಿಸಿದಂತೆ ಕ್ರಿಯಾ ಒಪ್ಪಂದದ ಅನುಗುಣವಾಗಿ ವಿನ್ಯಾಸ ಹಾಗೂ ನಕ್ಷೆಗೆ ಸಮಗ್ರ ತಾಂತ್ರಿಕ ಅಥವಾ ಆಡಳಿತಾತ್ಮಕ ಅನುಮೋದನೆಯ ಅನುಪಸ್ಥಿತಿಯಲ್ಲಿ ತಾಂತ್ರಿಕ ಮಾನದಂಡಗಳ ಪಾಲನೆಯನ್ನು ದೃಢೀಕರಿಸಿಕೊಳ್ಳುವ ಅವಕಾಶದಿಂದ ರಾಜ್ಯ ಸರ್ಕಾರವು ವಂಚಿತವಾಗಿದೆ ಎಂದು ಸಮಿತಿ ತೀರ್ಮಾನಿಸುತ್ತದೆ. ಈ ವೈಫಲ್ಯತೆಯಿಂದಾಗಿ ರಸ್ತೆ, ವಿನ್ಯಾಸ ಹಾಗೂ ಅನುಷ್ಠಾನದಲ್ಲಿ ಆಗಿರುವ ಲೋಪದೋಷಗಳು ಹಾಗೂ ವಿನ್ಯಾಸದ ಪಾಲನೆಯಲ್ಲಿ ಆಗಿರುವ ವೈಫಲ್ಯತೆಗಳಿಂದಾಗಿ ಖಾಸಗಿ ಪಾಲುದಾರರಿಗೆ ಆಗಿರುವ ಅನುದ್ದೇಶಿತ ಲಾಭದ ಬಗ್ಗೆ ಸಂಬಂಧಿತ ಕ್ರಿಯಾ ಒಪ್ಪಂದದ ಅನುಚ್ಛೇಧದಡಿಯಲ್ಲಿ ಸಮಗ್ರವಾಗಿ ವಿಶ್ಲೇಷಿಸಲಾಗಿದೆ.

ಇದಲ್ಲದೆ, ಯೋಜನಾ ತಾಂತ್ರಿಕ ವರದಿಯ ಕಂಡಿಕೆ 4.1.1 ಮತ್ತು ಕಂಡಿಕೆ 4.1.2 ರಲ್ಲಿ ನಮೂದಿಸಿರುವ ರಸ್ತೆಯ ಪಥ (ರೇಖಾಚಿತ್ರ 3.1 ಮತ್ತು 3.2) ಇವುಗಳನ್ನು ತಾತ್ವಿಕ ಸಹಮತಿ ನೀಡುವ ರಸ್ತೆಯ ಪಥದೊಡನೆ ಹೋಲಿಸಿದಲ್ಲಿ ವ್ಯಾಪಕ ವ್ಯತ್ಯಾಸಗಳಿರುವುದು ಸಮಿತಿಗೆ ಸ್ಪಷ್ಟವಾಗಿದೆ. ಯೋಜನಾ ತಾಂತ್ರಿಕ ವರದಿ ಕ್ರಿಯಾ ಒಪ್ಪಂದದ ಒಂದು ಅವಿಭಾಜ್ಯ ಅಂಗವಾಗಿರುವ ಹಿನ್ನೆಲೆಯಲ್ಲಿ ಈ ವೈಫಲ್ಯತೆಯೂ ಸಹ ಕ್ರಿಯಾ ಒಪ್ಪಂದದ ನೇರ ಹಾಗೂ ನಿರ್ದಿಷ್ಟ ಉಲ್ಲಂಘನೆ ಎಂದು ಸಮಿತಿ ತೀರ್ಮಾನಿಸುತ್ತದೆ. ಸಮಗ್ರ ತಾಂತ್ರಿಕ ಮಾನದಂಡಗಳನ್ನು ಒಳಗೊಂಡ ವಿನ್ಯಾಸ ಹಾಗೂ ನಕ್ಷೆಯನ್ನು ಪಡೆಯುವಲ್ಲಿ ಇಲಾಖೆ ವಹಿಸಿರುವ ಪಾತ್ರವನ್ನೂ ಸಹ ಈ ಸ್ತರದಲ್ಲಿ ವಿಶ್ಲೇಷಿಸುವುದು ಅವಶ್ಯಕವಾಗಿರುತ್ತದೆ. ದಿನಾಂಕ 29.06.2006 ರಂದು ನಡೆದ 11ನೇ ಅಧಿಕಾರದತ್ತ ಸಮಿತಿಯ ಸಭೆಯಲ್ಲಿ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ಇವರು ನೈಸೆಲ್/ನೀಸೆಲ್ ಸಂಸ್ಥೆ ಕಂದಾಯ ಸರ್ವೇಕ್ಷಣಾ ನಕಾಶೆಗಳ ಮೇಲೆ ಅಳವಡಿಸಲಾದ ನಕ್ಷೆಗಳನ್ನು ಸಲ್ಲಿಸದೇ ಇರುವ ಬಗ್ಗೆ ಪ್ರತಿಪಾದಿಸಿರುತ್ತಾರೆ. ಖಾಸಗಿ ಪಾಲುದಾರರು ಇಂಟರ್ ಛೇಂಜ್‌ಗಳು ಮತ್ತು ಪೆರಿಫರಲ್ ರಸ್ತೆಗಳಿಗೆ ಸಂಬಂಧಿಸಿದಂತೆ ಕೇವಲ ರೇಖಾಚಿತ್ರಗಳನ್ನು ನೀಡಿದ್ದು, ಈ ರೇಖಾಚಿತ್ರಗಳಿಂದ ಕಾಮಗಾರಿಗಳ ಅನುಷ್ಠಾನವಾಗುವ ಕ್ಷೇತ್ರವ್ಯಾಪ್ತಿಯ ಸರ್ವೆ ನಂಬರುಗಳು ವ್ಯಕ್ತವಾಗುವುದಿಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ಈ ಸಂದರ್ಭದಲ್ಲಿ ನೈಸೆಲ್/ನೀಸೆಲ್ ಸಂಸ್ಥೆಯ ಪ್ರತಿನಿಧಿಗಳು ಕೆಲವು ನಕ್ಷೆಗಳನ್ನು ಸಾದರಪಡಿಸಿದ್ದು, ಸಂಪೂರ್ಣ ವಿವರಗಳನ್ನು ನೀಡುವುದಾಗಿ ಸಹಮತಿಸಿರುತ್ತಾರೆ. ಇದಾದ ನಂತರ 18.04.2007 ರಂದು ದೃಢೀಕೃತವಾದ ಪಥದ ನಕ್ಷೆಗಳ 5 ಪ್ರತಿಗಳನ್ನು ಸಲ್ಲಿಸುವಂತೆ ಇಲಾಖಾ ಕಾರ್ಯದರ್ಶಿಗಳು ಕೋರಿರುತ್ತಾರೆ. ಇದೇ ಸ್ವರೂಪದ ಮತ್ತೊಂದು ಕೋರಿಕೆಯನ್ನು ದಿನಾಂಕ 02.06.2007 ರಂದು ಇಲಾಖಾ ವತಿಯಿಂದ ಸಲ್ಲಿಸಲಾಗಿದೆ. ಈ ಕೋರಿಕೆಗೆ ಪ್ರತ್ಯುತ್ತರವಾಗಿ ಖಾಸಗಿ ಪಾಲುದಾರರು ದಿನಾಂಕ 08.06.2007 ರಂದು ನಕ್ಷೆಗಳನ್ನು ಸಲ್ಲಿಸಿದ್ದು, ಈ ನಕ್ಷೆಗಳನ್ನು ಲೋಕೋಪಯೋಗಿ ಇಲಾಖೆ ಕೆ.ಐ.ಎ.ಡಿ.ಬಿ ಮತ್ತು ಬಿ.ಎಂ.ಐ.ಸಿ.ಎ.ಪಿ.ಎ. ಸಂಸ್ಥೆಗಳಿಗೆ ಪರಿಶೀಲನೆಗಾಗಿ ಕಳುಹಿಸಿರುವುದನ್ನು ಸಮಿತಿ ಗಮನಿಸಿದೆ. ಮುಖ್ಯ ಇಂಜಿನೀಯರ್, ಲೋಕೋಪಯೋಗಿ ಇಲಾಖೆ ಪ್ರಸ್ತಾವಿತ ನಕ್ಷೆಗಳಲ್ಲಿ ಲಿಂಕ್ ರಸ್ತೆ, ಪೆರಿಫರಲ್ ರಸ್ತೆ ಮತ್ತು ಎಕ್ಸ್‌ಪ್ರೆಸ್ ವೇಗೆ ಸಂಬಂಧಿಸಿದಂತೆ ವಾಸ್ತವಿಕವಾಗಿ ಅನುಷ್ಠಾನಗೊಳಿಸಲಾಗುತ್ತಿರುವ ರಸ್ತೆ ಪಥದ ವ್ಯಾಪ್ತಿಗೆ ಒಳಪಡುವ ಸರ್ವೆ ನಂಬರುಗಳ ಅನುಪಸ್ಥಿತಿಯಲ್ಲಿ ಅವಶ್ಯವಿರುವ ಜಮೀನಿನ ವಿಸ್ತೀರ್ಣವನ್ನು ನಿರ್ಧರಿಸುವುದು ಕಷ್ಟಸಾಧ್ಯ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ, ಲೋಕೋಪಯೋಗಿ

ಇಲಾಖೆಯು 25.06.2008, 17.07.2008 ಮತ್ತು 28.12.2008ರ ಪತ್ರದ ಮುಖಾಂತರ ನಿರ್ದಿಷ್ಟ ಸರ್ವೆ ನಂಬರುಗಳನ್ನೊಳಗೊಂಡ ನಕ್ಷೆಗಳನ್ನು ಸಲ್ಲಿಸುವಂತೆ ಅವಿರತವಾಗಿ ಕೋರಿರುವುದನ್ನು ಸಮಿತಿಯು ಗಮನಿಸಿದೆ. ಇದಲ್ಲದೆ, ದಿನಾಂಕ 09.11.2009 ರ ಪತ್ರದ ಮುಖಾಂತರ ಲೋಕೋಪಯೋಗಿ ಇಲಾಖೆ ಇವರು ಈ ಕೆಳಕಂಡ ಮಾಹಿತಿಗಳನ್ನು ಖಾಸಗಿ ಪಾಲುದಾರರಿಂದ ಕೋರಿರುತ್ತಾರೆ:

1. ಯೋಜನಾ ಅನುಷ್ಠಾನದಲ್ಲಿ ಸಾಧಿಸಲಾದ ಘಟಕವಾರು ಭೌತಿಕ ಪ್ರಗತಿಯ ವಿವರ.
2. ಹಸ್ತಾಂತರಿಸಲಾದ ಖಾಸಗಿ ಹಾಗೂ ಸರ್ಕಾರಿ ಜಮೀನಿನ ವಿವರಗಳು.
3. ಸವಿವರವಾದ ನಕ್ಷೆ ಹಾಗೂ ಸರ್ವೇಕ್ಷಣಾ ವಿನ್ಯಾಸಗಳು.
4. ಇಂಟರ್ ಛೇಂಜ್‌ಗಳಿಗೆ ಅವಶ್ಯವಿರುವ ಜಮೀನಿನ ವಿವರಗಳು, ಸರ್ವೆ ನಂ. ಒಳಗೊಂಡಂತೆ.
5. ಜಮೀನಿನ ಅವಶ್ಯಕತೆಯನ್ನು ನಿರ್ಧರಿಸಲು ಪ್ರತಿ ಸರ್ವೆ ನಂಬರ್ ಅಡಿಯಲ್ಲಿ ಅವಶ್ಯಕವಿರುವ ಜಮೀನನ್ನು ಸೂಚಿಸುವ ಕ್ಲಡಸ್ಟಲ್ ಮ್ಯಾಪ್ ಸಲ್ಲಿಕೆ – ಮುಖ್ಯ ಇಂಜಿನೀಯರ್‌ರವರು ನೀಡಿರುವ ಥೀಮ್ ಅಪ್ರೂವಲ್ (20.07.2002) ಹಾಗೂ ನಗರಾಭಿವೃದ್ಧಿ ಇಲಾಖೆ ಅನುಮೋದಿಸಿರುವ ಓ.ಡಿ.ಪಿ. (12.02.2004) ಹಿನ್ನೆಲೆಯಲ್ಲಿ.

ಪ್ರಸ್ತಾವಿತ ವಿವರಗಳನ್ನು ಕ್ರಿಯಾ ಒಪ್ಪಂದ ಹಾಗೂ ಸರ್ವೋಚ್ಛ ನ್ಯಾಯಾಲಯ ಹಾಗೂ ಉಚ್ಚ ನ್ಯಾಯಾಲಯಗಳು ನೀಡಿರುವ ತೀರ್ಪಿನ ಹಿನ್ನೆಲೆಯಲ್ಲಿ ಕ್ರಮ ಕೈಗೊಳ್ಳಲು ಅನುಕೂಲವಾಗುವಂತೆ ನೀಡಲು ಕೋರಲಾಗಿದೆ. ಆದರೆ ನೈಸೆಲ್ ಸಂಸ್ಥೆಯು ದಿನಾಂಕ 16.11.2009ರ ಪತ್ರದಲ್ಲಿ ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನ ಹಿನ್ನೆಲೆಯಲ್ಲಿ ಪ್ರಸ್ತಾವಿತ ಉಲ್ಲೇಖದಲ್ಲಿ ಇತ್ಯರ್ಥವಾದ ವಿಷಯವನ್ನು ಪ್ರತಿಪಾದಿಸಲಾಗಿದೆ ಎಂದು ಪ್ರತಿಕ್ರಿಯಿಸಿದ್ದಾರೆ. ತತ್ಸಂಬಂಧವಾಗಿ ಸರ್ವೋಚ್ಛ ನ್ಯಾಯಾಲಯದ ಮುಂದೆ ದಾಖಲಿಸಿರುವ ನ್ಯಾಯಾಂಗ ನಿಂದನೆ ಪ್ರಕರಣಕ್ಕೆ ಗಮನ ಸೆಳೆದಿರುತ್ತಾರೆ (CC-96/2007). ಈ ರೀತಿ ವಿವರಗಳನ್ನು ಕೋರುವುದೇ ನ್ಯಾಯಾಂಗ ನಿಂದನೆಯ ಅರ್ಜಿಗೆ ಕಾರಣ ಎಂದು ಪ್ರತಿಕ್ರಿಯಿಸಿರುತ್ತಾರೆ.

ಈ ಸಂದರ್ಭದಲ್ಲಿ ಕರ್ನಾಟಕದ ಉಚ್ಛ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ.3438/2010 ಕ್ಕೆ ಅನ್ವಯಿಸುವಂತೆ ದಿನಾಂಕ 15.06.2011 ರಂದು ನೀಡಿದ ತೀರ್ಪಿನ ಕಂಡಿಕೆ 116 ಅನ್ನು ಉಲ್ಲೇಖಿಸುವುದು ಅವಶ್ಯ ಎಂದು ಸಮಿತಿ ತೀರ್ಮಾನಿಸುತ್ತದೆ:

"If identification of these lands Vis-a-v with reference to different components of the project as envisaged under schedule-4 of the FWA is made i.e., whether it is required for toll road, express road, interchanges, toll plaza, service road, link road, township or the different infrastructural facilities envisaged under the schedule, there will be no uncertainity as per the directions of the Apex Court. A special Empowered Committee is constituted and the Hon'ble Chief Minister of State of Karnataka is the head of the Committee. As long as uncertainity remains, the litigation will not come to an end. The instrumentalities of the State have to take a firm stand and have a dialogue with the project proponent to work out the modalities as to how the various components of the project would be completed as envisaged in the FWA. This means identification of the lands with reference to different components of the project as envisaged in Schedule-4"

ಈ ನಿರ್ದೇಶನಗಳ ಅನುಗುಣವಾಗಿ ದಿನಾಂಕ 09.11.2011 ರಂದು ಲೋಕೋಪಯೋಗಿ ಇಲಾಖೆಯು ಮಾಹಿತಿಯನ್ನು ಒದಗಿಸುವಂತೆ ಕೋರಲಾಗಿದ್ದರೂ, ಮಾಹಿತಿ ಸ್ವೀಕೃತವಾಗಿರುವುದಿಲ್ಲ. ಈ ಬೆಳವಣಿಗೆಗಳಿಂದಾಗಿ ಈಗಾಗಲೇ ನಿರ್ಮಿಸಿರುವ ಟೋಲ್ ರಸ್ತೆಗಳ ಡಿಸೈನ್ ಹಾಗೂ ಇತರೆ ತಾಂತ್ರಿಕ ಮಾನದಂಡಗಳಿಗೆ ಸಕ್ಷಮ ಪ್ರಾಧಿಕಾರದ ಅನುಮೋದನೆಯಿಲ್ಲದೆ ಜಾರಿಗೊಂಡಿದೆ. ಉಲ್ಲೇಖಿತ ನ್ಯಾಯಾಲಯದ ತೀರ್ಪಿನ ಬಗ್ಗೆಯೂ ಸಹ ಮೇಲ್ಮನವಿ ದಾಖಲಿಸಿದೆ.

ಮೂಲಭೂತವಾಗಿ ಅನುಚ್ಛೇಧ 2.1.1 ರ ಅನುಗುಣವಾಗಿ ಹಾಗೂ ಕ್ರಿಯಾ ಒಪ್ಪಂದದ ಅನುಗುಣವಾಗಿ ಸಲ್ಲಿಸಲಾದ ಪಂಕ್ತೀಕರಣ, 2002 ರಂದು ಮುಖ್ಯ ಅಭಿಯಂತರರು, ಸಿ ಅಂಡ್ ಬಿ, ದಕ್ಷಿಣ ಇವರು ನೀಡಿರುವ ಥೀಮ್ ಅಪ್ರೂವಲ್ ಪಂಕ್ತೀಕರಣ/ಓ.ಡಿ.ಪಿ. ಪಂಕ್ತೀಕರಣ ವಿಭಿನ್ನವಾಗಿರುತ್ತದೆ.

*ಈ ಎಲ್ಲಾ ಬೆಳವಣಿಗೆಗಳನ್ನು ಗಮನಿಸಿದಾಗ ನೈಸೆಲ್/ನೀಸೆಲ್ ಸಂಸ್ಥೆ ಕ್ರಿಯಾ ಒಪ್ಪಂದದ ಅನುಚ್ಛೇಧದ 2.1.1.ರಲ್ಲಿ ಉಲ್ಲೇಖಿಸಲಾದ ಷರತ್ತುಗಳು ಅಥವಾ ನಿರೂಪಣೆಗಳ ಅನುಗುಣವಾಗಿ ವಿನ್ಯಾಸ/ನಕ್ಷೆಗಳಿಗೆ ಅಧಿಕೃತ ಅನುಮೋದನೆಯನ್ನು ಪಡೆಯುವ ಗುರುತರ ಹಾಗೂ ಸೂಕ್ಷ್ಮಕರ ಕರ್ತವ್ಯವನ್ನು ಪಾಲಿಸಿರುವುದಿಲ್ಲವೆಂಬುದು ಸಮಿತಿಗೆ ಸ್ಪಷ್ಟವಾಗಿದೆ. ಈವರೆವಿಗೂ ಯೋಜನೆಯ ಸೆಕ್ಷನ್ 'ಎ' ಘಟಕದಲ್ಲಿ ಅನುಷ್ಠಾನಗೊಳಿಸಲಾದ ಕಾಮಗಾರಿಗಳನ್ನು ಮೇಲೆ ವಿಶ್ಲೇಷಿಸಿರುವ ಹಿನ್ನೆಲೆಯಲ್ಲಿ ಅನಧಿಕೃತ ಎಂದು ಪರಿಗಣಿಸಬೇಕು ಎಂದು ಸಮಿತಿ ಶಿಫಾರಸ್ಸು ಮಾಡುತ್ತದೆ. ಪಂಕ್ತೀಕರಣವನ್ನು ಕಂದಾಯ ನಕ್ಷೆಗಳ ಮೇಲೆ ಅಳವಡಿಸಿ ಸಮಗ್ರ ಯೋಜನಾ ನಕ್ಷೆಗೆ 16 ವರ್ಷಗಳ ವಿಳಂಬದ ನಂತರವೂ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯದೇ ಇರುವುದು ಗುರುತರ ಅಪರಾಧವಾಗಿದೆ. ಏತನ್ಮಧ್ಯೆ, ಕ್ರಿಯಾ ಒಪ್ಪಂದದ ಪಂಕ್ತೀಕರಣ ಹಾಗೂ ಓ.ಡಿ.ಪಿ. ಪಂಕ್ತೀಕರಣದ ನಡುವೆ ವ್ಯಾಪಕ ವ್ಯತ್ಯಾಸಗಳಿರುವುದರಿಂದ ವಾಸ್ತವಿಕ ಅನುಷ್ಠಾನದ ಸ್ಥಿತಿಗತಿಗಳನ್ನು ಸರ್ಕಾರಕ್ಕೆ ತಿಳಿಸದೇ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ. ನೈಸೆಲ್/ನೀಸೆಲ್ ಸಂಸ್ಥೆಯ ಈ ವೈಫಲ್ಯತೆಯಿಂದಾಗಿ ವಾಸ್ತವಿಕ ಜಮೀನಿನ ಅವಶ್ಯಕತೆ ಹಾಗೂ ಬಳಕೆ ಯೋಜನೆ ಪ್ರಾರಂಭವಾದ 16 ವರ್ಷಗಳ ನಂತರವೂ ಇತ್ಯರ್ಥವಾಗದೇ ವಿವಾದಾತ್ಮಕವಾಗಿದೆ. ಓ.ಡಿ.ಪಿ. ಪಂಕ್ತೀಕರಣವನ್ನು ನ್ಯಾಯಾಲಯಗಳು ಅನುಮೋದಿಸಿರುವ ಹಿನ್ನೆಲೆಯಲ್ಲಿ ನೈಸೆಲ್/ನೀಸೆಲ್ ಸಂಸ್ಥೆಯು ಸರ್ಕಾರಕ್ಕೆ ವಿನ್ಯಾಸ ಅಥವಾ ನಕ್ಷೆಯನ್ನು ಸಲ್ಲಿಸುವಲ್ಲಿ ಯಾವುದೇ ಸಂದಿಗ್ಧತೆ ಇರುವುದಿಲ್ಲ. ಆದಾಗ್ಯೂ, ಲೋಕೋಪಯೋಗಿ ಇಲಾಖೆ ರವಾನಿಸಿರುವ ಹಲವಾರು ನೆನಪೋಲೆಗಳಿಗೆ ನೈಸೆಲ್/ನೀಸೆಲ್ ಸಂಸ್ಥೆ ಸ್ಪಂದಿಸದೇ ನ್ಯಾಯಾಲಯದ ಪ್ರಕರಣಗಳ ಮೊರೆ ಹೊಕ್ಕಿರುವುದು, ಖಾಸಗಿ ಪಾಲುದಾರರ ಧ್ಯೇಯೋದ್ದೇಶಗಳನ್ನು ಸಾಬೀತುಪಡಿಸಿದಂತಾಗುತ್ತದೆ. ಉದ್ದೇಶಪೂರ್ವಕವಾಗಿ ಯೋಜನಾ ಪಂಕ್ತೀಕರಣದ ವಿನ್ಯಾಸ ಹಾಗೂ ನಕ್ಷೆಗಳ ಅಧಿಕೃತ ಅನುಮೋದನೆಯನ್ನು ಅನಿಯತವಾಗಿ ನೈಸೆಲ್/ನೀಸೆಲ್ ಸಂಸ್ಥೆ ತಡೆಹಿಡಿದಿದೆ. ಏತನ್ಮಧ್ಯೆ, ಯೋಜನಾ ಅನುಷ್ಠಾನದ ಸ್ತರಗಳನ್ನೂ ಸಹ ಪರಿಷ್ಕರಿಸಿ 18.02.2002 ರ ಒಪ್ಪಂದದ ಮೂಲಕ ಸ್ಟೇಜ್-1 ಅನ್ನು ನೀಸೆಲ್ ಸಂಸ್ಥೆಗೆ ಹಸ್ತಾಂತರಿಸಲಾಗಿದೆ. ನೀಸೆಲ್ ಸಂಸ್ಥೆಯೂ ಸಹ ಸ್ಟೇಜ್-1 ಗೆ ಅನ್ವಯಿಸುವಂತೆ ಅಧಿಕೃತ ಮಂಜೂರಾತಿ ಅಥವಾ ಅನುಮೋದನೆಗಳನ್ನು ಪಡೆದಿರುವುದಿಲ್ಲ. ಪಂಕ್ತೀಕರಣ ಹಾಗೂ ವಿನ್ಯಾಸಗಳ ಮಂಜೂರಾತಿಯನ್ನು ಸಮಯೋಚಿತವಾಗಿ ಹಾಗೂ ಅಧಿಕೃತವಾಗಿ ಪಡೆದಿದ್ದಲ್ಲಿ, ಜಮೀನಿನ ವಾಸ್ತವಿಕ ಅವಶ್ಯಕತೆಯನ್ನು ನಿರ್ಧರಿಸಬಹುದಾಗಿದೆ. ಈ ವೈಫಲ್ಯತೆಯಿಂದಾಗಿ ಯೋಜನಾ ಅನುಷ್ಠಾನದ ಮೊದಲನೇ ಹಂತದಲ್ಲಿ ಹೆಚ್ಚುವರಿ ಜಮೀನು ನೀಡಿರುವ ಬಗ್ಗೆ ಈ ವರದಿಯಲ್ಲಿ ಪ್ರತಿಪಾದಿಸಲಾಗಿದೆ. ನಿರ್ದಿಷ್ಟವಾಗಿ ಟೋಲ್ ರಸ್ತೆಯಲ್ಲಿ ತಾಂತ್ರಿಕ ಮಾನದಂಡಗಳ ಉಲ್ಲಂಘನೆಯಿಂದಾಗಿರುವ ನಷ್ಟ ಹಾಗೂ ಭೂ ನಿರ್ವಹಣೆಯಲ್ಲಿ ಅನಿಯಂತ್ರಿತ ಅನುಷ್ಠಾನದಿಂದಾಗಿ ಪ್ರಸಕ್ತ ಸಂದರ್ಭದಲ್ಲಿ ನೈಸೆಲ್/ನೀಸ್ ಸಂಸ್ಥೆಯ ಸುಪರ್ದಿಯಲ್ಲಿರುವ ಹೆಚ್ಚುವರಿ ಜಮೀನಿನ ಬಗ್ಗೆ ಸಂಬಂಧಿತ ಅನುಚ್ಛೇಧಗಳಡಿಯಲ್ಲಿ ಚರ್ಚಿಸಲಾಗಿದೆ. ಇದಕ್ಕೆ ಪೂರಕವಾಗಿ ಕ್ರಿಯಾ ಒಪ್ಪಂದದ ಉಲ್ಲಂಘನೆಯ ಆಧಾರದ ಮೇಲೆ ನೈಸೆಲ್/ನೀಸೆಲ್ ಸಂಸ್ಥೆಯು ಅನುಷ್ಠಾನಗೊಳಿಸಿರುವ ಮೊದಲನೇ ಹಂತದ ಕಾಮಗಾರಿಗಳನ್ನು ಅನಧಿಕೃತ ಎಂದು ಘೋಷಿಸಬೇಕು ಎಂದು ಸಮಿತಿ ಶಿಫಾರಸ್ಸು ಮಾಡುತ್ತದೆ. ಇದಲ್ಲದೆ, ಕಾಮಗಾರಿಗಳು*

*ಸ್ಪಷ್ಟವಾಗಿ ಅನಧಿಕೃತವಾಗಿರುವ ಹಿನ್ನೆಲೆಯಲ್ಲಿ ಹಾಗೂ ಅನುಮೋದನೆಯ ಅನುಪಸ್ಥಿತಿಯಲ್ಲಿ ಜಾರಿಗೊಂಡಿರುವ ಹಿನ್ನೆಲೆಯಲ್ಲಿ ಟೋಲ್ ಸಂಗ್ರಹಣೆಯನ್ನು ಸ್ಥಗಿತಗೊಳಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಟೋಲ್ ರಸ್ತೆಯ ಅನುಷ್ಠಾನದಲ್ಲಿ ತಾಂತ್ರಿಕ ಮಾನದಂಡಗಳ ಪಾಲನೆಯನ್ನು ದೃಢೀಕರಿಸಿಕೊಳ್ಳಲು ಈ ಕೂಡಲೇ ಗುಣನಿಯಂತ್ರಣ ಪರೀಕ್ಷೆಯನ್ನು ಲೋಕೋಪಯೋಗಿ ಇಲಾಖೆಯು ಕ್ರಿಯಾ ಒಪ್ಪಂದದ ಉಲ್ಲಂಘನೆಯ ಮೇಲೆ ಜಾರಿಗೊಳಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.*

ಪ್ರಸಕ್ತ ಪ್ರಕರಣದಲ್ಲಿ ದಿನಾಂಕ 18.02.2002 ರಂದು ಜಾರಿಗೊಳಿಸಲಾದ ಅಸ್ಸೈನ್‌ಮೆಂಟ್ ಒಪ್ಪಂದದ ಅನುಗುಣವಾಗಿ ಯೋಜನೆಯನ್ನು ಅನುಮೋದನೆಗೆ ಸಲ್ಲಿಸಬೇಕಾಗಿರುವುದು. ಬಿ.ಎಂ.ಐ.ಸಿ. ಯೋಜನಾ ಅನುಷ್ಠಾನಕ್ಕೆ ಕರ್ನಾಟಕ ಟೌನ್ ಅಂಡ್ ಕಂಟ್ರಿ ಪ್ಲಾನಿಂಗ್ ಆಕ್ಟ್ 1961 ರ ಅಡಿಯಲ್ಲಿ ಪ್ರತ್ಯೇಕವಾಗಿ ಹಾಗೂ ನಿರ್ದಿಷ್ಟವಾಗಿ ಬಿ.ಎಂ.ಐ.ಸಿ.ಎ.ಪಿ.ಎ. ಅನ್ನು ಸೃಜಿಸಿರುವ ಹಿನ್ನೆಲೆಯಲ್ಲಿ ಈ ಅನುಮೋದನೆಯನ್ನು ಬಿ.ಎಂ.ಐ.ಸಿ.ಎ.ಪಿ.ಎ. ಸಂಸ್ಕರಿಸುವುದು ನಿಯಮಬದ್ಧ ಎಂದು ಸಮಿತಿ ತೀರ್ಮಾನಿಸುತ್ತದೆ. ಏಕೆಂದರೆ, ಬಿ.ಎಂ.ಐ.ಸಿ.ಎ.ಪಿ.ಎ. ಅನ್ನು ನಿರ್ದಿಷ್ಟವಾದ ಅನುಮೋದನೆ ಹಾಗೂ ಮಂಜೂರಾತಿಗಳಲ್ಲಿ ತ್ವರಿತವಾಗಿ ಸಂಸ್ಕರಿಸುವ ಉದ್ದೇಶದಿಂದ ಸೃಜಿಸಿರುವುದು ಸಮಿತಿಗೆ ಮನದಟ್ಟಾಗಿದೆ. ಆದಾಗ್ಯೂ, ಖಾಸಗಿ ಪಾಲುದಾರರು ಹಿಂದಿನ ಫೇಸ್-1 ಮತ್ತು ಫೇಸ್-2 ರಸ್ತೆಗಳನ್ನು ಬಿ.ಎಂ.ಐ.ಸಿ.ಎ.ಪಿ.ಎ. ಅನುಮೋದನೆ ಇಲ್ಲದೆ ಈವರೆವಿಗೂ ಜಾರಿಗೊಳಿಸಿರುವುದು ಅನಧಿಕೃತ ಹಾಗೂ ಕಾನೂನು ಬಾಹಿರ ಎಂದು ಸಮಿತಿ ತೀರ್ಮಾನಿಸುತ್ತದೆ. ಮುಖ್ಯ ಅಭಿಯಂತರರು, ಲೋಕೋಪಯೋಗಿ ಇಲಾಖೆ ಇವರು ಬಿ.ಎಂ.ಐ.ಸಿ. ಯೋಜನಾ ಸಮನ್ವಯತೆಯನ್ನು ನಿರ್ವಹಿಸಬೇಕಾದ ಇಲಾಖೆಯ ಒಟ್ಟು ಹಿರಿಯ ಅಧಿಕಾರಿಯಾಗಿರುವ ಹಿನ್ನೆಲೆಯಲ್ಲಿ ಯೋಜನಾ ಅನುಮೋದನೆಗೆ ಸಂಬಂಧಿಸಿದಂತೆ ತಮ್ಮ ಅಧಿಕಾರದತ್ತ ವ್ಯಾಪ್ತಿಯ ಬಗ್ಗೆ ಸಮರ್ಪಕ ನಿಲುವನ್ನು ತಳೆಯುವಲ್ಲಿ ವಿಫಲವಾಗಿರುವುದು ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸಮಿತಿಗೆ ಮನದಟ್ಟಾಗಿದೆ. ವಾಸ್ತವಿಕವಾಗಿ ಕೇವಲ ಥೀಮ್ ಪ್ಲಾನಿಗೆ ಅನುಮೋದನೆ ನೀಡಲಾಗಿದೆ. ಆದರೆ ತದನಂತರ ವಿಸ್ತೃತವಾದ ಯೋಜನಾ ನಕ್ಷೆಯನ್ನು ಸಂಸ್ಕರಿಸಲು ಸ್ವಯಂ ಪ್ರೇರಿತವಾಗಿ ಲೋಕೋಪಯೋಗಿ ಇಲಾಖೆ ಅಥವಾ ಬಿ.ಎಂ.ಐ.ಸಿ.ಎ.ಪಿ.ಎ. ಕೈಗೊಂಡ ಕ್ರಮಗಳ ಬಗ್ಗೆ ಸಮಿತಿಗೆ ನಿರ್ದಿಷ್ಟ ಮಾಹಿತಿ ಇರುವುದಿಲ್ಲ. ***ಈ ವೈಫಲ್ಯತೆಯಿಂದಾಗಿ ಖಾಸಗಿ ಪಾಲುದಾರರು ರಸ್ತೆಯ ಪಥ ಹಾಗೂ ಯೋಜನೆಯ ವಿನ್ಯಾಸಕ್ಕೆ ಅಧಿಕೃತ ಅನುಮೋದನೆ ಇಲ್ಲದೆಯೇ ಯೋಜನೆಯನ್ನು ಜಾರಿಗೊಳಿಸಿದ್ದಾರೆ ಎಂಬ ಅಭಿಪ್ರಾಯ ಸ್ಪಷ್ಟವಾಗುತ್ತದೆ. ಆದುದರಿಂದ ಕ್ರಿಯಾ ಒಪ್ಪಂದದ ಅನುಚ್ಛೇಧ 2.1 ರ ಸ್ಪಷ್ಟ ಉಲ್ಲಂಘನೆಯ ಆಧಾರದ ಮೇಲೆ ನೈಸೆಲ್/ನೀಸ್ ಸಂಸ್ಥೆಯ ವಿರುದ್ಧ ಕಾನೂನು ಕ್ರಮವನ್ನು ಜರುಗಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಕೇವಲ ಯೋಜನಾ ನಕ್ಷೆಯ ಥೀಮ್ ಮಂಜೂರಾತಿಯ ಆಧಾರದ ಮೇಲೆ ಇದುವರೆವಿಗೂ ಯೋಜನೆಯನ್ನು ಜಾರಿಗೊಳಿಸಲು ಪರೋಕ್ಷವಾಗಿ ಬೆಂಬಲವನ್ನು ನೀಡಿರುವ ಲೋಕೋಪಯೋಗಿ ಅಧಿಕಾರಿಗಳ ವಿರುದ್ಧ ಸರ್ಕಾರವು ಶಿಸ್ತಿನ ಕ್ರಮ ಜರುಗಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.***

ಕ್ರಿಯಾ ಒಪ್ಪಂದದ ಅನುಚ್ಛೇಧ 2.1.1.1 ಹಾಗೂ ಸಂಬಂಧಿತ ಶೆಡ್ಯೂಲ್-2 ಅನುಗುಣವಾಗಿ ಖಾಸಗಿ ಪಾಲುದಾರರು ಈ ಕೆಳಗೆ ನಿರೂಪಿಸಿರುವ ಅಧಿನಿಯಮದಡಿ ತೀರುವಳಿ ಹಾಗೂ ಅನುಮೋದನೆಯನ್ನು ಪಡೆಯಬೇಕಾಗುವುದು:

1. Environment (Protection) Act, 1986 Section 3(1) and Section 3(2)(v)
2. Environment (Protection) Rules, 1986 Rule 5(3)(a)
3. Clearance and confirmation from GOK that the Land does not contain reserve forest under the Forest (Conservation) Act, 1980- Section 44 and Section 28.

***ಪ್ರಸ್ತಾವಿತ ಅಧಿನಿಯಮಗಳಿಗೆ ಸಂಬಂಧಿಸಿದಂತೆ ಸಮಿತಿಯು ಈ ಕೆಳಕಂಡಂತೆ ವಿಶ್ಲೇಷಣೆ ಹಾಗೂ ಶಿಫಾರಸ್ಸುಗಳನ್ನು ಮಾಡುತ್ತದೆ:***

ಕ್ರಿಯಾ ಒಪ್ಪಂದದ ಉಲ್ಲೇಖಿತ ಅನುಚ್ಛೇಧದ ಅನುಗುಣವಾಗಿ ಖಾಸಗಿ ಪಾಲುದಾರರು ಹಾಗೂ ರಾಜ್ಯ ಸರ್ಕಾರ ಶೆಡ್ಯೂಲ್ 2 ರಲ್ಲಿ ವಿವರಿಸಲಾದ ಮಂಜೂರಾತಿ ಹಾಗೂ ಅನುಮೋದನೆಗಳನ್ನು ಯೋಜನಾ ಅನುಷ್ಠಾನಕ್ಕೆ ಪೂರ್ವಭಾವಿಯಾಗಿ ವಿನ್ಯಾಸ ಹಾಗೂ ತಾಂತ್ರಿಕ ಮಾನದಂಡಗಳ ಅನುಗುಣವಾಗಿ ಪಡೆಯುವುದು ಅವಶ್ಯಕವಾಗಿರುತ್ತದೆ. ಪ್ರಸ್ತಾವಿತ ಶೆಡ್ಯೂಲ್ 2 ರ ಅನುಗುಣವಾಗಿ ಪರಿಸರ ಸಂರಕ್ಷಣೆ ಅಧಿನಿಯಮ 1986, ನೀರು ಹಾಗೂ ಗಾಳಿಯ ಪರಿಸರ ಮಾಲಿನ್ಯ ನಿಯಂತ್ರಣ ಅಧಿನಿಯಮ, ಅರಣ್ಯ ಸಂರಕ್ಷಣಾ ಅಧಿನಿಯಮ 1989 ರ ಅಡಿಯಲ್ಲಿ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದ ಶಾಸನಬದ್ಧ ಅನುಮೋದನೆಗಳನ್ನು ಪಡೆಯುವುದು ಅವಶ್ಯಕವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಬಿ.ಎಂ.ಐ.ಸಿ. ಯೋಜನಾ ಅನುಷ್ಠಾನಕ್ಕೆ ಹಸ್ತಾಂತರಿಸಿರುವ ಅರಣ್ಯ ಪ್ರದೇಶ ಹಾಗೂ ಪ್ರಸ್ತಾವಿತ ಅಧಿನಿಯಮಗಳಡಿ ಸ್ವೀಕೃತವಾಗಿರುವ ತೀರುವಳಿ ಹಾಗೂ ಅನುಮೋದನೆಯ ಬಗ್ಗೆ ಸಮಿತಿ ಚರ್ಚೆ ಕೈಗೊಂಡಿದೆ. ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದ ಆದೇಶಗಳನುಗುಣವಾಗಿ ಖಾಸಗಿ ಪಾಲುದಾರರಿಗೆ ಹಸ್ತಾಂತರಿಸಲಾದ ಅರಣ್ಯ ಪ್ರದೇಶದ ವಿವರಗಳು ಕೆಳಕಂಡಂತಿದೆ:

| ಗ್ರಾಮ/ವಲಯ | ವಿಸ್ತೀರ್ಣ (ಹೆಕ್ಟೇರುಗಳಲ್ಲಿ) |
|---|---|
| ಬಿ.ಎಂ. ಕಾವಲ್ | 16.875 |
| ತುರಹಳ್ಳಿ ರಾಜ್ಯ ಅರಣ್ಯ/ಹೆಮ್ಮಿಗೆಪುರ | 2.93 |
| ರಾಮನಗರ/ನಂದಗುಡಿ ರಾಜ್ಯ ಅರಣ್ಯ | 31.50 |
| ಚನ್ನಪಟ್ಟಣ/ಚಿಕ್ಕಮ್ಮನ ಗುಡ್ಡೆ ರಾಜ್ಯ ಅರಣ್ಯ | 19.84 |
| ಒಟ್ಟು | 71.145 |

ಚಾಲ್ತಿಯಲ್ಲಿರುವ ಮಾನದಂಡಗಳ ಅನುಸಾರವಾಗಿ ಬೆಂಗಳೂರು ಹಾಗೂ ರಾಮನಗರ ವಿಭಾಗಗಳಲ್ಲಿ ಬಿಡುಗಡೆಗೊಳಿಸಲಾಗಿರುವ 71.145 ಹೆಕ್ಟೇರು ಜಮೀನಿಗೆ ಬದಲಾಗಿ ಪರಿಹಾರಾರ್ಥ ಅರಣ್ಯೀಕರಣಕ್ಕಾಗಿ ದೊಡ್ಡಬಳ್ಳಾಪುರ ತಾಲ್ಲೂಕಿನ ಹೊಸಹಳ್ಳಿ ಗ್ರಾಮದ ಸರ್ವೆ ನಂ.87 ಹಾಗೂ 88 ರಲ್ಲಿ 125 ಹೆಕ್ಟೇರ್ ವಿಸ್ತೀರ್ಣದ ಅರಣ್ಯೇತರ ಪ್ರದೇಶವನ್ನು ನೀಡಲಾಗಿದೆ. ಪರಿಹಾರಾರ್ಥ ನೆಡುತೋಪು ಬೆಳವಣಿಗೆಗೆ 67.75 ಲಕ್ಷ ರೂ.ಗಳನ್ನು ಪಾವತಿಸಿರುವುದಾಗಿ ಸ್ಪಷ್ಟೀಕರಿಸಲಾಗಿದೆ. ಇದಲ್ಲದೆ, ಬೆಂಗಳೂರು ನಗರ ವಿಭಾಗದಲ್ಲಿ ಬಿಡುಗಡೆಗೊಳಿಸಿರುವ 2.93 ಹೆಕ್ಟೇರ್ ಅರಣ್ಯ ಪ್ರದೇಶದ ಬದಲಾಗಿ ಪರಿಹಾರಾರ್ಥ ಅರಣ್ಯೀಕರಣಕ್ಕೆ ದೊಡ್ಡಬಳ್ಳಾಪುರ ತಾಲ್ಲೂಕಿನ ಹಾರೋಹಳ್ಳಿ ಗ್ರಾಮದ ಸರ್ವೆ ನಂ.6 ರಲ್ಲಿ 5.15 ಎಕರೆ ಮತ್ತು ಸರ್ವೆ ನಂ.2/1 ರಲ್ಲಿ 1.35 ಎಕರೆ ಅರಣ್ಯೇತರ ಪ್ರದೇಶವನ್ನು ನೀಡಿರುವುದಾಗಿ ಸ್ಪಷ್ಟೀಕರಿಸಲಾಗಿದೆ. ಏತನ್ಮಧ್ಯೆ, ಬಡಮನವರ್ತೆ ಕಾವಲ್ ವ್ಯಾಪ್ತಿಯ 307 ಎಕರೆ ವಿಸ್ತೀರ್ಣದ ಅರಣ್ಯ ಪ್ರದೇಶವನ್ನು ಬಿ.ಎಂ.ಐ.ಸಿ. ಯೋಜನೆಗೆ ಹಸ್ತಾಂತರಿಸಲು ಸರ್ಕಾರವು ದಿನಾಂಕ 07.10.1999 ರಂದು ಆದೇಶಿಸಿದ್ದು, ತದನಂತರ ದಿನಾಂಕ 21.07.2003ರ ಆದೇಶದ ಮೂಲಕ ಈ ನಿರ್ದೇಶನಗಳನ್ನು ಹಿಂಪಡೆಯಲಾಯಿತು.

ಭಾರತ ಸರ್ಕಾರವು ದಿನಾಂಕ 08.08.2001 ರಂದು ಪರಿಸರ ತೆರವು ಅನುಮತಿಯನ್ನು ಹಾಗೂ ಇ.ಐ.ಎ. (Environmental Impact Assessment) ಅಧಿಸೂಚನೆಗಳನ್ನು ಜಾರಿಗೊಳಿಸಿದೆ. ಈ ಅಧಿಸೂಚನೆ ಅನುಗುಣವಾಗಿ ಲೋಕೋಪಯೋಗಿ ಇಲಾಖೆಯು ಅನುಮೋದಿಸಿರುವ ವಿನ್ಯಾಸದ ಆಧಾರದ ಮೇಲೆ ಯೋಜನೆಯನ್ನು ಜಾರಿಗೊಳಿಸಬೇಕಾಗಿದ್ದು, ನಿರ್ದಿಷ್ಟ ಮಾನದಂಡಗಳನ್ನು

ಅನುಷ್ಠಾನದಲ್ಲಿ ಅಳವಡಿಸುವುದು ಕಡ್ಡಾಯವಾಗಿರುತ್ತದೆ. ಆದರೆ ವಾಸ್ತವಿಕವಾಗಿ ಖಾಸಗಿ ಪಾಲುದಾರರು ಮುಖ್ಯ ಇಂಜಿನೀಯರ್, ಸಂಪರ್ಕ ಮತ್ತು ಕಟ್ಟಡಗಳು, ಬೆಂಗಳೂರು ಇವರಿಗೆ ದಿನಾಂಕ 16.07.2002 ರಂದು ಫೇಸ್ 1 ಮತ್ತು ಫೇಸ್ 2 ರಸ್ತೆಗಳಿಗೆ ನಕ್ಷೆಯನ್ನು ಸಲ್ಲಿಸಿರುತ್ತಾರೆ. ತತ್ಸಂಬಂಧವಾಗಿ 20.07.2002 ರಂದು ಫೇಸ್ 1 ಮತ್ತು ಫೇಸ್ 2 ಕ್ಕೆ ಸಂಬಂಧಿಸಿದಂತೆ ಸಹಮತಿಯನ್ನು ನೀಡಿರುವುದು ದಾಖಲಾತಿಗಳಿಂದ ಸಮಿತಿಗೆ ವ್ಯಕ್ತವಾಗಿದೆ. ವಾಸ್ತವಿಕವಾಗಿ ಖಾಸಗಿ ಪಾಲುದಾರರು ನೀಡಿರುವ ಪ್ರಸ್ತಾವನೆಗಳನ್ನು ದಿನಾಂಕ 12.06.2002ರ ಉನ್ನತ ಅಧಿಕಾರದತ್ತ ಸಮಿತಿಯ ಸಭೆಯಲ್ಲಿ ಚರ್ಚಿಸಿದ್ದು, ತಾಂತ್ರಿಕ ಪ್ರಸ್ತಾವನೆಯನ್ನು ಈ ಸಮಿತಿ ಅನುಮೋದಿಸಿದೆ. ಲೋಕೋಪಯೋಗಿ ಇಲಾಖೆಯು ಕೇವಲ ತಾತ್ವಿಕವಾಗಿ ಸಹಮತಿಯನ್ನು ನೀಡಿದೆ. ಆದರೆ ಪೂರ್ಣ ಪ್ರಮಾಣದ ವಿನ್ಯಾಸ ಮತ್ತು ಇತರೆ ತಾಂತ್ರಿಕ ಮಾನದಂಡಗಳ ಆಧಾರದ ಮೇಲೆ ತಾಂತ್ರಿಕ ಮಂಜೂರಾತಿಯನ್ನು ನೀಡಿರುವ ಬಗ್ಗೆ ನಿರ್ಧಿಷ್ಟ ಉಲ್ಲೇಖಗಳು ಲಭ್ಯವಿರುವುದಿಲ್ಲ. ಇದೊಂದು ಗುರುತರ ವೈಫಲ್ಯತೆಯೆಂದು ಸಮಿತಿ ತೀರ್ಮಾನಿಸುತ್ತದೆ. ಏಕೆಂದರೆ, ಯೋಜನಾ ತಾಂತ್ರಿಕ ವರದಿಯಲ್ಲಿ ಇರುವ ರಸ್ತೆಯ ಪಥ ಹಾಗೂ ಇದೇ ವರದಿಯ ಇನ್ನೊಂದು ಭಾಗದಲ್ಲಿರುವ ರಸ್ತೆಯ ಪಥದ ವಿನ್ಯಾಸ ನಕ್ಷೆಯಲ್ಲಿ ವ್ಯಾಪಕ ಬದಲಾವಣೆಗಳಿವೆ. ಇದಲ್ಲದೆ, ದಿನಾಂಕ 12.02.2004 ರಂದು ಸರ್ಕಾರವು ಅನುಮೋದಿಸಿದ ಓ.ಡಿ.ಪಿ. ನಕ್ಷೆಯಲ್ಲಿ ಯೋಜನಾ ಅನುಷ್ಠಾನದ ಪ್ರದೇಶ, ವ್ಯಾಪ್ತಿ ಹಾಗೂ ರಸ್ತೆಯ ಪಥದಲ್ಲಿ ವ್ಯಾಪಕ ಬದಲಾವಣೆಗಳಾಗಿದೆ. ತಾತ್ವಿಕ ಅನುಮೋದನೆ ಪಡೆಯುವುದರಲ್ಲೂ ಖಾಸಗಿ ಪಾಲುದಾರರು 5 ವರ್ಷಗಳ ವಿಳಂಬವಾಗಿರುವುದನ್ನು ಸಮಿತಿಯು ಗಮನಿಸಿದೆ. ಸರ್ಕಾರದ ಪತ್ರ ಸಂಖ್ಯೆ.ಪಿಡಬ್ಲ್ಯೂಡಿ/110/ಸಿಆರ್‌ಎಂ/2009 ದಿನಾಂಕ 09.11.2009ರ ಮುಖಾಂತರ ಈ ಕೆಳಕಂಡ ಅಂಶಗಳಿಗೆ ಈ ಅನುಚ್ಛೇಧಕ್ಕೆ ಸಂಬಂಧಿಸಿದಂತೆ ಖಾಸಗಿ ಪಾಲುದಾರರಿಂದ ಸ್ಪಷ್ಟೀಕರಣವನ್ನು ಕೋರಲಾಗಿದೆ:

1. ಸವಿವರವಾದ ವಿನ್ಯಾಸದ ನಕ್ಷೆ, ಸರ್ವೇಕ್ಷಣಾ ನಕ್ಷೆ, ಇಂಟರ್ ಛೇಂಜ್‌ಗಳ ವಿವರ – ಪ್ರತಿ ಸರ್ವೆ ಸಂಖ್ಯೆಯಲ್ಲೂ ಅವಶ್ಯಕವಿರುವ ಜಮೀನಿನ ವಿವರ.
2. ರಸ್ತೆಯ ಪಥವನ್ನು ಇತ್ತೀಚಿನ ಕಂದಾಯ ನಕಾಶೆಗಳ ಮೇಲೆ ಅಳವಡಿಸಿ ಪ್ರತಿ ಸರ್ವೆ ನಂಬರುಗಳಿಗ ಕೋಆರ್ಡಿನೇಟರುಗಳ ವಿವರ.
3. ಬಿ.ಎಂ.ಐ.ಸಿ.ಎ.ಪಿ.ಎ. ವತಿಯಿಂದ ಅನುಮೋದಿತವಾದ ಓ.ಡಿ.ಪಿ. (ಆದೇಶ ಸಂಖ್ಯೆ.ಯುಡಿಡಿ/75/ಬೇರುಪ್ರ/2003 ದಿನಾಂಕ 12.02.2004) ಯ ಅನುಗುಣವಾಗಿ ಈಗಾಗಲೇ ಸ್ವೀಕೃತವಾಗಿರುವ ಜಮೀನಿನ ವಿವರ ಬದಲಾಯಿತ ಸನ್ನಿವೇಶದಲ್ಲಿ ಯೋಜನಾ ಅನುಷ್ಠಾನದ ವಿವಿಧ ಘಟಕಗಳಲ್ಲಿ ಆಗಬೇಕಾಗಿರುವ ಹೊಂದಾಣಿಕೆಗಳ ಬಗ್ಗೆ ವಿವರ.

ಈ ಕೋರಿಕೆಗೆ ಖಾಸಗಿ ಪಾಲುದಾರರು ನ್ಯಾಯಾಲಯಗಳ ತೀರ್ಪಿನ ಹಿನ್ನೆಲೆಯಲ್ಲಿ ಸ್ಪಷ್ಟೀಕರಣ ಅನಾವಶ್ಯಕ ಹಾಗೂ ಅಸಮಂಜಸ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸಮಿತಿಯು ಖಾಸಗಿ ಪಾಲುದಾರರು ಲೋಕೋಪಯೋಗಿ ಇಲಾಖೆ ಹಾಗೂ ಕ್ಷೇತ್ರೀಯ ಅರಣ್ಯ ಸಂರಕ್ಷಣಾಧಿಕಾರಿಗಳ ನಡುವೆ ಜಾರಿಗೊಳಿಸಲಾಗಿರುವ ಒಪ್ಪಂದವನ್ನು ಕೂಲಂಕುಷವಾಗಿ ವಿಶ್ಲೇಷಿಸಿದೆ. ಈ ಒಪ್ಪಂದದ ಅನುಗುಣವಾಗಿ 68.215 ಹೆಕ್ಟೇರ್ ವಿಸ್ತೀರ್ಣದ ಅರಣ್ಯ ಪ್ರದೇಶವನ್ನು ಬೆಂಗಳೂರು ನಗರ ಹಾಗೂ ಗ್ರಾಮಾಂತರ ಪ್ರದೇಶದಲ್ಲಿ ಖಾಸಗಿ ಪಾಲುದಾರರಿಗೆ ಹಸ್ತಾಂತರಿಸಲಾಗಿದೆ. ಈ ಪ್ರಕ್ರಿಯೆಯನ್ನು ಕೇಂದ್ರ ಸರ್ಕಾರದ ದಿನಾಂಕ 27.01.2003ರ ಆದೇಶ ಹಾಗೂ ರಾಜ್ಯ ಸರ್ಕಾರದ 26.02.2003 ರ ಆದೇಶದ ಅನುಗುಣವಾಗಿ ಜಾರಿಗೊಳಿಸಲಾಗಿದೆ. ಈ ಹಸ್ತಾಂತರ ಪ್ರಕ್ರಿಯೆಗೆ ಪೂರಕವಾಗಿ ಖಾಸಗಿ ಪಾಲುದಾರರು ದಿನಾಂಕ 08.08.2001 ಹಾಗೂ

ದಿನಾಂಕ 11.08.2001 ಕೇಂದ್ರ ಸರ್ಕಾರದ ಪರಿಸರ ಮಂತ್ರಾಲಯ ಹಾಗೂ ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ತೀರುವಳಿ ಪಡೆದಿರುವುದು ಸಮಿತಿಗೆ ದಾಖಲಾತಿಗಳಿಂದ ವ್ಯಕ್ತವಾಗಿದೆ. ಈ ಒಪ್ಪಂದ ಅಥವಾ ಒಡಂಬಡಿಕೆಯನ್ನು ಕೆಲವು ಷರತ್ತು ಅಥವಾ ನಿರ್ಬಂಧನೆಗೆ ಒಳಪಟ್ಟು ಜಾರಿಗೊಳಿಸಿರುವುದು ದಾಖಲಾತಿಗಳಿಂದ ಸ್ಪಷ್ಟವಾಗಿದೆ. ಒಪ್ಪಂದದ ಕಂಡಿಕೆ ಸಂಖ್ಯೆ.33 ರಲ್ಲಿ ಕೇಂದ್ರ ಸರ್ಕಾರದ ಪರಿಸರ ಹಾಗೂ ಅರಣ್ಯ ಮಂತ್ರಾಲಯವು ಒಪ್ಪಂದದಲ್ಲಿ ವಿಧಿಸಿರುವ ಷರತ್ತುಗಳು ಉಲ್ಲಂಘನೆಯಾದಲ್ಲಿ, ಅನುಮತಿಯನ್ನು ಹಿಂಪಡೆಯುವ ಅಧಿಕಾರದ ಬಗ್ಗೆ ಪ್ರಸ್ತಾಪಿಸಲಾಗಿದೆ. ಇದಕ್ಕೆ ಪೂರಕವಾಗಿ ಕಂಡಿಕೆ ಸಂಖ್ಯೆ.34 ರಲ್ಲಿ ಈ ರೀತಿ ಉಲ್ಲೇಖಿಸಲಾಗಿದೆ. **"In the event of change in project profile or change in the implementation agency, A fresh reference shall be made to the Ministry of Environment and Forests"**ಕಂಡಿಕೆ ಸಂಖ್ಯೆ.38 ರಲ್ಲಿ ಈ ಕೆಳಕಂಡಂತೆ ಪ್ರತಿಪಾದಿಸಲಾಗಿದೆ:

**"The project Authorities shall not undertake change of location of Townships without the prior clearance from KSPCB"**

ಈ ಷರತ್ತುಗಳನ್ನು ಅವಲೋಕಿಸಿದಾಗ ಖಾಸಗಿ ಪಾಲುದಾರರು ಪ್ರಸ್ತಾವಿತ ಷರತ್ತುಗಳನ್ನು ಉಲ್ಲಂಘಿಸಿರುವುದು ಅಥವಾ ನಿರ್ಲಕ್ಷಿಸಿರುವುದು ವಿವರಿಸಲಾದ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಸ್ಪಷ್ಟವಾಗಿದೆ. ಪ್ರಥಮ ಸ್ತರದಲ್ಲಿ **Project Profile**ನಲ್ಲಿ ವ್ಯಾಪಕ ಬದಲಾವಣೆಗಳಾಗಿದೆ. **Profile**ಎಂಬ ಪದವನ್ನು **Outline** ಎಂದು ಅರ್ಥೈಸಬಹುದಾಗಿದೆ. ಈ ಯೋಜನಾ ಅನುಷ್ಠಾನದಲ್ಲಿ ಕ್ರಿಯಾ ಒಪ್ಪಂದ, ಕ್ರಿಯಾ ಒಪ್ಪಂದದ ಅವಿಭಾಜ್ಯ ಅಂಗವಾಗಿರುವ ತಾಂತ್ರಿಕ ವರದಿ ಹಾಗೂ 2004 ರಲ್ಲಿ ಅನುಮೋದಿತವಾದ ಓ.ಡಿ.ಪಿ. ಈ ಮೂರೂ ಸ್ತರಗಳಲ್ಲಿ **Project Profile** ನಲ್ಲಿ ವ್ಯಾಪಕ ಬದಲಾವಣೆಗಳಾಗಿರುವುದು ದಾಖಲಾತಿಗಳಿಂದ ಸ್ಪಷ್ಟವಾಗಿದೆ. ಇದಲ್ಲದೆ, ಟೌನ್‌ಶಿಪ್ 1 ನ್ನೂ ಸಹ ಸ್ಥಳಾಂತರ ಮಾಡಲಾಗಿದೆ. ಉಲ್ಲೇಖಿಸಿರುವ ಷರತ್ತಿನ ಅನುಗುಣವಾಗಿ ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ 11.08.2000 ರಂದು ನೀಡಿರುವ **Consent for Establishment**ತೀರುವಳಿಯನ್ನು ಹಿಂಪಡೆದಂತೆ ಎಂದು ಪರಿಗಣಿಸಿ ಬದಲಾಯಿತ ಸನ್ನಿವೇಶದಲ್ಲಿ ಪ್ರತ್ಯೇಕವಾಗಿ ಪರಿಸರ ತೀರುವಳಿಯನ್ನು ಸಂಸ್ಕರಿಸುವ ಅವಶ್ಯಕತೆ ಇರುವುದು ಸಮಿತಿಗೆ ಸ್ಪಷ್ಟವಾಗಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಮೇಲ್ಮನವಿ ಪ್ರಾಧಿಕಾರದ ಮೇಲ್ಮನವಿ ಸಂಖ್ಯೆ.14/2009 ಹಾಗೂ 15/2009ರ ನ್ಯಾಯಾಂಗ ಪ್ರಕರಣದ ತೀರ್ಪು ಹಾಗೂ ವಿಶ್ಲೇಷಣೆಯನ್ನು ಸಮಿತಿಯು ಪರಿವೀಕ್ಷಿಸಿದೆ. ಈ ನಿರ್ದೇಶನದ ಅನುಗುಣವಾಗಿ ಪ್ರಸ್ತಾವಿತ ಯೋಜನೆಯ ರಸ್ತೆ, ರಾಷ್ಟ್ರೀಯ ಹೆದ್ದಾರಿ ಅಥವಾ ರಾಜ್ಯ ಹೆದ್ದಾರಿ ವರ್ಗೀಕರಣದ ವ್ಯಾಪ್ತಿಗೆ ಒಳಪಡುವುದಿಲ್ಲ. ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ 14.09.2006ರ ನಿರ್ದೇಶನದ ಅನುಗುಣವಾಗಿ ಈ ಯೋಜನೆಗೆ ಪರಿಸರ ತೀರುವಳಿಯನ್ನು ಕೊಡುವ ಅವಶ್ಯಕತೆಯಿಲ್ಲ ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. ವಾಸ್ತವಿಕವಾಗಿ ಪ್ರಸಕ್ತ ಯೋಜನೆಗೆ 19.08.2000 ರಂದು **Consent for Establishment**ನೀಡಲಾಗಿದೆ. ಆದುದರಿಂದ 2006ರ ಆದೇಶದ ಅನುಗುಣ ವಿನಾಯಿತಿಯನ್ನು ಬಳಸುವುದು ಅಸಮರ್ಪಕ ಎಂದು ಸಮಿತಿಯು ತೀರ್ಮಾನಿಸುತ್ತದೆ. ರಾಜ್ಯ ಹಾಗೂ ಕೇಂದ್ರ ಸರ್ಕಾರದ ಆದೇಶಗಳು ಸಾರ್ವತ್ರಿಕವಾಗಿ ಆದೇಶ ಜಾರಿಗೊಂಡ ದಿನಾಂಕದಿಂದ ಅನ್ವಯವಾಗುತ್ತದೆ. ನಿರ್ದಿಷ್ಟ ಹಾಗೂ ಅವಶ್ಯಕ ಪ್ರಸಂಗಗಳಲ್ಲಿ ಪೂರ್ವಾನ್ವಯವಾಗುವ ದಿನಾಂಕವನ್ನು ನಮೂದಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಈ ಯೋಜನೆಗೆ ಸಂಬಂಧಿಸಿದಂತೆ ಪರಿಸರ ತೀರುವಳಿ ಅವಶ್ಯಕತೆ ಇದೆ ಎಂದು ಸಮಿತಿಯು ತೀರ್ಮಾನಿಸುತ್ತದೆ. ಇದಲ್ಲದೆ, ಓ.ಡಿ.ಪಿ. ಅನುಗುಣವಾಗಿ ರಸ್ತೆಯ ಪಥ ಹಾಗೂ **Project Profile**ಬದಲಾವಣೆಯಾಗಿರುವುದು

ದಾಖಲಾತಿಗಳಿಂದ ಸಮಿತಿಗೆ ಸ್ಪಷ್ಟವಾಗಿದೆ. ಯೋಜನಾ ಅನುಷ್ಠಾನದ ವಿನ್ಯಾಸ 2004 ರಿಂದ ಬದಲಾವಣೆಯಾದ ಹಿನ್ನೆಲೆಯಲ್ಲಿ ಭೂ ಬಳಕೆಯ ಸ್ವರೂಪವೂ ಸಹ ತತ್ಸಂಬಂಧವಾಗಿ ಬದಲಾವಣೆಯಾಗುವುದು ಅನಿವಾರ್ಯವಾಗುತ್ತದೆ. ಇದರಿಂದ ಅರಣ್ಯೇತರ ಬಳಕೆಗಾಗಿ ಅನುಮತಿ ನೀಡಲಾದ ಅರಣ್ಯ ಪ್ರದೇಶವು ನಿರೂಪಿತ ಉದ್ದೇಶಕ್ಕೆ ಬಳಕೆಯಾಗದೇ ಇರುವ ಸಾಧ್ಯತೆಯಿರುತ್ತದೆ. ***ಈ ಅಂಶವನ್ನು ಪರಿಗಣಿಸಿದಾಗ ಉದ್ದೇಶಿತ ಬಳಕೆಯಿಂದ ಮಾರ್ಗಪಲ್ಲಟ ಮಾಡಿರುವ ಪ್ರಕರಣಗಳಲ್ಲಿ ಷರತ್ತು ಉಲ್ಲಂಘನೆ ಆಧಾರದ ಮೇಲೆ ಅರಣ್ಯೇತರ ಬಳಕೆಗೆ ನೀಡಿರುವ ಮಂಜೂರಾತಿಯನ್ನು ಹಿಂಪಡೆಯುವ ಅವಕಾಶವನ್ನು ಗುತ್ತಿಗೆ ಕರಾರಿನಲ್ಲಿ ಕಲ್ಪಿಸಲಾಗಿದೆ. ಈಗಾಗಲೇ ಅನುಷ್ಠಾನಗೊಳಿಸಿರುವ ಯೋಜನಾ ಕಾಮಗಾರಿಗಳನ್ನು ಭೂ ಬಳಕೆ ಸ್ವರೂಪ ಹಾಗೂ ಆಧಾರದ ಮೇಲೆ ಇತ್ಯರ್ಥಗೊಳಿಸಿ ಅರಣ್ಯ ಭೂಮಿ ಮಾರ್ಗಪಲ್ಲಟವಾಗಿರುವ ಪ್ರಕರಣಗಳಲ್ಲಿ ನಿಯಮಾವಳಿಗಳ ಅನುಸಾರ ಅನುಮತಿಯನ್ನು ಹಿಂಪಡೆಯುವ ಪ್ರಸ್ತಾವನೆಯನ್ನು ಪರಿಗಣಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.***

ಈ ಷರತ್ತಿನ 2ನೇ ಭಾಗದಲ್ಲಿ **Change in Implementation Agency** ಆದ ಪ್ರಕರಣಗಳಲ್ಲೂ ಸಹ ಪ್ರಾರಂಭಿಕ ಸ್ತರದಿಂದ ಕೇಂದ್ರ ಮಂತ್ರಾಲಯಕ್ಕೆ ತೀರುವಳಿಗಾಗಿ ಪ್ರಸ್ತಾವನೆಯನ್ನು ಸಲ್ಲಿಸಬೇಕಾಗುವುದು. ಬಿ.ಎಂ.ಐ.ಸಿ. ಯೋಜನಾ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಪ್ರಥಮ ಸ್ತರದಲ್ಲಿ **Kalyani Group, Sab Engineering and Construction Inc. And Vanasse Hangen Bruslin** ಸಂಸ್ಥೆಗಳನ್ನೊಳಗೊಂಡ ಸಮುಚ್ಛಯವು ತಾಂತ್ರಿಕ ವರದಿಯನ್ನು ನೀಡಿದೆ. ತದನಂತರ, ಈ ಸಮುಚ್ಛಯದೊಂದಿಗೆ 20.11.1995 ರಂದು ಜಾರಿಗೊಳಿಸಲಾದ ಒಡಂಬಡಿಕೆಯ ಆಧಾರದ ಮೇಲೆ 09.09.1996 ರಂದು ನೈಸ್ ಸಂಸ್ಥೆಗೆ ಸಂಪೂರ್ಣ ಅಧಿಕಾರವನ್ನು **Consent and Acknowledgement Agreement** ಮುಖಾಂತರ ಹಸ್ತಾಂತರಿಸಲಾಗಿದೆ. ಅಂದರೆ, ಈ ಯೋಜನಾ ಅನುಷ್ಠಾನದ ಏಜೆನ್ಸಿ ಬದಲಾಗಿರುವುದು ದಾಖಲಾತಿಗಳಿಂದ ಸಮಿತಿಗೆ ಸ್ಪಷ್ಟವಾಗಿದೆ. ಈ ಹಿನ್ನೆಲೆಯಲ್ಲಿ ಕಂಡಿಕೆ ಸಂಖ್ಯೆ. 34ರ ಅನುಗುಣವಾಗಿ ಖಾಸಗಿ ಪಾಲುದಾರರು ಪ್ರತ್ಯೇಕವಾಗಿ ಪರಿಸರ ತೀರುವಳಿ ಪ್ರಸ್ತಾವನೆಯನ್ನು ಸಲ್ಲಿಸಬೇಕಾಗುತ್ತದೆ. ಆದರೆ ಈ ಬಗ್ಗೆ ಇಲಾಖಾ ವತಿಯಿಂದಾಗಲೀ ಅಥವಾ ಖಾಸಗಿ ಪಾಲುದಾರರ ವತಿಯಿಂದಾಗಲೀ ಯಾವುದೇ ಕ್ರಮ ಕೈಗೊಳ್ಳದೇ ಇರುವುದು ಸ್ವಯಂ ವೇದ್ಯವಾಗಿದೆ. ಏಕೆಂದರೆ, ಇಲಾಖಾ ಸ್ಪಷ್ಟೀಕರಣದ ಅನುಗುಣವಾಗಿ ಈ ದಿನಾಂಕಕ್ಕೆ ಅನ್ವಯಿಸುವಂತೆ ಖಾಸಗಿ ಪಾಲುದಾರರಿಗೆ 2003 ರಲ್ಲಿ ಕೇಂದ್ರ ಸರ್ಕಾರದಿಂದ ನೀಡಲಾಗಿರುವ ಪರಿಸರ ತೀರುವಳಿಯೇ ಜಾರಿಯಲ್ಲಿದೆ. 11 ವರ್ಷಗಳಿಗೂ ಮೀರಿ ಈ ಗುರುತರ ಉಲ್ಲಂಘನೆಯನ್ನು ಉಪೇಕ್ಷಿಸಿರುವುದು ಖಂಡನೀಯ ಎಂದು ಸಮಿತಿ ತೀರ್ಮಾನಿಸುತ್ತದೆ. ಈ ವೈಫಲ್ಯತೆಯು ಯೋಜನಾ ಅನುಷ್ಠಾನ ಸ್ತರದಲ್ಲಿ ಪುನ: ಮರುಕಳಿಸಿದೆ. ಏಕೆಂದರೆ, 2002 ರಲ್ಲಿ ಜಾರಿಗೊಳಿಸಲಾದ ತ್ರಿಪಕ್ಷೀಯ ಒಪ್ಪಂದದ ಮುಖಾಂತರ ನೈಸೆಲ್ ಸಂಸ್ಥೆ 2ನೇ ಸ್ತರದಲ್ಲಿ ಒಂದು ಅಸೈನ್‌ಮೆಂಟ್ ಒಡಂಬಡಿಕೆಯ ಮುಖಾಂತರ ಸೆಕ್ಷನ್ 'ಎ' ಅನುಷ್ಠಾನದ ಅಧಿಕಾರವನ್ನು ನೀಸೆಲ್ ಎಂಬ ಸಹೋದರಿ ಸಂಸ್ಥೆಗೆ ಹಸ್ತಾಂತರಿಸಿದೆ. ಈ ಬೆಳವಣಿಗೆಗಳಿಂದ ತಾತ್ವಿಕವಾಗಿ ಯೋಜನಾ ಅನುಷ್ಠಾನದ ಏಜೆನ್ಸಿ ಬದಲಾಗಿರುವುದು ಸ್ಪಷ್ಟವಾಗಿದೆ. ***ಈ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರವು ಖಾಸಗಿ ಪಾಲುದಾರರೊಡನೆ ಅರಣ್ಯ ಭೂಮಿಯ ಹಸ್ತಾಂತರಕ್ಕೆ ಜಾರಿಗೊಳಿಸಲಾದ ಒಪ್ಪಂದದ ನಿರ್ಬಂಧನೆಗಳು ಉಲ್ಲಂಘನೆಯಾಗಿದೆ ಎಂದು ಸಮಿತಿ ತೀರ್ಮಾನಿಸುತ್ತದೆ.*** *ಪರಿಸರ ತೀರುವಳಿಯನ್ನು ಬದಲಾಯಿತ ಸನ್ನಿವೇಶದಲ್ಲಿ ಅಥವಾ ಬದಲಾಯಿತ ಪಥದಲ್ಲಿ ಅಥವಾ ಬದಲಾಯಿತ ಪರಿಸರದಲ್ಲಿ ವಿಭಿನ್ನ ಮಾನದಂಡಗಳ ಆಧಾರದ ಮೇಲೆ ಇತ್ಯರ್ಥಗೊಳಿಸಬೇಕಾಗುವುದು ಸಾಮಾನ್ಯ ಜ್ಞಾನವಾಗಿದೆ. ಆದುದರಿಂದ ಚಾಲ್ತಿಯಲ್ಲಿರುವ ತೀರುವಳಿ ಅಪ್ರಸ್ತುತ ಎಂದು ಸಮಿತಿ ತೀರ್ಮಾನಿಸುತ್ತದೆ. ಆದುದರಿಂದ ಸರ್ಕಾರವು ಈ ಕೂಡಲೇ ಜಾರಿಯಲ್ಲಿರುವ ಪರಿಸರ ತೀರುವಳಿ ಆದೇಶವನ್ನು ರದ್ದುಗೊಳಿಸಲು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.* ಅರಣ್ಯ ಸಂರಕ್ಷಣಾ ತೀರುವಳಿ ಕಾಯಿದೆ 1980 ಸೆಕ್ಷನ್ 2 ರಲ್ಲಿ ಕೇಂದ್ರ ಸರ್ಕಾರವು

ನೀಡಿರುವ ಅರಣ್ಯೇತರ ಬಳಕೆಯ ಅನುಮತಿ ಪರಿಸರ ತೀರುವಳಿ ಹಾಗೂ ರಾಜ್ಯ ಸರ್ಕಾರ ವಿಧಿಸುವ ಷರತ್ತುಗಳ ಪಾಲನೆಯ ನಿರ್ಬಂಧನೆಗೆ ಒಳಪಟ್ಟಿರುತ್ತದೆ. ಈ ಹಿನ್ನೆಲೆಯಲ್ಲಿ ಅರಣ್ಯ ಸಂರಕ್ಷಣಾ ಕಾಯಿದೆಯ ಅಡಿಯಲ್ಲಿ ನೀಡಿರುವ ಅನುಮೋದನೆಯನ್ನು ಪರಿವೀಕ್ಷಿಸುವ ಅವಶ್ಯಕತೆ ಇದೆ ಎಂದು ಸಮಿತಿಯು ತೀರ್ಮಾನಿಸುತ್ತದೆ. ಅರಣ್ಯ ಸಂರಕ್ಷಣಾ ಕಾಯಿದೆಯ ಅಡಿಯಲ್ಲಿ ಅರಣ್ಯೇತರ ಬಳಕೆಗೆ ಅನುಮತಿ ನೀಡಿದ 2 ವರ್ಷದ ಅವಧಿಯ ಒಳಗಾಗಿ ಉದ್ದೇಶಿತ ಯೋಜನಾ ಅನುಷ್ಠಾನಕ್ಕೆ ಬಳಸದೇ ಇರುವ ಪ್ರಕರಣಗಳಲ್ಲಿ ಅನುಮತಿಯಲ್ಲಿ ಹಿಂಪಡೆಯುವ ಸೌಲಭ್ಯವನ್ನು ಕಲ್ಪಿಸಲಾಗಿದೆ. ಪ್ರಸ್ತುತವಾಗಿ ಖಾಸಗಿ ಪಾಲುದಾರರ ಯೋಜನಾ ಅನುಷ್ಠಾನ ಸೆಕ್ಷನ್ 'ಎ' ಹಂತಕ್ಕೆ ಸೀಮಿತವಾಗಿದೆ. ***ಈ ಹಿನ್ನಲೆಯಲ್ಲಿ ಈಗಾಗಲೇ ಜಾರಿಗೊಳಿಸಿರುವ ಕಾಮಗಾರಿಗಳ ಯೋಜನಾ ಪ್ರದೇಶವನ್ನು ಹೊರತುಪಡಿಸಿ ಇತರ ಘಟಕಗಳಲ್ಲಿ ನೀಡಲಾಗಿರುವ ಪರಿವರ್ತಿತ ಅರಣ್ಯ ಭೂಮಿಯನ್ನು ಹಿಂಪಡೆಯುವ ಪ್ರಸ್ತಾವನೆಯನ್ನು ಪರಿಗಣಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.***

***ಖಾಸಗಿ ಪಾಲುದಾರರ ವಿದೇಶಿ ವಿನಿಮಯದ ವಹಿವಾಟುಗಳ ಬಗ್ಗೆ ಸಮಿತಿಯ ವಿಶ್ಲೇಷಣೆ ಹಾಗೂ ಶಿಫಾರಸ್ಸುಗಳು:***

***ಕ್ರಿಯಾ ಒಪ್ಪಂದದ ಅನುಚ್ಛೇಧ 2.1.1.1 ರಲ್ಲಿ ನಮೂದಿಸಿರುವ ಶೆಡ್ಯೂಲ್-2 ಕ್ರಮ ಸಂಖ್ಯೆ 11ರ ಅನುಗುಣವಾಗಿ ಖಾಸಗಿ ಪಾಲುದಾರರು ವಿದೇಶಿ ವಿನಿಮಯ ವ್ಯವಹಾರಗಳಿಗೆ ಸಂಬಂಧಿಸಿದಂತೆ 1973 ರ ಅಧಿನಿಯಮದಡಿ ತೀರುವಳಿಗಳನ್ನು ಪಡೆಯಬೇಕೆಂದು ಪ್ರತಿಪಾದಿಸಲಾಗಿದೆ. ಮುಂದುವರಿದಂತೆ ವಿದೇಶಿ ಮೂಲದ ಗುತ್ತಿಗೆದಾರರಿಗೆ, ವಿದೇಶಿ ಮೂಲದ ಸಲಹೆಗಾರರಿಗೆ, ಪರಿಣಿತರಿಗೆ ಹಾಗೂ ಅನಿವಾಸಿ ಭಾರತೀಯರ ನೇಮಕಾತಿ ಹಾಗೂ ಪಾವತಿಗಳನ್ನು ಈ ಅನುಚ್ಛೇಧದಡಿ ಸೇರ್ಪಡೆ ಮಾಡಲಾಗಿದೆ. ಈ ಪ್ರತಿಪಾದನೆಯ ಹಿನ್ನಲೆಯಲ್ಲಿ ಸಮಿತಿಯು ಈ ಕೆಳಕಂಡಂತೆ ವಿಶ್ಲೇಷಣೆ ಹಾಗೂ ಶಿಫಾರಸ್ಸುಗಳನ್ನು ಮಾಡುತ್ತದೆ:***

ಕ್ರಿಯಾ ಒಪ್ಪಂದದ ಅನುಗುಣವಾಗಿ ಯೋಜನೆಯ ಗುತ್ತಿಗೆಗಳು, ಹಣಕಾಸು ದಾಖಲಾತಿಗಳು, ಗಳಿಕೆಗಳು, ಡಿವಿಡೆಂಟ್‌ಗಳು, ಷೇರುದಾರರ ಪಾಲು ಇತ್ಯಾದಿಗಳನ್ನು ವಿದೇಶಿ ಕರೆನ್ಸಿಗಳಿಗೆ ವಿನಿಮಯ ಮಾಡಲು ಅವಶ್ಯಕವಿರುವ ತೀರುವಳಿ ಹಾಗೂ ಅನುಮತಿಗಳನ್ನು ಖಾಸಗಿ ಪಾಲುದಾರರು ಪಡೆಯಬೇಕಾಗುವುದು. ಇದಕ್ಕೆ ಪೂರಕವಾಗಿ ಕ್ರಿಯಾ ಒಪ್ಪಂದ ಭಾಗ-11 ರ ಅನುಗುಣವಾಗಿ ಈ ಯೋಜನಾ ಅನುಷ್ಠಾನಕ್ಕೆ ಜವಾಬ್ದಾರಿಯುತವಾದ ಸಮೂಹ ಸಂಸ್ಥೆಗಳು ನೈಸೆಲ್ ಸಂಸ್ಥೆಯ ಒಟ್ಟು ಹೂಡಿಕೆಯಲ್ಲಿ ಪ್ರಮುಖ ಭಾಗವನ್ನು ಹೊಂದಿರಬೇಕು ಎಂಬ ಷರತ್ತನ್ನು ವಿಧಿಸಲಾಗಿದೆ. ಇದಲ್ಲದೆ, ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಕ್ರೋಢೀಕೃತ ಹೂಡಿಕೆಯಲ್ಲಿ ಪ್ರತಿಶತ 15 ರಷ್ಟು ಬಂಡವಾಳವು ವಿದೇಶಿ ಮೂಲದ ಈ ಸಮೂಹದ ಸಂಸ್ಥೆಗಳ ಪರವಾಗಿ ನೈಸೆಲ್ ಸಂಸ್ಥೆಯಲ್ಲಿ ಹೂಡಿಕೆಯಾಗಿರಬೇಕು ಎಂಬ ಷರತ್ತನ್ನು ವಿಧಿಸಲಾಗಿದೆ.

ಮುಂದುವರಿದಂತೆ, ಅನುಚ್ಛೇಧ 16.8.2.1 ರ ಅನುಗುಣವಾಗಿ ಯೋಜನೆಯನ್ನು ಅಂತ್ಯಗೊಳಿಸುವಾಗ ಅಥವಾ ರದ್ಧತಿಗೊಳಿಸುವಾಗ ಖರೀದಿಯ ಮೊತ್ತವನ್ನು ಇತ್ಯರ್ಥಗೊಳಿಸಬೇಕಾಗುವುದು. ಈ ಖರೀದಿಯ ಮೊತ್ತದ ಮೌಲ್ಯ ಮಾಪನ ಮಾಡಿದ ದಿನಾಂಕ ಹಾಗೂ ವಾಸ್ತವಿಕವಾಗಿ ಯೋಜನೆ ಹಸ್ತಾಂತರವಾಗುವ ದಿನಾಂಕ ಈ ಮಧ್ಯಂತರ ಅವಧಿಯಲ್ಲಿ ವಿದೇಶಿ ವಿನಿಮಯ ದರಗಳಲ್ಲಿ ಪ್ರತಿಶತ 1 ಅಥವಾ ಅದಕ್ಕಿಂತ ಹೆಚ್ಚುವರಿಯಾಗಿ ಬದಲಾವಣೆಯಾದಲ್ಲಿ, ಖರೀದಿಯ ಪ್ರಕ್ರಿಯೆಯ ನಂತರ ಈ ಹೆಚ್ಚುವರಿ ಮೊತ್ತವನ್ನು ಖರೀದಿ ಮೊತ್ತದ ವಿದೇಶಿ ವಿನಿಮಯದ ಭಾಗ ಎಂದು ಪರಿಗಣಿಸಬೇಕಾಗುವುದು.

ಕ್ರಿಯಾ ಒಪ್ಪಂದದ ಶೆಡ್ಯೂಲ್ 2.11 ರ ಅನುಗುಣವಾಗಿ ಸಂಬಂಧಿತ ಅಧಿನಿಯಮಗಳಡಿಯಲ್ಲಿ ವಿದೇಶಿ ಮೂಲದ ಗುತ್ತಿಗೆದಾರರು, ಸಲಹೆಗಾರರು ಹಾಗೂ ವಿಷಯ ತಜ್ಞರಿಗೆ ಹಣವನ್ನು ಪಾವತಿಸಲು ತೀರುವಳಿ ಅಥವಾ ಅನುಮೋದನೆ ಪಡೆಯುವ ಬಗ್ಗೆ ಪ್ರತಿಪಾದಿಸಲಾಗಿದೆ.

ಕ್ರಿಯಾ ಒಪ್ಪಂದದ ಈ ಅನುಚ್ಛೇಧದಲ್ಲಿ ಕಲ್ಪಿಸಲಾಗಿರುವ ಅವಕಾಶವನ್ನು ವಿಶ್ಲೇಷಿಸಿದಾಗ ಖಾಸಗಿ ಪಾಲುದಾರರು ಈ ಯೋಜನೆಯಲ್ಲಿ ಹೂಡಲು ಉದ್ದೇಶಿಸಿದ್ದ ವಿದೇಶಿ ನೇರ ಬಂಡವಾಳ ಹೂಡಿಕೆಯನ್ನು ಸದೃಢವಾಗಿ ನಿರ್ವಹಿಸಲು ಕ್ರಮ ಕೈಗೊಂಡಿರುವುದು ಸ್ಪಷ್ಟವಾಗಿರುತ್ತದೆ. ಇದಕ್ಕೆ ಪೂರಕವಾಗಿ ಸೋಮಶೇಖರ ರೆಡ್ಡಿ ಪ್ರಕರಣದಲ್ಲಿ ನೈಸೆಲ್ ಸಂಸ್ಥೆಯು ವಿದೇಶಿ ಮೂಲದ ಸಮೂಹ ಸಂಸ್ಥೆಗಳು ಕ್ರೋಢೀಕೃತವಾಗಿ 522 ಕೋಟಿ ರೂ.ಗಳ ಬಂಡವಾಳವನ್ನು ಯೋಜನೆಯಲ್ಲಿ ಹೂಡಲಿದ್ದು, ಈ ಬಂಡವಾಳದ ಪ್ರಮುಖ ಭಾಗ ವಿದೇಶಿ ಬಂಡವಾಳದ ಸ್ವರೂಪದಲ್ಲಿ ಹೂಡಲಾಗುವುದು ಎಂದು ಸ್ಪಷ್ಟೀಕರಿಸಿರುವುದು ಪ್ರಮಾಣ ಪತ್ರದ ಮೂಲಕ ಸಮಿತಿಗೆ ಸ್ಪಷ್ಟವಾಗಿದೆ.

ಈ ಎಲ್ಲಾ ಅಂಶಗಳಿಂದ ವಿದೇಶಿ ಮೂಲದ ಸಮೂಹ ಸಂಸ್ಥೆಗಳ ಮುಖಾಂತರ 522 ಕೋಟಿ ರೂ.ಗಳ ಬಂಡವಾಳ ಹೂಡಿಕೆಯನ್ನು ಯೋಜನೆಯಲ್ಲಿ ಮಾಡಲು ಖಾಸಗಿ ಪಾಲುದಾರರು ಬದ್ಧವಾಗಿರುವುದು ಸ್ಪಷ್ಟವಾಗಿರುತ್ತದೆ. ರಾಜ್ಯ ಉಚ್ಛ ನ್ಯಾಯಾಲಯದಲ್ಲಿ ಪ್ರಕರಣ ಸಂಖ್ಯೆ 45386/2004 ಕ್ಕೆ ಅನ್ವಯಿಸುವಂತೆ ಕಂಡಿಕೆ 24 ಹಾಗೂ 25 ರಲ್ಲಿ ಈ ವಿದೇಶಿ ಸಮೂಹದ ಸಂಸ್ಥೆಗಳು ಬಂಡವಾಳ ಹೂಡಿಕೆಯ ಮುಖಾಂತರ ನೈಸೆಲ್ ಸಂಸ್ಥೆಯಲ್ಲಿ ಪಾಲುದಾರರು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಲಾಗಿದೆ. ಇದಕ್ಕೆ ಪೂರಕವಾಗಿ 09.09.1996ರ ಕನ್ಸೆಂಟ್ ಹಾಗೂ ಅಕ್ನಾಲೆಡ್ಜ್‌ಮೆಂಟ್ ಒಡಂಬಡಿಕೆ ಅನುಗುಣವಾಗಿ ಸಮೂಹ ಸಂಸ್ಥೆಯ ಸದಸ್ಯರು ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ನೈಸೆಲ್ ಸಂಸ್ಥೆಯಲ್ಲಿ ಪ್ರತಿಶತ 15 ರಷ್ಟು ಬಂಡವಾಳ ಹೂಡಿಕೆಯನ್ನು ನಿರ್ವಹಿಸಬೇಕಾಗಿದ್ದು, ನೈಸೆಲ್ ಸಂಸ್ಥೆ ಸ್ಪಷ್ಟೀಕರಣದ ಅನುಗುಣವಾಗಿ ಈ ಮಾನದಂಡವನ್ನು ನಿರ್ವಹಿಸಲಾಗುತ್ತಿದೆ ಎಂದು ನ್ಯಾಯಾಲಯ ಪ್ರಸ್ತಾವಿತ ತೀರ್ಪಿನಲ್ಲಿ ಪ್ರತಿಪಾದಿಸಿದೆ.

***ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ನೈಸೆಲ್ ಸಂಸ್ಥೆ ರಿಜಿಸ್ಟ್ರಾರ್ ಆಫ್ ಕಂಪನೀಸ್ ಬಳಿ ಸಲ್ಲಿಸಿರುವ ವಾರ್ಷಿಕ ವರದಿಯನ್ನು ಪರಿಶೀಲಿಸಿದಾಗ ಈ ಕೆಳಕಂಡ ಅಂಶಗಳು ವ್ಯಕ್ತವಾಗುತ್ತದೆ:***

1. ಸಮೂಹ ಸಂಸ್ಥೆಗಳ ಪಾಲುದಾರರಾದ ಕಲ್ಯಾಣಿ ಗ್ರೂಪ್, ವಿ.ಹೆಚ್.ಬಿ.ಐ.ಎಂ.ಸಿ. ಮತ್ತು ಸ್ಟ್ಯಾಬ್ ಇಂಜಿನೀಯರಿಂಗ್ ಸಂಸ್ಥೆಗಳು ನೈಸೆಲ್ ಸಂಸ್ಥೆ ಸೃಜನೆಯಾದ ದಿನಾಂಕ ಅಂದರೆ 19.01.1996 ಹಾಗೂ ಕ್ರಿಯಾ ಯೋಜನೆಯನ್ನು ಜಾರಿಗೊಳಿಸಿದ ದಿನಾಂಕ 03.04.1997 ಈ ದಿನಾಂಕಗಳಂದು ಯಾವುದೇ ಹೂಡಿಕೆಯನ್ನು ಹೊಂದಿರುವುದಿಲ್ಲ.
2. ಕಲ್ಯಾಣಿ ಸಮೂಹ ಸಂಸ್ಥೆಯು 2001 ರಲ್ಲಿ 17 ಕೋಟಿ ರೂ.ಗಳ ಬಂಡವಾಳ ಹೂಡಿಕೆಯನ್ನು ನೈಸೆಲ್ ಸಂಸ್ಥೆಯಲ್ಲಿ ಮಾಡಿದ್ದು, ಈ ಹೂಡಿಕೆಯು ಸರ್ಕಾರಿ ಹಾಗೂ ಖಾಸಗಿ ಜಮೀನಿನ ಮಂಜೂರಾತಿಯ ನಂತರ ಆಗಿರುವುದನ್ನು ಸಮಿತಿ ಗಮನಿಸಿದೆ. ಮುಂದುವರಿದಂತೆ 2005 ರಲ್ಲಿ ಕಲ್ಯಾಣಿ ಸಮೂಹ ಸಂಸ್ಥೆಯು ಪೆರಿಫರಲ್ ರಸ್ತೆ ಹಾಗೂ ಲಿಂಕ್ ರಸ್ತೆಗಳಿಗೆ ಸಂಬಂಧಿಸಿದ ಖಾಸಗಿ ಜಮೀನುಗಳು ಹಸ್ತಾಂತರವಾದ ನಂತರ 75 ಕೋಟಿ ರೂ.ಗಳನ್ನು ಹೂಡಿಕೆ ಮಾಡಿರುವುದು ದಾಖಲಾತಿಗಳಿಂದ ಸಮಿತಿಗೆ ವ್ಯಕ್ತವಾಗಿದೆ.
3. ಐಸೆಕ್ ಸಂಸ್ಥೆಯ ವರದಿಯ ಅನುಗುಣವಾಗಿ ಷೇರ್ ಹೋಲ್ಡಿಂಗ್ ಪ್ಯಾಟ್ರನ್‌ಗಳ ಸ್ವರೂಪ ಕೆಳಕಂಡಂತಿದೆ:

ವಾಸ್ತವಿಕವಾಗಿ ಕಲ್ಯಾಣಿ ಗ್ರೂಪ್ ಸಮೂಹ ಸಂಸ್ಥೆ ಪ್ರಮುಖ ಸಮುಚ್ಛಯದ ಕಂಪನಿಯಾಗಿದ್ದು, ಇದರಡಿಯಲ್ಲಿ ಇರುವ ಭಾರತ್ ಫೋರ್ಜ್ ಯುಟಿಲಿಟೀಸ್ ಸಮೂಹ ಸಂಸ್ಥೆಯಲ್ಲಿ ನೈಸೆಲ್/ನೀಸೆಲ್ ಹಾಗೂ ಎನ್.ಹೆಚ್.ಡಿ.ಪಿ. ಸಂಸ್ಥೆಗಳು ಒಂದು ಅಂಗಗಳಾಗಿರುತ್ತವೆ. ಈ ಸಮುಚ್ಛಯದ ಎಲ್ಲಾ ಸಂಸ್ಥೆಗಳು ಪರಸ್ಪರವಾಗಿ ಹೂಡಿಕೆಯಲ್ಲಿ ಒಂದು ನಿರೂಪಿತ ಅನುಪಾತದಲ್ಲಿ ಷೇರು ಬಂಡವಾಳವನ್ನು ಹೊಂದಿರುತ್ತವೆ. ನೈಸೆಲ್ ಸಂಸ್ಥೆಯು ಪ್ರತಿಶತ 74.52 ರಷ್ಟು ಷೇರುಗಳನ್ನು ಹೊಂದಿದ್ದು, ನೀಸೆಲ್ ಸಂಸ್ಥೆಯು ಪ್ರತಿಶತ 48.27 ರಷ್ಟು ಷೇರುಗಳನ್ನು ಹೊಂದಿರುತ್ತದೆ. ಮೂಲ ಸಂಸ್ಥೆಗೆ ಹೋಲಿಸಿದಲ್ಲಿ, ಉಪ ಸಂಸ್ಥೆಗಳಾದ ನೈಸೆಲ್/ನೀಸೆಲ್ ಷೇರು ಬಂಡವಾಳ ಗುರುತರವಾಗಿ ಹೆಚ್ಚಾಗಿರುತ್ತದೆ. ಷೇರು ಬಂಡವಾಳ, ಹೂಡಿಕೆ ಹಾಗೂ ಹಂಚಿಕೆಯನ್ನು ಗಮನಿಸಿದಾಗ ಇದೊಂದು ಕ್ಲಿಷ್ಟಕರ ಹೂಡಿಕೆಯ ಅಂತರ್ಜಾಲವಾಗಿರುವುದು ಸಮಿತಿಗೆ ಸ್ಪಷ್ಟವಾಗಿದೆ. ಕಂಪನಿಯ ವಾಸ್ತವಿಕ ಆರ್ಥಿಕ ಲೆಕ್ಕಪತ್ರಗಳಲ್ಲಿ ಉಪ ಸಂಸ್ಥೆಗಳಿಗೆ ಅನ್ವಯಿಸುವಂತೆ ವೈಯಕ್ತಿಕ ಬ್ಯಾಲೆನ್ಸ್ ಶೀಟ್‌ಗಳು ಲಭ್ಯವಿರುವುದಿಲ್ಲ. ಈ ಅಂಕಿ ಅಂಶಗಳನ್ನು ಗಮನಿಸಿದಾಗ ಖಾಸಗಿ ಪಾಲುದಾರರು ದೃಢೀಕರಿಸಿದ 522 ಕೋಟಿ ರೂ.ಗಳ ಬಂಡವಾಳ ಹೂಡಿಕೆ ವಿರುದ್ಧ ವಾಸ್ತವಿಕ ಹೂಡಿಕೆ ಕೇವಲ 78.37 ಕೋಟಿ ರೂ.ಗಳಾಗಿರುತ್ತದೆ.

ಈ ಅಂಶಗಳನ್ನು ಗಮನಿಸಿದಾಗ ಮಾನದಂಡಗಳ ಅನುಸಾರವಾಗಿ ವಿದೇಶಿ ಮೂಲದ ಸಮೂಹ ಸಂಸ್ಥೆಗಳು ಬಂಡವಾಳ ಹೂಡಿಕೆಯನ್ನು ನೈಸೆಲ್ ಸಂಸ್ಥೆಯಲ್ಲಿ ಮಾಡದೇ ಇರುವುದು ಸ್ಪಷ್ಟವಾಗಿದೆ. ಪ್ರಸ್ತಾವಿತ ನ್ಯಾಯಾಲಯದ ತೀರ್ಪಿನ ಕಂಡಿಕೆ 24 ಮತ್ತು 25 ರಲ್ಲಿ ನಿರ್ವಹಿಸಬೇಕಾಗಿದ್ದ ಪ್ರತಿಶತ 15 ರಷ್ಟು ಬಂಡವಾಳ ಹೂಡಿಕೆಯ ಷರತ್ತನ್ನು ಖಾಸಗಿ ಪಾಲುದಾರರು ಸಂಪೂರ್ಣವಾಗಿ ಉಲ್ಲಂಘಿಸಿರುವುದು ಸಮಿತಿಗೆ ಸ್ಪಷ್ಟವಾಗಿದೆ. ಬಂಡವಾಳ ಹೂಡಿಕೆಯ ಮಿತಿಗಳು ಅಥವಾ ಮಾನದಂಡಗಳನ್ನು ಕ್ರಿಯಾ ಒಪ್ಪಂದದ ಅನುಚ್ಛೇಧ 11 ರಲ್ಲಿ ನಿರೂಪಿಸಲಾಗಿದೆ. ***ದಾಖಲಾತಿಗಳ ಆಧಾರದ ಮೇಲೆ ವಸ್ತುಸ್ಥಿತಿಯನ್ನು ಪರಿಶೀಲಿಸಿದಾಗ ಈ ಮಾನದಂಡಗಳು ಸಂಪೂರ್ಣವಾಗಿ ಉಲ್ಲಂಘನೆಯಾಗಿರುವುದು ಸಮಿತಿಗೆ ಸ್ಪಷ್ಟವಾಗಿದೆ. ಇದಲ್ಲದೆ, ನ್ಯಾಯಾಂಗದ ತೀರ್ಪಿನ ಕಂಡಿಕೆ 24 ಹಾಗೂ 25ನ್ನು ಅವಗಾಹನಿಸಿದಾಗ ಅನುಚ್ಛೇಧ 11ರ ಅನುಗುಣವಾಗಿ ವಿದೇಶಿ ಮೂಲದ ಸಮೂಹ ಸಂಸ್ಥೆಗಳು ಬಂಡವಾಳ ಹೂಡಿಕೆ ಮಾಡಿದೆ ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. ಈ ಅಭಿಪ್ರಾಯವು ವಸ್ತುಸ್ಥಿತಿಗೆ ವ್ಯತಿರಿಕ್ತವಾಗಿರುವ ಹಿನ್ನೆಲೆಯಲ್ಲಿ ಖಾಸಗಿ ಪಾಲುದಾರರ ವತಿಯಿಂದ ನ್ಯಾಯಾಲಯಕ್ಕೆ ಅಸಮರ್ಪಕ, ಅಪೂರ್ಣ ಹಾಗೂ ಹಾದಿ ತಪ್ಪಿಸುವ ಸ್ಪಷ್ಟೀಕರಣವನ್ನು ನೀಡಲಾಗಿದೆ ಎಂದು ಸಮಿತಿ ಅನಿವಾರ್ಯವಾಗಿ ತೀರ್ಮಾನಿಸುತ್ತದೆ. ಈ ಹಿನ್ನೆಲೆಯಲ್ಲಿ ಖಾಸಗಿ ಪಾಲುದಾರರ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕರಣವನ್ನು ದಾಖಲಿಸುವುದನ್ನು ಸರ್ಕಾರವು ಪರಿಗಣಿಸಬೇಕು ಎಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.***

***ವಿದೇಶಿ ಮೂಲದ ಸಮೂಹ ಸಂಸ್ಥೆಗಳಿಗೆ ಸೇವಾ ಶುಲ್ಕದ ಪಾವತಿಯ ಬಗ್ಗೆ.***

ಬಿ.ಎಂ.ಐ.ಸಿ. ಯೋಜನೆಯ ಮೊದಲನೇ ಹಂತದ ಅನುಷ್ಠಾನಕ್ಕೆ ಅನುಮೋದನೆಗಳು ಸ್ವೀಕೃತವಾದ ನಂತರ ಈ ಘಟಕದ ಅಡಿಯಲ್ಲಿ ಸಾಧಿಸಲಾದ ಫೈನಾನ್ಷಿಯಲ್ ಕ್ಲೋಷರ್ ಮೊತ್ತದ ಪ್ರತಿಶತ 5 ರಷ್ಟನ್ನು ಸೇವಾ ಶುಲ್ಕವಾಗಿ ವಿದೇಶಿ ಮೂಲದ ಸಮೂಹ ಸಂಸ್ಥೆಗಳಿಗೆ ನೈಸೆಲ್ ಸಂಸ್ಥೆ ಪಾವತಿಸಲು ಒಪ್ಪಂದವನ್ನು ಜಾರಿಗೊಳಿಸಿರುವುದನ್ನು ಸಮಿತಿ ಗಮನಿಸಿದೆ. ತತ್ಸಂಬಂಧವಾಗಿ 31.03.2008ಕ್ಕೆ ಅಂತ್ಯಗೊಂಡ ನೈಸೆಲ್ ಸಂಸ್ಥೆಯ ಲೆಕ್ಕಪತ್ರಗಳಲ್ಲಿ ಸ್ಕ್ಯಾಬ್ ಇಂಜಿನೀಯರಿಂಗ್ ಸಂಸ್ಥೆ, ಯು.ಎಸ್.ಎ. ಈ ಸಂಸ್ಥೆಗೆ ನೀಡಬೇಕಾಗಿರುವ ಸೇವಾ ಶುಲ್ಕದ ಬಾಧ್ಯತೆಯನ್ನು ಬಿಂಬಿಸುವುದನ್ನು ಸಮಿತಿ

ಗಮನಿಸಿದೆ. ಸಂಬಂಧಿತ ನಿರ್ದೇಶಕರ ವರದಿಯನ್ನು ಅವಲೋಕಿಸಿದಾಗ ವಿದೇಶಿ ಮೂಲದ ಸಮೂಹ ಸಂಸ್ಥೆಗಳ ಪಾಲುದಾರರ ಪರವಾಗಿ 33.10 ಕೋಟಿ ರೂ.ಗಳು ಹಸ್ತಾಂತರವಾಗಿರುವುದು ಸ್ಪಷ್ಟವಾಗುತ್ತದೆ. ವಾಸ್ತವಿಕವಾಗಿ ಮೊದಲನೇ ಹಂತದ ಬಂಡವಾಳವನ್ನು ಸಾಲದ ಸ್ವರೂಪದಲ್ಲಿ ಐ.ಸಿ.ಐ.ಸಿ.ಐ. ಬ್ಯಾಂಕ್ ಮುಖಾಂತರ ಪಡೆದಿದ್ದು, 29.03.2004 ರಂದು 836 ಕೋಟಿ ರೂ.ಗಳ ಸಾಲ ಮಂಜೂರಾಗಿದೆ. ಈ ಪೈಕಿ ಪ್ರಥಮ ಸ್ತರದಲ್ಲಿ ಖಾಸಗಿ ಜಮೀನಿನ ಸ್ವಾಧೀನಕ್ಕಾಗಿ 150 ಕೋಟಿ ರೂ.ಗಳು ಬಿಡುಗಡೆಯಾಗಿದೆ. ವಾಸ್ತವಿಕವಾಗಿ ರಾಜ್ಯ ಸರ್ಕಾರವು ಬಂಡವಾಳ ಹೂಡಿಕೆಗಾಗಿ ಸಾಲಗಳನ್ನು ಮಾಡಲು ಅನುಕೂಲವಾಗುವಂತೆ **Comfort Letter**ನೀಡಿದೆ. ಇದರ ಆಧಾರದ ಮೇಲೆ ಖಾಸಗಿ ಪಾಲುದಾರರು 33 ಕೋಟಿ ರೂ.ಗಳನ್ನು ವಿದೇಶಿ ಮೂಲದ ಸಂಸ್ಥೆಗೆ ಹಸ್ತಾಂತರಿಸಿರುವುದು ಅಕ್ಷಮ್ಯ ಅಪರಾಧ ಎಂದು ಸಮಿತಿ ತೀರ್ಮಾನಿಸುತ್ತದೆ. ಈ ಸೇವಾ ಶುಲ್ಕವನ್ನು ಇಂಜಿನೀಯರಿಂಗ್ ಹಾಗೂ ಕನ್ಸ್ಟ್ರಕ್ಷನ್ ಕಾಮಗಾರಿಗಳ ಅನುಷ್ಠಾನದಲ್ಲಿ ಸ್ಯಾಬ್ ಕಂಪನಿ ಸಲ್ಲಿಸಿರುವ ಸೇವೆಗಾಗಿ ಪಾವತಿಸಲಾಗಿದೆ ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. ಆದರೆ ಅಂತರ್ಜಾಲದ ಮುಖಾಂತರ ಸ್ಯಾಬ್ ಇಂಜಿನೀಯರಿಂಗ್ ಕಂಪನಿಯ ಸ್ಥಿತಿಗತಿಗಳನ್ನು ಅವಲೋಕಿಸಿದಾಗ 1985 ರಿಂದ ನಿಷ್ಕ್ರಿಯವಾಗಿರುವುದು ಸ್ಪಷ್ಟವಾಗುತ್ತದೆ. ಈ ಹಿನ್ನೆಲೆಯಲ್ಲಿ ಈ 33 ಕೋಟಿ ರೂ.ಗಳನ್ನು ಅವ್ಯಕ್ತ ಉದ್ದೇಶಗಳನ್ನು ಸಾಧಿಸಲು ನೈಸೆಲ್ ಸಂಸ್ಥೆ ಹಸ್ತಾಂತರ ಮಾಡಿದೆ ಎಂದು ಸಮಿತಿ ತೀರ್ಮಾನಿಸುತ್ತದೆ. ಈ ಹಸ್ತಾಂತರದ ನಂತರದ ಬೆಳವಣಿಗೆಗಳನ್ನು ಅವಲೋಕಿಸಿದಾಗ ಅಕ್ಟೋಬರ್ 2004 ರಿಂದ ಫೆಬ್ರವರಿ 2005ರ ಮಧ್ಯಂತರದಲ್ಲಿ ನೈಸೆಲ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರು 25 ಕೋಟಿ ರೂ.ಗಳ ವಿದೇಶಿ ಬಂಡವಾಳವನ್ನು ಅಮೇರಿಕಾದ ಮುಖಾಂತರ ಹೂಡಿಕೆ ಮಾಡಿರುವುದು ಸ್ಪಷ್ಟವಾಗುತ್ತದೆ. ನೈಸೆಲ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರು ಸ್ಯಾಬ್ ಇಂಜಿನೀಯರಿಂಗ್ ಸಂಸ್ಥೆಯ ಅಧ್ಯಕ್ಷರಾಗಿರುವದನ್ನು ಸಮಿತಿ ಗಮನಿಸಿದೆ. ಅಂದರೆ ಈ ಎರಡೂ ಸಂಸ್ಥೆಗಳ ಸಂಪೂರ್ಣ ನಿರ್ವಹಣಾ ಜವಾಬ್ದಾರಿಯನ್ನು ಒಂದೇ ವ್ಯಕ್ತಿ ನಿರ್ವಹಿಸಿರುವುದು ದಾಖಲಾತಿಗಳಿಂದ ಸಮಿತಿಗೆ ಸ್ಪಷ್ಟವಾಗಿದೆ. ***ಈ ಹಿನ್ನೆಲೆಯಲ್ಲಿ ಸ್ಯಾಬ್ ಇಂಜಿನೀಯರಿಂಗ್ ಸಂಸ್ಥೆಗೆ ಹಸ್ತಾಂತರ ಮಾಡಿರುವ ಹಣವನ್ನು ವಿದೇಶಿ ಬಂಡವಾಳದ ಸ್ವರೂಪದಲ್ಲಿ ಹೂಡಿಕೆ ಮಾಡುವ ಉದ್ದೇಶದಿಂದ ನಿಷ್ಕ್ರಿಯ ಕಂಪನಿಯ ಮುಖಾಂತರ ಕೈಬದಲಾವಣೆ ಮಾಡಿದಂತಾಗುತ್ತದೆ ಎಂದು ಸಮಿತಿ ತೀರ್ಮಾನಿಸುತ್ತದೆ. ಮೂಲವಾಗಿ ಈ 33 ಕೋಟಿ ರೂ.ಗಳನ್ನು ಐ.ಸಿ.ಐ.ಸಿ.ಐ. ಬ್ಯಾಂಕ್ ನೀಡಿರುವ ಸಾಲದಿಂದ ಪಾವತಿಸಿರುವುದರಿಂದ ಈ ಪ್ರಕರಣವು ಸಾರ್ವಜನಿಕ ಹಣದ ದುರ್ಬಳಕೆ ಅಥವಾ ದುರುಪಯೋಗಕ್ಕೆ ಸ್ಪಷ್ಟ ನಿದರ್ಶನ ಎಂದು ಸಮಿತಿ ತೀರ್ಮಾನಿಸುತ್ತದೆ. ಏಕೆಂದರೆ, ವಿದೇಶಿ ಬಂಡವಾಳ ಹೂಡಿಕೆ ಸ್ವಂತ ಸಂಪನ್ಮೂಲಗಳಿಂದ ಆಗದೆ ಸಾರ್ವಜನಿಕ ಬಳಕೆಗಾಗಿ ಪಡೆದ ಸಾಲಗಳಿಂದ ಅನಧಿಕೃತ ಹೊಂದಾಣಿಕೆಗಳ ಮುಖಾಂತರ ಮಾಡಲಾಗಿದೆ. ಈ ವಹಿವಾಟುಗಳ ಬಗ್ಗೆ ಸರ್ಕಾರವು ಅಮೂಲಾಗ್ರ ತನಿಖೆಯನ್ನು ಜಾರಿಗೊಳಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಏಕೆಂದರೆ ಮೇಲ್ನೋಟಕ್ಕೆ ಖಾಸಗಿ ಪಾಲುದಾರರು ಸ್ವಂತ ಸಂಪನ್ಮೂಲದಿಂದ ಬಂಡವಾಳ ಹೂಡಿಕೆ ಮಾಡಿರುವುದಿಲ್ಲ ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ.***

## *III. ಅನುಚ್ಛೇಧ 3 – ರಾಜ್ಯ ಸರ್ಕಾರದ ಕರ್ತವ್ಯಗಳು*

*ಅನುಚ್ಛೇಧ 3.1.1 – ಮಂಜೂರಾತಿಗಳು ಹಾಗೂ ತೀರುವಳಿಗಳನ್ನು ನೀಡುವಲ್ಲಿ ರಾಜ್ಯ ಸರ್ಕಾರದ ಪಾತ್ರ.*

*I. ಖಾಸಗಿ ಜಮೀನು ಮತ್ತು ಸರ್ಕಾರಿ ಜಮೀನನ್ನು ವಶಪಡಿಸಿಕೊಳ್ಳಲು ಕೆ.ಐ.ಎ.ಡಿ.ಬಿ. ನೈಸೆಲ್ ಕಂಪನಿ ಜೊತೆ 1998–1999 ರಲ್ಲಿ ಒಪ್ಪಂದಗಳನ್ನು ಮಾಡಿಕೊಂಡಿದೆ*

2. ಕೆ.ಐ.ಎ.ಡಿ.ಬಿ. ಯು ನೈಸೆಲ್ ಸಂಸ್ಥೆಗೆ ಸುಮಾರು 22 ಕೋಟಿ ರೂ.ಗಳ ಸೇವಾ ಶುಲ್ಕವನ್ನು ವಿಧಿಸಬೇಕಾಗಿದ್ದು,ಇದನ್ನು 7.5 ಕೋಟಿ ರೂ.ಗಳಿಗೆ ಇಳಿಮುಖಗೊಳಿಸಲಾಗಿದೆ.

3. ಸರ್ಕಾರಿ ಜಮೀನನ್ನು ಕ್ರಿಯಾ ಒಪ್ಪಂದದ ಅನುಗುಣವಾಗಿ ಚಾಲ್ತಿಯಲ್ಲಿರುವ ದರಗಳಲ್ಲಿ ಖರೀದಿಸಬೇಕಾಗುವುದು. ಇದರ ಬದಲಾಗಿ ಪ್ರತಿ ಎಕರೆಗೆ ವಾರ್ಷಿಕವಾಗಿ 10 ರೂ.ಗಳಂತೆ 30 ವರ್ಷಗಳ ಅವಧಿಗೆ ಗುತ್ತಿಗೆ ಸ್ವರೂಪದಲ್ಲಿ ನೀಡಲಾಗಿದೆ.

4. 1999 ರಲ್ಲಿ ಬಿ.ಎಂ.ಐ.ಸಿ. ಸ್ಥಳೀಯ ಯೋಜನಾ ಪ್ರಾಧಿಕಾರವನ್ನು ಸೃಜಿಸಲಾಗಿದೆ.

5. ಯೋಜನಾ ಅನುಷ್ಠಾನದ ವಿವಿಧ ಸ್ತರಗಳನ್ನು ಖಾಸಗಿ ಪಾಲುದಾರರ ಬೇಡಿಕೆಯ ಅನುಗುಣವಾಗಿ ಸೆಕ್ಷನ್ 'ಎ', 'ಬಿ' ಮತ್ತು 'ಸಿ' ಎಂದು ಪರಿಷ್ಕರಿಸಿ ಅನುಮೋದನೆಯನ್ನು ನೀಡಲಾಗಿದೆ.

6. ಪರಿಸರ ಸಂರಕ್ಷಣಾ ಮಂಡಳಿಯು ಯೋಜನೆಯನ್ನು ಒಪ್ಪಂದದಂತೆ ಜಾರಿಗೊಳಿಸಲು ನಿರಾಪೇಕ್ಷಣೆಯನ್ನು ನೀಡಿದೆ.

7. ಯೋಜನೆಯ 5 ನಗರ ಸಮುಚ್ಛಯಗಳಲ್ಲಿ ಹಸ್ತಾಂತರಿಸಬೇಕಾದ ಸರ್ಕಾರಿ ಜಮೀನನ್ನು ನೈಸೆಲ್ ಕಂಪನಿಗೆ ವರ್ಗಾಯಿಸಲು 2001 ರಲ್ಲಿ ಅನುಮೋದನೆ ನೀಡಲಾಗಿದೆ.

8. 2001-02 ರ ಸಾಲಿನಲ್ಲಿ ಅರಣ್ಯ ಇಲಾಖೆ ವತಿಯಿಂದ 168 ಎಕರೆ ಅರಣ್ಯ ಪ್ರದೇಶವನ್ನು ನೈಸೆಲ್ ಕಂಪನಿಯ ಮನವಿಗೆ ಅನುಗುಣವಾಗಿ ಮಂಜೂರಾತಿ ಮಾಡಲಾಗಿದೆ.

9. ನೈಸೆಲ್ ಕಂಪನಿ 162 ಕಿ.ಮೀ. ಸಿಮೆಂಟ್ ರಸ್ತೆ ನಿರ್ಮಾಣ ಮಾಡಬೇಕಾಗಿದ್ದು, 2002 ರಲ್ಲಿ ಇದಕ್ಕೆ ಪ್ರತಿಯಾಗಿ 64 ಕಿ.ಮೀ. ಡಾಂಬರು ರಸ್ತೆ ನಿರ್ಮಿಸಿ ಟೋಲ್ ಶುಲ್ಕ ಸಂಗ್ರಹಿಸಲು ಅನುಮತಿ ನೀಡಲಾಗಿದೆ.

10. ನೈಸೆಲ್ ಸಂಸ್ಥೆ ಫೈನಾನ್ಷಿಯಲ್ ಕ್ಲೋಷರ್ ಸಾಧಿಸಿದ 6 ವರ್ಷಗಳಲ್ಲಿ ಪ್ರಸ್ತಾವಿತ ರಸ್ತೆಯನ್ನು ಕಾಂಕ್ರೀಟ್ ರಸ್ತೆಯನ್ನಾಗಿ ಪರಿವರ್ತಿಸುವುದಾಗಿ ಮನವಿ ಮಾಡಿದ್ದು, ಈ ಮನವಿಯನ್ನು ಸರ್ಕಾರ ಪರಿಗಣಿಸಿದೆ.

11. ನೈಸೆಲ್ ಕಂಪನಿಗೆ ಹಸ್ತಾಂತರಿಸಬೇಕಾದ ಸರ್ಕಾರಿ ಮತ್ತು ಖಾಸಗಿ ಜಮೀನುಗಳಿಗೆ ಪ್ರತಿಶತ 100 ರಷ್ಟು ಮುದ್ರಾಂಕ ಶುಲ್ಕ ಹಾಗೂ ನೋಂದಣಿ ಶುಲ್ಕ ರಿಯಾಯಿತಿ ನೀಡಲಾಗಿದೆ.

12. ನೈಸೆಲ್ ಸಂಸ್ಥೆಯು ಫೈನಾನ್ಷಿಯಲ್ ಕ್ಲೋಷರ್ ಸಾಧಿಸುವಲ್ಲಿ ರಾಜ್ಯ ಸರ್ಕಾರ ಗುರುತರ ಪಾತ್ರ ವಹಿಸಿದೆ. ರಾಜ್ಯ ಸರ್ಕಾರವು ಕಂಫರ್ಟ್ ಲೆಟರ್‌ಗಳನ್ನು ಹೂಡಿಕೆದಾರರು ನೀಡಿರುವ ಪ್ರಪತ್ರದಲ್ಲಿಯೇ ಒದಗಿಸಿದೆ.

13. ಕ್ರಿಯಾ ಒಪ್ಪಂದದ ಅನುಗುಣವಾಗಿ ಸೆಕ್ಷನ್ 'ಎ' ಘಟಕದ ಕಾಮಗಾರಿಗಳನ್ನು ನೀಸೆಲ್ ಸಂಸ್ಥೆಗೆ ವಹಿಸುವ ನೈಸೆಲ್ ಸಂಸ್ಥೆಯ ಪ್ರಸ್ತಾವನೆಯನ್ನು ಸರ್ಕಾರವು ಅನುಮೋದಿಸಿದೆ. ಇದಲ್ಲದೆ, 09.03.2002 ರಂದು ತ್ರಿಪಕ್ಷೀಯ ಒಪ್ಪಂದವನ್ನೂ ಸಹ ಜಾರಿಗೊಳಿಸಿದೆ.

### 14. ಬಿ.ಎಂ.ಐ.ಸಿ. ಸ್ಥಳೀಯ ಯೋಜನಾ ಪ್ರಾಧಿಕಾರದ ಓ.ಡಿ.ಪಿ.ಗೆ ಸರ್ಕಾರ ಅನುಮೋದನೆ ನೀಡಿದೆ.

ಕ್ರಿಯಾ ಒಪ್ಪಂದದ ಶೆಡ್ಯೂಲ್-2 ಪ್ರತಿಪಾದನೆಗಳ ಅನುಗುಣವಾಗಿ ರಾಜ್ಯ ಸರ್ಕಾರವು ಸಮಯೋಚಿತವಾಗಿ ಕ್ರಮ ಕೈಗೊಂಡು ಮಂಜೂರಾತಿ ಹಾಗೂ ತೀರುವಳಿಗಳನ್ನು ನೀಡಿರುವುದು ಸಮಿತಿಗೆ ಸ್ಪಷ್ಟವಾಗಿದೆ. ಕೆ.ಐ.ಎ.ಡಿ.ಬಿ. ಅಧಿನಿಯಮದ ಪರಿಷ್ಕರಣೆ, ಖಾಸಗಿ ಪಾಲುದಾರರಿಗೆ ಅನುಕೂಲವಾಗುವಂತೆ 1999-2000 ದಲ್ಲಿ ಪೂರಕ ಒಪ್ಪಂದಗಳ ಅನುಷ್ಠಾನ, ತೆರಿಗೆ ಹಾಗೂ ಇತರೆ ಪಾವತಿಗಳಿಂದ ವಿನಾಯಿತಿ ನೀಡುವ ಪ್ರಸ್ತಾವನೆಯ ಸಂಸ್ಕರಣೆ, ಓ.ಡಿ.ಪಿ. ಅನುಮೋದನೆ ಹಾಗೂ ನಿಯತಕಾಲಿಕವಾಗಿ ಸಂಬಂಧಪಟ್ಟ ಅಧಿನಿಯಮದಡಿ ಸರ್ಕಾರಿ ಹಾಗೂ ಖಾಸಗಿ ಜಮೀನಿನ ಭೂಸ್ವಾಧೀನಕ್ಕೆ ಜಾರಿಗೊಳಿಸಿರುವ ಆದೇಶಗಳು ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮಕ್ಕೆ ನಿದರ್ಶನವಾಗಿರುತ್ತದೆ. *ಕೆ.ಐ.ಎ.ಡಿ.ಬಿ. ಸಂಸ್ಥೆಯು ಮೊದಲನೇ ಸ್ತರದಲ್ಲಿ ಪ್ರಾಥಮಿಕ ಅಧಿಸೂಚನೆಯನ್ನು ನೈಸೆಲ್ ಸಂಸ್ಥೆ ಪರಿಹಾರ ಮೊತ್ತವನ್ನು ಪಾವತಿಸುವ ಪೂರ್ವದಲ್ಲಿಯೇ ಜಾರಿಗೊಳಿಸಿದೆ. ಇದಲ್ಲದೆ, ಸೇವಾ ಶುಲ್ಕವನ್ನೂ ಸಹ ಪ್ರಸಕ್ತ ಸ್ಥಿತಿಯಲ್ಲಿ ಸುಮಾರು 20 ಕೋಟಿ ರೂ.ಗಳಿಂದ 7.5 ಕೋಟಿ ರೂ.ಗಳಿಗೆ ಇಳಿಮುಖಗೊಳಿಸಿದೆ. ಸೆಕ್ಷನ್ 'ಎ' ವ್ಯಾಪ್ತಿಯಲ್ಲಿ ಪೆರಿಫರಲ್ ರಸ್ತೆ ಮತ್ತು ಲಿಂಕ್ ರಸ್ತೆಗೆ ಅವಶ್ಯಕವಿರುವ ಸಂಪೂರ್ಣ ಜಮೀನನ್ನು ಈಗಾಗಲೇ ಹಸ್ತಾಂತರಿಸಲಾಗಿದೆ. ಯೋಜನಾ ಅನುಷ್ಠಾನಕ್ಕೆ ಅವಶ್ಯಕವಿರುವ ಸರ್ಕಾರಿ ಜಮೀನನ್ನು ಸಮಗ್ರವಾಗಿ ಅಂದರೆ ಎಲ್ಲಾ ಸ್ತರಗಳೂ ಒಳಗೊಂಡಂತೆ ಸಂಪೂರ್ಣವಾಗಿ ನೈಸೆಲ್ ಸಂಸ್ಥೆಗೆ ಹಸ್ತಾಂತರಿಸಲಾಗಿದೆ (5000 ಎಕರೆಗಳು). ದಿನಾಂಕ 29.03.2004 ರಂದು ನೈಸೆಲ್ ಸಂಸ್ಥೆ ಸಾಧಿಸಲು ಉದ್ದೇಶಿಸಿದ್ದ ಫೈನಾನ್ಷಿಯಲ್ ಕ್ಲೋಷರ್‌ಗೆ ಬೆಂಬಲ ನೀಡುವ ಉದ್ದೇಶದಿಂದ ನೈಸೆಲ್ ಸಂಸ್ಥೆ ನೀಡಿರುವ ನಮೂನೆಗಳಲ್ಲಿ ಕಂಫರ್ಟ್ ಲೆಟರ್‌ಗಳನ್ನೂ ಸಹ ನೀಡಲಾಗಿದೆ. ಸೆಕ್ಷನ್ 'ಎ' ವ್ಯಾಪ್ತಿಯಲ್ಲಿ ಶುದ್ಧ ಕ್ರಯಪತ್ರಗಳನ್ನೂ ಸಹ ಜಾರಿಗೊಳಿಸಲಾಗಿದೆ.ಟೋಲ್ ಕನ್ಸೆಷನ್ ಒಪ್ಪಂದದ ಅನುಗುಣವಾಗಿ ತಾಂತ್ರಿಕ ಮಾನದಂಡಗಳನ್ನು ಪಾಲಿಸದೇ ಇದ್ದಾಗ್ಯೂ ಸಹ 2008 ರಿಂದ ಈವರೆವಿಗೂ ಟೋಲ್ ಸಂಗ್ರಹಣೆ ಜಾರಿಯಲ್ಲಿದೆ. ಟೋಲ್ ದರಗಳ ಪರಿಷ್ಕರಣೆಯನ್ನು ಈ ತಾಂತ್ರಿಕ ವೈಫಲ್ಯತೆಯ ಹಿನ್ನೆಲೆಯಲ್ಲೂ ನೈಸೆಲ್ ಸಂಸ್ಥೆ ಸ್ವಯಂ ಪ್ರೇರಿತವಾಗಿ ಪರಿಷ್ಕರಿಸಿದೆ. ಅರಣ್ಯ ಸಂರಕ್ಷಣಾ ಕಾಯಿದೆ 1980 ಹಾಗೂ ಪರಿಸರ ಕಾಯಿದೆಯ ಅಡಿಯಲ್ಲಿ ಸಮಯೋಚಿತವಾಗಿ ತೀರುವಳಿಗಳನ್ನು ನೀಡಲಾಗಿದೆ. ವಾಸ್ತವಿಕವಾಗಿ ಈ ತೀರುವಳಿಗಳನ್ನು ಕ್ರಿಯಾ ಒಪ್ಪಂದದ ಪಂಕ್ತೀಕರಣದ ಆಧಾರದ ಮೇಲೆ ಸರ್ಕಾರವು ತ್ವರಿತವಾಗಿ ಹಾಗೂ ಸಮಯೋಚಿತವಾಗಿ ಸಂಸ್ಕರಿಸಿದೆ. ಆದರೆ ಅನುಷ್ಠಾನಗೊಳಿಸಲಾಗುತ್ತಿರುವ ಪಂಕ್ತೀಕರಣ ವಿಭಿನ್ನವಾಗಿರುವುದರಿಂದ ಈ ಯೋಜನೆಯ ಪರಿಸರದ ಮೇಲಿನ ಪರಿಣಾಮದ ಮೌಲ್ಯಮಾಪನವು ವಿಭಿನ್ನವಾಗಿರುತ್ತದೆ. ಕೇಂದ್ರ ಸರ್ಕಾರವು ಮೂಲಭೂತ ಸೌಕರ್ಯ ಅಭಿವೃದ್ಧಿ ಯೋಜನೆಗಳಿಗೆ ಪರಿಸರ ತೀರುವಳಿಯ ಅವಶ್ಯಕತೆ ಇರುವುದಿಲ್ಲವೆಂದು ನಿರ್ಧರಿಸಿರುವುದನ್ನು ಸಮಿತಿ ಗಮನಿಸಿದೆ. ಆದರೆ ಈ ನಿರ್ದೇಶನವು ಆದೇಶ ಜಾರಿಗೊಂಡ ದಿನಾಂಕದಿಂದ ಜಾರಿಗೊಳ್ಳುವುದರಿಂದ ವಿಭಿನ್ನ ಪಂಕ್ತೀಕರಣದ ಆಧಾರದ ಮೇಲೆ ಪರಿಸರ ನಿಯಮದಡಿ ತೀರುವಳಿ ತೆಗೆದುಕೊಳ್ಳುವುದು ಅತ್ಯಾವಶ್ಯಕವಾಗಿರುತ್ತದೆ. ನೈಸೆಲ್ ಸಂಸ್ಥೆ ಬದಲಾಯಿತ ಸನ್ನಿವೇಶದಲ್ಲಿ ಅನುಮೋದನೆಯನ್ನು ಸಂಸ್ಕರಿಸುವ ಬಗ್ಗೆ ಯಾವುದೇ ಪ್ರಸ್ತಾವನೆಯನ್ನು ಸಲ್ಲಿಸಿರುವುದಿಲ್ಲ. ನೈಸೆಲ್ ಸಂಸ್ಥೆ 03.04.1997 ರಂದು ಕ್ರಿಯಾ ಒಪ್ಪಂದ ಜಾರಿಗೊಳ್ಳುವ ಪೂರ್ವದಲ್ಲಿಯೇ ಅನುಷ್ಠಾನದ ಜವಾಬ್ದಾರಿಯನ್ನು ವಿದೇಶಿ ಸಮುಚ್ಛಯ ಸಂಸ್ಥೆಗಳಿಂದ ಸ್ಪೆಷಲ್ ಪರ್ಪಸ್ ವೆಹಿಕಲ್ ಸ್ವರೂಪದಲ್ಲಿ ಪಡೆದಿರುತ್ತದೆ. ಇದೇ ಪ್ರವೃತ್ತಿಯನ್ನು ಮುಂದುವರಿಸಿ 02/2002 ರಲ್ಲಿ ಯೋಜನಾ ಅನುಷ್ಠಾನದ ಸ್ತರಗಳನ್ನು ಪರಿಷ್ಕರಿಸಿ ಸೆಕ್ಷನ್ 'ಎ' ಕಾಮಗಾರಿಗಳ ಅನುಷ್ಠಾನವನ್ನು ಸಹೋದರ ಸಂಸ್ಥೆಯಾದ ನೀಸಲ್‌ಗೆ ವಹಿಸಿರುತ್ತದೆ. 6 ತಿಂಗಳ ನಂತರ 08/2002 ರಂದು ತ್ರಿಪಕ್ಷೀಯ ಒಪ್ಪಂದದ ಮುಖಾಂತರ ಟೋಲ್ ರಸ್ತೆ ಹಾಗೂ ಇಂಟರ್ ಛೇಂಜ್ ವ್ಯಾಪ್ತಿಯ ಜಮೀನಿನ ಮಾರಾಟವನ್ನೂ ಒಳಗೊಂಡಂತೆ ಹಲವಾರು ಕ್ರಿಯಾ ಒಪ್ಪಂದದಲ್ಲಿ ಪ್ರತಿಪಾದನೆ ಇಲ್ಲದೇ ಇರುವ ಷರತ್ತುಗಳನ್ನು ಸೇರ್ಪಡೆ*

*ಮಾಡಿ ಒಪ್ಪಂದವನ್ನು ಜಾರಿಗೊಳಿಸಿದೆ. ಈ ಹಿನ್ನೆಲೆಯಲ್ಲಿ ಸಮಿತಿ ಕರ್ನಾಟಕ ಸರ್ಕಾರದ ಅಭೂತಪೂರ್ವ ಸಹಕಾರದ ನಿದರ್ಶನವಾಗಿ ಈ ಕೆಳಕಂಡಂತೆ ವಿಶ್ಲೇಷಣೆ ಮಾಡುತ್ತದೆ:*

ಕ್ರಿಯಾ ಒಪ್ಪಂದದ ಈ ಕಂಡಿಕೆಯನ್ನು ಕಂಡಿಕೆ 2.1.1.1 ರಲ್ಲಿ ನೀಡಿರುವ ವಿಶ್ಲೇಷಣೆಯ ಹಿನ್ನೆಲೆಯಲ್ಲಿ ಪರಿವೀಕ್ಷಿಸುವುದು ಅವಶ್ಯಕವೆಂದು ಸಮಿತಿ ತೀರ್ಮಾನಿಸುತ್ತದೆ. ಕಂಡಿಕೆ 2.1.1.1 ರ ಅನುಗುಣವಾಗಿ ಕ್ರಿಯಾ ಒಪ್ಪಂದದ ಶೆಡ್ಯೂಲ್ 2 ಅಡಿಯಲ್ಲಿ ನಮೂದಿಸಿರುವ ತೀರುವಳಿ ಹಾಗೂ ಅನುಮೋದನೆಗಳನ್ನು ಚಾಲ್ತಿಯಲ್ಲಿರುವ ನಿಯಮಾವಳಿಗಳ ಹಿನ್ನೆಲೆಯಲ್ಲಿ ಪೂರ್ವಭಾವಿಯಾಗಿ ಪಡೆಯುವುದು ಖಾಸಗಿ ಪಾಲುದಾರರ ಕರ್ತವ್ಯವಾಗಿರುತ್ತದೆ. ಈ ಪೈಕಿ Karnataka Town and Country Planning Act 1961 ಮತ್ತು Karnataka Land Revenue Act and Rules 1964 ಮತ್ತು 1965 ಅಡಿಯಲ್ಲಿ ಅವಶ್ಯಕ ಅನುಮೋದನೆಯನ್ನು ಶೆಡ್ಯೂಲ್ 2 ರ ಕ್ರಮಸಂಖ್ಯೆ 15 ರ ಅನುಗುಣವಾಗಿ ಪಡೆಯುವುದು ಅವಶ್ಯಕವಾಗಿರುತ್ತದೆ. ಈ ಅಂಶಗಳಿಗೆ ಅನ್ವಯಿಸುವಂತೆ ಖಾಸಗಿ ಪಾಲುದಾರರು ಕರ್ನಾಟಕ ಸರ್ಕಾರದೊಂದಿಗೆ ಜಾರಿಗೊಳಿಸಿರುವ ತ್ರಿಪಕ್ಷೀಯ ಒಪ್ಪಂದವನ್ನು ವಿಶ್ಲೇಷಿಸುವುದು ಅವಶ್ಯಕವೆಂದು ಸಮಿತಿಯು ತೀರ್ಮಾನಿಸುತ್ತದೆ. ದಿನಾಂಕ 09.08.2002 ರಂದು ನೀಸೆಲ್ ಸಂಸ್ಥೆಯೊಂದಿಗೆ ರಾಜ್ಯ ಸರ್ಕಾರವು ತ್ರಿಪಕ್ಷೀಯ ಒಪ್ಪಂದವನ್ನು ಜಾರಿಗೊಳಿಸಿದ್ದು, ಬಿ.ಎಂ.ಐ.ಸಿ. ಯೋಜನೆಯ ಸೆಕ್ಷನ್ 'ಎ' (ಫೇಸ್ 1 ಮತ್ತು 2 ರಸ್ತೆ) ಮತ್ತು ಟೌನ್‌ಶಿಪ್-1 ಅನ್ನು ಪ್ರತ್ಯೇಕ ಸ್ತರದಲ್ಲಿ ಅನುಷ್ಠಾನಗೊಳಿಸುವ ಬಗ್ಗೆ ತ್ರಿಪಕ್ಷೀಯ ಒಪ್ಪಂದದಲ್ಲಿ ಪ್ರತಿಪಾದಿಸಲಾಗಿದೆ. ಇದಕ್ಕೆ ಪೂರಕವಾಗಿ ಇಂಟರ್ ಛೇಂಜ್‌ಗಳ ವ್ಯಾಪ್ತಿಯ ಜಮೀನಿನ ಅಭಿವೃದ್ಧಿ ಹಾಗೂ ಮಾರಾಟದ ಸೌಲಭ್ಯವನ್ನೂ ಸಹ ತ್ರಿಪಕ್ಷೀಯ ಒಪ್ಪಂದದಲ್ಲಿ ಪ್ರತಿಪಾದಿಸಲಾಗಿದೆ. ಆದರೆ ಸಮಿತಿಗೆ ಲಭ್ಯವಿರುವ ಮಾಹಿತಿಯ ಅನುಗುಣವಾಗಿ ಈ ಬದಲಾಯಿತ ಅನುಷ್ಠಾನ ಸ್ತರಗಳಿಗೆ ಅನ್ವಯಿಸುವಂತೆ ಬಿ.ಎಂ.ಐ.ಸಿ. ಪ್ರಾಧಿಕಾರದಿಂದ ಈವರೆವಿಗೂ ಖಾಸಗಿ ಪಾಲುದಾರರು ಅಧಿಕೃತವಾಗಿ ಮಂಜೂರಾತಿ ಅಥವಾ ಅನುಮೋದನೆಯನ್ನು ಪಡೆದಿರುವುದಿಲ್ಲ. ಈ ವೈಫಲ್ಯತೆಯು ಕ್ರಿಯಾ ಒಪ್ಪಂದದ ಅನುಚ್ಛೇಧ 3.1ರ ನೇರ ಹಾಗೂ ಸ್ಪಷ್ಟ ಉಲ್ಲಂಘನೆಯೆಂದು ಸಮಿತಿಯು ತೀರ್ಮಾನಿಸುತ್ತದೆ.

09.08.2002ರ ತ್ರಿಪಕ್ಷೀಯ ಒಪ್ಪಂದದ ಅನುಷ್ಠಾನದ ನಂತರ ನೀಸೆಲ್ ಸಂಸ್ಥೆಯು ಬದಲಾಯಿತ ಸೆಕ್ಷನ್ 'ಎ' ಸ್ತರದ ಯೋಜನಾ ಅನುಷ್ಠಾನಕ್ಕೆ ಸಂಬಂಧಿಸಿದಂತೆ ರಾಜ್ಯ ವಾಯು ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಅನುಮೋದನೆಯನ್ನು ಪಡೆದಿರುವುದಿಲ್ಲ. ಈ ವೈಫಲ್ಯತೆಯೂ ಸಹ ಕ್ರಿಯಾ ಒಪ್ಪಂದದ ಅನುಚ್ಛೇಧ 3.1ರ ನೇರ ಹಾಗೂ ಸ್ಪಷ್ಟ ಉಲ್ಲಂಘನೆಯೆಂದು ಸಮಿತಿಯು ತೀರ್ಮಾನಿಸುತ್ತದೆ. ಈ ವರದಿಯಲ್ಲಿ ಈಗಾಗಲೇ ಪ್ರಸ್ತಾಪಿಸಿರುವಂತೆ ಟೋಲ್ ರಸ್ತೆಗೆ ಅನ್ವಯಿಸುವಂತೆ ರಸ್ತೆಯ ಪಥದ ನಕ್ಷೆಗೆ ಸಮಗ್ರ ಅನುಮೋದನೆ ಈವರೆವಿಗೂ ಪಡೆಯುವಲ್ಲಿ ಖಾಸಗಿ ಪಾಲುದಾರರು ನಿರ್ಲ್ಯಕ್ಷ್ಯತಾ ಧೋರಣೆಯನ್ನು ತಳೆದಿರುವುದು ಸ್ಪಷ್ಟವಾಗಿದೆ. ಕೇವಲ ಥೀಮ್ ಅನುಮೋದನೆಯ ಆಧಾರದ ಮೇಲೆ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಕ್ರಿಯಾ ಒಪ್ಪಂದದ ಅವಿಭಾಜ್ಯ ಅಂಗವಾದ ಭಾರತ್ ಫೋರ್ಜ್ ಲಿಮಿಟೆಡ್ ಸಂಸ್ಥೆ ನೀಡಿದ ಪಥ ವಿನ್ಯಾಸ, ಜಮೀನಿನ ಅವಶ್ಯಕತೆ ಹಾಗೂ ಓ.ಡಿ.ಪಿ. ಅಲೈನ್‌ಮೆಂಟ್ ಪ್ರಕಾರ ಅನುಷ್ಠಾನಗೊಳಿಸಲಾಗುತ್ತಿರುವ ರಸ್ತೆಯ ಪಥದ ವಿನ್ಯಾಸಗಳಿಗೆ ಅನ್ವಯಿಸುವಂತೆ ನಿರ್ದಿಷ್ಟವಾಗಿ ಸೃಜಿಸಲಾದ ಬಿ.ಎಂ.ಐ.ಸಿ.ಎ.ಪಿ.ಎ ವತಿಯಿಂದ ಕೆ.ಟಿ.ಸಿ.ಪಿ. ಕಾಯಿದೆ 1961ರ ಅಡಿಯಲ್ಲಿ ಬಿ.ಎಂ.ಐ.ಸಿ. ಯೋಜನೆಗೆ ಅನ್ವಯಿಸುವಂತೆ ನಕ್ಷೆಯ ಅನುಮೋದನೆಯನ್ನು ಪಡೆಯುವಲ್ಲಿ ಖಾಸಗಿ ಪಾಲುದಾರರು ಸಂಪೂರ್ಣವಾಗಿ ವಿಫಲರಾಗಿರುತ್ತಾರೆ. ಆದರೂ ಈ ವೈಫಲ್ಯತೆಗೆ ಅನ್ವಯಿಸುವಂತೆ ಬಿ.ಎಂ.ಐ.ಸಿ.ಎ.ಪಿ.ಎ. ಕೈಗೊಂಡಿರುವ ಅಥವಾ ಜಾರಿಗೊಳಿಸಿರುವ ಕ್ರಮಗಳ ಬಗ್ಗೆ ಸಮಿತಿಗೆ ಯಾವುದೇ ಮಾಹಿತಿ ಇರುವುದಿಲ್ಲ. ಈ ಹಿನ್ನೆಲೆಯಲ್ಲಿ ಬಿ.ಎಂ.ಐ.ಸಿ.ಎ.ಪಿ.ಎ. ಸಂಸ್ಥೆ ನಿಯಮಾವಳಿಗಳ ಅನುಸಾರ ಯೋಜನಾ ಅನುಷ್ಠಾನಕ್ಕೆ

ಅವಶ್ಯಕವಿರುವ ತೀರುವಳಿಗಳು ಹಾಗೂ ಅನುಮೋದನೆಗಳನ್ನು ಕ್ರಿಯಾ ಒಪ್ಪಂದದ ಅನುಗುಣವಾಗಿ ಸಂಸ್ಕರಿಸಿರುವುದನ್ನು ದೃಢೀಕರಿಸಿಕೊಳ್ಳುವಲ್ಲಿ ಸಂಪೂರ್ಣವಾಗಿ ನಿರ್ಲಕ್ಷ್ಯತಾ ಧೋರಣೆಯನ್ನು ತಳೆದಿರುವುದಾಗಿ ಸಮಿತಿ ತೀರ್ಮಾನಿಸುತ್ತದೆ. ಸಮಿತಿಯ ಸಭೆಯ ನಿರ್ಧಿಷ್ಟ ಪ್ರಶ್ನೆಗಳಿಗೆ ಬಿ.ಎಂ.ಐ.ಸಿ.ಎ.ಪಿ.ಎ. ಇಲಾಖಾ ಸಾಕ್ಷಿಗಳು ನಕ್ಷೆಯ ಮಂಜೂರಾತಿ ಅನುಪಸ್ಥಿತಿಯನ್ನು ದೃಢೀಕರಿಸಿರುತ್ತಾರೆ. ಈ ಗುರುತರ ವೈಫಲ್ಯತೆಯಿಂದಾಗಿ ಯೋಜನೆಗೆ 18 ವರ್ಷಗಳಿಗೂ ಮೀರಿ ಅಧಿಕೃತ ಮಂಜೂರಾತಿ/ಅನುಮೋದನೆಯ ಅನುಪಸ್ಥಿತಿಯಲ್ಲಿಯೇ ಜಾರಿಗೊಂಡಿರುವುದನ್ನು ಸಮಿತಿ ವಿಗ್ನಮೆಯಿಂದ ಗಮನಿಸಿದೆ.

## IV. <u>ಅನುಚ್ಛೇದ-3.2 – ಭೂಮಿಯ ನಿರ್ವಹಣೆಗೆ ಸಂಬಂಧಿಸಿದಂತೆ ಖಾಸಗಿ ಪಾಲುದಾರರು ಹಾಗೂ ಸರ್ಕಾರ ನಿರ್ವಹಿಸಬೇಕಾದ ಜವಾಬ್ದಾರಿ ಹಾಗೂ ಕರ್ತವ್ಯಗಳು</u>

ಈ ಅನುಚ್ಛೇಧದ ಅನುಗುಣವಾಗಿ ಖಾಸಗಿ ಪಾಲುದಾರರಿಗೆ ನೀಡಬಹುದಾದ ಜಮೀನು ಕೆಳಕಂಡ ನಿರ್ಬಂಧನೆಗಳಿಗೆ ಒಳಗೊಂಡಿರುತ್ತದೆ:

1. ಕ್ರಿಯಾ ಒಪ್ಪಂದದ ಅನುಚ್ಛೇಧ 1 ರ ಅನುಗುಣವಾಗಿ "LAND" ಎಂದರೆ ಮೂಲಭೂತ ಸೌಕರ್ಯ ಯೋಜನೆಯ ಅಭಿವೃದ್ಧಿ ಹಾಗೂ ಅನುಷ್ಠಾನಕ್ಕೆ ಕ್ರಿಯಾ ಒಪ್ಪಂದದ ಶೆಡ್ಯೂಲ್ 1 ಹಾಗೂ ಯೋಜನಾ ತಾಂತ್ರಿಕ ವರದಿಯ ವಿವರಗಳ ಅನುಗುಣವಾಗಿ ನೀಡಬಹುದಾದ ಜಮೀನು ಎಂದು ವ್ಯಾಖ್ಯಾನಿಸಲಾಗಿದೆ.
2. ಇದಕ್ಕೆ ಪೂರಕವಾಗಿ ನ್ಯಾಯ ಸಮ್ಮತವಾಗಿ ಖಾಸಗಿ ಪಾಲುದಾರರು ಕೋರಿಕೆ ಸಲ್ಲಿಸುವ ಹಾಗೂ ಸರ್ಕಾರವು ಸಹಮತಿ ಸೂಚಿಸುವ ವಿಸ್ತೀರ್ಣದ ಜಮೀನನ್ನೂ ಸಹ ಯೋಜನೆಯ LAND ವ್ಯಾಖ್ಯಾನದಲ್ಲಿ ಸೇರ್ಪಡೆ ಮಾಡಲಾಗಿದೆ.

ದಿನಾಂಕ 18.02.2002 ರ ಅಸೈನ್‌ಮೆಂಟ್ ಒಪ್ಪಂದದಲ್ಲಿ ಭೂಮಿಯ ವ್ಯಾಖ್ಯಾನವನ್ನು ಬದಲಾವಣೆ ಮಾಡಿರುವುದನ್ನು ಸಮಿತಿಯು ಗಮನಿಸಿದೆ. ಇದರ ಅನುಗುಣವಾಗಿ ಭೂಮಿ ಎಂದರೆ ಸ್ಟೇಜ್-1 ಯೋಜನೆಯನ್ನು ಅನುಷ್ಠಾನಗೊಳಿಸಲು ಅವಶ್ಯಕವಿರುವ ಜಮೀನು 6142 ಎಕರೆಗಳು ಎಂದು ತಿಳಿಸಲಾಗಿದೆ (ಸರ್ಕಾರಿ ಹಾಗೂ ಖಾಸಗಿ ಜಮೀನು ಸೇರಿದಂತೆ). ಮುಂದುವರಿದಂತೆ ಈ ಒಪ್ಪಂದವನ್ನು ದಿನಾಂಕ 09.08.2002 ರಂದು ಅನುಷ್ಠಾನಗೊಳಿಸಲಾದ ತ್ರಿಪಕ್ಷೀಯ ಒಪ್ಪಂದದ ಮೂಲಕ ಸಬಲಗೊಳಿಸಲಾಗಿದೆ. ಈ ಒಪ್ಪಂದದಲ್ಲಿ ಕ್ರಿಯಾ ಒಪ್ಪಂದದ ಅನುಚ್ಛೇಧ – 20.2.2 ರ ಅನುಗುಣವಾಗಿ ಹಾಗೂ ಟೋಲ್ ರಿಯಾಯಿತಿ ಒಪ್ಪಂದದ ಷರತ್ತು 11.2.2 ರ ಅನುಗುಣವಾಗಿ ಯೋಜನೆಯ ಸ್ಟೇಜ್-1 ಅಡಿಯಲ್ಲಿ ನಿರ್ಧಿಷ್ಟವಾಗಿ ಷರತ್ತು 1.1.3 ರ ಅಡಿಯಲ್ಲಿ ಈ ಕೆಳಕಂಡ ಸೌಲಭ್ಯಗಳನ್ನು ಕಲ್ಪಿಸಲಾಗಿದೆ:

1. ಭೂಸ್ವಾಧೀನ ಹಾಗೂ ಸಂಬಂಧಿತ ಹಕ್ಕುಗಳು, ಟೈಟಲ್‌ಗಳು (ಸ್ಟೇಜ್-1 ರಸ್ತೆಗಳಿಗೆ ಅನ್ವಯಿಸುವಂತೆ) ಹಾಗೂ *ರಸ್ತೆಗಳ ಅಭಿವೃದ್ಧಿ ಹಾಗೂ ಮಾರಾಟದ ಹಕ್ಕುಗಳು.*

2. ಜಮೀನಿನ ಮೂಲಭೂತ ಅಭಿವೃದ್ಧಿ ಹಾಗೂ ಮಾರಾಟ – ಇಂಟರ್ ಛೇಂಜ್‌ಗಳು ಹಾಗೂ ನಗರ ಸಮುಚ್ಛಯ-1 ಅನ್ನು ಒಳಗೊಂಡಂತೆ.

ಲೋಕೋಪಯೋಗಿ ಇಲಾಖೆಯ ಕಡತ ಸಂಖ್ಯೆ.155/ಸಿಆರ್‌ಎಂ/ಮಾಡಿಫಿಕೇಷನ್/ಎಫ್‌ಡಬ್ಲ್ಯೂಎನೀಸೆಲ್/2002 ಕಡತವನ್ನು ಅವಲೋಕಿಸಿದಾಗ ದಿನಾಂಕ 18.02.2000 ದ ಒಪ್ಪಂದಕ್ಕೆ ಸಚಿವ ಸಂಪುಟದ ಅನುಮೋದನೆ ಪಡೆಯದೇ ಇರುವುದು ಸ್ಪಷ್ಟವಾಗಿದೆ. ಈ ಒಪ್ಪಂದದ ಅನುಷ್ಠಾನಕ್ಕೆ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ಮಟ್ಟದಲ್ಲಿ ಕ್ರಿಯಾ ಒಪ್ಪಂದ ಅನುಚ್ಛೇಧ 20.2.2 ರ ಅಡಿಯಲ್ಲಿ ಅನುಮೋದನೆ ನೀಡಿರುವುದು ಸ್ಪಷ್ಟವಾಗಿದೆ. ಕಾನೂನು ಇಲಾಖೆಯ ಅಭಿಪ್ರಾಯವನ್ನು ಪೂರ್ವಭಾವಿಯಾಗಿ ಪಡೆಯಲಾಗಿದೆ. ಆದರೆ ಈ ಅಭಿಪ್ರಾಯ ಕ್ರಿಯಾ ಒಪ್ಪಂದದ ಅನುಚ್ಛೇಧ 20.2.2 ರ ಅಡಿಯಲ್ಲಿ ಅಸ್ಸೈನ್‌ಮೆಂಟ್ ಒಪ್ಪಂದವನ್ನು ಜಾರಿಗೊಳಿಸುವ ಕ್ರಮದ ಸಮರ್ಪಕತೆಗೆ ಸೀಮಿತವಾಗಿದೆ. ಈ ಘಟನೆಯ ನಂತರ ದಿನಾಂಕ 12.06.2002 ರಂದು ನಡೆಸಲಾದ ಅಧಿಕಾರದತ್ತ ಸಮಿತಿಯಲ್ಲಿ ಅಸ್ಸೈನ್‌ಮೆಂಟ್ ಒಪ್ಪಂದದ ಬಗ್ಗೆ ಯಾವುದೇ ಉಲ್ಲೇಖವಿರುವುದಿಲ್ಲ. ಟೋಲ್ ರಸ್ತೆ ಹಾಗೂ 10 ಇಂಟರ್ ಛೇಂಜ್‌ಗಳ ವ್ಯಾಪ್ತಿಯ ಜಮೀನಿನ ಮಾರಾಟದ ಪ್ರತಿಪಾದನೆ ಕ್ರಿಯಾ ಒಪ್ಪಂದದ ಸ್ಪಷ್ಟ ಹಾಗೂ ನೇರ ಉಲ್ಲಂಘನೆಯಾಗಿದೆ. ವಾಸ್ತವಿಕವಾಗಿ ಅಭಿವೃದ್ಧಿ ಹಾಗೂ ಮಾರಾಟದ ಸೌಲಭ್ಯವನ್ನು ಕ್ರಿಯಾ ಒಪ್ಪಂದದ ಅನುಗುಣವಾಗಿ 5 ನಗರ ಸಮುಚ್ಛಯಗಳಿಗೆ ಸೀಮಿತಗೊಳಿಸಬೇಕಾಗುತ್ತದೆ. ಇದಲ್ಲದೆ, ಕ್ರಿಯಾ ಒಪ್ಪಂದದ ಯಾವುದೇ ಬದಲಾವಣೆಯನ್ನು ಸಚಿವ ಸಂಪುಟದ ಅನುಮೋದನೆಯೊಂದಿಗೆ ಜಾರಿಗೊಳಿಸಬೇಕಾಗುವುದು. ಈ ಪ್ರಕರಣದಲ್ಲಿ ಈ ನಿರ್ದೇಶನದ ಸ್ಪಷ್ಟ ಉಲ್ಲಂಘನೆಯಾಗಿದೆ. ಹಾಗೂ ಈ ವೈಫಲ್ಯತೆಯಿಂದ ಕ್ರಿಯಾ ಒಪ್ಪಂದದ ***'ಲ್ಯಾಂಡ್'*** ವ್ಯಾಖ್ಯಾನವನ್ನು ಸಂಪೂರ್ಣವಾಗಿ ಹಾದಿ ತಪ್ಪಿಸಿದಂತಾಗಿದೆ. ಆದುದರಿಂದ ಲ್ಯಾಂಡ್ ವ್ಯಾಖ್ಯಾನವನ್ನು ಮೂಲ ಕ್ರಿಯಾ ಒಪ್ಪಂದದ ಅನುಗುಣವಾಗಿ ಸರ್ಕಾರವು ಜಾರಿಗೊಳಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

ಕ್ರಿಯಾ ಒಪ್ಪಂದದ ಅನುಚ್ಛೇಧ-3ರ ಅನುಗುಣವಾಗಿ ಕೆ.ಐ.ಎ.ಡಿ.ಬಿ. ಭೂಸ್ವಾಧೀನಪಡಿಸಿಕೊಂಡು ಯೋಜನಾ ಸಂಸ್ಥೆಗೆ ಹಸ್ತಾಂತರಿಸಲು ಅನುಕೂಲವಾಗುವಂತೆ ಕರ್ನಾಟಕ ಆಕ್ಟ್ ನಂ.11/1997ರ ಮುಖಾಂತರ ಕೆ.ಐ.ಎ.ಡಿ.ಬಿ. ಅಧಿನಿಯಮಕ್ಕೆ ತಿದ್ದುಪಡಿ ಆದೇಶವನ್ನು 18.08.1997 ರಂದು ಜಾರಿಗೊಳಿಸಲಾಗಿದೆ. ಇದರ ಅನುಗುಣವಾಗಿ ಕೆ.ಐ.ಎ.ಡಿ.ಬಿ. ಸಂಸ್ಥೆಯು "Industrial Infrastructure Facilities" ಅಭಿವೃದ್ಧಿಗಾಗಿ ಭೂಸ್ವಾಧೀನವನ್ನು ಮಾಡುವ ಅವಕಾಶವನ್ನು ಕಲ್ಪಿಸಲಾಗಿದೆ. ಮೂಲಭೂತ ಸೌಕರ್ಯ ಅಭಿವೃದ್ಧಿ ಕ್ರಿಯಾ ಒಪ್ಪಂದದ ವಿವಿಧ ಉಲ್ಲೇಖಗಳು ಹಾಗೂ ನಿರ್ಧಿಷ್ಟವಾಗಿ ಶೆಡ್ಯೂಲ್ 4 ರಲ್ಲಿ ನಮೂದಿಸಲಾಗಿರುವ ಸವಲತ್ತುಗಳಿಗೆ ಸೀಮಿತವಾಗಿರುವುದು ಅವಶ್ಯಕ ಎಂದು ಸಮಿತಿ ಅಭಿಪ್ರಾಯಪಡುತ್ತದೆ. ಬಿ.ಎಂ.ಐ.ಸಿ. ಯೋಜನೆಯಲ್ಲಿ 5 ನಗರ ಸಮುಚ್ಛಯಗಳನ್ನು ಅಭಿವೃದ್ಧಿಪಡಿಸಲು ಅವಕಾಶ ಕಲ್ಪಸಿದ್ದು, ಈ ನಗರ ಸಮುಚ್ಛಯಗಳಲ್ಲಿ ಕೈಗೊಳ್ಳಬಹುದಾದ ಅಭಿವೃದ್ಧಿ ಕಾಮಗಾರಿಗಳಿಗೆ ಶೆಡ್ಯೂಲ್ 4 ಅನ್ವಯಿಸುತ್ತದೆ. ಈ ಹಿನ್ನೆಲೆಯಲ್ಲಿ ಬಿ.ಎಂ.ಐ.ಸಿ. ಯೋಜನೆಯ ಸೆಕ್ಷನ್ 'ಎ' ಅಡಿಯಲ್ಲಿ ಪೂರಕ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಕಾಮಗಾರಿಗಳು ಹಲವಾರು ಪ್ರಕರಣಗಳಲ್ಲಿ ಕ್ರಿಯಾ ಒಪ್ಪಂದಕ್ಕೆ ವ್ಯತಿರಿಕ್ತವಾಗಿರುವುದನ್ನು ಸಮಿತಿ ಗಮನಿಸಿದೆ. ತ್ರಿಪಕ್ಷೀಯ ಒಪ್ಪಂದದ ಮುಖಾಂತರ ಕಲ್ಪಿಸಲಾಗಿರುವ ಇಂಟರ್ ಛೇಂಜ್ ವ್ಯಾಪ್ತಿಯ ಜಮೀನಿನ ವ್ಯಾಪಾರ ಕ್ರಿಯಾ ಒಪ್ಪಂದದ ಸ್ಪಷ್ಟ ಉಲ್ಲಂಘನೆ ಎಂದು ಸಮಿತಿ ತೀರ್ಮಾನಿಸುತ್ತದೆ. ಪೆರಿಫೆರಲ್ ರಸ್ತೆ, ಲಿಂಕ್ ರಸ್ತೆಗೆ ಅನ್ವಯಿಸುವಂತೆ ಕ್ರಿಯಾ ಒಪ್ಪಂದದಲ್ಲಿ ನಮೂದಿಸದೇ ಇರುವ ವಸತಿ ಸಮುಚ್ಛಯಗಳ ಅಭಿವೃದ್ಧಿ ಹಾಗೂ ಟೋಲ್ ರಸ್ತೆಯ ನಿರ್ವಹಣೆಗೆ ಅವಶ್ಯವಿರುವ ಮತ್ತು "Transferable Toll Road Assets" ಸೃಜನೆಯನ್ನು ಹೊರತುಪಡಿಸಿ ಇತರೆ ಅಭಿವೃದ್ಧಿ ಕಾಮಗಾರಿಗಳನ್ನು ಕ್ರಿಯಾ ಒಪ್ಪಂದದ ಉಲ್ಲಂಘನೆ ಎಂದು ಪರಿಗಣಿಸಿ ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆಯ ಪ್ರಸ್ತಾವಿತ ಅಧಿನಿಯಮಗಳ ಅನುಗುಣವಾಗಿ ಕೆ.ಐ.ಎ.ಡಿ.ಬಿ.

ಕಾಯಿದೆಯ 7(ಎ) ಅಡಿಯಲ್ಲಿ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ದಿನಾಂಕ 16.03.1998 ರಂದು ಅಧಿಸೂಚನೆ ಹೊರಡಿಸಿ ವೇಗದ ಹೆದ್ದಾರಿ ಮತ್ತು ಪಟ್ಟಣಗಳ ಅಭಿವೃದ್ಧಿಯನ್ನು ಕೆ.ಐ.ಎ.ಡಿ.ಬಿ. ಸ್ವಾಧೀನ ಪ್ರಕ್ರಿಯೆಗೆ ಒಳಪಡಿಸಲು ಕ್ರಮ ಜರುಗಿಸಲಾಗಿದೆ.

V. ***ಅನುಚ್ಛೇಧ – 3.2.3. – ಜಮೀನಿನ ವಾಣಿಜ್ಯ ಅಥವಾ ಕೈಗಾರಿಕಾ ಬಳಕೆ, ವಲಯೀಕರಣ ಇತ್ಯಾದಿಗಳ ಬಗ್ಗೆ ಕ್ರಿಯಾ ಒಪ್ಪಂದದ ಹಿನ್ನೆಲೆಯಲ್ಲಿ ಅಥವಾ ಚಾಲ್ತಿಯಲ್ಲಿರುವ ಅಧಿನಿಯಮಗಳ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರದ ಪಾತ್ರ.***

ಈ ಷರತ್ತನ್ನು ಅವಲೋಕಿಸಿದಾಗ ನೈಸೆಲ್/ನೀಸೆಲ್ ಸಂಸ್ಥೆಯು ವಾಣಿಜ್ಯ ಬಳಕೆಗಾಗಲೀ ಅಥವಾ ಕೈಗಾರಿಕಾ ಬಳಕೆಗಾಗಿ ಕ್ರಿಯಾ ಒಪ್ಪಂದದಲ್ಲಿ ಪ್ರತಿಪಾದಿಸಿರುವ ಅಂಶಗಳಿಗೆ ಅನುಗುಣವಾಗಿ ಯೋಜನಾ ಜಮೀನನ್ನು ಬಳಸಬಹುದಾಗಿದೆ. ಈ ರೀತಿ ಬಳಸುವ ಪೂರ್ವದಲ್ಲಿ ಸಾಮಾನ್ಯವಾಗಿ ಕ್ರಿಯಾ ಒಪ್ಪಂದದಲ್ಲಿ ಉಲ್ಲೇಖಿಸಿರುವಂತೆ ಸರ್ಕಾರದ ಮುಖಾಂತರ ವಲಯೀಕರಣ ಅಥವಾ ಮರು ವಲಯೀಕರಣವನ್ನು ಜಾರಿಗೊಳಿಸುವುದು ಅವಶ್ಯಕವಾಗಿರುತ್ತದೆ. ಈ ಪ್ರಕ್ರಿಯೆಯನ್ನು ಕ್ರಿಯಾ ಒಪ್ಪಂದದ ಅನುಗುಣವಾಗಿ ಅಥವಾ ಖಾಸಗಿ ಪಾಲುದಾರರು ಸಲ್ಲಿಸುವ ನ್ಯಾಯಬದ್ಧ ಕೋರಿಕೆಯ ಮೇರೆಗೆ ಚಾಲ್ತಿಯಲ್ಲಿರುವ ನಿಯಮಾವಳಿಗಳ ಹಿನ್ನೆಲೆಯಲ್ಲಿ ಜಾರಿಗೊಳಿಸಬಹುದಾಗಿದೆ. ಈ ಅಂಶವನ್ನು ಗಮನಿಸಿದಾಗ ನೈಸೆಲ್ ಅಥವಾ ನೀಸೆಲ್ ಸಂಸ್ಥೆ ರಾಜ್ಯ ಸರ್ಕಾರಕ್ಕೆ ಬಿ.ಎಂ.ಐ.ಸಿ.ಪಿ.ಎ. ಮುಖಾಂತರ ಕ್ರಿಯಾ ಒಪ್ಪಂದದ ನಿರ್ಬಂಧನೆಗೆ ಒಳಪಟ್ಟಂತೆ ಯೋಜನಾ ವ್ಯಾಪ್ತಿಯ ಪ್ರದೇಶದಲ್ಲಿ ವಲಯೀಕರಣ ಅಥವಾ ಮರು ವಲಯೀಕರಣ ಪ್ರಸ್ತಾವನೆಯನ್ನು ಸಲ್ಲಿಸಬೇಕಾಗುವುದು. ಆದರೆ ಈ ಪ್ರಸ್ತಾವನೆಗಳು ಯೋಜನೆಯ ತಾಂತ್ರಿಕ ವರದಿಯಲ್ಲಿ ಪ್ರಸ್ತಾಪಿಸಿರುವ ಬಳಕೆ/ಉದ್ದೇಶಗಳಿಗೆ ಅನುಗುಣವಾಗಿರುವುದು ಅವಶ್ಯಕವಾಗಿರುತ್ತದೆ. ನೈಸ್ ಸಂಸ್ಥೆಯು ಯೋಜನಾ ತಾಂತ್ರಿಕ ವರದಿ ಹಾಗೂ ಕರಾರಿನ ಶೆಡ್ಯೂಲ್ 1 ರಂತೆ ಒದಗಿಸಲಾಗಿರುವ ಜಮೀನಿನ ಪೈಕಿ ಟೋಲ್ ರಸ್ತೆ ಹೊರತುಪಡಿಸಿ ಚಾಲ್ತಿಯಲ್ಲಿರುವ ಕಾನೂನಿನ ಅನುಗುಣವಾಗಿ ಅನುಚ್ಛೇಧ 2 ರ ಅಡಿಯಲ್ಲಿ ವಲಯೀಕರಣಕ್ಕೆ ಅನುಮೋದನೆಯನ್ನು ಪಡೆಯಬೇಕಾಗುವುದು. ಈ ಹಿನ್ನೆಲೆಯಲ್ಲಿ ವಲಯೀಕರಣ ಅಥವಾ ಮರು ವಲಯೀಕರಣದ ಸೌಲಭ್ಯ ಕರ್ನಾಟಕ ಸರ್ಕಾರವು ಪಟ್ಟಣಗಳಿಗಾಗಿ ಒದಗಿಸಿರುವ ಜಮೀನುಗಳಿಗೆ ಸೀಮಿತವಾಗಿರುವುದು ಅವಶ್ಯಕವೆಂದು ಸಮಿತಿ ತೀರ್ಮಾನಿಸುತ್ತದೆ. ಈ ವಲಯೀಕರಣವೂ ಸಹ ಖಾಸಗಿ ಪಾಲುದಾರರು ಸಲ್ಲಿಸಬಹುದಾದ ವಲಯೀಕರಣ ಸಮಗ್ರವಾಗಿ ಯೋಜನಾ ತಾಂತ್ರಿಕ ವರದಿಯ ವಿವರಗಳ ಅನುಗುಣವಾಗಿ ಇರಬೇಕಾಗಿರುವುದು. ಅಂದರೆ ಯೋಜನಾ ತಾಂತ್ರಿಕ ವರದಿಯಲ್ಲಿ ಸೇರ್ಪಡೆಯಾಗದಿರುವ ಯಾವುದೇ ಅಭಿವೃದ್ಧಿ ಕೈಗೊಳ್ಳಬೇಕಾದಲ್ಲಿ ಈ ಕರಾರಿಗೆ ತಿದ್ದುಪಡಿ ಮೂಲಕ ಅನುಮೋದನೆ ಪಡೆದು ಕೈಗೊಳ್ಳಬಹುದಾಗಿದೆ. ಈ ಅನುಚ್ಛೇಧದಡಿಯಲ್ಲಿ ALL LAND ಎಂಬ ಪದವನ್ನು ಬಳಸಲಾಗಿದೆ. ಆದರೆ ಇದಕ್ಕೆ ಪೂರಕವಾಗಿ As Contemplated by this Agreement ಎಂದು ತಿಳಿಸಲಾಗಿದೆ. ಅಂದರೆ ವಲಯೀಕರಣ ಕ್ರಿಯಾ ಒಪ್ಪಂದದ ನಿರ್ಬಂಧನೆಗಳಿಗೆ ಒಳಪಟ್ಟಿರುತ್ತದೆ. ಈ ಹಿನ್ನೆಲೆಯಲ್ಲಿ ನೈಸೆಲ್ ಸಂಸ್ಥೆಯು ಅನುಷ್ಠಾನಗೊಳಿಸಿರುವ ತ್ರಿಪಕ್ಷೀಯ ಒಪ್ಪಂದವನ್ನು ವಿಶ್ಲೇಷಿಸಿದಲ್ಲಿ, ಇಂಟರ್ ಛೇಂಜ್‌ಗಳಲ್ಲಿ ಅಭಿವೃದ್ಧಿ ಹಾಗೂ ಜಮೀನಿನ ಮಾರಾಟದ ಸೌಲಭ್ಯ ಕ್ರಿಯಾ ಒಪ್ಪಂದಕ್ಕೆ ವ್ಯತಿರಿಕ್ತವಾಗಿರುವುದು ಮೇಲ್ನೋಟಕ್ಕೆ ವ್ಯಕ್ತವಾಗುತ್ತದೆ. ಏಕೆಂದರೆ, ಮಾರಾಟ ಮಾಡಲಾದ ಜಮೀನಿನ ಬಳಕೆ ವಲಯೀಕರಣದ ನಿರ್ಬಂಧನೆಗೆ ಒಳಪಟ್ಟಿದ್ದು, ಸೆಕ್ಷನ್ 'ಎ' ಹಂತದಲ್ಲಿ ವಾಣಿಜ್ಯ ಮತ್ತು ಕೈಗಾರಿಕಾ ಬಳಕೆಗೆ ವಲಯೀಕರಣ ಕೋರಿಕೆಯನ್ನು ಸಲ್ಲಿಸುವ ಹಕ್ಕನ್ನು ಈ ಅನುಚ್ಛೇಧದಡಿಯಲ್ಲಿ ನೀಡಿರುವುದಿಲ್ಲ. ಪ್ರಥಮ ಸ್ತರದಲ್ಲಿ ತ್ರಿಪಕ್ಷೀಯ ಒಪ್ಪಂದ ಕ್ರಿಯಾ ಒಪ್ಪಂದಕ್ಕೆ ಒಂದು ಗುರುತರ ತಿದ್ದುಪಡಿಯ ಸ್ವರೂಪದಲ್ಲಿ ಜಾರಿಗೊಳಿಸಲಾಗಿದ್ದು, ಈ ತಿದ್ದುಪಡಿಗೆ ಅಧಿಕಾರದತ್ತ ಸಮಿತಿಯಾಗಲೀ ಅಥವಾ ಸಚಿವ

ಸಂಪುಟವಾಗಲೀ ಅನುಮೋದನೆ ನೀಡಿರುವುದಿಲ್ಲ. ಈ ಅನಧಿಕೃತ ಸೌಲಭ್ಯದ ವಿಸ್ತರಣೆಯಿಂದಾಗಿ ಜಮೀನಿನ ಬಳಕೆಗೆ ಸಂಬಂಧಿಸಿದಂತೆ ಖಾಸಗಿ ಪಾಲುದಾರರಿಗೆ ಅನುದ್ದೇಶಿತ, ಅನಧಿಕೃತ ಹಾಗೂ ಕಾನೂನು ಬಾಹಿರ ಸೌಲಭ್ಯವನ್ನು ವಿಸ್ತರಿಸಿದಂತಾಗಿದೆ ಎಂದು ಸಮಿತಿಯು ಅಭಿಪ್ರಾಯ ಪಡುತ್ತದೆ.

ಏಕೆಂದರೆ, ಪ್ರಸ್ತಾವಿತ ಅನುಚ್ಛೇಧವನ್ನು ಅವಲೋಕಿಸಿದಾಗ ಯೋಜನಾ ಸಂಸ್ಥೆಯು ಕ್ರಿಯಾ ಒಪ್ಪಂದದಲ್ಲಿ ಕಲ್ಪಿಸಿರುವ ಅವಕಾಶಗಳ ಹಾಗೂ ಯೋಜನಾ ತಾಂತ್ರಿಕ ವರದಿಯ ಪ್ರತಿಪಾದನೆಗಳಿಗೆ ಸೀಮಿತವಾದಂತೆ ಭೂಮಿಯನ್ನು ಬಳಸಲು ಸಮಗ್ರ ಅಧಿಕಾರವನ್ನು ನೀಡಲಾಗಿದೆ. ಆದರೆ ಯೋಜನಾ ತಾಂತ್ರಿಕ ವರದಿ ಹಾಗೂ ಕ್ರಿಯಾ ಒಪ್ಪಂದದಲ್ಲಿ ಅದರಲ್ಲೂ ನಿರ್ದಿಷ್ಟವಾಗಿ ಕ್ರಿಯಾ ಒಪ್ಪಂದದ ಶೆಡ್ಯೂಲ್ 4 ರಲ್ಲಿ ಪ್ರತಿಪಾದಿಸಿರುವ ನಿರ್ಬಂಧನೆಗಳಿಗೆ ವ್ಯತಿರಿಕ್ತವಾಗಿ ಭೂಮಿಯನ್ನು ಬಳಸಲು ಸಾರ್ವತ್ರಿಕ ಅವಕಾಶವನ್ನು ನೀಡಲಾಗಿರುವುದಿಲ್ಲ. ಈ ಸ್ತರದಲ್ಲಿ ದಿನಾಂಕ 20.11.1995ರ ಲೋಕೋಪಯೋಗಿ ಇಲಾಖೆಯ ಆದೇಶದ ಕಂಡಿಕೆ 10 ಅನ್ನು ಅವಲೋಕಿಸುವುದು ಸಮರ್ಪಕ ಎಂದು ಸಮಿತಿ ತೀರ್ಮಾನಿಸುತ್ತದೆ. ಈ ಕಂಡಿಕೆಯ ಅನುಗುಣವಾಗಿ ಸಮಗ್ರ ಯೋಜನೆಯ ನಿರ್ಮಾಣ, ನಿರ್ವಹಣೆ ಹಾಗೂ ಬಳಕೆಯನ್ನು ಯೋಜನಾ ವರದಿಯ ಅನುಗುಣವಾಗಿ ಕಟ್ಟುನಿಟ್ಟಾಗಿ ನಿರ್ವಹಿಸಬೇಕಾಗುವುದು. ಪರಸ್ಪರ ಸಹಮತಿಯೊಂದಿಗೆ ಖಾಸಗಿ ಪಾಲುದಾರರ ಸಮುಚ್ಛಯ ಹಾಗೂ ಸರ್ಕಾರ ಯೋಜನಾ ವರದಿಯಲ್ಲಿ ಜಾರಿಗೊಳಿಸುವ ತಿದ್ದುಪಡಿಗಳನ್ನು ಅಳವಡಿಸುವ ಅವಕಾಶವನ್ನು ಕಲ್ಪಿಸಲಾಗಿದೆ. ಮೂಲಭೂತವಾಗಿ ಈ ಯೋಜನೆಯ ಪ್ರಾಥಮಿಕ ಅಧಿಕಾರ ರಾಜ್ಯ ಸರ್ಕಾರದ್ದು ಎಂದು ಸಮಿತಿ ತೀರ್ಮಾನಿಸುತ್ತದೆ. ಯೋಜನಾ ಸಂಸ್ಥೆಗೆ ಯೋಜನೆಯನ್ನು ವಿನ್ಯಾಸಗೊಳಿಸುವ ಹಾಗೂ ಅನುಷ್ಠಾನಗೊಳಿಸುವ ಅಧಿಕಾರವನ್ನು ನೀಡಿದ್ದಾಗ್ಯೂ ಸಹ, ಈ ಅಧಿಕಾರವನ್ನು ಕ್ರಿಯಾ ಒಪ್ಪಂದ ಹಾಗೂ ಯೋಜನಾ ತಾಂತ್ರಿಕ ವರದಿಯ ನಿರ್ಬಂಧನೆಗೆ ಒಳಪಟ್ಟಂತೆ ಅನುಷ್ಠಾನಗೊಳಿಸುವುದು ಅತ್ಯವಶ್ಯಕವಾಗಿರುತ್ತದೆ. ಖಾಸಗಿ ಪಾಲುದಾರರು ಇತ್ಯರ್ಥಗೊಳಿಸುವ ವಿನ್ಯಾಸ ಹಾಗೂ ಅನುಷ್ಠಾನ ಕ್ರಮಗಳನ್ನು ಕ್ರಿಯಾ ಒಪ್ಪಂದದ ಅನುಚ್ಛೇಧ-2/ಶೆಡ್ಯೂಲ್-2 ರ ಅನುಗುಣವಾಗಿ ಸರ್ಕಾರದ ಸಕ್ಷಮ ಪ್ರಾಧಿಕಾರದ ಅನುಮೋದನೆಯೊಂದಿಗೆ ಜಾರಿಗೊಳಿಸಬೇಕಾಗುವುದು. ಸರ್ಕಾರವು ವಿನ್ಯಾಸ ಹಾಗೂ ಯೋಜನಾ ಅನುಷ್ಠಾನ ವಿಧಿವಿಧಾನಗಳು ಕ್ರಿಯಾ ಒಪ್ಪಂದದ ಅನುಗುಣವಾಗಿ ಇರುವುದನ್ನು ದೃಢೀಕರಿಸಿಕೊಳ್ಳುವ ಉದ್ದೇಶದಿಂದ ಈ ಷರತ್ತನ್ನು ವಿಧಿಸಿರುವುದು ಸಮಿತಿಗೆ ಸ್ಪಷ್ಟವಾಗಿದೆ. ಈ ಸಂದರ್ಭದಲ್ಲಿ ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿಗೆ ಪೂರಕವಾಗಿ ನೀಡಿರುವ ಸ್ಪಷ್ಟೀಕರಣವನ್ನು ಸಮಿತಿಯು ಅವಲೋಕಿಸಿದೆ. ಖಾಸಗಿ ಪಾಲುದಾರರು 41 ಕಿ.ಮೀ. ಗಳ ಪೆರಿಫರೆಲ್ ರಸ್ತೆಗೆ ಅವಶ್ಯಕವಿರುವ 2193 ಎಕರೆ ವಿಸ್ತೀರ್ಣದ ಜಮೀನಿಗೆ ಸಮರ್ಥನೆಯನ್ನು ನೀಡುವ ಸಂದರ್ಭದಲ್ಲಿ ಈ ಜಮೀನನ್ನು ರಾಷ್ಟ್ರೀಯ ಹೆದ್ದಾರಿ-4 ಹಾಗೂ 7 ರಲ್ಲಿ ವಾಹನ ಸಾಂದ್ರತೆಯನ್ನು ವಿತರಿಸಲು ಹಾಗೂ ಬೆಂಗಳೂರು ಉತ್ತರ ಹಾಗೂ ದಕ್ಷಿಣ ಭಾಗಕ್ಕೆ ಸಂಪರ್ಕ ಕಲ್ಪಿಸಲು ಹಾಗೂ ಬೆಂಗಳೂರು ಹೊರವಲಯದ 7 ಪ್ರಮುಖ ರಸ್ತೆಗಳಿಗೆ ಇಂಟರ್ ಛೇಂಜ್‌ಗಳ ಮುಖಾಂತರ ಸಂಪರ್ಕ ಕಲ್ಪಿಸಲು ಬಳಸಲಾಗುವುದು ಎಂದು ಹೇಳಿರುವುದನ್ನು ಸಮಿತಿಯು ಗಮನಿಸಿದೆ. ಈ ಉಲ್ಲೇಖವು ಖಾಸಗಿ ಪಾಲುದಾರರು ನೀಡಿರುವ ಪ್ರತ್ಯುತ್ತರ ತಃಖ್ತೆಯ 7 ರಲ್ಲಿದೆ. ಈ ಪ್ರತಿಪಾದನೆಯಿಂದ ಪೆರಿಫರೆಲ್ ರಸ್ತೆಗೆ ನೀಡಲಾಗಿರುವ ಜಮೀನನ್ನು ರಸ್ತೆಯ ನಿರ್ಮಾಣ, ಇಂಟರ್ ಛೇಂಜ್‌ಗಳ ನಿರ್ಮಾಣ, ಸೇವಾ ಕ್ಷೇತ್ರ, ಟ್ರಕ್‌ಗಳ ನಿಲ್ದಾಣ ಹಾಗೂ ನಿರ್ವಹಣೆಯ ಕ್ಷೇತ್ರ ಇಷ್ಟಕ್ಕೆ ಸೀಮಿತವಾಗಿರುವಂತೆ ಬಳಸುವುದು ಅತ್ಯವಶ್ಯಕವಾಗಿರುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ ಟೋಲ್ ರಸ್ತೆಗೆ ನೀಡಿರುವ ಜಮೀನನ್ನು ನಿವಾಸಿ ಸಮುಚ್ಛಯಗಳ ಅಭಿವೃದ್ಧಿಗೆ ಬಳಸುವುದು ಕ್ರಿಯಾ ಒಪ್ಪಂದದ ನೇರ ಹಾಗೂ ಸ್ಪಷ್ಟ ಉಲ್ಲಂಘನೆ ಎಂದು ಸಮಿತಿ ತೀರ್ಮಾನಿಸುತ್ತದೆ. ದಿನಾಂಕ 03.05.2009 ರಂದು ಅಂದಿನ ಅಡ್ವೊಕೇಟ್ ಜನರಲ್‌ರವರು ಕೆ.ಐ.ಎ.ಡಿ.ಬಿ. ಸಂಸ್ಥೆಗೆ ಮಾರಾಟದ ಕರಾರನ್ನು

ಇತ್ಯರ್ಥಗೊಳಿಸುವಾಗ (ಟೋಲ್ ರಸ್ತೆಯ ಘಟಕಕ್ಕೆ ಸಂಬಂಧಿಸಿದಂತೆ) ಈ ಕೆಳಕಂಡಂತೆ ಷರತ್ತನ್ನು ವಿಧಿಸುವಂತೆ ಕೋರಿದ್ದು, ಇದನ್ನು ಪಾಲಿಸಲಾಗಿದೆ:

"The Vendor has already delivered vacant possession of the said land and the Purchaser acknowledges having thus taken possession of the said Land. The Purchaser shall re-transfer the Transferred Toll Road Assets back to the Karnataka State Government in accordance with the terms and conditions mentioned in the FWA immediately on completion of the 30 years of concession period".

ಈ ವ್ಯಾಖ್ಯಾನದಿಂದ ಪೆರಿಫರಲ್ ರಸ್ತೆಗೆ ನೀಡಲಾಗಿರುವ ಜಮೀನನ್ನು ರಸ್ತೆ ನಿರ್ಮಾಣ, ಇಂಟರ್ ಛೇಂಜ್ ನಿರ್ಮಾಣ ಇತ್ಯಾದಿಗಳಿಗೆ ಬಳಸಬೇಕಾಗುವುದು. ನಿವಾಸಿ ಸಮುಚ್ಛಯದ ಅಭಿವೃದ್ಧಿಗೆ ಈ ಷರತ್ತಿನ ಅನುಗುಣವಾಗಿ "Transferred Toll Road Assets" ವ್ಯಾಪ್ತಿಗೆ ಒಳಪಡುವ ಜಮೀನನ್ನು ಬಳಸುವುದನ್ನು ನಿರ್ಧಿಷ್ಟವಾಗಿ ನಿರ್ಬಂಧಪಡಿಸಲಾಗಿದೆ ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. ಈ ಸ್ತರದಲ್ಲಿ ಯೋಜನಾ ಸಂಸ್ಥೆಯು ಸೋಮಶೇಖರ ರೆಡ್ಡಿ ಪ್ರಕರಣದಲ್ಲಿ ಸಲ್ಲಿಸಿರುವ ಆಕ್ಷೇಪಣೆಗಳಲ್ಲಿ ಎಕ್ಸ್‌ಪ್ರೆಸ್ ವೇ ನಿರ್ಮಾಣಕ್ಕೆ ನೀಡಿರುವ ಜಮೀನನ್ನು ಇನ್ಯಾವುದೇ ಸೌಲಭ್ಯಕ್ಕೆ ಬಳಸಲಾಗುವುದಿಲ್ಲ ಎಂದು ಹೇಳಿರುವುದನ್ನು ಸಮಿತಿಯು ಗಮನಿಸಿದೆ. ಕ್ರಿಯಾ ಒಪ್ಪಂದದ ಅನುಚ್ಛೇಧ 3.2.5 ರ ಅಡಿಯಲ್ಲಿ ನಗರ ಸಮುಚ್ಛಯಗಳ ಬೆಳವಣಿಗೆಗಳ ಬಗ್ಗೆ ಪ್ರತಿಪಾದಿಸಲಾಗಿದ್ದು, ಇದಕ್ಕೆ ಪೂರಕವಾದ ಶೆಡ್ಯೂಲ್ 4 ರ ಅಡಿಯಲ್ಲಿ ನಿವಾಸ, ವಾಣಿಜ್ಯ ಅಭಿವೃದ್ಧಿ ಇತ್ಯಾದಿಗಳ ಬಗ್ಗೆ ಪ್ರತಿಪಾದಿಸಲಾಗಿದೆ. ಇದರಿಂದ ನಗರ ಸಮುಚ್ಛಯಗಳಿಗೆ ನೀಡಿರುವ ಜಮೀನಿಗೆ ಮಾತ್ರ ನಿವಾಸಿ ಸಮುಚ್ಛಯಗಳ ಅಭಿವೃದ್ಧಿ ಸೀಮಿತವಾಗಿರಬೇಕು ಎಂಬ ಅಂಶ ಸ್ಪಷ್ಟವಾಗುತ್ತದೆ.

ಕ್ರಿಯಾ ಒಪ್ಪಂದದ ಅನುಚ್ಛೇಧ 3.5.1 ರ ಅನುಗುಣವಾಗಿ ಯೋಜನಾ ಸಂಸ್ಥೆಗೆ ನಗರ ಸಮುಚ್ಛಯಗಳನ್ನು ಅವರೇ ನಿರ್ಧರಿಸುವ ರೀತಿಯಲ್ಲಿ ಅಭಿವೃದ್ಧಿಪಡಿಸುವ ಅಧಿಕಾರವನ್ನು ನೀಡಲಾಗಿದೆ. ಆದರೆ, ಈ ಅಧಿಕಾರವು ಕೆ.ಟಿ.ಸಿ.ಪಿ. ಅಧಿನಿಯಮದ ನಿರ್ಬಂಧನೆಗಳಿಗೆ ಒಳಪಟ್ಟಿರುತ್ತದೆ. ಈ ಅಧಿನಿಯಮದಲ್ಲಿ ಟೋಲ್ ರಸ್ತೆಯ ವ್ಯಾಪ್ತಿಯಲ್ಲಿ ನಗರ ಸಮುಚ್ಛಯಗಳನ್ನು ನಿರ್ಮಿಸುವ ಅವಕಾಶವನ್ನು ಕಲ್ಪಿಸದೇ ಇರುವುದರಿಂದ ನಿವಾಸಿ ಬಳಕೆ ನಗರ ಸಮುಚ್ಛಯಗಳಿಗೆ ಸೀಮಿತವಾಗಿರಬೇಕು ಎಂಬ ಅಂಶ ಸ್ಪಷ್ಟವಾಗಿದೆ ಎಂದು ಸಮಿತಿಗೆ ಮನದಟ್ಟಾಗಿದೆ. ಇದಲ್ಲದೆ, 20.04.2006 ರ ಮಾನ್ಯ ಸರ್ವೋಚ್ಛ ನ್ಯಾಯಾಲಯದ ತೀರ್ಪಿನ ಅನುಗುಣವಾಗಿ ಕ್ರಿಯಾ ಒಪ್ಪಂದವನ್ನು ತಾತ್ವಿಕವಾಗಿ ಹಾಗೂ ಅಕ್ಷರಶಃ ಯೋಜನಾ ಅನುಷ್ಠಾನದಲ್ಲಿ, ಮೂಲ ಸ್ವರೂಪದಲ್ಲಿ ಪಾಲಿಸಬೇಕಾಗುವುದು. ನ್ಯಾಯಾಂಗ ನಿಂಧನೆ ಪ್ರಕರಣ 144/2006 ರಲ್ಲಿ ಖಾಸಗಿ ಪಾಲುದಾರರ ಪರ ವಾದ ಮಂಡಿಸಿರುವ ಹಿರಿಯ ವಕೀಲರು, ಅರ್ಜಿದಾರರು ಕ್ರಿಯಾ ಒಪ್ಪಂದದಲ್ಲಿ ಇರುವ ಪ್ರತಿಪಾದನೆಗಳಿಗೆ ವ್ಯತಿರಿಕ್ತವಾಗಿ ಅಥವಾ ವಿಭಿನ್ನವಾಗಿ ಯಾವುದೇ ಸೌಲಭ್ಯಗಳನ್ನು ಬಳಸುವುದಿಲ್ಲ ಎಂಬ ದೃಢೀಕರಣವನ್ನು ನೀಡಿರುವುದನ್ನು ಸಮಿತಿಯು ಗಮನಿಸಿದೆ.

*ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಖಾಸಗಿ ಪಾಲುದಾರರು ಯೋಜನಾ ಅನುಷ್ಠಾನದ ಸೆಕ್ಷನ್ 'ಎ' ಅಥವಾ ಫೇಸ್-1 ಅಡಿಯಲ್ಲಿ ಜಾರಿಗೊಳಿಸಲಾಗಿರುವ ಜಂಟಿ ಅಭಿವೃದ್ಧಿ ಕರಾರುಗಳು, ಮಾರ್ಟಗೇಜ್ ಡೀಡ್‌ಗಳು ಹಾಗೂ ಮಾರಾಟದ ಒಪ್ಪಂದಗಳು ಕಾನೂನು ಬಾಹಿರ ಹಾಗೂ ಕ್ರಿಯಾ ಒಪ್ಪಂದದ ಸ್ಪಷ್ಟ ಹಾಗೂ ನೇರ ಉಲ್ಲಂಘನೆ ಎಂದು ಸಮಿತಿ ತೀರ್ಮಾನಿಸುತ್ತದೆ. ಸಮಿತಿಯು ನಿರ್ದೇಶನದ ಅನುಗುಣವಾಗಿ ಐಸೆಕ್ ಸಂಸ್ಥೆಯು ಋಣಭಾರ ಪತ್ರವನ್ನು ಪರಿಶೀಲಿಸಿದೆ. ಇದಕ್ಕೆ ಪೂರಕವಾಗಿ ಉಪನೋಂದಣಾಧಿಕಾರಿಗಳ ಬಳಿ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಿ ವಿಶ್ಲೇಷಿಸಿದ್ದು, ಲಭ್ಯವಿರುವ ಮಾಹಿತಿಗಳ ಆಧಾರದ ಮೇಲೆ*

ಮಾರಾಟ, ಅಡಮಾನ ಹಾಗೂ ಜಂಟಿ ಅಭಿವೃದ್ಧಿ ವಹಿವಾಟುಗಳ ಮುಖಾಂತರ ಖಾಸಗಿ ಪಾಲುದಾರರು ಸ್ವೀಕರಿಸಲು ಅರ್ಹರಿರುವ ಮೊತ್ತದ ವಿವರಗಳು ಕೆಳಕಂಡಂತಿದೆ:

| ಕ್ರಮ ಸಂಖ್ಯೆ | ಗ್ರಾಮದ ಹೆಸರು | ಖಾಸಗಿ ಜಮೀನು (ಎಕರೆ. ಗುಂಟೆಗಳಲ್ಲಿ) | ಮಾರ್ಗಸೂಚಿ ಬೆಲೆ (ರೂ.ಗಳಲ್ಲಿ) | ಮಾರುಕಟ್ಟೆ ಬೆಲೆ (ರೂ.ಗಳಲ್ಲಿ) | ಒಡಂಬಡಿಕೆ/ಕರಾರಿನ ಸ್ವರೂಪ | ಅಭಿವೃದ್ಧಿ ದಾರರ ಹೆಸರು |
|---|---|---|---|---|---|---|
| 1. | ಕೆಂಗೇರಿ | 7.45 | 811305000 | 1947132000 | JDA | DDPL |
| | | 125.58 | 13675662000 | 32821588800 | Mortgage | TWIT & ECL |
| 2. | ಕೊಮ್ಮಘಟ್ಟ | 43.13 | 2818114200 | 2818114200 | JDA | UMR P ltd |
| | | 11.1 | 725274000 | 725274000 | Mortgage | TWIT & ECL |
| 3. | ರಾಮಸಂದ್ರ | 6.03 | 91933380 | 315200160 | Mortgage | TWIR & ECL |
| 4. | ಗೋಣಿಪುರ | 225 | 13231350000 | 13231350000 | Mortgage | TWIR & ECL |
| 5. | ಮಾದಾವರ | 13.35 | 267000000 | 267000000 | Sale | DGM |
| | | 5.8 | 116000000 | 116000000 | Sale | IMTMA |
| | | 3.82 | 76400000 | 76400000 | Sale | UMRPLTD |
| | | 10.23 | 802113840 | 802113840 | JDA | UMRPLTD |
| 6. | ಪಂತರ ಪಾಳ್ಯ | 24.93 | 3257852400 | 3257852400 | Mortgage | TWIR & ECL |
| 7. | ಪಿಲ್ಲಗಾನಹಳ್ಳಿ | 0.68 | 12240000 | 12240000 | Sale | Indrajith Lankesh |
| 8. | ಸೀಗೆಹಳ್ಳಿ | 38.78 | 1689256800 | 2027108160 | Mortgage | TWIR & ECL |
| 9. | ಶ್ರೀಕಂಠಪುರ ಎ | 3.8 | 57000000 | 66500000 | Sale | DGM |
| 10. | ಶ್ರೀಕಂಠಪುರ ಕೆ.ಜಿ. | 1.11 | 16650000 | 19425000 | Sale | DGM |
| 11. | ತಿಪ್ಪೂರು | 125.08 | 5993333280 | 5993333280 | Mortgage | TWIR & ECL |
| 12. | ವರಾಹಸಂದ್ರ | 15.43 | 403278480 | 806556960 | Mortgage | TWIR & ECL |
| 13. | ಹೆಮ್ಮಿಗೆಪುರ | 4.28 | 335586240 | 335586240 | Mortgage | TWIR &ECL |
| 14. | ಬಿ.ಎಂ. ಕಾವಲ್ | 9075 | 5138991000 | 5138991000 | Mortgage | TWIR & ECL |
| | ಒಟ್ಟು | 756.33 | 49519340620 | 70777766040 | | |

ಖಾಸಗಿ ಪಾಲುದಾರರು ಸಚಿವ ಸಂಪುಟದ ಒಪ್ಪಿಗೆಯ ಅನುಪಸ್ಥಿತಿಯಲ್ಲಿ ಕಾನೂನು ಬಾಹಿರವಾಗಿ ಅನುಷ್ಠಾನಗೊಳಿಸಿದ ತ್ರಿಪಕ್ಷೀಯ ಒಪ್ಪಂದದ ಪರಿಷ್ಕೃತ ಷರತ್ತುಗಳ ಆಧಾರದ ಮೇಲೆ ಸೆಕ್ಷನ್ 'ಎ' ವ್ಯಾಪ್ತಿಯ ಜಮೀನಿನ ವಹಿವಾಟುಗಳನ್ನು ಜಾರಿಗೊಳಿಸಿರುವುದು ಸಮಿತಿಗೆ ಸ್ಪಷ್ಟವಾಗಿದೆ. ಕ್ರಿಯಾ ಒಪ್ಪಂದದ ಅನುಗುಣವಾಗಿ ಹಾಗೂ ಕ್ರಿಯಾ ಒಪ್ಪಂದದ ಶೆಡ್ಯೂಲ್ 4 ಅನುಗುಣವಾಗಿ ಖಾಸಗಿ ಪಾಲುದಾರರಿಗೆ ನಿರೂಪಿತ ಆದಾಯ ಮೂಲಗಳು ಎರಡು ಸ್ವರೂಪದ್ದಾಗಿರುತ್ತದೆ. ಮೊದಲನೇ ಸ್ತರದಲ್ಲಿ ಟೋಲ್ ದರಗಳ

ಸ್ವೀಕೃತಿ ಹಾಗೂ 2ನೇ ಸ್ತರದಲ್ಲಿ ನಗರ ಸಮುಚ್ಚಯಗಳಲ್ಲಿ ಸಾರ್ವಜನಿಕ ಸೌಲಭ್ಯಗಳನ್ನು ಹೊರತುಪಡಿಸಿ ಉಳಿದಿರುವ ಜಮೀನನ್ನು ನಿವೇಶನವನ್ನಾಗಿ ಮಾರಾಟ ಮಾಡುವ ಮೂಲಕ ಸ್ವೀಕೃತವಾಗುವ ಆದಾಯ. ಈ ಎರಡೂ ಮೂಲಗಳನ್ನು ಹೊರತುಪಡಿಸಿ ಸ್ವೀಕೃತವಾಗುವ ಆದಾಯವನ್ನು ಅನಧಿಕೃತ ಹಾಗೂ ಕಾನೂನು ಬಾಹಿರ ಎಂದು ಸಮಿತಿ ತೀರ್ಮಾನಿಸುತ್ತದೆ. ಪ್ರಸ್ತಾವಿತ ಸ್ವೀಕೃತಿಗಳು ಉದ್ದೇಶಿತ ಆದಾಯದ ವ್ಯಾಪ್ತಿಗೆ ಕ್ರಿಯಾ ಒಪ್ಪಂದದ ಹಿನ್ನೆಲೆಯಲ್ಲಿ ಒಳಪಟ್ಟಿರುವುದಿಲ್ಲ. ಏಕೆಂದರೆ, ಕ್ರಿಯಾ ಒಪ್ಪಂದದ ಅನುಗುಣವಾಗಿ ಟೋಲ್ ಸ್ವೀಕೃತಿ ಹಾಗೂ ನಗರ ಸಮುಚ್ಚಯದಲ್ಲಿ ಅಭಿವೃದ್ಧಿಪಡಿಸುವ ನಿವೇಶನಗಳ ಮಾರಾಟದಿಂದ ಬರುವ ಸ್ವೀಕೃತಿ ಈ ಎರಡೂ ಅಂಶಗಳಿಗೆ ಸೀಮಿತವಾಗಿದೆ. ಆದುದರಿಂದ ಈ ಸ್ವೀಕೃತಿಗಳನ್ನು ಅನುದ್ದೇಶಿತ ಲಾಭ ಎಂದು ಪರಿಗಣಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. 20.11.1995ರ ಸರ್ಕಾರಿ ಆದೇಶದ ಅನುಗುಣವಾಗಿ ಸರ್ಕಾರಕ್ಕೆ ಯಾವುದೇ ಆರ್ಥಿಕ ಬಾಧ್ಯತೆ ಇಲ್ಲದೆ ಈ ಯೋಜನೆಯನ್ನು ಅನುಷ್ಠಾನಗೊಳಿಸುವುದು ಅವಶ್ಯಕವಾಗಿರುತ್ತದೆ. ಖಾಸಗಿ ಪಾಲುದಾರರು ಮಾಡಿರುವ ಹೂಡಿಕೆ ಲಾಭಾಂಶ ಇತ್ಯಾದಿಗಳನ್ನು ನಿರೂಪಿತ ಪ್ರತಿಫಲಗಳ ಸ್ವರೂಪದಲ್ಲಿ ಹಿಂಪಡೆಯಬೇಕಾಗುತ್ತದೆ. ಈ ಅಂಶಗಳನ್ನು ಪರಿಗಣಿಸಿ ನಗರ ಸಮುಚ್ಚಯಗಳಲ್ಲಿ ಜಮೀನಿನ ಮಾರಾಟ ಹಾಗೂ ಟೋಲ್ ದರಗಳ ವಿಧಿಸುವಿಕೆ ಹಾಗೂ ಸ್ವೀಕೃತಿಯ ಹಕ್ಕನ್ನು ಖಾಸಗಿ ಪಾಲುದಾರರಿಗೆ ನೀಡಲಾಗಿದೆ. ಆದರೆ ಪ್ರಸಕ್ತ ಸಂದರ್ಭದಲ್ಲಿ ಅನಧಿಕೃತ ಅಥವಾ ಕ್ರಿಯಾ ಒಪ್ಪಂದಕ್ಕೆ ವ್ಯತಿರಿಕ್ತವಾಗಿರುವ ಸೌಲಭ್ಯಗಳನ್ನು ಖಾಸಗಿ ಪಾಲುದಾರರು ಜಾರಿಗೊಳಿಸಿ ಅನುದ್ದೇಶಿತ ಲಾಭವನ್ನು ಪಡೆದಿರುವ ಹಿನ್ನೆಲೆಯಲ್ಲಿ ಟೋಲ್ ರಿಯಾಯಿತಿ ಅವಧಿ ಹಾಗೂ ಹೂಡಿಕೆಯ ಮೇಲಿನ ಪ್ರತಿಫಲಗಳನ್ನು ಅನುದ್ದೇಶಿತ ಲಾಭಗಳನ್ನು ಸೇರ್ಪಡೆ ಮಾಡಿ ಪರಿಷ್ಕರಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಯೋಜನೆಯ ಸೆಕ್ಷನ್ 'ಎ' ಅಡಿಯಲ್ಲಿ ಜಾರಿಗೊಳಿಸಲಾದ ರಿಯಲ್ ಎಸ್ಟೇಟ್ ವ್ಯವಹಾರಗಳ ಆದಾಯ ಒಳಗೊಂಡಂತೆ ಹೆಚ್ಚುವರಿ ನೋಂದಣಿ ಶುಲ್ಕ ರಿಯಾಯಿತಿ, ಅನಧಿಕೃತ ಗಣಿಗಾರಿಕೆ ಇತ್ಯಾದಿ ವಹಿವಾಟುಗಳಿಂದ ಖಾಸಗಿ ಪಾಲುದಾರರು ಅನುದ್ದೇಶಿತ ಲಾಭವನ್ನು ಗಳಿಸಿರುವುದು ಸಮಿತಿಗೆ ಸ್ಪಷ್ಟವಾಗಿದೆ. ಪ್ರಸ್ತಾವಿತ ತ್ರಿಪಕ್ಷೀಯ ಒಪ್ಪಂದದ ಅನುಷ್ಠಾನದಿಂದ ಉಂಟಾಗುವ ಸಂದಿಗ್ಧತೆಯನ್ನು ಲೋಕೋಪಯೋಗಿ ಇಲಾಖೆ ಹಾಗೂ ಕಾನೂನು ಇಲಾಖೆ ಸೂಕ್ಷ್ಮಕರವಾಗಿ ಪರಿಗಣಿಸದೇ ಇರುವುದು ಸಮಿತಿಗೆ ಮೇಲ್ನೋಟಕ್ಕೆ ಸ್ಪಷ್ಟವಾಗಿದೆ. ಆದುದರಿಂದ ತ್ರಿಪಕ್ಷೀಯ ಒಪ್ಪಂದದ ಅನುಷ್ಠಾನದ ಸಂದರ್ಭದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ಹಾಗೂ ಸಂಬಂಧಿತ ಅಧಿಕಾರಿ/ಸಿಬ್ಬಂದಿ ವರ್ಗದವರ ವಿರುದ್ಧ ಕಠಿಣ ಶಿಸ್ತಿನ ಕ್ರಮ ಜರುಗಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ತ್ರಿಪಕ್ಷೀಯ ಒಪ್ಪಂದದ ಸಾಧಕ ಬಾಧಕಗಳ ಹಾಗೂ ಕಾನೂನು ಹಿನ್ನೆಲೆಯಲ್ಲಿ ಸಿಂಧುತ್ವದ ಬಗ್ಗೆ ಕಾನೂನು ಇಲಾಖೆಯ ಅಭಿಪ್ರಾಯವನ್ನು ಕೋರಿದ್ದು, ಕಾನೂನು ಇಲಾಖೆಯೂ ಸಹ ಈ ಅನಧಿಕೃತ ಸೌಲಭ್ಯವನ್ನೂ ವಿಸ್ತರಿಸಿರುವ ತಿದ್ದುಪಡಿಗಳನ್ನು ಅಥವಾ ಸೇರ್ಪಡೆಗಳನ್ನು ಸೂಕ್ಷ್ಮಕರವಾಗಿ ವಿಶ್ಲೇಷಿಸದೇ ತ್ರಿಪಕ್ಷೀಯ ಒಪ್ಪಂದದ ಅನುಷ್ಠಾನಕ್ಕೆ ಸಹಮತಿ ಸೂಚಿಸಿರುವುದು ಸ್ಪಷ್ಟವಾಗಿದೆ. ಈ ಹಿನ್ನೆಲೆಯಲ್ಲಿ ತ್ರಿಪಕ್ಷೀಯ ಒಪ್ಪಂದದ ಅಭಿಪ್ರಾಯ ಸಂಸ್ಕರಣೆಯಲ್ಲಿ ಪಾಲ್ಗೊಂಡ ಕಾನೂನು ಇಲಾಖೆಯ ಅಧಿಕಾರಿ/ಸಿಬ್ಬಂದಿ ವರ್ಗದವರನ್ನು ಗುರುತಿಸಿ ಶಿಸ್ತಿನ ಕ್ರಮ ಜರುಗಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ತ್ರಿಪಕ್ಷೀಯ ಒಪ್ಪಂದದ ಹಿನ್ನೆಲೆಯಲ್ಲಿ ಯೋಜನಾ ಅನುಷ್ಠಾನದ ಸೆಕ್ಷನ್ ಎ ಅಡಿಯಲ್ಲಿ ಅನಿಯತವಾಗಿ ನಡೆದಿರುವ ರಿಯಲ್ ಎಸ್ಟೇಟ್ ವ್ಯವಹಾರಗಳನ್ನು ಸೂಕ್ಷ್ಮಕರವಾಗಿ ಅವಲೋಕಿಸುವಲ್ಲಿ ಬಿ.ಎಂ.ಐ.ಸಿ.ಎ.ಪಿ.ಎ. ನಿಷ್ಕ್ರಿಯ ಧೋರಣೆಯನ್ನು ತಳೆದಿರುವುದು ಸಮಿತಿಗೆ ಮನದಟ್ಟಾಗಿದೆ. ಸಮಿತಿಗೆ ಲಭ್ಯವಿರುವ ದಾಖಲಾತಿಗಳ ಅನುಗುಣವಾಗಿ, ತ್ರಿಪಕ್ಷೀಯ ಒಪ್ಪಂದದ ದುರ್ಬಳಕೆ ಹಾಗೂ ರಿಯಲ್ ಎಸ್ಟೇಟ್ ವಹಿವಾಟುಗಳು ಸಾರ್ವಜನಿಕ ಸುದ್ದಿಯಾಗಿದ್ದಾಗ್ಯೂ ಸಹ ಯೋಜನಾ ಅನುಷ್ಠಾನದ ಜವಾಬ್ದಾರಿಯನ್ನು ನಿರ್ವಹಿಸುತ್ತಿರುವ ಲೋಕೋಪಯೋಗಿ ಇಲಾಖೆ, ಬಿ.ಎಂ.ಐ.ಸಿ.ಎ.ಪಿ.ಎ. ಹಾಗೂ ಕಾನೂನು ಇಲಾಖೆ ಈ ಬಗ್ಗೆ 2002 ರಿಂದ ಈವರೆವಿಗೂ ಯಾವುದೇ ನಿಯಂತ್ರಣ ಕ್ರಮಗಳನ್ನು ಜಾರಿಗೊಳಿಸದೇ ಇರುವುದು ಅಕ್ಷಮ್ಯ ಅಪರಾಧ ಎಂದು ಸಮಿತಿ ತೀರ್ಮಾನಿಸುತ್ತದೆ. ಏಕೆಂದರೆ, ಪ್ರಸ್ತಾವಿತ ವಹಿವಾಟುಗಳು ಸುಮಾರು 5 ವರ್ಷಗಳ ಅವಧಿಯಲ್ಲಿ ನಡೆದಿದೆ. ಪ್ರೋತ್ಸಾಹಿತ್ಕೃತ ವಹಿವಾಟುಗಳ ಪೈಕಿ 6665.96 ಎಕರೆಗಳನ್ನು ಅಡಮಾನವಿಟ್ಟಿದ್ದು, 23.55

*ಎಕರೆಗಳನ್ನು ಮಾರಾಟ ಮಾಡಲಾಗಿದ್ದು, 60.81 ಎಕರೆಗಳನ್ನು ಜಂಟಿ ಅಭಿವೃದ್ಧಿ ಒಡಂಬಡಿಕೆಗೆ ಒಳಪಡಿಸಲಾಗಿದೆ. ಈ ಸ್ವರೂಪ ಹಾಗೂ ವ್ಯಾಪಕತೆಯ ವಹಿವಾಟುಗಳ ಸಾಂಕೇತಿಕ ಮೌಲ್ಯ, ಮಾರ್ಗಸೂಚಿ ದರಗಳ ಆಧಾರದ ಮೇಲೆ 4951 ಕೋಟಿ ರೂ.ಗಳಾಗಿದೆ. ಈ ಎಲ್ಲಾ ಬೆಳವಣಿಗೆಗಳನ್ನು ಸೂಕ್ಷ್ಮಕರವಾಗಿ ಅವಲೋಕಿಸುವಲ್ಲಿ ಅಥವಾ ಈ ಬೆಳವಣಿಗೆಗೆ ಸಮಯೋಚಿತವಾಗಿ ಸ್ಪಂದಿಸುವಲ್ಲಿ ಸಂಬಂಧಿತ ಸರ್ಕಾರಿ ಇಲಾಖೆಗಳು ನಿರ್ಲಕ್ಷ್ಯತಾ ಧೋರಣೆಯನ್ನು ತಳೆದಿರುವುದನ್ನು ಸಮಿತಿಯು ದಿಗ್ಭ್ರಮೆಯಿಂದ ಗಮನಿಸಿದೆ.*

***ಈ ಹಿನ್ನೆಲೆಯಲ್ಲಿ 09.08.2002 ರಂದು ಅನುಷ್ಠಾನಗೊಳಿಸಲಾದ ತ್ರಿಪಕ್ಷೀಯ ಒಪ್ಪಂದವನ್ನು ಅನುಚ್ಛೇಧ 2.1.1.1 ಹಾಗೂ ಅನುಚ್ಛೇಧ 3.2.3ರ ಉಲ್ಲಂಘನೆ ಆಧಾರದ ಮೇಲೆ ರದ್ದುಪಡಿಸಲು ಕಾನೂನು ರೀತ್ಯಾ ಕ್ರಮ ಜರುಗಿಸಬೇಕೆಂದು ಸಮಿತಿ ಶಿಫಾರಸ್ಸು ಮಾಡುತ್ತದೆ.***

### VI. ***ಅನುಚ್ಛೇಧ 3.2.4 – ರಾಜ್ಯ ಸರ್ಕಾರವು ಸ್ಪಷ್ಟ, ಅಧಿಕೃತ ಹಾಗೂ ಮಾರಾಟಕ್ಕೆ ಅರ್ಹವಿರುವ, ಋಣಭಾರ ರಹಿತವಾದ ಜಮೀನನ್ನು ನೀಡುವ ಬಗ್ಗೆ.***

ಈ ಕಂಡಿಕೆಯಡಿಯಲ್ಲಿ ನೈಸೆಲ್/ನೀಸೆಲ್ ಸಂಸ್ಥೆಗೆ ಹಸ್ತಾಂತರಿಸಲಾದ ಜಮೀನುಗಳ ಬಳಕೆ ಅಥವಾ ಮಾಲೀಕತ್ವದ ಪ್ರಕ್ರಿಯೆಯಲ್ಲಿ ಉಂಟಾಗುವ ಬಾಧ್ಯತೆಗಳಿಗೆ ಕರ್ನಾಟಕ ಸರ್ಕಾರ ಜವಾಬ್ದಾರಿಯನ್ನು ನಿಭಾಯಿಸಬೇಕಾಗುವುದು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ. ಲಭ್ಯವಿರುವ ಮಾಹಿತಿಯ ಅನುಗುಣವಾಗಿ ಈ ಸ್ವರೂಪದ ಬಾಧ್ಯತೆ ಈವರೆವಿಗೂ ಸೃಷ್ಟಿಯಾಗಿರುವುದಿಲ್ಲ. ಆದಾಗ್ಯೂ, ಈ ಕಂಡಿಕೆಯಲ್ಲಿ ಬಳಸಲಾದ Ownership ಎಂಬ ಪದವು ಕ್ರಿಯಾ ಒಪ್ಪಂದದ ಅನುಗುಣವಾಗಿ ನಗರ ಸಮುಚ್ಛಯಗಳ ಅಭಿವೃದ್ಧಿಗಾಗಿ ನೀಡಬೇಕಾಗಿರುವ ಜಮೀನಿಗೆ ಕ್ರಿಯಾ ಒಪ್ಪಂದದ ಅನುಗುಣವಾಗಿ ಸೀಮಿತವಾಗಿರಬೇಕು ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. ಏಕೆಂದರೆ ಕ್ರಿಯಾ ಒಪ್ಪಂದ ಹಾಗೂ ಅದರ ಪೂರಕ ಶೆಡ್ಯೂಲುಗಳ ಅನುಗುಣವಾಗಿ ಮಾಲೀಕತ್ವದ ಪ್ರಶ್ನೆ ಕೇವಲ ನಗರ ಸಮುಚ್ಛಯಗಳಿಗೆ ಸೀಮಿತವಾಗಿರುತ್ತದೆ.

ಈ ಷರತ್ತನ್ನು ಅವಲೋಕಿಸಿದಾಗ ಯಾವುದೇ ಕ್ಲಿಷ್ಟತೆ ಇರದ ಹಾಗೂ ಋಣಭಾರದಿಂದ ಸಂಪೂರ್ಣವಾಗಿ ಮುಕ್ತವಾಗಿರುವ ಹಾಗೂ ಮಾರಾಟ ಮಾಡಬಹುದಾದಂತಹ ಜಮೀನನ್ನು ನೈಸೆಲ್/ನೀಸೆಲ್ ಸಂಸ್ಥೆಗೆ ಹಸ್ತಾಂತರಿಸಬೇಕು ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. ಈ ಹಿನ್ನೆಲೆಯಲ್ಲಿ ಕೆ.ಐ.ಎ.ಡಿ.ಬಿ. ಸಂಸ್ಥೆಯು ಶುದ್ಧ ಕ್ರಯ ಪತ್ರ (Absolute Sale Deed) ಗಳನ್ನು ಜಾರಿಗೊಳಿಸಿರುವುದನ್ನು ಸಮಿತಿಯು ಗಮನಿಸಿದೆ. 28.05.2003 ರಂದು ನಡೆಸಲಾದ ಅಧಿಕಾರದತ್ತ ಸಮಿತಿಯ ಸಭೆಯ ಕಾರ್ಯಸೂಚಿ ಸಂಖ್ಯೆ.3(iv) ರಲ್ಲಿ ಈ ಕೆಳಕಂಡಂತೆ ನಿರ್ಧರಿಸಲಾಗಿದೆ:

"ಲೋಕೋಪಯೋಗಿ ಇಲಾಖೆ, ಕಾನೂನು ಇಲಾಖೆ ಹಾಗೂ ಕಂದಾಯ ಇಲಾಖೆ ಜಮೀನಿನ ಹಕ್ಕು ಪತ್ರಗಳ ವರ್ಗಾವಣೆಯ ಬಗ್ಗೆ ಚರ್ಚೆ ಕೈಗೊಳ್ಳಬೇಕಾಗುವುದು. ಕೆ.ಐ.ಎ.ಡಿ.ಬಿ. ಅಧಿಯನಿಯಮದ 28(4)ರಲ್ಲಿ ಅಂತಿಮ ಅಧಿಸೂಚನೆಯನ್ನು ಜಾರಿಗೊಳಿಸಿದ ನಂತರ ಜಮೀನಿನ ಹಕ್ಕು ಮಂಡಳಿಯಲ್ಲಿ ಸ್ವಾಭಾವಿಕವಾಗಿ ಇರುತ್ತದೆ. ಈ ಯೋಜನೆಗೆ ಹಣಕಾಸು ಬೆಂಬಲ, ಮುಂಗಡ ಅಥವಾ ಸಾಲಗಳನ್ನು ಒದಗಿಸುವ ಸಂಸ್ಥೆಗಳು ತ್ವರಿತವಾಗಿ ಭೂ ಪರಿಹಾರವನ್ನು ಕೆ.ಐ.ಎ.ಡಿ.ಬಿ. ಗೆ ಸಮಾನಾಂತರವಾಗಿ ಪಾವತಿಸುವ ಹಿತದೃಷ್ಟಿಯಿಂದ ಕ್ರಯ ಪತ್ರದ ಬಗ್ಗೆ ತೀರ್ಮಾನವನ್ನು ಕೈಗೊಳ್ಳಬೇಕಾಗಿದೆ". ಈ ಹಿನ್ನೆಲೆಯಲ್ಲಿ 12.06.2003 ರಂದು ನೈಸೆಲ್ ಸಂಸ್ಥೆಯು ಸಿ.ಇ.ಓ., ಕೆ.ಐ.ಎ.ಡಿ.ಬಿ. ಇವರಿಗೆ 7ನೇ

ಅಧಿಕಾರದತ್ತ ಸಮಿತಿಯ ನಿರ್ಧಾರಗಳ ಅನುಗುಣವಾಗಿ ಕ್ರಯ ಪತ್ರಗಳನ್ನು ಜಾರಿಗೊಳಿಸುವಂತೆ ಕೋರಿರುತ್ತಾರೆ.

ತತ್ಸಂಬಂಧವಾಗಿ ದಿನಾಂಕ 13.08.2003 ರಂದು ನಡೆಸಲಾದ ಕೆ.ಐ.ಎ.ಡಿ.ಬಿ. ನಿರ್ದೇಶಕ ಮಂಡಳಿಯ ಸಭೆಯ ವಿಷಯ ಸಂಖ್ಯೆ.35ರ ಅಡಿಯಲ್ಲಿ ಈ ಬಗ್ಗೆ ಚರ್ಚಿಸಲಾಗಿದೆ. ಮಂಡಳಿಯು ಕೆ.ಐ.ಎ.ಡಿ.ಬಿ. ಅಧಿನಿಯಮ 29(2) ರ ಅಡಿಯಲ್ಲಿ ಪರಸ್ಪರ ಒಪ್ಪಂದದ ಮೇರೆಗೆ ಭೂಪರಿಹಾರ ಧನವನ್ನು ಪಾವತಿಸಿರುವ ಪ್ರಕರಣಗಳಲ್ಲಿ ಶುದ್ಧ ಕ್ರಯ ಪತ್ರವನ್ನು ಜಾರಿಗೊಳಿಸಲು ಯಾವುದೇ ಕ್ಲಿಷ್ಟತೆ ಇರುವುದಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ.

ತದನಂತರ ಪ್ರಧಾನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ 09.09.2003 ರಂದು ನಡೆಸಲಾದ ಸಭೆಯಲ್ಲಿ ಗುತ್ತಿಗೆ ಮತ್ತು ಮಾರಾಟ ಕ್ರಯ ಪತ್ರ ಅಥವಾ ಶುದ್ಧ ಕ್ರಯ ಪತ್ರ ಜಾರಿಗೊಳಿಸುವ ಬಗ್ಗೆ ಚರ್ಚಿಸಲಾಗಿದೆ. ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಈ ವಿಷಯವನ್ನು ಯೋಜನಾ ಅನುಷ್ಠಾನದ ಸಮನ್ವಯತೆಯ ಜವಾಬ್ದಾರಿಯನ್ನು ಹೊತ್ತಿರುವ ಲೋಕೋಪಯೋಗಿ ಇಲಾಖೆ ನಿರ್ಧರಿಸಬೇಕಾಗುವುದು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಇದಕ್ಕೆ ಪೂರಕವಾಗಿ ಕಾನೂನು ಇಲಾಖೆಯ ಅಭಿಪ್ರಾಯವನ್ನು ಪಡೆಯುವ ಬಗ್ಗೆ ಪ್ರತಿಪಾದಿಸಲಾಗಿದೆ.

ಈ ಕೋರಿಕೆಗೆ ಸ್ಪಂದಿಸಿದ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ಇವರು 22.09.2003 ರಂದು ಕ್ರಿಯಾ ಒಪ್ಪಂದದ ಅನುಚ್ಛೇಧ 3.2.4 ಹಾಗೂ ಕೆ.ಐ.ಎ.ಡಿ.ಬಿ. ಮತ್ತು ನೈಸೆಲ್ ಅನುಷ್ಠಾನಗೊಳಿಸಿದ ಒಪ್ಪಂದದ 8ನೇ ಷರತ್ತಿನ ಬಗ್ಗೆ ಪ್ರತಿಪಾದಿಸಿರುತ್ತಾರೆ. ಉಲ್ಲೇಖಿಸಿರುವ ಒಪ್ಪಂದದ 8ನೇ ಷರತ್ತಿನ ಅನುಗುಣವಾಗಿ ನೈಸೆಲ್ ಸಂಸ್ಥೆಗೆ ಋಣಭಾರರಹಿತ ಹಾಗೂ ಮಾರಾಟ ಮಾಡಬಹುದಾದ ಹಕ್ಕುಗಳನ್ನು ಒಳಗೊಂಡ, ಸಿಂಧುತ್ವವಿರುವ ಭೂದಾಖಲಾತಿಗಳನ್ನು ನೀಡಬೇಕಾಗುವುದು ಎಂದು ಪ್ರತಿಪಾದಿಸಲಾಗಿದೆ. ಇದಲ್ಲದೆ, ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ಇವರು ಇದೊಂದು BOOT ಮಾದರಿಯಲ್ಲಿ ಅನುಷ್ಠಾನಗೊಳಿಸಿರುವ PPP ಯೋಜನೆಯಾಗಿರುವ ಹಿನ್ನೆಲೆಯಲ್ಲಿ ಕೆ.ಐ.ಎ.ಡಿ.ಬಿ. ಅಧಿನಿಯಮ 29(2) ರ ಅಡಿಯಲ್ಲಿ ಪರಿಹಾರವನ್ನು ಪಾವತಿಸಿದ ಪ್ರಕರಣಗಳಲ್ಲಿ ಕ್ರಯಪತ್ರಗಳನ್ನು ನೈಸೆಲ್ ಸಂಸ್ಥೆಯ ಪರವಾಗಿ ಜಾರಿಗೊಳಿಸಬಹುದಾಗಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುವುದನ್ನು ಸಮಿತಿಯು ಗಮನಿಸಿದೆ.

ತದನಂತರ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ, ಕೆ.ಐ.ಎ.ಡಿ.ಬಿ. ಇವರು 06.10.2003 ರಂದು ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ಇವರ ಅಭಿಪ್ರಾಯವು ಸಮಂಜಸವಲ್ಲ ಎಂದು ಸ್ಪಷ್ಟೀಕರಿಸಿರುವುದನ್ನು ಸಮಿತಿಯು ಗಮನಿಸಿದೆ. Consent ಅಥವಾ ಪರಸ್ಪರ ಸಹಮತಿಯ ಆಧಾರದ ಮೇಲೆ ಪರಿಹಾರ ಇತ್ಯರ್ಥವಾದ ಪ್ರಕರಣಗಳಲ್ಲಿ ಕ್ರಯಪತ್ರವನ್ನು ಜಾರಿಗೊಳಿಸಬಹುದಾಗಿದ್ದು, ಸಹಮತಿ ಇಲ್ಲದೇ ಇರುವ ಪ್ರಕರಣಗಳಲ್ಲಿ ಅಥವಾ ಹೆಚ್ಚುವರಿ ಪರಿಹಾರಕ್ಕಾಗಿ ನ್ಯಾಯಾಲಯದಲ್ಲಿ ತಗಾದೆಗಳು ಇತ್ಯರ್ಥವಾಗಬೇಕಾದ ಪ್ರಕರಣಗಳಲ್ಲಿ ಕ್ರಯಪತ್ರಗಳನ್ನು ಜಾರಿಗೊಳಿಸುವುದು ಸಮರ್ಪಕವಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಲಾಗಿದೆ. ಈ ಹಿನ್ನೆಲೆಯಲ್ಲಿ ಭೂಮಾಲೀಕರ ಸಹಮತಿ ಇಲ್ಲದೇ ಇರುವ ಪ್ರಕರಣಗಳಲ್ಲಿ ಗುತ್ತಿಗೆ ಕ್ರಯಪತ್ರಗಳನ್ನು ಜಾರಿಗೊಳಿಸಬಹುದಾಗಿದ್ದು, ಶುದ್ಧ ಕ್ರಯಪತ್ರಗಳನ್ನು ಪರಿಹಾರಕ್ಕೆ ಸಹಮತಿಸುವ ಪ್ರಕರಣಗಳಿಗೆ ಸೀಮಿತಗೊಳಿಸುವುದು ಸೂಕ್ತ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಲಾಗಿದೆ. ಇದಕ್ಕೆ ಪೂರಕವಾಗಿ ಸಹಮತಿ ಇರುವ ಪ್ರವರ್ಗದಡಿಯಲ್ಲಿ ಬರುವ ಜಮೀನಿನ ವಿಸ್ತೀರ್ಣವನ್ನು ಸರ್ಕಾರವು 26.06.2002 ರಂದು

ಅನುಮೋದಿಸಿರುವ ಕರಡು ಕ್ರಯಪತ್ರದ ನಮೂನೆಯಲ್ಲಿ ಹಸ್ತಾಂತರಿಸಬಹುದು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಲಾಗಿದೆ. ಮಂಡಳಿಯ ದಿನಾಂಕ 13.08.2003ರ ನಿರ್ದೇಶನದ ಅನುಗುಣವಾಗಿ ಈ ಕ್ರಮವನ್ನು ಆದ್ಯತೆಯ ಮೇರೆಗೆ ಜಾರಿಗೊಳಿಸಬಹುದಾಗಿದೆ ಎಂದು ಪ್ರತಿಪಾದಿಸಿರುವುದನ್ನು ಸಮಿತಿಯು ಗಮನಿಸಿದೆ.

ಪ್ರಸ್ತಾವಿತ ಬೆಳವಣಿಗೆಗಳ ಹಿನ್ನೆಲೆಯಲ್ಲಿ ದಿನಾಂಕ 20.10.2003 ರಿಂದ 04.07.2007ರ ಅವಧಿಯಲ್ಲಿ 819.17 ಎಕರೆಗಳನ್ನು ಕ್ರಯಪತ್ರದ ಮುಖಾಂತರ ಹಸ್ತಾಂತರಿಸಲಾಗಿದೆ. ಈ ಪೈಕಿ 20.10.2003 ರಿಂದ 08.06.2004ರ ಅವಧಿಯಲ್ಲಿ 613.22 ಎಕರೆಗಳ ಜಮೀನನ್ನು ಹಸ್ತಾಂತರಿಸಲಾಗಿದ್ದು, ಏತನ್ಮಧ್ಯೆ ರಾಜ್ಯ ಉಚ್ಛ ನ್ಯಾಯಾಲಯದ ಮುಂದೆ ಹೂಡಲಾದ ದಾವೆ ಸಂಖ್ಯೆ 45334/2004/ಪಿ.ಐ.ಎಲ್. ಮತ್ತು 45386/2004, ಸಿವಿಲ್ ದಾವೆ ಸಂಖ್ಯೆ.3492-3494/2005 ಪ್ರಕರಣಗಳು ಬಾಕಿ ಇರುವ ಹಿನ್ನೆಲೆಯಲ್ಲಿ ಕ್ರಯಪತ್ರದ ಅನುಷ್ಠಾನವನ್ನು ಸ್ಥಗಿತಗೊಳಿಸಿರುವುದನ್ನು ಸಮಿತಿಯು ಗಮನಿಸಿದೆ. ತದನಂತರ, ಸರ್ವೋಚ್ಛ ನ್ಯಾಯಾಲಯದ ದಿನಾಂಕ 20.04.2006ರ ತೀರ್ಪಿನ ಆಧಾರದ ಮೇಲೆ ಕ್ರಯಪತ್ರದ ನೋಂದಣಿಯನ್ನು ಪುನ: ಪ್ರಾರಂಭಿಸಲಾಗಿದೆ. ದಿನಾಂಕ 13.10.2006 ರಂದು ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ಇವರ ಸಮಕ್ಷಮದಲ್ಲಿ ನಡೆಸಲಾದ ಸಭೆಯಲ್ಲಿ ಕ್ರಯಪತ್ರಗಳನ್ನು ಸಹಮತಿ ಇರುವ ಪ್ರಕರಣಗಳಿಗೆ ಅನ್ವಯಿಸುವಂತೆ ತ್ವರಿತವಾಗಿ ಜಾರಿಗೊಳಿಸುವಂತೆ ನಿರ್ದೇಶಿಸಲಾಗಿದೆ.

***<u>ಮೇಲೆ ಪ್ರತಿಪಾದಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸಮಿತಿಯು ಈ ಕೆಳಕಂಡ ವಿಶ್ಲೇಷಣೆ ಹಾಗೂ ಶಿಫಾರಸ್ಸುಗಳನ್ನು ಮಾಡುತ್ತದೆ:</u>***

1. ಕ್ರಿಯಾ ಒಪ್ಪಂದದ ಅನುಚ್ಛೇಧ 3.2.4 ಅನ್ನು ಟೋಲ್ ರಸ್ತೆ ಘಟಕಕ್ಕೆ ಅನ್ವಯಿಸುವ ಅನುಚ್ಛೇಧ 3.3.1 ರೊಡನೆ ತುಲನಾತ್ಮಕವಾಗಿ ವಿಶ್ಲೇಷಿಸುವುದು ಅವಶ್ಯಕವೆಂದು ಸಮಿತಿ ತೀರ್ಮಾನಿಸುತ್ತದೆ. ಅನುಚ್ಛೇಧ 3.3.1 ರ ಅನುಗುಣವಾಗಿ ಟೋಲ್ ರಸ್ತೆ ಸಂಪೂರ್ಣವಾಗಿರುವ ಅಧಿಸೂಚನೆ ಜಾರಿಗೊಳಿಸಲಾದ ದಿನಾಂಕದಿಂದ 30 ವರ್ಷಗಳ ಅವಧಿಗೆ ಖಾಸಗಿ ಪಾಲುದಾರರು ಟೋಲ್ ದರಗಳನ್ನು ಹಾಗೂ ಇತರೆ ಸ್ವೀಕೃತಿಗಳನ್ನು ಪಡೆಯಬಹುದಾಗಿದೆ. ಮುಂದುವರಿದಂತೆ ಕ್ರಿಯಾ ಒಪ್ಪಂದದ ಕಂಡಿಕೆ ಸಂಖ್ಯೆ. 9 ಪುಟ 2 ರ ಅನುಗುಣವಾಗಿ ಹಾಗೂ 20.11.1995 ರ ಲೋಕೋಪಯೋಗಿ ಇಲಾಖೆಯ ಆದೇಶದ ಹಿನ್ನೆಲೆಯಲ್ಲಿ ಯೋಜನಾ ತಾಂತ್ರಿಕ ವರದಿಯನ್ನು ವಿಶ್ಲೇಷಿಸುವುದು ಅವಶ್ಯಕವೆಂದು ಸಮಿತಿ ತೀರ್ಮಾನಿಸುತ್ತದೆ. ಯೋಜನಾ ತಾಂತ್ರಿಕ ವರದಿಯ ಕಂಡಿಕೆ ಸಂಖ್ಯೆ.9 ರಲ್ಲಿ 30 ವರ್ಷದ ಗುತ್ತಿಗೆ ಅವಧಿ ಸಂಪೂರ್ಣವಾದ ನಂತರ ಟೋಲ್ ಅನ್ನು ಸಂಗ್ರಹಿಸಲಾಗುತ್ತಿರುವ ವೇಗ ಹೆದ್ದಾರಿಯ ಸೌಲಭ್ಯವನ್ನು ಸಂಪೂರ್ಣವಾಗಿ ಸರ್ಕಾರಕ್ಕೆ ಹಿಂದಿರುಗಿಸಬೇಕಾಗುವುದು. ಟೋಲ್ ರಿಯಾಯಿತಿ ಅವಧಿ ಸಂಪೂರ್ಣಗೊಂಡ ನಂತರ ವೇಗ ಹೆದ್ದಾರಿಯನ್ನು ಹಿಂದಿರುಗಿಸುವ ಪೂರ್ವದಲ್ಲಿ ದುರಸ್ತಿ ಹಾಗೂ ನಿರ್ವಹಣೆ ಕಾರ್ಯಗಳನ್ನು ಸಮರ್ಪಕವಾಗಿ ಖಾಸಗಿ ಪಾಲುದಾರರು ಅನುಷ್ಠಾನಗೊಳಿಸಬೇಕಾಗುವುದು. ಇದಲ್ಲದೆ, ರಸ್ತೆಯ ಜೀವಿತ ಅವಧಿಯು ಒಟ್ಟು 60 ವರ್ಷಗಳಿಗೆ ಇರುವಂತೆ ವಿನ್ಯಾಸಗೊಳಿಸಬೇಕಾಗುವುದು.

2. ಈ ಅಂಶಗಳನ್ನು ಗಮನಿಸಿದಾಗ ಪೆರಿಫೆರಲ್ ರಸ್ತೆ, ಲಿಂಕ್ ರಸ್ತೆ ಒಳಗೊಂಡ ವೇಗ ಹೆದ್ದಾರಿಯು 30 ವರ್ಷಗಳ ಗುತ್ತಿಗೆ ಅವಧಿಯ ನಂತರ ಸರ್ಕಾರ ಹಿಂಪಡೆಯುವುದು ಅವಶ್ಯಕವಾಗಿರುತ್ತದೆ. ಈ ಅಂಶವನ್ನು ಪರಿಗಣಿಸದೇ ಕೆ.ಐ.ಎ.ಡಿ.ಬಿ. ಮಂಡಳಿಯು ಶುದ್ಧ ಕ್ರಯಪತ್ರವನ್ನು ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗಿದೆ ಎಂಬ ಅಭಿಪ್ರಾಯ

ದಾಖಲಾತಿಗಳಿಂದ ಸ್ಪಷ್ಟವಾಗಿದೆ. ಕ್ರಿಯಾ ಒಪ್ಪಂದದ ಅನುಗುಣವಾಗಿ ಮೂಲಭೂತ ಸೌಕರ್ಯದ ಕೆಲವು ಘಟಕಗಳು ಅಂದರೆ Transferrable Toll Assets ವ್ಯಾಪ್ತಿಗೆ ಬರುವ ಜಮೀನನ್ನು ಹಿಂತಿರುಗಿಸುವುದು ಅವಶ್ಯಕವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ದಿನಾಂಕ 13.08.2003 ರಂದು ನಡೆಸಲಾದ ಮಂಡಳಿಯ 252ನೇ ಸಭೆಯ ಸಂಕ್ಷಿಪ್ತ ನಡಾವಳಿಗಳನ್ನು ಸಮಿತಿಯು ಅವಲೋಕಿಸಿದೆ. ವಾಸ್ತವಿಕವಾಗಿ ಮಾರಾಟದ ಆಧಾರದ ಮೇಲೆ ನೈಸೆಲ್ ಸಂಸ್ಥೆಗೆ ಸ್ವಾಧೀನಪಡಿಸಿಕೊಂಡ ಭೂಮಿಯನ್ನು ಹಸ್ತಾಂತರಿಸಿದಲ್ಲಿ, ಇದನ್ನು ಬೇರೆ ವ್ಯಕ್ತಿಗಳಿಗೆ 2ನೇ ಮಾರಾಟದ ಮೂಲಕ ಹಸ್ತಾಂತರಿಸುವ ಸೌಲಭ್ಯವನ್ನು ಕಲ್ಪಿಸಲಾಗಿದೆ ಎಂದು ಸಮಿತಿ ತೀರ್ಮಾನಿಸುತ್ತದೆ. ಈ ಸೌಲಭ್ಯವನ್ನು ಬಳಸಿಕೊಂಡು ಖಾಸಗಿ ಪಾಲುದಾರರು ಸೆಕ್ಷನ್ ಎ ವ್ಯಾಪ್ತಿಯಲ್ಲಿ 756.33 ಎಕರೆ ವಿಸ್ತೀರ್ಣದ ಜಮೀನನ್ನು ಅನಧಿಕೃತವಾಗಿ ಪರಭಾರೆ ಮಾಡಿರುತ್ತಾರೆ.

3. ನೈಸೆಲ್ ಸಂಸ್ಥೆಯು ಕ್ರಯಪತ್ರದ ಮೂಲಕ ಸ್ವಾಧೀನಪಡಿಸಿಕೊಂಡ ಜಮೀನನ್ನು ಉದ್ದೇಶಿತ ಯೋಜನೆಗೆ ಸೀಮಿತವಾದಂತೆ ಬಳಸುವುದನ್ನು ನಿಯಂತ್ರಿಸುವಲ್ಲಿ ಲೋಕೋಪಯೋಗಿ ಇಲಾಖೆ ಹಾಗೂ ಕೆ.ಐ.ಎ.ಡಿ.ಬಿ. ವಿಫಲವಾಗಿರುವುದು ಈ ವಿವರಗಳಿಂದ ಸಮಿತಿಗೆ ಮನದಟ್ಟಾಗಿದೆ.

4. ಸಮಿತಿಯು ದಿನಾಂಕ 14.10.1998 ರಂದು ಸ್ವಾಧೀನಪಡಿಸಿಕೊಳ್ಳಬೇಕಾಗಿರುವ ಭೂಮಿಗೆ ಸಂಬಂಧಿಸಿದಂತೆ ನೈಸೆಲ್ ಹಾಗೂ ಕೆ.ಐ.ಎ.ಡಿ.ಬಿ. ನಡುವೆ ಜಾರಿಗೊಳಿಸಲಾದ ಒಪ್ಪಂದವನ್ನು ಅವಲೋಕಿಸಿದೆ. ಈ ಒಪ್ಪಂದದಲ್ಲಿ ದಿನಾಂಕ 03.04.1997 ರಂದು ಅನುಷ್ಠಾನಗೊಳಿಸಿದ ಕ್ರಿಯಾ ಒಪ್ಪಂದದ ಬಗ್ಗೆ ಉಲ್ಲೇಖಿಸಲಾಗಿದೆ. ಈ ಒಪ್ಪಂದದ ಕಂಡಿಕೆ 8 ಅನ್ನು ಅವಲೋಕಿಸಿದಾಗ ಮಂಡಳಿಯು ಹಂಚಿಕೆಯನ್ನು Single Industrial Unit ಪ್ರವರ್ಗದ ಅರ್ಜಿದಾರರಿಗೆ ನೀಡುವ ಸೌಲಭ್ಯಗಳಿಗೆ ಸಮಾನಾಂತರವಾಗಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ನೀಡುವ ಬಗ್ಗೆ ಪ್ರತಿಪಾದಿಸಲಾಗಿದೆ. ಮೂಲಭೂತವಾಗಿ ಈ ನಿರ್ಧಾರವನ್ನು ಮಂಡಳಿಯು ಸ್ವಯಂ ಪ್ರೇರಿತವಾಗಿ ಜಾರಿಗೊಳಿಸಿದೆ ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. ಏಕೆಂದರೆ, ಕ್ರಿಯಾ ಒಪ್ಪಂದದಲ್ಲಿ ಈ ಸ್ವರೂಪದ ಯಾವುದೇ ಪ್ರತಿಪಾದನೆ ಇರುವುದಿಲ್ಲ. ಇದಲ್ಲದೆ, ಮಂಡಳಿಯು ಜಾರಿಗೊಳಿಸಿರುವ ಒಪ್ಪಂದದಲ್ಲಿ ಸರ್ಕಾರಕ್ಕೆ ಹಿಂತಿರುಗಿಸಬೇಕಾಗುವ ಜಮೀನು ಹಾಗೂ ಖಾಸಗಿ ಪಾಲುದಾರರು ಅಭಿವೃದ್ಧಿಪಡಿಸಿ ಮಾರಬಹುದಾದ ಜಮೀನುಗಳಿಗೆ ಸಂಬಂಧಿಸಿದಂತೆ ಯಾವುದೇ ಉಲ್ಲೇಖವಿರುವುದಿಲ್ಲ. ಕ್ರಿಯಾ ಒಪ್ಪಂದದ ಶೆಡ್ಯೂಲ್ 1 ಮತ್ತು 4 ರಲ್ಲಿರುವ ಮಾನದಂಡಗಳು ಹಾಗೂ ಭೂ ಬಳಕೆಯ ಮಾಪನಗಳ ಬಗ್ಗೆ ಪ್ರಸ್ತಾವಿತ ಒಡಂಬಡಿಕೆಯಲ್ಲಿ ಯಾವುದೇ ಉಲ್ಲೇಖವಿರುವುದಿಲ್ಲ. ಈ ಅಂಶಗಳನ್ನು ಪರಿಗಣಿಸಿದಾಗ ಮಂಡಳಿಯು ಕೇವಲ ಪ್ರಾಸಂಗಿಕವಾಗಿ ಕ್ರಿಯಾ ಒಪ್ಪಂದವನ್ನು ಈ ಒಡಂಬಡಿಕೆಯಲ್ಲಿ ಉಲ್ಲೇಖಿಸಿದ್ದು, ಇತರ ಗುರುತರ ಹಾಗೂ ಸೂಕ್ಷ್ಮಕರ ನಿರ್ಬಂಧನೆಗಳನ್ನು ಉಪೇಕ್ಷಿಸಿರುವುದು ಮೇಲ್ನೋಟಕ್ಕೆ ಸಮಿತಿಗೆ ಸ್ಪಷ್ಟವಾಗಿದೆ. ಇತರೆ ಪ್ರಕರಣಗಳಲ್ಲಿ ಮಂಡಳಿಯು ಪಾಲಿಸುತ್ತಿರುವ ವಿಧಿ ವಿಧಾನಗಳನ್ನು ಅವಲೋಕಿಸಿದಾಗ "Single Industrial Unit" ಗಳಿಗೂ ಸಹ 99 ವರ್ಷಗಳ ಲೀಸ್ ಆಧಾರದ ಮೇಲೆ ಜಮೀನನ್ನು ಗುತ್ತಿಗೆ ಕ್ರಯ ಪತ್ರದ ಮುಖಾಂತರ ಹಸ್ತಾಂತರಿಸಿರುವುದನ್ನು ಸಮಿತಿಯು ಗಮನಿಸಿದೆ. ಈ ಹಿನ್ನೆಲೆಯಲ್ಲಿ ಮಂಡಳಿಯು ಪ್ರಸ್ತಾವಿತ ಒಡಂಬಡಿಕೆಯನ್ನು ಜಾರಿಗೊಳಿಸುವ ಪೂರ್ವದಲ್ಲಿ ಸಮಗ್ರ ಸಮನ್ವಯತೆಯನ್ನು ನಿರ್ವಹಿಸುವ ಜವಾಬ್ದಾರಿಯನ್ನು ಹೊಂದಿರುವ ಲೋಕೋಪಯೋಗಿ ಇಲಾಖೆಯ ಅಭಿಪ್ರಾಯವನ್ನು ಪಡೆಯದೇ ಸ್ವಯಂ ಪ್ರೇರಿತವಾಗಿ ಒಡಂಬಡಿಕೆಯನ್ನು ಜಾರಿಗೊಳಿಸಿದೆ ಎಂಬುದು ಸ್ಪಷ್ಟವಾಗುತ್ತದೆ. ಕ್ರಿಯಾ

ಒಪ್ಪಂದದ ಶೆಡ್ಯೂಲ್ 1 ರ ಅಡಿಯಲ್ಲಿ ನಮೂದಿಸಲಾಗಿರುವ ಅವಶ್ಯಕ ಜಮೀನಿನ ಅಂಕಿ ಅಂಶಗಳು ಸಂಪೂರ್ಣವಾಗಿ ನಿಖರವಲ್ಲ ಎಂದು ಉಲ್ಲೇಖಿಸಿರುವುದನ್ನು ಸಮಿತಿಯು ಗಮನಿಸಿದೆ. ಆದಾಗ್ಯೂ, ಈ ವರದಿಯಲ್ಲಿ ಪ್ರತಿಪಾದಿಸಿರುವಂತೆ ಮಂಡಳಿಯ ಸ್ವಾಧೀನ ಪ್ರಕ್ರಿಯೆಯ ವಿಧಿವಿಧಾನಗಳು ಕ್ರಿಯಾ ಒಪ್ಪಂದದ ಅಂಕಿ ಅಂಶಗಳಿಗಿಂತ ಬಹುತೇಕವಾಗಿ ವ್ಯತಿರಿಕ್ತವಾಗಿದೆ.

5. ಎರಡನೇ ಸ್ತರದಲ್ಲಿ ಈಗಾಗಲೇ ಸಮಿತಿಯು ನಿರ್ಧರಿಸುವಂತೆ ಈ ಯೋಜನೆಯ ಸ್ವಾಧೀನ ಪ್ರಕ್ರಿಯೆಯ ನಿರ್ವಹಣೆ ಹಾಗೂ ಅನುಷ್ಠಾನಗಳನ್ನು ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನಲ್ಲಿ ವಿಶ್ಲೇಷಿಸುವುದು ಅವಶ್ಯಕವಾಗಿರುತ್ತದೆ. ತೀರ್ಪಿನ ಪ್ರಮುಖ ನಿರ್ಧಾರಗಳನ್ನು ಅವಲೋಕಿಸಿದಾಗ ಈ ನಿರ್ಧಾರಗಳನ್ನೂ ಸಹ ಕೆ.ಐ.ಎ.ಡಿ.ಬಿ. ಉಪೇಕ್ಷಿಸಿರುವುದು ಸಮಿತಿಗೆ ಮನದಟ್ಟಾಗಿದೆ.

6. ಶುದ್ಧ ಕ್ರಯಪತ್ರಗಳ ಅನುಷ್ಠಾನದ ಪ್ರಕ್ರಿಯೆಯನ್ನು ಕ್ರಿಯಾ ಒಪ್ಪಂದದ ಅನುಚ್ಛೇಧ 3.2.3 ರ ಹಿನ್ನೆಲೆಯಲ್ಲಿ ವಿಶ್ಲೇಷಿಸುವುದು ಅವಶ್ಯಕವೆಂದು ಸಮಿತಿ ತೀರ್ಮಾನಿಸುತ್ತದೆ. ಪ್ರಸ್ತಾವಿತ ಅನುಚ್ಛೇಧದಲ್ಲಿ ಖಾಸಗಿ ಪಾಲುದಾರರು ಅವರ ವಿವೇಚನೆಗೆ ಅನುಗುಣವಾಗಿ ಕೈಗಾರಿಕಾ ಬಳಕೆಗಾಗಲೀ ಅಥವಾ ವಾಣಿಜ್ಯ ಬಳಕೆಗಾಗಲೀ ಭೂಮಿಯನ್ನು ಅಭಿವೃದ್ಧಿಪಡಿಸುವ ಅಧಿಕಾರವನ್ನು ನೀಡಲಾಗಿದೆ. ಆದರೆ ಈ ಅಧಿಕಾರವನ್ನು ಕ್ರಿಯಾ ಒಪ್ಪಂದದ ಮಾನದಂಡಗಳ ಅನುಗುಣವಾಗಿ ಜಾರಿಗೊಳಿಸುವುದು ಅವಶ್ಯಕವಾಗಿರುತ್ತದೆ. ಏಕೆಂದರೆ, ಈ ಅನುಚ್ಛೇಧದಲ್ಲಿ "as generally contemplated by this agreement" ಎಂದು ವ್ಯಾಖ್ಯಾನಿಸಲಾಗಿದೆ. ಈ ಹಿನ್ನೆಲೆಯಲ್ಲಿ ಕೆ.ಐ.ಎ.ಡಿ.ಬಿ. ಸಂಸ್ಥೆಯು ಶುದ್ಧ ಕ್ರಯಪತ್ರವನ್ನು ಜಾರಿಗೊಳಿಸುವ ಪೂರ್ವದಲ್ಲಿ ಕ್ರಿಯಾ ಒಪ್ಪಂದದಲ್ಲಿ ಪ್ರತಿಪಾದಿಸಿರುವ ಬಳಕೆಯ ಸ್ವರೂಪ ಹಾಗೂ ನಿರ್ಬಂಧನೆಗಳನ್ನು ಪರಿಗಣಿಸುವುದು ಅತ್ಯವಶ್ಯಕವಾಗಿರುತ್ತದೆ. ಆದರೆ, ದಿನಾಂಕ 13.08.2003 ರ ಮಂಡಳಿಯ ನಡವಳಿಗಳನ್ನು ಗಮನಿಸಿದಾಗ ಬಹುತೇಕವಾಗಿ ಮಂಡಳಿಯೊಡನೆ ಅನುಷ್ಠಾನಗೊಳಿಸಿದ ಒಡಂಬಡಿಕೆಯ ಬಗ್ಗೆ ಪ್ರತಿಪಾದಿಸಲಾಗಿದೆ. ಕ್ರಿಯಾ ಒಪ್ಪಂದದ ಬಗ್ಗೆ ಹಾಗೂ ಕ್ರಿಯಾ ಒಪ್ಪಂದದ ನಿರ್ಬಂಧನೆಗಳ ಬಗ್ಗೆ ಯಾವುದೇ ಉಲ್ಲೇಖವಿರುವುದಿಲ್ಲ. ಮಂಡಳಿಯೊಡನೆ ಅನುಷ್ಠಾನಗೊಳಿಸಲಾಗಿರುವ ಒಡಂಬಡಿಕೆಯ ಷರತ್ತು 8 ಹಾಗೂ 11ರ ಬಗ್ಗೆ ಪ್ರತಿಪಾದಿಸಲಾಗಿದೆ. ಷರತ್ತು 11 ಅನ್ನು ಅವಲೋಕಿಸಿದಾಗ ಖಾಸಗಿ ಪಾಲುದಾರರು ನ್ಯಾಯಾಲಯದ ತೀರ್ಪಿನ ಅನುಗುಣವಾಗಿ ಮಂಡಳಿಯಿಂದ ಸ್ವೀಕೃತವಾದ ಬೇಡಿಕೆಯ ಆಧಾರದ ಮೇಲೆ ಹೆಚ್ಚುವರಿ ಪರಿಹಾರವನ್ನು 60 ದಿನಗಳೊಳಗಾಗಿ ಪಾವತಿಸಬೇಕಾಗಿದ್ದು, ಪಾವತಿಸುವಲ್ಲಿ ವಿಳಂಬವಾದಲ್ಲಿ ಪ್ರತಿಶತ 12 ರಂತೆ ಬಡ್ಡಿಯನ್ನು ವಿಳಂಬಿತ ಅವಧಿಗೆ ವಿಧಿಸುವ ಸೌಲಭ್ಯವನ್ನು ಕಲ್ಪಿಸಲಾಗಿದೆ. ಈ ಪ್ರಕರಣಗಳಲ್ಲಿ ಕೆ.ಐ.ಎ.ಡಿ.ಬಿ. ನಿಯಮಾವಳಿಗಳ ಅನುಸಾರವಾಗಿ ಸ್ವಾಧೀನತೆಯನ್ನು ಈಗಾಗಲೇ ಖಾಸಗಿ ಪಾಲುದಾರರಿಗೆ ಹಸ್ತಾಂತರಿಸುವುದು ಅವಶ್ಯಕವಾಗಿರುತ್ತದೆ. ಅಂದರೆ, ಸ್ವಾಧೀನತೆಯನ್ನು ನೀಡಿದ ನಂತರವೂ ಭೂಮಾಲೀಕರು ಹೆಚ್ಚುವರಿ ಪರಿಹಾರಕ್ಕಾಗಿ ನ್ಯಾಯಾಲಯದ ಮೊರೆ ಹೋಗಿದ್ದು, ನ್ಯಾಯಾಲಯದ ತೀರ್ಪಿನ ನಂತರ ಖಾಸಗಿ ಪಾಲುದಾರರಿಂದ ಪರಿಹಾರವನ್ನು ಪಡೆಯಬೇಕಾಗುವುದು. ಖಾಸಗಿ ಪಾಲುದಾರರು ಪರಿಷ್ಕೃತ ಅಥವಾ ಹೆಚ್ಚುವರಿ ಪರಿಹಾರವನ್ನು ಪಾವತಿಸುವಲ್ಲಿ ಅನಿಯತವಾಗಿ ವಿಳಂಬವಾಗಿದ್ದಲ್ಲಿ ದಾಖಲಾತಿಗಳಲ್ಲಿ ಬಡ್ಡಿಯನ್ನು ವಿಧಿಸುವ ಪ್ರಕ್ರಿಯೆಯನ್ನು ಹೊರತುಪಡಿಸಿ ಇತರೆ ಯಾವುದೇ ಕ್ರಮಗಳ ಬಗ್ಗೆ ಒಡಂಬಡಿಕೆಯಲ್ಲಿ ಉಲ್ಲೇಖವಿರುವುದಿಲ್ಲ. ಇದೊಂದು ಗುರುತರ ವೈಫಲ್ಯತೆಯೆಂದು ಸಮಿತಿ ತೀರ್ಮಾನಿಸುತ್ತದೆ. ಈ ಹಿನ್ನೆಲೆಯಲ್ಲಿ

***ಕೆ.ಐ.ಎ.ಡಿ.ಬಿ.ಯೊಡನೆ ನೈಸೆಲ್/ನೀಸೆಲ್ ಸಂಸ್ಥೆ ಅನುಷ್ಠಾನಗೊಳಿಸಿರುವ ಒಡಂಬಡಿಕೆಯನ್ನು ತ್ವರಿತವಾಗಿ ಪರಿಷ್ಕರಣೆಗೊಳಿಸಿ ಪರಿಷ್ಕೃತ ಅಥವಾ ಹೆಚ್ಚುವರಿ ಪರಿಹಾರವನ್ನು 60 ದಿನಗಳ ಅವಧಿಯೊಳಗಾಗಿ ಅಥವಾ ಭೂಸ್ವಾಧೀನ ಅಧಿನಿಯಮ 1894 ಅಡಿಯಲ್ಲಿ ನಮೂದಿಸಿರುವ ಗರಿಷ್ಠ ಕಾಲಮಿತಿಯು ಆದ ನಂತರ ಹಿಂಪಡೆಯುವ ಷರತ್ತನ್ನು ಸೇರ್ಪಡೆ ಮಾಡಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.***ಏಕೆಂದರೆ, ಸರ್ವೋಚ್ಛ ನ್ಯಾಯಾಲಯವು ಸ್ವಾಧೀನ ಪ್ರಕ್ರಿಯೆಯು ನ್ಯಾಯಬದ್ಧವಾಗಿ ಹಾಗೂ ತರ್ಕಬದ್ಧವಾಗಿರಬೇಕೆಂದು ಹಲವಾರು ಪ್ರಕರಣಗಳಲ್ಲಿ ತೀರ್ಪನ್ನು ನೀಡಿದೆ. ವಾಸ್ತವಿಕವಾಗಿ ಮಂಡಳಿಯು ದಿನಾಂಕ 05.08.2011ಕ್ಕೆ ಅನ್ವಯಿಸುವಂತೆ ಶುದ್ಧ ಕ್ರಯಪತ್ರದ ಮೂಲಕ ಹಸ್ತಾಂತರಿಸಿರುವ ವಿವಿಧ ಪ್ರವರ್ಗದ ಜಮೀನಿನ ವಿವರಗಳು ಕೆಳಕಂಡಂತಿದೆ:

ಪ್ರವರ್ಗ-1 – ಭೂಸ್ವಾಧೀನಕ್ಕೆ ಸಹಮತಿ ವ್ಯಕ್ತಪಡಿಸಿರುವ ಪ್ರಕರಣಗಳು

| ಕ್ರಮ ಸಂಖ್ಯೆ | ಅವಧಿ | ವಿಸ್ತೀರ್ಣ (ಎಕರೆಗಳಲ್ಲಿ) | ಷರಾ |
|---|---|---|---|
| 1. | 20.10.2003 ರಿಂದ 05.08.2011 | 1172.39 | ನೀಸೆಲ್ ಪರವಾಗಿ |
| 2. | 28.06.2003 ರಿಂದ 27.04.2004 | 37.18 | ನೈಸೆಲ್ ಪರವಾಗಿ |

ಪ್ರವರ್ಗ – 2 – ಭೂಸ್ವಾಧೀನ ಪರಿಹಾರದ ಪ್ರಕರಣಗಳು ನ್ಯಾಯಾಲಯಗಳಲ್ಲಿ ಬಾಕಿ ಇದ್ದು, ಹಸ್ತಾಂತರ ಪ್ರಕ್ರಿಯೆ ಸಂಪೂರ್ಣಗೊಂಡಿದ್ದು, ಶುದ್ಧ ಕ್ರಯಪತ್ರಗಳನ್ನು ಜಾರಿಗೊಳಿಸಲಾಗಿರುವ ಪ್ರಕರಣಗಳು:

| ಕ್ರಮ ಸಂಖ್ಯೆ | ಅವಧಿ | ವಿಸ್ತೀರ್ಣ (ಎಕರೆಗಳಲ್ಲಿ) | ಷರಾ |
|---|---|---|---|
| 1. | 31.05.2010 ರಿಂದ 05.08.2011 | 488.34 | ನೀಸೆಲ್ ಪರವಾಗಿ |

ಕ್ರೋಢೀಕೃತ ವಿವರಗಳು ಕೆಳಕಂಡಂತಿದೆ:

| ಕ್ರಮ ಸಂಖ್ಯೆ | ಜಮೀನಿನ ಸ್ವರೂಪ | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|
| 1. | ಪರಿಹಾರ ಮೊತ್ತಕ್ಕೆ ಸಹಮತಿ ಸೂಚಿಸಿರುವ ಪ್ರಕರಣ – ನೀಸೆಲ್ ಸಂಸ್ಥೆ | 1172.38 |
| 2. | ಪರಿಹಾರ ಮೊತ್ತವನ್ನು ಆಕ್ಷೇಪಿಸಿರುವ ಪ್ರಕರಣ – ನೀಸೆಲ್ ಸಂಸ್ಥೆ | 488.34 |
| 3. | ಪರಿಹಾರ ಮೊತ್ತಕ್ಕೆ ಸಹಮತಿ ಸೂಚಿಸಿರುವ ಪ್ರಕರಣ – ನೈಸೆಲ್ ಸಂಸ್ಥೆ | 37.18 |
| | **ಒಟ್ಟು** | **1699.10** |

7. ಇಲಾಖೆ ಸಲ್ಲಿಸಿರುವ ದಾಖಲಾತಿಗಳ ಅನುಗುಣವಾಗಿ ಪ್ರಮುಖ ಬೆಳವಣಿಗೆಗಳನ್ನು ಅವಲೋಕಿಸಿದಾಗ "Transferrable Toll Road Asset" ವ್ಯಾಪ್ತಿಯ ಜಮೀನಿಗೆ ಅನ್ವಯಿಸುವಂತೆ ಮರು ಹಸ್ತಾಂತರ ಮಾಡುವ ಷರತ್ತನ್ನು ಸೇರ್ಪಡೆ ಮಾಡುವ ಬಗ್ಗೆ ಮಾನ್ಯ ಅಡ್ವೊಕೇಟ್ ಜನರಲ್‌ರವರು ದಿನಾಂಕ 28.02.2009 ರಂದು ಪ್ರತಿಪಾದಿಸಿರುವುದನ್ನು ಸಮಿತಿಯು ಗಮನಿಸಿದೆ. ಈ ಪ್ರಸ್ತಾವನೆಯನ್ನು ದಿನಾಂಕ 03.09.2009 ರಂದು

ಸರ್ಕಾರದ ಅಧೀನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಇವರು ಪರಿಷ್ಕೃತ ಮಾರಾಟ ಕ್ರಯ ಪತ್ರದ ಕರಡೊಂದಿಗೆ ಕೆ.ಐ.ಎ.ಡಿ.ಬಿ.ಗೆ ಸಲ್ಲಿಸಿರುವುದನ್ನು ಸಮಿತಿಯು ಗಮನಿಸಿದೆ. ಈ ಬೆಳವಣಿಗೆಗಳನ್ನು ಅವಲೋಕಿಸಿದಾಗ 03.09.2009 ರ ಪೂರ್ವದಲ್ಲಿ ಅನುಷ್ಠಾನಗೊಳಿಸಲಾದ ಕ್ರಯಪತ್ರಗಳಲ್ಲಿ ಅನ್ವಯಿಸುವಂತೆ "Transferrable Toll Road Assets" ಮರು ಹಸ್ತಾಂತರದ ಬಗ್ಗೆ ಯಾವುದೇ ಪ್ರತಿಪಾದನೆ ಇಲ್ಲದೇ ಇರುವುದು ಸಮಿತಿಗೆ ಸ್ಪಷ್ಟವಾಗಿದೆ. ಸಮಿತಿಗೆ ಸಲ್ಲಿಸಲಾಗಿರುವ ದಾಖಲಾತಿಗಳ ಅನುಗುಣವಾಗಿ ಮರುಹಸ್ತಾಂತರ ಪ್ರಸ್ತಾವನೆಯ ಬಗ್ಗೆ ಪ್ರತಿಪಾದನೆ ಇಲ್ಲದೇ ಇರುವ ಕ್ರಯಪತ್ರಗಳ ವಿವರಗಳು ಕೆಳಕಂಡಂತಿದೆ:

(ಎಕರೆಗಳಲ್ಲಿ)

| | ಪರಿಹಾರಕ್ಕೆ ಸಹಮತಿ ಸೂಚಿಸಿರುವ ಪ್ರವರ್ಗ | | ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇರುವ ಪ್ರವರ್ಗ | | |
|---|---|---|---|---|---|
| ಸಂಸ್ಥೆ | ಹಸ್ತಾಂತರ ಪ್ರಸ್ತಾವನೆ ಒಳಗೊಂಡಿರುವ ವಿಸ್ತೀರ್ಣ | ಹಸ್ತಾಂತರ ಪ್ರಸ್ತಾವನೆ ಹೊರತುಪಡಿಸಲಾಗಿರುವ ವಿಸ್ತೀರ್ಣ | ಹಸ್ತಾಂತರ ಪ್ರಸ್ತಾವನೆ ಒಳಗೊಂಡಿರುವ ವಿಸ್ತೀರ್ಣ | ಹಸ್ತಾಂತರ ಪ್ರಸ್ತಾವನೆ ಹೊರತುಪಡಿಸಲಾಗಿರುವ ವಿಸ್ತೀರ್ಣ | ಒಟ್ಟು |
| ನೀಸೆಲ್ | 387.38 | 785 | 488.34 | - | 1662.32 |
| ನೈಸೆಲ್ | - | 37.18 | - | - | 37.18 |
| ಒಟ್ಟು | 387.38 | 822.18 | 488.34 | - | 1699.10 |

03.02.2009ರ ಪೂರ್ವದಲ್ಲಿ ಮರು ಹಸ್ತಾಂತರ ಪ್ರಸ್ತಾವನೆ ಅಥವಾ ಷರತ್ತನ್ನು ಸೇರ್ಪಡೆ ಮಾಡದೇ ಇರುವ ಕ್ರಯಪತ್ರಗಳ ಮುಖಾಂತರ 822.18 ಎಕರೆ ವಿಸ್ತೀರ್ಣದ ಜಮೀನನ್ನು ಹಸ್ತಾಂತರಿಸುವುದು ಇಲಾಖೆ ಸಲ್ಲಿಸಿರುವ ಅಂಕಿ ಅಂಶಗಳಿಂದ ಸಮಿತಿಗೆ ಸ್ಪಷ್ಟವಾಗಿದೆ. ಈ ಸಂಪೂರ್ಣ ವಿಸ್ತೀರ್ಣ ಪರಿಹಾರದ ಮೊತ್ತಕ್ಕೆ ಸಹಮತಿ ಸೂಚಿಸಿರುವ ಪ್ರಕರಣಗಳಿಗೆ ಅನ್ವಯಿಸುತ್ತದೆ. ಕ್ರಿಯಾ ಒಪ್ಪಂದದ ಅನುಗುಣವಾಗಿ "Transferrable Toll Road Assets" ಮರು ಹಸ್ತಾಂತರದ ಬಗ್ಗೆ 12 ವರ್ಷಗಳಗೂ ಮೀರಿ ಲೋಕೋಪಯೋಗಿ ಇಲಾಖೆ ಹಾಗೂ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ನಿರ್ಲಕ್ಷ್ಯತಾ ಧೋರಣೆಯನ್ನು ತಳೆದಿರುವುದು ಸಮಿತಿಗೆ ಸ್ಪಷ್ಟವಾಗಿದೆ. ಇದರಿಂದಾಗಿ ಮರು ಹಸ್ತಾಂತರವಾಗಬೇಕಾಗಿರುವ ಜಮೀನೂ ಸಹ ಶುದ್ಧ ಕ್ರಯಪತ್ರದ ವಹಿವಾಟಿಗೆ ಒಳಪಟ್ಟಿರುವ ಸಾಧ್ಯತೆ ಇರುತ್ತದೆ. ಈ ಹಿನ್ನೆಲೆಯಲ್ಲಿ ಕೋಷ್ಟಕದಲ್ಲಿ ನಮೂದಿಸಿರುವ 822.18 ಎಕರೆ ವಿಸ್ತೀರ್ಣದ ಖಾಸಗಿ ಜಮೀನಿಗೆ ಅನ್ವಯಿಸುವಂತೆ ಲೋಕೋಪಯೋಗಿ ಇಲಾಖೆಯು ಸರ್ವೇಕ್ಷಣಾ ಕಾರ್ಯವನ್ನು ಕೈಗೊಂಡು ವಾಸ್ತವಿಕವಾಗಿ "Transferrable Toll Road Assets" ವ್ಯಾಪ್ತಿಗೆ ಒಳಪಟ್ಟಿರುವ ಸರ್ವೆ ನಂಬರುಗಳನ್ನು ನಿರ್ಧಿಷ್ಟವಾಗಿ ಗುರುತಿಸಿ ಕ್ರಿಯಾ ಒಪ್ಪಂದದ ಷರತ್ತಿನ ಅನುಗುಣವಾಗುವಾಗಿ ಪೂರಕ ಒಪ್ಪಂದವನ್ನು ಈ ಕೂಡಲೇ ಜಾರಿಗೊಳಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಪ್ರಸ್ತಾವಿತ ಪೂರಕ ಒಪ್ಪಂದದಲ್ಲಿ "Transferrable Toll Road Assets" ವ್ಯಾಪ್ತಿಯ ಜಮೀನಿನ ಮರು ಹಸ್ತಾಂತರ ಪ್ರಸ್ತಾವನೆಯನ್ನು ಕಡ್ಡಾಯವಾಗಿ ಸೇರ್ಪಡೆ ಮಾಡಬೇಕೆಂದು ಸಮಿತಿಯು ಆಗ್ರಹಿಸುತ್ತದೆ.

*ಸಮಿತಿಗೆ ಲಭ್ಯವಿರುವ ಮಾಹಿತಿಗಳ ಅನುಗುಣವಾಗಿ ಇತ್ಯರ್ಥವಾದ ಪರಿಹಾರ ಮೊತ್ತವನ್ನು ತಿರಸ್ಕರಿಸಿ ಹೆಚ್ಚುವರಿ ಪರಿಹಾರಕ್ಕೆ ನ್ಯಾಯಾಲಯಗಳಲ್ಲಿ ದಾವೆ ಹೂಡಿರುವ ಪ್ರಕರಣಗಳಿಗೆ ಅನ್ವಯಿಸುವಂತೆ ಖಾಸಗಿ ಮಾಲುದಾರರಿಂದ ಹಸ್ತಾಂತರದ ಪೂರ್ವದಲ್ಲಿ ಮುಚ್ಚಳಿಕೆಯನ್ನು ಪಡೆಯುವ ಬಗ್ಗೆ ದಿನಾಂಕ 12.05.2010 ರಂದು ನಿರ್ಧಾರವನ್ನು ಕೈಗೊಂಡು ಮುಚ್ಚಳಿಕೆಯ ಪ್ರಪತ್ರವನ್ನು ಅನುಮೋದಿಸಲಾಗಿದೆ. ಅಂದರೆ ಪರಿಹಾರವನ್ನು ತಿರಸ್ಕರಿಸಿರುವ ಪ್ರಕರಣಗಳಲ್ಲಿ ದಿನಾಂಕ 12.05.2010ರ ಪೂರ್ವದಲ್ಲಿ ಪ್ರಸ್ತಾವಿತ*

ಮುಚ್ಚಳಿಕೆಯನ್ನು ಪಡೆಯದೆಯೇ ಜಮೀನನ್ನು ಖಾಸಗಿ ಪಾಲುದಾರರಿಗೆ ಹಸ್ತಾಂತರಿಸಿರುವ ಸಾಧ್ಯತೆಯಿರುತ್ತದೆ. ಸಮಿತಿಗೆ ಲಭ್ಯವಿರುವ ಮಾಹಿತಿಗಳ ಅನುಗುಣವಾಗಿ ದಿನಾಂಕ 31.05.2010 ರಿಂದ 05.08.2011 ರ ಮಧ್ಯಂತರದ ಅವಧಿಯಲ್ಲಿ 488.34 ಎಕರೆಗಳ ಖಾಸಗಿ ಜಮೀನಿಗೆ ಕ್ರಯ ಪತ್ರವನ್ನು ಈ ಪ್ರವರ್ಗದಲ್ಲಿ ಅನುಷ್ಠಾನಗೊಳಿಸಲಾಗಿದೆ. ಅಂದರೆ ಈ ವಿಸ್ತೀರ್ಣಕ್ಕೆ ಅನ್ವಯಿಸುವಂತೆ ಭೂ ಮಾಲೀಕರು ಪರಿಹಾರ ಮೊತ್ತವನ್ನು ಸ್ವೀಕರಿಸಲು ಆಕ್ಷೇಪಿಸಿ ಪ್ರಕರಣ ಹೂಡಿರುವ ಹಿನ್ನೆಲೆಯಲ್ಲಿ ಮುಚ್ಚಳಿಕೆ ಪತ್ರವನ್ನು ಕ್ರಯ ಪತ್ರವನ್ನು ಜಾರಿಗೊಳಿಸುವ ಪೂರ್ವದಲ್ಲಿ ಪಡೆಯುವ ಅವಶ್ಯಕತೆಯಿರುತ್ತದೆ. ಪ್ರಸ್ತಾವಿತ ಜಮೀನಿಗೆ ಸಂಬಂಧಿಸಿದಂತೆ ಹೆಚ್ಚುವರಿ ಪರಿಹಾರದ ಪ್ರಕರಣಗಳು ನ್ಯಾಯಾಲಯದಲ್ಲಿ ಬಾಕಿ ಇರುವ ಹಿನ್ನೆಲೆಯಲ್ಲಿ ಹಾಗೂ ಭೂಮಾಲೀಕರ ಹಿತಾಸಕ್ತಿಯನ್ನು ಕಾಪಾಡುವಹಿತದೃಷ್ಟಿಯಿಂದ ಕೆ.ಐ.ಎ.ಡಿ.ಬಿ. ಸಂಸ್ಥೆ ಈ ಕೂಡಲೇ ಅನುಮೋದಿತ ಪ್ರಪತ್ರದಲ್ಲಿ ಮುಚ್ಚಳಿಕೆಯ ಪತ್ರವನ್ನು ಜಾರಿಗೊಳಿಸಲು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

ಪ್ರಸ್ತಾವಿತ ಪ್ರಕರಣಗಳಲ್ಲಿ 6 ವರ್ಷಗಳಿಗೂ ಮೀರಿ ಕ್ರಿಯಾ ಒಪ್ಪಂದದಲ್ಲಿ ಸ್ಪಷ್ಟವಾಗಿ ನಿರೂಪಿಸಲಾದ "Transferrable Toll Road Assets" ವ್ಯಾಖ್ಯಾನಕ್ಕೆ ಅನುಗುಣವಾಗಿ ಮರು ಹಸ್ತಾಂತರ ನಿರ್ದೇಶನವನ್ನು ಉಪೇಕ್ಷಿಸಲಾಗಿದೆ. ಭೂ ಪರಿಹಾರವನ್ನು ಪ್ರಶ್ನಿಸಿರುವ ಪ್ರಕರಣಗಳಿಗೆ ಅನ್ವಯಿಸುವಂತೆ ಖಾಸಗಿ ಪಾಲುದಾರರಿಂದ ಮುಚ್ಚಳಿಕೆಯನ್ನು ಪಡೆಯುವ ಪ್ರಸ್ತಾವನೆಯನ್ನು 7 ವರ್ಷಗಳಿಗೂ ಮೀರಿ ನಿರ್ಲಕ್ಷಿಸಲಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತಾವಿತ ಅವಧಿಯಲ್ಲಿ ದೋಷಪೂರಿತ ಕ್ರಯ ಪತ್ರಗಳ ಅನುಷ್ಠಾನಕ್ಕೆ ಜವಾಬ್ದಾರಿಯುತರಾದ ಅಧಿಕಾರಿ ವರ್ಗದವರನ್ನು ಗುರುತಿಸಿ ಕರ್ತವ್ಯ ಲೋಪದ ಆಧಾರದ ಮೇಲೆ ಶಿಸ್ತಿನ ಕ್ರಮ ಜರುಗಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

8. ಮುಂದುವರಿದಂತೆ, ಶುದ್ಧ ಕ್ರಯಪತ್ರಗಳನ್ನು ಜಾರಿಗೊಳಿಸುವ ಪೂರ್ವದಲ್ಲಿ ಕ್ರಿಯಾ ಒಪ್ಪಂದದ ಶೆಡ್ಯೂಲ್ 1 ಮತ್ತು 4 ಗಳಲ್ಲಿ ಉಲ್ಲೇಖಿಸಿರುವ ಹಾಗೂ ನಿರ್ಬಂಧಿಸಿರುವ ಬಳಕೆಯ ಸ್ವರೂಪಗಳನ್ನು ಕಡ್ಡಾಯವಾಗಿ ಪರಿಗಣಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ವಾಸ್ತವಿಕವಾಗಿ ಕ್ರಿಯಾ ಒಪ್ಪಂದದ ಅನುಚ್ಛೇಧ 3.2.4 ಅನ್ನು ಅನುಚ್ಛೇಧ 3.3.1 ಹಾಗೂ 5.1.1.2 ರ ಹಿನ್ನೆಲೆಯಲ್ಲಿ ವಿಶ್ಲೇಷಿಸಬೇಕಾಗುವುದು. ಕಂಡಿಕೆ 3.3.1 ರಲ್ಲಿ ಖಾಸಗಿ ಪಾಲುದಾರರಿಗೆ ಟೋಲ್ ರಸ್ತೆಯನ್ನು ವಿನ್ಯಾಸಗೊಳಿಸಿ, ಅಭಿವೃದ್ಧಿಪಡಿಸಿ, ನಿರ್ಮಿಸಿ, ನಿರ್ವಹಿಸಿ ಆದಾಯವನ್ನು ಟೋಲ್ ರಸ್ತೆ ಸಂಪೂರ್ಣಗೊಳಿಸಿರುವ ಸೂಚನೆಯನ್ನು ನೀಡಿರುವ ದಿನಾಂಕದಿಂದ 30 ವರ್ಷಗಳ ಅವಧಿಗೆ ಪಡೆಯುವ ಸಂಪೂರ್ಣ ಹಕ್ಕನ್ನು ನೀಡಲಾಗಿದೆ. ಅಂದರೆ 30 ವರ್ಷಗಳ ಅವಧಿಯ ನಂತರ ಸೃಜಿಸಲಾದ ಈ ಸೌಲಭ್ಯಗಳನ್ನು ಸರ್ಕಾರಕ್ಕೆ ಹಿಂತಿರುಗಿಸಬೇಕಾಗುವುದು. ಯಾವ ಸ್ವರೂಪದ ಸೌಲಭ್ಯಗಳನ್ನು ಹಿಂತಿರುಗಿಸಬೇಕಾಗುವುದು ಎಂಬುವುದನ್ನು "Transferrable Toll Road Assets" ಎಂಬ ಶೀರ್ಷಿಕೆಯಡಿಯಲ್ಲಿ ಕ್ರಿಯಾ ಒಪ್ಪಂದದಲ್ಲಿ ಉಲ್ಲೇಖಿಸಲಾಗಿದೆ. ಕ್ರಿಯಾ ಒಪ್ಪಂದದ ಅನುಚ್ಛೇಧ 6.8 ರಲ್ಲಿ ಕನ್ಸೆಷನ್ ಅವಧಿ ಸಂಪೂರ್ಣಗೊಂಡ ನಂತರ ಮೇಲೆ ಉಲ್ಲೇಖಿಸಿರುವ ಪ್ರವರ್ಗದಲ್ಲಿ ಒಳಪಡುವ ಭೂಮಿ ಹಾಗೂ ಸೃಜಿಸಲಾದ ಸೌಲಭ್ಯಗಳನ್ನು 30 ವರ್ಷಗಳ ನಂತರ ಸರ್ಕಾರಕ್ಕೆ 1 ರೂ.ಗಳ ಮೌಲ್ಯದಲ್ಲಿ ಹಿಂದಿರುಗಿಸುವ ಬಗ್ಗೆ ಪ್ರತಿಪಾದಿಸಲಾಗಿದೆ. ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಶುದ್ಧ ಕ್ರಯ ಪತ್ರವನ್ನು ಜಾರಿಗೊಳಿಸುವ ನಿರ್ಧಾರವನ್ನು ಕೈಗೊಳ್ಳುವ ಪೂರ್ವದಲ್ಲಿ ಖಾಸಗಿ ಪಾಲುದಾರರು ಸರ್ಕಾರಕ್ಕೆ ಹಿಂತಿರುಗಿಸಬೇಕಾದ ಭೂಮಿ ಹಾಗೂ ಸೌಲಭ್ಯ ಹಾಗೂ ಸೌಕರ್ಯಗಳ ಬಗ್ಗೆ ಮಂಡಳಿಯು ನಿರ್ಧಾರವನ್ನು ಕೈಗೊಳ್ಳುವುದು ಅವಶ್ಯಕವಾಗಿತ್ತು ಎಂದು ಸಮಿತಿಯು ಅಭಿಪ್ರಾಯ ಪಡುತ್ತದೆ. ಈ ಸಮಗ್ರ ಪತ್ರ ವಹಿವಾಟಿನಲ್ಲಿ "Transferrable Toll Road Assets" ಬಗ್ಗೆ ಯಾವುದೇ ಪ್ರತಿಪಾದನೆ ಇಲ್ಲದೇ ಇರುವುದನ್ನು ಸಮಿತಿಯು ದಿಗ್ಭ್ರಮೆಯಿಂದ ಗಮನಿಸಿದೆ. ಈಗಾಗಲೇ ಈ ವರದಿಯಲ್ಲಿ ಉಲ್ಲೇಖಿಸಿರುವಂತೆ ಕೇವಲ Theme Approval ಆಧಾರದ ಮೇಲೆ

**ಸೆಕ್ಷನ್ 'ಎ' ಕಾಮಗಾರಿಗಳನ್ನು ನಿರ್ಮಾಣ ಮಾಡಲಾಗಿದೆ. ಅಂದರೆ, ಕಂದಾಯ ಸರ್ವೇಕ್ಷಣಾ ನಕ್ಷೆಗಳ ಮೇಲೆ ಅಳವಡಿಸಿ ವಾಸ್ತವಿಕವಾಗಿ ಹಿಂದಿರುಗಿಸಬೇಕಾದ ಭೂಮಿಗೆ ಅನ್ವಯಿಸುವಂತೆ ಸರ್ವೆ ನಂಬರುವಾರು ವಿವರಗಳು ಈವರೆವಿಗೂ ಲೋಕೋಪಯೋಗಿ ಇಲಾಖೆ, ಕೆ.ಐ.ಎ.ಡಿ.ಬಿ., ನಗರಾಭಿವೃದ್ಧಿ ಇಲಾಖೆ ಅಥವಾ ಸರ್ಕಾರದ ಬಳಿ ಲಭ್ಯವಿರುವುದಿಲ್ಲ. ಈ ಮಾಹಿತಿಯ ಅನುಪಸ್ಥಿತಿಯಲ್ಲಿ ಶುದ್ಧ ಕ್ರಯ ಪತ್ರವನ್ನು ಅನುಷ್ಠಾನಗೊಳಿಸಿರುವುದು ಗುರುತರ ವೈಫಲ್ಯವೆಂದು ಸಮಿತಿ ತೀರ್ಮಾನಿಸುತ್ತದೆ. ಲೋಕೋಪಯೋಗಿ ಇಲಾಖೆಯು ಈ ವರದಿಯನ್ನು ಸಲ್ಲಿಸಿದ ಮೂರು ತಿಂಗಳೊಳಗಾಗಿ ಸರ್ವೇಕ್ಷಣಾ ಕಾರ್ಯವನ್ನು ಇತ್ಯರ್ಥಗೊಳಿಸಿ ಹಿಂತಿರುಗಿಸಬೇಕಾದ ಭೂಮಿಗೆ ಅನ್ವಯಿಸುವಂತೆ ಶುದ್ಧ ಕ್ರಯ ಪತ್ರಗಳನ್ನು ಜಾರಿಗೊಳಿಸಿದ್ದಲ್ಲಿ, ಅಂತಹ ಪ್ರಕರಣಗಳನ್ನು ಗುರುತಿಸಿ ಕ್ರಯಪತ್ರಗಳಿಗೆ ತಿದ್ದುಪಡಿ ಅಥವಾ ಪರಿಷ್ಕರಣೆಯನ್ನು ಕ್ರಿಯಾ ಒಪ್ಪಂದದ ಹಾಗೂ ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನ ಹಿನ್ನೆಲೆಯಲ್ಲಿ ಜಾರಿಗೊಳಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಇದಕ್ಕೆ ಪೂರಕವಾಗಿ ಈ ಹಿಂದೆ ಬೇಷರತ್ತಾಗಿ ಜಾರಿಗೊಳಿಸಲಾದ ಕ್ರಯಪತ್ರಗಳನ್ನು ಪರಿವೀಕ್ಷಿಸಿ ಸರ್ಕಾರದ ಹಿತಾಸಕ್ತಿಯನ್ನು ಕಾಪಾಡುವ ಹಿತದೃಷ್ಟಿಯಿಂದ ಸರ್ವೇಕ್ಷಣಾ ಕಾರ್ಯ ಇತ್ಯರ್ಥಗೊಳ್ಳುವ ನಿರ್ಬಂಧನೆಗೆ ಒಳಪಟ್ಟಂತೆ 30 ವರ್ಷಗಳ ಗುತ್ತಿಗೆ ಕರಾರನ್ನು ತಿದ್ದುಪಡಿಯ ಮುಖಾಂತರ ಜಾರಿಗೊಳಿಸಲು ಸರ್ಕಾರವು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಈಗಾಗಲೇ ಉಲ್ಲೇಖಿಸಿರುವಂತೆ ಕೆ.ಐ.ಎ.ಡಿ.ಬಿ. ಅಧಿನಿಯಮದಡಿ Single Industrial Unit ಪ್ರವರ್ಗದ ಜಮೀನಿಗೂ ಸಹ 99 ವರ್ಷಗಳ ಗುತ್ತಿಗೆ ಆಧಾರದ ಮೇಲೆ, ಸಂಪೂರ್ಣ ಪರಿಹಾರವನ್ನು ಸ್ವೀಕರಿಸಿದ ನಂತರವೂ ಜಾರಿಗೊಳಿಸುತ್ತಿರುವುದು ಸಾಮಾನ್ಯ ಜ್ಞಾನವಾಗಿದೆ. ಇದೇ ಸ್ತರದಲ್ಲಿ ಬಿ.ಎಂ.ಐ.ಸಿ. ಯೋಜನಾ ಅನುಷ್ಠಾನಕ್ಕೂ ಈ ಷರತ್ತುಗಳನ್ನು ವಿಧಿಸಲು ಸರ್ಕಾರವು ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.**

## *VII. <u>ಅನುಚ್ಛೇಧ – 3.3– ಟೋಲ್ ರಸ್ತೆ</u>*

### *<u>ಅನುಚ್ಛೇಧ – 3.3.1.– ಟೋಲ್ ರಸ್ತೆಯ ವಿನ್ಯಾಸ, ಅಭಿವೃದ್ಧಿ, ನಿರ್ವಹಣೆ, ಟೋಲ್ ಸಂಗ್ರಹಣೆ, ರಿಯಾಯಿತಿ ಅವಧಿಯ ವಿಸ್ತರಣೆ ಇತ್ಯಾದಿಗಳ ಬಗ್ಗೆ.</u>*

ನೈಸೆಲ್/ನೀಸೆಲ್ ಸಂಸ್ಥೆಯು ಫೇಸ್–1 ಮತ್ತು ಫೇಸ್–2 ರಸ್ತೆಗಳ Design Engineering ಬಹುತೇಕವಾಗಿ ಸಂಪೂರ್ಣಗೊಳಿಸಿರುತ್ತದೆ. ಆದರೆ ಈ ರಸ್ತೆಗಳು ಕ್ರಿಯಾ ಒಪ್ಪಂದದ ಅವಿಭಾಜ್ಯ ಅಂಗವಾದ ಯೋಜನಾ ತಾಂತ್ರಿಕ ವರದಿಯಲ್ಲಿ ನಮೂದಿಸಲಾಗಿರುವ ಅಲೈನ್‌ಮೆಂಟ್‌ಗಳಂತೆ ಇರುವುದಿಲ್ಲ. ಪ್ರಸಕ್ತ ಸಂದರ್ಭದಲ್ಲಿ 41 ಕಿ.ಮೀ. ಉದ್ದದ ಪೆರಿಫೆರಲ್ ರಸ್ತೆಯನ್ನು ಓ.ಡಿ.ಪಿ. ಅನುಗುಣವಾಗಿ ಖಾಸಗಿ ಪಾಲುದಾರರು ಸಂಪೂರ್ಣಗೊಳಿಸಿದ್ದು, ಟೋಲ್ ದರಗಳನ್ನು 18.12.2008 ರಿಂದ ವಸೂಲಾತಿ ಮಾಡಲಾಗುತ್ತಿದೆ. 2010 ರಿಂದ 9 ಕಿ.ಮೀ. ಉದ್ದದ ಲಿಂಕ್ ರಸ್ತೆಯಲ್ಲಿಯೂ ಸಹ ಟೋಲ್ ದರವನ್ನು ವಸೂಲಿ ಮಾಡಲಾಗುತ್ತಿದೆ.

## *VIII. <u>ಅನುಚ್ಛೇಧ – 3.3.2 – ಟೋಲ್ ಪ್ರಾಧಿಕಾರದ ಅಧಿನಿಯಮವನ್ನು ಜಾರಿಗೊಳಿಸಲು ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮಗಳ ಬಗ್ಗೆ.</u>*

ಸಮಿತಿಗೆ ಲಭ್ಯವಿರುವ ಮಾಹಿತಿಯ ಅನುಗುಣವಾಗಿ ಈ ಕಂಡಿಕೆಯಡಿಯಲ್ಲಿ ಟೋಲ್ ಆಥಾರಿಟಿ ಆಕ್ಟ್ ಅನ್ನು ಪ್ರತ್ಯೇಕವಾಗಿ ರಚಿಸಿರುವುದಿಲ್ಲ. ವಾಸ್ತವಿಕವಾಗಿ ನೈಸ್ ಸಂಸ್ಥೆಯು ಡಿಸೆಂಬರ್ 2008

ರಲ್ಲಿ ಯೋಜನೆಯ ರಸ್ತೆಯನ್ನು ಬಹುತೇಕವಾಗಿ ಸಂಪೂರ್ಣಗೊಳಿಸಿರುವುದಾಗಿ ವರದಿಯನ್ನು ನೀಡಿ ಈ ಆಧಾರದ ಮೇಲೆ ಟೋಲ್ ದರ ವಸೂಲಿ ಮಾಡಲು ಅಧಿಸೂಚನೆ ಹೊರಡಿಸುವಂತೆ ಕೋರಿದೆ. ಅಂದರೆ ಪೆರಿಫೆರಲ್ ರಸ್ತೆಗೆ ಕಂಡಿಕೆ 3.3.1 ರ ಅನುಗುಣವಾಗಿ 18.12.2008 ರಿಂದ 30 ವರ್ಷಗಳ ಅವಧಿಗೆ Concession ಅವಧಿಯನ್ನು ನಿರ್ಧರಿಸಬೇಕಾಗುವುದು. ಈ ಮಾನದಂಡಗಳನ್ನು ಅಳವಡಿಸಿದಲ್ಲಿ, 17.12.2038 ರವರೆಗೆ ಪೆರಿಫೆರಲ್ ರಸ್ತೆಗೆ ಅನ್ವಯಿಸುವಂತೆ ನೈಸೆಲ್/ನೀಸೆಲ್ ಸಂಸ್ಥೆಯು ಟೋಲ್ ದರಗಳನ್ನು ವಿಧಿಸಿ ಸಂಗ್ರಹಿಸಬಹುದಾಗಿದೆ. 9 ಕಿ.ಮೀ. ಉದ್ದದ ಲಿಂಕ್ ರಸ್ತೆಗೆ ಅನ್ವಯಿಸುವಂತೆ 2040ರವರೆಗೂ ಟೋಲ್ ವಿಧಿಸಿ ಸಂಗ್ರಹಿಸಬಹುದಾಗಿದೆ.

ಟೋಲ್ ಅಥಾರಿಟಿ ಅಧಿನಿಯಮವನ್ನು ಪ್ರತ್ಯೇಕವಾಗಿ ರಚಿಸದೇ ಇರುವುದು ಒಂದು ಗುರುತರ ವೈಫಲ್ಯತೆ ಎಂದು ಸಮಿತಿ ತೀರ್ಮಾನಿಸುತ್ತದೆ. ಕ್ರಿಯಾ ಒಪ್ಪಂದದ ಅನುಚ್ಛೇಧ 2.1.1.3 ಅಡಿಯಲ್ಲಿ ಶೆಡ್ಯೂಲ್ 3 ರಲ್ಲಿ ಜಾರಿಗೊಳಿಸಬೇಕಾಗಿರುವ ಅಧಿನಿಯಮಗಳ ಪೈಕಿ ಟೋಲ್ ಅಥಾರಿಟಿ ಆಕ್ಟ್ ಪ್ರಥಮ ಸ್ಥಾನದಲ್ಲಿರುತ್ತದೆ. ಆದಾಗ್ಯೂ, ಟೋಲ್ ಅಥಾರಿಟಿ ಆಕ್ಟ್ ಅನುಪಸ್ಥಿತಿಯಲ್ಲಿ ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿಯವರು ಮೆ:ನೈಸ್ ಸಂಸ್ಥೆಯೊಂದಿಗೆ 04.09.2000 ದಂದು ಟೋಲ್ ಕನ್ಸೆಷನ್ ಒಪ್ಪಂದವನ್ನು ಜಾರಿಗೊಳಿಸಿರುತ್ತಾರೆ. 04.09.2000 ದಂದು ಜಾರಿಗೊಳಿಸಲಾದ ಈ ಒಪ್ಪಂದವನ್ನು ಅವಲೋಕಿಸಿದಾಗ ಈ ಒಪ್ಪಂದದ ಅನುಚ್ಛೇಧ 4 ರಲ್ಲಿ ಟೋಲ್ ಅಥಾರಿಟಿ ಬಗ್ಗೆ ಪ್ರತಿಪಾದಿಸಲಾಗಿದೆ. *ಈ ಕಂಡಿಕೆಯ ಅನುಗುಣವಾಗಿ ಖಾಸಗಿ ಪಾಲುದಾರರಿಗೆ ಟೋಲ್ ಅಥಾರಿಟಿ ಸೃಜನೆಯ ಸಂಪೂರ್ಣ ಹಕ್ಕನ್ನು ನೀಡಲಾಗಿದೆ. ಹಾಗೂ ಈ ಪ್ರಾಧಿಕಾರಕ್ಕೆ ಟೋಲ್ ರಸ್ತೆಯ ನಿರ್ವಹಣೆಗೆ ಹಾಗೂ ಟೋಲ್ ಸ್ವೀಕೃತಿಯ ವ್ಯವಸ್ಥೆಯ ಸಂಪೂರ್ಣ ಅಧಿಕಾರವನ್ನು ನೀಡಲಾಗಿದೆ. ಟೋಲ್ ಅಥಾರಿಟಿ ಆಕ್ಟ್ ಅನುಪಸ್ಥಿತಿಯಲ್ಲಿ ಈ ಕ್ರಮವು ನಿಯಮಬಾಹಿರ ಹಾಗೂ ಅಸಮರ್ಪಕ ಎಂದು ಸಮಿತಿ ತೀರ್ಮಾನಿಸುತ್ತದೆ. ವಾಸ್ತವಿಕವಾಗಿ ಕರ್ನಾಟಕ ರಾಜ್ಯ ಹೆದ್ದಾರಿ ಕಾಯಿದೆ 1964 ಕ್ಕೆ ದಿನಾಂಕ 21.12.1998 ರಿಂದ ಅನ್ವಯವಾಗುವಂತೆ ತಿದ್ದುಪಡಿ ತಂದು ಸೆಕ್ಷನ್ 19 (ಎ) ಅನ್ನು ಸೇರ್ಪಡೆ ಮಾಡಲಾಗಿದೆ. ಈ ಸೆಕ್ಷನ್ ಅನುಗುಣವಾಗಿ ರಾಜ್ಯ ಸರ್ಕಾರವು ಹೆದ್ದಾರಿಗಳ ನಿರ್ಮಾಣ ಹಾಗೂ ಅಭಿವೃದ್ಧಿಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಯೊಡನೆ ಒಡಂಬಡಿಕೆಯನ್ನು ಜಾರಿಗೊಳಿಸಬಹುದಾಗಿದೆ. ಹಾಗೂ ಪ್ರಸ್ತಾವಿತ ವ್ಯಕ್ತಿಯು ಸರ್ಕಾರವು ನಿಗದಿಪಡಿಸಿರುವ ದರಗಳಲ್ಲಿ ಟೋಲ್ ವಿಧಿಸಿ ಸಂಗ್ರಹಿಸಬಹುದಾಗಿದೆ. ಆದರೆ ಈ ರೀತಿ ಸೌಲಭ್ಯ ಕೆಲವು ನಿರ್ಬಂಧನೆಗೆ ಒಳಪಟ್ಟಿರುತ್ತದೆ. ಟೋಲ್ ವಿಧಿಸುವ ಅಧಿಕಾರವನ್ನು ಅಥವಾ ದರಗಳನ್ನು ಭೂಸ್ವಾಧೀನ ವೆಚ್ಚ, ನಿರ್ಮಾಣ ವೆಚ್ಚ, ಅಭಿವೃದ್ಧಿ ವೆಚ್ಚ ಹಾಗೂ ನಿರ್ವಹಣಾ ವೆಚ್ಚದ ಆಧಾರದ ಮೇಲೆ ನಿರ್ಧರಿಸಬೇಕಾಗುವುದು. ಬಿ.ಎಂ.ಐ.ಸಿ. ಯೋಜನೆಗೆ ಅನ್ವಯಿಸುವಂತೆ ವಾಸ್ತವಿಕವಾಗಿ ಅನುಷ್ಠಾನಗೊಳಿಸಿರುವ ಪೆರಿಫೆರಲ್ ರಸ್ತೆ ಕ್ರಿಯಾ ಒಪ್ಪಂದ ಅಥವಾ ತಾಂತ್ರಿಕ ವರದಿಯಲ್ಲಿ ನಮೂದಿಸಿರುವ ಕಾಂಕ್ರೀಟ್ ರಸ್ತೆಯ ಬದಲಾಗಿ ಡಾಂಬರಿನ ರಸ್ತೆಯಾಗಿರುತ್ತದೆ. ವಿನ್ಯಾಸದ ಈ ಬದಲಾವಣೆಗೆ ಸರ್ಕಾರ ಕೆಲವು ನಿರ್ಬಂಧನೆಗೆ ಒಳಪಟ್ಟಂತೆ ಸಹಮತಿಯನ್ನು ಸೂಚಿಸಿರುವುದನ್ನು ಸಮಿತಿ ಗಮನಿಸಿದೆ.* ಆದಾಗ್ಯೂ, ಡಾಂಬರಿನ ರಸ್ತೆಯ ಅಭಿವೃದ್ಧಿ ಹಾಗೂ ನಿರ್ಮಾಣ ವೆಚ್ಚ ಕಾಂಕ್ರೀಟ್ ರಸ್ತೆಗೆ ಹೋಲಿಸಿದಲ್ಲಿ ಬಹುತೇಕವಾಗಿ ಕಡಿಮೆಯಾಗುವುದರಿಂದ ಈ ಅಧಿನಿಯಮದಡಿ ಸೂಕ್ತ ಅನುಪಾತದಲ್ಲಿ ಟೋಲ್ ದರಗಳನ್ನು ಇಳಿಮುಖಗೊಳಿಸುವ ಅವಶ್ಯಕತೆ ಇತ್ತು ಎಂದು ಸಮಿತಿ ತೀರ್ಮಾನಿಸುತ್ತದೆ. *ಏಕೆಂದರೆ, ಪ್ರಸ್ತಾವಿತ 19(ಎ) ಸೆಕ್ಷನ್ ಅಡಿಯಲ್ಲಿ ನಿರ್ಮಾಣ ಹಾಗೂ ಅಭಿವೃದ್ಧಿ ವೆಚ್ಚಗಳ ಆಧಾರದ ಮೇಲೆ ಟೋಲ್ ದರಗಳನ್ನು ಇತ್ಯರ್ಥಗೊಳಿಸಬೇಕಾಗುವುದು. ಈ ಹಿನ್ನೆಲೆಯಲ್ಲಿ ದಿನಾಂಕ 14.11.2002 ರಂದು ಯೋಜನಾ ಸಮನ್ವಯಕರು, ಬಿ.ಎಂ.ಐ.ಸಿ.ಪಿ. ಇವರು ನೈಸ್ ಸಂಸ್ಥೆಗೆ ಬರೆದಿರುವ ಉಲ್ಲೇಖವನ್ನು ಸಮಿತಿಯು ಗಮನಿಸಿದೆ. ಈ ಉಲ್ಲೇಖದ ಅನುಗುಣವಾಗಿ ತಕ್ಷಣಕ್ಕೆ ಜಾರಿಗೆ ಬರುವಂತೆ ಸಂಪರ್ಕವನ್ನು ಸಾಧಿಸಲು 2 ಪಥದ ಬಿಟುಮಿನಸ್ ರಸ್ತೆಯನ್ನು ನಿರ್ಮಾಣ ಮಾಡಲು ಅನುಮತಿಯನ್ನು ನೀಡಲಾಗಿದೆ. ಆದರೆ ಕ್ರಿಯಾ ಒಪ್ಪಂದದ ಅನುಚ್ಛೇಧ 5.5.3ರ ಅನುಗುಣವಾಗಿ ಅಥವಾ 3 ವರ್ಷಗಳ ಅವಧಿಯೊಳಗೆ 4 ಪಥದ ಕಾಂಕ್ರೀಟ್ ರಸ್ತೆಯ ನಿರ್ಮಾಣದ ನಿರ್ಬಂಧನೆಗೆ ಒಳಪಟ್ಟಂತೆ ಈ ಅನುಮೋದನೆಯನ್ನು ನೀಡಲಾಗಿದೆ.*

ಅನುಚ್ಛೇಧ 6.6.3 ಅನ್ನು ಅವಲೋಕಿಸಿದಾಗ ಸೆಕ್ಷನ 'ಎ' ಕಾಮಗಾರಿಗಳನ್ನು ಫೈನಾನ್ಷಿಯಲ್ ಕ್ಲೋಷರ್ ಆದ 8 ವರ್ಷಗಳ ಒಳಗೆ ಸಂಪೂರ್ಣಗೊಳಿಸಬೇಕಾಗುತ್ತದೆ. ಇದಲ್ಲದೆ, ಕ್ರಿಯಾ ಒಪ್ಪಂದದ ಅನುಚ್ಛೇಧ 6.6.2 ರಲ್ಲಿ ನಮೂದಿಸಿರುವ ತಾಂತ್ರಿಕ ಮಾನದಂಡಗಳ ಅನುಗುಣವಾಗಿ ರಸ್ತೆಯನ್ನು ಸಂಪೂರ್ಣಗೊಳಿಸುವುದಕ್ಕೆ ಖಾಸಗಿ ಪಾಲುದಾರರು ಬದ್ಧರಾಗಿರುತ್ತಾರೆ. ವಾಸ್ತವಿಕವಾಗಿ ನೈಸೆಲ್ ಸಂಸ್ಥೆಯು 29.03.2004 ರಂದು ಫೈನಾನ್ಷಿಯಲ್ ಕ್ಲೋಷರ್ ಅನ್ನು ಸಾಧಿಸಿರುತ್ತದೆ.ಅಂದರೆ ಸೆಕ್ಷನ್ 'ಎ' ವ್ಯಾಪ್ತಿಗೆ ಪೆರಿಫೆರಲ್ ರಸ್ತೆ ಹಾಗೂ ಲಿಂಕ್ ರಸ್ತೆಗಳನ್ನು 4 ಪಥದ ರಸ್ತೆಗಳನ್ನಾಗಿ 28.03.2012ರ ಒಳಗಾಗಿ ಸಂಪೂರ್ಣಗೊಳಿಸಬೇಕಾಗುವುದು. ಇದಲ್ಲದೆ, ಲೋಕೋಪಯೋಗಿ ಇಲಾಖೆಯು ಡಾಂಬರು ರಸ್ತೆಯ ನಿರ್ಮಾಣದ ಸೌಲಭ್ಯವನ್ನು ವಿಸ್ತರಿಸುವ ಸಂದರ್ಭದಲ್ಲಿ ಈ ಪ್ರಸ್ತಾವನೆಯನ್ನು ಟೋಲ್ ಕನ್ಸೆಷನ್ ಅಗ್ರೀಮೆಂಟ್ ಮತ್ತು ಕ್ರಿಯಾ ಒಪ್ಪಂದದ ಅನುಗುಣವಾಗಿ ಸಮಗ್ರವಾಗಿ ಪರಿಗಣಿಸಬೇಕು ಎಂದು ಉಲ್ಲೇಖಿಸಿರುವುದನ್ನು ಸಮಿತಿಯು ಗಮನಿಸಿದೆ. ಈ ಅಂಶಗಳಿಂದ ಕರ್ನಾಟಕ ಸರ್ಕಾರವು ಡಾಂಬರು ರಸ್ತೆ ನಿರ್ಮಾಣಕ್ಕೆ ವಿಸ್ತರಿಸಿರುವ ಸೌಲಭ್ಯವು ಕ್ರಿಯಾ ಒಪ್ಪಂದದ ನಿರ್ಬಂಧನೆಗೆ ಒಳಪಟ್ಟಿರುತ್ತದೆ. ಇದಲ್ಲದೆ, ಈ ಸೌಲಭ್ಯವು ಟೋಲ್ ಕನ್ಸೆಷನ್ ಅಗ್ರೀಮೆಂಟ್ ನಿರ್ಬಂಧನೆಗಳಿಗೂ ಸಹ ಒಳಪಟ್ಟಿರುತ್ತದೆ. ಈ ಎಲ್ಲಾ ಅಂಶವನ್ನು ಪರಿವೀಕ್ಷಿಸಿದಾಗ ಕರ್ನಾಟಕ ಸರ್ಕಾರವು ವಿಸ್ತರಿಸಿರುವ ಡಾಂಬರು ರಸ್ತೆಯ ನಿರ್ಮಾಣದ ತಾತ್ಕಾಲಿಕ ಸೌಲಭ್ಯವನ್ನು ಖಾಸಗಿ ಪಾಲುದಾರರು ಅನಿಯತವಾಗಿ ಶೋಷಣೆ ಮಾಡಿದ್ದಾರೆ ಎಂದು ಸಮಿತಿ ತೀರ್ಮಾನ ಮಾಡುತ್ತದೆ. ಲೋಕೋಪಯೋಗಿ ಇಲಾಖೆಯು ಕ್ರಿಯಾ ಒಪ್ಪಂದದ ಶೆಡ್ಯೂಲ್ 3ರ ಪ್ರತಿಪಾದನೆಯ ಅನುಗುಣವಾಗಿ ಟೋಲ್ ಅಥಾರಿಟಿ ಆಕ್ಟ್ ಜಾರಿಗೊಳಿಸದೇ ಇರುವುದೂ ಸಹ ಈ ಪ್ರಮುಖ ವೈಫಲ್ಯತೆಗೆ ಕಾರಣ ಎಂದು ಸಮಿತಿ ತೀರ್ಮಾನಿಸುತ್ತದೆ.

2ನೇ ಸ್ತರದಲ್ಲಿ 2012 ರಿಂದ ಈವರೆವಿಗೂ ಕ್ರಿಯಾ ಒಪ್ಪಂದದ ಉಲ್ಲಂಘನೆಯ ಆಧಾರದ ಮೇಲೆ ಖಾಸಗಿ ಪಾಲುದಾರರ ವಿರುದ್ಧ ಕ್ರಮ ಜರುಗಿಸುವಲ್ಲಿ ಆಗಿರುವ ಅತೀವ ವಿಳಂಬವನ್ನು ಸಮಿತಿಯು ಖಂಡಿಸುತ್ತದೆ. ತಾಂತ್ರಿಕ ಮಾನದಂಡನೆಗಳ ಪಾಲನೆಯಲ್ಲಿ ಆಗಿರುವ ಲೋಪದೋಷಗಳನ್ನು ನಿರ್ಲಕ್ಷಿಸಿ ಲೋಕೋಪಯೋಗಿ ಇಲಾಖೆಯು 18.12.2008, 29.05.2010 ಹಾಗೂ 05.02.2011 ರಂದು ಟೋಲ್ ದರಗಳನ್ನು ಪರಿಷ್ಕರಿಸಿ ಆದೇಶ ಹೊರಡಿಸಿದೆ. ಕೇವಲ ಸಾಂಕೇತಿಕವಾಗಿ 06.02.20012 ರಂದು 4 ಪಥದ ಕಾಂಕ್ರೀಟ್ ರಸ್ತೆಯ ನಿರ್ಮಾಣದ ಸ್ಥಿತಿಗತಿಗಳ ಬಗ್ಗೆ ಸ್ಪಷ್ಟೀಕರಣವನ್ನು ಕೋರಲಾಗಿದೆ. ಈ ಉಲ್ಲೇಖದಲ್ಲಿ ಫೈನಾನ್ಷಿಯಲ್ ಕ್ಲೋಷರ್ ಸಾಧನೆಯಾದ 6 ವರ್ಷಗಳ ಅವಧಿಯಲ್ಲಿ ಕಾಂಕ್ರೀಟ್ ರಸ್ತೆಯ ನಿರ್ಮಾಣ ಸಂಪೂರ್ಣಗೊಳ್ಳಬೇಕು ಎಂದು ತಿಳಿಸಲಾಗಿದೆ. ಅಂದರೆ, ಲೋಕೋಪಯೋಗಿ ಇಲಾಖೆ ನಿಗದಿಪಡಿಸಿರುವ ಗಡುವು ಕ್ರಿಯಾ ಒಪ್ಪಂದದ ಕಂಡಿಕೆ 6.6.3 ಕ್ಕೆ ವ್ಯತಿರಿಕ್ತವಾಗಿರುವುದನ್ನು ಸಮಿತಿ ಗಮನಿಸಿದೆ. ಲೋಕೋಪಯೋಗಿ ಇಲಾಖೆಯು 05.02.2011 ರಂದು ಮೂರನೇ ಪರಿಷ್ಕರಣೆಯನ್ನು ಜಾರಿಗೊಳಿಸಿದ್ದು, ತದನಂತರ 06.02.2012 ರಂದು ರಸ್ತೆ ಸ್ಥಿತಿಗತಿಗಳ ಬಗ್ಗೆ ನೈಸೆಲ್ ಸಂಸ್ಥೆಯಿಂದ ಸ್ಪಷ್ಟೀಕರಣವನ್ನು ಕೋರಿರುವುದು ಖಂಡನೀಯವೆಂದು ಸಮಿತಿ ತೀರ್ಮಾನಿಸುತ್ತದೆ. ಈ ಉಲ್ಲೇಖದಿಂದ ಲೋಕೋಪಯೋಗಿ ಇಲಾಖೆ ಯೋಜನಾ ಅನುಷ್ಠಾನದ ವಾಸ್ತವಿಕ ಸ್ಥಿತಿಗತಿಗಳ ಪರಿವೀಕ್ಷಣೆಯಲ್ಲಿ ಸಂಪೂರ್ಣವಾಗಿ ವಿಫಲವಾಗಿರುವುದು ವ್ಯಕ್ತವಾಗುತ್ತದೆ. ಉಲ್ಲೇಖಿತ ಟೋಲ್ ಪರಿಷ್ಕರಣಾ ಆದೇಶಗಳಲ್ಲೂ ಸಹ ಟೋಲ್ ದರಗಳನ್ನು ನಿರ್ಮಾಣ ಹಾಗೂ ನಿರ್ವಹಣಾ ವೆಚ್ಚದ ಆಧಾರದ ಮೇಲೆ ನಿಗದಿಪಡಿಸಬೇಕು ಎಂಬ ಅಭಿಪ್ರಾಯವನ್ನು ರಾಜ್ಯ ಹೆದ್ದಾರಿ ಕಾಯಿದೆ ಸೆಕ್ಷನ್ 19(ಎ) ಅನುಗುಣವಾಗಿ ಉಲ್ಲೇಖಿಸಲಾಗಿದೆ. ಆದಾಗ್ಯೂ, ಈ ಉಲ್ಲೇಖಕ್ಕೆ ವ್ಯತಿರಿಕ್ತವಾಗಿ ನಿರ್ಮಾಣ ವೆಚ್ಚವನ್ನು ಸಾರಾ ಸಗಟಾಗಿ ಡಾಂಬರಿನ ರಸ್ತೆಯ ಬದಲಾಗಿ ಕಾಂಕ್ರೀಟ್ ರಸ್ತೆಗಳ ಮಾನದಂಡಗಳ ಅನುಗುಣವಾಗಿ ಪರಿಗಣಿಸಿ ಟೋಲ್ ದರವನ್ನು ನಿರ್ಧರಿಸಿರುವುದು ಸಮಿತಿಗೆ ಸ್ಪಷ್ಟವಾಗಿದೆ. ಏಕೆಂದರೆ, ತಾಂತ್ರಿಕ ವರದಿಯ ಅಥವಾ ಕ್ರಿಯಾ ಒಪ್ಪಂದದಲ್ಲಿ ನಮೂದಿಸಿರುವ ಪ್ರಥಮ ಸ್ತರದ ಟೋಲ್ ದರಗಳನ್ನೇ 2008 ರಲ್ಲಿ ಅಳವಡಿಸಿದ್ದು, ಇದರ ಆಧಾರದ ಮೇಲೆ ಪರಿಷ್ಕರಣೆಗಳನ್ನು ಜಾರಿಗೊಳಿಸಲಾಗಿದೆ.

***ಈ ಹಿನ್ನೆಲೆಯಲ್ಲಿ ಈ ವೈಫಲ್ಯತೆಯಿಂದ ಆಗಿರುವ ಅನುದ್ದೇಶಿತ ಲಾಭಾಂಶವನ್ನು ಇತ್ಯರ್ಥಗೊಳಿಸಿ ಹೂಡಿಕೆಯ ಮೇಲಿನ ಪ್ರತಿಫಲವನ್ನು ಕನ್ಸೆಷನ್ ಪೀರಿಯಡ್ ಹಿನ್ನೆಲೆಯಲ್ಲಿ ಪರಿಷ್ಕರಿಸಬೇಕು ಎಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.***

ತದನಂತರದ ಬೆಳವಣಿಗೆಯಲ್ಲಿ ನೀಸೆಲ್ ಸಂಸ್ಥೆಯು ಸ್ವಯಂ ಪ್ರೇರಿತವಾಗಿ ಟೋಲ್ ದರಗಳನ್ನು ಪರಿಷ್ಕರಣೆ ಮಾಡಿ ಸಂಗ್ರಹಿಸುತ್ತಿರುವುದನ್ನು ಸಮಿತಿಯು ಗಮನಿಸಿದೆ. 2011ರ ಪರಿಷ್ಕರಣೆಯ ನಂತರ ನೈಸೆಲ್ ಸಂಸ್ಥೆಯು 2012ನೇ ಸಾಲಿಗೆ ಟೋಲ್ ದರಗಳ ಪರಿಷ್ಕರಣೆಯ ಪ್ರಸ್ತಾವನೆಯನ್ನು ಸಲ್ಲಿಸಿದೆ. ಮೇಲೆ ವಿಶ್ಲೇಷಿಸಿರುವ ಕ್ರಿಯಾ ಒಪ್ಪಂದದ ಹಾಗೂ ತಾಂತ್ರಿಕ ವರದಿಯ ಮಾನದಂಡಗಳ ಪಾಲನೆಯಲ್ಲಾಗಿರುವ ವೈಫಲ್ಯತೆಗಳ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ಪರಿಷ್ಕರಣೆಯ ಆದೇಶವನ್ನು ಜಾರಿಗೊಳಿಸಿರುವುದಿಲ್ಲ. ಆದಾಗ್ಯೂ, ಕ್ರಿಯಾ ಒಪ್ಪಂದದ ಅನುಚ್ಛೇಧ 3.1 ರಿಂದ 3.5 ಅಡಿಯಲ್ಲಿ ರಾಜ್ಯ ಸರ್ಕಾರವು ಪರಿಷ್ಕರಣೆಯ ಆದೇಶವನ್ನು ಪ್ರಸ್ತಾವನೆ ಸ್ವೀಕೃತವಾದ 30 ದಿನಗಳಲ್ಲಿ ಜಾರಿಗೊಳಿಸದಿದ್ದಲ್ಲಿ, ಈ ಪರಿಷ್ಕರಣೆಯು ಅನುಮೋದನೆಯಾದಂತೆ ಎಂದು ಉಲ್ಲೇಖಿಸಿರುವ ಹಿನ್ನೆಲೆಯಲ್ಲಿ ಖಾಸಗಿ ಪಾಲುದಾರರು ಸ್ವಯಂ ಪ್ರೇರಿತವಾಗಿ ಟೋಲ್ ದರಗಳನ್ನು ಪರಿಷ್ಕರಿಸಿರುವುದನ್ನು ಸಮಿತಿಯು ಗಮನಿಸಿದೆ. ವಾಸ್ತವಿಕವಾಗಿ ರಾಜ್ಯ ಸರ್ಕಾರ ಹಾಗೂ ಖಾಸಗಿ ಪಾಲುದಾರರು ಕ್ರಿಯಾ ಒಪ್ಪಂದವನ್ನು ತಾತ್ವಿಕವಾಗಿ ಹಾಗೂ ಅಕ್ಷರಶ: ಪಾಲಿಸುವುದು ಪೂರ್ವಭಾವಿ ಅವಶ್ಯಕತೆಯಾಗಿರುತ್ತದೆ. ಈ ಪ್ರಕರಣದಲ್ಲಿ ಕ್ರಿಯಾ ಒಪ್ಪಂದ ಹಾಗೂ ತಾಂತ್ರಿಕ ಮಾನದಂಡವನ್ನು ಉಲ್ಲಂಘಿಸಿರುವ ಹಿನ್ನೆಲೆಯಲ್ಲಿ ಟೋಲ್ ವಿಧಿಸುವ ಹಕ್ಕನ್ನು ಜಾರಿಗೊಳಿಸುವುದು ಕಾನೂನು ಬಾಹಿರ ಎಂದು ಸಮಿತಿಯು ತೀರ್ಮಾನಿಸುತ್ತದೆ. ಕ್ರಿಯಾ ಒಪ್ಪಂದದ Condition Precedent ಗಳನ್ನು ಪಾಲಿಸುವುದು ರಾಜ್ಯ ಸರ್ಕಾರ ಹಾಗೂ ಖಾಸಗಿ ಪಾಲುದಾರರು ಈ ಎರಡೂ ಅಂಗಗಳ ಆದ್ಯ ಕರ್ತವ್ಯವಾಗಿರುತ್ತದೆ. ಅಂದರೆ ಖಾಸಗಿ ಪಾಲುದಾರರು ಕ್ರಿಯಾ ಒಪ್ಪಂದ ಹಾಗೂ ತಾಂತ್ರಿಕ ಮಾನದಂಡಗಳ ಅನುಗುಣವಾಗಿ ಕಾಂಕ್ರೀಟ್ ರಸ್ತೆ ನಿರ್ಮಾಣವನ್ನು ಸಂಪೂರ್ಣಗೊಳಿಸುವ ಬಗ್ಗೆ ದೃಢೀಕರಿಸಿಕೊಳ್ಳುವುದು ಕಾನೂನು ಬದ್ಧ ಹಕ್ಕಾಗಿರುತ್ತದೆ.

ಇದಲ್ಲದೆ, ಟೋಲ್ ರಸ್ತೆಯು ಕ್ರಿಯಾ ಒಪ್ಪಂದದ ಅನುಗುಣವಾಗಿ ಜಾರಿಗೊಳಿಸಿದ್ದಲ್ಲಿ ಮಾತ್ರ ಟೋಲ್ ದರಗಳನ್ನು ವಿಧಿಸಬಹುದಾಗಿದೆ. ಈ ಅನುಷ್ಠಾನವು ಕ್ರಿಯಾ ಒಪ್ಪಂದದ ಕಂಡಿಕೆ 6.7.2 ನಿರ್ಬಂಧನೆಗೆ ಒಳಪಟ್ಟಿರುತ್ತದೆ. ಏತನ್ಮಧ್ಯೆ, ಖಾಸಗಿ ಪಾಲುದಾರರು 350 ಎಂ.ಎಂ. ಕಾಂಕ್ರೀಟ್ ರಸ್ತೆಯ ಬದಲಾಗಿ 150 ಎಂ.ಎಂ. ಗಾತ್ರದ ಬಿಳಿ ಪದರದ ಹೊದಿಕೆಯನ್ನು ಅನುಷ್ಠಾನಗೊಳಿಸುವ ಪ್ರಸ್ತಾವನೆಯನ್ನು ಸಲ್ಲಿಸಿರುವುದನ್ನು ಸಮಿತಿಯು ಗಮನಿಸಿದೆ. ಕ್ರಿಯಾ ಒಪ್ಪಂದದ ಕಂಡಿಕೆ 6.5.1ರ ಅನುಗುಣವಾಗಿ ತಾಂತ್ರಿಕ ಮಾನದಂಡಗಳ ಪಾಲನೆ ಅತ್ಯವಶ್ಯಕವಾಗಿರುತ್ತದೆ. ಟೋಲ್ ಕನ್ಸೆಷನ್ ಒಪ್ಪಂದದ ಕಂಡಿಕೆ 5 ರ ಅನುಗುಣವಾಗಿ ಖಾಸಗಿ ಪಾಲುದಾರರು ಐ.ಆರ್.ಸಿ. ಮಾನದಂಡಗಳ ಅನುಗುಣವಾಗಿ ತಾಂತ್ರಿಕ ಮಾನದಂಡಗಳನ್ನು ಇತ್ಯರ್ಥಗೊಳಿಸಬೇಕಾಗುವುದು. ಈ ಹಿನ್ನೆಲೆಯಲ್ಲಿ ಕ್ರಿಯಾ ಒಪ್ಪಂದದ ಅವಿಭಾಜ್ಯ ಅಂಗವಾದ ತಾಂತ್ರಿಕ ವರದಿಯಲ್ಲಿ ನೈಸೆಲ್ ಸಂಸ್ಥೆಯು ಐ.ಆರ್.ಸಿ. 58 1988ರ ಮಾರ್ಗಸೂಚಿಗಳ ಅನ್ವಯ 350 ಎಂ.ಎಂ. ಗಾತ್ರದ ಕಾಂಕ್ರೀಟ್ ರಸ್ತೆಯನ್ನು ನಿರ್ಮಾಣ ಮಾಡುವುದಾಗಿ Project Technical Report ಅಧ್ಯಾಯ 6 ರ ಕಂಡಿಕೆ 6.4 ರಲ್ಲಿ ದೃಢೀಕರಿಸಿರುವುದನ್ನು ಸಮಿತಿಯು ಗಮನಿಸಿದೆ. ಈ ಎಲ್ಲಾ ಅಂಶಗಳನ್ನು ಪರಿಗಣಿಸಿದಾಗ ಕ್ರಿಯಾ ಒಪ್ಪಂದ, ಯೋಜನಾ ತಾಂತ್ರಿಕ ವರದಿ ಹಾಗೂ ಟೋಲ್ ಒಪ್ಪಂದಗಳ ಸ್ಪಷ್ಟ ಉಲ್ಲಂಘನೆಯಾಗಿರುವುದು ಸಮಿತಿಗೆ ಮನದಟ್ಟಾಗಿದೆ. ಈ ಸ್ತರದಲ್ಲಿ ದಿನಾಂಕ 03.05.2005 ರಂದು ಕರ್ನಾಟಕ ಉಚ್ಛ ನ್ಯಾಯಾಲಯದ ತೀರ್ಪನ್ನು ಉಲ್ಲೇಖಿಸುವುದು ಅವಶ್ಯಕ ಎಂದು ತೀರ್ಮಾನಿಸುತ್ತದೆ. ಈ ತೀರ್ಪಿನ ಅನುಗುಣವಾಗಿ ಸರ್ಕಾರ ಹಾಗೂ ಸರ್ಕಾರದ ಪ್ರತಿನಿಧಿತ್ವ ಹೊಂದಿರುವ ಸಂಸ್ಥೆಗಳು ಯೋಜನೆಯನ್ನು

ಮೂಲವಾಗಿ ಕ್ರಿಯಾ ಒಪ್ಪಂದದಲ್ಲಿ ಸೃಜಿಸಿರುವ ಸ್ವರೂಪದಲ್ಲಿ ಹಾಗೂ ಸೋಮಶೇಖರ ರೆಡ್ಡಿ ಪ್ರಕರಣದಲ್ಲಿ ನೀಡಿರುವ ದೃಢೀಕರಣದ ಅನುಗುಣವಾಗಿ ತಾತ್ವಿಕವಾಗಿ ಹಾಗೂ ಅಕ್ಷರಶಃವಾಗಿ ಅನುಷ್ಠಾನಗೊಳಿಸಬೇಕಾಗುವುದು. ತೀರ್ಪಿನ ಈ ಭಾಗವನ್ನು ಪ್ರಸ್ತಾವಿತ ಬೆಳವಣಿಗೆಗಳ ಹಾಗೂ ಉಲ್ಲಂಘನೆಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಿದಾಗ ಖಾಸಗಿ ಪಾಲುದಾರರು ಕ್ರಿಯಾ ಒಪ್ಪಂದವನ್ನು ಉಲ್ಲಂಘಿಸಿ ತಾಂತ್ರಿಕ ಮಾನದಂಡಗಳಿಗೆ ವ್ಯತಿರಿಕ್ತವಾಗಿ ರಸ್ತೆಯನ್ನು ನಿರ್ಮಾಣ ಮಾಡಿರುವುದು ಸ್ಪಷ್ಟವಾಗುತ್ತದೆ. ಕ್ರಿಯಾ ಒಪ್ಪಂದದ ನಿರೂಪಣೆಗಳು ಹಾಗೂ ಸರ್ಕಾರದ ಸ್ಪಷ್ಟೀಕರಣದ ಅನುಗುಣವಾಗಿ ಟೋಲ್ ರಸ್ತೆಯನ್ನು 4 ಪಥದ ಕಾಂಕ್ರೀಟ್ ರಸ್ತೆಯನ್ನಾಗಿ ನಿರ್ಮಾಣ ಮಾಡುವ ಪ್ರಕ್ರಿಯೆಯಲ್ಲಿಯೂ ಖಾಸಗಿ ಪಾಲುದಾರರು ನಿರ್ಲಕ್ಷ್ಯತಾ ಧೋರಣೆಯನ್ನು ತಳೆದಿರುತ್ತಾರೆ. ಈ ಹಿನ್ನೆಲೆಯಲ್ಲಿ ಕ್ರಿಯಾ ಒಪ್ಪಂದದಲ್ಲಿ ನಮೂದಿಸಲಾದ 8 ವರ್ಷಗಳ ಅವಧಿಯ ನಂತರ ನೈಸೆಲ್/ನೀಸೆಲ್ ಸಂಸ್ಥೆಯು ವಿಧಿಸುತ್ತಿರುವ ಹಾಗೂ ಸಂಗ್ರಹಿಸುತ್ತಿರುವ ಟೋಲ್ ಸ್ವೀಕೃತಿ ಅನಧಿಕೃತ ಹಾಗೂ ಕಾನೂನು ಬಾಹಿರ ಎಂದು ಸಮಿತಿ ತೀರ್ಮಾನಿಸುತ್ತದೆ. ಮೇಲೆ ವಿಶ್ಲೇಷಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸಮಿತಿಯು ಈ ಕೆಳಕಂಡಂತೆ ಶಿಫಾರಸ್ಸುಗಳನ್ನು ಮಾಡುತ್ತದೆ:

1. *ಸರ್ಕಾರವು ಕ್ರಿಯಾ ಒಪ್ಪಂದ, ಟೋಲ್ ಒಪ್ಪಂದ ಹಾಗೂ ಯೋಜನಾ ತಾಂತ್ರಿಕ ವರದಿಯ ಉಲ್ಲಂಘನೆಯ ಆಧಾರದ ಮೇಲೆ ನೈಸೆಲ್/ನೀಸೆಲ್ ಸಂಸ್ಥೆಯ ವಿರುದ್ಧ ಈ ಕೂಡಲೇ ಕಾನೂನು ಕ್ರಮವನ್ನು ಜರುಗಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.*

2. *ಕ್ರಿಯಾ ಒಪ್ಪಂದದ ಸ್ಪಷ್ಟ ಉಲ್ಲಂಘನೆಯ ಹಿನ್ನೆಲೆಯಲ್ಲಿ 05.02.2011 ರಂದು ಜಾರಿಗೊಳಿಸಲಾದ ಟೋಲ್ ದರಗಳ ಪರಿಷ್ಕರಣೆಯ ಆದೇಶದ ಊರ್ಜಿತ ಅವಧಿ ಸಂಪೂರ್ಣಗೊಂಡ ನಂತರ ನೀಸೆಲ್ ಸಂಸ್ಥೆ ವಿಧಿಸಿ, ಸಂಗ್ರಹಿಸುತ್ತಿರುವ ಟೋಲ್ ಸ್ವೀಕೃತಿಯನ್ನು ಅನಧಿಕೃತ ಹಾಗೂ ಕಾನೂನು ಬಾಹಿರವೆಂದು ಘೋಷಿಸಲು ಸರ್ಕಾರವು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಇದಕ್ಕೆ ಪೂರಕವಾಗಿ ಖಾಸಗಿ ಪಾಲುದಾರರು ಸ್ವಯಂ ಪ್ರೇರಿತವಾಗಿ 2011ರ ನಂತರ ಜಾರಿಗೊಳಿಸಿರುವ ದರದ ಪರಿಷ್ಕರಣೆ ಹಾಗೂ ತತ್ಸಂಬಂಧವಾಗಿ ಸ್ವೀಕೃತವಾದ ಮೊತ್ತವನ್ನು ಅನುದ್ದೇಶಿತ ಲಾಭವೆಂದು ಪರಿಗಣಿಸಿ ಹೂಡಿಕೆಯ ಮೇಲಿನ ಪ್ರತಿಫಲವನ್ನು ಸೂಕ್ತ ಅನುಪಾತದಲ್ಲಿ ಪರಿಷ್ಕರಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಈ ಆಧಾರದ ಮೇಲೆ ಈಗಾಗಲೇ ಇತ್ಯರ್ಥಗೊಳಿಸಿರುವ 30 ವರ್ಷಗಳ ಟೋಲ್ ಕನ್ಸೆಷನ್ ಅವಧಿಯನ್ನು ಸೂಕ್ತವಾಗಿ ಪರಿಷ್ಕರಿಸಬೇಕೆಂದು ಸಮಿತಿಯು ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತದೆ.*

3. *ಈ ಪ್ರಕರಣದಲ್ಲಿ ಈಗಾಗಲೇ ವಿವರಿಸಿರುವಂತೆ ಲೋಕೋಪಯೋಗಿ ಇಲಾಖೆಯ ಪ್ರತಿಕ್ರಿಯೆಯು ಸಮರ್ಪಕ ಅಥವಾ ಸಮಯೋಚಿತವಾಗದಿರುವುದನ್ನು ಸಮಿತಿಯು ಗಮನಿಸಿದೆ. ಪ್ರಥಮ ಸ್ತರದಲ್ಲಿ ರಾಜ್ಯ ಹೆದ್ದಾರಿ ಕಾಯಿದೆ ಸೆಕ್ಷನ್ 19(ಎ) ಅನುಗುಣವಾಗಿ ಟೋಲ್ ದರಗಳನ್ನು ರಸ್ತೆಯ ನಿರ್ಮಾಣದಲ್ಲಿ ಭರಿಸಲಾದ ವೆಚ್ಚದ ಆಧಾರದ ಮೇಲೆ ಇತ್ಯರ್ಥಗೊಳಿಸಬೇಕಾಗುವುದು. ಈ ಪ್ರಕರಣದಲ್ಲಿ ನೈಸೆಲ್/ನೀಸೆಲ್ ಸಂಸ್ಥೆಯು ತಾಂತ್ರಿಕ ಮಾನದಂಡಗಳನ್ನು ಸೂಚಿಸಿ ಕಡಿಮೆ ಬಂಡವಾಳದ ಹೂಡಿಕೆ ಸೌಲಭ್ಯವನ್ನು ಸರ್ಕಾರದಿಂದ ಪಡೆದು ಕಾಂಕ್ರೀಟ್ ರಸ್ತೆಯ ಬದಲಾಗಿ ಡಾಂಬರು ರಸ್ತೆ ನಿರ್ಮಾಣ ಮಾಡಿರುವುದು ಸ್ಪಷ್ಟವಾಗಿದೆ. ಈ ಹಿನ್ನೆಲೆಯಲ್ಲಿ ಲೋಕೋಪಯೋಗಿ ಇಲಾಖೆ ಪ್ರಥಮ ಬಾರಿಗೆ 2008 ರಲ್ಲಿ ಟೋಲ್ ದರಗಳನ್ನು ನಿಗದಿಪಡಿಸುವಾಗ ಸೂಕ್ತ ಅನುಪಾತದಲ್ಲಿ ದರಗಳನ್ನು ಇಳಿಮುಖಗೊಳಿಸುವಲ್ಲಿ ವಿಫಲವಾಗಿರುವುದು ಸಮಿತಿಗೆ ಸ್ಪಷ್ಟವಾಗಿದೆ. ಇದಲ್ಲದೆ, ಮುಂದೆ ಜಾರಿಗೊಳಿಸಲಾದ ಎರಡೂ ಪರಿಷ್ಕರಣೆಯಲ್ಲಿಯೂ ಸಹ ಈ ಅಂಶವನ್ನು ಲೋಕೋಪಯೋಗಿ ಇಲಾಖೆ ನಿರ್ಲಕ್ಷಿಸಿದೆ ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. ಇದಕ್ಕೆ*

*ಪೂರಕವಾಗಿ ಟೋಲ್ ಅಥಾರಿಟಿ ಅಧಿನಿಯಮವನ್ನು ಜಾರಿಗೊಳಿಸುವಲ್ಲಿ ಇಲಾಖೆ ಸಂಪೂರ್ಣವಾಗಿ ನಿರ್ಲಕ್ಷ್ಯತಾ ಧೋರಣೆಯನ್ನು ತಳೆದಿದೆ. 2005ರ ಮಾನ್ಯ ಉಚ್ಚ ನ್ಯಾಯಾಲಯದ ತೀರ್ಪಿನ ನಂತರವೂ ಲೋಕೋಪಯೋಗಿ ಇಲಾಖೆ ಕ್ರಿಯಾ ಒಪ್ಪಂದದ ಉಲ್ಲಂಘನೆಯ ಆಧಾರದ ಮೇಲೆ ಕಾನೂನು ಕ್ರಮ ಜರುಗಿಸುವಲ್ಲಿ ವಿಳಂಬ ಧೋರಣೆಯನ್ನು ತಳೆದಿರುವುದು ಪ್ರಸಕ್ತ ಸ್ಥಿತಿಗತಿಗಳಿಂದ ಸಮಿತಿಗೆ ಸ್ಪಷ್ಟವಾಗಿದೆ. ಯೋಜನಾ ಅನುಷ್ಠಾನದ ಸಮಗ್ರ ಸಮನ್ವಯತೆಯ ಜವಾಬ್ದಾರಿಯನ್ನು ಸರ್ಕಾರದ ಆದೇಶದನುಗುಣವಾಗಿ ನಿರ್ವಹಿಸಬೇಕಾದ ಲೋಕೋಪಯೋಗಿ ಇಲಾಖೆಯು ತಾಂತ್ರಿಕ ಮಾನದಂಡಗಳ ಪಾಲನೆಯ ಪರಿವೀಕ್ಷಣೆಯನ್ನು ಸಮಯೋಚಿತವಾಗಿ ಕೈಗೊಳ್ಳುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆಯೆಂದು ಸಮಿತಿ ತೀರ್ಮಾನಿಸುತ್ತದೆ. ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಪ್ರಸ್ತಾವಿತ ವೈಫಲ್ಯಕ್ಕೆ ಕಾರಣರಾದ ಅಧಿಕಾರಿ/ಸಿಬ್ಬಂದಿ ವರ್ಗದವರನ್ನು ಗುರುತಿಸಿ ಶಿಸ್ತಿನ ಕ್ರಮ ಜರುಗಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.*

ನೈಸೆಲ್ ಮತ್ತು ರಾಜ್ಯ ಸರ್ಕಾರವು ಟೋಲ್ ಒಪ್ಪಂದವನ್ನು ಸೆಪ್ಟೆಂಬರ್ 2000 ದಂದು ಕ್ರಿಯಾ ಒಪ್ಪಂದದ ಹಿನ್ನೆಲೆಯಲ್ಲಿ ಅನುಷ್ಠಾನಗೊಳಿಸಿರುವುದನ್ನು ಸಮಿತಿಯು ಗಮನಿಸಿದೆ. ಈ ಒಪ್ಪಂದದ ಅನುಗುಣವಾಗಿ ಟೋಲ್ ರಸ್ತೆಯ ವಿನ್ಯಾಸ, ಅಭಿವೃದ್ಧಿ, ನಿರ್ವಹಣೆ ಹಾಗೂ ಟೋಲ್ ದರಗಳ ಸ್ವೀಕೃತಿಗೆ ಸಂಪೂರ್ಣ ಹಕ್ಕನ್ನು ಖಾಸಗಿ ಪಾಲುದಾರರಿಗೆ ಟೋಲ್ ರಸ್ತೆ ಸಂಪೂರ್ಣಗೊಳಿಸಿದ ದೃಢೀಕರಣ ಪತ್ರ ನೀಡಿದ ದಿನಾಂಕದಿಂದ ಅನ್ವಯಿಸುವಂತೆ 30 ವರ್ಷಗಳ ಅವಧಿಗೆ ನೀಡಲಾಗಿದೆ. 30 ವರ್ಷಗಳ ಅವಧಿಯ ನಂತರ ರಸ್ತೆ ಹಾಗೂ ಸಂಬಂಧಿತ ಸೌಲಭ್ಯಗಳನ್ನು ಸರ್ಕಾರಕ್ಕೆ ಹಿಂತಿರುಗಿಸಬಹುದಾಗಿದೆ. ಪ್ರಥಮ ಸ್ತರದಲ್ಲಿ ಟೋಲ್ ದರಗಳನ್ನು 1998 ರಲ್ಲಿ ಚಾಲ್ತಿಯಲ್ಲಿರುವ ದರಗಳ ಆಧಾರದ ಮೇಲೆ ಜಾರಿಗೊಳಿಸಲಾಗಿದೆ. ಈ ದರಗಳನ್ನು ವಾರ್ಷಿಕವಾಗಿ ಪ್ರತಿಶತ 10 ರಂತೆ ಪರಿಷ್ಕರಿಸಲು ಅವಕಾಶ ಕಲ್ಪಿಸಲಾಗಿದೆ. ಟೋಲ್ ಒಪ್ಪಂದದ ಅನುಚ್ಛೇದ 3 ರ ಅನುಗುಣವಾಗಿ 1998 ರಿಂದ 2010 ರ ಅವಧಿಗೆ ಪೆರಿಫರಲ್ ರಸ್ತೆ ಹಾಗೂ ಲಿಂಕ್ ರಸ್ತೆಗಳ ದರಗಳ ವಿವರಗಳನ್ನು ಕೋಷ್ಟಕದಲ್ಲಿ ನೀಡಲಾಗಿದೆ:

| ಕ್ರ.ಸಂ. | ಪೆರಿಫರಲ್ ರಸ್ತೆ | ವಾಹನಗಳಿಗೆ ದರ | | | | | |
|---|---|---|---|---|---|---|---|
| | ವರ್ಷ | ಕಾರು | ಬಸ್ | ಟ್ರಕ್ | ಎಲ್.ಸಿ.ವಿ. | ಎಂ.ಎ.ವಿ. | ದ್ವಿಚಕ್ರ |
| 1. | 1998 | 12.00 | 30.00 | 20.00 | 12.00 | 25.00 | 5.00 |
| 2. | 1999 | 13.20 | 33.00 | 22.00 | 13.20 | 27.20 | 5.50 |
| 3. | 2000 | 14.52 | 36.30 | 24.20 | 14.52 | 30.25 | 6.05 |
| 4. | 2001 | 15.97 | 39.93 | 26.62 | 15.97 | 33.28 | 6.66 |
| 5. | 2002 | 17.57 | 43.92 | 29.28 | 17.57 | 36.60 | 7.32 |
| 6. | 2003 | 19.33 | 48.32 | 32.21 | 19.33 | 40.26 | 8.05 |
| 7. | 2004 | 21.26 | 53.15 | 35.43 | 21.26 | 44.29 | 8.86 |
| 8. | 2005 | 23.38 | 58.46 | 38.97 | 23.38 | 48.72 | 9.74 |
| 9. | 2006 | 25.72 | 64.31 | 42.87 | 25.72 | 53.59 | 10.72 |
| 10. | 2007 | 28.30 | 70.74 | 47.16 | 28.30 | 58.95 | 11.79 |
| 11. | 2008 | 31.12 | 77.81 | 51.87 | 31.12 | 65.84 | 12.97 |
| 12. | 2009 | 34.24 | 85.59 | 57.06 | 34.24 | 71.33 | 14.27 |
| 13. | 2010 | 37.66 | 94.15 | 62.77 | 37.66 | 78.45 | 15.69 |
| ಲಿಂಕ್ ರಸ್ತೆ | | | | | | | |
| 1. | 2009 | 28.00 | 71.00 | 47.00 | 28.00 | 59.00 | 12.00 |
| 2. | 2010 | 31.00 | 78.00 | 52.00 | 31.00 | 65.00 | 13.00 |

ಯೋಜನಾ ತಾಂತ್ರಿಕ ವರದಿ ಹಾಗೂ ಟೋಲ್ ರಿಯಾಯಿತಿ ಒಪ್ಪಂದ 2000 ಇವೆರಡೂ ದಾಖಲಾತಿಗಳನ್ನು ತುಲನಾತ್ಮಕವಾಗಿ ವಿಶ್ಲೇಷಿಸಿದಾಗ ಗುರುತರ ವ್ಯತ್ಯಾಸಗಳು ಕೆಳಕಂಡಂತಿದೆ:

| ವಾಹನಗಳು | ಯೋಜನಾ ತಾಂತ್ರಿಕ ವರದಿ 1995 | | ಟೋಲ್ ರಿಯಾಯಿತಿ ಒಪ್ಪಂದ 2000 | | |
|---|---|---|---|---|---|
| | 1995 | 1998 | 1998 | | 2008 |
| | ದರ (ರೂ/ಕಿ.ಮೀ) | ದರ (ರೂ/ಕಿ.ಮೀ) | ದರ (ರೂ/ಕಿ.ಮೀ) | ಶೇ. ಬದಲಾವಣೆ | ದರ (ರೂ/ಕಿ.ಮೀ) |
| ಕಾರು | 0.54 | 0.72 | 1 | 39.13 | 2.59 |
| ಬಸ್ | 2.25 | 2.99 | 2.7 | -9.8 | 7 |
| ಟ್ರಕ್ಸ್ | 0.9 | 1.20 | 1.75 | 46.08 | 4.54 |
| ಎಲ್.ಸಿ.ವಿ. | 0.68 | 0.91 | 1.05 | 16.01 | 2.72 |
| ಎಂ.ಎ.ವಿ. | - | - | 1.91 | - | 4.95 |
| ದ್ವಿಚಕ್ರ | - | - | .4 | - | 1.04 |

ಈ ಕೋಷ್ಟಕವನ್ನು ಗಮನಿಸಿದಾಗ ಟೋಲ್ ದರಗಳ ಪರಿಷ್ಕರಣೆ ಮಾನದಂಡಗಳ ಅನುಗುಣವಾಗಿ ಇಲ್ಲದೇ ಇರುವುದು ಸ್ಪಷ್ಟವಾಗಿದೆ. ಟೋಲ್ ವಿಧಿಸುವಿಕೆ ಹಾಗೂ ಸ್ವೀಕೃತಿಗೆ ಸಂಬಂಧಿಸಿದಂತೆ ಸಮಿತಿಯು ಈ ಕೆಳಕಂಡಂತೆ ಶಿಫಾರಸ್ಸು ಮಾಡುತ್ತದೆ.

1. **ಟೋಲ್ ದರಗಳನ್ನು Vehicle Opperating Cost ನಲ್ಲಿ ಆಗುವ ಉಳಿತಾಯದ ಒಂದು ಅಂಶವನ್ನಾಗಿ ನಿರ್ಧರಿಸಬೇಕಾಗುವುದು. ಕಾಂಕ್ರೀಟ್ ರಸ್ತೆ ಹಾಗೂ ಡಾಂಬರಿಕೃತ ರಸ್ತೆಗೆ ಈ ಮಾನದಂಡಗಳು ವಿಭಿನ್ನವಾಗಿರುತ್ತವೆ. ಬಾರ್ ರಸ್ತೆ ನಿರ್ಮಾಣಕ್ಕೆ ಕಾಂಕ್ರೀಟ್ ರಸ್ತೆಗೆ ಹೋಲಿಸಿದಲ್ಲಿ ಬಂಡವಾಳ ಹೂಡಿಕೆ ಕಡಿಮೆಯಾಗುತ್ತದೆ. ಆದುದರಿಂದ ಇದೇ ಅನುಪಾತದಲ್ಲಿ ಟೋಲ್‌ದರಗಳನ್ನು ಇಳಿಮುಖಗೊಳಿಸುವುದು ಅವಶ್ಯಕವಾಗಿರುತ್ತದೆ. ಈ ಅಂಶವನ್ನು ಪರಿಗಣಿಸದೇ ಯೋಜನಾ ತಾಂತ್ರಿಕ ವರದಿಯಲ್ಲಿರುವ ಕಾಂಕ್ರೀಟ್ ರಸ್ತೆಯ ಮಾನದಂಡವನ್ನೇ ಅಳವಡಿಸಿ 8 ವರ್ಷಗಳಾಗೂ ಮೀರಿ ಹೆಚ್ಚುವರಿ ಟೋಲ್ ದರವನ್ನು ವಿಧಿಸಿ ಖಾಸಗಿ ಪಾಲುದಾರರು ಸ್ವೀಕರಿಸಿರುತ್ತಾರೆ. ಈ ಪ್ರಕ್ರಿಯೆ ಕ್ರಿಯಾ ಒಪ್ಪಂದ ಹಾಗೂ ಯೋಜನಾ ತಾಂತ್ರಿಕ ವರದಿಯ ಸ್ಪಷ್ಟ ಹಾಗೂ ನೇರ ಉಲ್ಲಂಘನೆಯಾಗಿರುತ್ತದೆ. ಆದುದರಿಂದ ಮೊದಲನೆಯ ಸ್ತರದಲ್ಲಿ ಟೋಲ್ ಸಂಗ್ರಹಣೆಯನ್ನು ಸ್ಥಗಿತಗೊಳಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.**
2. **2ನೇ ಸ್ತರದಲ್ಲಿ ಟೋಲ್ ದರಗಳನ್ನು ಸಮರ್ಪಕವಾಗಿ ಇಳಿಮುಖಗೊಳಿಸಲು ಸರ್ಕಾರವು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಇದರ ಆಧಾರದ ಮೇಲೆ ಖಾಸಗಿ ಪಾಲುದಾರರು ಪಡೆದಿರುವ ಅನುದ್ದೇಶಿತ ಲಾಭ ಅಥವಾ ಆದಾಯವನ್ನು ನಿರ್ಧರಿಸಿ ಟೋಲ್ ರಿಯಾಯಿತಿ ಅವಧಿಯನ್ನು ಪರಿಷ್ಕರಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಕ್ರಿಯಾ ಒಪ್ಪಂದದ ಅವಿಭಾಜ್ಯ ಅಂಗವಾಗಿರುವ ಯೋಜನಾ ತಾಂತ್ರಿಕ ವರದಿಯ ಮಾನದಂಡಗಳು ಹಾಗೂ ಸರ್ಕಾರದ ನಿರ್ದೇಶನಗಳನ್ನು ಉಲ್ಲಂಘಿಸಿರುವ ಆಧಾರದ ಮೇಲೆ ಖಾಸಗಿ ಪಾಲುದಾರರ ವಿರುದ್ಧ ಕ್ರಮ ಜರುಗಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.**

### ***IX. ಅನುಚ್ಛೇಧ - 3.8.3 -ಇಂಟರ್ ಛೇಂಜ್‌ಗಳು, ಟೋಲ್ ರಸ್ತೆಗಳ ಆಗಮನ ಮತ್ತು ನಿರ್ಗಮನ ಪ್ರದೇಶ, ನಗರ ಸಮುಚ್ಛಯ ಇತ್ಯಾದಿಗಳಲ್ಲಿ ಹಸಿರುವ ವಲಯದ ನಿರ್ವಹಣೆ ಬಗ್ಗೆ.***

ಈ ಅನುಚ್ಛೇಧದ ಅನುಗುಣವಾಗಿ ಕರ್ನಾಟಕ ರಾಜ್ಯ ಸರ್ಕಾರವು ಬಿ.ಎಂ.ಐ.ಸಿ. ಕಾರಿಡಾರ್ ಪಥದಲ್ಲಿ ಜೀವನದ ಗುಣಮಟ್ಟವನ್ನು ನಿರ್ವಹಿಸಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ವ್ಯಾಖ್ಯಾನಿಸಲಾಗಿದೆ. ತತ್ಸಂಬಂಧವಾಗಿ ಸರ್ಕಾರವು ಟೋಲ್ ರಸ್ತೆಯ (ಪೆರಿಫರಲ್ ರಸ್ತೆ ಮತ್ತು ಲಿಂಕ್ ರಸ್ತೆ ಹಾಗೂ

ಎಕ್ಸ್‌ಪ್ರೆಸ್ ವೇ) ಆಗಮನ ಮತ್ತು ನಿರ್ಗಮನ ಸ್ಥಳಗಳ ಗಡಿರೇಖೆ ವಲಯವನ್ನು ಕಡ್ಡಾಯವಾಗಿ ಹಸಿರು ವಲಯವನ್ನಾಗಿ ನಿರ್ವಹಿಸಲು ಕರ್ನಾಟಕ ರಾಜ್ಯ ಸರ್ಕಾರವು ಬದ್ಧವಾಗಿರುತ್ತದೆ. ಅಂದರೆ, ಪ್ರಸ್ತಾವಿತ ಪ್ರದೇಶಗಳ ಭೂಮಿಯನ್ನು "ಹಸಿರು ವಲಯ" ವನ್ನಾಗಿ ನಿರ್ವಹಿಸಬೇಕಾಗುವುದು. ಈ ಪ್ರದೇಶ ವ್ಯಾಪ್ತಿಯಲ್ಲಿ ವಲಯೀಕರಣದ ಬದಲಾವಣೆಗೆ ಯಾವುದೇ ಅವಕಾಶವಿರುವುದಿಲ್ಲ. ಸಮಗ್ರ ಯೋಜನೆಯಡಿಯಲ್ಲಿ ಟೋಲ್ ರಸ್ತೆ ಮತ್ತು ಟೌನ್‌ಶಿಪ್‌ಗಳ ಹೊರವಲಯದ ಗಡಿಗಳನ್ನು ಗುರುತಿಸಬೇಕಾಗುವುದು. ಈ ರೀತಿ ಗುರುತಿಸುವಾಗ ರ್‍ಯಾಂಪ್ ವೇಸ್ ಮತ್ತು ಇಂಟರ್ ಛೇಂಜ್‌ಗಳು ಒಳಗೊಂಡಂತೆ ಸ್ಥಳೀಯ ಯೋಜನಾ ಪ್ರಾಧಿಕಾರ, ಅಂದರೆ ಪ್ರಸ್ತಾವಿತ ಪ್ರಕರಣದಲ್ಲಿ ಬಿ.ಎಂ.ಐ.ಸಿ.ಎ.ಪಿ.ಎ. ಸಮಂಜಸ ಹಸಿರು ವಲಯದ ವಿಸ್ತೀರ್ಣವನ್ನು ಇತ್ಯರ್ಥಗೊಳಿಸಬೇಕಾಗುವುದು. ಈ ರೀತಿ ಗುರುತಿಸಲಾದ ಪ್ರದೇಶದಲ್ಲಿ ಈಗಾಗಲೇ ಅಭಿವೃದ್ಧಿ ಜಾರಿಗೊಳಿಸಿದ್ದಲ್ಲಿ, ಅಂತಹ ಪ್ರಕರಣದಲ್ಲಿ ಮರು ವಲಯೀಕರಣವನ್ನು ಪರಿಗಣಿಸುವ ಅವಶ್ಯಕತೆ ಇಲ್ಲ ಎಂದು ಪ್ರತಿಪಾದಿಸಲಾಗಿದೆ. ಈ ಷರತ್ತಿನ ಅನುಗುಣವಾಗಿ ಕರ್ನಾಟಕ ರಾಜ್ಯ ಸರ್ಕಾರವು ಟೋಲ್ ರಸ್ತೆ ಮತ್ತು ನಗರ ಸಮುಚ್ಛಯಗಳನ್ನು ಅನಿಯಂತ್ರಿತ ಬೆಳವಣಿಗೆಯಿಂದ ಸಂರಕ್ಷಿಸಲು ಕ್ರಮ ಕೈಗೊಳ್ಳಬೇಕಾಗುವುದು. ತತ್ಪರಿಣಾಮವಾಗಿ ಅನಿಯಂತ್ರಿತ ಬೆಳವಣಿಗೆಯಿಂದ Infrastructure Corridor ಯೋಜನೆಯ ಧ್ಯೇಯೋದ್ಧೇಶಕ್ಕೆ ಧಕ್ಕೆಯಾಗದಂತೆ ಹಸಿರು ವಲಯ ನಿರ್ವಹಿಸಲು ರಾಜ್ಯ ಸರ್ಕಾರವು ಬದ್ಧವಾಗಿರುತ್ತದೆ. ಈ ಷರತ್ತಿನ ಉಲ್ಲಂಘನೆಯಾದಲ್ಲಿ, ಖಾಸಗಿ ಪಾಲುದಾರರಿಗೆ ಹಕ್ಕುಬದ್ಧವಾಗಿ ಪರಿಹಾರವನ್ನು ನೀಡಬೇಕಾಗುವುದು. ಯಾವುದೇ ವ್ಯಕ್ತಿ ಹಸಿರು ವಲಯದ ವರ್ಗೀಕರಣವನ್ನು ಉಲ್ಲಂಘಿಸಿದಲ್ಲಿ ಅಥವಾ ಕೃಷಿ ಬಳಕೆಯನ್ನು ಹೊರತುಪಡಿಸಿ ಈ ವಲಯದ ಜಮೀನನ್ನು ಬಳಸಿದಲ್ಲಿ, ಅಂತಹವರ ವಿರುದ್ಧ ಕಾನೂನು ಕ್ರಮ ಜರುಗಿಸುವ ಅವಕಾಶವನ್ನು ಖಾಸಗಿ ಪಾಲುದಾರರಿಗೆ ನೀಡಲಾಗಿದೆ.

ಈ ಉಲ್ಲೇಖವನ್ನು ಗಮನಿಸಿದಾಗ ಕರ್ನಾಟಕ Town and Country Planning Act 1961ರ ಅಡಿಯಲ್ಲಿ ಸೃಜನೆಯಾದ ಬಿ.ಎಂ.ಐ.ಸಿ.ಎ.ಪಿ. ಪ್ರಾಧಿಕಾರ ಹಸಿರು ವಲಯದ ಗುರುತಿಸುವಿಕೆ ಹಾಗೂ ನಿರ್ವಹಣೆಯಲ್ಲಿ ಗುರುತರ ಪಾತ್ರ ವಹಿಸಬೇಕಾಗುವುದು. ಹಸಿರು ವಲಯದ ಪ್ರದೇಶವನ್ನು ಗುರುತಿಸಿ ಅನಿಯಂತ್ರಿತ ಬೆಳವಣಿಗೆಯನ್ನು ತಡೆಗಟ್ಟಲು ಬಿ.ಎಂ.ಐ.ಸಿ.ಎ.ಪಿ.ಎ ಈಗಾಗಲೇ ಓ.ಡಿ.ಪಿ. ಅಲೈನ್‌ಮೆಂಟ್ ಆಧಾರದ ಮೇಲೆ ಜಾರಿಗೊಳಿಸಲಾದ ಬಿ.ಎಂ.ಐ.ಸಿ. ಯೋಜನಾ ರಸ್ತೆಯ, ಅದರಲ್ಲೂ ನಿರ್ದಿಷ್ಟವಾಗಿ ಸೆಕ್ಷನ್ 'ಎ' ಕಾಮಗಾರಿಗಳ ಆಗಮನ ಹಾಗೂ ನಿರ್ಗಮನ ಸ್ಥಳಗಳು ಹಾಗೂ ಗಡಿರೇಖೆಗಳನ್ನು ಸರ್ವೇಕ್ಷಣೆ ಮುಖಾಂತರ ಇತ್ಯರ್ಥಗೊಳಿಸಿ ಈ ಷರತ್ತಿನ ಉಲ್ಲಂಘನೆಯನ್ನು ನಿಯಂತ್ರಿಸಬೇಕಾಗುವುದು. ಆದರೆ, ಈಗಾಗಲೇ ಈ ವರದಿಯಲ್ಲಿ ಪ್ರತಿಪಾದಿಸಿರುವಂತೆ ಕ್ರಿಯಾ ಒಪ್ಪಂದದ ಪಥಕ್ಕಾಗಲೀ ಅಥವಾ ಓ.ಡಿ.ಪಿ. ಆಧಾರದ ಮೇಲೆ ಪರಿಷ್ಕೃತ ರಸ್ತೆಯ ಪಥದ ವಿನ್ಯಾಸಕ್ಕಾಗಲೀ ಲೋಕೋಪಯೋಗಿ ಇಲಾಖೆ ತಾಂತ್ರಿಕ ಅಥವಾ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿರುವುದಿಲ್ಲ. ಆದರೆ, ಕರ್ನಾಟಕ ರಾಜ್ಯ ಸರ್ಕಾರವು 12.02.2004ರ ಸರ್ಕಾರಿ ಆದೇಶದ ಮುಖಾಂತರ ಬಿ.ಎಂ.ಐ.ಸಿ. ಸ್ಥಳೀಯ ಯೋಜನಾ ಪ್ರಾಧಿಕಾರದ ಓ.ಡಿ.ಪಿ. ನಕ್ಷೆಗೆ ಅನುಮೋದನೆಯನ್ನು ಜಾರಿಗೊಳಿಸಿದೆ. ಈ ಅನುಮೋದನೆಗೆ ಪೂರಕವಾಗಿ ನಡೆದ ಬಿ.ಎಂ.ಐ.ಸಿ.ಎ.ಪಿ.ಎ. ಸಂಸ್ಥೆಯ 6ನೇ ಸಭೆಯ (27.05.2003) ನಡಾವಳಿಗಳನ್ನು ಅವಲೋಕಿಸಿದಾಗ ಓ.ಡಿ.ಪಿ.ಗೆ ಸಂಬಂಧಿಸಿದಂತೆ ಸ್ವೀಕೃತವಾದ ನಿರ್ದಿಷ್ಟ ಆಕ್ಷೇಪಣೆಗಳನ್ನು ವ್ಯಕ್ತಪಡಿಸಿರುವುದು ಸ್ಪಷ್ಟವಾಗುತ್ತದೆ. ಕೆಲವು ಪ್ರಕರಣಗಳಲ್ಲಿ ಕೃಷಿಯೇತರ ಬಳಕೆಗೆ ಪರಿವರ್ತನೆ ಹೊಂದಿದ ಜಮೀನು ಹಾಗೂ ಕೈಗಾರಿಕಾ ಬಳಕೆಗೆ ಗುರುತಿಸಲಾದ ಜಮೀನು ಈ ಸ್ವರೂಪದ ಜಮೀನಿನ ವಿಸ್ತರಣೆಯನ್ನು ಓ.ಡಿ.ಪಿ. ವ್ಯಾಪ್ತಿಯಿಂದ ಹೊರತುಪಡಿಸಿ ಓ.ಡಿ.ಪಿ.ಯ ಅನುಮೋದನೆಯನ್ನು ಸರ್ಕಾರದ ಮಟ್ಟದಲ್ಲಿ ಸಂಸ್ಕರಿಸುವಂತೆ ನಿರ್ದೇಶಿಸಲಾಗಿದೆ. ಈ ಆದೇಶ

ಹಾಗೂ ಬಿ.ಎಂ.ಐ.ಸಿ.ಎ.ಪಿ.ಎ. ಪ್ರಾಧಿಕಾರದ ನಡಾವಳಿಗಳನ್ನು ಗಮನಿಸಿದಾಗ ಈ ಅನುಚ್ಛೇಧದಲ್ಲಿ ಉಲ್ಲೇಖಿಸಿರುವಂತೆ ಆಗಮನ ಹಾಗೂ ನಿರ್ಗಮನದ ಸ್ಥಳಗಳ ಹೊರವಲಯದ ಗಡಿಗಳನ್ನು ಗುರುತಿಸಿ ಮಾರ್ಗದ ಹಕ್ಕನ್ನು ಇತ್ಯರ್ಥಗೊಳಿಸಿ ಹಸಿರು ವಲಯವನ್ನು ಘೋಷಿಸಿರುವ ಬಗ್ಗೆ ಸಮಿತಿಗೆ ಯಾವುದೇ ಸ್ಪಷ್ಟ ಮಾಹಿತಿ ಇರುವುದಿಲ್ಲ. ಇದಲ್ಲದೆ, ಕಾನೂನು ಇಲಾಖೆಯ ದಿನಾಂಕ 23.04.1999ರ ಅಭಿಪ್ರಾಯದ ಅನುಗುಣವಾಗಿ ಕ್ರಿಯಾ ಒಪ್ಪಂದದ ಯಾವುದೇ ಬದಲಾವಣೆಯನ್ನು ಸಚಿವ ಸಂಪುಟದ ಅನುಮೋದನೆ ಇಲ್ಲದೆ ಜಾರಿಗೊಳಿಸುವುದು ಕಾನೂನು ಬಾಹಿರವಾಗಿರುತ್ತದೆ. ಮೂಲ ಕ್ರಿಯಾ ಒಪ್ಪಂದ ಸಚಿವ ಸಂಪುಟದ ನಿರ್ಧಿಷ್ಟ ಅನುಮೋದನೆಯೊಂದಿಗೆ ಜಾರಿಗೊಂಡಿದೆ. ಕ್ರಿಯಾ ಒಪ್ಪಂದದ ಸಾಧಕ ಬಾಧಕಗಳನ್ನು ಅಮೂಲಾಗ್ರವಾಗಿ ಬಿಶ್ಲೇಷಿಸಿ ಸಚಿವ ಸಂಪುಟ ಅನುಮೋದನೆ ನೀಡಿರುವುದರಿಂದ ತರ್ಕಬದ್ಧವಾಗಿ ಈ ಒಪ್ಪಂದಕ್ಕೆ ತದನಂತರ ಮಾಡುವ ಪರಿಷ್ಕರಣೆಗಳು, ಮಾರ್ಪಾಡುಗಳು ಹಾಗೂ ತಿದ್ದುಪಡಿಗಳೂ ಸಹ ಸಚಿವ ಸಂಪುಟದ ಅನುಮೋದನೆಯ ನಿರ್ಬಂಧನೆಗೆ ಒಳಪಟ್ಟಿರಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಲಾಗಿದೆ. ಆದಾಗ್ಯೂ, ಸರ್ವೋಚ್ಛ ನ್ಯಾಯಾಲಯ ಹಾಗೂ ಡಿವಿಷನ್ ಬೆಂಚ್ ನಿರ್ಧಿಷ್ಟ ಪ್ರಕರಣಗಳಲ್ಲಿ ಯೋಜನೆಯನ್ನು ಓ.ಡಿ.ಪಿ. ಅಲೈನ್‌ಮೆಂಟ್ ಅನುಗುಣವಾಗಿ ಅನುಷ್ಠಾನಗೊಳಿಸಬೇಕು ಎಂಬ ತೀರ್ಪನ್ನು ನೀಡಿರುವ ಹಿನ್ನೆಲೆಯಲ್ಲಿ, ಓ.ಡಿ.ಪಿ. ಅಲೈನ್‌ಮೆಂಟ್ ಅನಿವಾರ್ಯವಾಗಿ ಸಕ್ರಮೀಕರಣವಾಗಿರುತ್ತದೆ ಎಂದು ಸಮಿತಿ ಭಾವಿಸುತ್ತದೆ. ಆದಾಗ್ಯೂ, ಓ.ಡಿ.ಪಿ. ವಿನ್ಯಾಸವನ್ನು ಇತ್ಯರ್ಥಗೊಳಿಸುವಾಗ ಪ್ರಸ್ತಾವಿತ ಅನುಚ್ಛೇಧದ ಅನುಗುಣವಾಗಿ ಹಸಿರು ವಲಯಗಳನ್ನು ಗುರುತಿಸದೇ ಇರುವುದು ಅಕ್ಷಮ್ಯ ಅಪರಾಧವೆಂದು ಸಮಿತಿ ತೀರ್ಮಾನಿಸುತ್ತದೆ. ಈ ವೈಫಲ್ಯತೆಯಿಂದಾಗಿ 09.08.2002 ರಂದು ಅನುಷ್ಠಾನಗೊಳಿಸಲಾದ ತ್ರಿಪಕ್ಷೀಯ ಒಪ್ಪಂದದಲ್ಲಿ ನೈಸೆಲ್/ನೀಸ್ ಸಂಸ್ಥೆ ಇಂಟರ್ ಛೇಂಜ್ ವ್ಯಾಪ್ತಿಗಳಲ್ಲಿ ಬರುವ ಜಮೀನನ್ನು ಮಾರಾಟ ಮಾಡುವ ಸೌಲಭ್ಯವನ್ನು ದುರ್ಬಳಕೆ ಮಾಡಲಾಗಿದೆ. ಇದರಿಂದಾಗಿ ಹಸಿರು ವಲಯದ ನಿರ್ಧಿಷ್ಟ ಮಾನದಂಡಗಳನ್ನು ಉಲ್ಲಂಘಿಸಿ ನೈಸೆಲ್/ನೀಸೆಲ್ ಸಂಸ್ಥೆ ಇಂಟರ್ ಛೇಂಜ್ ವ್ಯಾಪ್ತಿಯ ಜಮೀನಿನ ಅಭಿವೃದ್ಧಿಗಾಗಿ ಜಂಟಿ ಅಭಿವೃದ್ಧಿ ಒಡಂಬಡಿಕೆಯನ್ನು ಜಾರಿಗೊಳಿಸಿದ್ದು, ವಿವರಗಳನ್ನು ಈ ವರದಿಯ ಸಮರ್ಪಕ ಅನುಚ್ಛೇಧದಡಿಯಲ್ಲಿ ನೀಡಲಾಗಿದೆ.

*ಬಹುತೇಕ ಪ್ರಕರಣಗಳಲ್ಲಿ ಖಾಸಗಿ ಪಾಲುದಾರರು ಅನುಷ್ಠಾನಗೊಳಿಸಿರುವ ಜಂಟಿ ಅಭಿವೃದ್ಧಿ ಒಪ್ಪಂದ, ಅಡಮಾನ ಹಾಗೂ ಮಾರಾಟದ ವ್ಯಾಪ್ತಿಯಲ್ಲಿರುವ ಜಮೀನುಗಳು ಮೂಲವಾಗಿ ಹಸಿರುವಲಯದಲ್ಲಿದೆ ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. ಏಕೆಂದರೆ ಈ ಜಮೀನುಗಳು ಕೆಲವು ಪ್ರಕರಣಗಳಲ್ಲಿ ಆಗಮನ ಮತ್ತು ನಿರ್ಗಮನ ಪ್ರದೇಶಗಳಲ್ಲಿದೆ. ಇದೊಂದು ಕ್ರಿಯಾ ಒಪ್ಪಂದದ ನಿರ್ಧಿಷ್ಟ ಹಾಗೂ ನೇರ ಉಲ್ಲಂಘನೆಯ ಪ್ರಕರಣವಾಗಿರುವುದರಿಂದ ಸರ್ಕಾರವು ಜಂಟಿ ಅಭಿವೃದ್ಧಿ ಒಡಂಬಡಿಕೆಗಳ ಅನುಷ್ಠಾನವನ್ನು ನ್ಯಾಯಾಲಯದ ಮುಖಾಂತರ ಸ್ಥಗಿತಗೊಳಿಸಲು ನ್ಯಾಯಾಲಯದ ಮುಖಾಂತರ ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಪ್ರಥಮ ಸ್ತರದಲ್ಲಿ ಖಾಸಗಿ ಪಾಲುದಾರರಿಗೆ ಅನುಚ್ಛೇಧ 3.8.3ರ ಉಲ್ಲಂಘನೆಯ ಆಧಾರದ ಮೇಲೆ ನೋಟೀಸನ್ನು ಜಾರಿಗೊಳಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಈ ಪ್ರಕರಣದಲ್ಲಿ ಸಮಗ್ರ ಯೋಜನಾ ನಿರ್ವಹಣೆಯ ಸಮನ್ವಯತೆಯನ್ನು ಹೊಂದಿರುವ ಲೋಕೋಪಯೋಗಿ ಇಲಾಖೆ ಹಾಗೂ ಯೋಜನಾ ವ್ಯಾಪ್ತಿ ಪ್ರದೇಶದ ಪ್ರಾಧಿಕಾರ ಈ ಎರಡೂ ಸಂಸ್ಥೆಗಳು ನಿರ್ಲ್ಯಕ್ಷ್ಯತಾ ಧೋರಣೆಯನ್ನು ತಳೆದು ಕ್ರಿಯಾ ಒಪ್ಪಂದದ ಉಲ್ಲಂಘನೆಯಲ್ಲಿ ಪರೋಕ್ಷವಾಗಿ ಭಾಗಿಯಾಗಿದ್ದಾರೆಂದು ಸಮಿತಿಯು ಅಭಿಪ್ರಾಯ ಪಡುತ್ತದೆ. ಯೋಜನಾ ಅನುಷ್ಠಾನದ ಸೆಕ್ಷನ್ 'ಎ' ಹೊರತುಪಡಿಸಿ ಸೆಕ್ಷನ್ 'ಬಿ' ಮತ್ತು 'ಸಿ' ಸ್ತರಗಳಲ್ಲಿ ಅನುಚ್ಛೇಧ 3.8.3 ರ ಅನುಗುಣವಾಗಿ ಹಸಿರು ವಲಯಗಳನ್ನು ಘೋಷಿಸಿ, ನಿಯಂತ್ರಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.*

ಪ್ರಸಕ್ತ ಸ್ಥಿತಿಯಲ್ಲಿ ಆಗಮನ ಹಾಗೂ ನಿರ್ಗಮನ ಸ್ಥಳಗಳನ್ನು ಟೋಲ್ ರಸ್ತೆ, ರ್‍ಯಾಂಪ್ ಪಥಗಳು ಹಾಗೂ ಇಂಟರ್ ಛೇಂಜ್‌ಗಳಲ್ಲಿ ಗುರುತಿಸಲು ಬಿ.ಎಂ.ಐ.ಸಿ.ಎ.ಪಿ.ಎ. ಯಾವುದೇ ಕ್ರಮ ಕೈಗೊಳ್ಳದಿರುವುದನ್ನು ಸಮಿತಿ ಗಮನಿಸಿದೆ. ಬಿ.ಎಂ.ಐ.ಸಿ.ಎ.ಪಿ.ಎ. ಪ್ರಾಧಿಕಾರವನ್ನು 13.07.1999 ರಂದು ನಿರ್ಧಿಷ್ಟವಾಗಿ ಯೋಜನಾ ಪ್ರದೇಶವನ್ನು ಕೆ.ಟಿ.ಸಿ.ಪಿ. ಆಕ್ಟ್ 1961 ಅಡಿಯಲ್ಲಿ ನಿರ್ವಹಿಸುವ ಉದ್ದೇಶದಿಂದ ಸೃಜಿಸಲಾಗಿದ್ದು, ಈ ಕರ್ತವ್ಯದಲ್ಲಿ ಪ್ರಾಧಿಕಾರ ಸೃಜನೆಯಾದ ದಿನಾಂಕದಿಂದ ಸಂಪೂರ್ಣವಾಗಿ ನಿರ್ಲಕ್ಷ್ಯತಾ ಧೋರಣೆಯನ್ನು ತಳೆದಿರುವುದು ಸಮಿತಿಗೆ ಸ್ಪಷ್ಟವಾಗಿದೆ. ವಾಸ್ತವಿಕವಾಗಿ ಲೋಕೋಪಯೋಗಿ ಇಲಾಖೆಯುವರು ನಗರಾಭಿವೃದ್ಧಿ ಇಲಾಖೆಗೆ ಯೋಜನಾ ಪ್ರದೇಶದ ವಲಯೀಕರಣಕ್ಕಾಗಿ ವಿವರಗಳನ್ನು ಸಲ್ಲಿಸಿರುವುದು ದಾಖಲಾತಿಗಳಿಂದ ಸಮಿತಿಗೆ ಸ್ಪಷ್ಟವಾಗಿದೆ. ಬಿ.ಎಂ.ಐ.ಸಿ.ಎ.ಪಿ.ಎ. ಓ.ಡಿ.ಪಿ. ಪಥಗಳನ್ನು ಇತ್ಯರ್ಥಗೊಳಿಸುವಾಗ ಅನುಚ್ಛೇಧ 3.8.3. ರ ಅಡಿಯಲ್ಲಿ ಉಲ್ಲೇಖಿಸಲಾದ ವಿವರಗಳನ್ನು ಅಳವಡಿಸುವಲ್ಲಿ ನಿರ್ಲಕ್ಷ್ಯತಾ ಧೋರಣೆಯನ್ನು ತಳೆದಿದೆ. ಇದಲ್ಲದೆ, ಬಿ.ಎಂ.ಐ.ಸಿ.ಎ.ಪಿ.ಎ. ಅನುಮೋದಿಸಿದ ಓ.ಡಿ.ಪಿ. ನಕ್ಷೆಯಲ್ಲಿ ಟೌನ್‌ಶಿಪ್-1ರ ಬಗ್ಗೆ ಯಾವುದೇ ಉಲ್ಲೇಖವಿರುವುದಿಲ್ಲ. ಈ ವೈಫಲ್ಯತೆಯಿಂದಾಗಿ 09.08.2002 ರಂದು ಜಾರಿಗೊಳಿಸಲಾದ ತ್ರಿಪಕ್ಷೀಯ ಒಪ್ಪಂದದಲ್ಲಿ ಅನಧಿಕೃತವಾಗಿ ಹಸಿರು ವಲಯವೂ ಸೇರ್ಪಡೆಗೊಂಡಂತೆ ಇಂಟರ್ ಛೇಂಜ್ ವ್ಯಾಪ್ತಿಯ ಜಮೀನಿನ ಮಾರಾಟದ ಸೌಲಭ್ಯವನ್ನು ಅನಧಿಕೃತವಾಗಿ ಖಾಸಗಿ ಪಾಲುದಾರರಿಗೆ ನೀಡಲಾಗಿದೆ. ಅನುಚ್ಛೇಧ 3.8.3. ರ ಅಡಿಯಲ್ಲಿ ಪ್ರತಿಪಾದಿಸಲಾದ ಹಸಿರು ವಲಯ ಮಾರಾಟದ ವ್ಯಾಪ್ತಿಯ ಜಮೀನನ್ನು ಒಳಗೊಂಡಿರುವ ಸಾಧ್ಯತೆ ಇದೆ ಎಂದು ಸಮಿತಿ ತೀರ್ಮಾನಿಸುತ್ತದೆ. ಬಿ.ಎಂ.ಐ.ಸಿ.ಎ.ಪಿ.ಎ. ಯ ಈ ವೈಫಲ್ಯತೆಯಿಂದಾಗಿ ಪ್ರಸ್ತಾವಿತ ಅನುಚ್ಛೇಧದ ಉಲ್ಲಂಘನೆಯಾಗಿದೆ ಹಾಗೂ ಖಾಸಗಿ ಪಾಲುದಾರರಿಗೆ ಅನಿಯಂತ್ರಿತವಾಗಿ ಅನಧಿಕೃತ ಸೌಲಭ್ಯವನ್ನು ವಿಸ್ತರಿಸಿದಂತಾಗಿದೆ. ಬಿ.ಎಂ.ಐ.ಸಿ.ಎ.ಪಿ.ಎ. ಸಂಸ್ಥೆಯು ಸಮಿತಿಗೆ ನೀಡಿರುವ ಸ್ಪಷ್ಟೀಕರಣದ ಅನುಗುಣವಾಗಿ ಈ ಅನುಚ್ಛೇಧದಡಿಯಲ್ಲಿ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. *ಈ ವೈಫಲ್ಯತೆಯು ಕ್ರಿಯಾ ಒಪ್ಪಂದದ ಅನುಚ್ಛೇಧ 3.8.3ರ ಸ್ಪಷ್ಟ ಹಾಗೂ ನೇರ ಉಲ್ಲಂಘನೆಯಾಗಿರುತ್ತದೆ. ಕ್ರಿಯಾ ಒಪ್ಪಂದದ ಈ ಅನುಚ್ಛೇಧದಡಿಯಲ್ಲಿ ಖಾಸಗಿ ಪಾಲುದಾರರು ಹಸಿರು ವಲಯದ ಪ್ರದೇಶದಲ್ಲಿ ಅನಧಿಕೃತ ವಹಿವಾಟುಗಳನ್ನು ಜಾರಿಗೊಳಿಸಿದಲ್ಲಿ, ಅದನ್ನು ಗುರುತಿಸಿ, ಕ್ರಿಯಾ ಒಪ್ಪಂದದ ಆಧಾರದ ಮೇಲೆ ಖಾಸಗಿ ಪಾಲುದಾರರ ವಿರುದ್ಧ ಕಾನೂನು ರೀತ್ಯಾ ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.*

***X. ಕ್ರಿಯಾ ಒಪ್ಪಂದದ ಅನುಚ್ಛೇಧ 4ರಡಿಯಲ್ಲಿ ಅಧಿಕಾರದತ್ತ ಸಮಿತಿಯ ಸೃಜನೆ ಕಾರ್ಯವ್ಯಾಪ್ತಿ, ಕರ್ತವ್ಯಗಳ ಬಗ್ಗೆ ಪ್ರತಿಪಾದಿಸಲಾಗಿದೆ. ಪ್ರಮುಖ ವಿವರಗಳು ಕೆಳಕಂಡಂತಿವೆ:-***

***ಅನುಚ್ಛೇದ-4.1.2***

***ಕ್ರಿಯಾ ಹಕ್ಕುಗಳು ಹಾಗೂ ಬಾಧ್ಯತೆಗಳನ್ನು ಅಧಿಕಾರದತ್ತ ಸಮಿತಿ ಮಾರ್ಪಡಿಸುವ ಅವಕಾಶವಿರುವುದಿಲ್ಲ, ಅವಶ್ಯಕ ಸಂದರ್ಭಗಳಲ್ಲಿ ಕ್ರಿಯಾ ಒಪ್ಪಂದದ ಭಾಗಿದಾರರು ಪ್ರತ್ಯೇಕ ಒಡಂಬಡಿಕೆಯ ಮೂಲಕ ಮಾತ್ರ ಬದಲಾವಣೆಗಳನ್ನು ಜಾರಿಗೊಳಿಸಬಹುದಾಗಿದೆ.***

*ಅನುಚ್ಛೇದ-4.1.2.1*

ಯೋಜನಾ ಅನುಷ್ಠಾನಕ್ಕೆ ಅವಶ್ಯಕವಿರುವ ಅನುಮೋದನೆಗಳನ್ನು ತ್ವರಿತವಾಗಿ ಸಂಸ್ಕರಿಸಲು ಅಧಿಕಾರದತ್ತ ಸಮಿತಿಯು ಏಕಗವಾಕ್ಷಿ ಸಮನ್ವಯತೆ ಕೇಂದ್ರವಾಗಿ ಕಾರ್ಯನಿರ್ವಹಿಸಬೇಕು.ಈ ಕಾರ್ಯವ್ಯಾಪ್ತಿ ಕೇಂದ್ರ ಸರ್ಕಾರದ ಅನುಮೋದನೆಗಳಿಗೂ ಅನ್ವಯಿಸುತ್ತದೆ.

*ಅನುಚ್ಛೇದ-4.1.2.2*

ಕರ್ನಾಟಕ ಸರ್ಕಾರ ಹಾಗೂ ಸರ್ಕಾರದ ಪ್ರತಿನಿಧಿತ್ವ ಹೊಂದಿರುವ ಸಂಸ್ಥೆಗಳು ಕ್ರಿಯಾ ಒಪ್ಪಂದವನ್ನು ಪಾಲಿಸುತ್ತಿರುವ ಬಗ್ಗೆ ಪರಿವೀಕ್ಷಿಸುವುದು.

*ಅನುಚ್ಛೇದ-4.1.2.3: ಯೋಜನಾ ಅನುಷ್ಠಾನಕ್ಕೆ ಮಾಹಿತಿ ಕೇಂದ್ರವಾಗಿ ಕಾರ್ಯನಿರ್ವಹಿಸುವುದು.*

ದಿನಾಂಕ 03.04.1997ರ ಕ್ರಿಯಾ ಒಪ್ಪಂದದ ಅನುಚ್ಛೇದ 4.1.2.3ರ ಅನುಗುಣವಾಗಿ ಅಧಿಕಾರದತ್ತ ಸಮಿತಿಯು ಖಾಸಗಿ ಪಾಲುದಾರರು ಹಾಗೂ ಸರ್ಕಾರದ ವತಿಯಿಂದ ಸಂಪೂರ್ಣ ಮಾಹಿತಿಯನ್ನು ನಿಯತಕಾಲಿಕವಾಗಿ ಸ್ವೀಕರಿಸಿ ನಿರ್ವಹಿಸಬೇಕಾಗಿರುವುದು. ಅಧಿಕಾರದತ್ತ ಸಮಿತಿ ಮಾಹಿತಿ ಕೇಂದ್ರವಾಗಿ ಪಾತ್ರವನ್ನು ನಿಭಾಯಿಸಬೇಕಾಗಿರುವುದರಿಂದ ಯೋಜನೆಗೆ ಸಂಬಂಧಿಸಿದ ವಿವರಗಳನ್ನು ಸಾರ್ವಜನಿಕರಿಗೆ ಮಾಹಿತಿಯ ರೂಪದಲ್ಲಿ ನೀಡುವ ಕರ್ತವ್ಯವನ್ನೂ ಸಹ ನಿರ್ವಹಿಸಬೇಕು ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. ಬಿ.ಎಂ.ಐ.ಸಿ. ಯೋಜನೆಯು ಒಂದು ಸಾರ್ವಜನಿಕ ಯೋಜನೆಯಾಗಿದ್ದು, ಸಾರ್ವಜನಿಕರ ಆಸ್ತಿಗಳನ್ನು ಯೋಜನೆಗಾಗಿ ಸ್ವಾಧೀನಪಡಿಸಿಕೊಂಡು ನೈಸಲ್/ನೀಸಲ್ ಸಂಸ್ಥೆಗೆ ಹಸ್ತಾಂತರಿಸಲಾಗಿದೆ. ಈ ವಿಧಾನಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಸಂಬಂಧಿತ ಭೂಮಾಲೀಕರಿಗೆ/ಯೋಜನಾ ಸಂತ್ರಸ್ತರಿಗೆ/ಆಸಕ್ತ ಸಾರ್ವಜನಿಕರಿಗೆ ಬಿತ್ತರಿಸುವಲ್ಲಿ ಅಧಿಕಾರದತ್ತ ಸಮಿತಿ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಏಕೆಂದರೆ, ಗುರುತರ ಮಾಹಿತಿಯ ವಿತರಣೆಯಲ್ಲಿ ಕ್ರಿಯಾ ಒಪ್ಪಂದದ "ಗೌಪ್ಯತೆ"ಯ ಷರತ್ತು ಪ್ರಮುಖ ಅಡಚಣೆಯಾಗಿದೆ. ಗೌಪ್ಯತೆ ಆಧಾರದ ಮೇಲೆ ಮಾಹಿತಿಯ ವಿತರಣೆಯನ್ನು ನೈಸಲ್/ನೀಸಲ್ ಸಂಸ್ಥೆ ನಿರ್ಬಂಧಿಸಿರುವುದು ಪತ್ರವ್ಯವಹಾರಗಳಿಂದ ಸಮಿತಿಗೆ ಮನದಟ್ಟಾಗಿದೆ. ಆದರೆ, ಖಾಸಗಿ ಪಾಲುದಾರರ ಈ ನಿಲುವು ಅನುಚ್ಛೇದ-4.1.2.3ರ ಸ್ಪಷ್ಟ ಹಾಗೂ ನೇರ ಉಲ್ಲಂಘನೆಗೆ ಕಾರಣವಾಗಿದೆ. ಆದುದರಿಂದ, ಸರ್ಕಾರವು ಯೋಜನಾ ಅನುಷ್ಠಾನಕ್ಕೆ ಸಂಬಂಧಿಸಿದ ಸಮಗ್ರ ಮಾಹಿತಿ ಸಾರ್ವಜನಿಕರಿಗೆ ಹಾಗೂ ಸಂತ್ರಸ್ತರಿಗೆ ಮುಕ್ತವಾಗಿ ಒದಗಿಸಲು ಕ್ರಮಕೈಗೊಳ್ಳಬೇಕೆಂದು ಸಮಿತಿ ಶಿಫಾರಸ್ಸು ಮಾಡುತ್ತದೆ.

*ಅನುಚ್ಛೇದ- 4.1.2.4*

ಕರ್ನಾಟಕ ಸರ್ಕಾರ ಹಾಗೂ ಕೇಂದ್ರ ಸರ್ಕಾರದೊಡನೆ ಪ್ರಾಥಮಿಕ ಮಧ್ಯಸ್ಥಿಕೆಯನ್ನು ನಿರ್ವಹಿಸುವುದು.

*ಅನುಚ್ಛೇದ-4.1.3*

ಖಾಸಗಿ ಪಾಲುದಾರರು ಅಧಿಕಾರದತ್ತ ಸಮಿತಿಯ ನಿರ್ಧಾರ ಹಾಗೂ ಘೋಷಣೆಗಳನ್ನು ಸರ್ಕಾರದ ನಿರ್ಧಾರ ಎಂದು ಪರಿಗಣಿಸತಕ್ಕದ್ದು ಹಾಗೂ ಸರ್ಕಾರವು ಈ ನಿರ್ಧಾರಗಳನ್ನು ತ್ವರಿತವಾಗಿ ಅನುಷ್ಠಾನಗೊಳಿಸತಕ್ಕದ್ದು.

*ಅನುಚ್ಛೇದ-4.1.4*

ಕರ್ನಾಟಕ ಸರ್ಕಾರಕ್ಕೆ ಅಧಿಕಾರದತ್ತ ಸಮಿತಿಯ ಮುಖಾಂತರ ಮೂಲಭೂತ ಸೌಕರ್ಯ ಯೋಜನೆಯ ಪ್ರಗತಿಯನ್ನು ಪರಿಶೀಲಿಸಲು ಅಧಿಕಾರವಿದೆ. ಪೂರ್ವಭಾವಿ ನೋಟೀಸು ಜಾರಿ ಮಾಡಿ ಪ್ರಗತಿ ಪರಿಶೀಲನೆಯನ್ನು ಕೈಗೊಳ್ಳಬಹುದಾಗಿದೆ. ಆದರೆ ಸರ್ಕಾರವು ಯೋಜನಾ ಅನುಷ್ಠಾನದ ಬಗ್ಗೆ ಸಲಹೆ/ಶಿಫಾರಸ್ಸು/ಅನುಮೋದನೆ/ಬದಲಾವಣೆಗಳನ್ನು ಸೂಚಿಸಲು ಅಧಿಕಾರವಿರುವುದಿಲ್ಲ.

<u>ಸಮಿತಿಯ ವಿಶ್ಲೇಷಣೆ ಹಾಗೂ ಶಿಫಾರಸ್ಸುಗಳು:-</u>

ಸರ್ವೋಚ್ಛ ನ್ಯಾಯಾಲಯದಲ್ಲಿ ದಿನಾಂಕ 21.09.1998ರಂದು ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನಲ್ಲಿ ಹಾಗೂ ಸರ್ವೋಚ್ಛ ನ್ಯಾಯಾಲಯದ ದಿನಾಂಕ 20.04.2006ರ ತೀರ್ಪಿನಲ್ಲಿ ಅಧಿಕಾರದತ್ತ ಸಮಿತಿಯ ವ್ಯಾಪ್ತಿ ಹಾಗೂ ಗುರುತರ ಜವಾಬ್ದಾರಿಯ ಬಗ್ಗೆ ಪ್ರತಿಪಾದಿಸಿದೆ. ಈ ತೀರ್ಪಿನಲ್ಲಿ ಅಧಿಕಾರದತ್ತ ಸಮಿತಿಯ ಸಹಮತಿ ಇಲ್ಲದೇ ರಾಜ್ಯ ಸರ್ಕಾರವು ನಿರ್ಧಾರಗಳನ್ನು ಜಾರಿಗೊಳಿಸಬಾರದೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಲಾಗಿದೆ. ಕ್ರಿಯಾ ಒಪ್ಪಂದದ ಅನುಚ್ಛೇದ-4ರ ಅಡಿಯಲ್ಲಿ ಅಧಿಕಾರದತ್ತ ಸಮಿತಿಯ ಕಾರ್ಯವ್ಯಾಪ್ತಿ, ಅಧಿಕಾರ ವ್ಯಾಪ್ತಿ, ಇತ್ಯಾದಿಗಳ ಬಗ್ಗೆ ಪ್ರತಿಪಾದಿಸಿದೆ. ಅನುಚ್ಛೇದ-4ರ ಅನುಗುಣವಾಗಿ ಈ ಸಮಿತಿಯಲ್ಲಿ ಮುಖ್ಯ ಕಾರ್ಯದರ್ಶಿಗಳು ಒಳಗೊಂಡಂತೆ ಯೋಜನಾ ಅನುಷ್ಠಾನದ ನಿರ್ವಹಣೆಯಲ್ಲಿ ಪಾಲ್ಗೊಳ್ಳುವ 11 ಇಲಾಖೆಗಳ ಕಾರ್ಯದರ್ಶಿಗಳು/ಮುಖ್ಯಸ್ಥರನ್ನು ಸೇರ್ಪಡೆ ಮಾಡಲಾಗಿದೆ. ಅಧಿಕಾರದತ್ತ ಸಮಿತಿಯ ಸದಸ್ಯರ ವಿವರಗಳನ್ನುಕ್ರಿಯಾ ಒಪ್ಪಂದದ 6ನೇ ಶೆಡ್ಯೂಲ್‌ನಲ್ಲಿ ವಿವರಿಸಲಾಗಿದೆ. ಪ್ರಮುಖವಾಗಿ ಅನುಚ್ಛೇದ-4.1.2.2ರಲ್ಲಿ ಸರ್ಕಾರ ಹಾಗೂ ಸರ್ಕಾರವನ್ನು ಪ್ರತಿನಿಧಿಸುವ ಸಂಸ್ಥೆಗಳು ಕ್ರಿಯಾ ಒಪ್ಪಂದವನ್ನು ಪಾಲಿಸುತ್ತಿರುವ ಬಗ್ಗೆ ದೃಢೀಕರಿಸಿಕೊಳ್ಳುವುದು ಪ್ರಮುಖ ಕಾರ್ಯವಾಗಿರುತ್ತದೆ. ನೈಸಲ್/ನೀಸಲ್ ಸಂಸ್ಥೆ ಅಧಿಕಾರದತ್ತ ಸಮಿತಿಯ ಘೋಷಣೆ ಹಾಗೂ ನಿರ್ಧಾರಗಳನ್ನು ಸರ್ಕಾರದ ಅಧಿಕೃತ ನಿರ್ಧಾರ ಎಂದು ಪರಿಗಣಿಸಬೇಕೆಂದು ನಮೂದಿಸಲಾಗಿದೆ. ಇದಲ್ಲದೆ ಅಧಿಕಾರದತ್ತ ಸಮಿತಿಗೆ ಯೋಜನಾ ಅನುಷ್ಠಾನದ ಭೌತಿಕ ಪ್ರಗತಿಯನ್ನು ಸ್ಥಳಪರಿವೀಕ್ಷಣೆ ಮುಖಾಂತರ ದೃಢೀಕರಿಸಿಕೊಳ್ಳುವ ಸೌಲಭ್ಯವನ್ನು ನೀಡಲಾಗಿದೆ. ಈ ಹಿನ್ನಲೆಯಲ್ಲಿ ಅಧಿಕಾರದತ್ತ ಸಮಿತಿಯ ಕಾರ್ಯವ್ಯಾಪ್ತಿಯ ಪರಿಣಾಮಕಾರಿ ನಿರ್ವಹಣೆಯ ಬಗ್ಗೆ ಸಮಿತಿಯು ಈ ಕೆಳಕಂಡಂತೆ ವಿಶ್ಲೇಷಣೆ ಹಾಗೂ ಶಿಫಾರಸ್ಸು ಮಾಡುತ್ತದೆ,ಅಧಿಕಾರದತ್ತ ಸಮಿತಿಯು ಪರಿಗಣಿಸದೇ ಇರುವ ಪ್ರಮುಖ ನಿರ್ಧಾರಗಳಿಗೆ ಶಿಫಾರಸ್ಸುಗಳು ಸೀಮಿತವಾಗಿದೆ.

1. ಕ್ರಿಯಾ ಒಪ್ಪಂದದ ಷೆಡ್ಯೂಲ್-2 ಅನುಗುಣವಾಗಿ ನೈಸಲ್/ನೀಸಲ್ ಸಂಸ್ಥೆಯು ಟೌನ್ ಅಂಡ್ ಕಂಟ್ರಿ ಪ್ಲಾನಿಂಗ್ ಅಧಿನಿಯಮ-1961ರ ಅಡಿಯಲ್ಲಿ ಯೋಜನಾ ಅನುಷ್ಠಾನದ ವಿನ್ಯಾಸಕ್ಕೆ ಹಾಗೂ ನಕ್ಷೆಗೆ ಅನುಮೋದನೆಯನ್ನು ಪಡೆಯಬೇಕಾಗಿದ್ದು ಈ ನಿರ್ಬಂಧನೆಯನ್ನು ಉಲ್ಲಂಘಿಸಲಾಗಿದೆ. 2002ರ ಥೀಮ್ ಪ್ಲಾನ್ ಅನುಮೋದನೆಯ ಆಧಾರದ ಮೇಲೆ ಯೋಜನಾ ಅನುಷ್ಠಾನ ಈವರೆವಿಗೂ ಮುಂದುವರೆದಿದೆ. ಕ್ರಿಯಾ ಒಪ್ಪಂದದ ಅನುಚ್ಛೇದ-6ರ ಅನುಗುಣವಾಗಿ ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿಗಳು ಈ ಸಮಿತಿಯ ಸದಸ್ಯರಾಗಿರುತ್ತಾರೆ. ಥೀಮ್ ಪ್ಲಾನ್ ಅನುಮೋದನೆಯನ್ನು ಲೋಕೋಪಯೋಗಿ ಇಲಾಖೆಯ ಮುಖ್ಯ ಇಂಜಿನೀಯರ್‌ರವರು ನೀಡಿರುತ್ತಾರೆ, ಈ ಬೆಳವಣಿಗೆಗಳನ್ನು ಗಮನಿಸಿದಾಗ ಯೋಜನಾ ಅನುಷ್ಠಾನದ ನಕ್ಷೆಯ ಮಂಜೂರಾತಿಯ ಬಗ್ಗೆ ಅಧಿಕಾರದತ್ತ ಸಮಿತಿ ಕ್ರಿಯಾ ಒಪ್ಪಂದವನ್ನು ನಿರ್ವಹಿಸುವಲ್ಲಿ ಸ್ಪಷ್ಟವಾಗಿ ವಿಫಲವಾಗಿದೆ. ಏಕೆಂದರೆ, ಕ್ರಿಯಾ ಒಪ್ಪಂದದ ಅನುಚ್ಛೇದ-4.1.2.2ರ ಅನುಗುಣವಾಗಿ ಸರ್ಕಾರದ ಇಲಾಖೆಗಳು ಒಪ್ಪಂದದ ಷರತ್ತುಗಳನ್ನು ಪಾಲಿಸುವುದನ್ನು ಸೂಕ್ಷ್ಮಕರವಾಗಿ ಅಧಿಕಾರದತ್ತ ಸಮಿತಿ ಪರಿವೀಕ್ಷಿಸಬೇಕಾಗುವುದು.

2. ರಾಜ್ಯ ಸಚಿವ ಸಂಪುಟವು ದಿನಾಂಕ 30.08.2007ರಂದು ತ್ರಿಪಕ್ಷೀಯ ಒಪ್ಪಂದದ ಕಂಡಿಕೆ 1.1.3 ಅನ್ನು ರದ್ದುಪಡಿಸಿ ಹಿಂಪಡೆಯುವ ಬಗ್ಗೆ ನಿರ್ಧಾರ ಕೈಗೊಂಡಿದೆ. ಈ ತೀರ್ಮಾನವನ್ನು ಘನತೆವೆತ್ತ ರಾಜ್ಯಪಾಲರು ಅಧಿಕಾರದತ್ತ ಸಮಿತಿಯ ಪರಿಗಣನೆಗೆ ಸಲ್ಲಿಸಲು ಸೂಚಿಸಿರುತ್ತಾರೆ. ಅಧಿಕಾರದತ್ತ ಸಮಿತಿಯು ಈ ಪ್ರಸ್ತಾವನೆಯ ಬಗ್ಗೆ ಯಾವುದೇ ನಿರ್ಧಾರ

ಕೈಗೊಳ್ಳದೆ 2008ರಲ್ಲಿ ಸೃಜನೆಯಾದ ನೂತನ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಹಸ್ತಾಂತರಿಸಿದೆ.ಈ ವೈಫಲ್ಯತೆಯಿಂದಾಗಿ ದಿನಾಂಕ 30.08.2007ರ ಸಚಿವ ಸಂಪುಟದ ನಿರ್ಧಾರ ಜಾರಿಯಾಗದೇ ನೆನಗುದಿಯಲ್ಲಿದೆ. ಈ ನಿರ್ಧಾರವನ್ನು ಅಂಗೀಕರಿಸದೇ ಇರುವ ಬಗ್ಗೆಯೂ ಸಹ ನಿರ್ದಿಷ್ಟ ಮಾಹಿತಿ ಇರುವುದಿಲ್ಲ. ಈ ವೈಫಲ್ಯತೆಯಿಂದಾಗಿ ನೈಸಲ್/ನೀಸಲ್ ಸಂಸ್ಥೆಯು ಅಧಿಕೃತವಾಗಿ ಇಂಟರ್‌ಛೇಂಜ್ ಮತ್ತು ಟೋಲ್ ರಸ್ತೆಯ ಆಸುಪಾಸಿನ ಜಮೀನಿನ ಅನಧಿಕೃತ ಮಾರಾಟ/ಪರಭಾರೆ/ಜಂಟಿ ಅಭಿವೃದ್ಧಿ ಒಪ್ಪಂದ, ಇತ್ಯಾದಿಗಳನ್ನು ಜಾರಿಗೊಳಿಸಲು ಅವಕಾಶ ಕಲ್ಪಿಸಿದಂತಾಗಿದೆ.

3. 5,850 ಎಕರೆಗಳ ಬದಲಾಗಿ 14,337 ಎಕರೆಗಳ ಖಾಸಗಿ ಜಮೀನಿಗೆ ಮುದ್ರಾಂಕ ಮತ್ತು ನೋಂದಣಿ ಶುಲ್ಕದಿಂದ 100% ವಿನಾಯಿತಿ ನೀಡಲಾಗಿದೆ. ಈ ವಿನಾಯಿತಿಯನ್ನು ನೀಡುವಾಗ ಪರೋಕ್ಷವಾಗಿ ಖಾಸಗಿ ಜಮೀನಿನ ಅವಶ್ಯಕತೆಯನ್ನು 1,100 ಎಕರೆಯಷ್ಟು ಹೆಚ್ಚಾಗಿ ಬಿಂಬಿಸಲಾಗಿದೆ. ಇದು ಕ್ರಿಯಾ ಒಪ್ಪಂದದ ಸ್ಪಷ್ಟ ಉಲ್ಲಂಘನೆಯಾಗಿದ್ದಾಗ್ಯೂ ಸಹ ಅಧಿಕಾರದತ್ತ ಸಮಿತಿ ಈ ಬಗ್ಗೆ ಪ್ರತಿಕ್ರಿಯಿಸಿರುವುದಿಲ್ಲ.

4. ಸರ್ಕಾರಿ ಜಮೀನಿಗೆ ಅನ್ವಯಿಸುವಂತೆ ಕ್ರಿಯಾ ಒಪ್ಪಂದದಲ್ಲಿ ನಮೂದಿಸಿರುವ 6,956 ಎಕರೆಗಳ ಬದಲಾಗಿ 5,688 ಎಕರೆಗಳನ್ನು ಹಸ್ತಾಂತರಿಸಲು ದಿನಾಂಕ 07.10.1999ರಂದು ಆದೇಶ ಜಾರಿಗೊಳಿಸಲಾಗಿರುತ್ತದೆ. ಈ ವ್ಯತಿರಿಕ್ತ ಆದೇಶದ ಬಗ್ಗೆ ಅಧಿಕಾರದತ್ತ ಸಮಿತಿ ಪ್ರತಿಕ್ರಿಯಿಸಿರುವುದಿಲ್ಲ.

5. ಓ.ಡಿ.ಪಿ. ಪಂಕ್ತೀಕರಣವನ್ನು ದಿನಾಂಕ 12.02.2004ರಿಂದ ಅನ್ವಯವಾಗುವಂತೆ ಜಾರಿಗೊಳಿಸಲಾಗಿದೆ. ಇದೇ ಸಂದರ್ಭದಲ್ಲಿ 1999ರಿಂದ 2006ರ ಅವಧಿಯಲ್ಲಿ ನೈಸಲ್ ಸಂಸ್ಥೆಗೆ ಬಿ.ಎಂ.ಐ.ಸಿ. ಪ್ರಾಧಿಕಾರದಲ್ಲಿ ಪ್ರತಿನಿಧಿತ್ವವನ್ನು ನೀಡಲಾಗಿದೆ. ಓ.ಡಿ.ಪಿ. ಪಂಕ್ತೀಕರಣ ಕ್ರಿಯಾ ಒಪ್ಪಂದದ ಅವಿಭಾಜ್ಯ ಅಂಗವಾದ ಯೋಜನಾ ತಾಂತ್ರಿಕ ವರದಿಯಲ್ಲಿರುವ ಪಂಕ್ತೀಕರಣಕ್ಕೆ ವಿಭಿನ್ನವಾಗಿದೆ. ಆದಾಗ್ಯೂ, ಈ ಪಂಕ್ತೀಕರಣದ ಅನುಮೋದನೆಯ ಸಮರ್ಪಕತೆಯ ಬಗ್ಗೆ ಅಧಿಕಾರದತ್ತ ಸಮಿತಿ ವಿಚಾರ ವಿನಿಮಯ ನಡೆಸಿರುವುದಿಲ್ಲ.

6. **ಸರ್ವೋಚ್ಛ ನ್ಯಾಯಾಲಯವು ದಿನಾಂಕ 03.11.2009ರಂದು ಬಿ.ಎಂ.ಐ.ಸಿ. ಯೋಜನೆಯನ್ನು ಓ.ಡಿ.ಪಿ. ಪಂಕ್ತೀಕರಣದ ಅನುಗುಣವಾಗಿ ಜಾರಿಗೊಳಿಸುವಂತೆ ನಿರ್ದೇಶಿಸಿದೆ.** ಈ ಹಿನ್ನೆಲೆಯಲ್ಲಿ ಅಧಿಕಾರದತ್ತ ಸಮಿತಿಯು ಕನಿಷ್ಟ ಪಕ್ಷ ಬದಲಾಯಿತ ಸನ್ನಿವೇಶದಲ್ಲಿ ಯೋಜನಾ ಅನುಷ್ಠಾನದ ಸ್ಟೇಜ್ – 1 ಗೆ ನಕ್ಷೆಯ ಅನುಮೋದನೆಯನ್ನು ಸಂಸ್ಕರಿಸಲು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.

7. ದಿನಾಂಕ 03.04.1997ರಂದು ಕ್ರಿಯಾ ಒಪ್ಪಂದವನ್ನು ಜಾರಿಗೊಳಿಸಿದ್ದು, 19 ವರ್ಷಗಳ ನಂತರವೂ ವೈಜ್ಞಾನಿಕವಾಗಿ ಗುರುತಿಸಲಾಗಿದೆಯೆಂದು ನೈಸಲ್ ಸಂಸ್ಥೆ ಪ್ರತಿಪಾದಿಸಿರುವ ಜಮೀನಿನ ವಿವರಗಳನ್ನು ಸರ್ಕಾರಕ್ಕೆ ಸಲ್ಲಿಸಿರುವುದಿಲ್ಲ. ಕ್ರಿಯಾ ಒಪ್ಪಂದ, ಭಾರತ್ ಫೋರ್ಜ್ ಲಿಮಿಟೆಡ್ ಸಲ್ಲಿಸಿರುವ ಜಮೀನಿನ ಅವಶ್ಯಕತೆ ವಿವರಗಳು ಹಾಗೂ ಓ.ಡಿ.ಪಿ. ಅನುಗುಣವಾಗಿ ಅನುಷ್ಠಾನ ಮಾಡಿರುವ ಸ್ಟೇಜ್-1 ಪಂಕ್ತೀಕರಣ ಸಂಪೂರ್ಣವಾಗಿ ವಿಭಿನ್ನವಾಗಿದೆ. ಆದಾಗ್ಯೂ, ಪರಿಷ್ಕೃತ ಪಂಕ್ತೀಕರಣದ ವಿವರಗಳನ್ನು ನೈಸೆಲ್/ನೀಸೆಲ್

ಸಂಸ್ಥೆಯಿಂದ ಪಡೆದು ಕನಿಷ್ಠ ಪಕ್ಷ ಘಟನೋತ್ತರವಾಗಿ ಬಿ.ಎಂ.ಐ.ಸಿ. ಪ್ರಾಧಿಕಾರದ ಮುಖಾಂತರ ಅನುಮೋದನೆಯನ್ನು ಸಂಸ್ಕರಿಸುವಲ್ಲಿ ಅಧಿಕಾರದತ್ತ ಸಮಿತಿ ನಿರ್ಲಕ್ಷ್ಯತಾ ಧೋರಣೆ ತಳೆದಿದೆ.

8. ಅಧಿಕಾರದತ್ತ ಸಮಿತಿಯಲ್ಲಿ ಕ್ರಿಯಾ ಒಪ್ಪಂದದ ಷೆಡ್ಯೂಲ್-6ರ ಅನುಗುಣವಾಗಿ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, ಇವರು ಸದಸ್ಯರಾಗಿರುತ್ತಾರೆ. ಅಧಿಕಾರದತ್ತ ಸಮಿತಿಯ ಸಭೆಯ ಸಂಕ್ಷಿಪ್ತ ನಡಾವಳಿಗಳನ್ನು ಅವಲೋಕಿಸಿದಾಗ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, ಇವರು ಯೋಜನಾ ಅನುಷ್ಠಾನದಲ್ಲಿ ಚಾರಿತ್ರಿಕವಾಗಿ ಆಗಿರುವ ಬದಲಾವಣೆಗಳು, ತಿದ್ದುಪಡಿಗಳು ಹಾಗೂ ಪರಿಷ್ಕರಣೆಗಳನ್ನು ಅಧಿಕಾರದತ್ತ ಸಮಿತಿಯ ಗಮನಕ್ಕೆ ತಂದಿರುವುದಿಲ್ಲ. ಅಧಿಕಾರದತ್ತ ಸಮಿತಿಯ ಮೊದಲನೇ ಸಭೆಯನ್ನು ದಿನಾಂಕ 27.09.1997ರಂದು ನಡೆಸಲಾಗಿದೆ. ದಿನಾಂಕ 03.04.1997ರಂದು ಅನುಷ್ಠಾನಗೊಳಿಸಿದ ಕ್ರಿಯಾ ಒಪ್ಪಂದದಲ್ಲಿ ಟೋಲ್ ರಸ್ತೆಗೆ ಅವಶ್ಯಕವಿರುವ ಜಮೀನಿನ ವಿಸ್ತೀರ್ಣವನ್ನು ಭಾರತ್ ಫೋರ್ಜ್ ಲಿಮಿಟೆಡ್, ನಮೂದಿಸಿದ 5,119 ಎಕರೆಗಳ ಬದಲಾಗಿ 6,999 ಎಕರೆಗಳೆಂದು ನಮೂದಿಸಲಾಗಿದೆ. ಈ ಬದಲಾವಣೆಯ ಬಗ್ಗೆ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆಯವರು ಅಧಿಕಾರದತ್ತ ಸಮಿತಿಗೆ ಮಾಹಿತಿ ಸಲ್ಲಿಸಿರುವುದಿಲ್ಲ. ಇದಲ್ಲದೆ, ಸೋಮಶೇಖರ ರೆಡ್ಡಿ ಅವರು ದಾಖಲಿಸಿದ ಸಾರ್ವಜನಿಕ ಹಿತಾಸಕ್ತಿ ಪ್ರಕರಣದ ಬಗ್ಗೆಯೂ ಸಹ ಸಮಿತಿಗೆ ಮಾಹಿತಿಯನ್ನು ಸಲ್ಲಿಸಿರುವುದಿಲ್ಲ. ನವೆಂಬರ್, 1997ರಲ್ಲಿ ರಸ್ತೆ ಪಂಕ್ತೀಕರಣದ ಬದಲಾವಣೆಯ ಬಗ್ಗೆ ಪ್ರಸ್ತಾವನೆಯನ್ನು ನೈಸಲ್ ಸಂಸ್ಥೆಯು ಸಲ್ಲಿಸಿದ್ದು ಈ ಬದಲಾವಣೆಯ ಬಗ್ಗೆ ಮಾಹಿತಿಯನ್ನು ಅಧಿಕಾರದತ್ತ ಸಮಿತಿಯ ಸಭೆಯಲ್ಲಿ ಪ್ರತಿಪಾದಿಸಿರುವುದಿಲ್ಲ. ಅಂದಿನ ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿಯವರು ಸ್ವಯಂಪ್ರೇರಿತರಾಗಿ ಬಿ.ಡಿ.ಎ.ಯೊಂದಿಗೆ ಸಭೆಯನ್ನು ನಡೆಸಿ ಪಂಕ್ತೀಕರಣವನ್ನು ಇತ್ಯರ್ಥಗೊಳಿಸಿರುತ್ತಾರೆ. ನೈಸಲ್ ಸಂಸ್ಥೆಗೆ ಬಿ.ಎಂ.ಐ.ಸಿ.ಎ.ಪಿ.ಎ. ಸದಸ್ಯತ್ವವನ್ನು ನೀಡುವ ಬಗ್ಗೆ ಅಧಿಕಾರದತ್ತ ಸಮಿತಿ ಚರ್ಚಿಸಿರುವುದಿಲ್ಲ. ಈ ವೈಫಲ್ಯತೆಗಳನ್ನು ಗಮನಿಸಿದಾಗ ಯೋಜನಾ ಅನುಷ್ಠಾನದ ಸಮಗ್ರ ಸಮನ್ವಯತೆಯ ಜವಾಬ್ದಾರಿಯನ್ನು ನಿರ್ವಹಿಸುತ್ತಿರುವ ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿಗಳು ಕ್ರಿಯಾ ಒಪ್ಪಂದದ ಪಾಲನೆಯಲ್ಲಿ ಆಗುತ್ತಿರುವ ಪ್ರಮುಖ ಲೋಪದೋಷಗಳನ್ನು ಅಧಿಕಾರದತ್ತ ಸಮಿತಿಯ ಗಮನಕ್ಕೆ ತರುವಲ್ಲಿ ನಿರ್ಲಕ್ಷ್ಯತಾ ಧೋರಣೆಯನ್ನು ತಳೆದಿರುತ್ತಾರೆ. ಇದರಿಂದಾಗಿ ಕ್ರಿಯಾ ಒಪ್ಪಂದದ ಅನುಚ್ಛೇದ-4.1.2.2ರ ಪಾಲನೆಯಲ್ಲಿ ಅಧಿಕಾರದತ್ತ ಸಮಿತಿ ವಿಫಲವಾಗಿದೆ. ಏಕೆಂದರೆ, ಅಧಿಕಾರದತ್ತ ಸಮಿತಿ ಸಮಗ್ರ ತೀರುವಳಿ ಹಾಗೂ ಅನುಮೋದನೆಯನ್ನು ಪಡೆಯಲು ಸೃಜಿಸಲಾಗಿರುವ ಏಕಗವಾಕ್ಷಿ ಕೇಂದ್ರ ಎಂದು ಕ್ರಿಯಾ ಒಪ್ಪಂದದಲ್ಲಿ ಉಲ್ಲೇಖಿಸಲಾಗಿದೆ.

9. ಅಧಿಕಾರದತ್ತ ಸಮಿತಿಯು ದಿನಾಂಕ 29.07.1997ರಿಂದ 05.08.2008ರ ಅವಧಿಯಲ್ಲಿ ಒಟ್ಟು 13 ಸಭೆಗಳನ್ನು ನಡೆಸಿದೆ. ದಿನಾಂಕ 05.08.2008ರ ನಂತರ ಅಧಿಕಾರದತ್ತ ಸಮಿತಿಯು ನವೆಂಬರ್, 2016ರವರೆಗೆ ಯಾವುದೇ ಸಭೆಯನ್ನು ನಡೆಸಿರುವುದಿಲ್ಲ.5ನೇ ಅಧಿಕಾರದತ್ತ ಸಮಿತಿಯಲ್ಲಿ ನೈಸಲ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರು ಫೈನಾನ್ಷಿಯಲ್ ಕ್ಲೋಷರ್ ದಾಖಲಾತಿಗಳನ್ನು ಐ.ಸಿ.ಐ.ಸಿ.ಐ. ಬ್ಯಾಂಕಿನ ಸಹಮತಿಯೊಂದಿಗೆ ಸಲ್ಲಿಸುವುದಾಗಿ ದೃಢೀಕರಿಸಿರುತ್ತಾರೆ. ಆದರೆ, ಈ ದಾಖಲಾತಿಗಳು ಈವರೆವಿಗೂ ಸ್ವೀಕೃತವಾಗಿರುವುದಿಲ್ಲ. ಮುಂದುವರಿದಂತೆ 6ನೇ ಅಧಿಕಾರದತ್ತ ಸಮಿತಿಯ ಸಭೆಯಲ್ಲಿ ನೈಸಲ್ ಸಂಸ್ಥೆಯು ಮೂರು ನಮೂನೆಗಳಲ್ಲಿ ಯೋಜನೆಯ

ಪ್ರಮುಖ ಬ್ಯಾಂಕರ್‌ಗಳೊಂದಿಗೆ ಫೈನಾನ್ಷಿಯಲ್ ಕ್ಲೋಷರ್ ಸಾಧಿಸಲು ದೃಢೀಕರಣವನ್ನು ಕೋರಿರುತ್ತಾರೆ. ಇವರು ಸಲ್ಲಿಸಿರುವ ನಮೂನೆಗಳಿಗೆ ಅಧಿಕಾರ ದತ್ತ ಸಮಿತಿ ದೃಢೀಕರಣವನ್ನು ನೀಡಲು ನಿರ್ಧರಿಸಿರುವುದು ಸಭೆಯ ನಡಾವಳಿಗಳಿಂದ ಸ್ಪಷ್ಟವಾಗಿದೆ. ತತ್ಸಂಬಂಧವಾಗಿ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ಇವರಿಗೆ ದೃಢೀಕರಣ ಪತ್ರವನ್ನು ನೀಡುವಂತೆ ನಿರ್ದೇಶಿಸಲಾಗಿದೆ. ಪತ್ರವನ್ನು ವಿತರಿಸುವ ಪೂರ್ವದಲ್ಲಿ ಕಾನೂನು ಇಲಾಖೆಯ ಅಭಿಪ್ರಾಯವನ್ನು ಕೋರುವಂತೆ ಸೂಚಿಸಲಾಗಿದೆ. ವಾಸ್ತವಿಕವಾಗಿ ಮೂರನೇ ನಮೂನೆಯಮುಖಾಂತರ ಸಾಲದ ಸ್ವರೂಪದಲ್ಲಿ ಬಂಡವಾಳ ಹೂಡಿಕೆ ಮಾಡುವ ಬ್ಯಾಂಕುಗಳು ನೀಸೆಲ್ ಸಂಸ್ಥೆಗೆ ನೀಡಿರುವ ಜಮೀನಿನ ಮೇಲೆ ಹಕ್ಕು ಸಾಧಿಸುವ ಬಗ್ಗೆ ಪ್ರತಿಪಾದಿಸಲಾಗಿದೆ. ಕ್ರಿಯಾ ಒಪ್ಪಂದದಲ್ಲಿ ಈ ಸಂಬಂಧವಾಗಿ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಆದರೆ ನಿರ್ಧಿಷ್ಟವಾಗಿ ಈ ಸ್ವರೂಪದ ಬಾಧ್ಯತೆಯನ್ನು ಸೃಷ್ಟಿಸಿರುವ ಬಗ್ಗೆ ಅಧಿಕಾರದತ್ತ ಸಮಿತಿ ಅವಶ್ಯಕ ಗಮನ ಹರಿಸಿಲ್ಲವೆಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. ಬ್ಯಾಲೆನ್ಸ್ ಶೀಟ್ ಅನುಗುಣವಾಗಿ ನೈಸೆಲ್ ಸಮೂಹ ಸಂಸ್ಥೆಗಳ ಕ್ರೋಢೀಕೃತ ಆರ್ಥಿಕ ಬಾಧ್ಯತೆ 1650 ಕೋಟಿ ರೂ.ಗಳಾಗಿದೆ. ಕ್ರಿಯಾ ಒಪ್ಪಂದದಲ್ಲಿಯೇ ಸೌಲಭ್ಯವನ್ನು ಕಲ್ಪಿಸುವಾಗ ಹೆಚ್ಚುವರಿಯಾಗಿ ದೃಢೀಕರಣವನ್ನು ನೀಡುವ ಔಚಿತ್ಯದ ಬಗ್ಗೆ ವಿಶ್ಲೇಷಿಸುವಲ್ಲಿ ಅಧಿಕಾರದತ್ತ ಸಮಿತಿ ವಿಫಲವಾಗಿದೆ. 6ನೇ ಅಧಿಕಾರದತ್ತ ಸಮಿತಿಯ ಸಭೆಯಲ್ಲಿ ನೈಸೆಲ್ ಸಂಸ್ಥೆಯು 1.7 ಕೋಟಿ ರೂ.ಗಳ ಸೇವಾ ಶುಲ್ಕವನ್ನು ಭರಿಸುವಂತೆ ನಿರ್ದೇಶಿಸಲಾಗಿದೆ. ಆದರೆ ಈ ನಿರ್ದೇಶನದ ಅನುಷ್ಠಾನದ ಬಗ್ಗೆ ಅಥವಾ ಕೆ.ಐ.ಎ.ಡಿ.ಬಿ. ಸಂಸ್ಥೆ ಈ ಪಾವತಿಯಿಂದ ವಿನಾಯಿತಿಯನ್ನು ನೀಡುವ ಬಗ್ಗೆ ಅಧಿಕಾರದತ್ತ ಸಮಿತಿ ಮುಂದಿನ ಸಭೆಗಳಲ್ಲಿ ಚರ್ಚಿಸಿರುವುದಿಲ್ಲ. ಇದೇ ಸಭೆಯಲ್ಲಿ ನೈಸೆಲ್ ಸಂಸ್ಥೆಯು ಬೆಂಗಳೂರು ಹಾಗೂ ಮೈಸೂರಿನ ಕಡೆಯಿಂದ ಸಮಾನಾಂತರವಾಗಿ ವೇಗದ ಹೆದ್ದಾರಿಯನ್ನು ನಿರ್ಮಿಸುವಂತೆ ಸೂಚಿಸಿದೆ. ಈ ನಿರ್ಧಾರವನ್ನು 28.05.2003 ರಂದು ಕೈಗೊಂಡಿದ್ದಾಗ್ಯೂ, ಈವರೆವಿಗೂ ಪಾಲನೆಯಾಗಿರುವುದಿಲ್ಲ.

ದಿನಾಂಕ 06.09.2003 ರಂದು ನಡೆಸಲಾದ 8ನೇ ಅಧಿಕಾರದತ್ತ ಸಮಿತಿಯ ಸಭೆಯಲ್ಲಿ ಖಾಸಗಿ ಪಾಲುದಾರರು ಸರ್ಕಾರಿ ಜಮೀನನ್ನು ಗುತ್ತಿಗೆ ಆಧಾರದ ಮೇಲೆ 1999/2000ದ ಮಾರ್ಗಸೂಚಿ ದರಗಳ ಮೇಲೆ ಖರೀದಿಸುವುದಾಗಿ ತಿಳಿಸಿದ್ದು, ಈ ಪ್ರಸ್ತಾವನೆಯನ್ನು ಯಥಾವತ್ತಾಗಿ ಜಾರಿಗೊಳಿಸಲಾಗಿದೆ. ದಿನಾಂಕ 24.07.2004 ರಂದು ನಡೆಸಲಾದ 10ನೇ ಅಧಿಕಾರದತ್ತ ಸಮಿತಿಯಲ್ಲಿ ಕೆ.ಐ.ಎ.ಡಿ.ಬಿ. ಸಂಸ್ಥೆಯು ಕ್ರಿಯಾ ಒಪ್ಪಂದದ ಅನುಗುಣವಾಗಿ ಲೋಕೋಪಯೋಗಿ ಇಲಾಖೆಯ ಸಹಯೋಗದೊಂದಿಗೆ ಜಮೀನನ್ನು ಸ್ವಾಧೀನಪಡಿಸಿಕೊಂಡಿರುವುದಾಗಿ ಸ್ಪಷ್ಟೀಕರಿಸಲಾಗಿದೆ. ಆದರೆ ಈಗಾಗಲೇ ಈ ವರದಿಯಲ್ಲಿ ಪ್ರತಿಪಾದಿಸಿರುವಂತೆ 1998 ಹಾಗೂ 1999 ರಲ್ಲಿ ಕೆ.ಐ.ಎ.ಡಿ.ಬಿ. ಸಂಸ್ಥೆ ಅನುಕ್ರಮವಾಗಿ ಖಾಸಗಿ ಹಾಗೂ ಸರ್ಕಾರಿ ಜಮೀನಿನ ಸ್ವಾಧೀನಕ್ಕೆ ಜಾರಿಗೊಳಿಸಿರುವ ಒಪ್ಪಂದ ಸ್ವಯಂ ಪ್ರೇರಿತವಾಗಿದ್ದು, ಕ್ರಿಯಾ ಒಪ್ಪಂದದ ಅನುಗುಣವಾಗಿರುವುದಿಲ್ಲ. ಈ ಅಂಶದ ಬಗ್ಗೆ ಕೆ.ಐ.ಎ.ಡಿ.ಬಿ. ಯ ಗಮನ ಸೆಳೆಯುವಲ್ಲಿ ಅಧಿಕಾರದತ್ತ ಸಮಿತಿ ವಿಫಲವಾಗಿದೆ.

ದಿನಾಂಕ 29.06.2006 ರಂದು ನಡೆಸಲಾದ 11ನೇ ಅಧಿಕಾರದತ್ತ ಸಮಿತಿಯ ಸಭೆಯಲ್ಲಿ ಯೋಜನೆಯ ಇತ್ತೀಚಿನ ಅಂದಾಜುಗಳನ್ನು ಸಲ್ಲಿಸುವಂತೆ ಖಾಸಗಿ ಪಾಲುದಾರರಿಗೆ ಸಮಿತಿ ಕೇಳಿದ್ದು, ವ್ಯವಸ್ಥಾಪಕ ನಿರ್ದೇಶಕರು, ನೈಸೆಲ್ ಇವರು ಈ ವಿವರಗಳನ್ನು ಸಲ್ಲಿಸುವ ಅವಶ್ಯಕತೆಯಿರುವುದಿಲ್ಲವೆಂದು ತಿಳಿಸಿರುತ್ತಾರೆ. ಮುಂದುವರೆದಂತೆ ಯೋಜನೆಯ ಆರ್ಥಿಕ

ಆಯಾಮಗಳು ಬ್ಯಾಂಕುಗಳಿಗೆ ಪರಭಾರೆ ಮಾಡಿರುವ ಜಮೀನಿನ ವಿವರಗಳು ಹಾಗೂ ಬಳಸಿರುವ ಸಾಲದ ಸೌಲಭ್ಯಗಳ ವಿವರಗಳನ್ನೂ ಸಹ ನೀಡಲು ನೈಸೆಲ್ ಸಂಸ್ಥೆ ನಿರಾಕರಿಸಿರುತ್ತದೆ. ಅಂದರೆ ನೈಸೆಲ್ ಸಂಸ್ಥೆಯು ದಿನಾಂಕ 13.02.2001 ರಂದು ನಡೆಸಲಾದ 5ನೇ ಅಧಿಕಾರದತ್ತ ಸಮಿತಿಯಲ್ಲಿ ಮಾಡಿದ ಆಶ್ವಾಸನೆಯನ್ನು ಉಲ್ಲಂಘಿಸಿದೆ. 11ನೇ ಅಧಿಕಾರದತ್ತ ಸಮಿತಿಯ ಸಭೆಯಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ಇವರು ಕಂದಾಯ ನಕ್ಷೆಗಳ ಮೇಲೆ ಅಳವಡಿಸಲಾಗಿರುವ ಡ್ರಾಯಿಂಗ್‌ಗಳನ್ನು ಒದಗಿಸುವಂತೆ ನೈಸೆಲ್ ಸಂಸ್ಥೆಗೆ ಕೋರಿರುತ್ತಾರೆ. ಇದರಿಂದ ಯೋಜನಾ ಅನುಷ್ಠಾನವನ್ನು ಕೇವಲ ಜಾಮಿಟ್ರಿಕ್ ಡ್ರಾಯಿಂಗ್‌ಗಳ ಮೇಲೆ ಆಗಿರುವುದು ಸ್ಪಷ್ಟವಾಗಿರುತ್ತದೆ. ಥೀಮ್ ಅಪ್ರೂವಲ್ ಆಧಾರದ ಮೇಲೆ ಯೋಜನೆಯನ್ನು ಜಾರಿಗೊಳಿಸಿರುವುದರಿಂದ, ಈವರೆವಿಗೂ ವಾಸ್ತವಿಕ ಜಮೀನಿನ ಬಳಕೆ ಹಾಗೂ ಅವಶ್ಯಕತೆಯ ಬಗ್ಗೆ ಲೋಕೋಪಯೋಗಿ ಇಲಾಖೆಗೆ ನೈಸೆಲ್ ಕಂಪನಿಯಿಂದ ಯಾವುದೇ ಮಾಹಿತಿ ಇರುವುದಿಲ್ಲ. ಅಧಿಕಾರದತ್ತ ಸಮಿತಿಯು ಯೋಜನೆಯ ನಕ್ಷೆಯ ಮಂಜೂರಾತಿಯಲ್ಲಿ ಆಗಿರುವ ವೈಫಲ್ಯತೆಗಳ ಬಗ್ಗೆ ಪರಿವೀಕ್ಷಿಸುವಲ್ಲಿ ನಿರ್ಲ್ಯಕ್ಷ್ಯತಾ ಧೋರಣೆಯನ್ನು ತಳೆದಿರುವುದರಿಂದ ಕ್ರಿಯಾ ಒಪ್ಪಂದವೂ ಉಲ್ಲಂಘನೆಯಾಗಿದೆ ಹಾಗೂ ಭೂಮಿಯ ನಿರ್ವಹಣೆ ಈವರೆವಿಗೂ ಸಂದಿಗ್ಧತೆಯಲ್ಲಿದೆ.

ದಿನಾಂಕ 07.05.2008ರಂದು ಅಧಿಕಾರದತ್ತ ಸಮಿತಿಯು 12ನೇ ಸಭೆಯನ್ನು ನಡೆಸಿದ್ದು ಪ್ರಥಮ ಬಾರಿಗೆ ಸರ್ವೋಚ್ಛ ನ್ಯಾಯಾಲಯದ ಮುಂದೆ ಬಾಕಿ ಇರುವ ಪ್ರಕರಣಗಳ ಬಗ್ಗೆ ಪ್ರತಿಪಾದಿಸಿದೆ. ಪ್ರಸ್ತಾವಿತ ಸಭೆಯಲ್ಲಿ ಅಡ್ವೋಕೇಟ್ ಜನರಲ್ ರವರು ಕಾರ್ಯದರ್ಶಿ, ಕಂದಾಯ ಇಲಾಖೆ ಅವರು ಜುಲೈ 2004ರಂದು ಯಾವುದೇ ಜಮೀನನ್ನು ಹಸ್ತಾಂತರಿಸಬಾರದು ಎಂದು ನೀಡಿರುವ ನಿರ್ದೇಶನ ನ್ಯಾಯಾಂಗ ನಿಂದನೆಯಾಗಬಹುದೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ.ಇದೇ ಸ್ತರದಲ್ಲಿ ದಿನಾಂಕ 20.04.2006ರಂದು ಸರ್ವೋಚ್ಛ ನ್ಯಾಯಾಲಯ ನೀಡಿರುವ ತೀರ್ಪಿಗೆ ವ್ಯತಿರಿಕ್ತವಾಗಿ ಯಾವುದೇ ಕ್ರಮ ಜರುಗಿಸಿದ್ದಲ್ಲಿ ಈ ಅಂಶವನ್ನು ತಕ್ಷಣ ಸರ್ವೋಚ್ಛ ನ್ಯಾಯಾಲಯದ ಗಮನಕ್ಕೆ ತರಬೇಕೆಂದು ಸ್ಪಷ್ಟೀಕರಿಸಿರುತ್ತಾರೆ.

ಮುಂದುವರೆದಂತೆ, ದಿನಾಂಕ 05.08.2008ರಂದು ಅಧಿಕಾರದತ್ತ ಸಮಿತಿಯ 13ನೇ ಸಭೆಯನ್ನು ನಡೆಸಲಾಗಿರುತ್ತದೆ. ಪ್ರಸ್ತಾವಿತ ಸಭೆಯಲ್ಲಿ ಬಹುತೇಕವಾಗಿ ಮಿಸ್ಸಿಂಗ್ ಲಿಂಕ್ಸ್ ಭೂಸ್ವಾಧೀನದ ಬಗ್ಗೆ ಚರ್ಚೆ ಮಾಡಲಾಗಿದೆ. ಹಾಗೂ ಅಪೂರ್ಣ ಕಾಮಗಾರಿಗಳನ್ನು ಸಂಪೂರ್ಣಗೊಳಿಸಲು ಭೂಸ್ವಾಧೀನ ಪ್ರಕ್ರಿಯೆಯನ್ನು ಜಾರಿಗೊಳಿಸುವಂತೆ ನಿರ್ದೇಶಿಸಲಾಗಿದೆ.

ಅಧಿಕಾರದತ್ತ ಸಮಿತಿಯ ನಡಾವಳಿಗಳನ್ನು ಅವಲೋಕಿಸಿದಾಗ ಯೋಜನಾ ಅನುಷ್ಠಾನದ ವಿವಿಧ ಸ್ತರಗಳಲ್ಲಿ ಜಾರಿಗೊಳಿಸಲಾಗಿರುವ ಒಪ್ಪಂದಗಳು, ಒಡಂಬಡಿಕೆಗಳು, ಆದೇಶಗಳು, ನ್ಯಾಯಾಂಗ ಪ್ರಕರಣಗಳು ಹಾಗೂ ಇತರೆ ಸಂದಿಗ್ಧ ಬೆಳವಣಿಗೆಗಳ ಬಗ್ಗೆ ಗುರುತರವಾಗಿ ವಿಚಾರ ವಿನಿಮಯ ನಡೆಸದೇ ಇರುವುದು ಸ್ಪಷ್ಟವಾಗಿರುತ್ತದೆ. ಇದರಿಂದಾಗಿ ಈ ಕೆಳಗೆ ನಮೂದಿಸಿರುವ ಪ್ರಮುಖ ಘಟನಾವಳಿಗಳು ಅಧಿಕಾರದತ್ತ ಸಮಿತಿಯ ಪರಿಶೀಲನೆಗೆ ಒಳಪಟ್ಟಿರುವುದಿಲ್ಲ:

F7(*)

1. ನವೆಂಬರ್ 1997 ರಲ್ಲಿ ಸೋಮಶೇಖರ ರೆಡ್ಡಿ ಅವರು ರಾಜ್ಯ ಸರ್ಕಾರದ ವಿರುದ್ಧ ದಾಖಲಿಸಿರುವ ಸಾರ್ವಜನಿಕ ಹಿತಾಸಕ್ತಿ ಪ್ರಕರಣ.
2. 14.05.1998 ರಂದು ಕೆ.ಐ.ಎ.ಡಿ.ಬಿ. ಸಂಸ್ಥೆಯು ಖಾಸಗಿ ಪಾಲುದಾರರು ನೀಡಬೇಕಾಗಿರುವ ಸೇವಾ ಶುಲ್ಕವನ್ನು ರಿಯಾಯಿತಿ ದರದಲ್ಲಿ ವಿಧಿಸಲು ಕೈಗೊಂಡಿರುವ ನಿರ್ಧಾರ.
3. 14.10.1998 ರಂದು ಕೆ.ಐ.ಎ.ಡಿ.ಬಿ. ಸ್ವಯಂ ಪ್ರೇರಿತವಾಗಿ ಖಾಸಗಿ ಜಮೀನಿನ ಸ್ವಾಧೀನಕ್ಕೆ ನೈಸೆಲ್ ಸಂಸ್ಥೆಯೊಡನೆ ಜಾರಿಗೊಳಿಸಿದ ಒಪ್ಪಂದ.
4. 06.10.1999 ರಂದು ಸರ್ಕಾರ ಹಾಗೂ ನೈಸೆಲ್ ಸಂಸ್ಥೆಯ ನಡುವೆ ಅನುಷ್ಠಾನಗೊಳಿಸಲಾದ ಪೂರಕ ಒಪ್ಪಂದದ ಸಮರ್ಪಕತೆ.
5. 23.11.1999 ರಂದು ಕೆ.ಐ.ಎ.ಡಿ.ಬಿ. ಹಾಗೂ ನೈಸೆಲ್ ಒಡನೆ ಸರ್ಕಾರಿ ಜಮೀನಿಗೆ ಸಂಬಂಧಿಸಿದಂತೆ ಜಾರಿಗೊಳಿಸಲಾದ ಒಪ್ಪಂದ.
6. 25.01.2000 ರಂದು ನಡೆಸಲಾದ ಪ್ರಥಮ ಬಿ.ಎಂ.ಐ.ಸಿ.ಎ.ಪಿ.ಎ. ಸಭೆಯಲ್ಲಿ ಕೈಗೊಂಡ ನಿರ್ಧಾರಗಳು.
7. 31.03.2000 ರಂದು ಸರ್ಕಾರ ಹಾಗೂ ಖಾಸಗಿ ಪಾಲುದಾರರ ನಡುವೆ ಜಾರಿಗೊಳಿಸಲಾದ ಪೂರಕ ಒಪ್ಪಂದದ ಸಮರ್ಪಕತೆ.
8. 18.02.2002 ರಂದು ಯೋಜನಾ ಅನುಷ್ಠಾನದ ಸ್ತರಗಳನ್ನು ಪ್ರತ್ಯೇಕವಾಗಿ ಪರಿಷ್ಕರಿಸಿ ಟೌನ್‌ಶಿಪ್-1 ಸೇರ್ಪಡೆ ಮಾಡಿ ನೀಸೆಲ್ ಸಂಸ್ಥೆಗೆ ಹಸ್ತಾಂತರಿಸಿರುವ ಒಪ್ಪಂದದ ಸಮರ್ಪಕತೆಯ ಬಗ್ಗೆ.
9. 09.08.2002 ರಂದು ಜಾರಿಗೊಳಿಸಲಾದ ತ್ರಿಪಕ್ಷೀಯ ಒಪ್ಪಂದ ಹಾಗೂ ಪ್ರಸ್ತಾವಿತ ಒಪ್ಪಂದದಲ್ಲಿ ಅನಧಿಕೃತವಾಗಿ ಟೋಲ್ ರಸ್ತೆ ಹಾಗೂ ಇಂಟರ್ ಛೇಂಜ್ ವ್ಯಾಪ್ತಿಯ ಜಮೀನನ್ನು ಪರಭಾರೆ ಮಾಡುವ ಅಧಿಕಾರವನ್ನು ನೀಡುವ ಮೂಲಕ ಕ್ರಿಯಾ ಒಪ್ಪಂದವನ್ನು ಉಪೇಕ್ಷಿಸಿರುವ ಬಗ್ಗೆ – ತ್ರಿಪಕ್ಷೀಯ ಒಪ್ಪಂದದ ಅನುಷ್ಠಾನದ ಸಾಧಕ ಬಾಧಕಗಳನ್ನು ವಿಶ್ಲೇಷಿಸದೇ ಇರುವುದು.
10. 12.02.2004 ರಂದು ಬಿ.ಎಂ.ಐ.ಸಿ.ಎ.ಪಿ.ಎ. ಅನುಮೋದಿಸಿರುವ ಓ.ಡಿ.ಪಿ. ಪಂಕ್ತೀಕರಣದ ಸಮರ್ಪಕತೆ ಹಾಗೂ ಸಮಂಜಸತೆಯ ಬಗ್ಗೆ.
11. ಈ ವರದಿಯೊಡನೆ ಲಗತ್ತಿಸಲಾಗಿರುವ ವಿವಿಧ ಸ್ತರದ ನ್ಯಾಯಾಲಯಗಳಲ್ಲಿ ಹೂಡಲಾದ ದಾವೆಗಳ ಸ್ಥಿತಿಗತಿಗಳು ಹಾಗೂ ತೀರ್ಪು, ಮಧ್ಯಂತರ ಆದೇಶ, ತಡೆಯಾಜ್ಞೆ ಇತ್ಯಾದಿಗಳನ್ನು ಕ್ರಿಯಾ ಒಪ್ಪಂದದ ಹಿನ್ನೆಲೆಯಲ್ಲಿ ಸಮಗ್ರವಾಗಿ ವಿಶ್ಲೇಷಿಸುವ ಬಗ್ಗೆ.

ಉಲ್ಲೇಖಿತ ಅಂಶಗಳ ಬಗ್ಗೆ ಅಧಿಕಾರದತ್ತ ಸಮಿತಿಯು ವ್ಯಾಪಕವಾಗಿ ಹಾಗೂ ವೃತ್ತಿಪರವಾಗಿ ಚರ್ಚೆ, ವಿಶ್ಲೇಷಣೆ ಕೈಗೊಂಡು ಕ್ರಿಯಾ ಒಪ್ಪಂದದ ಅನುಚ್ಛೇಧ 4.1.2.2 ರ ಪಾಲನೆಯಲ್ಲಿ ಆಗಿರುವ ವ್ಯತ್ಯಾಸಗಳು, ಮಾರ್ಪಾಡುಗಳು, ತಿದ್ದುಪಡಿಗಳು ಹಾಗೂ ಪರಿಷ್ಕರಣೆಗಳನ್ನು ಪರಿವೀಕ್ಷಿಸಲು ವಿಫಲವಾಗಿರುವುದು ಸಮಿತಿಯ ಸಂಕ್ಷಿಪ್ತ ನಡಾವಳಿಗಳಿಂದ ಸ್ಪಷ್ಟವಾಗಿದೆ. ಇದಲ್ಲದೆ, ಕ್ರಿಯಾ ಒಪ್ಪಂದದ ಅನುಚ್ಛೇಧ 4.1.4 ರ ಅನುಗುಣವಾಗಿ ಅಧಿಕಾರದತ್ತ ಸಮಿತಿಯು ಯೋಜನಾ ಪ್ರಗತಿಯ ಸ್ಥಳ ಪರಿವೀಕ್ಷಣೆ ಕೈಗೊಂಡಿರುವ ಬಗ್ಗೆ ನಿರ್ದಿಷ್ಟ ಮಾಹಿತಿ ಇರುವುದಿಲ್ಲ. ದಿನಾಂಕ 05.08.2008 ರ 13ನೇ ಸಭೆಯ ನಂತರ ಅಧಿಕಾರದತ್ತ ಸಮಿತಿಯು ಯಾವುದೇ ಸಭೆಯನ್ನು ನಡೆಸಿರುವುದಿಲ್ಲ. ಅಧಿಕಾರದತ್ತ ಸಮಿತಿಯ ಸಕ್ರಿಯ ಕಾರ್ಯನಿರ್ವಹಣೆಯಲ್ಲಿ ಸದಸ್ಯರುಗಳಾಗಿರುವ ಇಲಾಖಾ

ಕಾರ್ಯದರ್ಶಿಗಳ ಪಾತ್ರ ಗುರುತರವಾಗಿರುತ್ತದೆ. ಸಮಿತಿಯ ನಡಾವಳಿಗಳ ಅವಲೋಕನೆಯಿಂದ ಲೋಕೋಪಯೋಗಿ ಇಲಾಖೆ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಯೋಜನಾ ಅನುಷ್ಠಾನದಲ್ಲಿ ಆಗುತ್ತಿರುವ ಪ್ರಮುಖ ಬದಲಾವಣೆಗಳನ್ನು ಅಥವಾ ಬೆಳವಣಿಗೆಗಳನ್ನು ಅಧಿಕಾರದತ್ತ ಸಮಿತಿಯ ಗಮನಕ್ಕೆ ತರದೇ ಇರುವುದು ಸಮಿತಿಗೆ ಸ್ಪಷ್ಟವಾಗಿದೆ. ಅಧಿಕಾರದತ್ತ ಸಮಿತಿಯು ಕ್ರಿಯಾ ಒಪ್ಪಂದದ ಪಾಲನೆಯ, ಪರಿವೀಕ್ಷಣೆಯ ಗುರುತರ ಜವಾಬ್ದಾರಿಯನ್ನು ನಿರ್ವಹಿಸಬೇಕಾಗಿರುವುದರಿಂದ ಪೂರ್ವಭಾವಿಯಾಗಿ ಕ್ರಿಯಾ ಒಪ್ಪಂದದಲ್ಲಿ ಜಾರಿಗೊಳಿಸಲಾಗುತ್ತಿರುವ ಬದಲಾವಣೆಗಳು, ಪರಿಷ್ಕರಣೆಗಳು, ತಿದ್ದುಪಡಿಗಳು ಹಾಗೂ ಯೋಜನಾ ಅನುಷ್ಠಾನದ ಭೂ ಸ್ವಾಧೀನ, ಇತ್ಯಾದಿ ಪ್ರಕ್ರಿಯೆ ಬೆಳವಣಿಗೆಗಳನ್ನು ಅಧಿಕಾರದತ್ತ ಸಮಿತಿಯ ಸಭೆಯಲ್ಲಿ ಮಂಡಿಸುವುದು ಅತ್ಯವಶ್ಯಕವಾಗಿರುತ್ತದೆ. ಈ ವರದಿಯಲ್ಲಿ ಸವಿವರವಾಗಿ ಪ್ರತಿಪಾದಿಸಿರುವಂತೆ ಮೇಲೆ ಉಲ್ಲೇಖಿಸಿರುವ ಬಹುತೇಕ ಬೆಳವಣಿಗೆಗಳಿಗೆ ಸಂಬಂಧಿಸಿದಂತೆ ಅಧಿಕಾರದತ್ತ ಸಮಿತಿ ಸಂಬಂಧಿತ ಇಲಾಖಾ ಕಾರ್ಯದರ್ಶಿಗಳ ಉಪಸ್ಥಿತಿಯಲ್ಲೂ ಚರ್ಚೆ ಕೈಗೊಳ್ಳದೇ ಇರುವುದು ಸ್ಪಷ್ಟವಾಗಿದೆ. ಈ ಹಿನ್ನೆಲೆಯಲ್ಲಿ ಅಧಿಕಾರದತ್ತ ಸಮಿತಿಯ ಸದಸ್ಯತ್ವವನ್ನು ಹೊಂದಿರುವ ಇಲಾಖಾ ಕಾರ್ಯದರ್ಶಿಗಳು ಕ್ರಿಯಾ ಒಪ್ಪಂದದಲ್ಲಿ ನಮೂದಿಸಲಾಗಿರುವ ಕರ್ತವ್ಯ ಹಾಗೂ ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ನಿರ್ಲ್ಯಕ್ಷ್ಯತಾ ಧೋರಣೆಯನ್ನು ತಳೆದಿರುತ್ತಾರೆ.

***ಪ್ರಸ್ತಾವಿತ ವೈಫಲ್ಯತೆಗಳ ಹಿನ್ನೆಲೆಯಲ್ಲಿ ಮೇಲೆ ವಿವರಿಸಿರುವ ಬೆಳವಣಿಗೆಗಳ ಅವಧಿಯಲ್ಲಿ ಅಧಿಕಾರದತ್ತ ಸಮಿತಿಯ ಸದಸ್ಯರಾಗಿದ್ದ ಅಧಿಕಾರಿಗಳನ್ನು ಗುರುತಿಸಿ ಶಿಸ್ತಿನ ಕ್ರಮ/ಕಾನೂನು ಕ್ರಮ ಜರುಗಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.***

ಅಧಿಕಾರದತ್ತ ಸಮಿತಿಯ 2ನೇ ಸಭೆಯಲ್ಲಿ ಪ್ರಮುಖವಾಗಿ ಹಸಿರು ವಲಯದ ಬಗ್ಗೆ ಚರ್ಚೆ ಕೈಗೊಳ್ಳಲಾಗಿದೆ. ಈ ಸಂದರ್ಭದಲ್ಲಿ ನಗರ ಯೋಜನಾ ಪ್ರಾಧಿಕಾರದ ಪ್ರತಿನಿಧಿಗಳು ವೇಗದ ಹೆದ್ದಾರಿ ಹಸಿರು ವಲಯದ ಮುಖಾಂತರ ಹಾದು ಹೋಗುವುದರಲ್ಲಿ ಅಭ್ಯಂತರವಿರುವುದಿಲ್ಲವೆಂದು ತಿಳಿಸಿರುತ್ತಾರೆ. ಮುಂದುವರಿದಂತೆ ನಗರ ಸಮುಚ್ಛಯಗಳಲ್ಲಿ ಉದ್ಯಾನವನಗಳನ್ನು ಸ್ಥಾಪಿಸಲು ಅವಕಾಶವಿದ್ದು, ನಗರ ಸಮುಚ್ಛಯಗಳು ಹಸಿರು ವಲಯದ ವ್ಯಾಪ್ತಿಯಲ್ಲಿ ಅಭಿವೃದ್ಧಿಯಾಗುವುದು ನಿಯಮಬಾಹಿರ ಎಂದು ತಿಳಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ನಗರ ಸಮುಚ್ಛಯದ ಸ್ಥಳವನ್ನು ಈಗಾಗಲೇ ಗುರುತಿಸಲಾಗಿರುವ ಹಸಿರು ವಲಯದಿಂದ ದೂರಕ್ಕೆ ಸ್ಥಳಾಂತರಿಸುವ ಬಗ್ಗೆ ಪ್ರತಿಪಾದಿಸಲಾಗಿದೆ. ಇದಕ್ಕೆ ಪ್ರತಿಕ್ರಿಯಿಸಿರುವ ನೈಸೆಲ್ ಪ್ರತಿನಿಧಿ ಈ ಬಗ್ಗೆ ಈಗಾಗಲೇ ಅಧ್ಯಯನ ಕೈಗೊಂಡಿದ್ದು, ನಗರ ಸಮುಚ್ಛಯ-1 ಅನ್ನು ಸ್ಥಳಾಂತರಿಸಿರುವುದಾಗಿ ಸ್ಪಷ್ಟೀಕರಿಸಿರುತ್ತಾರೆ. ಇದಾದ ನಂತರ 2 ವರ್ಷಗಳ ಅವಧಿಯವರೆವಿಗೂ ಯಾವುದೇ ಪ್ರಮುಖ ಬೆಳವಣಿಗೆಗಳು ಇರುವುದಿಲ್ಲ. ನಗರ ಸಮುಚ್ಛಯ-1 ರ ಸ್ಥಳದ ಸ್ಥಳಾಂತರದ ಬಗ್ಗೆ ಅಧಿಕೃತ ಆದೇಶಗಳನ್ನು ಜಾರಿಗೊಳಿಸಿರುವ ಬಗ್ಗೆ ಸಮಿತಿಗೆ ಮಾಹಿತಿ ಇರುವುದಿಲ್ಲ. ದಿನಾಂಕ 15.01.1999 ರಂದು ಅಂದಿನ ಸರ್ಕಾರದ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ಇವರು ಕಂದಾಯ ಇಲಾಖೆಯ ಕಾರ್ಯದರ್ಶಿಯವರಿಗೆ ಬರೆದಿರುವ ಅರೆ ಸರ್ಕಾರಿ ಪತ್ರದಲ್ಲಿ ಈ ಕೆಳಕಂಡಂತೆ ತಿಳಿಸಿರುತ್ತಾರೆ:

"The alignment of the Peripheral Road and the location of Town Ship-1 was modified in pursuance to the directions given by the Chief Secretary in one of the review meetings so as to have the location of Township-1 outside the greenbelt area.

Consequently the township-1 was shifted so also the peripheral road. As a result requirement of government land underwent certain changes".

ಈ ಪತ್ರವನ್ನು ಅವಲೋಕಿಸಿದಾಗ ಪೆರಿಫರಲ್ ರಸ್ತೆ ನಗರ ಸಮುಚ್ಛಯಗಳ ಸ್ಥಳಾಂತರ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ರಿವ್ಯೂ ಸಭೆಯಲ್ಲಿ ನೀಡಿದ ಸೂಚನೆ ಅನುಸಾರ ಮಾಡಿರುವುದು ಸ್ಪಷ್ಟವಾಗಿದೆ. ವಾಸ್ತವಿಕವಾಗಿ ಕ್ರಿಯಾ ಒಪ್ಪಂದದ ಅನುಚ್ಛೇಧ 22.2 ರ ಅನುಗುಣವಾಗಿ ಕ್ರಿಯಾ ಒಪ್ಪಂದಕ್ಕೆ ತಿದ್ದುಪಡಿ, ಸೇರಿಸುವಿಕೆ ಹಾಗೂ ಬದಲಾವಣೆಗಳನ್ನು ಅಧಿಕೃತಗೊಳಿಸಿದ ಪ್ರಾಧಿಕಾರದವರು ಕರಾರು ಮಾಡುಕೊಳ್ಳುವ ಮೂಲಕ ಜಾರಿಗೊಳಿಸಬೇಕಾಗುತ್ತದೆ. ಈ ಪ್ರಕರಣದಲ್ಲಿ ಅನುಚ್ಛೇಧ 22.2 ರ ಅಡಿಯಲ್ಲಿ ಯಾವುದೇ ಕರಾರನ್ನು ಜಾರಿಗೊಳಿಸಿರುವುದಿಲ್ಲ. ಇದಲ್ಲದೆ. ದಿನಾಂಕ 23.04.1999 ರಂದು ಕಾನೂನು ಇಲಾಖೆಯು ನೀಡಿರುವ ಸ್ಪಷ್ಟೀಕರಣದ ಅನುಗುಣವಾಗಿ ಕ್ರಿಯಾ ಒಪ್ಪಂದಕ್ಕೆ ಮಾಡುವ ತಿದ್ದುಪಡಿಗಳು, ಪರಿಷ್ಕರಣೆಗಳು ಹಾಗೂ ಬದಲಾವಣೆಗಳನ್ನು ಸಚಿವ ಸಂಪುಟದ ಅನುಮೋದನೆ ಪಡೆದೇ ಜಾರಿಗೊಳಿಸಬೇಕಾಗುತ್ತದೆ. ನಗರ ಸಮುಚ್ಛಯ-1 ರ ಸ್ಥಳಾಂತರಕ್ಕೆ ಸಂಬಂಧಿಸಿದಂತೆ ಕ್ರಿಯಾ ಒಪ್ಪಂದ ಹಾಗೂ ಕಾನೂನು ಇಲಾಖೆಯ ಅಭಿಪ್ರಾಯವನ್ನು ಸಂಪೂರ್ಣವಾಗಿ ನಿರ್ಲ್ಯಕ್ಷಿಸಿರುವುದು ಸ್ಪಷ್ಟವಾಗಿದೆ. ಮೊದಲನೇ ಅಲೈನ್‌ಮೆಂಟಿನಂತೆ ನಗರ ಸಮುಚ್ಛಯ-1 ರ ಭಾಗವು ಬಿ.ಎಂ. ಕಾವಲ್, ಹೆಮ್ಮಿಗೆಪುರ, ಕೆಂಗೇರಿ-ಗೊಲ್ಲಹಳ್ಳಿ, ಕಂಬೀಪುರ, ಗುಡಿ ಮಾವು, ವರಾಹಸಂದ್ರ ಮುಂತಾದ ಗ್ರಾಮಗಳಲ್ಲಿದ್ದು, ಅದನ್ನು ಬಿಡದಿಯ ಬಳಿಯ ಗೋಣಿಪುರ, ತಿಪ್ಪೂರು, ಸೀಗೆಹಳ್ಳಿ, ದೊಡ್ಡಕುಂಟೇನಹಳ್ಳಿ, ಕೊಡಿಯಾರ ಕೆರೇನಹಳ್ಳಿ ಪ್ರದೇಶಕ್ಕೆ ಸ್ಥಳಾಂತರಿಸಲಾಗಿದೆ. ಇದಲ್ಲದೆ, ಪೆರಿಫರೆಲ್ ರಸ್ತೆ, ಯೋಜನಾ ತಾಂತ್ರಿಕ ವರದಿಯ ಕಂಡಿಕೆ 4.1.1.2 ರಂತೆ ಇರದೆ ದಿನಾಂಕ 12.02.2004 ರಂದು ಅನುಮೋದಿಸಿದ ಓ.ಡಿ.ಪಿ. ಅಲೈನ್‌ಮೆಂಟ್ ಅನುಗುಣವಾಗಿದೆ. ಈ ಹಿನ್ನೆಲೆಯಲ್ಲಿ ಪ್ರಥಮ ಸ್ತರದಲ್ಲಿ ಅಧಿಕಾರದತ್ತ ಸಮಿತಿಯು ತನ್ನ 2ನೇ ಸಭೆಯಲ್ಲಿ ಕೈಗೊಂಡ ತೀರ್ಮಾನವನ್ನು ಕ್ರಿಯಾ ಒಪ್ಪಂದದ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ಇದಲ್ಲದೆ, ಅಂದಿನ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ನೀಡಿರುವ ನಿರ್ದೇಶನ ಪ್ರಾಸಂಗಿಕವಾಗಿರುತ್ತದೆ. ಸರ್ಕಾರದ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ಇವರು ಈ ನಿರ್ದೇಶನದ ಅನುಷ್ಠಾನದ ಪೂರ್ವದಲ್ಲಿ ಕ್ರಿಯಾ ಒಪ್ಪಂದದ ಅನುಗುಣವಾಗಿ ಪಾಲಿಸಬೇಕಾದ ವಿಧಿ ವಿಧಾನಗಳನ್ನು ನಿರ್ಲ್ಯಕ್ಷಿಸಿರುವುದು ಸ್ಪಷ್ಟವಾಗಿದೆ. ನಿರ್ಧಿಷ್ಟವಾಗಿ ಇಂತಹ ಪ್ರಮುಖ ಬೆಳವಣಿಗೆಯನ್ನು ಸಚಿವ ಸಂಪುಟದ ಗಮನಕ್ಕೆ ತರದೇ ಅನುಷ್ಠಾನಗೊಳಿಸಿರುವುದು ಕರ್ತವ್ಯ ಲೋಪದ ನಿದರ್ಶನವಾಗಿರುತ್ತದೆ. *ಆದುದರಿಂದ ಸರ್ಕಾರವು ನಗರ ಸಮುಚ್ಛಯ-1 ರ ಅನಧಿಕೃತ ಸ್ಥಳಾಂತರಕ್ಕೆ ಕಾರಣಕರ್ತರಾದ ಆಗಿನ ಮುಖ್ಯ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿಗಳ ವಿರುದ್ಧ ಶಿಸ್ತಿನ/ಕಾನೂನು ಕ್ರಮ ಜರುಗಿಸಬೇಕೆಂದು ಸಮಿತಿಯು ಆಗ್ರಹಿಸುತ್ತದೆ.*

## XI. *ಅನುಚ್ಛೇಧ ಶಿ.1.1.1 – ಖಾಸಗಿ ಜಮೀನಿನ ಭೂಸ್ವಾಧೀನ ಹಾಗೂ ಪರಿಹಾರ ಪಾವತಿಯ ಮಾನದಂಡಗಳ ಬಗ್ಗೆ.*

*ಕ್ರಿಯಾ ಒಪ್ಪಂದದ ಈ ಅನುಚ್ಛೇಧದ ಅನುಗುಣವಾಗಿ ರಾಜ್ಯ ಸರ್ಕಾರವು ತನ್ನ ಕಾನೂನಾತ್ಮಕ ಹಕ್ಕನ್ನು ಚಲಾಯಿಸಿ ಭೂಮಿಯನ್ನು ಯೋಜನಾ ಅನುಷ್ಠಾನಕ್ಕೆ ಸ್ವಾಧೀನಪಡಿಸಿಕೊಳ್ಳುವಲ್ಲಿ ಸಕ್ರಿಯ ಪಾತ್ರ ವಹಿಸಬೇಕೆಂದು ಉಲ್ಲೇಖಿಸಲಾಗಿದೆ. ಈ ಹಿನ್ನೆಲೆಯಲ್ಲಿ ಸಮಿತಿಯು ಈ ಕೆಳಕಂಡಂತೆ ವಿಶ್ಲೇಷಣೆಯನ್ನು ಮಾಡುತ್ತದೆ:*

ಕ್ರಿಯಾ ಒಪ್ಪಂದದ ಷೆಡ್ಯೂಲ್-1ರ ಅನುಗುಣವಾಗಿ ಯೋಜನೆಗೆ ಅವಶ್ಯಕವಿರುವ 20,193 ಎಕರೆಗಳ ಪೈಕಿ, 6,999 ಎಕರೆಗಳನ್ನು ಟೋಲ್ ರಸ್ತೆಗೆ ನಿಗದಿಪಡಿಸಲಾಗಿದೆ. ಆದರೆ, ಯೋಜನಾ ತಾಂತ್ರಿಕ ವರದಿಯ ಅನುಗುಣವಾಗಿ ಟೋಲ್ ರಸ್ತೆಗೆ 5,119 ಎಕರೆಗಳ ಅವಶ್ಯಕತೆ ಇದೆ. ಈ ಅಂಶವನ್ನು ಗಮನಿಸಿದಾಗ ತಾಂತ್ರಿಕ ವರದಿಯ ನಿರೂಪಣೆಗಳನ್ನು ನಿರ್ಲಕ್ಷಿಸಿರುವುದು ಸ್ಪಷ್ಟವಾಗಿದೆ. ಇದಲ್ಲದೆ, ಸಮಿತಿಯು ಈ ವ್ಯತ್ಯಾಸದ ಬಗ್ಗೆ ಚರ್ಚೆ ಕೈಗೊಂಡಾಗ ನೈಸೆಲ್/ನೀಸೆಲ್ ಸಂಸ್ಥೆ ಟೋಲ್ ರಸ್ತೆಗೆ 5,119 ಎಕರೆಗಳ ಬದಲಾಗಿ 6,999 ಎಕರೆಗಳ ಅವಶ್ಯಕತೆಯನ್ನು ಕೋರಿ ಯಾವುದೇ ಮನವಿ ಅಥವಾ ಅರ್ಜಿಯನ್ನು ಸಲ್ಲಿಸದೇ ಇರುವುದು ವ್ಯಕ್ತವಾಗುತ್ತದೆ. ಹೀಗಿದ್ದರೂ ಸಹ ಸೋಮಶೇಖರರೆಡ್ಡಿ ಪ್ರಕರಣದ ತೀರ್ಪಿನ ಹಿನ್ನೆಲೆಯಲ್ಲಿ ಕ್ರಿಯಾ ಒಪ್ಪಂದದ ಷೆಡ್ಯೂಲ್-1ನಲ್ಲಿ ನಮೂದಿಸಲಾದ ವಿಸ್ತೀರ್ಣಕ್ಕೆ ಸಮಿತಿಯ ವಿಶ್ಲೇಷಣೆ ಸೀಮಿತವಾಗಿದೆ.

1. ಮೂಲಭೂತವಾಗಿ ರಾಜ್ಯ ಸರ್ಕಾರವು ಅನುಚ್ಛೇಧ – 5 ಹಾಗೂ ಶೆಡ್ಯೂಲ್ 1ಕ್ಕೆ ಅನುಗುಣವಾಗಿ 13,237 ಎಕರೆ ಖಾಸಗಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಕ್ರಮ ವಹಿಸಬೇಕಾಗುವುದು. 6,956 ಎಕರೆ ಸರ್ಕಾರಿ ಜಮೀನಿಗೆ ಯಾವುದೇ ಭೂ ಸ್ವಾಧೀನ ಪ್ರಕ್ರಿಯೆ ನಡೆಸಬೇಕಾಗಿರುವುದಿಲ್ಲ. ಬದಲಾಗಿ, ಕಾನೂನಾತ್ಮಕವಾಗಿ ಕಂದಾಯ ಅಥವಾ ಸಂಬಂಧಪಟ್ಟ ಇಲಾಖೆಗಳಿಂದ ನೈಸೆಲ್/ನೀಸೆಲ್ ಕಂಪನಿಗೆ ಚಾಲ್ತಿಯಲ್ಲಿರುವ ಮಾರುಕಟ್ಟೆ ಬೆಲೆಗೆ ಹಸ್ತಾಂತರ/ಮಾರಾಟ ಮಾಡಲು ಕ್ರಮ ಕೈಗೊಳ್ಳಬೇಕಾಗುತ್ತದೆ. ಆದರೆ, ವಾಸ್ತವಿಕವಾಗಿ 30 ವರ್ಷಗಳ ಗುತ್ತಿಗೆ ಅವಧಿಯ ನಂತರ ಹಿಂದಿರುಗಿಸಬೇಕಾದ ಸರ್ಕಾರಿ ಜಮೀನನ್ನು ಪ್ರತಿ ಎಕರೆಗೆ ವಾರ್ಷಿಕವಾಗಿ 10 ರೂ.ಗಳ ಲೀಸ್ ದರದ ಆಧಾರದ ಮೇಲೆ ನೀಡಲಾಗಿದೆ. ನೈಸಲ್/ನೀಸಲ್ ಸಂಸ್ಥೆ ಮಾರಾಟ ಮಾಡಬಹುದಾದ ಸರ್ಕಾರಿ ಜಮೀನಿಗೆ ಅನ್ವಯಿಸುವಂತೆ 1999-2000ದ ಮಾರ್ಗಸೂಚಿ ದರಗಳಲ್ಲಿ ಜಮೀನನ್ನು ಮಾರಾಟ ಮಾಡಲು ನಿರ್ಧರಿಸಲಾಗಿದೆ. ಈ ಎರಡೂ ಪ್ರಕರಣಗಳಲ್ಲಿ ಕ್ರಿಯಾ ಒಪ್ಪಂದದಲ್ಲಿ ಪ್ರತಿಪಾದಿಸಲಾದ ಮಾರುಕಟ್ಟೆ ದರಗಳ ಪಾವತಿಯಿಂದ ನೈಸೆಲ್/ನೀಸೆಲ್ ಸಂಸ್ಥೆಗೆ ಸಂಪೂರ್ಣ ವಿನಾಯಿತಿ ನೀಡಲಾಗಿದೆ.ಈ ಸೌಲಭ್ಯವನ್ನು ನೀಡುವಲ್ಲಿ ನೈಸೆಲ್/ನೀಸೆಲ್ ಸಂಸ್ಥೆ ಸಲ್ಲಿಸಿರುವ ಮನವಿಯನ್ನು ಯಥಾವತ್ತಾಗಿ ಪರಿಗಣಿಸಿರುವುದು ಸಮಿತಿ ಗಮನಕ್ಕೆ ಬಂದಿದೆ. ಇದರಿಂದಾಗಿ ಕ್ರಿಯಾ ಒಪ್ಪಂದಕ್ಕೆ ವ್ಯತಿರಿಕ್ತವಾಗಿ ನೈಸೆಲ್/ನೀಸೆಲ್ ಸಂಸ್ಥೆಗೆ ಅನುದ್ದೇಶಿತ ಲಾಭವನ್ನು ನೀಡಿರುವುದು ಸ್ಪಷ್ಟವಾಗಿದೆ. ಹೂಡಿಕೆಯ ಮೇಲಿನ ಪ್ರತಿಫಲವೂ ಸಹ ಈ ಸ್ವರೂಪದ ಉತ್ತೇಜನಕಾರಿ ಸೌಲಭ್ಯಗಳಿಂದ ದ್ವಿಗುಣಗೊಂಡಿರುತ್ತದೆ.

2. ಆದರೆ, ಅನುಚ್ಛೇಧ-4ರಲ್ಲಿ ಪ್ರತಿಪಾದಿಸಲಾದ ಅಧಿಕಾರದತ್ತ ಸಮಿತಿಗೆ ಯೋಜನೆಯು ಪ್ರಾರಂಭವಾದ 18 ವರ್ಷಗಳ ನಂತರವೂ ಸ್ವಾಧೀನಪಡಿಸಿಕೊಳ್ಳಬೇಕಾದ 13,237 ಎಕರೆ ಖಾಸಗಿ ಜಮೀನಿನ ಬಗ್ಗೆ ನಕ್ಷೆಗಳ ಆಧಾರದ ಮೇಲೆ ಅವಶ್ಯಕವಿರುವ ಜಮೀನಿನ ಮಾಹಿತಿ ಇಲ್ಲದೇ ಇರುವುದನ್ನು ಸಮಿತಿ ಗಮನಿಸಿದೆ.

3. ಇದೇ ರೀತಿ ಕ್ರಿಯಾ ಒಪ್ಪಂದದ ಅನುಗುಣವಾಗಿ ಸ್ವಾಧೀನಪಡಿಸಿಕೊಳ್ಳಬೇಕಾದ 6,956 ಎಕರೆ ಸರ್ಕಾರಿ ಜಮೀನಿಗೆ ಸಂಬಂಧಿಸಿದಂತೆ ಅಧಿಕಾರದತ್ತ ಸಮಿತಿಗೆ ನಿರ್ಧಿಷ್ಟ ಮಾಹಿತಿ ಇರುವುದಿಲ್ಲ.

4. ರಸ್ತೆಯ ಪಂಕ್ತೀಕರಣಕ್ಕೆ ಹೊಂದುವಂತಹ 5 ನಗರ ಸಮುಚ್ಚಯಗಳಿಗೆ ಅವಶ್ಯಕವಿರುವ ಜಮೀನನ್ನು ವೈಜ್ಞಾನಿಕವಾಗಿ ಗುರುತಿಸಲಾಗಿದ್ದು ವಿವರಗಳನ್ನು ವಿದೇಶಿ ಸಮುಚ್ಚಯದ

ಭಾಗವಾದ ಕಲ್ಯಾಣಿ ಸಮೂಹ ಸಂಸ್ಥೆಗಳು 1996ರಲ್ಲಿ ಸರ್ಕಾರಕ್ಕೆ ಸ್ವಾಧೀನಕ್ಕಾಗಿ ಸಲ್ಲಿಸಿರುವುದನ್ನು ಸಮಿತಿ ಗಮನಿಸಿದೆ. ಸೋಮಶೇಖರರೆಡ್ಡಿ ಪ್ರಕರಣದ ತೀರ್ಪಿನ ಅನುಗುಣವಾಗಿ ಯೋಜನಾ ಅನುಷ್ಠಾನಕ್ಕೆ ಅವಶ್ಯಕವಿರುವ ಸುಮಾರು 20,193 ಎಕರೆ ಜಮೀನನ್ನು ಸೆಟಲೈಟ್ ತಂತ್ರಜ್ಞಾನದ ಮುಖಾಂತರ ಇಸ್ರೋ ಸಂಸ್ಥೆ ಗುರುತಿಸಿದ್ದು ಈ ವಿಸ್ತೀರ್ಣವನ್ನು ದೃಢೀಕರಿಸಲಾಗಿದೆ.

5. ಈ ರೀತಿ ವೈಜ್ಞಾನಿಕವಾಗಿ ಗುರುತಿಸಲಾದ 20,193 ಎಕರೆ ವಿಸ್ತೀರ್ಣದ ಜಮೀನನ್ನು ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ಇವರು 03.06.1997 ರಂದು ವಿವಿಧ ಇಲಾಖೆಗೆ ಸುತ್ತೋಲೆಯ ಮುಖಾಂತರ ಪ್ರಕಟಿಸಿರುತ್ತಾರೆ. ತತ್ಸಂಬಂಧವಾಗಿ, 14.07.1997ರಂದು 03.06.1997ರ ಸುತ್ತೋಲೆಗೆ ಲಗತ್ತಿಸಿರುವ ಭೂಮಾಹಿತಿಯನ್ನು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಕೆ.ಐ.ಎ.ಡಿ.ಬಿ.ಗೆ ನೀಡಿ, ಈ ವಿವರಣೆಯ ಅನುಗುಣವಾಗಿ ಜಮೀನನ್ನು ವಶಪಡಿಸಿಕೊಳ್ಳುವಂತೆ ಆದೇಶ ಮಾಡಲಾಗಿದೆ.

25.11.1997ರಂದು ನೈಸಲ್ ಕಂಪನಿಯು 03.04.1997ರ ಕ್ರಿಯಾ ಒಪ್ಪಂದದಲ್ಲಿರುವ ಪಂಕ್ತೀಕರಣದ ಅನುಗುಣವಾಗಿ ಪೆರಿಫೆರಲ್ ರಸ್ತೆ ಹಾಗೂ ಲಿಂಕ್ ರಸ್ತೆ ಅನುಷ್ಠಾನಗೊಳಿಸುವುದು ಕಷ್ಟಸಾಧ್ಯವೆಂದು ಅಭಿಪ್ರಾಯ ವ್ಯಕ್ತಪಡಿಸಿದೆ. ಇದರ ಬದಲಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಪೆರಿಫೆರಲ್ ರಸ್ತೆಯ ಪಂಕ್ತೀಕರಣದ ಅನುಗುಣವಾಗಿ ರಸ್ತೆಯನ್ನು ನಿರ್ಮಿಸುವುದಾಗಿ ಲೋಕೋಪಯೋಗಿ ಕಾರ್ಯದರ್ಶಿಗಳಿಗೆ ಮನವಿ ಸಲ್ಲಿಸಿರುವುದು ಸಮಿತಿಗೆ ತಿಳಿದುಬಂದಿದೆ. ಈ ಪ್ರತಿಪಾದನೆ ಕ್ರಿಯಾ ಒಪ್ಪಂದದ ತಿದ್ದುಪಡಿಯಾಗುತ್ತದೆ. ಆದುದರಿಂದ ಈ ಬದಲಾವಣೆಗೆ ಸಚಿವ ಸಂಪುಟದ ಅನುಮೋದನೆಯ ಅವಶ್ಯಕತೆಯಿರುತ್ತದೆ. ಅಲ್ಲದೆ, ಈ ಗುರುತರ ಬದಲಾವಣೆಯನ್ನು ಪೂರಕ ಒಪ್ಪಂದದ ಮುಖಾಂತರ ಜಾರಿಗೊಳಿಸುವುದು ಅವಶ್ಯಕವಾಗಿರುತ್ತದೆ. ಆದರೆ ಈ ಎಲ್ಲಾ ಮಾನದಂಡಗಳನ್ನು ಉಲ್ಲಂಘಿಸಲಾಗಿದೆ. ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ಇವರು ಈ ಪ್ರಸ್ತಾವನೆಯನ್ನು ಅಧಿಕಾರದತ್ತ ಸಮಿತಿಯ ಗಮನಕ್ಕೆ ತಂದಿರುವುದಿಲ್ಲ. ವಿಧಿ ವಿಧಾನಗಳನ್ನು ಉಲ್ಲಂಘಿಸಿ ಬಿ.ಡಿ.ಎ. ಆಯಕ್ತರ ಕಛೇರಿಯಲ್ಲಿ ಸಭೆಗಳನ್ನು ನಡೆಸಿ, ನೈಸಲ್ ಮನವಿಯ ಅನುಗುಣವಾಗಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸಿ.ಡಿ.ಪಿ.ಯಲ್ಲಿ ತೋರಿಸಿರುವ ರಸ್ತೆ ಪಂಕ್ತೀಕರಣವನ್ನು ಬದಲಾಯಿಸಿ ಯೋಜನೆಯನ್ನು ಮಾಡಲು ಬಿ.ಡಿ.ಎ. ಆಯುಕ್ತರಿಂದ ನಿರಾಪೇಕ್ಷಣಾ ಪತ್ರವನ್ನು ಪಡೆಯಲಾಗಿದೆ. ವಾಸ್ತವಿಕವಾಗಿ ಈ ವಿಚಾರವಾಗಿ ಡಿಸೆಂಬರ್, 1997ರಲ್ಲಿ ಸಭೆ ನಡೆಸಲಾಗಿದ್ದು, 1997-98ನೇ ಸಾಲಿನಲ್ಲಿ ಬಿ.ಡಿ.ಎ. ನಿರಾಪೇಕ್ಷಣಾ ಪತ್ರವನ್ನು ನೀಡಿದೆ. ವಿಸ್ಮಯಕಾರಿಯಾಗಿ ನೂತನ ಪಂಕ್ತೀಕರಣಕ್ಕೆ ಬೇಕಾಗುವ ಜಮೀನಿನ ವಿವರಗಳನ್ನು ಮೊದಲನೇ ಅಧಿಕಾರದತ್ತ ಸಭೆಯ ನಂತರ ಹೊರಡಿಸಲಾದ ಸುತ್ತೋಲೆಗೆ ಲಗತ್ತಿಸಲಾಗಿದೆ. ನೈಸಲ್ ಸಂಸ್ಥೆ 25.11.1997ರಂದು ಪಂಕ್ತೀಕರಣವನ್ನು ಬದಲಾಯಿಸಲು ಅರ್ಜಿಯನ್ನು ಕೊಟ್ಟಿದೆ. ಆದ್ದಾಗ್ಯೂ, ಇದಕ್ಕೆ ಪೂರ್ವದಲ್ಲಿಯೇ 31.07.1997ರಲ್ಲಿ ಅಧಿಕಾರದತ್ತ ಸಮಿತಿ ಬದಲಾಯಿತ ಪಂಕ್ತೀಕರಣದ ವಿವರಗಳನ್ನು ಸುತ್ತೋಲೆಯ ಮುಖಾಂತರ ವಿತರಿಸಿದೆ. ಈ ಬೆಳವಣಿಗೆಗಳನ್ನು ಗಮನಿಸಿದಾಗ ಪೂರ್ವಯೋಜಿತ ರೀತಿಯಲ್ಲಿ ಅನಧಿಕೃತವಾಗಿ ಪಂಕ್ತೀಕರಣ ಬದಲಾವಣೆಯನ್ನು 31.07.1997ರಂದು ಜಾರಿಗೊಳಿಸಿದ್ದು, ತದನಂತರ 25.11.1997ರಂದು ಅಂದರೆ, 4 ತಿಂಗಳುಗಳ ವಿಳಂಬದ ನಂತರ ವಿಧಿ ವಿಧಾನಗಳನ್ನು ಪಾಲಿಸಲು ಕ್ರಮ ಕೈಗೊಳ್ಳಲಾಗಿದೆ. *ಈ ಹಿನ್ನೆಲೆಯಲ್ಲಿ 31.07.1997ರ ಸುತ್ತೋಲೆ ನಿಯಮಬಾಹಿರ ಹಾಗೂ ಅನಧಿಕೃತವಾಗಿರುತ್ತದೆ. ಈ ಸುತ್ತೋಲೆಯನ್ನು ಹೊರಡಿಸಲು ಕಾರಣಕರ್ತರಾದ ಅಧಿಕಾರಿಗಳನ್ನು*

*ಗುರುತಿಸಿ ಅವರ ವಿರುದ್ಧ ಕಠಿಣ ಶಿಸ್ತಿನ ಕ್ರಮ ಜರುಗಿಸಬೇಕೆಂದು ಸಮಿತಿಯು ಶಿಫಾರಸ್ಸನ್ನು ಮಾಡುತ್ತದೆ.*

6. ಕೆ.ಐ.ಎ.ಡಿ.ಬಿ. ಸಂಸ್ಥೆ 13,237 ಎಕರೆ ಜಮೀನಿನ ಬದಲಾಗಿ 20,946 ಎಕರೆ ವಿಸ್ತೀರ್ಣದ ಜಮೀನಿಗೆ ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸಿರುವುದನ್ನು ಸಮಿತಿಯು ಗಮನಿಸಿದೆ. ಆದಾಗ್ಯೂ, ಅಧಿಕಾರದತ್ತ ಸಮಿತಿಯು ಈ ಹೆಚ್ಚುವರಿ ಜಮೀನಿನ ಬಗ್ಗೆ ಪ್ರತಿಕ್ರಿಯಿಸಿರುವುದಿಲ್ಲ. ಅಂದರೆ, ಕೆ.ಐ.ಎ.ಡಿ.ಬಿ. ಸಂಸ್ಥೆಯು 7,709 ಎಕರೆ ವಿಸ್ತೀರ್ಣದ ಜಮೀನಿಗೆ ಹೆಚ್ಚುವರಿಯಾಗಿ ಅಧಿಸೂಚನೆಯನ್ನು ಹೊರಡಿಸಿದ್ದು, ಈ ಪ್ರವೃತ್ತಿಯನ್ನು ನಿಯಂತ್ರಿಸಲು ಅಧಿಕಾರದತ್ತ ಸಮಿತಿಯು ಕೈಗೊಂಡಿರುವ ಕ್ರಮದ ಬಗ್ಗೆ ಸಮಿತಿಗೆ ನಿರ್ದಿಷ್ಟ ಮಾಹಿತಿ ಇರುವುದಿಲ್ಲ.

7. ಅಂದರೆ, ಕ್ರಿಯಾ ಒಪ್ಪಂದದಲ್ಲಿರುವ ಖಾಸಗಿ ಜಮೀನಿನ ಮಿತಿಗಿಂತ ಹೆಚ್ಚುವರಿಯಾಗಿ 7,709 ಎಕರೆ ಜಮೀನನ್ನು ಕೆ.ಐ.ಎ.ಡಿ.ಬಿ. ಸಂಸ್ಥೆಯು ಪ್ರಾಥಮಿಕ ಅಧಿಸೂಚನೆಯ ವ್ಯಾಪ್ತಿಗೆ ಒಳಪಡಿಸಿರುವುದನ್ನು ಸಮಿತಿಯು ಗಮನಿಸಿದೆ. ತದನಂತರ 2004 ರಲ್ಲಿ ಈ ಪೈಕಿ 2728 ಎಕರೆ ಖಾಸಗಿ ಜಮೀನನ್ನು ಪ್ರಾಥಮಿಕ ಅಧಿಸೂಚನೆಯ ವ್ಯಾಪ್ತಿಯಿಂದ ಹೊರಪಡಿಸಲಾಗಿದೆ. ಈ ಬೆಳವಣಿಗೆಯ ನಂತರವೂ ಈ ದಿನಾಂಕದವರೆಗೂ ಪ್ರಾಥಮಿಕ ಅಧಿಸೂಚನೆಯ ವ್ಯಾಪ್ತಿಯಲ್ಲಿ ಹೆಚ್ಚುವರಿಯಾಗಿರುವ 4,981 ಎಕರೆ ವಿಸ್ತೀರ್ಣದ ಜಮೀನನ್ನು ಪ್ರಾಥಮಿಕ ಅಧಿಸೂಚನೆಯಿಂದ ಹೊರತುಪಡಿಸುವ ಬಗ್ಗೆ ಕೆ.ಐ.ಎ.ಡಿ.ಬಿ. ಕ್ರಮ ಕೈಗೊಂಡಿರುವುದಿಲ್ಲ.

8. ನೈಸೆಲ್ ಸಂಸ್ಥೆಯು ಅನುಚ್ಛೇಧ 5 ಮತ್ತು ಕ್ರಿಯಾ ಒಪ್ಪಂದದ ಶೆಡ್ಯೂಲ್‌ಗಳಲ್ಲಿ ನಮೂದಿಸಿರುವ ವಿಸ್ತೀರ್ಣವಾದ 13,237 ಎಕರೆಗಳ ಬದಲಾಗಿ 14,337 ಎಕರೆ ವಿಸ್ತೀರ್ಣದ ಖಾಸಗಿ ಜಮೀನಿನ ಸ್ವಾಧೀನಕ್ಕೆ ಪ್ರಸ್ತಾವನೆ ಸಲ್ಲಿಸಿರುವುದನ್ನು ಸಮಿತಿ ಗಮನಿಸಿದೆ.

9. ಈ ಪ್ರಸ್ತಾವನೆಯ ಆಧಾರದ ಮೇಲೆ ವಿಶೇಷ ಭೂಸ್ವಾಧೀನಾಧಿಕಾರಿ ಕೆ.ಐ.ಎ.ಡಿ.ಬಿ. ಇವರು 14,337 ಎಕರೆ ಜಮೀನಿನ ಸ್ವಾಧೀನಕ್ಕೆ ಸಹಮತಿಯನ್ನು ಸೂಚಿಸಿರುತ್ತಾರೆ. ಈ ಸಹಮತಿ ಕ್ರಿಯಾ ಒಪ್ಪಂದದ ಶೆಡ್ಯೂಲ್ 1 ಹಾಗೂ ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನ ಸ್ಪಷ್ಟ ಉಲ್ಲಂಘನೆ ಎಂದು ಸಮಿತಿ ತೀರ್ಮಾನಿಸುತ್ತದೆ. ನೋಂದಣಿ ಹಾಗೂ ಮುದ್ರಾಂಕ ಶುಲ್ಕದ ವಿನಾಯಿತಿಯನ್ನೂ ಸಹ ಸಂಪೂರ್ಣವಾಗಿ 14,337 ಎಕರೆಗೆ ವಿಸ್ತರಿಸಲಾಗಿದ್ದು, ಈ ಪ್ರಕರಣದಲ್ಲಿ ಆಗಿರುವ ವೈಫಲ್ಯತೆಯ ಬಗ್ಗೆ ವರದಿಯ ಅನುಚ್ಛೇಧ 12ರ ಅಡಿಯಲ್ಲಿ ಚರ್ಚಿಸಲಾಗಿದೆ.

10. ಸಮಿತಿಯು ಖಾಸಗಿ ಜಮೀನಿನ ಭೂಸ್ವಾಧೀನ ಪ್ರಸ್ತಾವನೆಗಳು ವಿಭಿನ್ನ ಸ್ವರೂಪದಲ್ಲಿ ವಿವಿಧ ಹಂತಗಳಲ್ಲಿ ಸ್ವೀಕರಿಸಿರುವುದನ್ನು ಗಮನಿಸಿದೆ. ಗ್ರಾಮ ಹಾಗೂ ಸರ್ವೆ ನಂಬರುಗಳನ್ನು ತುಲನಾತ್ಮಕವಾಗಿ ವಿಶ್ಲೇಷಿಸಿದಾಗ ನೈಸೆಲ್ ಸಂಸ್ಥೆ ಕೋರಿರುವ 14,337 ಎಕರೆಗಳ ಅನುಗುಣವಾಗಿ ಸ್ವಾಧೀನ ಪ್ರಕ್ರಿಯೆ ಜಾರಿಗೊಳಿಸಿರುವುದು ಸ್ಪಷ್ಟವಾಗುತ್ತದೆ. ಅಂದರೆ, ಸ್ವಾಧೀನಪಡಿಸಿಕೊಳ್ಳಲಾದ ಖಾಸಗಿ ಜಮೀನು ಹಲವಾರು ಪ್ರಕರಣಗಳಲ್ಲಿ ಹೆಚ್ಚುವರಿಯಾಗಿ ಪರಿಗಣಿಸಲಾದ 1,100 ಎಕರೆ (13,237 - 14337) ವ್ಯಾಪ್ತಿಗೆ ಒಳಪಟ್ಟಿರುವುದನ್ನು ಸಮಿತಿ ಗಮನಿಸಿದೆ.

11. ಅನುಚ್ಛೇಧ 5 ರ ಅಡಿಯಲ್ಲಿ ಸ್ವಾಧೀನಪಡಿಸಿಕೊಳ್ಳಲಾದ ಖಾಸಗಿ ಜಮೀನಿನ ಪೈಕಿ ಹೆಚ್ಚುವರಿಯಾಗಿ ನಮೂದಿಸಲಾದ 1100 ಎಕರೆ ವಿಸ್ತೀರ್ಣದ ಹಲವಾರು ಸರ್ವೆ ನಂಬರುಗಳು ಒಳಪಟ್ಟಿವೆ.

12. ಸರ್ಕಾರಿ ಜಮೀನಿಗೆ ಸಂಬಂಧಿಸಿದಂತೆ ಕ್ರಿಯಾ ಒಪ್ಪಂದದಲ್ಲಿ ಉಲ್ಲೇಖಿಸಲಾದ 6956 ಎಕರೆಗಳನ್ನು 5688 ಎಕರೆಗಳಿಗೆ ಕಡಿತಗೊಳಿಸಿರುವುದನ್ನು ಸಮಿತಿ ಗಮನಿಸಿದೆ. ಇದರಿಂದಾಗಿ ಸರ್ಕಾರಿ ಜಮೀನಿನ ಲಭ್ಯತೆಯನ್ನು 1268 ಎಕರೆಗಳಷ್ಟು ಕಡಿತಗೊಳಿಸಲಾಗಿದೆ. ಈ ಇಳಿಮುಖಗೊಳಿಸಲಾದ ಅಂಕಿ ಅಂಶಗಳಿಗೆ ಸಂಬಂಧಿಸಿದಂತೆ ನಿರ್ದಿಷ್ಟ ಸ್ಪಷ್ಟೀಕರಣ ಲಭ್ಯವಿರುವುದಿಲ್ಲವೆಂದು ಕಂದಾಯ ಇಲಾಖೆ ಸ್ಪಷ್ಟೀಕರಿಸಿದೆ. ಈ ಬೆಳವಣಿಗೆಯನ್ನು ಗಮನಿಸಿದಾಗ ಸರ್ಕಾರಿ ಜಮೀನಿನ ಅವಶ್ಯಕತೆಯನ್ನು ಸಮರ್ಪಕ ಕಾರಣಗಳನ್ನು ನೀಡದೇ ಇಳಿಮುಖಗೊಳಿಸಲಾಗಿದೆ ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. ಕುಂಠಿತವಾಗಿ ನೀಡಲಾದ 1268 ಎಕರೆಗಳ ಸರ್ಕಾರಿ ಜಮೀನಿನ ಬದಲಾಗಿ ಕೆ.ಐ.ಎ.ಡಿ.ಬಿ. ಸಂಸ್ಥೆಯು ಯೋಜನೆಗೆ ಸೆಕ್ಷನ್ 'ಎ' ಅಡಿಯಲ್ಲಿ ಅಸಮರ್ಥನೀಯವಾಗಿ ವಿನ್ಯಾಸ ಹಾಗೂ ಪಥಗಳನ್ನು ಪರಿಗಣಿಸದೇ ಹೆಚ್ಚುವರಿಯಾಗಿ ಖಾಸಗಿ ಜಮೀನನ್ನು ನೀಡಿರುವುದನ್ನು ಸಮಿತಿಯು ಗಮನಿಸಿದೆ.

13. ಸಮಗ್ರವಾಗಿ ವಿಶ್ಲೇಷಿಸುವುದಾದರೆ ಖಾಸಗಿ ಹಾಗೂ ಸರ್ಕಾರಿ ಜಮೀನು ಈ ಸ್ವಾಧೀನ ಪ್ರಕ್ರಿಯೆಯಲ್ಲಿ ಕ್ರಿಯಾ ಒಪ್ಪಂದದ ಅನುಚ್ಛೇಧ 5 ಮತ್ತು ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪನ್ನು ಉಲ್ಲಂಘಿಸಿರುವುದು ಸಮಿತಿಗೆ ಸ್ಪಷ್ಟವಾಗಿದೆ.

14. ಮೂಲಭೂತವಾಗಿ ಕ್ರಿಯಾ ಒಪ್ಪಂದದ ಅನುಚ್ಛೇಧ 5 ರ ಅಡಿಯಲ್ಲಿ ಹಾಗೂ ಕ್ರಿಯಾ ಒಪ್ಪಂದದಲ್ಲಿ ಪೆರಿಫೆರಲ್ ರಸ್ತೆ ಮತ್ತು ಲಿಂಕ್ ರಸ್ತೆಗೆ ಅವಶ್ಯಕವಿರುವ ವಿಸ್ತೀರ್ಣದ ಪ್ರಸ್ತಾವನೆ ಇಲ್ಲದಿದ್ದರೂ, ಸರ್ವೋಚ್ಛ ನ್ಯಾಯಾಲಯವು ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನ ಕಂಡಿಕೆ 51 ರಲ್ಲಿ ಈ ವಿವರಗಳನ್ನು ನೀಡಿದೆ. ಆದುದರಿಂದ ತೀರ್ಪಿನ ಕಂಡಿಕೆ 51 ರ ನಿರೂಪಣೆಗಳ ಅನುಗುಣವಾಗಿ ಪೆರಿಫರೆಲ್ ಮತ್ತು ಲಿಂಕ್ ರಸ್ತೆಗೆ 2471 ಎಕರೆಗಳ ಅವಶ್ಯಕತೆ ಇದೆ ಎಂದು ನಿರ್ಧರಿಸಲಾಗಿದೆ.

15. ಈ ಮಾನದಂಡಗಳಿಗೆ ವ್ಯತಿರಿಕ್ತವಾಗಿ ವಿಶೇಷ ಭೂಸ್ವಾಧೀನಾಧಿಕಾರಿ, ಕೆ.ಐ.ಎ.ಡಿ.ಬಿ. ಇವರು ಪೆರಿಫೆರಲ್ ರಸ್ತೆ ಮತ್ತು ಲಿಂಕ್ ರಸ್ತೆ ಅಭಿವೃದ್ಧಿಗೆ ಕ್ರಿಯಾ ಒಪ್ಪಂದಕ್ಕೆ ಹೋಲಿಸಿದಲ್ಲಿ ಅಥವಾ ಸೋಮಶೇಖರ ರೆಡ್ಡಿ ಪ್ರಕರಣದ ಕಂಡಿಕೆ 51 ಕ್ಕೆ ಹೋಲಿಸಿದಲ್ಲಿ, ನೀಡಿರುವ ಹೆಚ್ಚುವರಿ ಜಮೀನಿನ ವಿವರಗಳು ಕೆಳಕಂಡಂತಿದೆ:

(ಎಕರೆಗಳಲ್ಲಿ)

| ಬಿಎಂಐಸಿ ಯೋಜನೆಯ ಘಟಕಗಳು | ಸರ್ಕಾರಿ+ಖಾಸಗಿ ಜಮೀನು | ಖಾಸಗಿ ಜಮೀನು | | | ಸರ್ಕಾರಿ ಜಮೀನು | ನೈಸೆಲ್ ಸಂಸ್ಥೆಗೆ ಹಸ್ತಾಂತರಿಸಿರುವ ಜಮೀನು (5)+(6) | ಜಮೀನಿನ ಹೆಚ್ಚುವರಿ/ ಕೊರತೆ |
|---|---|---|---|---|---|---|---|
| | ಕ್ರಿಯಾ ಒಪ್ಪಂದ ಹಾಗೂ ಉಚ್ಛ ನ್ಯಾಯಾಲಯದ ತೀರ್ಪು | 28(1) | 28(4) | ನೈಸೆಲ್‌ಗೆ ಹಸ್ತಾಂತರಿಸಿದ ಜಮೀನು | ನೈಸೆಲ್‌ಗೆ ಹಸ್ತಾಂತರಿಸಿದ ಜಮೀನು | | |
| 1 | 2 | 3 | 4 | 5 | 6 | 7 | 8 |
| ಲಿಂಕ್ ರಸ್ತೆ | 278 | 354 | 239 | 233.02 | 96.23 | 329.25 | +51.25 |
| ಪೆರಿಫರೆಲ್ ರಸ್ತೆ | 2193 | 3880 | 2373 | 1651 | 1096 | 2747 | +554 |
| | 2471 | 4234 | 2612 | 1884.02 | 1192.23 | 3076.25 | 605.25 |

16. ಸರ್ವೋಚ್ಛ ನ್ಯಾಯಾಲಯವು ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪನ್ನು ದೃಢೀಕರಿಸಿ 20.04.2006 ರಂದು ತೀರ್ಪನ್ನು ಜಾರಿಗೊಳಿಸಿದೆ. ಆದಾಗ್ಯೂ, ಈ ನಿರ್ದೇಶನಗಳನ್ನು ಉಲ್ಲಂಘಿಸಿ ಕ್ರಿಯಾ ಒಪ್ಪಂದದಲ್ಲಿ ಉಲ್ಲೇಖಿಸಿರುವ 2471 ಎಕರೆಗಳ ಬದಲಾಗಿ ಪೆರಿಫೆರಲ್ ಹಾಗೂ

ಲಿಂಕ್ ರಸ್ತೆಗೆ 4234 ಎಕರೆಗಳನ್ನು ಸ್ವಾಧೀನಪಡಿಸಿಕೊಂಡಿರುವುದು ಸರ್ವೋಚ್ಛ ನ್ಯಾಯಾಲಯದ ನೇರ ಹಾಗೂ ಸ್ಪಷ್ಟ ಉಲ್ಲಂಘನೆಯೆಂದು ಸಮಿತಿ ತೀರ್ಮಾನಿಸುತ್ತದೆ.

17. ರಾಜ್ಯ ಉನ್ನತ ಮಟ್ಟದ ಸಮಿತಿಯ 27.06.2010ರ ಸಭೆಯಲ್ಲಿ ಪೆರಿಫರಲ್ ರಸ್ತೆಗೆ ಅನ್ವಯಿಸುವಂತೆ 554 ಎಕರೆ ಜಮೀನನ್ನು ಈಗಾಗಲೇ ನೈಸೆಲ್ ಸಂಸ್ಥೆಗೆ ಹೆಚ್ಚುವರಿಯಾಗಿ ಹಸ್ತಾಂತರಿಸಿರುವ ಬಗ್ಗೆ ದೃಢೀಕರಿಸಲಾಗಿದೆ. ಅಂದರೆ ನೈಸೆಲ್ ಸಂಸ್ಥೆಯೂ ಸಹ ಕ್ರಿಯಾ ಒಪ್ಪಂದ ಹಾಗೂ ಸರ್ವೋಚ್ಛ ನ್ಯಾಯಾಲಯದ ತೀರ್ಪನ್ನು ಉಲ್ಲಂಘಿಸಿ 554 ಎಕರೆ ಹೆಚ್ಚುವರಿ ವಿಸ್ತೀರ್ಣದ ಜಮೀನನ್ನು ವಶಪಡಿಸಿಕೊಂಡಿರುವುದು ಸಮಿತಿಗೆ ಮನದಟ್ಟಾಗಿದೆ.

18. 09.08.2002ರ ತ್ರಿಪಕ್ಷೀಯ ಒಪ್ಪಂದದಂತೆ ಪ್ರಸ್ತುತವಾಗಿ ಯೋಜನೆಯ ಸೆಕ್ಷನ್-ಎ ಮಾತ್ರ ಜಾರಿಯಲ್ಲಿರುತ್ತದೆ. ಈ ಒಪ್ಪಂದವನ್ನು ಸಮಿತಿ ಅವಲೋಕಿಸಿದಾಗ ಸಮಗ್ರವಾಗಿ ಮೊದಲನೇ ಹಂತಕ್ಕೆ 6,142 ಎಕರೆ ಜಮೀನು ಅವಶ್ಯಕತೆ ಇರುತ್ತದೆ. ಈ ಪೈಕಿ, 1,931 ಎಕರೆ ಸರ್ಕಾರಿ ಜಮೀನನ್ನು ಸಂಪೂರ್ಣವಾಗಿ ಹಸ್ತಾಂತರ ಮಾಡಲಾಗಿದೆ. ಆದರೆ, 4,211 ಎಕರೆ ಖಾಸಗಿ ಜಮೀನಿನ ಬದಲಾಗಿ 4,810 ಎಕರೆ ಖಾಸಗಿ ಜಮೀನಿಗೆ ಕಲಂ 28(4)ರಂತೆ ಅಧಿಸೂಚನೆ ಜಾರಿಗೊಳಿಸಲಾಗಿದೆ. ಇದರಿಂದ ಯೋಜನೆಯ ಮೊದಲನೇ ಹಂತಕ್ಕೆ 599 ಎಕರೆ ಖಾಸಗಿ ಜಮೀನನ್ನು ಅವಶ್ಯಕತೆಗಿಂತ ಹೆಚ್ಚಾಗಿ ಸ್ವಾಧೀನ ಪಡಿಸಿಕೊಂಡಿರುವುದು ಸಮಿತಿಗೆ ಸ್ಪಷ್ಟವಾಗಿದೆ. ***ಈ ಹಿನ್ನೆಲೆಯಲ್ಲಿ, ಪ್ರಸ್ತಾವಿತ 599 ಎಕರೆ ಜಮೀನನ್ನು ಈ ಕೂಡಲೇ ಅಧಿಸೂಚನೆಯಿಂದ ಹೊರತುಪಡಿಸಲು ಕೆ.ಐ.ಎ.ಡಿ.ಬಿ. ಅಧಿನಿಯಮದ ಕಲಂ 4ರಡಿಯಲ್ಲಿ ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.*** ಸಮಗ್ರ ವಿವರಗಳನ್ನು ಈ ವರದಿಯ ಭೂಮಿ ನಿರ್ವಹಣೆ ಶೀರ್ಷಿಕೆ ಅಡಿಯಲ್ಲಿ ಒದಗಿಸಲಾಗಿದೆ.

19. ಯೋಜನೆಯ ಮೊದಲ ಹಂತದಲ್ಲಿ ಸರ್ಕಾರದ ನಿರ್ದೇಶನಗಳನ್ನು ಉಲ್ಲಂಘಿಸಿ ನಗರ ಸಮುಚ್ಛಯ-1ನ್ನು ಸೇರ್ಪಡೆ ಮಾಡಲಾಗಿದೆ. ಕ್ರಿಯಾ ಒಪ್ಪಂದದ ಷೆಡ್ಯೂಲ್-1 ಅನುಗುಣವಾಗಿ ನಗರ ಸಮುಚ್ಛಯಕ್ಕೆ 2,775 ಎಕರೆಗಳ ವಿಸ್ತೀರ್ಣದ ಜಮೀನು ಅವಶ್ಯಕವಿದ್ದು, ಈ ಪೈಕಿ 328 ಎಕರೆ ಸರ್ಕಾರಿ ಜಮೀನು ಹಾಗೂ 2,447 ಎಕರೆ ಖಾಸಗಿ ಜಮೀನು ಅವಶ್ಯಕವಿರುತ್ತದೆ. ಸೋಮಶೇಖರರೆಡ್ಡಿ ಪ್ರಕರಣದ ತೀರ್ಪು ಹಾಗೂ ಸಂಬಂಧಿತ ಮೇಲ್ಮನವಿಗಳ ತೀರ್ಪು ಹಾಗೂ ನಿರ್ದೇಶನದ ಅನುಗುಣವಾಗಿ ಈ ವಿಸ್ತೀರ್ಣ ಅಂತಿಮವಾಗಿರುತ್ತದೆ. ಅಂದರೆ, ಯಾವುದೇ ಬದಲಾವಣೆಗಳಿಗೆ ಅವಕಾಶವಿರುವುದಿಲ್ಲ. ಆದರೆ, 831 ಎಕರೆ ಸರ್ಕಾರಿ ಜಮೀನನ್ನು ಹಸ್ತಾಂತರಿಸಿದ್ದು 503 ಎಕರೆಗಳನ್ನು ಹೆಚ್ಚುವರಿಯಾಗಿ ನೀಡಲಾಗಿದೆ. ಖಾಸಗಿ ಜಮೀನಿನ ಅವಶ್ಯಕತೆ ಕ್ರಿಯಾ ಒಪ್ಪಂದದ ಅನುಗುಣವಾಗಿ 2,447 ಎಕರೆಗಳಿದ್ದು, ಇದರ ವಿರುದ್ಧ 1,916 ಎಕರೆಗಳಿಗೆ ಅಂತಿಮ ಅಧಿಸೂಚನೆಯನ್ನು ಹೊರಡಿಸಲಾಗಿದೆ. ಅಂದರೆ, ಖಾಸಗಿ ಜಮೀನಿನಲ್ಲಿ ಕೊರತೆ 531 ಎಕರೆಯಾಗಿದ್ದು ಈ ಕೊರತೆಯನ್ನು ಸರ್ಕಾರಿ ಜಮೀನಿನ ಹೆಚ್ಚುವರಿ ಹಸ್ತಾಂತರದಿಂದ ಸರಿದೂಗಿಸಲಾಗಿದೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಈ ಹೊಂದಾಣಿಕೆಗಳು ಕ್ರಿಯಾ ಒಪ್ಪಂದಕ್ಕೆ ವ್ಯತಿರಿಕ್ತವಾಗಿದೆ.

*ಮೇಲೆ ವಿಶ್ಲೇಷಿಸಿರುವ ಹಿನ್ನೆಲೆಯಲ್ಲಿ ನೈಸೆಲ್ ಸಂಸ್ಥೆಯು ಸೋಮಶೇಖರರೆಡ್ಡಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ವೋಚ್ಛ ನ್ಯಾಯಾಲಯದ ತೀರ್ಪನ್ನು ಉಲ್ಲಂಘಿಸಿದೆ ಎಂದು ಸಮಿತಿ ತೀರ್ಮಾನಿಸುತ್ತದೆ. ಈ ಬೆಳವಣಿಗೆಗಳನ್ನು ಗಮನಿಸಿದರೆ ರಾಜ್ಯ ಸರ್ಕಾರ ಹಾಗೂ ಖಾಸಗಿ ಪಾಲುದಾರರು ಅಂದರೆ, ಸಹಭಾಗಿತ್ವ ಹೊಂದಿರುವ ಎರಡೂ ಪಾಲುದಾರರು ಸಮಾನಾಂತರವಾಗಿ ನ್ಯಾಯಾಲಯದ ತೀರ್ಪನ್ನು ಉಲ್ಲಂಘಿಸಿದ್ದಾರೆ*

*ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. ಈಗಾಗಲೇ ಖಾಸಗಿ ಸಾಲುದಾರರಿಗೆ ಹೆಚ್ಚುವರಿಯಾಗಿ ನೀಡಿರುವ 584 ಎಕರೆ ವಿಸ್ತೀರ್ಣದ ಜಮೀನಿನ ಪೈಕಿ ಪೆರಿಫೆರಲ್ ರಸ್ತೆ ಹಾಗೂ ಲಿಂಕ್ ರಸ್ತೆಯ ಪಥ ಹಾಗೂ ವಿನ್ಯಾಸದ ಆಧಾರದ ಮೇಲೆ ಬಳಕೆಯಾಗದಿರುವ ಜಮೀನನ್ನು ಸ್ವಾಧೀನಪ್ರಕ್ರಿಯೆಯಿಂದ ಹೊರತುಪಡಿಸಲು ಸರ್ಕಾರವು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನ ಕಂಡಿಕೆ 51 ರ ಅನುಗುಣವಾಗಿ ವಾಸ್ತವಿಕವಾಗಿ ಪೆರಿಫರೆಲ್ ಮತ್ತು ಲಿಂಕ್ ರಸ್ತೆಗಳಿಗೆ 60ರ ಎಕರೆಗಳನ್ನು ಹೆಚ್ಚುವರಿಯಾಗಿ ನೀಡಿರುವುದು ದೃಢೀಕೃತವಾಗಿರುವುದರಿಂದ ಲೆಕ್ಕಾಚಾರಗಳ ಅನುಗುಣವಾಗಿ ಈ ವಿಸ್ತೀರ್ಣದ ಭೂಮಿಯನ್ನು ಹಿಂಪಡೆಯಲು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಅಂದರೆ ವಾಸ್ತವಿಕವಾಗಿ ಬಳಕೆಯಾಗಿರುವ ಜಮೀನುಹಲವಾರು ಪ್ರಕರಣಗಳಲ್ಲಿ ಈ ಹೆಚ್ಚುವರಿ ಜಮೀನಿನ ವ್ಯಾಪ್ತಿಯಲ್ಲಿ ಬಂದಿರುವುದು ಸ್ಪಷ್ಟವಾಗಿದೆ. ಹೆಚ್ಚುವರಿ ಜಮೀನಿನ ಪೈಕಿ ಬಳಕೆಯಾಗಿರುವ ಜಮೀನನ್ನು ಸರಿದೂಗಿಸಲು ಪರ್ಯಾಯವಾಗಿ ಯೋಜನಾ ಅನುಷ್ಠಾನದ ಸೆಕ್ಷನ್ 'ಎ' ವ್ಯಾಪ್ತಿಯಲ್ಲಿ ಬಳಕೆಯಾಗದೇ ಇರುವ ಜಮೀನನ್ನು ಇದೇ ಅನುಪಾತದಲ್ಲಿ ಸರಿದೂಗಿಸಿ, ಹಿಂಪಡೆಯಲು ಸರ್ಕಾರವು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.*

**<u>ಅನುಚ್ಛೇದ 5ರ ಮೇಲೆ ಉಚ್ಛ ನ್ಯಾಯಾಲಯದ ಹಾಗೂ ಸರ್ವೋಚ್ಛ ನ್ಯಾಯಾಲಯದ ತೀರ್ಪಿನ ಪರಿಣಾಮಗಳ ವಿಶ್ಲೇಷಣೆ:</u>**

1. ಮಾನ್ಯ ಉಚ್ಛ ನ್ಯಾಯಾಲಯವು 03.05.2005 ರಂದು ಮೂಲವಾಗಿ ಜಾರಿಗೊಳಿಸಲಾದ ಕ್ರಿಯಾ ಒಪ್ಪಂದವನ್ನು ದೃಢೀಕರಿಸಿದೆ. ಸರ್ವೋಚ್ಛ ನ್ಯಾಯಾಲಯವು ದಿನಾಂಕ 20.04.2006 ರ ತೀರ್ಪಿನಲ್ಲಿ 03.05.2005ರ ತೀರ್ಪನ್ನು ಪುನರುಚ್ಛಿಸಿದೆ.

2. ಪೆರಿಫರೆಲ್ ಮತ್ತು ಲಿಂಕ್ ರಸ್ತೆಗಳಿಗೆ ಕೆ.ಐ.ಎ.ಡಿ.ಬಿ. ಸರ್ಕಾರಿ ಜಮೀನನ್ನು ಹೊರತುಪಡಿಸಿ 2568 ಎಕರೆ ಖಾಸಗಿ ಜಮೀನಿಗೆ ಅಂತಿಮ ಅಧಿಸೂಚನೆ ಹೊರಡಿಸಿದ್ದು, ಈ ಕ್ರಮವನ್ನು ರಾಜ್ಯ ಉಚ್ಛ ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿದೆ. ನೈಸೆಲ್ ಕಂಪನಿಯ ಪ್ರಮಾಣ ಪತ್ರವನ್ನು ಆಧರಿಸಿ ಶೇ. 60 ರಷ್ಟು ಜಮೀನನ್ನು ವಶಪಡಿಸಿಕೊಂಡಿರುವುದು ಸರಿ ಎಂದು ನ್ಯಾಯಾಲಯ ತೀರ್ಮಾನಿಸಿ ಉಳಿದ ಶೇ. 40 ರಷ್ಟು ಜಮೀನನ್ನು ವಜಾಗೊಳಿಸಲಾಗಿರುತ್ತದೆ. ಈ ಆದೇಶವನ್ನು ಪ್ರಶ್ನಿಸಿ ಕೆ.ಐ.ಎ.ಡಿ.ಬಿ. ಮತ್ತು ನೈಸೆಲ್ ಕಂಪನಿ ಮೇಲ್ಮನವಿಯನ್ನು ಸಲ್ಲಿಸಿದ್ದು, ಈ ಅರ್ಜಿಗಳನ್ನು ವಿಭಾಗೀಯ ಪೀಠವು ಪುರಸ್ಕರಿಸಿ 28.02.2005 ರಂದು 2568 ಎಕರೆಗಳ ಖಾಸಗಿ ಜಮೀನಿನ ಸ್ವಾಧೀನವನ್ನು ಸಮರ್ಪಕವೆಂದು ದೃಢೀಕರಿಸಿದೆ. ಪ್ರಸ್ತಾವಿತ ತೀರ್ಪಿನಲ್ಲಿ ಸೋಮಶೇಖರ ರೆಡ್ಡಿ ಪ್ರಕರಣದ ಕಂಡಿಕೆ 51 ಅನ್ನು ಪುನರುಚ್ಛಿಸಿ ಸ್ವಾಧೀನತೆಯನ್ನು ಎತ್ತಿಹಿಡಿಯಲಾಗಿದೆ. ಅಂದರೆಈ ತೀರ್ಪನ್ನು ಸೋಮಶೇಖರ ರೆಡ್ಡಿ ಪ್ರಕರಣದಲ್ಲಿ ಉಲ್ಲೇಖಿಸಲಾಗಿರುವ ವಿಸ್ತೀರ್ಣಗಳ ಹಿನ್ನೆಲೆಯಲ್ಲಿ ಮಾಡಲಾಗಿದೆ ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. ಇದಕ್ಕೆ ಪೂರಕವಾಗಿ ಪ್ರಸ್ತಾವಿತ ತೀರ್ಪಿನಲ್ಲಿ 28.02.2005 ರಂದು 09.08.2002ರ ತ್ರಿಪಕ್ಷೀಯ ಒಪ್ಪಂದವನ್ನು ಕಾನೂನು ಬದ್ಧ ಎಂದು ತೀರ್ಮಾನಿಸಲಾಗಿದೆ. ಆದಾಗ್ಯೂ, ಈ ತೀರ್ಪಿನಲ್ಲಿ 2,568 ಎಕರೆ ವಿಸ್ತೀರ್ಣದ ಖಾಸಗಿ ಹಾಗೂ ಸರ್ಕಾರಿ ಜಮೀನಿನ ವಿಸ್ತೀರ್ಣದ ಸ್ವಾಧೀನವನ್ನು ಎತ್ತಿ ಹಿಡಿಯಲಾಗಿದೆ. *ವಾಸ್ತವಿಕವಾಗಿ ಕ್ರಿಯಾ ಒಪ್ಪಂದದ ಶೆಡ್ಯೂಲ್ 1 ಮತ್ತು ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನ ಅನುಗುಣವಾಗಿ ಪೆರಿಫರಲ್ ಮತ್ತು ಲಿಂಕ್ ರಸ್ತೆ 2,471 ಎಕರೆಗಳ ಅವಶ್ಯಕತೆಯಿದ್ದು, ಪ್ರಸ್ತಾವಿತ ತೀರ್ಪಿನಿಂದ ಖಾಸಗಿ ಸಾಲುದಾರರಿಗೆ 1117 ಎಕರೆ ವಿಸ್ತೀರ್ಣದ ಜಮೀನನ್ನು ಹೆಚ್ಚುವರಿಯಾಗಿ ನ್ಯಾಯಾಲಯದ ಮುಖಾಂತರ ನೀಡಲಾಗಿದೆ ಎಂದು ಸಮಿತಿಯು ಅಭಿಪ್ರಾಯ ಪಡುತ್ತದೆ.*

3. 2658 ಎಕರೆ ಖಾಸಗಿ ಜಮೀನನ್ನು ವಶಪಡಿಸಿಕೊಂಡಿರುವುದು ಸಮರ್ಪಕ ಎಂದು ಸರ್ವೋಚ್ಛ ನ್ಯಾಯಾಲಯ 20.04.2006 ರಂದು ನೀಡಿದ ತೀರ್ಪಿನ ಹಿನ್ನೆಲೆಯಲ್ಲಿ ಜಮೀನನ್ನು ಹಸ್ತಾಂತರಿಸಬೇಕೆಂದು ನೈಸೆಲ್ ಕಂಪನಿ ಮನವಿ ಸಲ್ಲಿಸಿರುತ್ತದೆ. ಆದರೆ ಪೆರಿಫೆರಲ್ ಮತ್ತು ಲಿಂಕ್ ರಸ್ತೆಗಳಿಗೆ 1117 ಎಕರೆ ಜಮೀನನ್ನು ಈಗಾಗಲೇ ನೀಡಿರುವುದನ್ನು ಪರಿಗಣಿಸಿ, ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನ ಕಂಡಿಕೆ 51 ರ ಅನುಗುಣವಾಗಿ ಪೆರಿಫೆರಲ್ ಮತ್ತು ಲಿಂಕ್ ರಸ್ತೆಗಳಿಗೆ ಜಮೀನನ್ನು ಬಳಸುವಂತೆ ಸರ್ಕಾರ ನೈಸೆಲ್ ಕಂಪನಿಗೆ ತಿಳಿಸಿದೆ. ಈ ಪತ್ರದ ಆಧಾರದ ಮೇಲೆ ಸರ್ವೋಚ್ಛ ನ್ಯಾಯಾಲಯದಲ್ಲಿ ಸರ್ಕಾರದ ವಿರುದ್ಧ ನೈಸೆಲ್ ಕಂಪನಿಯು ನ್ಯಾಯಾಂಗ ನಿಂದನಾ ಅರ್ಜಿ ಸಿ.ಸಿ.96/2007 ದಾಖಲಿಸಿರುತ್ತದೆ. ಪ್ರಸ್ತುತವಾಗಿ ಈ ನಿಂದನಾ ಅರ್ಜಿ ಇತ್ಯರ್ಥವಾಗಬೇಕಾಗಿದೆ.

4. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕಾರವು ಸರ್ವೋಚ್ಛ ನ್ಯಾಯಾಲಯದ ಮುಂದೆ 2008 ಮತ್ತು 2010 ರಲ್ಲಿ ಪ್ರಮಾಣ ಪತ್ರಗಳನ್ನು ಸಲ್ಲಿಸಿರುತ್ತದೆ. ನ್ಯಾಯಾಲಯವು ಈ ವಿಚಾರದಲ್ಲಿ ಫ್ಯಾಕ್ಚುವಲ್ ಡಿಸ್‌ಪ್ಯೂಟ್ ಉದ್ಭವಿಸಿರುವ ಬಗ್ಗೆ ಪ್ರತಿಪಾದಿಸಿರುತ್ತದೆ. ಇದೇ ಪ್ರಕರಣದಲ್ಲಿ ನೈಸೆಲ್ ಕಂಪನಿ ಕ್ರಿಯಾ ಒಪ್ಪಂದಕ್ಕಿಂತ ವಿಭಿನ್ನವಾದ ಅಥವಾ ಹೆಚ್ಚುವರಿಯಾದ ಜಮೀನಿನ ಅವಶ್ಯಕತೆಯಿಲ್ಲವೆಂದು ಮೌಖಿಕವಾಗಿ ವಾಗ್ದಾನ ನೀಡಿರುತ್ತದೆ.

ಈ ಎಲ್ಲಾ ಅಂಶಗಳನ್ನು ಪರಿಗಣಿಸಿ ದಿನಾಂಕ 18.01.2011 ರಂದು ಕರ್ನಾಟಕದ ಉಚ್ಛ ನ್ಯಾಯಾಲಯವು ಬಾಕಿ ಇರುವ ಎಲ್ಲಾ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ವಿಶೇಷ ಪೀಠವನ್ನು ಸೃಜಿಸುವಂತೆ ಸರ್ವೋಚ್ಛ ನ್ಯಾಯಾಲಯವು ಆದೇಶ ನೀಡಿರುವುದನ್ನು ಸಮಿತಿಯು ಗಮನಿಸಿದೆ. ಸರ್ವೋಚ್ಛ ನ್ಯಾಯಾಲಯದ ಈ ನಿರ್ದೇಶನದ ಅನುಗುಣವಾಗಿ ಉಚ್ಛ ನ್ಯಾಯಾಲಯವು ವಿಶೇಷ ಪೀಠವನ್ನು ಸೃಜಿಸಿದ್ದು, ಈ ವಿಶೇಷ ಪೀಠವು ಪೆರಿಫೆರಲ್ ರಸ್ತೆ, ಲಿಂಕ್ ರಸ್ತೆ ಮತ್ತು ವೇಗ ಹೆದ್ದಾರಿಯ ಒಂದು ಭಾಗಕ್ಕೆ ಅವಶ್ಯಕವಿರುವ ಜಮೀನಿನ ಬಗ್ಗೆ ವಿಶ್ಲೇಷಣೆಯನ್ನು ಕೈಗೊಂಡಿರುತ್ತದೆ. ವಿಶೇಷ ಪೀಠದ ತೀರ್ಪಿನ ಪ್ರಮುಖ ಅಂಶಗಳು ಕೆಳಕಂಡಂತಿದೆ:

1. ಯೋಜನೆಗೆ ಅವಶ್ಯಕವಿರುವ ಭೂಮಿಯನ್ನು ಗುರುತಿಸಬೇಕಾಗಿದೆ.
2. 13,237 ಎಕರೆಗಳ ಬದಲಾಗಿ 14,337 ಎಕರೆ ವಿಸ್ತೀರ್ಣದ ಜಮೀನಿನ ಸ್ವಾಧೀನ ಪ್ರಸ್ತಾವನೆಯ ಬಗ್ಗೆ ತನಿಖೆಯನ್ನು ಕೈಗೊಳ್ಳಬೇಕಾಗಿದೆ. ಈ ವಿಸ್ತೀರ್ಣದ ಬದಲಾವಣೆಯು ನೋಂದಣಿ ಮತ್ತು ಮುದ್ರಾಂಕ ಶುಲ್ಕದ ಆದೇಶದಲ್ಲಿ ಉಲ್ಲೇಖಿಸಿದ್ದು, ಇದರಿಂದ ಕ್ರಿಯಾ ಒಪ್ಪಂದದ ಪ್ರತಿಪಾದನೆಗಳು ಬದಲಾವಣೆಯಾಗಿರುವುದರಿಂದ ತನಿಖೆಯ ಅವಶ್ಯಕತೆಯಿದೆ.
3. 13,237 ಎಕರೆ ಖಾಸಗಿ ಜಮೀನಿನ ಬದಲಾಗಿ 18,218.09 ಎಕರೆಗೆ 28(1) ಅನ್ನು ಜಾರಿಗೊಳಿಸಲಾಗಿದೆ.
4. ಕೆ.ಐ.ಎ.ಡಿ.ಬಿ. ಸಂಸ್ಥೆಯು 28(1)ರ ವ್ಯಾಪ್ತಿಯ ಜಮೀನಿನ ಪರಭಾರೆ ಅಥವಾ ಮಾರಾಟಕ್ಕೆ ನಿರಾಪೇಕ್ಷಣಾ ಪತ್ರಗಳನ್ನು ಭೂಮಾಲೀಕರಿಗೆ ನೀಡಿದ್ದು, ಈ ಬಗ್ಗೆ ತನಿಖೆ ಅವಶ್ಯಕತೆಯಿರುತ್ತದೆ.
5. ಮೂಲಭೂತ ಸೌಕರ್ಯ ಅಭಿವೃದ್ಧಿಯ ತಾಂತ್ರಿಕ ವರದಿ ಹಾಗೂ ಜಾರಿಗೊಳಿಸಲಾಗಿರುವ ಪೆರಿಫೆರಲ್ ರಸ್ತೆ ಮತ್ತು ಲಿಂಕ್ ರಸ್ತೆಯ ಪಥ ಇವೆರಡೂ ತಾಳೆಯಾಗುತ್ತದೆ.

6. ದಿನಾಂಕ 20.04.2006 ರಂದುಸರ್ವೋಚ್ಛ ನ್ಯಾಯಾಲಯವು ನೀಡಿರುವ ಆದೇಶ ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನ ಪುನರುಚ್ಛರಣೆಯಾಗಿದೆ. ಅಂದರೆ ಬಿ.ಎಂ.ಐ.ಸಿ. ಯೋಜನೆಯನ್ನು ಕ್ರಿಯಾ ಒಪ್ಪಂದದಲ್ಲಿ ನಿರೂಪಿಸಲಾದ ಪಂಕ್ತೀಕರಣದ ಅನುಗುಣವಾಗಿ ನಿರ್ಮಿಸಬೇಕಾಗುವುದು. ಆದರೆ ಪೆರಿಫರಲ್ ಮತ್ತು ಲಿಂಕ್ ರಸ್ತೆಗಳ ಪಂಕ್ತೀಕರಣವು ಓ.ಡಿ.ಪಿ. ಅನುಗುಣವಾಗಿದ್ದು, ಕ್ರಿಯಾ ಒಪ್ಪಂದ ಹಾಗೂ ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿಗೆ ವ್ಯತಿರಿಕ್ತವಾಗಿದೆ. 2009 ರಲ್ಲಿ ನ್ಯಾಯಾಂಗ ನಿಂದನಾ ಅರ್ಜಿಯ ವಿಚಾರಣೆಯ ಸಮಯದಲ್ಲಿ ರಾಜ್ಯ ಸರ್ಕಾರದ ಪ್ರತಿನಿಧಿಗಳು ಓ.ಡಿ.ಪಿ. ಪಂಕ್ತೀಕರಣದಂತೆ ಯೋಜನೆಯನ್ನು ಜಾರಿ ಮಾಡಲು ಆದೇಶವನ್ನು ನೀಡುವಂತೆ ಮನವಿ ಮಾಡಿಕೊಂಡಿರುವ ಹಿನ್ನೆಲೆಯಲ್ಲಿಸರ್ವೋಚ್ಛ ನ್ಯಾಯಾಲಯವು ಈ ಮನವಿಯನ್ನು ಪುರಸ್ಕರಿಸಿದೆ. ಓ.ಡಿ.ಪಿ. ಪಂಕ್ತೀಕರಣದಂತೆ ಯೋಜನೆಯನ್ನು ಜಾರಿಗೊಳಿಸುವಂತೆ ಹಾಗೂ ಅದಕ್ಕೆ ಅವಶ್ಯಕವಿರುವ ಜಮೀನಿನ ವಿವರಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸುವಂತೆ ನಿರ್ದೇಶಿಸಲಾಗಿದೆ. ತತ್ಸಂಬಂಧವಾಗಿ ರಾಜ್ಯ ಸರ್ಕಾರವು ನೈಸಲ್ ಕಂಪನಿಗೆ ಪೆರಿಫರಲ್ ರಸ್ತೆ, ಲಿಂಕ್ ರಸ್ತೆ, ವೇಗದ ಹೆದ್ದಾರಿ ಹಾಗೂ ನಗರ ಸಮುಚ್ಛಯಗಳಿಗೆ ದಿನಾಂಕ 12.02.2004 ರ ಓ.ಡಿ.ಪಿ. ಪಂಕ್ತೀಕರಣದ ಅನುಗುಣವಾಗಿ ಅವಶ್ಯಕವಿರುವ ಜಮೀನಿನ ವಿವರಗಳನ್ನು ಸಲ್ಲಿಸುವಂತೆ 2009 ರಿಂದ ಕೋರುತ್ತಿರುವುದನ್ನು ಸಮಿತಿ ಗಮನಿಸಿದೆ. ಪ್ರಸ್ತಾವಿತ ವಿವರಗಳನ್ನು ನೈಸಲ್ ಸಂಸ್ಥೆಯು ಸರ್ಕಾರಕ್ಕೆ ಈವರೆವಿಗೂ ಸಲ್ಲಿಸಿರುವುದಿಲ್ಲ. ಈ ಬೆಳವಣಿಗೆಗಳ ಹಿನ್ನೆಲೆಯಲ್ಲಿ ದಿನಾಂಕ 15.06.2011 ರಲ್ಲಿ ವಿಭಾಗೀಯ ಪೀಠವು ಯಾವುದೇ ಜಮೀನನ್ನು ಈ ಯೋಜನೆಗೆ ಗುರುತಿಸಿರುವುದಿಲ್ಲ ಎಂದು ತೀರ್ಮಾನಿಸಿದೆ. ದಿನಾಂಕ 15.06.2011 ರ ಮಾನ್ಯ ಉಚ್ಛ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿ ನೈಸಲ್ ಕಂಪನಿ ಸನ್ಮಾನ್ಯ ಸರ್ವೋಚ್ಛ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿದ್ದು, ಈ ಪ್ರಕರಣ ವಿಚಾರಣೆಯ ಹಂತದಲ್ಲಿರುವುದನ್ನು ಸಮಿತಿಯು ಗಮನಿಸಿದೆ. ಏತನ್ಮಧ್ಯೆ, ಪೆರಿಫರಲ್ ರಸ್ತೆ, ಲಿಂಕ್ ರಸ್ತೆ, 13 ಕಿ.ಮೀ. ವ್ಯಾಪ್ತಿಯ ವೇಗದ ಹೆದ್ದಾರಿ ಹಾಗೂ ನಗರ ಸಮುಚ್ಛಯ-1 ಕ್ಕೆ ಅನ್ವಯಿಸುವಂತೆ ನೈಸಲ್ ಕಂಪನಿ ಮಿಸ್ಸಿಂಗ್ ಲಿಂಕ್ಸ್ ನೆಪದಲ್ಲಿ ಹೆಚ್ಚುವರಿ ಜಮೀನನ್ನು ಸತತವಾಗಿ ಕೋರುತ್ತಿರುವುದನ್ನು ಸಮಿತಿಯು ಗಮನಿಸಿದೆ. ಸೋಮಶೇಖರ ರೆಡ್ಡಿ ಪ್ರಕರಣದ ಕಂಡಿಕೆ 51 ಹಾಗೂ ದಿನಾಂಕ 12.02.2004 ರಂದು ಅನುಮೋದಿತವಾದ ಓ.ಡಿ.ಪಿ. ಪಂಕ್ತೀಕರಣದಂತೆ ಅವಶ್ಯಕವಿರುವ ಜಮೀನಿನ ವಿವರಗಳನ್ನು ಸಮಗ್ರವಾಗಿ ಸಲ್ಲಿಸುವವರೆಗೂ ಮಿಸ್ಸಿಂಗ್ ಲಿಂಕ್ಸ್ ಪ್ರವರ್ಗದಲ್ಲಿ ನೈಸಲ್ ಕಂಪನಿಗೆ ಜಮೀನನ್ನು ಹಸ್ತಾಂತರಿಸಬಾರದೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

ಮೇಲೆ ಉಲ್ಲೇಖಿಸಿರುವ ಅಂಶಗಳನ್ನು ಗಮನಿಸಿದಾಗ ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನಲ್ಲಿ ವೈಜ್ಞಾನಿಕವಾಗಿ ಇಸ್ರೋ ಮುಖಾಂತರ ಗುರುತಿಸಲಾದ ಜಮೀನಿನ ಅವಶ್ಯಕತೆಯನ್ನು ದೃಢೀಕರಿಸಲಾಗಿದೆ. ಆದಾಗ್ಯೂ, ಖಾಸಗಿ ಪಾಲುದಾರರು ವೈಜ್ಞಾನಿಕವಾಗಿ ಗುರುತಿಸಲಾಗಿದೆ ಎಂದು ಹೇಳಿರುವ ಜಮೀನಿಗೆ ಅನ್ವಯಿಸುವಂತೆ ಕಂದಾಯ ನಕ್ಷೆಗಳ ಮೇಲೆ ಅಳವಡಿಸಲಾದ ಕ್ಲಡಸ್ಟಲ್ ಮ್ಯಾಪುಗಳನ್ನು ಯೋಜನಾ ಅನುಷ್ಠಾನದ 19 ವರ್ಷಗಳ ನಂತರವೂ ನೀಡದಿರುವುದು ಖಂಡನೀಯವಾಗಿದೆ.

7. ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನ ನಂತರ ಪೆರಿಫೆರಲ್ ರಸ್ತೆ ಹಾಗೂ ಲಿಂಕ್ ರಸ್ತೆಗಳ ಪಥವು ವ್ಯಾಪಕವಾಗಿ ಬದಲಾವಣೆಯಾಗಿರುವ ಬಗ್ಗೆ ಈ ವರದಿಯಲ್ಲಿ ಪ್ರತಿಪಾದಿಸಲಾಗಿದೆ. ತಾಂತ್ರಿಕ ವರದಿ ಹಾಗೂ ಭಾರತ್ ಫೋರ್ಜ್ ಲಿಮಿಟೆಡ್ ಸರ್ವೇಕ್ಷಣಾ ವರದಿಗಳು ಹಾಗೂ ವಾಸ್ತವಿಕವಾಗಿ ಅನುಷ್ಠಾನಗೊಳಿಸಲಾದ ರಸ್ತೆಯ ಪಥದ

ವಿವರಗಳಿಗೂ ಪ್ರಮುಖ ವ್ಯತ್ಯಾಸವಿರುವ ಬಗ್ಗೆ ಈಗಾಗಲೇ ಈ ವರದಿಯಲ್ಲಿ ದೃಢೀಕರಿಸಲಾಗಿದೆ. ರಾಜ್ಯ ಸರ್ಕಾರವು ವಿವಿಧ ನ್ಯಾಯಾಲಯದ ತೀರ್ಪುಗಳ ಸಮರ್ಪಕತೆಯನ್ನು ಕ್ರಿಯಾ ಒಪ್ಪಂದದ ಹಿನ್ನಲೆಯಲ್ಲಿ ವಿಶ್ಲೇಷಿಸಿ ಮರು ಪರಿಶೀಲನಾ ಅರ್ಜಿಯನ್ನು ಸಲ್ಲಿಸುವುದರಲ್ಲಿ ವಿಫಲರಾಗಿರುವುದರಿಂದ ಈ ಯೋಜನೆಯಡಿಯಲ್ಲಿ ಭೂಮಿಯ ನಿರ್ವಹಣೆ ವಿವಾದಾತ್ಮಕ ಹಂತ ತಲುಪಿದೆ ಎಂದು ಸಮಿತಿ ತೀರ್ಮಾನಿಸುತ್ತದೆ.

೮. ಈ ಎಲ್ಲಾ ಅಂಶಗಳನ್ನು ಪರಿಗಣಿಸಿದಾಗ ರಾಜ್ಯ ಸರ್ಕಾರ ಹಾಗೂ ಖಾಸಗಿ ಪಾಲುದಾರರು ವೈಜ್ಞಾನಿಕ ಮಾನದಂಡಗಳ ಮೇಲೆ ಗುರುತಿಸಲಾದ ಜಮೀನಿನ ತಃಖ್ತೆಯನ್ನು ಸಲ್ಲಿಸುವಲ್ಲಿ ವಿಫಲರಾಗಿದ್ದಾರೆ ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. ಏಕೆಂದರೆ, ನಗರ ಸಮುಚ್ಛಯ-1 ಸ್ಥಳಾಂತರಗೊಂಡಿದೆ, ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ಇವರು ವಿವಿಧ ದಿನಾಂಕಗಳಂದು ಸಲ್ಲಿಸಿರುವ ಜಮೀನಿನ ಅವಶ್ಯಕತೆ ಸ್ವಯಂ ವ್ಯತಿರಿಕ್ತವಾಗಿದೆ. ಓ.ಡಿ.ಪಿ. ಅನುಗುಣವಾಗಿ ರಸ್ತೆಯ ಪಥ ಬದಲಾಗಿದೆ. ಈ ಪೈಕಿ ಪ್ರಮುಖ ಬೆಳವಣಿಗೆಗಳು 2006 ರಲ್ಲಿ ಸರ್ವೋಚ್ಛ ನ್ಯಾಯಾಲಯವು ತೀರ್ಪನ್ನು ಜಾರಿಗೊಳಿಸುವ ಪೂರ್ವದಲ್ಲಿ ಆಗಿರುವ ಹಿನ್ನೆಲೆಯಲ್ಲಿ ವಸ್ತುಸ್ಥಿತಿಗಳ ಹಿನ್ನೆಲೆಯಲ್ಲಿ ಅಥವಾ ವೈಜ್ಞಾನಿಕ ಅನುಷ್ಠಾನಕ್ಕೆ ಅವಶ್ಯಕವಿರುವ ಭೂಮಿಯನ್ನು ಗುರುತಿಸುವಲ್ಲಿ ಲೋಕೋಪಯೋಗಿ ಇಲಾಖೆ ನಿರ್ಲಕ್ಷ್ಯತಾ ಧೋರಣೆಯನ್ನು ತಳೆದಿದೆ ಎಂಬ ಅಭಿಪ್ರಾಯವನ್ನು ಸಮಿತಿ ವ್ಯಕ್ತಪಡಿಸುತ್ತದೆ.

*ಈ ವರದಿಯ ಭೂಮಿಯ ನಿರ್ವಹಣೆಯ ಅಧ್ಯಯನದಲ್ಲಿ ಖಾಸಗಿ ಪಾಲುದಾರರಿಗೆ ಸೋಮಶೇಖರರೆಡ್ಡಿ ಪ್ರಕರಣದ ತೀರ್ಪಿನ ಕಂಡಿಕೆ 51ರಲ್ಲಿ ನಮೂದಿಸಲಾದ ವಿಸ್ತೀರ್ಣಕ್ಕಿಂತ ಹೆಚ್ಚುವರಿಯಾಗಿ ಜಮೀನನ್ನು ನೀಡಿರುವ ಬಗ್ಗೆ ವಿವರಗಳನ್ನು ಉಲ್ಲೇಖಿಸಲಾಗಿದೆ. ರಾಜ್ಯ ಸರ್ಕಾರವು ಕ್ರಿಯಾ ಒಪ್ಪಂದದ ಅನುಗುಣವಾಗಿ ಯೋಜನೆಯ ಸೆಕ್ಷನ್ ಎ ಗೆ ಅವಶ್ಯಕವಿರುವ ಜಮೀನನ್ನು ಬಹುತೇಕವಾಗಿ ಹಸ್ತಾಂತರಿಸಿದೆ. ಆದಾಗ್ಯೂ ಸೆಕ್ಷನ್ ಎ ಕಾಮಗಾರಿಗಳ ಭೌತಿಕ ಪ್ರಗತಿ ಕ್ರಿಯಾ ಒಪ್ಪಂದದ ಅನುಚ್ಛೇಧ 6 ಹಾಗೂ 1999ರಲ್ಲಿ ಜಾರಿಗೊಳಿಸಲಾದ ಪೂರಕ ಒಪ್ಪಂದದ ಅನುಗುಣವಾಗಿ ಇರುವುದಿಲ್ಲ. ಖಾಸಗಿ ಪಾಲುದಾರರು ಯೋಜನಾ ಅನುಷ್ಠಾನದ ವಿವಿಧ ಸ್ತರಗಳಲ್ಲಿ ವಿಭಿನ್ನ ಸ್ವರೂಪದ ಹಾಗೂ ವಿಸ್ತೀರ್ಣದ ಜಮೀನನ್ನು ಕೋರಿರುತ್ತಾರೆ. ಪ್ರಮುಖವಾಗಿ ಓ.ಡಿ.ಪಿ. ಸಂಚಿತೀಕರಣದ ಅನುಗುಣವಾಗಿ ಕೋರಿರುವ ಜಮೀನು ಹಾಗೂ 2014ರಲ್ಲಿ ಕೋರಿರುವ ಜಮೀನಿನ ವಿಸ್ತೀರ್ಣ ಕ್ರಿಯಾ ಒಪ್ಪಂದದ ಶೆಡ್ಯೂಲ್ 1 ಹಾಗೂ ಸೋಮಶೇಖರರೆಡ್ಡಿ ಪ್ರಕರಣದ ಕಂಡಿಕೆ 51ರ ಅನುಗುಣವಾಗಿರುವುದಿಲ್ಲ. ಕ್ರಿಯಾ ಒಪ್ಪಂದವನ್ನುಜಮೀನನ್ನು ಆರ್ಥಿಕ ಸಂಸ್ಥೆಗಳಿಗೆ ಖಾತ್ರಿಯಾಗಿ ನಮೂದಿಸುವ ಅವಕಾಶವನ್ನು ಕಲ್ಪಿಸಲಾಗಿದೆ. ಆದರೆ, ಫೈನಾನ್ಷಿಯಲ್ ಕ್ಲೋಷರ್ ದಾಖಲಾತಿಗಳನ್ನು ನೈಸೆಲ್/ನೀಸೆಲ್ ಸಂಸ್ಥೆ ಈವರೆವಿಗೂ ಸಲ್ಲಿಸಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಅಧಿಕೃತವಾಗಿ ಆರ್ಥಿಕ ಸಂಸ್ಥೆಗಳಿಗೆ ಖಾತ್ರಿಯಾಗಿ ನೀಡಿರುವ ಜಮೀನಿನ ವಿವರ ಸರ್ಕಾರದ ಬಳಿ ಲಭ್ಯವಿರುವುದಿಲ್ಲ. ಸರ್ಕಾರವು ಕಂಫರ್ಟ್ ಲೆಟರ್‌ಗಳನ್ನೂ ಸಹ ನೀಡಿದೆ. ಆದುದರಿಂದ ಖಾಸಗಿ ಪಾಲುದಾರರು ಸರ್ಕಾರಿ ಜಮೀನಿನ ಆಧಾರದ ಮೇಲೆ ಪಡೆದಿರುವ ಸಾಲದ ವಿವರಗಳನ್ನು ಸಲ್ಲಿಸುವುದು ಅವರ ಕರ್ತವ್ಯವಾಗಿರುತ್ತದೆ.ಅನುಚ್ಛೇಧ 5ರಡಿಯಲ್ಲಿ ಸರ್ಕಾರವು ನಿರೂಪಿತ ಕ್ರಮಗಳನ್ನು ಪಾಲಿಸಿರುವ ಹಿನ್ನಲೆಯಲ್ಲಿ ಈ ಅನುಚ್ಛೇದದನಡಿಯಲ್ಲಿ ಕರ್ತವ್ಯವನ್ನು ನಿರ್ವಹಿಸಲು ವಿಫಲರಾಗಿರುವ ಖಾಸಗಿ ಪಾಲುದಾರರ ವಿರುದ್ಧ ಕಾನೂನು ರೀತಿಯ ಕ್ರಮ ಜರುಗಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.*

## XII. ಅನುಚ್ಛೇಧ – 5.1.1.2 – ಖಾಸಗಿ ಜಮೀನನ್ನು ಹಸ್ತಾಂತರಿಸುವ ಬಗ್ಗೆ

ಖಾಸಗಿ ಜಮೀನು ಅಥವಾ ಸ್ವಾಧೀನಪಡಿಸಿಕೊಳ್ಳಬಹುದಾದ ಜಮೀನಿಗೆ ಸಂಬಂಧಿಸಿದಂತೆ ಪ್ರಮುಖ ಅಂಶಗಳು ಕೆಳಕಂಡಂತಿದೆ:

(ಎಕರೆ ಮತ್ತು ಗುಂಟೆಗಳಲ್ಲಿ)

| | |
|---|---|
| ಕೆ.ಐ.ಎ.ಡಿ.ಬಿ. ಅಧಿನಿಯಮದ ಕಲಂ 3(1) ರಲ್ಲಿ ಘೋಷಿತವಾದ ಜಮೀನು | 29267.23 |
| ಕೆ.ಐ.ಎ.ಡಿ.ಬಿ. ಅಧಿನಿಯಮದ ಕಲಂ 1(3) ರಡಿಯಲ್ಲಿ ಘೋಷಿತವಾದ ಜಮೀನು | 19414.02 |
| ಕೆ.ಐ.ಎ.ಡಿ.ಬಿ. ಅಧಿನಿಯಮದ ಕಲಂ 28(1) ರಡಿಯಲ್ಲಿ ಘೋಷಿತವಾದ ಜಮೀನು | 18218.09 |
| ಕೆ.ಐ.ಎ.ಡಿ.ಬಿ. ಅಧಿನಿಯಮದ ಕಲಂ 28(4) ರಡಿಯಲ್ಲಿ ಘೋಷಿತವಾದ ಜಮೀನು | 4810.29 |
| ಖಾಸಗಿ ಪಾಲುದಾರರಿಗೆ ಹಸ್ತಾಂತರಿಸಲಾದ ಜಮೀನು | 2155.37 |

ನೈಸೆಲ್/ನೀಸೆಲ್ ಸಂಸ್ಥೆಯು 151.78 ಕೋಟಿ ರೂ.ಗಳನ್ನು ಕೆ.ಐ.ಎ.ಡಿ.ಬಿ. ಸಂಸ್ಥೆಗೆ ಭೂಸ್ವಾಧೀನ ವೆಚ್ಚವನ್ನು ಭರಿಸಲು ಠೇವಣಿ ಮಾಡಿದ್ದು, ಈ ಪೈಕಿ 145.41 ಕೋಟಿ ರೂ.ಗಳನ್ನು ಭೂ ಪರಿಹಾರವಾಗಿ ವಿತರಿಸಲಾಗಿದೆ.

ಈ ಅನುಚ್ಛೇಧದ ಅನುಗುಣವಾಗಿ ಸ್ವಾಧೀನಪಡಿಸಿಕೊಳ್ಳಲಾದ ಭೂಮಿಯನ್ನು ಖಾಸಗಿ ಪಾಲುದಾರರು ದೃಢೀಕರಿಸುವ ಪರಿಹಾರದ ದರಗಳಲ್ಲಿ ಭಾರತ ದೇಶದಲ್ಲಿ ಅನ್ವಯವಾಗುವ ನಿಯಮಾವಳಿಗಳ ಅನುಸಾರವಾಗಿ ಸ್ವಾಧೀನಪಡಿಸಿಕೊಂಡು ಹಸ್ತಾಂತರಿಸುವ ಬಗ್ಗೆ ಪ್ರತಿಪಾದಿಸಲಾಗಿದೆ. ಈ ಅನುಚ್ಛೇಧದಲ್ಲಿ "Sale" ಎಂಬ ಪದವನ್ನು ಬಳಸಲಾಗಿದೆ. ಈ ಪದವನ್ನು ಪರಿಹಾರವನ್ನು ನೀಡಬೇಕಾದ ಸ್ತರವನ್ನು ಸೂಚಿಸುವ ಹಿನ್ನೆಲೆಯಲ್ಲಿ "Sale" ಮಾಡುವ ಸಂದರ್ಭದಲ್ಲಿ ಪರಿಹಾರವನ್ನು ಪಾವತಿಸಬೇಕು ಎಂದು ಸೂಚಿಸಲಾಗಿದೆ. ಈ ಅನುಚ್ಛೇಧದಿಂದ ಖಾಸಗಿ ಪಾಲುದಾರರಿಗೆ ಸ್ವಾಧೀನಪಡಿಸಿಕೊಳ್ಳಲಾದ ಭೂಮಿಯನ್ನು ಮಾರಾಟದ ಮುಖಾಂತರ ಹಸ್ತಾಂತರ ಮಾಡಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಲಾಗಿದೆ. ವಾಸ್ತವಿಕವಾಗಿ ಹಸ್ತಾಂತರಿಸಬೇಕಾದ ಟೋಲ್ ರಸ್ತೆ ಹಾಗೂ ಇತರೆ ಪರಿಕರಗಳ ವ್ಯಾಖ್ಯಾನದಲ್ಲಿ ಸೇರ್ಪಡೆಯಾಗುವ ಪ್ರದೇಶವನ್ನು 30 ವರ್ಷಗಳ ಅವಧಿಯ ನಂತರ ಖಾಸಗಿ ಪಾಲುದಾರರು ಕ್ರಿಯಾ ಒಪ್ಪಂದದ ಅನುಗುಣವಾಗಿ ಸರ್ಕಾರಕ್ಕೆ ಹಿಂದಿರುಗಿಸಬೇಕಾಗುವುದು. ಈ ಅಂಶಗಳನ್ನು ಕ್ರಿಯಾ ಒಪ್ಪಂದದಲ್ಲಿ Transferrable Toll Road Assets ಹಾಗೂ Transferrable Township Assets ಅಡಿಯಲ್ಲಿ ಉಲ್ಲೇಖಿಸಲಾಗಿದೆ. ಈ ಹಿನ್ನೆಲೆಯಲ್ಲಿ ಸ್ವಾಧೀನಪಡಿಸಿಕೊಂಡ ಭೂಮಿ ಅಥವಾ ಸರ್ಕಾರಿ ಭೂಮಿ ಈ ಎರಡೂ ಪ್ರವರ್ಗಗಳನ್ನು, ಯೋಜನಾ ಅನುಷ್ಠಾನದ ಪಥ ಹಾಗೂ ಬಳಕೆಯ ಆಧಾರದ ಮೇಲೆ ಸರ್ಕಾರಕ್ಕೆ ಭೂಮಿಯನ್ನು ಹಿಂತಿರುಗಿಸಬೇಕಾಗುವ ಸಾಧ್ಯತೆ ಇರುತ್ತದೆ. ಈ ಹಿನ್ನೆಲೆಯಲ್ಲಿ ಸರ್ಕಾರಿ ಜಮೀನನ್ನೂ ಸಹ ಗುತ್ತಿಗೆ ಅಥವಾ ಮಾರಾಟದ ಮುಖಾಂತರ ಹಸ್ತಾಂತರ ಮಾಡುವ ಸೌಲಭ್ಯವನ್ನು ಕಲ್ಪಿಸಲಾಗಿದೆ. ವಾಸ್ತವಿಕವಾಗಿ ನಗರ ಸಮುಚ್ಛಯಗಳಲ್ಲಿ ಕ್ರಿಯಾ ಒಪ್ಪಂದದ ಅನುಗುಣವಾಗಿ ಮಾರಾಟ ಮಾಡಲು ಲಭ್ಯವಾಗುವ ನಿವೇಶನಗಳನ್ನು ಹೊರತುಪಡಿಸಿ ಇತರೆ ಜಮೀನನ್ನು ಅಂದರೆ ಸಾರ್ವಜನಿಕ ಸೌಲಭ್ಯದ ಪ್ರದೇಶ ಹಾಗೂ ಟೋಲ್ ರಸ್ತೆ ಹಾಗೂ ಪರಿಕರಗಳು ಈ ವ್ಯಾಪ್ತಿ ಪ್ರದೇಶವನ್ನು ಸರ್ಕಾರಕ್ಕೆ

ಹಿಂತಿರುಗಿಸಬೇಕಾಗುವುದು. ***ಈ ಹಿನ್ನೆಲೆಯಲ್ಲಿ ಸಮಗ್ರವಾಗಿ ಈ ಅನುಚ್ಛೇಧದಲ್ಲಿ ಖಾಸಗಿ ಜಮೀನಿಗೆ ಸಂಬಂಧಿಸಿದಂತೆ "Sale" ಎಂಬ ಪದವನ್ನು ಬಳಸಿರುವುದು ಕ್ರಿಯಾ ಒಪ್ಪಂದದ ಹಾಗೂ PPP ಯೋಜನೆಯ ಉದ್ದೇಶಗಳಿಗೆ ವ್ಯತಿರಿಕ್ತವಾಗಿದೆ ಎಂದು ಸಮಿತಿಯು ತೀರ್ಮಾನಿಸುತ್ತದೆ. ಈ ವರದಿಯ ಸಂಬಂಧಿತ ಅನುಚ್ಛೇಧದಡಿಯಲ್ಲಿ ಕೆ.ಐ.ಎ.ಡಿ.ಬಿ. ಸಂಸ್ಥೆಯು ಕ್ಲಡಸ್ಟಲ್ ನಕಾಶೆಗಳ ಅನುಪಸ್ಥಿತಿಯಲ್ಲಿ ಖಾಸಗಿ ಜಮೀನನ್ನು ಶುದ್ಧ ಕ್ರಯ ಪತ್ರದ ಮುಖಾಂತರ ಹಸ್ತಾಂತರಿಸಿರುವ ಸಮರ್ಪಕತೆ ಹಾಗೂ ಔಚಿತ್ಯದ ಬಗ್ಗೆ ವಿಶ್ಲೇಷಿಸಲಾಗಿದೆ. ಕ್ರಿಯಾ ಒಪ್ಪಂದದಲ್ಲಿ*** Transferrable Toll Road Assets ಹಾಗೂ Transferrable Township Assets***ಉಲ್ಲೇಖದ ಅನುಗುಣವಾಗಿ ಹಿಂದಿರುಗಿಸಬೇಕಾಗಿರುವ ಜಮೀನನ್ನು, ಸೌಲಭ್ಯಗಳನ್ನು ನಿರ್ದಿಷ್ಟವಾಗಿ ಬೇರ್ಪಡಿಸಿ ಗುರುತಿಸುವ ಹಿನ್ನೆಲೆಯಲ್ಲಿ ಈ ಅನುಚ್ಛೇಧದಲ್ಲಿ ಬಳಸಿರುವ "Sale" ಪದವನ್ನು "Sale" ಹಾಗೂ "Lease Cum Sale" ಎಂದು ಪರಿಷ್ಕರಣೆ ಮಾಡಲು ಸರ್ಕಾರವು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.***

### XIII. *ಅನುಚ್ಛೇಧ – 5.1.2 – ಸರ್ಕಾರಿ ಜಮೀನನ್ನು ಹಸ್ತಾಂತರಿಸುವ ಬಗ್ಗೆ.*

ಬಿ.ಎಂ.ಐ.ಸಿ. ಯೋಜನೆಗೆ ನೀಡಿರುವ ಸರ್ಕಾರಿ ಜಮೀನಿಗೆ ಅನ್ವಯಿಸುವಂತೆ ಪ್ರಮುಖ ಘಟನಾವಳಿಗಳು ಹಾಗೂ ವಿಸ್ತೀರ್ಣದ ವಿವರಗಳು ಕೆಳಕಂಡಂತಿದೆ:

(ಎಕರೆ ಮತ್ತು ಗುಂಟೆಗಳಲ್ಲಿ)

| | |
|---|---|
| 07.10.1999 ರ ಆದೇಶದ ಅನುಗುಣವಾಗಿ ಮಂಜೂರಾದ ಸರ್ಕಾರಿ ಜಮೀನು | 5687.38 |
| 27.08.2003 ರ ಆದೇಶದ ಅನುಗುಣವಾಗಿ ಮಂಜೂರಾದ ಸರ್ಕಾರಿ ಜಮೀನು | 190.13 |
| 23.10.2003 ರ ಆದೇಶದ ಅನುಗುಣವಾಗಿ ಮಂಜೂರಾದ ಸರ್ಕಾರಿ ಜಮೀನು | 2.17 |
| **ಒಟ್ಟು** | **5880.28** |
| 12.07.2002 ರ ಆದೇಶದ ಪ್ರಕಾರ ಹಿಂಪಡೆದ ಸರ್ಕಾರಿ ಜಮೀನು | 49 |
| 21.07.2003 ರ ರ ಆದೇಶದ ಅನುಗುಣವಾಗಿ ಹಿಂಪಡೆದ ಸರ್ಕಾರಿ ಜಮೀನು | 307.16 |
| **ಒಟ್ಟು ಹಿಂಪಡೆದ ಜಮೀನು** | **356.16** |
| ಉಳಿದ ಸರ್ಕಾರಿ ಜಮೀನು | 5524.12 |
| ಖಾಸಗಿ ಪಾಲುದಾರರಿಗೆ ಹಸ್ತಾಂತರಿಸಿದ ಸರ್ಕಾರಿ ಜಮೀನು | 5000.28 |
| ಖಾಸಗಿ ಪಾಲುದಾರರಿಗೆ ಹಸ್ತಾಂತರಿಸಿದ ಅರಣ್ಯ ಭೂಮಿ | 175.21 |
| ಅರಣ್ಯ ಭೂಮಿಯೂ ಒಳಗೊಂಡಂತೆ ಹಸ್ತಾಂತರಿಸಲಾದ ಸರ್ಕಾರಿ ಜಮೀನಿನ ವಿಸ್ತೀರ್ಣ | 5176.09 |

ಕಂದಾಯ ಇಲಾಖೆಯು ದಿನಾಂಕ 29.01.2001 ರಂದು 5 ನಗರ ಸಮುಚ್ಛಯಗಳ ವ್ಯಾಪ್ತಿಗೆ ಬರುವ ಸರ್ಕಾರಿ ಜಮೀನನ್ನು ಯೋಜನಾ ಸಂಸ್ಥೆಗೆ ಮಾರಾಟ ಮಾಡಲು ಆದೇಶ ಹೊರಡಿಸಿರುತ್ತದೆ. ಅಂದರೆ ನಗರ ಸಮುಚ್ಛಯ ವ್ಯಾಪ್ತಿಗೆ ಬರುವ ಜಮೀನಿಗೆ ಮಾರಾಟ ಪ್ರಕ್ರಿಯೆ

ಸೀಮಿತವಾಗಿರಬೇಕಾಗುತ್ತದೆ. ಟೋಲ್ ರಸ್ತೆಯ ವ್ಯಾಪ್ತಿಗೆ ಬರುವ ಸರ್ಕಾರಿ ಜಮೀನಿಗೆ ಅನ್ವಯಿಸುವಂತೆ ದಿನಾಂಕ 07.10.1999ರ ಆದೇಶದ ಅನುಗುಣವಾಗಿ ಗುತ್ತಿಗೆ ಆಧಾರದ ಮೇಲೆ ಮಾತ್ರ ಜಮೀನನ್ನು ಹಸ್ತಾಂತರಿಸಬಹುದಾಗಿದೆ. ನಗರ ಸಮುಚ್ಛಯದ ವ್ಯಾಪ್ತಿಗೆ ಬರುವ ಸರ್ಕಾರಿ ಜಮೀನಿಗೆ ಅನ್ವಯಿಸುವಂತೆ 1999-2000 ದ ಮಾರ್ಗಸೂಚಿ ದರಗಳಲ್ಲಿ ಜಮೀನನ್ನು ಖರೀದಿಸಲು ಖಾಸಗಿ ಪಾಲುದಾರರಿಗೆ ಅವಕಾಶವನ್ನು ಕಲ್ಪಿಸಲಾಗಿದೆ. *ಟೋಲ್ ರಸ್ತೆಯ ವ್ಯಾಪ್ತಿಗೆ ಬರುವ ಸರ್ಕಾರಿ ಜಮೀನಿಗೆ ಅನ್ವಯಿಸುವಂತೆ 40 ವರ್ಷಗಳ ಅವಧಿಗೆ ಪ್ರತಿ ಎಕರೆಗೆ ವಾರ್ಷಿಕವಾಗಿ 10 ರೂ.ಗಳ ಗುತ್ತಿಗೆ ದರವನ್ನು ನಿಗದಿಪಡಿಸಲಾಗಿದೆ. ಸರ್ಕಾರಿ ಆದೇಶದಲ್ಲಿ ಪ್ರಸ್ತಾವಿತ ಗುತ್ತಿಗೆ ದರಗಳನ್ನು ಪಾವತಿಸಲು ವಿಧಿವಿಧಾನಗಳನ್ನು ನಿರೂಪಿಸಿದ್ದು, ಆದೇಶದಲ್ಲಿ ನಮೂದಿಸಿರುವ ಲೆಕ್ಕ ಶೀರ್ಷಿಕೆಗೆ ಗುತ್ತಿಗೆ ದರವನ್ನು ಖಾಸಗಿ ಪಾಲುದಾರರು ಪಾವತಿಸಬೇಕಾಗಿದೆ.ಇಲಾಖಾ ಸಾಕ್ಷಿಗಳ ಹೇಳಿಕೆಗಳ ಅನುಗುಣವಾಗಿ ಈಗಾಗಲೇ ಗುತ್ತಿಗೆ ಆಧಾರದ ಮೇಲೆ ಹಸ್ತಾಂತರಿಸಿರುವ 5000 ಎಕರೆಗಳ ವಿಸ್ತೀರ್ಣದ ಜಮೀನಿಗೆ ಸರ್ಕಾರಿ ಜಮೀನಿಗೆ ಅನ್ವಯಿಸುವಂತೆ ಗುತ್ತಿಗೆ ದರಗಳನ್ನು ಖಾಸಗಿ ಪಾಲುದಾರರು ನಿರೂಪಿತ ಲೆಕ್ಕ ಶೀರ್ಷಿಕೆಗೆ ಪಾವತಿಸಿರುವುದಿಲ್ಲ. ಈ ಪಾವತಿಯ ಅನುಪಸ್ಥಿತಿಯಲ್ಲಿ ಗುತ್ತಿಗೆ ಕರಾರನ್ನು ಜಾರಿಗೊಳಿಸಿರುವುದು ಗುರುತರ ಕರ್ತವ್ಯ ಲೋಪವೆಂದು ಸಮಿತಿಯು ತೀರ್ಮಾನಿಸುತ್ತದೆ. ಈ ಹಿನ್ನೆಲೆಯಲ್ಲಿ ಸರ್ಕಾರಿ ಆದೇಶ ನಿರೂಪಣೆಗಳನ್ನು ಉಲ್ಲಂಘಿಸಿ ಗುತ್ತಿಗೆ ಕರಾರನ್ನು ಜಾರಿಗೊಳಿಸಿದ ಕೆ.ಐ.ಎ.ಡಿ.ಬಿ. ಸಂಸ್ಥೆಯ ,ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮ ಜರುಗಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಮುಂದುವರಿದಂತೆ ಈ ಕೂಡಲೇ ಬಾಕಿ ಇರುವ ಗುತ್ತಿಗೆ ಮೊತ್ತವನ್ನು ವಿಳಂಬಿತ ಪಾವತಿಯ ಬಡ್ಡಿ ಮೊತ್ತವೂಸೇರಿದಂತೆ ನಿರೂಪಿತ ಲೆಕ್ಕ ಶೀರ್ಷಿಕೆಗೆ ಖಾಸಗಿ ಪಾಲುದಾರರು ಪಾವತಿಸಲು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.*

## XIV. <u>ಅನುಚ್ಛೇದ 5.1.2.1 – ಸರ್ಕಾರಿ ಜಮೀನಿನ ಹಸ್ತಾಂತರದ ಬಗ್ಗೆ</u>

ಸರ್ಕಾರಿ ಜಮೀನಿಗೆ ಸಂಬಂಧಿಸಿದಂತೆ ಭಾರತ್ ಫೋರ್ಜ್ ಲಿಮಿಟೆಡ್ ಕಂಪನಿಯು ದಿನಾಂಕ 26.11.1996ರ ಪತ್ರದಲ್ಲಿ ಕಳುಹಿಸಿದ ವಿವರಗಳನ್ನು ಅದೇ ದಿನಾಂಕದ ಪತ್ರದಲ್ಲಿ ಕಂದಾಯ ಇಲಾಖೆಗೆ ವರ್ಗಾಯಿಸಲಾಗಿದೆ. ಆದರೆ ಈ ಸಂಬಂಧ ಜಮೀನು ಕೋರಿಕೆಯ ಪಟ್ಟಿ ಹಾಗೂ ಪತ್ರಗಳ ಪ್ರತಿಗಳು ಇಲಾಖೆಯ ಕಡತದಲ್ಲಿ ಲಭ್ಯವಿರುವುದಿಲ್ಲ. ಈ ಪ್ರತಿಗಳ ಅನುಪಸ್ಥಿತಿಯಲ್ಲಿ ಇಲಾಖೆಯು ಟಿಪ್ಪಣಿ ಹಾಳೆಯಲ್ಲಿ ದಾಖಲಿಸಿರುವ ಮಾಹಿತಿಯನ್ನು ಸಮಿತಿಗೆ ನೀಡಿದೆ. ಸರ್ಕಾರಿ ಜಮೀನಿನ ಅವಶ್ಯಕತೆಯಲ್ಲಿ ವ್ಯಾಪಕ ಏರಿಳಿತಗಳಾಗಿರುವ ಬಗ್ಗೆ ಈ ವರದಿಯಲ್ಲಿ ಚರ್ಚಿಸಲಾಗಿದೆ. *ಆದುದರಿಂದ ಪ್ರತಿಗಳು ಕಡತದಿಂದ ಕಾಣೆಯಾಗಿರುವುದು ಸಂಶಯಾಸ್ಪದ ಬೆಳವಣಿಗೆ ಎಂದು ಸಮಿತಿ ತೀರ್ಮಾನಿಸುತ್ತದೆ. ಈ ವೈಫಲ್ಯತೆಯ ಬಗ್ಗೆ ತನಿಖೆ ಜಾರಿಗೊಳಿಸಿ ಜವಾಬ್ದಾರಿಯನ್ನು ನಿಗದಿಪಡಿಸಬೇಕೆಂದು ಸಮಿತಿಯು ಆಗ್ರಹಿಸುತ್ತದೆ.*

ಸಚಿವ ಸಂಪುಟದ ಅನುಮೋದನೆಯ ನಂತರ ಲೋಕೋಪಯೋಗಿ ಇಲಾಖೆಯು ಸರ್ಕಾರದ ಜಮೀನನ್ನು ಖಾಸಗಿ ಸಂಸ್ಥೆಗೆ ಮಂಜೂರು ಮಾಡುವ ಮೊದಲು ಕಂದಾಯ ಇಲಾಖೆಯ ಪೂರ್ವಭಾವಿ ಅನುಮೋದನೆಯನ್ನು ಪಡೆಯುವ ನಿರ್ಬಂಧನೆಯೊಂದಿಗೆ ದಿನಾಂಕ 27.03.1997 ರಂದು 6956 ಎಕರೆ ಸರ್ಕಾರದ ಜಮೀನನ್ನು ಲೋಕೋಪಯೋಗಿ ಇಲಾಖೆಗೆ ವರ್ಗಾವಣೆ ಮಾಡಿ ಆದೇಶಿಸಲಾಗಿದೆ. ಈ ಆದೇಶದಲ್ಲಿ ದಿನಾಂಕ 26.11.1996ರ ಪತ್ರವನ್ನು ಉಲ್ಲೇಖಿಸಲಾಗಿದೆ. ಹೀಗಾಗಿ ದಿನಾಂಕ 27.03.1997 ರಂದು ಕಂದಾಯ ಇಲಾಖೆಯು ಸಚಿವ ಸಂಪುಟದ ಅನುಮೋದನೆಯನ್ನು ಪಡೆದು ವರ್ಗಾವಣೆ ಮಾಡಿದ ಜಮೀನು ಮೂಲಭೂತವಾಗಿ ಭಾರತ್ ಫೋರ್ಜ್ ಲಿಮಿಟೆಡ್ ಕಂಪನಿ ದಿನಾಂಕ

26.11.1996 ರಂದು ಒದಗಿಸಿದ ಸರ್ಕಾರಿ ಜಮೀನಿನೊಂದಿಗೆ ಅನುಗುಣವಾಗಿದೆ ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ.

ನಂತರದ ಬೆಳವಣಿಗೆಯಲ್ಲಿ ಕೆ.ಐ.ಎ.ಡಿ.ಬಿ. ಸಂಸ್ಥೆಯು ನೈಸೆಲ್ ಸಂಸ್ಥೆಯೊಡನೆ ಸರ್ಕಾರಿ ಜಮೀನಿಗೆ ಸಂಬಂಧಿಸಿದಂತೆ 23.11.1999 ರಂದು ಕರಾರನ್ನು ಜಾರಿಗೊಳಿಸಿದ್ದು, ಈ ಕರಾರಿನೊಡನೆ ಲಗತ್ತಿಸಲಾದ ಜಮೀನಿನ ವಿವರಗಳು ಭಾರತ್ ಫೋರ್ಜ್ ಲಿಮಿಟೆಡ್ ಮೂಲವಾಗಿ ನೀಡಿದ ಜಮೀನಿಗಿಂತ ವಿಭಿನ್ನವಾಗಿರುತ್ತದೆ. ಕ್ರಿಯಾ ಒಪ್ಪಂದದ ಶೆಡ್ಯೂಲ್ 1 ಅನುಗುಣವಾಗಿ ರಾಜ್ಯ ಸರ್ಕಾರವು 6956 ಎಕರೆಗಳ ಸರ್ಕಾರಿ ಜಮೀನನ್ನು ಯೋಜನೆಯ ಅನುಷ್ಠಾನಕ್ಕಾಗಿ ಒದಗಿಸಬೇಕಾಗುವುದು. ಕ್ರಿಯಾ ಒಪ್ಪಂದದ ಅನುಚ್ಛೇಧ 5.1.2.2 ರ ಅನುಗುಣವಾಗಿ ಸರ್ಕಾರಿ ಜಮೀನನ್ನು ಯೋಜನಾ ಸಂಸ್ಥೆಯು ಸರ್ಕಾರ ಹಾಗೂ ಖಾಸಗಿ ಪಾಲುದಾರರು ಪರಸ್ಪರ ಸಹಮತಿಯೊಂದಿಗೆ ಹಾಗೂ ಅನ್ವಯಿಸುವ ದೇಶದ ಕಾನೂನಿನ ಅನುಗುಣವಾಗಿ ಖರೀದಿಸಬೇಕಾಗುವುದು. ಸರ್ಕಾರಿ ಜಮೀನನ್ನು ಹಸ್ತಾಂತರಿಸುವ ಸಂದರ್ಭದಲ್ಲಿ ಅಥವಾ ಮಾರಾಟ ಮಾಡುವ ಸಂದರ್ಭದಲ್ಲಿ ಈ ಪರಿಹಾರವನ್ನು ಪಾವತಿಸಬೇಕಾಗುವುದು. ದಿನಾಂಕ 27.03.1997ರ ಸರ್ಕಾರದ ಆದೇಶದ ಅನುಗುಣವಾಗಿ 6956 ಎಕರೆಗಳ ಸರ್ಕಾರಿ ಜಮೀನನ್ನು ಕಂದಾಯ ಇಲಾಖೆಯಿಂದ ಪೂರ್ವಾನುಮತಿಯನ್ನು ಪಡೆಯುವ ನಿರ್ಬಂಧನೆಯೊಂದಿಗೆ ಲೋಕೋಪಯೋಗಿ ಇಲಾಖೆಗೆ ಹಸ್ತಾಂತರಿಸಲಾಗಿದೆ. ಇದಲ್ಲದೆ, ಖಾಸಗಿ ಪಾಲುದಾರರು ಮಾರುಕಟ್ಟೆ ದರಗಳಲ್ಲಿ ಪರಿಹಾರ ನೀಡುವ ಬಗ್ಗೆ ಹಾಗೂ ಭೂ ಪರಿವರ್ತನಾ ಶುಲ್ಕ ಹಾಗೂ ಇತರ ಶುಲ್ಕಗಳನ್ನು ಪಾವತಿಸುವ ನಿರ್ಬಂಧನೆಗೆ ಒಳಪಟ್ಟಂತೆ ಈ ಆದೇಶವನ್ನು ಜಾರಿಗೊಳಿಸಲಾಗಿದೆ. ಈ ಆದೇಶದ ಅನುಗುಣವಾಗಿ 17.05.1997 ರಂದು ಬೆಂಗಳೂರು ಜಿಲ್ಲೆಯ ಜಿಲ್ಲಾಧಿಕಾರಿಗಳು, ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರ ತಾಲ್ಲೂಕು ಹಾಗೂ ಆನೇಕಲ್ ತಾಲ್ಲೂಕಿನ 1075 ಎಕರೆ ಜಮೀನನ್ನು ಹಸ್ತಾಂತರಿಸಲು ಅನುಮತಿ ನೀಡಿರುವುದನ್ನು ಸಮಿತಿ ಗಮನಿಸಿದೆ. ಈ ಉಲ್ಲೇಖದಲ್ಲಿ ಲ್ಯಾಂಡ್ ಗ್ರ್ಯಾಂಟ್ ಆಕ್ಟ್ 1969 ರ ಅಡಿಯಲ್ಲಿ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ ಇವರಿಗೆ ಜಮೀನನ್ನು ಹಸ್ತಾಂತರಿಸಲಾಗಿದೆ. ಆದರೆ 28.03.2000 ರಂದು ಜಾರಿಗೊಳಿಸಿದ ಆದೇಶದಲ್ಲಿ ಈ ವಿಸ್ತೀರ್ಣವನ್ನು 1712 ಎಕರೆ ಎಂದು ಪ್ರತಿಪಾದಿಸಲಾಗಿದೆ. 28.03.2000 ದ ಆದೇಶದಲ್ಲಿ 07.10.1999 ರ ಆದೇಶದ ಬಗ್ಗೆ ಪ್ರತಿಪಾದನೆ ಇರುವುದಿಲ್ಲ.

ಅವಶ್ಯಕವಿರುವ ಸರ್ಕಾರಿ ಜಮೀನಿನ ಪಟ್ಟಿ ಸ್ವೀಕೃತವಾದ ಮೇಲೆ ಕಂದಾಯ ಇಲಾಖೆಯು ಕ್ಷೇತ್ರೀಯ ಜಿಲ್ಲಾಧಿಕಾರಿಗಳಿಂದ ಯಾವುದೇ ವರದಿ ಅಥವಾ ಅಭಿಪ್ರಾಯವನ್ನು ಪಡೆದಿರುವುದಿಲ್ಲ. ಈ ವರದಿಯ ಅನುಪಸ್ಥಿತಿಯಲ್ಲಿ ಪೂರ್ವಭಾವಿ ಸರ್ವೇಕ್ಷಣಾ ಕಾರ್ಯ ಕೈಗೊಳ್ಳದೇ ಸ್ವಾಧೀನ ಪ್ರಕ್ರಿಯೆ ಜಾರಿಗೊಳಿಸಿರುವುದು ಸ್ಪಷ್ಟವಾಗಿದೆ. ಉದಾಹರಣೆಗೆ ಸರ್ಕಾರಿ ಆದೇಶ ಸಂಖ್ಯೆ.ಪಿಡಬ್ಲ್ಯೂಡಿ/155/ಸಿಆರ್‌ಎಂ/95/ಸರ್ಕಾರಿ ಜಮೀನು/99 ದಿನಾಂಕ 07.10.1999ರ ಅನುಗುಣವಾಗಿ ಜಿಲ್ಲಾಧಿಕಾರಿ, ಬೆಂಗಳೂರು ಇವರು ಜಾರಿಗೊಳಿಸಿರುವ ದಿನಾಂಕ 28.03.2000 ರ ಆದೇಶದ ಅನುಗುಣವಾಗಿ ಬೆಂಗಳೂರು ದಕ್ಷಿಣ ತಾಲ್ಲೂಕಿನ ಕೋನಪ್ಪನ ಅಗ್ರಹಾರ, ದೊಡ್ಡ ತೇಗೂರು, ಬೇಗೂರು, ಗೊಟ್ಟಿಗೆರೆ, ವರಾಹಸಂದ್ರ, ಹೆಮ್ಮಿಗೆ ಪುರ ಗ್ರಾಮಗಳ ಜೀವಂತ ಕೆರೆಗಳು ಸ್ವಾಧೀನ ಪ್ರಕ್ರಿಯೆಗೆ ಒಳಪಟ್ಟಿವೆ. ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಮಂಗನಹಳ್ಳಿ ಕೆರೆ ಸೇರ್ಪಡೆಯಾಗಿದೆ. ಇದಲ್ಲದೆ, ವೇಗದ ಹೆದ್ದಾರಿ ಆಸುಪಾಸಿನ ಮಂಡ್ಯ ಜಿಲ್ಲೆಯ ಸೋನದಹಳ್ಳಿ ಕೆರೆ ಹಾಗೂ ಚಿಕ್ಕ ಹಾರೋಹಳ್ಳಿ ಕೆರೆಗಳನ್ನು ಸ್ವಾಧೀನಕ್ಕೆ ಒಳಪಡಿಸಿದೆ. ನಿಯಮಾವಳಿಗಳ ಅನುಸಾರ ಕೆರೆಗಳನ್ನು ದರಖಾಸ್ತು ಮಾಡಲು ಅವಕಾಶವಿರುವುದಿಲ್ಲ. ಇದಲ್ಲದೆ, ಕೆರೆ ಮತ್ತು ಸರ್ಕಾರಿ ಕಟ್ಟೆಗಳನ್ನು ಖಾಸಗಿ ಪಾಲುದಾರರಿಗೆ ಹಸ್ತಾಂತರಿಸುವ ಬಗ್ಗೆ ಯಾವುದೇ ಪತ್ರ ವ್ಯವಹಾರವು ನಡೆದಿರುವುದಿಲ್ಲ. ಈ

ಅಂಶಗಳನ್ನು ಪರಿಶೀಲಿಸಿದಾಗ ಕಂದಾಯ ಇಲಾಖೆಯು ಸಚಿವ ಸಂಪುಟಕ್ಕೆ ಟಿಪ್ಪಣಿಯನ್ನು ಸಲ್ಲಿಸುವ ಪೂರ್ವದಲ್ಲಿ ಜಿಲ್ಲಾಧಿಕಾರಿಗಳಿಂದ ವಸ್ತು ಸ್ಥಿತಿಗಳ ಬಗ್ಗೆ ವರದಿಯನ್ನು ಪಡೆಯದೇ ಮಾರಿರುವುದು ಸ್ಪಷ್ಟವಾಗಿದೆ. ಜಿಲ್ಲಾಧಿಕಾರಿಗಳೂ ಸಹ ಆದೇಶ ಜಾರಿಗೊಳಿಸುವ ಪೂರ್ವದಲ್ಲಿ ಸ್ವಾಧೀನ ವ್ಯಾಪ್ತಿಗೆ ಒಳಪಡುವ ಜಮೀನಿನ ಪ್ರವರ್ಗ ಹಾಗೂ ಸ್ವರೂಪವನ್ನು ಪರಿಗಣಿಸದೇ ಇರುವುದು ಸ್ಪಷ್ಟವಾಗಿದೆ. ಕೆರೆ ಅಭಿವೃದ್ಧಿ ಪ್ರಾಧಿಕಾರವೂ ಸಹ ತನ್ನ ವ್ಯಾಪ್ತಿಯ ಕೆರೆಗಳ ಹಸ್ತಾಂತರದ ಬಗ್ಗೆ ಬೆಂಗಳೂರು ನಗರ ಹಾಗೂ ಗ್ರಾಮಾಂತರ ಜಿಲ್ಲೆಗಳ ಸರ್ಕಾರಿ ಜಮೀನು ಒತ್ತುವರಿಜಂಟಿ ಸದನ ಸಮಿತಿಯ ವರದಿಯಲ್ಲಿ ಪ್ರತಿಪಾದಿಸಲಾಗಿದೆ. ದಿನಾಂಕ 27.03.1997 ರಂದು ಕಂದಾಯ ಇಲಾಖೆ ಮಂಜೂರು ಮಾಡಿದ ಜಮೀನಿಗೂ, 1999 ರಲ್ಲಿ ಲೋಕೋಪಯೋಗಿ ಇಲಾಖೆ ಲಗತ್ತಿಸಿದ ಜಮೀನಿನ ಪಟ್ಟಿಗೂ ವ್ಯತ್ಯಾಸಗಳಿವೆ. ಈ ವ್ಯತ್ಯಾಸದ ಬಗ್ಗೆ ಕಂದಾಯ ಇಲಾಖೆ ಪ್ರತಿಕ್ರಿಯಿಸಿರುವುದಿಲ್ಲ.

ತದನಂತರದ ಬೆಳವಣಿಗೆಯಲ್ಲಿ 22.06.1998 ರಂದು ನೈಸೆಲ್ ಸಂಸ್ಥೆಯು ಸ್ವಯಂ ಪ್ರೇರಿತವಾಗಿ ಸರ್ಕಾರಿ ದಾಖಲಾತಿಗಳ ಪರಿವೀಕ್ಷಣೆಯನ್ನು ಕೈಗೊಂಡಿದ್ದು, ಅಪೇಕ್ಷಿಸಿದ್ದ 7000 ಎಕರೆಗಳ ಪೈಕಿ ಕೇವಲ 3700 ಎಕರೆ ಸರ್ಕಾರಿ ಜಮೀನು ಲಭ್ಯವಿರುವುದಾಗಿ ಪ್ರತಿಪಾದಿಸಿರುತ್ತಾರೆ. ಇದರಿಂದಾಗಿ, ಯೋಜನೆಯ ಆರ್ಥಿಕ ಹೂಡಿಕೆ ಹಾಗೂ ಪ್ರತಿಫಲಗಳ ಮೇಲೆ ವ್ಯತಿರಿಕ್ತ ಪರಿಣಾಮಗಳಾಗುವುದರಿಂದ ಸರ್ಕಾರಿ ಜಮೀನನ್ನು ಗುತ್ತಿಗೆ ಆಧಾರದ ಮೇಲೆ ನೀಡುವ ಪ್ರಸ್ತಾವನೆಯನ್ನು ಪರಿಗಣಿಸುವಂತೆ ಕೋರಿರುತ್ತಾರೆ. ಈ ಗುತ್ತಿಗೆ ಆಧಾರದ ಮೇಲೆ ನೀಡಬಹುದಾದ ಜಮೀನು ರಸ್ತೆಗಳು ಹಾಗೂ ಸಾರ್ವಜನಿಕ ಉಪಯುಕ್ತತೆಯ ಪ್ರದೇಶಗಳಿಗೆ ಸೀಮಿತವಾಗಿರಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಈ ಕೋರಿಕೆಗೆ ಪೂರಕವಾಗಿ ಸಾಂಕೇತಿಕವಾಗಿ ಪ್ರತಿ ಎಕರೆಗೆ ವಾರ್ಷಿಕವಾಗಿ 10 ರೂ.ಗಳ ಲೀಸ್ ದರವನ್ನು 30 ವರ್ಷಗಳಿಗೆ ಇತ್ಯರ್ಥಪಡಿಸುವಂತೆ ಮನವಿ ಸಲ್ಲಿಸಿರುತ್ತಾರೆ.

ರಾಜ್ಯ ಸಚಿವ ಸಂಪುಟವು ಈ ಮನವಿಯನ್ನು ಪರಿಗಣಿಸಿ ದಿನಾಂಕ 07.10.1999ರ ಸರ್ಕಾರಿ ಆದೇಶದ ಮುಖಾಂತರ 5688 ಎಕರೆ ವಿಸ್ತೀರ್ಣದ ಜಮೀನನ್ನು ಗುತ್ತಿಗೆ ಆಧಾರದ ಮೇಲೆ ಕೆ.ಐ.ಎ.ಡಿ.ಬಿ.ಗೆ ಹಸ್ತಾಂತರಿಸಲು ನಿರ್ದೇಶಿಸಿರುವುದನ್ನು ಸಮಿತಿ ಗಮನಿಸಿದೆ. ಪ್ರಸ್ತಾವಿತ ಜಮೀನನ್ನು ವೇಗದ ಹೆದ್ದಾರಿ, ಪೆರಿಫೆರೆಲ್ ರಸ್ತೆ, ಲಿಂಕ್ ರಸ್ತೆ ಹಾಗೂ ಇಂಟರ್ ಛೇಂಜ್ ಅಭಿವೃದ್ಧಿಗಾಗಿ ಬಳಸುವಂತೆ ಸೂಚಿಸಲಾಗಿದೆ. ಸಾರ್ವಜನಿಕ ಉಪಯುಕ್ತತೆಯ ಪ್ರದೇಶವನ್ನೂ ಸಹ ಗುತ್ತಿಗೆ ಜಮೀನಿನ ವ್ಯಾಪ್ತಿಗೆ ಒಳಪಡಿಸಲಾಗಿದೆ. ಈ ಷರತ್ತುಗಳನ್ನು ಅವಲೋಕಿಸಿದಾಗ ಮೂಲಭೂತವಾಗಿ ಸರ್ಕಾರಕ್ಕೆ ನಿರೂಪಿತ 30 ವರ್ಷಗಳ ಅವಧಿಯ ನಂತರ ಹಿಂತಿರುಗಿಸಬೇಕಾದ ಜಮೀನಿಗೆ ಈ ಆದೇಶ ಅನ್ವಯಿಸುವುದು ಸಮಿತಿಗೆ ಸ್ಪಷ್ಟವಾಗಿದೆ. ವಾಸ್ತವಿಕವಾಗಿ 10 ವರ್ಷಗಳ ನಿರ್ಮಾಣ ಅವಧಿ ಹಾಗೂ 30 ವರ್ಷಗಳ ಗುತ್ತಿಗೆ ಅವಧಿ ಅಂದರೆ ಕ್ರೋಢೀಕೃತವಾಗಿ 40 ವರ್ಷಗಳ ನಂತರ ಈ ಜಮೀನನ್ನು ಸರ್ಕಾರಕ್ಕೆ ಹಿಂತಿರುಗಿಸಬೇಕಾಗುವುದು. ನೈಸೆಲ್/ನೀಸೆಲ್ ಸಂಸ್ಥೆ ಸರ್ಕಾರಕ್ಕೆ ಸಲ್ಲಿಸಬೇಕಾದ ಗುತ್ತಿಗೆ ಮೊತ್ತಕ್ಕೆ ಅನ್ವಯಿಸುವಂತೆ ಪ್ರಸ್ತಾವಿನ ದಿನಾಂಕದ ಆದೇಶದಲ್ಲಿ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಆದೇಶದಲ್ಲಿ ನಿರ್ಧಿಷ್ಟವಾಗಿ ಲೆಕ್ಕ ಶೀರ್ಷಿಕೆಯನ್ನೂ ಸಹ ನಮೂದಿಸಲಾಗಿದೆ. *ಆದಾಗ್ಯೂ, ಸಮಿತಿಯ ಸಭೆಯಲ್ಲಿ ಇಲಾಖಾ ಸಾಕ್ಷಿಗಳು ನೀಡಿರುವ ಹೇಳಿಕೆಯ ಅನುಗುಣವಾಗಿ ಈ ಮೊತ್ತವನ್ನು ಖಾಸಗಿ ಪಾಲುದಾರರು ನಿರೂಪಿತ ಲೆಕ್ಕ ಶೀರ್ಷಿಕೆಗಳಿಗೆ ಪಾವತಿಸಿರುವ ಬಗ್ಗೆ ನಿರ್ಧಿಷ್ಟ ಮಾಹಿತಿ ಲಭ್ಯವಿರುವುದಿಲ್ಲ. ಈ ವೈಫಲ್ಯತೆ ಸರ್ಕಾರಿ ಆದೇಶದ ನೇರ ಉಲ್ಲಂಘನೆ ಎಂದು ಸಮಿತಿ ತೀರ್ಮಾನಿಸುತ್ತದೆ.* ಪ್ರಥಮ ಸ್ತರದಲ್ಲಿ ಅವಶ್ಯಕವಿರುವ 7000 ಎಕರೆಗಳ ವಿರುದ್ಧ ಕೇವಲ 3700 ಎಕರೆ ಜಮೀನು ಲಭ್ಯವಿರುವುದಾಗಿ ಖಾಸಗಿ ಪಾಲುದಾರರು ಮನವಿ ಸಲ್ಲಿಸಿರುತ್ತಾರೆ. ಈ ಕೊರತೆಯನ್ನು ಸರಿದೂಗಿಸಲು ಸರ್ಕಾರಿ ಜಮೀನಿನ ಅವಲಭ್ಯತೆಯ ಆಧಾರದ ಮೇಲೆ ಗುತ್ತಿಗೆ ಆಧಾರದ ಮೇಲೆ ಜಮೀನನ್ನು ನೀಡುವ ಬಗ್ಗೆ ಪ್ರತಿಪಾದಿಸಿರುತ್ತಾರೆ. ವಾಸ್ತವಿಕವಾಗಿ ಕ್ರಿಯಾ

ಒಪ್ಪಂದದ ಅನುಚ್ಛೇಧ 5.1.2.2. ರ ಅನುಗುಣವಾಗಿ ಖಾಸಗಿ ಪಾಲುದಾರರು ಪರಸ್ಪರ ಸಹಮತಿಯೊಂದಿಗೆ ನಿರ್ಧರಿಸಲಾದ ಮಾರುಕಟ್ಟೆ ದರಗಳಿಗೆ ಅನುಗುಣವಾಗಿ ಖರೀದಿಸಬೇಕಾಗುವುದು. ಈ ಸಾಧ್ಯತೆಯನ್ನು ಹಾದಿ ತಪ್ಪಿಸುವ ಉದ್ದೇಶದಿಂದ ಗುತ್ತಿಗೆ ಆಧಾರದ ಮೇಲೆ ಜಮೀನನ್ನು ಕೋರಿದ್ದಾರೆ. ಖಾಸಗಿ ಪಾಲುದಾರರ ಅಂಕಿ ಅಂಶಗಳ ಅನುಗುಣವಾಗಿ ಕೊರತೆ 3300 ಎಕರೆಗಳಿದ್ದಾಗ್ಯೂ ಸಹ ಸರ್ಕಾರವು 5000 ಎಕರೆಗಳನ್ನು ಸಂಪೂರ್ಣವಾಗಿ ಹಸ್ತಾಂತರಿಸಿರುವುದನ್ನು ಸಮಿತಿ ಗಮನಿಸಿದೆ. ಪ್ರಥಮ ಸ್ತರದಲ್ಲಿ 7000 ಎಕರೆ ಸರ್ಕಾರಿ ಜಮೀನಿನ ಅವಶ್ಯಕತೆಯ ಬಗ್ಗೆ ಭಾರತ್ ಫೋರ್ಜ್ ಲಿಮಿಟೆಡ್ ಆಗಲೀ ಅಥವಾ ಕ್ರಿಯಾ ಒಪ್ಪಂದದ ಅನುಚ್ಛೇಧ 1 ರಲ್ಲಾಗಲೀ ನಮೂದಿಸಿರುವುದಿಲ್ಲ. ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನ ಕಂಡಿಕೆ 51 ರ ಅನುಗುಣವಾಗಿ ಸರ್ಕಾರಿ ಜಮೀನಿನ ಅವಶ್ಯಕತೆ 6956 ಎಕರೆಗಳಾಗಿದ್ದು, ಇದನ್ನು ತದನಂತರ 5688 ಎಕರೆಗಳಿಗೆ ಇಳಿಮುಖಗೊಳಿಸಲಾಗಿದೆ. ಖಾಸಗಿ ಪಾಲುದಾರರು ಮಾರುಕಟ್ಟೆ ದರಗಳಲ್ಲಿ ಸಂಪೂರ್ಣ ಪರಿಹಾರವನ್ನು ಪಾವತಿಸುವ ಷರತ್ತನ್ನು ಉಲ್ಲಂಘಿಸುವ ಸ್ಪಷ್ಟ ಹಾಗೂ ನಿರ್ಧಿಷ್ಟ ಉದ್ದೇಶಗಳೊಂದಿಗೆ ಸರ್ಕಾರಕ್ಕೆ ಹಾದಿ ತಪ್ಪಿಸಿರುವುದು ಮೇಲ್ನೋಟಕ್ಕೆ ಸಮಿತಿಗೆ ಸ್ಪಷ್ಟವಾಗಿದೆ. ಈ ಬೆಳವಣಿಗೆಯಿಂದಾಗಿ ಮಾರುಕಟ್ಟೆ ದರಗಳಲ್ಲಿ ಖರೀದಿಯ ಬದಲು ಗುತ್ತಿಗೆ ಆಧಾರದ ಮೇಲೆ ಕನಿಷ್ಠ ಪ್ರಮಾಣದ ಗುತ್ತಿಗೆ ಮೊತ್ತವನ್ನು ಪಾವತಿಸಿ ಖಾಸಗಿ ಪಾಲುದಾರರು ಕ್ರಿಯಾ ಒಪ್ಪಂದದಲ್ಲಿ ಪ್ರತಿಪಾದಿಸದೇ ಇರುವ ಅನುದ್ದೇಶಿತ ಲಾಭವನ್ನು ಪಡೆದಿದೆ ಎಂದು ಸಮಿತಿ ತೀರ್ಮಾನಿಸುತ್ತದೆ.

**ಕ್ರಿಯಾ ಒಪ್ಪಂದದ ಅನುಚ್ಛೇಧ 5.1.2.2ರ ಅನುಗುಣವಾಗಿ ಸರ್ಕಾರಿ ಜಮೀನನ್ನು ಪರಸ್ಪರ ಸಹಮತಿಸುವ ದರಗಳಲ್ಲಿ ಖಾಸಗಿ ಪಾಲುದಾರರಿಗೆ ಮಾರಾಟ ಮಾಡಬೇಕಾಗುವುದು. ಈ ಷರತ್ತನ್ನು ಸಡಿಲಗೊಳಿಸಿ ಸರ್ಕಾರಿ ಜಮೀನನ್ನು 40 ವರ್ಷಗಳ ಗುತ್ತಿಗೆಗೆ ಪ್ರತಿ ಎಕರೆಗೆ ವಾರ್ಷಿಕವಾಗಿ 10 ರೂ.ಗಳಂತೆ ನಿಗದಿಪಡಿಸಲಾಗಿದೆ. ಖಾಸಗಿ ಪಾಲುದಾರರ ಮನವಿಯನ್ನು ಪರಿಗಣಿಸಿ ಅದರ ಅನುಗುಣವಾಗಿ ಈ ನಿರ್ಧಾರವನ್ನು ಕೈಗೊಳ್ಳಲಾಗಿದೆ. ಯೋಜನೆಯ ಹೂಡಿಕೆಯ ಮೇಲ ಪ್ರತಿಫಲವನ್ನು ಕ್ರಿಯಾ ಒಪ್ಪಂದದ ಅನುಗುಣವಾಗಿ ಖಾಸಗಿ ಪಾಲುದಾರರು ಭರಿಸಬೇಕಾಗಿರುವ ವೆಚ್ಚದ ಹಿನ್ನಲೆಯಲ್ಲಿ ಇತ್ಯರ್ಥಪಡಿಸುವುದು ಸಾಮಾನ್ಯ ಜ್ಞಾನವಾಗಿದೆ. ಕ್ರಿಯಾ ಒಪ್ಪಂದವನ್ನು ಸಡಿಲಗೊಳಿಸಿ ಗುತ್ತಿಗೆ ಆಧಾರದ ಮೇಲೆ ಸರ್ಕಾರಿ ಜಮೀನನ್ನು ನೀಡಿರುವುದರಿಂದ ಮೂಲ ಒಪ್ಪಂದದಲ್ಲಿ ಪ್ರತಿಪಾದಿಸಿರುವ ಐ.ಆರ್.ಆರ್. ದರಗಳು ವಿಭಿನ್ನವಾಗುತ್ತದೆ. ಆದುದರಿಂದ ಈ ಅನುದ್ದೇಶಿತ ಲಾಭವನ್ನು ಮೌಲ್ಯಮಾಪನ ಮಾಡಬೇಕೆಂದು ಸಮಿತಿಯು ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತದೆ.**

### XV. *ಅನುಚ್ಛೇಧ 5.1.2.2 – ಸರ್ಕಾರಿ ಜಮೀನಿನ ಖರೀದಿ ದರಗಳನ್ನು ನಿಗದಿಪಡಿಸುವ ಬಗ್ಗೆ.*

ಕಂದಾಯ ಇಲಾಖೆಯು ದಿನಾಂಕ 21.01.2001 ರ ಆದೇಶದ ಮುಖಾಂತರ 5 ಪಟ್ಟಣಗಳಲ್ಲಿರುವ ಸರ್ಕಾರಿ ಜಮೀನುಗಳನ್ನು ಯೋಜನಾ ಸಂಸ್ಥೆಗೆ ಮಾರಾಟ ಮಾಡಲು ಆದೇಶ ಜಾರಿಗೊಳಿಸಿರುತ್ತದೆ. ದಿನಾಂಕ 07.10.1999ರ ಸರ್ಕಾರಿ ಆದೇಶದ ಅನುಗುಣವಾಗಿ ಟೋಲ್ ರಸ್ತೆಯಲ್ಲಿ ಬರುವ ಸರ್ಕಾರಿ ಜಮೀನನ್ನು ಗುತ್ತಿಗೆಯ ಆಧಾರದ ಮೇಲೆ ನೀಡಬಹುದಾಗಿದೆ. ಪರಿಹಾರಕ್ಕೆ ಸಂಬಂಧಿಸಿದಂತೆ ಜಮೀನಿನ ಬಳಕೆಯ ಪ್ರವರ್ಗದ ಆಧಾರದ ಮೇಲೆ ಈ ಕೆಳಕಂಡಂತೆ ನಿರ್ಧಾರಗಳನ್ನು ಕೈಗೊಳ್ಳಲಾಗಿದೆ:

"ಸರ್ಕಾರಿ ಆದೇಶ ಸಂಖ್ಯೆ ಪಿ.ಡಬ್ಲ್ಯೂ.ಡಿ./155/ಸಿ.ಆರ್.ಎಂ./1995 ದಿನಾಂಕ 07.10.1999 ಅನುಗುಣವಾಗಿ ಕೆ.ಐ.ಎ.ಡಿ.ಬಿ. ಸಂಸ್ಥೆಯ ಮುಖಾಂತರ ವಾರ್ಷಿಕವಾಗಿ ಪ್ರತಿ ಎಕರೆಗೆ 10 ರೂ.ಗಳ

ದರದಲ್ಲಿ 30 ವರ್ಷಗಳ ಅವಧಿಗೆ ಗುತ್ತಿಗೆಗೆ ನೈಸೆಲ್ ಸಂಸ್ಥೆಗೆ ನೀಡುವ ಬಗ್ಗೆ ಪ್ರತಿಪಾದಿಸಲಾಗಿದೆ. ಈ 30 ವರ್ಷಗಳ ಅವಧಿಯನ್ನು ಫೈನಾನ್ಷಿಯಲ್ ಕ್ಲೋಷರ್ ಆದ ದಿನಾಂಕದಿಂದ ಅಂದರೆ 29.03.2004 ರಿಂದ ಪರಿಗಣಿಸಬೇಕಾಗುವುದು. ಮುಂದುವರಿದಂತೆ ದಿನಾಂಕ 18.06.2001 ರ ಸಮಸಂಖ್ಯೆಯ ಸೇರ್ಪಡೆ ಆದೇಶದ ಮುಖಾಂತರ ವಾಣಿಜ್ಯ ಬಳಕೆ ಅಥವಾ ನಗರ ಸಮುಚ್ಛಯಗಳ ಅಭಿವೃದ್ಧಿಗಾಗಿ ಬಳಸಲಾಗುವ ಜಮೀನನ್ನು 1999-2000 ದಲ್ಲಿ ಚಾಲ್ತಿಯಲ್ಲಿರುವ ಮಾರ್ಗಸೂಚಿ ದರಗಳ ಆಧಾರದ ಮೇಲೆ ಹಸ್ತಾಂತರಿಸಲು ಆದೇಶಿಸಲಾಗಿದೆ. ಪ್ರಸ್ತಾವಿತ ಸರ್ಕಾರಿ ಆದೇಶದ ಅನುಗುಣವಾಗಿ ಖಾಸಗಿ ಪಾಲುದಾರರು ಫೈನಾನ್ಷಿಯಲ್ ಕ್ಲೋಷರ್ ಆದ 10 ವರ್ಷದೊಳಗಾಗಿ ಈ ಜಮೀನನ್ನು ಖರೀದಿಸಬೇಕಾಗುವುದು. ಆದರೆ ವಾಸ್ತವಿಕವಾಗಿ ನಗರ ಸಮುಚ್ಛಯಗಳ ಅಭಿವೃದ್ಧಿಯಲ್ಲಿ ಈವರೆವಿಗೂ ಯಾವುದೇ ಭೌತಿಕ ಪ್ರಗತಿಯನ್ನು ಸಾಧಿಸಿರುವುದಿಲ್ಲ. ಆದುದರಿಂದ ಈ ಷರತ್ತಿನ ಉಲ್ಲಂಘನೆಯಾಗಿದೆ. ಸಮಿತಿಗೆ ಲಭ್ಯವಿರುವ ಮಾಹಿತಿಗೆ ಅನುಗುಣವಾಗಿ ಸುಮಾರು 5000 ಎಕರೆಗಳನ್ನು ಈವರೆವಿಗೂ ಖಾಸಗಿ ಪಾಲುದಾರರಿಗೆ ಹಸ್ತಾಂತರಿಸಿದ್ದು, ಸ್ವಾಧೀನವನ್ನು ಸಹ ನೀಡಲಾಗಿದೆ. ತತ್ಸಂಬಂಧವಾಗಿ ಖಾಸಗಿ ಪಾಲುದಾರರು ಆದೇಶದಲ್ಲಿ ಸೂಚಿಸಿರುವ ಲೆಕ್ಕ ಶೀರ್ಷಿಕೆಗೆ ನಿರೂಪಿತ ದರಗಳಲ್ಲಿ 20 ಲಕ್ಷ ರೂ.ಗಳನ್ನು ಪಾವತಿಸಿರುವ ಬಗ್ಗೆ ನಿರ್ಧಿಷ್ಟ ದೃಢೀಕರಣ ಇರುವುದಿಲ್ಲ. ಸಮಿತಿಯ ಸಭೆಯಲ್ಲಿ ಲೋಕೋಪಯೋಗಿ ಇಲಾಖೆ ಹಾಗೂ ಕೆ.ಐ.ಎ.ಡಿ.ಬಿ. ಸಂಸ್ಥೆ ಈ ಪಾವತಿಯ ಬಗ್ಗೆ ಯಾವುದೇ ದಾಖಲೆಗಳು ಲಭ್ಯವಿಲ್ಲವೆಂದು ತಿಳಿಸಿರುತ್ತಾರೆ. ಈ ಪ್ರತಿಕ್ರಿಯೆಯನ್ನು ಸಮಿತಿ ತೀವ್ರವಾಗಿ ಖಂಡಿಸುತ್ತದೆ. ***ಸರ್ಕಾರಿ ಆದೇಶವನ್ನು ಜಮೀನಿನ ಹಸ್ತಾಂತರಿಸುವ ಪೂರ್ವದಲ್ಲಿ ಪಾಲಿಸುವಲ್ಲಿ ಲೋಕೋಪಯೋಗಿ ಇಲಾಖೆ ಹಾಗೂ ಕೆ.ಐ.ಎ.ಡಿ.ಬಿ. ಸಂಪೂರ್ಣವಾಗಿ ನಿರ್ಲಕ್ಷ್ಯತಾ ಧೋರಣೆಯನ್ನು ತಳೆದಿರುವುದು ಸಮಿತಿಗೆ ಸಾಬೀತಾಗಿದೆ. ಈ ಹಿನ್ನಲೆಯಲ್ಲಿ ಈ ಕೆಳಕಂಡ ಅಧಿಕಾರಿ/ಸಿಬ್ಬಂದಿ ವರ್ಗದವರ ವಿರುದ್ಧ ಕರ್ತವ್ಯ ಲೋಪದ ಆಧಾರದ ಮೇಲೆ ಕಠಿಣ ಶಿಸ್ತಿನ ಕ್ರಮ ಜರುಗಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.***

***ಮುಂದುವರಿದಂತೆ ಈ ವೈಫಲ್ಯತೆಯಿಂದ ನೈಸೆಲ್ ಸಂಸ್ಥೆಗೆ ಅನುದ್ದೇಶಿತ ಲಾಭವನ್ನು ನೀಡಿದಂತಾಗುತ್ತದೆ ಎಂದು ಸಮಿತಿಯು ತೀರ್ಮಾನಿಸುತ್ತದೆ. ಏಕೆಂದರೆ, ಕ್ರಿಯಾ ಒಪ್ಪಂದದ ಅನುಚ್ಛೇಧಗಳ ಪಾಲನೆಗಾಗಿ ಸರ್ಕಾರವು ಜಾರಿಗೊಳಿಸುವ ಆದೇಶವನ್ನು ಪಾಲಿಸುವುದು ಖಾಸಗಿ ಪಾಲುದಾರರ ಕರ್ತವ್ಯ ವೈಫಲ್ಯವೂ ಸಹ ಆಗಿರುತ್ತದೆ. ಈ ವೈಫಲ್ಯತೆಯಲ್ಲಿ ಖಾಸಗಿ ಪಾಲುದಾರರೂ ಸಹ ನಿರ್ಲಿಪ್ತ ಧೋರಣೆಯನ್ನು ತಳೆದಿರುವುದು ಸ್ಪಷ್ಟವಾಗಿದೆ. ವಾಸ್ತವಿಕವಾಗಿ ಸರ್ಕಾರಿ ಜಮೀನನ್ನು ವಿವಿಧ ಸ್ತರಗಳಲ್ಲಿ ಅಂದರೆ 2004 ರಿಂದ 2009ರವರೆಗೆ ಹಸ್ತಾಂತರಿಸಲಾಗಿದ್ದು, ಈ ಅವಧಿಗೆ ಅನ್ವಯಿಸುವಂತೆ ವಿಳಂಬಿತ ಅವಧಿಗೆ ಬಡ್ಡಿಯನ್ನು ವಿಧಿಸಿ, ಈ ಕೂಡಲೇ ಬಾಕಿ ಇರುವ ಮೊತ್ತವನ್ನು ವಸೂಲಾತಿ ಮಾಡಲು ಸರ್ಕಾರವು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.***

## XVI. ಅನುಚ್ಛೇಧ – 6.1 – ಟೋಲ್ ರಸ್ತೆಯ ನಿರ್ವಹಣೆಯ ಬಗ್ಗೆ

ಈ ಅನುಚ್ಛೇಧದ ಅನುಗುಣವಾಗಿ ಕ್ರಿಯಾ ಒಪ್ಪಂದದ ಹಿನ್ನೆಲೆಯಲ್ಲಿ ಅನುಷ್ಠಾನದ ವಿವಿಧ ಸ್ತರಗಳು ಕೆಳಕಂಡಂತಿರುತ್ತದೆ:

ಫೇಸ್-1 – ರಸ್ತೆಯಡಿಯಲ್ಲಿ ನೆಲಮಟ್ಟದಲ್ಲಿ 9.8 ಕಿ.ಮೀ. ಗಳ ಲಿಂಕ್ ರಸ್ತೆಯ ಅನುಷ್ಠಾನ ಹಾಗೂ ಪೆರಿಫರಲ್ ರಸ್ತೆಯ ದಕ್ಷಿಣ ಭಾಗದಲ್ಲಿ ಎಕ್ಸ್‌ಪ್ರೆಸ್ ಪಥವನ್ನು ಎಸ್.ಹೆಚ್.17ಕ್ಕೆ ಸೇರ್ಪಡೆ ಮಾಡುವ 3 ಕಿ.ಮೀ. ರಸ್ತೆಯ ಭಾಗ

**ಫೇಸ್-2 – ದಕ್ಷಿಣ ಭಾಗದ ಉಳಿದ 38 ಕಿ.ಮೀ. ಪೆರಿಫರಲ್ ರಸ್ತೆ ಮತ್ತು ಬೆಂಗಳೂರಿನಿಂದ ಬಿಡದಿಗೆ 13 ಕಿ.ಮೀ. ವೇಗದ ಹೆದ್ದಾರಿ.**

**ಫೇಸ್-3- ಬಿಡದಿಯಿಂದ ಚನ್ನಪಟ್ಟಣದ 24 ಕಿ.ಮೀ. ವೇಗದ ಹೆದ್ದಾರಿ**

**ಫೇಸ್ – 4 – ಚನ್ನಪಟ್ಟಣದಿಂದ ಶ್ರೀರಂಗಪಟ್ಟಣಕ್ಕೆ 69 ಕಿ.ಮೀ. ವೇಗದ ಹೆದ್ದಾರಿ**

**ಫೇಸ್-5 – ಮೈಸೂರಿನ ಬಳಿಯ ಸಂಪರ್ಕ ರಸ್ತೆ ಹಾಗೂ ಶ್ರೀರಂಗಪಟ್ಟಣದಿಂದ ಮೈಸೂರಿಗೆ 6 ಕಿ.ಮೀ. ವೇಗದ ಹೆದ್ದಾರಿ.**

**ಫೇಸ್-6 – ಮೈಸೂರಿನಿಂದ ಬೆಂಗಳೂರಿನ ಕೂಡು ರಸ್ತೆಯಲ್ಲಿ 3.1 ಕಿ.ಮೀ. ಉದ್ದದ ಮೇಲ್ಸೇತುವೆ ರಸ್ತೆ.**

ದಿನಾಂಕ 03.04.1997 ರಂದು ಅನುಷ್ಠಾನಗೊಳಿಸಲಾದ ಕ್ರಿಯಾ ಒಪ್ಪಂದದ ಅನುಗುಣವಾಗಿ ಪ್ರಸ್ತಾವಿತ ಸ್ತರಗಳಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಬೇಕಾಗುವುದು. ಆದರೆ ದಿನಾಂಕ 02.04.2002 ರಂದು ನೈಸೆಲ್ ಸಹಭಾಗಿತ್ವದಲ್ಲಿ ಸೃಜಿಸಲಾದ ನೀಸೆಲ್ ಸಂಸ್ಥೆ ಸೆಕ್ಷನ್ 'ಎ' ವ್ಯಾಪ್ತಿಯ ರಸ್ತೆಗಳನ್ನು ಎರಡು ಪಥದ ಡಾಂಬರೀಕೃತ ರಸ್ತೆಯಾಗಿ ಫೈನಾನ್ಷಿಯಲ್ ಕ್ಲೋಷರ್ ಆದ 2 ವರ್ಷಗಳಲ್ಲಿ ಸಂಪೂರ್ಣಗೊಳಿಸುವ ಬಗ್ಗೆ ಪ್ರಸ್ತಾವನೆಯನ್ನು ಸಲ್ಲಿಸಿರುವುದು ಸಮಿತಿಗೆ ದಾಖಲಾತಿಗಳಿಂದ ಮನದಟ್ಟಾಗಿದೆ. ಖಾಸಗಿ ಪಾಲುದಾರರು ಇದೇ ಸ್ತರದಲ್ಲಿ ವಾಸ್ತವಿಕವಾಗಿ ಅನುಷ್ಠಾನಗೊಳಿಸಬೇಕಾಗಿರುವ 4 ಪಥದ ರಸ್ತೆಗೆ ಅವಶ್ಯಕವಿರುವ ಪ್ರದೇಶದ ಸಮತಟ್ಟುಗೊಳಿಸುವಿಕೆ ಹಾಗೂ ಏರಿ ನಿರ್ಮಾಣವನ್ನು ಜಾರಿಗೊಳಿಸುವುದಾಗಿ ದೃಢೀಕರಿಸಿರುತ್ತಾರೆ. ಏತನ್ಮಧ್ಯೆ ಸೌಲಭ್ಯ ಕಲ್ಪಿಸಲಾಗಿರುವ 2 ಪಥಗಳಲ್ಲಿ ಸೆಟ್ಲಿಂಗ್ ಆದ ನಂತರ ಕಾಂಕ್ರೀಟ್ ರಸ್ತೆಯನ್ನು ನಿರ್ಮಾಣ ಮಾಡಿ, ಈ ಕಾಮಗಾರಿ ಸಂಪೂರ್ಣಗೊಂಡ ನಂತರ ತಾತ್ಕಾಲಿಕವಾಗಿ ಜಾರಿಗೊಳಿಸಲಾದ ಡಾಂಬರೀಕೃತ ರಸ್ತೆಯನ್ನು ಕಾಂಕ್ರೀಟ್ ರಸ್ತೆಯನ್ನಾಗಿ ಪರಿವರ್ತಿಸುವ ಪ್ರಸ್ತಾವನೆಯನ್ನು ಸಲ್ಲಿಸಿರುವುದನ್ನು ಸಮಿತಿಯು ಗಮನಿಸಿದೆ. ಸಂಪೂರ್ಣವಾಗಿ 4 ಪಥದ ರಸ್ತೆಯನ್ನು ಕ್ರೋಢೀಕೃತವಾಗಿ 8 ವರ್ಷಗಳ ಅವಧಿಯಲ್ಲಿ ಕಾಂಕ್ರೀಟ್ ರಸ್ತೆಯನ್ನಾಗಿ ಪರಿವರ್ತಿಸುವ ಬಗ್ಗೆ ಪ್ರತಿಪಾದಿಸಲಾಗಿದೆ. ಈ ಪ್ರಸ್ತಾವನೆಯನ್ನು ಈ ಕೆಳಗೆ ನಮೂದಿಸಿದ ಕಾರಣಗಳಿಂದಾಗಿ ಸಮರ್ಪಕ ಎಂದು ಖಾಸಗಿ ಪಾಲುದಾರರು ಪ್ರತಿಪಾದಿಸಿರುತ್ತಾರೆ:

1. ಸೆಕ್ಷನ್ 'ಎ' ವ್ಯಾಪ್ತಿಯಲ್ಲಿ ಕೇವಲ 2 ವರ್ಷದ ಅವಧಿಯಲ್ಲಿ ಸಂಚಾರ ಸೌಲಭ್ಯ ಸೃಜನೆಯಾಗಿ ಸೆಕ್ಷನ್ 'ಎ' ವ್ಯಾಪ್ತಿಯ ಸಂಪೂರ್ಣ ರಸ್ತೆ 6 ವರ್ಷದಲ್ಲಿ ಸಂಚಾರಕ್ಕೆ ಯೋಗ್ಯವಾಗಿರುತ್ತದೆ.
2. ಕ್ರಿಯಾ ಒಪ್ಪಂದದ ಅನುಗುಣವಾಗಿ ಫೇಸ್-1 ವ್ಯಾಪ್ತಿಯ 12.8 ಕಿ.ಮೀ. 4 ಪಥದ ಕಾಂಕ್ರೀಟ್ ರಸ್ತೆ 5 ವರ್ಷದ ಅವಧಿಯಲ್ಲಿ ಸಂಪೂರ್ಣಗೊಳ್ಳಬೇಕಾಗಿದ್ದು, ಇದರ ಬದಲಿಗೆ 62 ಕಿ.ಮೀ. ವ್ಯಾಪ್ತಿಯ ಸೆಕ್ಷನ್ 'ಎ' ಡಾಂಬರೀಕೃತ ರಸ್ತೆ 2 ವರ್ಷಗಳ ಅವಧಿಯೊಳಗೆ ಸಂಚಾರಕ್ಕೆ ಲಭ್ಯವಿರುತ್ತದೆ.

ಮೇಲ್ನೋಟಕ್ಕೆ ಪ್ರಸ್ತಾವನೆಗಳು ಸಂಚಾರ ಸೌಲಭ್ಯವನ್ನು ತ್ವರಿತವಾಗಿ ಒದಗಿಸುವ ಹಿತದೃಷ್ಟಿಯಿಂದ ಕೂಡಿದೆ ಎಂಬ ಅಭಿಪ್ರಾಯ ವ್ಯಕ್ತವಾಗಿದ್ದಾಗ್ಯೂ ಸಹ ಈ ಕೆಳಗೆ ವಿವರಿಸಿರುವ ಸಂದಿಗ್ಧತೆಗಳನ್ನು ಸಮಿತಿ ಗಮನಿಸಿದೆ:

1. ಮೂಲಭೂತವಾಗಿ ಪ್ರಸ್ತಾವನೆ ಯೋಜನಾ ತಾಂತ್ರಿಕ ವರದಿ ಹಾಗೂ ಕ್ರಿಯಾ ಒಪ್ಪಂದದ ಮಾನದಂಡಗಳಿಗೆ ವ್ಯತಿರಿಕ್ತವಾಗಿದೆ.
2. ಟೋಲ್ ರಿಯಾಯಿತಿ ಒಪ್ಪಂದದ ಅನುಗುಣವಾಗಿ 4 ಪಥದ ಕಾಂಕ್ರೀಟ್ ರಸ್ತೆ ನಿರ್ಮಾಣ ಅವಶ್ಯಕವಾಗಿದ್ದು, ಪ್ರಸ್ತಾವನೆ ಈ ಮಾನದಂಡಗಳಿಗೆ ವ್ಯತಿರಿಕ್ತವಾಗಿದೆ.
3. ಖಾಸಗಿ ಪಾಲುದಾರರು ಫೈನಾನ್ಷಿಯಲ್ ಕ್ಲೋಷರ್ ಸಾಧಿಸಲು ಐ.ಸಿ.ಐ.ಸಿ.ಐ. ಬ್ಯಾಂಕಿಗೆ 2 ಪಥದ ಡಾಂಬರೀಕೃತ ರಸ್ತೆಯ ಅನುಷ್ಠಾನದ ಪ್ರಸ್ತಾವನೆಯನ್ನು ಜಾರಿಗೊಳಿಸುವುದು ಪೂರ್ವಭಾವಿ ಅವಶ್ಯಕತೆ ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. ಏಕೆಂದರೆ, ಐ.ಸಿ.ಐ.ಸಿ.ಐ. ಸಂಸ್ಥೆ ಇದೇ ಸ್ವರೂಪದ ಕಂಫರ್ಟ್ ಲೆಟರ್ ಅನ್ನು ಸರ್ಕಾರದಿಂದ ಕೋರಿರುವುದು ದಾಖಲಾತಿಗಳಿಂದ ಸಮಿತಿಗೆ ಮನದಟ್ಟಾಗಿದೆ.

ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯ 6ನೇ ಅಧಿಕಾರದತ್ತ ಸಮಿತಿಯಲ್ಲಿ ಈ ಪ್ರಸ್ತಾವನೆಯ ಬಗ್ಗೆ ಚರ್ಚಿಸಿರುವುದು ದಾಖಲಾತಿಗಳಿಂದ ಸಮಿತಿಗೆ ವ್ಯಕ್ತವಾಗಿದೆ. ಪ್ರಸ್ತಾವಿತ ಸಭೆಯಲ್ಲಿ ಐ.ಸಿ.ಐ.ಸಿ.ಐ. ಬ್ಯಾಂಕ್ ಕೋರಿರುವ ಕಂಫರ್ಟ್ ಲೆಟರ್ ಬಗ್ಗೆ ಚರ್ಚಿಸಿದ್ದು, ತಾಂತ್ರಿಕ ವಿಷಯಗಳಿಗೆ ಸಂಬಂಧಿಸಿದಂತೆ 2 ಪಥದ ಡಾಂಬರೀಕೃತ ರಸ್ತೆಯನ್ನು ಪ್ರಥಮ ಸ್ತರದಲ್ಲಿ ಅನುಷ್ಠಾನಗೊಳಿಸಿರುವ ಬಗ್ಗೆ ತಾತ್ವಿಕವಾಗಿ ಸಹಮತಿಯನ್ನು ಸೂಚಿಸಲಾಗಿದೆ. ಆದಾಗ್ಯೂ, ಡಾಂಬರೀಕೃತ ರಸ್ತೆಯ ಸಂಚಾರದ ಆಧಾರದ ಮೇಲೆ ಟೋಲ್ ಸಂಗ್ರಹಣೆ ಮಾಡಬೇಕಾಗಿದ್ದು, ಕಾಂಕ್ರೀಟ್ ರಸ್ತೆಗಳ ದರಗಳಿಗೆ ಅನ್ವಯಿಸುವಂತೆ ದರಗಳನ್ನು ಮುಂದುವರೆಸಿರುವುದು ಕ್ರಿಯಾ ಒಪ್ಪಂದದ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ. ಆದುದರಿಂದ ಹೆಚ್ಚುವರಿ ದರಗಳಲ್ಲಿ ಕಾಂಕ್ರೀಟ್ ರಸ್ತೆಗಳಿಗೆ ಅನ್ವಯಿಸುವ ಟೋಲ್ ಸ್ವೀಕೃತಿಯನ್ನು ಯಥಾಸ್ಥಿತಿಯಾಗಿ ಮುಂದುವರೆಸುವ ಬಗ್ಗೆ ಸಚಿವ ಸಂಪುಟದ ಅನುಮೋದನೆ ಪಡೆಯಬೇಕಾಗಿದ್ದು, ಈ ಬಗ್ಗೆ ಎಲ್ಲಿಯೂ ಸ್ಪಷ್ಟ ಉಲ್ಲೇಖವಿರುವುದಿಲ್ಲ.

ಸಮಾನಾಂತರವಾಗಿ ಲೋಕೋಪಯೋಗಿ ಇಲಾಖೆ ಈ ಪ್ರಸ್ತಾವನೆಯ ಬಗ್ಗೆ ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ಸಮಿತಿ ಅವಲೋಕಿಸಿದೆ. ಪ್ರಮುಖ ಅಂಶಗಳು ಕೆಳಕಂಡಂತಿದೆ:

1. ಖಾಸಗಿ ಪಾಲುದಾರರು ಏರಿಯಾ ಸೆಟಲ್ ಮೆಂಟ್‌ಗಾಗಿ ಕಾಲಾವಕಾಶದ ಅವಶ್ಯಕವಿದೆ ಎಂದು ಪ್ರತಿಪಾದಿಸಿರುವುದನ್ನು ತಿರಸ್ಕರಿಸಲಾಗಿದೆ. 62 ಕಿ.ಮೀ. ಗಳ ಸೆಕ್ಷನ್ 'ಎ' ರಸ್ತೆಯಲ್ಲಿ ಕೇವಲ 4.5 ಕಿ.ಮೀ. ಉದ್ದದ ರಸ್ತೆ ಮೇಲ್ಮಟ್ಟದ ಏರಿಯಲ್ಲಿ ಹಾದು ಹೋಗುತ್ತಿದ್ದು, ಈ ಏರಿಯ ದೃಢೀಕರಣ ಪ್ರಮುಖ ಸಂದಿಗ್ಧತೆಯನ್ನು ಒಡ್ಡುವುದಿಲ್ಲ.
2. ಪುಣೆ-ಮುಂಬಯಿ ಹೆದ್ದಾರಿಯನ್ನು ಮೊದಲನೇ ಸ್ತರದಲ್ಲಿಯೇ 4 ಪಥದ ಕಾಂಕ್ರೀಟ್ ರಸ್ತೆಯನ್ನಾಗಿ ಅನುಷ್ಠಾನಗೊಳಿಸಲಾಗಿದೆ. ಅಂದರೆ ಖಾಸಗಿ ಪಾಲುದಾರರು ಪ್ರತಿಪಾದಿಸಿರುವಂತೆ ಏರಿಯ ದೃಢೀಕರಣ ಅಥವಾ ಕನ್ಸಾಲಿಡೇಷನ್ ಸಲುವಾಗಿ ವಿಶಿಷ್ಟ ಕಾಲಾವಕಾಶದ ಅವಶ್ಯಕತೆ ಇರುವುದಿಲ್ಲ.
3. ಕಾಂಕ್ರೀಟ್ ರಸ್ತೆ ವೇಗದ ಹೆದ್ದಾರಿಗಳಿಗೆ ಅತ್ಯವಶ್ಯಕವಾಗಿದ್ದು, ಸುಲಲಿತ ಅಥವಾ ಸುಖಕರ ಪ್ರಯಾಣಕ್ಕೆ ಅನುಕೂಲವಾಗಿರುತ್ತದೆ. ನಿರ್ವಹಣಾ ವೆಚ್ಚವೂ ಸಹ ಡಾಂಬರೀಕೃತ ರಸ್ತೆಗೆ ಹೋಲಿಸಿದಲ್ಲಿ ಕನಿಷ್ಠ ಪ್ರಮಾಣದಲ್ಲಿರುತ್ತದೆ.
4. ಕ್ರಿಯಾ ಒಪ್ಪಂದದ ಅನುಗುಣವಾಗಿ ಹಾಗೂ ಟೋಲ್ ರಿಯಾಯಿತಿ ಒಪ್ಪಂದದ ಅನುಗುಣವಾಗಿ ಡಾಂಬರೀಕೃತ ರಸ್ತೆಯ ನಿರ್ಮಾಣಕ್ಕೆ ಅವಕಾಶವನ್ನು ಕಲ್ಪಿಸಲಾಗಿರುವುದಿಲ್ಲ. ಖಾಸಗಿ ಪಾಲುದಾರರು 4 ಪಥದ ಕಾಂಕ್ರೀಟ್ ರಸ್ತೆ ಬಳಕೆಗೆ ಟೋಲನ್ನು ಸಂಗ್ರಹಿಸಬಹುದಾಗಿದೆ. ಈ

ಹಿನ್ನೆಲೆಯಲ್ಲಿ ಈ ಪ್ರಸ್ತಾವನೆಯು ಕ್ರಿಯಾ ಒಪ್ಪಂದದ ಸ್ಪಷ್ಟ ಹಾಗೂ ನೇರ ಉಲ್ಲಂಘನೆಯಾಗುತ್ತದೆ.

ಮೇಲೆ ಉಲ್ಲೇಖಿಸಿರುವ ಅಂಶಗಳ ಹಿನ್ನೆಲೆಯಲ್ಲಿ ದಿನಾಂಕ 09.08.2002 ರಂದು ಟೋಲ್ ದರಗಳನ್ನು ಕಾನೂನು ಇಲಾಖೆಯ ಸಹಮತಿಯೊಂದಿಗೆ ಪರಿಷ್ಕರಿಸುವ ಬಗ್ಗೆ ಪ್ರತಿಪಾದಿಸಲಾಗಿದೆ. ಪ್ರಮುಖವಾಗಿ ತಾಂತ್ರಿಕ ಮಾನದಂಡಗಳ ಮಾಪನಗಳನ್ನು ಇಳಿಮುಖಗೊಳಿಸಿರುವ ಹಿನ್ನೆಲೆಯಲ್ಲಿ ಇದೇ ಅನುಪಾತದಲ್ಲಿ ಟೋಲ್ ದರಗಳನ್ನು ಪರಿಷ್ಕರಿಸುವ ಬಗ್ಗೆ ಪ್ರತಿಪಾದಿಸಲಾಗಿದೆ.

ಸಮಿತಿಗೆ ಸಲ್ಲಿಸಲಾಗಿರುವ ದಾಖಲಾತಿಗಳನ್ನು ಅವಲೋಕಿಸಿದಾಗ ದಿನಾಂಕ 21.08.2002 ರಂದು ಕಾನೂನು ಇಲಾಖೆ, ಅಭಿಪ್ರಾಯ-2, ಉಪಕಾರ್ಯದರ್ಶಿಯವರು ಪರಿಷ್ಕೃತ ಒಪ್ಪಂದ ಕಡತದಲ್ಲಿ ಲಭ್ಯವಿಲ್ಲದೇ ಇರುವುದರಿಂದ ಸಹಮತಿಯ ಪ್ರಸಂಗ ಉದ್ಭವಿಸುವುದಿಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿರುವುದನ್ನು ಸಮಿತಿ ಗಮನಿಸಿದೆ. ಇದಕ್ಕೆ ಪೂರಕವಾಗಿ ಪರಿಷ್ಕೃತ ಒಪ್ಪಂದಕ್ಕೆ ಸಚಿವ ಸಂಪುಟದ ಅನುಮೋದನೆ ಅವಶ್ಯಕ ಎಂಬ ಅಭಿಪ್ರಾಯ ವ್ಯಕ್ತಪಡಿಸಲಾಗಿದೆ.

ತದನಂತರದ ಬೆಳವಣಿಗೆಯಲ್ಲಿ ದಿನಾಂಕ 26.08.2002 ರಂದು ಲೋಕೋಪಯೋಗಿ ಇಲಾಖೆಯ ಸನ್ಮಾನ್ಯ ಸಚಿವರ ಉಪಸ್ಥಿತಿಯಲ್ಲಿ ನಡೆಸಲಾದ ಪರಿವೀಕ್ಷಣಾ ಸಭೆಯಲ್ಲಿ ಈ ಕೆಳಕಂಡ ಅಂಶಗಳನ್ನು ಪರಿಗಣಿಸಲಾಗಿದೆ:

1. ಯೋಜನಾ ಅನುಷ್ಠಾನದ ಮಾನದಂಡಗಳನ್ನು ಪರಿಷ್ಕರಿಸಿ ಕ್ರಿಯಾ ಒಪ್ಪಂದವನ್ನು ಪರಿಷ್ಕರಿಸಿದಲ್ಲಿ ಈ ಸ್ತರದಲ್ಲಿ ಯೋಜನೆಯ ಆರ್ಥಿಕ ಸ್ವರೂಪವೂ ಸಹ ಬದಲಾಗುವುದರಿಂದ ಈ ಅಂಶವನ್ನು ಪರಿಗಣಿಸಬೇಕು ಎಂದು 26.08.2002 ರಂದು ನೈಸೆಲ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರು ಸಲ್ಲಿಸಿರುವ ಮನವಿಯ ಬಗ್ಗೆ ಚರ್ಚಿಸಲಾಗಿದೆ.
2. ವ್ಯವಸ್ಥಾಪಕ ನಿರ್ದೇಶಕರು, ನೈಸೆಲ್ ಸಂಸ್ಥೆ ಇವರು ಚಾಲ್ತಿಯಲ್ಲಿರುವ ಹೆದ್ದಾರಿ ಅಧಿನಿಯಮಗಳ ಅಡಿಯಲ್ಲಿ ವಿಧಿಸಬಹುದಾದ ಟೋಲ್ ದರಗಳು, ಹೂಡಿಕೆಯ ಸ್ವರೂಪ, ಬಡ್ಡಿಯ ಬಾಧ್ಯತೆ, ನಿರ್ವಹಣಾ ವೆಚ್ಚ, ವಾಹನ ಸಂಚಾರದ ದಟ್ಟಣೆ ಇತ್ಯಾದಿಗಳ ಮೇಲೆ ನಿರ್ಧರಿಸಬೇಕಾಗಿದ್ದು, ಲೇನ್‌ಗಳ ಆಧಾರದ ಮೇಲಲ್ಲ ಎಂಬ ವಾದವನ್ನು ಮಂಡಿಸಿದ್ದು, ಈ ಅಂಶಗಳನ್ನು ಪರಿಗಣಿಸಲಾಗಿದೆ.
3. ಆರ್ಥಿಕ ಇಲಾಖೆಯು ಕ್ರಿಯಾ ಒಪ್ಪಂದವನ್ನು ಪರಿಷ್ಕರಿಸುವ ಅವಶ್ಯಕತೆ ಇದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾಗ್ಯೂ ಸಹ ಆಡಳಿತಾತ್ಮಕ ಇಲಾಖೆ ಅಂದರೆ ಲೋಕೋಪಯೋಗಿ ಇಲಾಖೆಯು ಈ ಪ್ರಸ್ತಾವನೆಯನ್ನು ಬೆಂಬಲಿಸಿರುವುದಿಲ್ಲ ಎಂದು ಉಲ್ಲೇಖಿಸಲಾಗಿದೆ. ಏಕೆಂದರೆ, ಅಂತಿಮವಾಗಿ ಕ್ರಿಯಾ ಒಪ್ಪಂದದಲ್ಲಿ ನಮೂದಿಸಲಾಗಿರುವ 8 ವರ್ಷಗಳ ಅವಧಿಯಲ್ಲಿ 4 ಪಥದ ಕಾಂಕ್ರೀಟ್ ರಸ್ತೆ ನಿರ್ಮಿಸಲು ನೈಸೆಲ್ ಬದ್ಧವಾಗಿರುವ ಹಿನ್ನೆಲೆಯಲ್ಲಿ ತಾಂತ್ರಿಕ ಮಾನದಂಡಗಳು ಇಳಿಮುಖಗೊಂಡಿಲ್ಲ ಎಂದು ಪ್ರತಿಪಾದಿಸಲಾಗಿದೆ. ಪ್ರಸ್ತಾವಿತ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಕರಡು ಸಂಪುಟ ಟಿಪ್ಪಣಿಯನ್ನು ಸಚಿವ ಸಂಪುಟದ ಅನುಮೋದನೆಗಾಗಿ ಸಿದ್ಧಪಡಿಸಿರುವುದು ದಾಖಲಾತಿಗಳಿಂದ ಸಮಿತಿಗೆ ಸ್ಪಷ್ಟವಾಗಿದೆ. ವಿಪರ್ಯಾಸವೆಂದರೆ, ಸರ್ಕಾರದ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ಇವರು ದಿನಾಂಕ 08.07.2002 ರಂದು ಈ ಕರಡನ್ನು ಅನುಮೋದಿಸಿದ್ದಾರೆ ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. ವಾಸ್ತವಿಕವಾಗಿ ನೈಸೆಲ್ ಸಂಸ್ಥೆಯು 26.08.2002 ರಂದು ಈ ಬದಲಾವಣೆಗೆ ಸಂಬಂಧಿಸಿದಂತೆ ಪ್ರಸ್ತಾವನೆಗಳನ್ನು ಸಲ್ಲಿಸಿದ್ದು, ಅದೇ ದಿನಾಂಕದಂದು

ಲೋಕೋಪಯೋಗಿ ಸಚಿವರು ಪರಿವೀಕ್ಷಣಾ ಸಭೆಯಲ್ಲಿ ಈ ಅಂಶಗಳನ್ನು ಚರ್ಚಿಸಿರುತ್ತಾರೆ. ಅಂದರೆ, ಈ ಚರ್ಚೆಯ ಒಂದು ತಿಂಗಳ ಮುಂಚಿತವಾಗಿಯೇ ದಿನಾಂಕ 08.07.2002 ರಂದು ಕರಡು ಸಂಪುಟ ಟಿಪ್ಪಣಿ ಸಿದ್ಧವಾಗಿರುವುದು ದಾಖಲಾತಿಗಳಿಂದ ಸ್ಪಷ್ಟವಾಗಿದೆ. ಈ ಬೆಳವಣಿಗೆಯನ್ನು ಗಮನಿಸಿದಾಗ ಆಡಳಿತಾತ್ಮಕ ಇಲಾಖೆಯು ಪೂರ್ವಭಾವಿಯಾಗಿ ಹಾಗೂ ಅಧಿಕೃತ ಅನುಮೋದನೆ ಸ್ವೀಕೃತವಾಗುವ ಮುಂಚಿತವಾಗಿಯೇ ಈ ಪ್ರಸ್ತಾವನೆಯನ್ನು ಖಾಸಗಿ ಪಾಲುದಾರರ ಪರವಾಗಿ ಇತ್ಯರ್ಥಗೊಳಿಸಲು ನಿರ್ಧಾರ ಕೈಗೊಂಡಿರುವುದು ಸಮಿತಿಗೆ ದಾಖಲಾತಿಗಳಿಂದ ಸ್ಪಷ್ಟವಾಗಿದೆ. ಪ್ರಸ್ತಾವಿತ ಕರಡು ಟಿಪ್ಪಣಿಯಲ್ಲಿ ಡಾಂಬರೀಕೃತ ರಸ್ತೆಯ ನಿರ್ಮಾಣ ಹಾಗೂ ಡಾಂಬರೀಕೃತ ರಸ್ತೆಯ ಆಧಾರದ ಮೇಲೆ ಟೋಲ್ ಸಂಗ್ರಹಣೆ ಇತ್ಯಾದಿಗಳ ಬಗ್ಗೆ ಪ್ರತಿಪಾದಿಸಲಾಗಿದೆ. ಐ.ಸಿ.ಐ.ಸಿ.ಐ. ಸಂಸ್ಥೆಗೆ ಅವರ ಕೋರಿಕೆಯ ಅನುಗುಣವಾಗಿ 4 ಪಥದ ಡಾಂಬರೀಕೃತ ರಸ್ತೆಯನ್ನು ಅನುಷ್ಠಾನಗೊಳಿಸಲು ಸಹಮತಿ ಸೂಚಿಸಿರುವ ಷರತ್ತನ್ನು ಒಳಗೊಂಡಂತೆ ಕಂಫರ್ಟ್ ಲೆಟರ್ ನೀಡುವ ಬಗ್ಗೆ ಕರಡು ಟಿಪ್ಪಣಿಯಲ್ಲಿ ಪ್ರತಿಪಾದಿಸಲಾಗಿದೆ. ಅಂತಿಮವಾಗಿ ದಿನಾಂಕ 04.11.2002 ರಂದು ಸಚಿವ ಸಂಪುಟವು ಈ ಪ್ರಸ್ತಾವನೆಗೆ ಅನುಮೋದನೆ ನೀಡಿರುವುದು ದಾಖಲಾತಿಗಳಿಂದ ವ್ಯಕ್ತವಾಗುತ್ತದೆ.

***ಮೇಲೆ ಪ್ರತಿಪಾದಿಸಿರುವ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಸಮಿತಿಯು ಈ ಕೆಳಕಂಡಂತೆ ವಿಶ್ಲೇಷಣೆ ಹಾಗೂ ಶಿಫಾರಸ್ಸುಗಳನ್ನು ಮಾಡುತ್ತದೆ:***

1. **ನೈಸೆಲ್/ನೀಸಲ್ ಸಂಸ್ಥೆಯು ಪೆರಿಫೆರಲ್ ರಸ್ತೆಯ 62 ಕಿ.ಮೀ. ವ್ಯಾಪ್ತಿಯ ಕಾಮಗಾರಿಗಳನ್ನು ಫೈನಾನ್ಷಿಯಲ್ ಕ್ಲೋಷರ್ ಸಾಧಿಸಿದ 8 ವರ್ಷಗಳ ಅವಧಿಯೊಳಗಾಗಿ ಸಂಪೂರ್ಣಗೊಳಿಸಬೇಕಾಗುತ್ತದೆ. ಫೈನಾನ್ಷಿಯಲ್ ಕ್ಲೋಷರ್ ದಾಖಲಾತಿಗಳನ್ನು 29.03.2004 ರಂದು ಜಾರಿಗೊಳಿಸಿರುವುದರಿಂದ 28.03.2012ರ ಅಂತ್ಯದೊಳಗಾಗಿ ಈ ಪ್ರಗತಿಯನ್ನು ಸಾಧಿಸಬೇಕಾಗುವುದು. ಅಂದರೆ ವಾಸ್ತವಿಕವಾಗಿ ನೈಸೆಲ್/ನೀಸೆಲ್ ಸಂಸ್ಥೆ ಪರಿಷ್ಕೃತ ಫೇಸ್-1 ಅಡಿಯಲ್ಲಿ 49 ಕಿ.ಮೀ. ರಸ್ತೆ ನಿರ್ಮಾಣ ಕಾಮಗಾರಿಯನ್ನು ಸಂಪೂರ್ಣಗೊಳಿಸಿದ್ದು, ಕುಂಠಿತ ಭೌತಿಕ ಪ್ರಗತಿ ಕ್ರಿಯಾ ಒಪ್ಪಂದ ಹಾಗೂ ಸರ್ಕಾರದ ಪೂರ್ವಭಾವಿ ಷರತ್ತುಗಳ ಸ್ಪಷ್ಟ ಹಾಗೂ ನೇರ ಉಲ್ಲಂಘನೆಯಾಗಿದೆ.**

2. ಮೂಲಭೂತವಾಗಿ ಮುಖ್ಯ ಅಭಿಯಂತರರು, ಲೋಕೋಪಯೋಗಿ ಇಲಾಖೆಯುವರು ಏರಿಯ ಕನ್ಸಾಲಿಡೇಷನ್ ಸಲುವಾಗಿ ವಿಶಿಷ್ಟ ಅಥವಾ ಪ್ರತ್ಯೇಕವಾಗಿ ಕಾಲಾವಕಾಶ ನೀಡುವ ಅವಶ್ಯಕತೆಯ ಬಗ್ಗೆ ವ್ಯತಿರಿಕ್ತ ಅಭಿಪ್ರಾಯವನ್ನು ನೀಡಿರುವುದನ್ನು ಸಮಿತಿಯು ಗಮನಿಸಿದೆ. ಈ ಹಿನ್ನೆಲೆಯಲ್ಲಿ 4 ಪಥದ ಕಾಂಕ್ರೀಟ್ ರಸ್ತೆಯ ಬದಲಾಗಿ 2 ಪಥದ ಡಾಂಬರೀಕೃತ ರಸ್ತೆಯನ್ನು ಅನುಷ್ಠಾನಗೊಳಿಸಲು ಖಾಸಗಿ ಪಾಲುದಾರರು ಸಲ್ಲಿಸಿರುವ ಪ್ರಸ್ತಾವನೆ ತಾಂತ್ರಿಕವಾಗಿ ಸಿಂಧುವಾಗುವುದಿಲ್ಲವೆಂದು ಸಮಿತಿ ತೀರ್ಮಾನಿಸುತ್ತದೆ. ಕೇವಲ ಫೈನಾನ್ಷಿಯಲ್ ಕ್ಲೋಷರ್ ಸಾಧಿಸುವ ಉದ್ದೇಶದಿಂದ ಹಾಗೂ ಆರ್ಥಿಕ ಸಂಸ್ಥೆಗಳಿಂದ ಬಂಡವಾಳ ಹೂಡಿಕೆಗೆ ಸಾಲವನ್ನು ಸೃಜಿಸುವ ಉದ್ದೇಶದಿಂದ ಖಾಸಗಿ ಪಾಲುದಾರರು ಸರ್ಕಾರಕ್ಕೆ ಸಮರ್ಪಕವಲ್ಲದ ಕಾರಣಗಳನ್ನು ನೀಡಿರುವುದು ಸಮಿತಿಗೆ ಸ್ಪಷ್ಟವಾಗಿದೆ. ಈ ಹಿನ್ನೆಲೆಯಲ್ಲಿ ಖಾಸಗಿ ಪಾಲುದಾರರು ಕ್ರಿಯಾ ಒಪ್ಪಂದದ ತಾಂತ್ರಿಕ ಮಾನದಂಡ ಹಾಗೂ ಮಾಪನಗಳನ್ನು ಉದ್ದೇಶಪೂರ್ವಕವಾಗಿ ಸಡಿಲಗೊಳಿಸಿದ್ದಾರೆ ಎಂದು ಸಮಿತಿ ತೀರ್ಮಾನಿಸುತ್ತದೆ. ಈ ಗುರುತರ ಬದಲಾವಣೆಗೆ ಸಂಬಂಧಿಸಿದಂತೆ ಆರ್ಥಿಕ/ಕಾನೂನು ಇಲಾಖೆ ಕೆಲವು ನಿರ್ದಿಷ್ಟ ಪೂರ್ವಭಾವಿ ಷರತ್ತುಗಳನ್ನು ಪ್ರತಿಪಾದಿಸಿರುವುದನ್ನು ಸಮಿತಿ ಗಮನಿಸಿದೆ. ಉದಾಹರಣೆಗೆ: 2 ಪಥದ ಡಾಂಬರೀಕೃತ ರಸ್ತೆಗೆ ಇಳಿಮುಖಗೊಳಿಸಿದ ದರಗಳಲ್ಲಿ ಟೋಲ್ ವಿಧಿಸುವಿಕೆ ಹಾಗೂ ಕ್ರಿಯಾ

ಒಪ್ಪಂದದ ಸಮಗ್ರ ಪರಿಷ್ಕರಣೆ. ಪ್ರಸ್ತಾವಿತ ಬದಲಾವಣೆಗಳು ಕ್ರಿಯಾ ಒಪ್ಪಂದದ ಪ್ರಮುಖ ಅಂಶವಾದ ತಾಂತ್ರಿಕ ಮಾನದಂಡಗಳನ್ನು ಪರಿಷ್ಕರಿಸುವ ಪರಿಣಾಮ ಹೊಂದಿರುವ ಹಿನ್ನೆಲೆಯಲ್ಲಿ ಪರಿಷ್ಕೃತ ಒಪ್ಪಂದವನ್ನು ಜಾರಿಗೊಳಿಸುವುದು ಅತ್ಯವಶ್ಯಕವಾಗಿತ್ತು ಎಂದು ಸಮಿತಿ ತೀರ್ಮಾನಿಸುತ್ತದೆ. ಈ ಯೋಜನೆಯ ಸಮಗ್ರ ಸಮನ್ವಯತೆಯ ಜವಾಬ್ದಾರಿಯನ್ನು ನಿರ್ವಹಿಸಬೇಕಾದ ಲೋಕೋಪಯೋಗಿ ಇಲಾಖೆ ಒಪ್ಪಂದದ ಪರಿಷ್ಕರಣೆ, ಟೋಲ್ ದರಗಳ ಪರಿಷ್ಕರಣೆ ಹಾಗೂ ನಿರ್ವಹಣೆ ಮತ್ತು ಪೂರ್ವಭಾವಿ ಷರತ್ತುಗಳ ಪಾಲನೆಯ ಪರಿವೀಕ್ಷಣೆಯಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ಈ ವರದಿಯ ಇತರೆ ಅನುಚ್ಛೇಧಗಳ ಅಡಿಯಲ್ಲಿ ಟೋಲ್ ದರಗಳ ವಾರ್ಷಿಕ ಪರಿಷ್ಕರಣೆಯ ಬಗ್ಗೆ ಪ್ರತಿಪಾದಿಸಲಾಗಿದೆ. ಲೋಕೋಪಯೋಗಿ ಇಲಾಖೆಯ ನಿರ್ಧಿಷ್ಟ ಅನುಮತಿಯ ಅನುಪಸ್ಥಿತಿಯಲ್ಲಿ ಟೋಲ್ ರಿಯಾಯಿತಿ ಒಪ್ಪಂದ ನಿರ್ಬಂಧನೆಗಳ ಅನುಗುಣವಾಗಿ ಕಾಲಮಿತಿ ಉಲ್ಲಂಘನೆಯಾದ ಆಧಾರದ ಮೇಲೆ ನೈಸೆಲ್ ಸಂಸ್ಥೆ ಸ್ವಯಂ ಪ್ರೇರಿತವಾಗಿ ಟೋಲ್ ದರಗಳನ್ನು ಪರಿಷ್ಕರಿಸಿದೆ. ಕನಿಷ್ಠ ಪಕ್ಷ ಈ ಪರಿಷ್ಕರಣೆಯ ಸಂದರ್ಭದಲ್ಲಿ ಇಳಿಮುಖಗೊಳಿಸಲಾದ ತಾಂತ್ರಿಕ ಮಾನದಂಡಗಳ ಆಧಾರದ ಮೇಲೆ ಲೋಕೋಪಯೋಗಿ ಇಲಾಖೆ ಟೋಲ್ ದರಗಳನ್ನು ನಿಯಂತ್ರಿಸಲು ಕ್ರಮ ಕೈಗೊಂಡಿರುವ ಬಗ್ಗೆ ಸಮಿತಿಗೆ ಯಾವುದೇ ಮಾಹಿತಿ ಇರುವುದಿಲ್ಲ. ಟೋಲ್ ಆಥಾರಿಟಿ ಸೃಜನೆಯಲ್ಲೂ ಸಹ ಲೋಕೋಪಯೋಗಿ ಇಲಾಖೆ ನಿರ್ಲಕ್ಷ್ಯತಾ ಧೋರಣೆಯನ್ನು ತಳೆದಿರುವುದು ಸ್ಪಷ್ಟವಾಗಿದೆ. ಈ ಸಮಗ್ರ ಸಂದಿಗ್ಧತೆಯಿಂದಾಗಿ ಆರ್ಥಿಕ ಇಲಾಖೆ ಹಾಗೂ ಕಾನೂನು ಇಲಾಖೆ ದ್ವಿಪಥ ಡಾಂಬರೀಕೃತ ರಸ್ತೆಯ ನಿರ್ಮಾಣದ ಪ್ರಸ್ತಾವನೆಗೆ ವಿಧಿಸಿರುವ ಪೂರ್ವಭಾವಿ ಷರತ್ತುಗಳನ್ನು ಸಂಪೂರ್ಣವಾಗಿ ಲೋಕೋಪಯೋಗಿ ಇಲಾಖೆ ಉಪೇಕ್ಷಿಸಿದೆ ಎಂಬುದು ಸ್ಪಷ್ಟವಾಗುತ್ತದೆ. ಈ ಹಿನ್ನೆಲೆಯಲ್ಲಿ ಲೋಕೋಪಯೋಗಿ ಇಲಾಖೆಯ ಸಂಬಂಧಪಟ್ಟ ಅಧಿಕಾರಿಗಳನ್ನು ಗುರುತಿಸಿ ಶಿಸ್ತಿನ ಕ್ರಮ ಜರುಗಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಇದಕ್ಕೆ ಪೂರಕವಾಗಿ ಟೋಲ್ ರಿಯಾಯಿತಿ ಒಪ್ಪಂದ ಹಾಗೂ ಕ್ರಿಯಾ ಒಪ್ಪಂದದ ಉಲ್ಲಂಘನೆಯ ಆಧಾರದ ಮೇಲೆ ನೈಸೆಲ್/ನೀಸೆಲ್ ಸಂಸ್ಥೆಯ ವಿರುದ್ಧ ಸರ್ಕಾರವು ಈ ಕೂಡಲೇ ಕಾನೂನು ಕ್ರಮ ಜರುಗಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

ಪ್ರಸ್ತಾವಿತ ಶಿಫಾರಸ್ಸನ್ನು ನ್ಯಾಯಾಲಯಗಳ ತೀರ್ಪಿನ ಹಿನ್ನೆಲೆಯಲ್ಲಿ ವಿಶ್ಲೇಷಿಸುವುದು ಅತ್ಯವಶ್ಯಕವಾಗಿರುತ್ತದೆ. 04.11.2002 ರ ಸಚಿವ ಸಂಪುಟದಲ್ಲಿ ನೀಡಿರುವ ಅನುಮೋದನೆಯನ್ನು ಪ್ರಶ್ನಿಸಿ ರಿಟ್ ಪಿಟಿಷನ್ ಸಂಖ್ಯೆ.573/2009 ರಲ್ಲಿ ಕರ್ನಾಟಕದ ಉಚ್ಛ ನ್ಯಾಯಾಲಯದ ಮುಂದೆ ಸಾರ್ವಜನಿಕ ಹಿತಾಸಕ್ತಿಯ ಪ್ರಕರಣವನ್ನು ದಾಖಲಿಸಿರುವುದನ್ನು ಸಮಿತಿ ಗಮನಿಸಿದೆ. 02.02.2009 ರಂದು ಈ ರಿಟ್ ಪಿಟಿಷನ್ ಅನ್ನು ವಜಾ ಮಾಡಲಾಗಿದೆ. ವಜಾ ಮಾಡಲು ಪ್ರಮುಖ ಕಾರಣಗಳನ್ನು ಈ ರೀತಿ ಉಲ್ಲೇಖಿಸಲಾಗಿದೆ:

> "Having regard to the settled position of law that this Court cannot go into the disputed question of breach of Contract which would involve a detailed investigation into question of fact and also having regard to the fact that unless the petitioner proves that there is Breach of Contract and Peripheral Road is not constructed by the NICEL in accordance with the terms of the F.W.A."

ಟೋಲ್ ಸಂಗ್ರಹಣೆ ವಿವರವನ್ನು ಈ ಪ್ರಕರಣದಲ್ಲಿ ಪ್ರಶ್ನಿಸಲಾಗಿದೆ. ತೀರ್ಪಿನ ವ್ಯಾಖ್ಯಾನವನ್ನು ಗಮನಿಸಿದಾಗ ಕ್ರಿಯಾ ಒಪ್ಪಂದದ ಅನುಗುಣವಾಗಿ ರಸ್ತೆ ನಿರ್ಮಾಣವಾಗಿರುವ ಅಥವಾ ಆಗದೇ ಇರುವ

ವಿಷಯವನ್ನು ಸಾರ್ವಜನಿಕ ಹಿತಾಸಕ್ತಿ ಪ್ರಕರಣದಲ್ಲಿ ಇತ್ಯರ್ಥಗೊಳಿಸಲಾಗುವುದಿಲ್ಲ ಎಂದು ನ್ಯಾಯಾಲಯ ತಿಳಿಸಿದೆ. ಈ ವಿಷಯ ವಾಸ್ತವಿಕ ಸ್ಥಿತಿಗತಿಗಳ ಮೇಲೆ ಆಧಾರಿತವಾಗಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಲಾಗಿದೆ. ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಂಖ್ಯೆ.573/2009 ದಾಖಲಿಸಿದಾಗ ಕ್ರಿಯಾ ಒಪ್ಪಂದ ಅಥವಾ ಸರ್ಕಾರದ ಷರತ್ತುಗಳ ಉಲ್ಲಂಘನೆ ಸ್ಪಷ್ಟವಾಗಿರಲಿಲ್ಲ. ಏಕೆಂದರೆ, 2012 ರೊಳಗಾಗಿ ನೈಸೆಲ್/ನೀಸೆಲ್ ಸಂಸ್ಥೆಯು ದ್ವಿಪಥದ ಡಾಂಬರು ರಸ್ತೆಯನ್ನು ಕಾಂಕ್ರೀಟ್ ರಸ್ತೆಯನ್ನಾಗಿ ಪರಿವರ್ತನೆ ಮಾಡಬೇಕಾಗಿತ್ತು. ಆದರೆ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು 2009 ರಲ್ಲಿ ದಾಖಲಿಸಿರುವುದರಿಂದ ***ಪ್ರಿಮೇಚೂರ್*** ಎಂದು ಪರಿಗಣಿಸಲಾಗಿದೆ. ಆದಾಗ್ಯೂ, ವಾಸ್ತವಿಕ ಸ್ಥಿತಿಗತಿಗಳ ಹಿನ್ನೆಲೆಯಲ್ಲಿ ಸಮಿತಿಯು ಈ ಕೆಳಕಂಡಂತೆ ಶಿಫಾರಸ್ಸು ಮಾಡುತ್ತದೆ:

**ಕ್ರಿಯಾ ಒಪ್ಪಂದವು ಯೋಜನಾ ಅನುಷ್ಠಾನದ ಪ್ರಮುಖ ಮಾನದಂಡವಾಗಿದೆ. ನ್ಯಾಯಾಲಯಗಳ ತೀರ್ಪಿನ ಅನುಗುಣವಾಗಿ ಕ್ರಿಯಾ ಒಪ್ಪಂದವನ್ನು ತಾತ್ವಿಕವಾಗಿ ಹಾಗೂ ವಾಸ್ತವಿಕವಾಗಿ ಪಾಲಿಸಬೇಕಾಗುವುದು. ಆದುದರಿಂದ ಮೂಲ ಕ್ರಿಯಾ ಒಪ್ಪಂದ ಅಥವಾ ಪರಿಷ್ಕೃತ ಅಥವಾ ಪೂರಕ ಒಪ್ಪಂದಗಳ ಉಲ್ಲಂಘನೆಯಾದಲ್ಲಿ, ಈ ಆಧಾರದ ಮೇಲೆ ಕ್ರಮ ಕೈಗೊಳ್ಳುವ ಅಂದರೆ ಟೋಲ್ ಸಂಗ್ರಹಣೆಯನ್ನು ಸ್ಥಗಿತಗೊಳಿಸುವ ಸಂಪೂರ್ಣ ಹಕ್ಕು ಮೇಲೆ ವಿವರಿಸಿರುವ ತೀರ್ಪಿನ ಹಿನ್ನೆಲೆಯಲ್ಲಿ ಸರ್ಕಾರಕ್ಕಿರುವುದು ಸಮಿತಿಗೆ ಸ್ಪಷ್ಟವಾಗಿದೆ. ಕ್ರಿಯಾ ಒಪ್ಪಂದದಲ್ಲಿ ನಮೂದಿಸಲಾಗಿರುವ ವಿಧಿ ವಿಧಾನಗಳ ಪಾಲನೆಯ ನಿರ್ಬಂಧನೆಗೆ ಒಳಪಟ್ಟಂತೆ ತಾಂತ್ರಿಕ ಮಾಪನಗಳ ಹಾಗೂ ಮಾನದಂಡಗಳ ಉಲ್ಲಂಘನೆಯ ಆಧಾರದ ಮೇಲೆ ಟೋಲ್ ಸಂಗ್ರಹಣೆಯನ್ನು ಸ್ಥಗಿತಗೊಳಿಸಲು ಸರ್ಕಾರವು ಈ ಕೂಡಲೇ ಕ್ರಿಯಾ ಒಪ್ಪಂದದ ವ್ಯಾಪ್ತಿಯಲ್ಲಿ ಅಥವಾ ಕಾನೂನು ರೀತಿ ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.**

## ***XVII. <u>ಅನುಚ್ಛೇದ – 6.3 – ವಿನ್ಯಾಸದ ಜವಾಬ್ದಾರಿಗಳು</u>***

ಕ್ರಿಯಾ ಒಪ್ಪಂದದ ಈ ಭಾಗವನ್ನು ಅವಲೋಕಿಸಿದಾಗ ಕ್ರಿಯಾ ಒಪ್ಪಂದದ ಷರತ್ತುಗಳು ಹಾಗೂ ತಾಂತ್ರಿಕ ವರದಿಯ ತಾಂತ್ರಿಕ ಮಾನದಂಡಗಳ ಅನುಗುಣವಾಗಿ ಟೋಲ್ ರಸ್ತೆಯ ವಿನ್ಯಾಸವನ್ನು ಇತ್ಯರ್ಥಗೊಳಿಸಬೇಕೆಂದು ನಿರೂಪಿಸಿರುವುದು ಸ್ಪಷ್ಟವಾಗಿರುತ್ತದೆ. ಸರ್ಕಾರದ ಆದೇಶ ದಿನಾಂಕ 20.11.1995ರ ಅನುಗುಣವಾಗಿ ಹಾಗೂ ಉನ್ನತ ಮಟ್ಟದ ಸಮಿತಿಯ ಶಿಫಾರಸ್ಸುಗಳ ಅನುಗುಣವಾಗಿ ಟೋಲ್ ರಸ್ತೆಯನ್ನು 60 ವರ್ಷಗಳ ಜೀವಿತ ಅವಧಿಗೆ ವಿನ್ಯಾಸಗೊಳಿಸಬೇಕಾಗುವುದು. ಕ್ರಿಯಾ ಒಪ್ಪಂದದ ಅನುಗುಣವಾಗಿ 30 ವರ್ಷಗಳ ಅವಧಿಯ ನಂತರ ಟೋಲ್ ರಸ್ತೆ ಒಳಗೊಂಡಂತೆ ಕ್ರಿಯಾ ಒಪ್ಪಂದದಲ್ಲಿ ಉಲ್ಲೇಖಿಸಿರುವ **"Transferrable Toll Assets"** ವ್ಯಾಪ್ತಿಗೆ ಬರುವ ಎಲ್ಲಾ ಅಭಿವೃದ್ಧಿ ಕಾಮಗಾರಿಗಳನ್ನು ಸರ್ಕಾರಕ್ಕೆ ಹಸ್ತಾಂತರ ಮಾಡಬೇಕು. ಅಂದರೆ ಹಸ್ತಾಂತರವಾದ ನಂತರವೂ ರಸ್ತೆ ಸಂಪರ್ಕ ಸೌಲಭ್ಯವನ್ನು ಸರ್ಕಾರ 30 ವರ್ಷಗಳ ಅವಧಿಗೆ ಬಳಸುವಂತಿರುವುದು ಕ್ರಿಯಾ ಒಪ್ಪಂದದ ಅನುಗುಣವಾಗಿ ಕಡ್ಡಾಯವಾಗಿರುತ್ತದೆ. ರಸ್ತೆಯ ವಿನ್ಯಾಸಿತ ಅವಧಿ ಕ್ರೋಢೀಕೃತವಾಗಿ ಅನುಷ್ಠಾನಗೊಂಡ ನಂತರ 60 ವರ್ಷಗಳಾಗಿರಬೇಕಾಗಿರುತ್ತದೆ. ಪ್ರಸಕ್ತ ಸ್ಥಿತಿಗತಿಗಳಲ್ಲಿ ರಸ್ತೆಯ ತಳಪಾಯ ಎಂದು ಪರಿಗಣಿಸಬಹುದಾದ ಸಬ್ ಗ್ರೇಡ್/ಸಬ್ ಬೇಸ್ ಪದರದ ಗಾತ್ರವನ್ನು ಮಾನದಂಡಗಳ ಅನುಸಾರವಾಗಿ ನಿರ್ವಹಿಸಬೇಕಾಗುವುದು. ಆದರೆ ರಸ್ತೆ ವಿನ್ಯಾಸಕ್ಕೆ ಗುರುತರ ಮಾಪನವಾದ ಎಂ.ಎಸ್.ಎ. ಇತ್ಯರ್ಥದಲ್ಲಿ ವಾಸ್ತವಿಕ ಅಂಕಿ ಅಂಶಗಳನ್ನು ಪರಿಗಣಿಸದೇ ಇರುವುದು ಸಮಿತಿಗೆ ಮನದಟ್ಟಾಗಿದೆ. ವಾಸ್ತವಿಕ ವಾಹನ ಸಂಚಾರದ ದಟ್ಟಣೆಯ ಸಾಂಧ್ರತೆ 10,497 ಸಿ.ವಿ.ಪಿ.ಡಿ. ಎಂದು ಪರಿಗಣಿಸಬೇಕಾಗಿದ್ದು, ವಿನ್ಯಾಸ ಮಾನದಂಡವು ಇದರ ಬದಲಾಗಿ 6,600 ಸಿ.ವಿ.ಪಿ.ಡಿ.

ಎಂದು ಪರಿಗಣಿಸಲಾಗಿದೆ. ಅನುಷ್ಠಾನಗೊಳಿಸಲಾದ ರಸ್ತೆಯ ವಿವಿಧ ಪದರಗಳ ಅಂದರೆ ಸಬ್ ಗ್ರೇಡ್, ಸಬ್ ಬೇಸ್, ಜಿ.ಎಸ್.ಬಿ., ವೆಟ್ ಮಿಕ್ಸ್ ಮೆಕ್ಯಾಡೆಮ್, ಡಿ.ಬಿ.ಎಂ ಕಾಂಕ್ರೀಟ್., ಬಿ.ಸಿ., ಇತ್ಯಾದಿಗಳ ಕ್ರೋಢೀಕೃತ ಗಾತ್ರ ಐ.ಆರ್.ಸಿ. ಮಾನದಂಡಗಳ ಅನುಗುಣವಾಗಿ 1290 ಮಿ.ಮಿ. ಎಂದು ಇತ್ಯರ್ಥಗೊಳಿಸಲಾಗಿತ್ತು. ಇದಕ್ಕೆ ವ್ಯತಿರಿಕ್ತವಾಗಿ ಅನುಷ್ಠಾನಗೊಳಿಸಲಾದ ರಸ್ತೆಯ ವಿನ್ಯಾಸವನ್ನು ತುಲನಾತ್ಮಕವಾಗಿ ಪರಿಶೀಲಿಸಿದಲ್ಲಿ ಕೇವಲ 1000 ಎಂ.ಎಂ. ಗಾತ್ರದ ಪದರಗಳನ್ನು ಅಳವಡಿಸಲಾಗಿದೆ ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. ಅನುಷ್ಠಾನಗೊಳಿಸಿರುವ ಗಾತ್ರದ ಆಧಾರದ ಮೇಲೆ ವಿನ್ಯಾಸದ ಅವಧಿಯನ್ನು ಇತ್ಯರ್ಥಗೊಳಿಸಿದಲ್ಲಿ, ರಸ್ತೆಯ ಜೀವಿತಾವಧಿ 20 ರಿಂದ 25 ವರ್ಷಗಳ ಮಧ್ಯಂತರದಲ್ಲಿದೆ ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. ಅಂದರೆ ಕ್ರಿಯಾ ಒಪ್ಪಂದದಲ್ಲಿ ನಿರೂಪಿಸಲಾದ 60 ವರ್ಷಗಳಿಗೆ ಬದಲಾಗಿ ರಸ್ತೆಯು ಟೋಲ್ ಕನ್ಸೆಷನ್ ಪೀರಿಯಡ್ ಅಂತ್ಯಕ್ಕೆ ತನ್ನ ಜೀವಿತಾವಧಿಯನ್ನು ಸಂಪೂರ್ಣಗೊಳಿಸುತ್ತದೆ ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. ***ಮೂಲಭೂತವಾಗಿ ಪ್ರಸಕ್ತ ವಾಹನ ಸಂಚಾರದ ಸಾಂಧ್ರತೆ, ಪ್ರಗತಿಯ ದರ ಇತ್ಯಾದಿಗಳನ್ನು ವಾಸ್ತವಿಕವಾಗಿ ಪರಿಗಣಿಸಿದಲ್ಲಿ ಈ ರಸ್ತೆಯನ್ನು 489 ಎಂ.ಎಸ್.ಎ. ಆಧಾರದ ಮೇಲೆ ವಿನ್ಯಾಸಗೊಳಿಸಬೇಕಾಗಿದ್ದು, ಕೇವಲ 74 ಎಂ.ಎಸ್.ಎ. ಆಧಾರದ ಮೇಲೆ ಇತ್ಯರ್ಥಗೊಳಿಸಲಾಗಿದೆ ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ.ವಾಹನ ಸಂಚಾರದ ಸಾಂಧ್ರತೆಯನ್ನು ಪ್ರತಿಶತ 50 ರಷ್ಟು ಕಡಿಮೆಯಾಗಿ ಪರಿಗಣಿಸಿರುವುದು ಈ ವೈಫಲ್ಯಕ್ಕೆ ಪ್ರಮುಖ ಕಾರಣವಾಗುತ್ತದೆ. ಐ.ಆರ್.ಸಿ. ಮಾನದಂಡಗಳ ಅನುಗುಣವಾಗಿ ವಾಸ್ತವಿಕ ವಾಹನ ದಟ್ಟಣೆ ಪ್ರಗತಿಯ ದರದ ಅನುಪಸ್ಥಿತಿಯಲ್ಲಿ ಪ್ರಗತಿಯನ್ನು ಸಾರ್ವತ್ರಿಕವಾಗಿ 7% ಅಥವಾ 7.5% ಎಂದು ಪರಿಗಣಿಸಬಹುದಾಗಿದೆ. ಇದೇ ಪ್ರಗತಿಯ ದರವನ್ನು ವಿನ್ಯಾಸದಲ್ಲೂ ಅಳವಡಿಸಲಾಗಿದೆ. ಲೋಕೋಪಯೋಗಿ ಇಲಾಖೆಯ ಸಂಚಾರ ಗಣತಿಯ ಅನುಗುಣವಾಗಿ ಈ ಪ್ರಗತಿಯ ದರ ಪ್ರಸಕ್ತ ಸಂದರ್ಭಕ್ಕೆ ಸಮಂಜಸವಾಗಿರುವುದಿಲ್ಲ. ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಎಂ.ಎಸ್.ಎ. ಲೆಕ್ಕಾಚಾರಗಳಲ್ಲಿ ಅಳವಡಿಸಿರುವ ಪ್ರಮುಖ ಮಾನದಂಡಗಳಾದ ವೆಹಿಕಲ್ ಡ್ಯಾಮೇಜ್ ಫ್ಯಾಕ್ಟರ್, ಲೇನ್ ಡಿಸ್ಟ್ರಿಬ್ಯೂಷನ್ ಫ್ಯಾಕ್ಟರ್, ಟ್ರಾಫಿಕ್ ಗ್ರೋಥ್ ರೇಟ್‌ಗಳನ್ನು ವಾಸ್ತವಿಕ ಸ್ಥಿತಿಗತಿಗಳಿಗೆ ಅನುಗುಣವಾಗಿ ಅಳವಡಿಸಿ ವಾಸ್ತವಿಕ ವಿನ್ಯಾಸಿತ ಜೀವಿತಾವಧಿಯನ್ನು ನಿರ್ಧರಿಸಲು ಲೋಕೋಪಯೋಗಿ ಇಲಾಖೆಯು ಕೂಡಲೇ ಕ್ರಮ ಕೈಗೊಳ್ಳಬೇಕೆಂದುಸಮಿತಿಯು ಶಿಫಾರಸ್ಸು ಮಾಡುತ್ತದೆ.***

ಯೋಜನಾ ತಾಂತ್ರಿಕ ವರದಿಯ ಅಧ್ಯಾಯ 6 ರಲ್ಲಿ ವಿನ್ಯಾಸದ ಬಗ್ಗೆ ವಿಶ್ಲೇಷಿಸಲಾಗಿದೆ. ವಿನ್ಯಾಸ ಮಾನದಂಡಗಳನ್ನು ವಿಶ್ಲೇಷಿಸಿದಾಗ ಟೋಲ್ ರಸ್ತೆಯನ್ನು ಐ.ಆರ್.ಸಿ. ನಿರೂಪಣೆಗಳು ಹಾಗೂ ಕೇಂದ್ರ ಸಾರಿಗೆ ಮಂತ್ರಾಲಯ ನಿಯತಕಾಲಿಕವಾಗಿ ಮಾರ್ಗಸೂಚಿಗಳ ಅನುಗುಣವಾಗಿ ಅನುಷ್ಠಾನಗೊಳಿಸಬೇಕಾಗುವುದು. ಅಧ್ಯಾಯ 6ರ ಕಂಡಿಕೆ ಸಂಖ್ಯೆ.6.4.1 ರಲ್ಲಿ ರಸ್ತೆಯ ವಿನ್ಯಾಸದ ಬಗ್ಗೆ ನಿರ್ಧಿಷ್ಟ ಮಾನದಂಡಗಳನ್ನು ವಿವರಿಸಲಾಗಿದೆ. ಕಂಡಿಕೆ 6.4.1.2 ರ ಅನುಗುಣವಾಗಿ ವೇಗದ ಹೆದ್ದಾರಿ, ಲಿಂಕ್ ರಸ್ತೆ ಹಾಗೂ ಪೆರಿಫೆರಲ್ ರಸ್ತೆ ಕಾಂಕ್ರೀಟ್ ರಸ್ತೆಗಳಾಗಿರಬೇಕು ಎಂದು ಉಲ್ಲೇಖಿಸಲಾಗಿದೆ. ಇಂಗ್ಲೀಷ್ ಆವರ್ತದಲ್ಲಿ **"shall be rigid pavement"**ಎಂದು ವಿವರಿಸಲಾಗಿದೆ. ಸರ್ವೀಸ್ ರಸ್ತೆಗಳಿಗೆ ಫ್ಲೆಕ್ಸಿಬಲ್ ಪೇಮೆಂಟ್ ವಿನ್ಯಾಸವನ್ನು ಬಳಸುವ ಬಗ್ಗೆ ಪ್ರತಿಪಾದಿಸಲಾಗಿದೆ. ***ಫ್ಲೆಕ್ಸಿಬಲ್ ಪೇವ್‌ಮೆಂಟ್ ವಿನ್ಯಾಸದ ಪ್ರಮುಖ ಅಂಶಗಳು ಕೆಳಕಂಡಂತಿದೆ:***

1. *ಐ.ಆರ್.ಸಿ. 58-1988ರ ರಿಜಿಡ್ ಪೇಮೆಂಟ್‌ಗಳ ವಿನ್ಯಾಸದ ಮಾನದಂಡಗಳನ್ನು ಅಳವಡಿಸಲಾಗಿದೆ.*

2. *ಕಾಂಕ್ರೀಟ್ ಸ್ಲ್ಯಾಬ್ 350 ಎಂ.ಎಂ. ಗಾತ್ರದ್ದಾಗಿರಬೇಕು, ಸಿಮೆಂಟ್ ಕಾಂಕ್ರೀಟ್ ಪದರದ ಗಾತ್ರ 150 ಎಂ.ಎಂ. ಆಗಿರಬೇಕು ಹಾಗೂ ಸಬ್ ಗ್ರೇಡ್ 500 ಎಂ.ಎಂ. ಗಾತ್ರದ್ದಾಗಿರಬೇಕು.*

*ತಾಂತ್ರಿಕ ವರದಿಯ ಅನುಗುಣವಾಗಿ ಲಿಂಕ್ ರಸ್ತೆ, ಪೆರಿಫೆರಲ್ ರಸ್ತೆಗಳಿಗೆ ಈ ಮಾನದಂಡಗಳನ್ನು ಅಳವಡಿಸಬೇಕಾಗುವುದು.*

ಕ್ರಿಯಾ ಒಪ್ಪಂದ ಹಾಗೂ ತಾಂತ್ರಿಕ ವರದಿಯಲ್ಲಿ ಸ್ಪಷ್ಟ ನಿರ್ದೇಶನಗಳು ಇದ್ದಾಗ್ಯೂ ಸಹ ಖಾಸಗಿ ಪಾಲುದಾರರು ದಿನಾಂಕ 04.06.2002ರ ಪತ್ರದ ಮುಖಾಂತರ ಶಾಸನಬದ್ಧ ತೀರುವಳಿಗಳನ್ನು ಪಡೆಯುವಲ್ಲಿ ಕಾರ್ಯಕಾರಿ ಆದೇಶಗಳ ಘೋಷಣೆಯಲ್ಲಿ ಹಾಗೂ ಪರಿಸರ ತೀರುವಳಿ ಪಡೆಯುವಲ್ಲಿ ಅನಿಯತವಾಗಿ ವಿಳಂಬವಾಗುತ್ತಿರುವ ಹಿನ್ನೆಲೆಯಲ್ಲಿ ಪರ್ಯಾಯ ವಿನ್ಯಾಸವನ್ನು ಅಳವಡಿಸಲು ಅನುಮತಿಯನ್ನು ಕೋರಿರುತ್ತಾರೆ. ಪರ್ಯಾಯ ವಿನ್ಯಾಸದ ಅನುಗುಣವಾಗಿ 4 ಪಥದ ಕಾಂಕ್ರೀಟ್ ರಸ್ತೆಯ ಬದಲಿಗೆ 2 ಪಥದ ಡಾಂಬರು ರಸ್ತೆಯನ್ನು 2 ವರ್ಷಗಳ ಅವಧಿಯಲ್ಲಿ ಸಂಪೂರ್ಣಗೊಳಿಸಿ ತದನಂತರ 4 ವರ್ಷದ ಅವಧಿಯೊಳಗೆ 4 ಪಥದ ಕಾಂಕ್ರೀಟ್ ರಸ್ತೆ ಅನುಷ್ಠಾನಗೊಳಿಸುವ ಬಗ್ಗೆ ಪ್ರತಿಪಾದಿಸಲಾಗಿದೆ. ಈ ಪ್ರಸ್ತಾವನೆಯನ್ನು ಕಾನೂನು ಹಾಗೂ ಆರ್ಥಿಕ ಇಲಾಖೆಗಳು ಪರಿವೀಕ್ಷಿಸಿದ್ದು, ದಿನಾಂಕ 02.11.2002 ರಂದು ನಡೆದ ಸಚಿವ ಸಂಪುಟದ ಸಭೆಯಲ್ಲಿ ಅನುಮೋದಿಸಲಾಗಿದೆ. ಈ ಅನುಮೋದನೆಯು ಖಾಸಗಿ ಪಾಲುದಾರರು ಫೈನಾನ್ಷಿಯಲ್ ಕ್ಲೋಷರ್ ಆದ 8 ವರ್ಷಗಳ ಅವಧಿಯೊಳಗೆ ಪ್ರಸ್ತಾವಿತ ರಸ್ತೆಯನ್ನು ಕಾಂಕ್ರೀಟ್ ರಸ್ತೆಯನ್ನಾಗಿ ಮಾರ್ಪಡಿಸುವ ನಿರ್ಬಂಧನೆಗೆ ಒಳಪಟ್ಟಿರುತ್ತದೆ. ಖಾಸಗಿ ಪಾಲುದಾರರು ಪ್ರಥಮ ಸ್ತರದ ಫೈನಾನ್ಷಿಯಲ್ ಕ್ಲೋಷರ್ ಅನ್ನು 29.03.2004ಕ್ಕೆ ಸಾಧಿಸಿರುತ್ತಾರೆ. ಅಂದರೆ 29.03.2012ರೊಳಗಾಗಿ ಡಾಂಬರು ರಸ್ತೆಯನ್ನು ಕಾಂಕ್ರೀಟ್ ಪಥವನ್ನಾಗಿ ಮಾರ್ಪಾಡು ಮಾಡಿ ಅನುಷ್ಠಾನಗೊಳಿಸುವುದು ಅವಶ್ಯಕವಾಗಿರುತ್ತದೆ. ಆದರೆ ಈವರೆವಿಗೂ ಈ ನಿರ್ಬಂಧನೆಯ ಷರತ್ತುಗಳನ್ನು ಖಾಸಗಿ ಪಾಲುದಾರರು ಉಪೇಕ್ಷಿಸಿ ಪ್ರಸಕ್ತ ಸಂದರ್ಭದಲ್ಲಿ ವೈಟ್ ಟಾಪಿಂಗ್ ಹೊಂದಿರುವ ಡಾಂಬರೀಕೃತ ರಸ್ತೆ ಅನುಷ್ಠಾನಗೊಳಿಸಿರುತ್ತಾರೆ.

***ಮುಖ್ಯ ಇಂಜಿನೀಯರ್, ಸಿ ಅಂಡ್ ಬಿ., ದಕ್ಷಿಣ ಇವರು ಟೋಲ್ ರಸ್ತೆಯನ್ನು ಯೋಜನಾ ತಾಂತ್ರಿಕ ವರದಿಯ ವಿನ್ಯಾಸದ ಅನುಗುಣವಾಗಿ ಅನುಷ್ಠಾನಗೊಳಿಸಬೇಕಾಗಿದ್ದು, ಈಗಿರುವ ರಸ್ತೆಯ ಮೇಲೆ 150 ಎಂ.ಎಂ. ವೈಟ್ ಟಾಪಿಂಗ್ ಪದರ ಹಾಕುವುದು ಸೂಕ್ತವಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ತಾಂತ್ರಿಕ ವರದಿಯ ಸೆಕ್ಷನ್ 6.4.1.1 ರ ಅನುಗುಣವಾಗಿ 350 ಎಂ.ಎಂ. ಗಾತ್ರದ ಕಾಂಕ್ರೀಟ್ ಸ್ಲ್ಯಾಬ್ ಒಳಗೊಂಡ ರಿಜಿಡ್ ಪೇವ್‌ಮೆಂಟ್ ನಿರ್ಮಿಸಬೇಕು. ಆದಾಗ್ಯೂ, ನೈಸೆಲ್ ಸಂಸ್ಥೆ ದಿನಾಂಕ 22.01.2013 ಹಾಗೂ 15.04.2013 ರಂದು ವೈಟ್ ಟಾಪಿಂಗ್ ರಸ್ತೆ ಮಾಡಿರುವುದಾಗಿ ದೃಢೀಕರಿಸಿರುತ್ತಾರೆ. ವಾಸ್ತವಿಕವಾಗಿ ರಾಜ್ಯ ಸರ್ಕಾರವು 06.02.2012 ರಂದು ನೈಸೆಲ್ ಸಂಸ್ಥೆಗೆ ಈ ಕೆಳಕಂಡ ಅಂಶಗಳ ಬಗ್ಗೆ ಅರಿವು ಮೂಡಿಸಿರುತ್ತಾರೆ:***

1. *ಸೆಕ್ಷನ್ 'ಎ' ಅಡಿಯಲ್ಲಿ 2 ವರ್ಷದ ಅವಧಿಯಲ್ಲಿ 2 ಪಥದ ಫ್ಲೆಕ್ಸಿಬಲ್ ರಸ್ತೆ ನಿರ್ಮಾಣ. ಸಮಾನಾಂತರವಾಗಿ ಇನ್ನೆರಡು ಪಥಗಳ ಕಾಂಕ್ರೀಟ್ ರಸ್ತೆ ನಿರ್ಮಾಣ. ತದನಂತರ ಫೈನಾನ್ಷಿಯಲ್ ಕ್ಲೋಷರ್ ಆದ 6 ವರ್ಷಗಳವರೆಗೆ ಬಿಟುಮಿನ್ ರಸ್ತೆಯನ್ನು ಕಾಂಕ್ರೀಟ್ ರಸ್ತೆಯನ್ನಾಗಿ ಪರಿವರ್ತನೆ. ಅಂದರೆ 8 ವರ್ಷಗಳ ಅವಧಿಯವರೆಗೆ 4 ಪಥದ ಕಾಂಕ್ರೀಟ್ ರಸ್ತೆ ನಿರ್ಮಾಣ. ಈ ಅಂಶಗಳನ್ನು ಗಮನಿಸಿದಾಗ ನೈಸೆಲ್ ಸಂಸ್ಥೆ ವಿನ್ಯಾಸದ ಜವಾಬ್ದಾರಿಗಳನ್ನು ನಿರ್ವಹಿಸದೇ ಇರುವುದು ಸ್ಪಷ್ಟವಾಗಿದೆ. ಇದು ಕ್ರಿಯಾ ಒಪ್ಪಂದದ ನೇರ ಹಾಗೂ ಸ್ಪಷ್ಟ ಉಲ್ಲಂಘನೆಯಾಗಿದೆ.*

2. *ವಾಸ್ತವಿಕವಾಗಿ ನೈಸೆಲ್ ಕಂಪನಿ 2004 ರಿಂದ ಸೆಕ್ಷನ್ 'ಎ' ಭಾಗದ 54 ಕಿ.ಮೀ. ರಸ್ತೆ ಕಾಮಗಾರಿಯನ್ನು ಕೈಗೊಂಡಿದ್ದು, ಈ ಪೈಕಿ 50 ಕಿ.ಮೀ. ರಸ್ತೆಯನ್ನು ಈವರೆವಿಗೆ ಸಂಪೂರ್ಣಗೊಳಿಸಿದೆ. ಸಂಪೂರ್ಣಗೊಳಿಸಲಾದ 50 ಕಿ.ಮೀ. ಗಳ ಪೈಕಿ 10 ಕಿ.ಮೀ. ರಸ್ತೆಯನ್ನು*

ಮಾತ್ರ ವೈಟ್ ಟಾಪಿಂಗ್ ಸಿಮೆಂಟ್ ರಸ್ತೆಯನ್ನಾಗಿ ಪರಿವರ್ತಿಸಲಾಗಿದೆ. ವೈಟ್ ಟಾಪಿಂಗ್ ಸಿಮೆಂಟ್ ರಸ್ತೆ ಕಾಂಕ್ರೀಟ್ ರಸ್ತೆಯ ಸ್ವರೂಪದ್ದಾಗಿದೆ ಎಂದು ನೈಸೆಲ್ ಪ್ರತಿಪಾದಿಸಿದ್ದು, ತಾಂತ್ರಿಕ ಮಾನದಂಡಗಳ ಹಿನ್ನೆಲೆಯಲ್ಲಿ ಈ ವಾದವನ್ನು ಸಮಿತಿ ತಿರಸ್ಕರಿಸುತ್ತದೆ. ಉಳಿದ 40 ಕಿ.ಮೀ. ರಸ್ತೆ ಇನ್ನೂ ಡಾಂಬರು ರಸ್ತೆಯಾಗಿಯೇ ಉಳಿದಿದೆ ಹಾಗೂ ಇದನ್ನು ಸಿಮೆಂಟ್ ರಸ್ತೆಯನ್ನಾಗಿ ಪರಿವರ್ತಿಸುವ ಯಾವುದೇ ಲಕ್ಷಣಗಳು ಕಂಡುಬರುತ್ತಿಲ್ಲ. ಈ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಸಮಿತಿಯ ನಿರ್ದೇಶನಗಳ ಅನುಗುಣವಾಗಿ ಲೋಕೋಪಯೋಗಿ ಇಲಾಖೆ ನೈಸೆಲ್ ಕಂಪನಿಗೆ ನೋಟೀಸ್ ಜಾರಿ ಮಾಡಿದ್ದು, ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ನೈಸೆಲ್ ಕಂಪನಿಯು ಅರ್ಜಿಯನ್ನು ಸಲ್ಲಿಸಿ ಸರ್ಕಾರದ ವಿರುದ್ಧ ತಡೆಯಾಜ್ಞೆಯನ್ನು ಪಡೆದಿದೆ. ಸಮಿತಿಯು ತಡೆಯಾಜ್ಞೆಯ ಪ್ರಮುಖ ಅಂಶಗಳನ್ನು ಪರಿಶೀಲಿಸಿದ್ದು, ನೋಟೀಸ್ ಜಾರಿ ಮಾಡುವಲ್ಲಿ ಆಗಿರುವ ತಾಂತ್ರಿಕ ವೈಫಲ್ಯತೆಗಳ ಆಧಾರದ ಮೇಲೆ ತಡೆಯಾಜ್ಞೆ ನೀಡಿರುವುದು ಸ್ಪಷ್ಟವಾಗಿದೆ. ಇದರಿಂದ ಲೋಕೋಪಯೋಗಿ ಇಲಾಖೆಯು ಕಾನೂನು ವ್ಯಾಪ್ತಿಯಲ್ಲಿ ಸಿಂಧುವಾಗುವ ನೋಟೀಸ್ ಜಾರಿಗೊಳಿಸುವಲ್ಲಿ ವಿಫಲವಾಗಿರುವುದು ಸ್ಪಷ್ಟವಾಗಿದೆ. ನೈಸೆಲ್ ಸಂಸ್ಥೆಯು ಕ್ರಿಯಾ ಒಪ್ಪಂದವನ್ನು ನಿಯತಕಾಲಿಕವಾಗಿ ಹಾಗೂ ಸತತವಾಗಿ ಉಲ್ಲಂಘಿಸುತ್ತಿರುವ ಹಿನ್ನೆಲೆಯಲ್ಲಿ ತಡೆಯಾಜ್ಞೆಯನ್ನು ತೆರವುಗೊಳಿಸಿ ಟೋಲ್ ಸಂಗ್ರಹಣೆಯನ್ನು ಸ್ಥಗಿತಗೊಳಿಸಲು ಲೋಕೋಪಯೋಗಿ ಇಲಾಖೆ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

XVIII. <u>ಅನುಚ್ಛೇದ 6.6.1- ಯೋಜನೆಯನ್ನು ಸಂಪೂರ್ಣಗೊಳಿಸಲು ಕ್ರಿಯಾ ಒಪ್ಪಂದದ ಅನುಗುಣವಾಗಿ ನಿಗದಿಪಡಿಸಿರುವ ಕಾಲಮಿತಿಯ ವಿವರಗಳನ್ನು ಈ ಅನುಚ್ಛೇಧದಡಿ ನೀಡಲಾಗಿದೆ. ಈ ಮಿತಿಗಳನ್ನು ಕ್ರಿಯಾ ಒಪ್ಪಂದದ ಅನುಗುಣವಾಗಿ ನಮೂದಿಸಿದ್ದು, 06/10/1999 ರ ಪೂರಕ ಒಪ್ಪಂದದ ಮುಖಾಂತರ ಭೌತಿಕ ಗುರಿಯನ್ನು ಪರಿಷ್ಕರಿಸಲಾಗಿದೆ.</u>

<u>ಈ ಹಿನ್ನೆಲೆಯಲ್ಲಿ ಖಾಸಗಿ ಪಾಲುದಾರರು ಸಾಧಿಸಿರುವ ಪ್ರಗತಿಯ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. ಈ ಅನುಚ್ಛೇಧವನ್ನು ಕ್ರಿಯಾ ಒಪ್ಪಂದದ ಅನುಚ್ಛೇಧ 16.2 ರ ಹಿನ್ನೆಲೆಯಲ್ಲಿ ಮೌಲ್ಯ ಮಾಪನ ಮಾಡಿದರೆ ಕ್ರಿಯಾ ಒಪ್ಪಂದದ ಬಾಧ್ಯತೆಗಳು ಅಂದರೆ ನಿರ್ದಿಷ್ಟವಾಗಿ ಭೌತಿಕ ಗುರಿಗಳನ್ನು ಸಾಧಿಸುವಲ್ಲಿ ವ್ಯಾಪಕ ಕೊರತೆಯಾಗಿರುವುದು ಅನುಚ್ಛೇಧದ ವಿವರಗಳಿಂದ ಸ್ಪಷ್ಟವಾಗಿದೆ. ಆದುದರಿಂದ ಕರ್ನಾಟಕ ಸರ್ಕಾರವು ಅನುಚ್ಛೇಧ 16.2 ಮತ್ತು 16.2.5 ರ ಅಡಿಯಲ್ಲಿ ಖಾಸಗಿ ಪಾಲುದಾರರಿಗೆ ನೋಟೀಸನ್ನು ಜಾರಿಗೊಳಿಸಬೇಕೆಂದು ಸಮಿತಿಯು ಆಗ್ರಹಿಸುತ್ತದೆ. ತಾಂತ್ರಿಕ ಮಾನದಂಡಗಳನ್ನು ಉಪೇಕ್ಷಿಸಿರುವ ಹಿನ್ನೆಲೆಯಲ್ಲಿ ಟೋಲ್ ರಸ್ತೆಯನ್ನು ಅಪೂರ್ಣ ಎಂದು ಪರಿಗಣಿಸಬೇಕಾಗುವುದು. ಈ ಅಂಶವನ್ನೂ ಒಳಗೊಂಡಂತೆ ಸಮಗ್ರ ಯೋಜನೆ ಅಡಿಯಲ್ಲಿ ಭೌತಿಕ ಪ್ರಗತಿ ಕ್ರಿಯಾ ಒಪ್ಪಂದದ ಮಾನದಂಡಗಳ ಅನುಗುಣವಾಗಿ ಇಲ್ಲದೇ ಇರುವುದು ಸ್ಪಷ್ಟವಾಗಿದೆ. ನಗರ ಸಮುಚ್ಛಯಗಳಲ್ಲಿ ಯಾವುದೇ ಪ್ರಗತಿಯನ್ನು ಸಾಧಿಸಿರುವುದಿಲ್ಲ. ಇದರಿಂದ ಸಮಗ್ರ ಯೋಜನಾ ಅನುಷ್ಠಾನದಲ್ಲಿ ಕ್ರಿಯಾ ಒಪ್ಪಂದದ ಅನುಚ್ಛೇದ 6.6.1 ಹಾಗೂ ಪೂರಕ ಒಪ್ಪಂದದ ಕಾಲಮಿತಿಗಳನ್ನು ಉಲ್ಲಂಘಿಸಿರುವುದು ಸ್ಪಷ್ಟವಾಗಿದೆ.</u>

## XIX. ಅನುಚ್ಛೇದ – 7 – ನಗರ ಸಮುಚ್ಛಯಗಳ ಬಗ್ಗೆ

*ನಗರ ಸಮುಚ್ಛಯಗಳ ಜಮೀನಿನ ಅವಶ್ಯಕತೆ ಈ ಕೆಳಕಂಡಂತಿರುತ್ತದೆ:*

*(ಎಕರೆಗಳಲ್ಲಿ)*

| ನಗರ ಸಮುಚ್ಛಯಗಳು | ಸರ್ಕಾರಿ+ಖಾಸಗಿ ಜಮೀನು | ಖಾಸಗಿ ಜಮೀನು | | | ಸರ್ಕಾರಿ ಜಮೀನು | ನೈಸೆಲ್ ಸಂಸ್ಥೆಗೆ ಹಸ್ತಾಂತರಿಸಿರುವ ಜಮೀನು (5)+(6) | ಜಮೀನಿನ ಹೆಚ್ಚುವರಿ/ ಕೊರತೆ |
|---|---|---|---|---|---|---|---|
| | ಕ್ರಿಯಾ ಒಪ್ಪಂದ ಹಾಗೂ ಉಚ್ಛ ನ್ಯಾಯಾಲಯದ ತೀರ್ಪು | 28(1) | 28(4) | ನೈಸೆಲ್‌ಗೆ ಹಸ್ತಾಂತರಿಸಿದ ಜಮೀನು | ನೈಸೆಲ್‌ಗೆ ಹಸ್ತಾಂತರಿಸಿದ ಜಮೀನು | | |
| ಟೌನ್ ಶಿಪ್-1 | 2775 | 2420 | 1916 | 0 | 481 | 481 | -2294 |
| ಟೌನ್ ಶಿಪ್-2 | 1836 | 1699 | 0 | 0 | 320 | 320 | -1516 |
| ಟೌನ್ ಶಿಪ್-3 | 1615 | 1529 | 0 | 0 | 474 | 474 | -1141 |
| ಟೌನ್ ಶಿಪ್-4 | 2682 | 1335 | 0 | 0 | 901 | 901 | -1781 |
| ಟೌನ್ ಶಿಪ್-5 | 4286 | 2664 | 0 | 0 | 195 | 195 | -4091 |
| **ಒಟ್ಟು ಟೌನ್‌ಶಿಪ್‌ಗಳು** | **13194** | **9647** | **1916** | **0** | **2371** | **2371** | **-10823** |

1. ನೈಸೆಲ್/ನೀಸೆಲ್ ಸಂಸ್ಥೆಯು ದಿನಾಂಕ 09.08.2002 ರಂದು ಜಾರಿಗೊಳಿಸಲಾದ ತ್ರಿಪಕ್ಷೀಯ ಒಪ್ಪಂದದ ಅನುಗುಣವಾಗಿ ಈ ಯೋಜನೆಯ ಸ್ಟೇಜ್-1 ಕಾಮಗಾರಿಗಳನ್ನು ಅನುಷ್ಠಾನಗೊಳಿಸುತ್ತಿರುವುದು ಸಮಿತಿಯ ಗಮನಕ್ಕೆ ಬಂದಿದೆ.
2. ಕ್ರಿಯಾ ಒಪ್ಪಂದದ ಅನುಗುಣವಾಗಿ ರಾಜ್ಯ ಸರ್ಕಾರವು ನೈಸೆಲ್/ನೀಸೆಲ್ ಸಂಸ್ಥೆಗೆ 2447 ಎಕರೆ ಖಾಸಗಿ ಜಮೀನು ಹಾಗೂ 328 ಎಕರೆ ಸರ್ಕಾರಿ ಜಮೀನು ಅಂದರೆ ಕ್ರೋಢೀಕೃತವಾಗಿ 2775 ಎಕರೆ ಜಮೀನನ್ನು ಒದಗಿಸಬೇಕಾಗುವುದು.
3. ಮೂಲಭೂತವಾಗಿ ಮೊದಲನೇ ನಗರ ಸಮುಚ್ಛಯವು ಕ್ರಿಯಾ ಒಪ್ಪಂದದ ಅನುಗುಣವಾಗಿ ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕಿನ 4ನೇ ಇಂಟರ್ ಛೇಂಜಿನ ಸಮೀಪದಲ್ಲಿ ಅಭಿವೃದ್ಧಿಪಡಿಸಲು ಯೋಜಿಸಲಾಗಿದ್ದನ್ನು ಸಮಿತಿಯು ಗಮನಿಸಿದೆ.
4. ತತ್ಸಂಬಂಧವಾಗಿ ಕರ್ನಾಟಕ ಸರ್ಕಾರವು ಕೆ.ಐ.ಎ.ಡಿ.ಬಿ. ಮುಖಾಂತರ 2447 ಎಕರೆ ಖಾಸಗಿ ಜಮೀನನ್ನು ಬಡಮನವರ್ತೆ ಕಾವಲ್, ವರಾಹಸಂದ್ರ, ಗುಡಿಮಾವು, ಕೆಂಗೇರಿ ಗೊಲ್ಲಹಳ್ಳಿ, ಕಂಬೀಪುರ ಹಾಗೂ ದೇವಗೆರೆಯಲ್ಲಿ ಸ್ವಾಧೀನಪಡಿಸಿಕೊಂಡಿದೆ. ಈ ಸ್ವಾಧೀನ ಪ್ರಕ್ರಿಯೆಯು ಯೋಜನಾ ತಾಂತ್ರಿಕ ವರದಿ ಹಾಗೂ ಕ್ರಿಯಾ ಒಪ್ಪಂದದ ಅನುಗುಣವಾಗಿದೆ.
5. ತದನಂತರ ಟೌನ್‌ಶಿಪ್-1 ಅನ್ನು ಕೆಂಗೇರಿಯಿಂದ ಬಿಡದಿಗೆ ಸ್ಥಳಾಂತರ ಮಾಡಲಾಗಿದೆ. ಈ ಬದಲಾವಣೆಯನ್ನು ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನ ನಂತರ ಜಾರಿಗೊಳಿಸಿರುವುದನ್ನು ಸಮಿತಿಯು ಗಮನಿಸಿದೆ.
6. ಸ್ಥಳಾಂತರಗೊಂಡ ನಂತರ ಖಾಸಗಿ ಜಮೀನಿನ ಅವಶ್ಯಕತೆಯನ್ನು ಇಳಿಮುಖಗೊಳಿಸಲಾಗಿದ್ದು, ಕೆ.ಐ.ಎ.ಡಿ.ಬಿ. ಅಧಿನಿಯಮದ ನಿಯಮ 28(4)ರ ಅಡಿಯಲ್ಲಿ ಟೌನ್‌ಶಿಪ್-1ಕ್ಕೆ 1916 ಎಕರೆ ಸ್ವಾಧೀನಪಡಿಸಿಕೊಳ್ಳಲಾಗಿದೆ. ಇದೇ ಸ್ತರದಲ್ಲಿ ಸರ್ಕಾರಿ ಜಮೀನಿನ ಅವಶ್ಯಕತೆಯನ್ನು 378 ಎಕರೆಗಳಿಂದ 831 ಎಕರೆಗಳಿಗೆ ಪರಿಷ್ಕರಣೆ

ಮಾಡಲಾಗಿದೆ. ಈ ಬದಲಾವಣೆಗಳು ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿಗೆ ವ್ಯತಿರಿಕ್ತವಾಗಿದೆ.

7. ಕ್ರಿಯಾ ಒಪ್ಪಂದದ ಅನುಚ್ಛೇಧ 5 ರ ಅನುಗುಣವಾಗಿ ನೈಸೆಲ್/ನೀಸೆಲ್ ಸಂಸ್ಥೆಯು ಭೂಮಾಲೀಕರಿಗೆ ಮಾರುಕಟ್ಟೆ ದರದಲ್ಲಿ ಪರಿಹಾರವನ್ನು ನೀಡಬೇಕಾಗಿದ್ದು, ಈ ಆಧಾರದ ಮೇಲೆ ಇತ್ಯರ್ಥಗೊಳಿಸಲಾದ 40 ಲಕ್ಷ ರೂ.ಗಳ ಪರಿಹಾರವನ್ನು ನೀಡಲು ನೈಸೆಲ್ ಸಂಸ್ಥೆ ನಿರಾಕರಿಸಿದೆ.

8. ನೈಸೆಲ್ ಸಂಸ್ಥೆಯು ಮಾರುಕಟ್ಟೆ ದರಗಳಲ್ಲಿ ದರ ನಿಗದಿಪಡಿಸುವ ಸಮಿತಿ ಇತ್ಯರ್ಥಗೊಳಿಸಿದ ಪರಿಹಾರವನ್ನು ಪ್ರಶ್ನಿಸಿ ಪ್ರಕರಣವನ್ನು ದಾಖಲಿಸಿದೆ. ಈ ಪರಿಹಾರವನ್ನು ಸಚಿವ ಸಂಪುಟ ಅನುಮೋದಿಸಿದ್ದಾಗ್ಯೂ, ಈ ಕ್ರಮವನ್ನು ಕೈಗೊಂಡಿರುವುದು ಖಂಡನೀಯವೆಂದು ಸಮಿತಿ ತೀರ್ಮಾನಿಸುತ್ತದೆ. ಈ ಪ್ರಕರಣವನ್ನು ನೈಸೆಲ್ ಸಂಸ್ಥೆ ಪರ್ಯಾಯ ವ್ಯವಸ್ಥೆಯನ್ನು ಪ್ರತಿಪಾದಿಸಿ ಹಿಂಪಡೆದಿದೆ. ಸಮಿತಿಗೆ ಲಭ್ಯವಿರುವ ದಾಖಲಾತಿಗಳ ಅನುಗುಣವಾಗಿ ನೈಸೆಲ್ ಸಂಸ್ಥೆ 40 ಲಕ್ಷ ರೂ.ಗಳ ಪರಿಹಾರದ ಬದಲಾಗಿ ಪ್ರತಿಪಾದಿಸಿರುವ ಪರ್ಯಾಯ ವ್ಯವಸ್ಥೆಯನ್ನು ಸಂಬಂಧಪಟ್ಟ ಗ್ರಾಮ ಪಂಚಾಯತಿಗಳಲ್ಲಿ ಭೂಮಾಲೀಕರು ಸಂಪೂರ್ಣವಾಗಿ ತಿರಸ್ಕರಿಸಿರುತ್ತಾರೆ. ಭೂಸ್ವಾಧೀನ ಅಧಿನಿಯಮ 2013ರ ವ್ಯಾಪ್ತಿಗೆ ಈ ಸ್ವಾಧೀನ ಪ್ರಕ್ರಿಯೆ ಒಳಪಟ್ಟಿರುವ ಹಿನ್ನೆಲೆಯಲ್ಲಿ ನಿರೂಪಿತ ಪರಿಹಾರವನ್ನು ನೀಡಲು ಖಾಸಗಿ ಪಾಲುದಾರರು ಬದ್ಧರಾಗಿರುತ್ತಾರೆ ಎಂದು ಸಮಿತಿ ತೀರ್ಮಾನಿಸುತ್ತದೆ. ಈ ಪ್ರಕರಣದಲ್ಲಿ ಕೆಳಕಂಡ ಅಂಶಗಳಲ್ಲಿ ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನ ಉಲ್ಲಂಘನೆಯಾಗಿರುವುದು ಸಮಿತಿಯ ಗಮನಕ್ಕೆ ಬಂದಿದೆ:

1. ಕರ್ನಾಟಕದ ಉಚ್ಛ ನ್ಯಾಯಾಲಯವು ದಿನಾಂಕ 03.05.2005 ರಂದು ಹಾಗೂ ಸರ್ವೋಚ್ಛ ನ್ಯಾಯಾಲಯವು ದಿನಾಂಕ 20.04.2006 ರಂದು ನೀಡಿರುವ ತೀರ್ಪಿನ ಅನುಗುಣವಾಗಿ 4ನೇ ಇಂಟರ್ ಛೇಂಜಿನ ಬಳಿ ಟೌನ್‌ಶಿಪ್-1 ಅನ್ನು ಸ್ಥಾಪಿಸಬೇಕಾಗಿದ್ದು, ಬದಲಾವಣೆ ತೀರ್ಪಿನ ಉಲ್ಲಂಘನೆಯಾಗಿದೆ. ಏಕೆಂದರೆ, 2009 ರಲ್ಲಿ ನೈಸೆಲ್ ಸಂಸ್ಥೆ ಸಲ್ಲಿಸಿರುವ ಕೋರಿಕೆಯ ಆಧಾರದ ಮೇಲೆ 1916 ಎಕರೆಗಳ ಖಾಸಗಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ.

2. ನೈಸೆಲ್ ಸಂಸ್ಥೆಯು ಸರ್ವೋಚ್ಛ ನ್ಯಾಯಾಲಯದಲ್ಲಿ ನ್ಯಾಯಾಂಗ ನಿಂದನೆ ಪ್ರಕರಣ 96/2007 ರಲ್ಲಿ ಕ್ರಿಯಾ ಒಪ್ಪಂದಕ್ಕೆ ವ್ಯತಿರಿಕ್ತವಾಗಿ ಯಾವುದೇ ವಿಭಿನ್ನ ಅಥವಾ ಹೆಚ್ಚುವರಿ ಜಮೀನನ್ನು ಕೋರುವುದಿಲ್ಲವೆಂದು ಉಲ್ಲೇಖಿಸಿರುವುದು ಸಮಿತಿಯ ಗಮನಕ್ಕೆ ಬಂದಿದೆ. ಈ ಹಿನ್ನೆಲೆಯಲ್ಲಿ ಟೌನ್‌ಶಿಪ್-1 ರ ಹಸ್ತಾಂತರ ಹಾಗೂ ಖಾಸಗಿ ಹಾಗೂ ಸರ್ಕಾರಿ ಜಮೀನಿನ ಅವಶ್ಯಕತೆಯ ಪರಿಷ್ಕರಣೆ ನ್ಯಾಯಾಲಯದ ಆದೇಶಗಳ ಸ್ಪಷ್ಟ ಹಾಗೂ ನೇರ ಉಲ್ಲಂಘನೆ ಎಂದು ಸಮಿತಿ ತೀರ್ಮಾನಿಸುತ್ತದೆ. ನಿರ್ದಿಷ್ಟವಾಗಿ ಖಾಸಗಿ ಜಮೀನಿನ ಅವಶ್ಯಕತೆಯನ್ನು ಇಳಿಮುಖಗೊಳಿಸಲಾಗಿದ್ದು, ಸರ್ಕಾರಿ ಜಮೀನಿನ ಅವಶ್ಯಕತೆಯನ್ನು ಹೆಚ್ಚುವರಿ ಮಾಡಲಾಗಿದೆ.

*9. ನೈಸೆಲ್ ಸಂಸ್ಥೆಯು ಪರಿಹಾರದ ಮೊತ್ತವನ್ನು ಪ್ರಶ್ನಿಸಿ ಪ್ರಕರಣ ಹೂಡಿರುವುದು ಕ್ರಿಯಾ ಒಪ್ಪಂದದ ಅನುಚ್ಛೇಧ 5 ರ ನೇರ ಹಾಗೂ ಸ್ಪಷ್ಟ ಉಲ್ಲಂಘನೆಯಾಗಿದೆ. ಇದಲ್ಲದೆ, ಈವರೆವಿಗೂ ಸಂಬಂಧಪಟ್ಟ ರೈತರಿಗೆ ಭೂಮಾಲೀಕರಿಗೆ ಯಾವುದೇ ಪರಿಹಾರವನ್ನು ನೀಡುವಲ್ಲಿ ನೀಸೆಲ್ ಸಂಸ್ಥೆ ವಿಫಲವಾಗಿದೆ. ಆದುದರಿಂದ ನಗರ ಸಮುಚ್ಛಯ-1 ಕ್ಕೆ ಅನ್ವಯಿಸುವಂತೆ ನ್ಯಾಯಾಲಯದ ಸಮ್ಮತಿಯನ್ನು*

*ಪಡೆದುಕೊಂಡು 1916 ಎಕರೆ ವಿಸ್ತೀರ್ಣದ ಜಮೀನನ್ನು ಅಧಿಸೂಚನೆಯಿಂದ ಹೊರತುಪಡಿಸಲು ಸರ್ಕಾರವು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಇದಕ್ಕೆ ಪೂರಕವಾಗಿ ಭೂಸ್ವಾಧೀನ ಕಾಯಿದೆ 2013 ರ ಹಿನ್ನೆಲೆಯಲ್ಲಿ ಪರಿಹಾರದ ಮೊತ್ತವನ್ನು ಸಮರ್ಥಿಸಿಕೊಳ್ಳಲು ಸರ್ಕಾರವು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಆಗ್ರಹಿಸುತ್ತದೆ.*

4. *ಕ್ರಿಯಾ ಒಪ್ಪಂದ ಹಾಗೂ ಸೋಮಶೇಖರ ರೆಡ್ಡಿ ಪ್ರಕರಣದ ನ್ಯಾಯಾಲಯದ ತೀರ್ಪಿನ ಅನುಗುಣವಾಗಿ ನಗರ ಸಮುಚ್ಛಯ-1 ಅನ್ನು ಕೆಂಗೇರಿ ಬಳಿ ಇರುವ ಗ್ರಾಮಗಳ ಜಮೀನನ್ನು ವಶಪಡಿಸಿಕೊಂಡು ಅಭಿವೃದ್ಧಿಪಡಿಸಬೇಕಾಗುವುದು. ಈ ಪೈಕಿ ವರಾಹಸಂದ್ರ ಗ್ರಾಮವೂ ಸಹ ಸೇರ್ಪಡೆಯಾಗಿದೆ. 1998 ರ ನಂತರ ಕೆಂಗೇರಿಯಿಂದ ಬಿಡದಿಗೆ ನಗರ ಸಮುಚ್ಛಯ-1 ಸ್ಥಳಾಂತರಗೊಂಡ ಕಾರಣ ಮೂಲ ಸ್ಥಳವಾದ ಕೆಂಗೇರಿ ಆಸುಪಾಸಿನ ಜಮೀನಿನ ಅವಶ್ಯಕತೆ ಪ್ರಸಕ್ತವಾಗಿ ಇರುವುದಿಲ್ಲ. ಸದನ ಸಮಿಯು ಸ್ಥಳ ಪರಿವೀಕ್ಷಣೆ ಕೈಗೊಂಡಾಗ ಪೆರಿಫರೆಲ್ ರಸ್ತೆಯ ಆಸುಪಾಸಿನಲ್ಲಿರುವ ನಗರ ಸಮುಚ್ಛಯ-1 ರ ವ್ಯಾಪ್ತಿಗೆ ಒಳಪಡದ ಕೆಂಗೇರಿ ಹೋಬಳಿಯ ವರಾಹಸಂದ್ರ ಗ್ರಾಮದ ಜಮೀನುಗಳನ್ನು ವಶಪಡಿಸಿಕೊಂಡು ಖಾಸಗಿ ಪಾಲುದಾರರು ಬಡಾವಣೆಗಳನ್ನು ಅನಧಿಕೃತವಾಗಿ ಅಭಿವೃದ್ಧಿಪಡಿಸಿರುವುದನ್ನು ಸಮಿತಿಯು ಗಮನಿಸಿದೆ. ಆದುದರಿಂದ ವರಾಹಸಂದ್ರ ಗ್ರಾಮದ ಜಮೀನುಗಳಿಗೆ ಜಾರಿಗೊಳಿಸಿರುವ ಅಧಿಸೂಚನೆಯನ್ನು ಅಸಿಂಧು ಎಂದು ಪರಿಗಣಿಸಿ, ಪ್ರಸ್ತಾವಿತ ಜಮೀನನ್ನು ಅಧಿಸೂಚನೆಯ ವ್ಯಾಪ್ತಿಯಿಂದ ಹೊರತುಪಡಿಸಲು ಈ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಹಲವಾರು ಪ್ರಕರಣಗಳಲ್ಲಿ ಪ್ರಥಮ ಸ್ತರದಲ್ಲಿ ನಿಗದಿಪಡಿಸಲಾದ ಕೆಂಗೇರಿ ಹಾಗೂ ಸ್ಥಳಾಂತರಿಸಲಾದ ಬಿಡದಿ ವ್ಯಾಪ್ತಿಯ ಜಮೀನುಗಳನ್ನು ಸಮಾನಾಂತರವಾಗಿ ನಗರ ಸಮುಚ್ಛಯ-1 ರ ಅಭಿವೃದ್ಧಿಯ ಹೆಸರಿನಲ್ಲಿ ಖಾಸಗಿ ಪಾಲುದಾರರು ಹೊಂದಿರುವುದನ್ನು ಸಮಿತಿಯು ಗಮನಿಸಿದೆ. ಇದರಿಂದಾಗಿ ಕೆಂಗೇರಿ ವ್ಯಾಪ್ತಿಯ ಭೂಮಾಲೀಕರು ಅತಂತ್ರ ಸ್ಥಿತಿಯಲ್ಲಿದ್ದು, ಸಂಕಷ್ಟದಲ್ಲಿ ಸಿಲುಕಿರುವ ಬಗ್ಗೆ ಸಮಿತಿಗೆ ಮನವಿಗಳನ್ನು ಸಲ್ಲಿಸಿರುತ್ತಾರೆ. ಆದುದರಿಂದ ಆದ್ಯತೆಯ ಮೇರೆಗೆ ನಗರ ಸಮುಚ್ಛಯದ ಅಭಿವೃದ್ಧಿಗೆ ಜಮೀನನ್ನು ವಾಸ್ತವಿಕ ಅನುಷ್ಠಾನ ಪ್ರದೇಶ ಹಾಗೂ ವಿಸ್ತೀರ್ಣಕ್ಕೆ ಸೀಮಿತಗೊಳಿಸಬೇಕೆಂದು ಸಮಿತಿಯು ಆಗ್ರಹಿಸುತ್ತದೆ.*

*ಮೇಲೆ ಪ್ರತಿಪಾದಿಸಿರುವ ಅಂಶಗಳು ಹಾಗೂ ವಿಶ್ಲೇಷಣೆಯ ಆಧಾರದ ಮೇಲೆ ಸರ್ಕಾರವು ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನ ಉಲ್ಲಂಘನೆಯ ಬಗ್ಗೆ ನಿರ್ದಿಷ್ಟ ಅಂಕಿ ಅಂಶಗಳ ಮೇಲೆ ನ್ಯಾಯಾಲಯದಲ್ಲಿ ಪ್ರತಿವಾದವನ್ನು ಮಂಡಿಸಿ ಕ್ರಿಯಾ ಒಪ್ಪಂದದ ನಿಖರ ಹಾಗೂ ನೈಜ ಪಾಲನೆಗೆ ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.*

## *XX. ಅನುಚ್ಛೇದ – 8.3 – ವಿದ್ಯುತ್ ಉತ್ಪಾದನೆಯ ಬಗ್ಗೆ ಒಪ್ಪಂದವನ್ನು ಖಾಸಗಿ ಪಾಲುದಾರರ ಜಾರಿಗೊಳಿಸುವ ಸೌಲಭ್ಯವನ್ನು ಕಲ್ಪಿಸುವ ಬಗ್ಗೆ.*

ಕ್ರಿಯಾ ಒಪ್ಪಂದದ ಈ ಷರತ್ತಿನ ಅನುಗುಣವಾಗಿ ರಾಜ್ಯ ಸರ್ಕಾರವು 400 ಮೆಗಾ ವ್ಯಾಟ್ ಸಾಮರ್ಥ್ಯದ ವಿದ್ಯುತ್ ಉತ್ಪಾದನಾ ಘಟಕಗಳನ್ನು ಖಾಸಗಿ ಪಾಲುದಾರರು ಸ್ಥಾಪಿಸಲು ಒಪ್ಪಿಗೆ ನೀಡಲಾಗಿದೆ. ಖಾಸಗಿ ಪಾಲುದಾರರು ಈ ಷರತ್ತಿನ ಅನುಗುಣವಾಗಿ ಟೋಲ್ ರಸ್ತೆ, ನಗರಗಳು, ದೂರ ಸಂಪರ್ಕ ಸೌಲಭ್ಯಗಳು, ನೀರು ಸರಬರಾಜು ವ್ಯವಸ್ಥೆ, ತ್ಯಾಜ್ಯ ನೀರಿನ ಸಂರಕ್ಷಣೆ ಇತ್ಯಾದಿ ಸವಲತ್ತುಗಳಿಗೆ ಅವಶ್ಯಕವಿರುವ ವಿದ್ಯುತ್ತನ್ನು ಉತ್ಪಾದಿಸುವ ಬಗ್ಗೆ ಪ್ರತಿಪಾದಿಸಲಾಗಿದೆ.

ಉತ್ಪಾದಿಸಲಾಗುವ ಹೆಚ್ಚುವರಿ ವಿದ್ಯುತ್ತನ್ನು ರಾಜ್ಯ ಸರ್ಕಾರಕ್ಕೆ ಸ್ಪರ್ಧಾತ್ಮಕ ದರಗಳಲ್ಲಿ ಸರಬರಾಜು ಮಾಡುವ ಬಗ್ಗೆಯೂ ಪ್ರತಿಪಾದಿಸಲಾಗಿದೆ. ಆದರೆ ಈವರೆವಿಗೂ ಬಿ.ಎಂ.ಐ.ಸಿ. ಯೋಜನಾ ಅನುಷ್ಠಾನ ಪ್ರದೇಶದಲ್ಲಿ ಯಾವುದೇ ವಿದ್ಯುತ್ ಉತ್ಪಾದನಾ ಘಟಕವನ್ನು ಸ್ಥಾಪಿಸಿರುವುದಿಲ್ಲ. ಈ ವೈಫಲ್ಯತೆಯಿಂದಾಗಿ ಪೆರಿಫರೆಲ್ ರಸ್ತೆ ಮತ್ತು ಲಿಂಕ್ ರಸ್ತೆಗಳಲ್ಲಿ ದೀಪಗಳನ್ನು ಅಳವಡಿಸದೇ ಇರುವುದನ್ನು ಸಮಿತಿಯು ಸ್ಥಳ ಪರಿವೀಕ್ಷಣೆಯಲ್ಲಿ ಗಮನಿಸಿದೆ. ಕ್ರಿಯಾ ಒಪ್ಪಂದದ ಈ ಷರತ್ತನ್ನು ಅವಲೋಕಿಸಿದಾಗ ಯೋಜನಾ ವ್ಯಾಪ್ತಿ ಪ್ರದೇಶದ ಪೂರಕ ಸೌಲಭ್ಯಗಳಿಗೆ ಅವಶ್ಯಕವಿರುವ ವಿದ್ಯುತ್ತನ್ನು ಸಂಪೂರ್ಣವಾಗಿ ಖಾಸಗಿ ಪಾಲುದಾರರು ಉತ್ಪಾದನೆ ಮಾಡುವ ಉದ್ದೇಶ ಹೊಂದಿದ್ದಾರೆ ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. ಯಾವುದೇ ಕಾಲಮಿತಿಗಳನ್ನು ನಿಗದಿಪಡಿಸದೇ ಇದ್ದಾಗ್ಯೂ ಸಹ 19 ವರ್ಷಗಳ ವಿಳಂಬದ ನಂತರವೂ ವಿದ್ಯುತ್ ಉತ್ಪಾದನೆಯಲ್ಲಿ ಖಾಸಗಿ ಪಾಲುದಾರರು ನಿರ್ಲಕ್ಷ್ಯತಾ ಧೋರಣೆ ತಳೆದಿರುವುದು ಸಮಿತಿಗೆ ಸ್ಪಷ್ಟವಾಗಿದೆ. ಈ ಹಿನ್ನೆಲೆಯಲ್ಲಿ ಕ್ರಿಯಾ ಒಪ್ಪಂದದ ಈ ಷರತ್ತು ಸಂಪೂರ್ಣವಾಗಿ ಉಲ್ಲಂಘನೆಯಾಗಿದೆ ಎಂದು ಸಮಿತಿ ತೀರ್ಮಾನಿಸುತ್ತದೆ. ಯೋಜನಾ ತಾಂತ್ರಿಕ ವರದಿಯು ಕ್ರಿಯಾ ಒಪ್ಪಂದದ ಒಂದು ಅವಿಭಾಜ್ಯ ಅಂಗವಾಗಿರುತ್ತದೆ. ಯೋಜನಾ ತಾಂತ್ರಿಕ ವರದಿಯ ಅನುಗುಣವಾಗಿ ಐ.ಆರ್.ಸಿ. ಮಾನದಂಡಗಳ ಪಾಲನೆಗೆ ನೈಸೆಲ್ ಕಂಪೆನಿ ಬದ್ಧವಾಗಿರುತ್ತದೆ. ಬೆಳಕಿನ ಸೌಲಭ್ಯಕ್ಕೆ ಸಂಬಂಧಿಸಿದಂತೆ ಐ.ಆರ್.ಸಿ. ನಿರ್ದಿಷ್ಟ ಮಾನದಂಡಗಳನ್ನು ನಿರೂಪಿಸಿದ್ದು, ಈ ಮಾನದಂಡಗಳ ಪಾಲನೆಯಲ್ಲಿ ಖಾಸಗಿ ಪಾಲುದಾರರು ವಿಫಲರಾಗಿದ್ದಾರೆಂದು ಸಮಿತಿ ತೀರ್ಮಾನಿಸುತ್ತದೆ. ವಿದ್ಯುತ್ ಉತ್ಪಾದನಾ ಸೌಲಭ್ಯದ ಅನುಪಸ್ಥಿತಿಯಲ್ಲಿ ಪೂರಕ ಸೌಲಭ್ಯಗಳ ನಿರ್ವಹಣೆ ಕಷ್ಟಸಾಧ್ಯವಾಗಿರುವುದರಿಂದ ಯೋಜನಾ ತಾಂತ್ರಿಕ ವರದಿ ಹಾಗೂ ಐ.ಆರ್.ಸಿ. ಮಾನದಂಡಗಳನ್ನು ಉಪೇಕ್ಷಿಸಿರುವುದು ಸಮಿತಿಗೆ ಮನದಟ್ಟಾಗಿದೆ. ***ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರವು ಪಿ.ಪಿ.ಪಿ. ಯೋಜನೆಗಳಿಗೆ ನಿರ್ದಿಷ್ಟವಾಗಿ ಜಾರಿಗೊಳಿಸಿರುವ ಐ.ಆರ್.ಸಿ. ಎಸ್.ಪಿ.84/2014 ಪ್ರತಿಪಾದನೆಗಳ ಅನುಗುಣವಾಗಿ ವಿದ್ಯುತ್ ಸೌಲಭ್ಯದ ಸೃಜನೆಯನ್ನು ದೃಢೀಕರಿಸಿಕೊಳ್ಳಲು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತದೆ. ಇದಕ್ಕೆ ಪೂರಕವಾಗಿ ಈ ಷರತ್ತಿನ ಅನುಗುಣವಾಗಿ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ಖಾಸಗಿ ಪಾಲುದಾರರು ಸೃಜಿಸುವುದನ್ನು ಸರ್ಕಾರವು ತ್ವರಿತವಾಗಿ ದೃಢೀಕರಿಸಿಕೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.***

### ***XXI. <u>ಅನುಚ್ಛೇದ – 9.4 – ದೂರಸಂಪರ್ಕ ಕಲ್ಪಿಸುವ ಬಗ್ಗೆ.</u>***

ಈ ಅನುಚ್ಛೇಧದ ಅಡಿಯಲ್ಲಿ ಖಾಸಗಿ ಪಾಲುದಾರರು ದೂರ ಸಂಪರ್ಕ ಸೌಲಭ್ಯವನ್ನು ಕಲ್ಪಿಸಲು ಬದ್ಧರಾಗಿರುವುದು ವ್ಯಕ್ತವಾಗುತ್ತದೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಹಾಗೂ ಖಾಸಗಿ ಪಾಲುದಾರರ ಬಾಧ್ಯತೆ ಹಾಗೂ ಕರ್ತವ್ಯಗಳನ್ನು ವಿವಿಧ ಉಪ ಕಂಡಿಕೆಗಳಲ್ಲಿ ಉಲ್ಲೇಖಿಸಲಾಗಿದೆ. ವಾಸ್ತವಿಕವಾಗಿ ದೂರಸಂಪರ್ಕ ಸೌಲಭ್ಯಕ್ಕೆ ಸಂಬಂಧಿಸಿದಂತೆ ಖಾಸಗಿ ಪಾಲುದಾರರು ದಿನಾಂಕ 03.04.1997 ರಿಂದ ಈವರೆವಿಗೂ ಸಾಧಿಸಿರುವ ಭೌತಿಕ ಹಾಗೂ ಆರ್ಥಿಕ ಪ್ರಗತಿಯ ಬಗ್ಗೆ ಸಮಿತಿಗೆ ಯಾವುದೇ ಮಾಹಿತಿ ಲಭ್ಯವಿರುವುದಿಲ್ಲ. ದೂರ ಸಂಪರ್ಕ ಸೌಲಭ್ಯ ಒದಗಿಸುವ ನಿಟ್ಟಿನಲ್ಲಿ ಖಾಸಗಿ ಪಾಲುದಾರರು ಸಂಪೂರ್ಣವಾಗಿ ವಿಫಲರಾಗಿರುವ ಹಿನ್ನೆಲೆಯಲ್ಲಿ ಕ್ರಿಯಾ ಒಪ್ಪಂದದ ಈ ಷರತ್ತು ಸಂಪೂರ್ಣವಾಗಿ ಉಲ್ಲಂಘನೆಯಾಗಿದೆ ಎಂದು ಸಮಿತಿ ತೀರ್ಮಾನಿಸುತ್ತದೆ. ಸರ್ಕಾರವು ಕ್ರಿಯಾ ಒಪ್ಪಂದದ ಈ ಷರತ್ತಿನ ಅನುಗುಣವಾಗಿ ದೂರ ಸಂಪರ್ಕ ಸೌಲಭ್ಯದ ಮೂಲಭೂತ ಸೌಕರ್ಯದ ಸೃಜನೆಗೆ ಖಾಸಗಿ ಪಾಲುದಾರರನ್ನು ಜವಾಬ್ದಾರಿಯುತರಾಗಿ ಮಾಡಲು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಪೂರಕವಾಗಿ ಈ ವೈಫಲ್ಯತೆಯನ್ನು ಕ್ರಿಯಾ ಒಪ್ಪಂದದ ನಿರ್ವಹಣೆ ಹಾಗೂ ಪಾಲನೆಯ ಉಲ್ಲಂಘನೆ ಎಂದು ಪರಿಗಣಿಸಿ ಕ್ರಮ ಜರುಗಿಸಬೇಕೆಂದು ಸಮಿತಿಯು ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತದೆ.

## XXII. ಅನುಚ್ಛೇಧ – 10 –ಯೋಜನೆಗೆ ಅವಶ್ಯಕವಿರುವ ನೀರಿನ ಸರಬರಾಜು ಹಾಗೂ ಸಂಸ್ಕರಣೆ

*ನಗರಾಭಿವೃದ್ಧಿ ಇಲಾಖಾ ವತಿಯಿಂದ ಸಮಿತಿಗೆ ಸಲ್ಲಿಸಲಾದ ಉಲ್ಲೇಖ/ದಾಖಲಾತಿ ಹಾಗೂ ಸ್ಪಷ್ಟೀಕರಣದ ಹಿನ್ನಲೆಯಲ್ಲಿ ಈ ಅನುಚ್ಛೇಧಕ್ಕೆ ಸಂಬಂಧಿಸಿದಂತೆ ಸಮಿತಿಯು ಈ ಕೆಳಕಂಡಂತೆ ಶಿಫಾರಸ್ಸುಗಳನ್ನು ಮಾಡುತ್ತದೆ:*

ದಿನಾಂಕ 11.05.1997 ರಂದು ಬಿ.ಡಬ್ಲ್ಯು.ಎಸ್.ಎಸ್.ಬಿ. ಮತ್ತು ನೈಸೆಲ್ ಸಂಸ್ಥೆಯ ನಡುವೆ ದಿನಾಂಕ 20.11.1995ರ ಲೋಕೋಪಯೋಗಿ ಇಲಾಖೆಯ ಆದೇಶದ ಆಧಾರದ ಮೇಲೆ ಒಡಂಬಡಿಕೆಯನ್ನು ಜಾರಿಗೊಳಿಸಲಾಗಿದೆ. ಈ ಒಡಂಬಡಿಕೆಯ ಅನುಗುಣವಾಗಿ ಸೆಕೆಂಡರಿ ಸ್ತರದಲ್ಲಿ ಸಂಸ್ಕರಣಗೊಳಿಸಲಾದ 85 ಎಂ.ಎಲ್.ಡಿ. ನೀರನ್ನು ನೈಸೆಲ್ ಸಂಸ್ಥೆಗೆ ಸರಬರಾಜು ಮಾಡಲು ಬಿ.ಡಬ್ಲ್ಯು.ಎಸ್.ಎಸ್.ಬಿ. ಸಹಮತಿ ಸೂಚಿಸಿದೆ. ಈ ಪೈಕಿ 20 ಎಂ.ಎಲ್.ಡಿ. ಯನ್ನು ರಸ್ತೆಗಳಿಗೆ ಹಾಗೂ 65 ಎಂ.ಎಲ್.ಡಿ. ಗಳನ್ನು ಟೌನ್ ಶಿಪ್‌ಗಳಿಗೆ ಬಳಕೆ ಮಾಡುವುದಾಗಿ ಪ್ರತಿಪಾದಿಸಲಾಗಿದೆ. ಈ ಒಡಂಬಡಿಕೆಯ ಷರತ್ತುಗಳಲ್ಲಿ ನೈಸೆಲ್ ಸಂಸ್ಥೆಯು ಟೆರಿಷರಿ ಅಥವಾ 4ನೇ ಸ್ತರದ ಸಂಸ್ಕರಣೆಯನ್ನು ಜಾರಿಗೊಳಿಸಲು ತಮ್ಮ ಸ್ವಂತ ವೆಚ್ಚದಲ್ಲಿ ವೃಷಭಾವತಿ ಕಣಿವೆಯಲ್ಲಿ ಘಟಕವನ್ನು ಸ್ಥಾಪಿಸಲು ಸಹಮತಿ ನೀಡಲಾಗಿದೆ. ಈ ಘಟಕಕ್ಕೆ ಅವಶ್ಯವಿರುವ ತಾಂತ್ರಿಕ ಸಲಹೆ ಹಾಗೂ ಬೆಂಬಲವನ್ನು ಬಿ.ಡಬ್ಲ್ಯು.ಎಸ್.ಎಸ್.ಬಿ. ನೈಸೆಲ್ ಸಂಸ್ಥೆಯ ತಾಂತ್ರಿಕ ಸಹಾಯದಿಂದ ಕೈಗೊಳ್ಳುವ ಬಗ್ಗೆ ಪ್ರತಿಪಾದಿಸಲಾಗಿದೆ.

ಈ ಒಡಂಬಡಿಕೆಗೆ ಪೂರಕವಾಗಿ ದಿನಾಂಕ 18.08.2000 ರಂದು ನೈಸೆಲ್ ಹಾಗೂ ಮುಖ್ಯ ಅಭಿಯಂತರರು, ನೀರಾವರಿ ದಕ್ಷಿಣ ಇವರ ನಡುವೆ ಒಡಂಬಡಿಕೆಯನ್ನು ಜಾರಿಗೊಳಿಸಲಾಗಿದೆ. ರಾಜ್ಯ ಸರ್ಕಾರವು ದಿನಾಂಕ 20.11.1995 ರ ಆದೇಶದಲ್ಲಿ ನೈಸೆಲ್ ಸಂಸ್ಥೆ 2 ಟಿ.ಎಂ.ಸಿ. ನೀರನ್ನು ಬಳಸಲು ಅನುಮತಿ ನೀಡಿರುವ ಹಿನ್ನೆಲೆಯಲ್ಲಿ ಹಾಗೂ ಕ್ರಿಯಾ ಒಪ್ಪಂದದ ಕಂಡಿಕೆ 3.7.2ರ ಅಡಿಯಲ್ಲಿ ವಾರ್ಷಿಕವಾಗಿ 2 ಟಿ.ಎಂ.ಸಿ. ನೀರನ್ನು ಹಂಚಿಕೆ ಮಾಡುವ ಹಿನ್ನೆಲೆಯಲ್ಲಿ ಈ ಒಪ್ಪಂದವನ್ನು ಜಾರಿಗೊಳಿಸಲಾಗಿದೆ. ಈ ಒಪ್ಪಂದದ ಅನುಗುಣವಾಗಿ ನೈಸೆಲ್ ಸಂಸ್ಥೆಯು ಶ್ರೀರಂಗಪಟ್ಟಣದ ಬಳಿಯಿರುವ ಕಾವೇರಿ ನದಿಯಿಂದ ಕುಡಿಯುವ ನೀರಿನ ಸೌಲಭ್ಯಕ್ಕಾಗಿ 2 ಟಿ.ಎಂ.ಸಿ. ನೀರನ್ನು ಬಳಸಲು ತಾತ್ವಿಕ ಅನುಮೋದನೆ ನೀಡಲಾಗಿದೆ. ಬೆಂಗಳೂರು ನಗರಕ್ಕೆ ಕುಡಿಯುವ ನೀರಿಗಾಗಿ ಹಂಚಿಕೆಯಾಗಿರುವ 30 ಟಿ.ಎಂ.ಸಿ. ನೀರಿನಲ್ಲಿ ಕಡಿತವಾದಲ್ಲಿ ಇದೇ ಅನುಪಾತದಲ್ಲಿ ಸರಬರಾಜನ್ನು ಕಡಿತಗೊಳಿಸುವ ಷರತ್ತನ್ನೂ ಸಹ ವಿಧಿಸಲಾಗಿದೆ. ಖಾಸಗಿ ಪಾಲುದಾರರು ನೀರಿನ ಸರಬರಾಜು ಸೌಕರ್ಯಕ್ಕೆ ಸ್ವಂತ ವೆಚ್ಚದಲ್ಲಿ ನಿರ್ಮಾಣವನ್ನು ಕೈಗೊಳ್ಳಬೇಕಾಗಿದ್ದು, ಬೇರೆ ಬಳಕೆದಾರರ ಅನುಪಾತದಲ್ಲೇ ರಾಯಲ್ಟಿ ವಿಧಿಸುವ ಬಗ್ಗೆ ಪ್ರತಿಪಾದಿಸಲಾಗಿದೆ. ಈ ನೀರನ್ನು ಕೆಲವು ನಿರ್ಬಂಧನೆಗೆ ಒಳಪಟ್ಟಂತೆ ನಗರ ಸಮುಚ್ಛಯದಲ್ಲಿ ಬಳಸಲು ಉದ್ದೇಶಿಸಲಾಗಿದೆ. ನಂತರ 20.08.2008 ರಂದು ಬಿ.ಡಬ್ಲ್ಯು.ಎಸ್.ಎಸ್.ಬಿ., ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ಇವರಿಗೆ ಪ್ರಸ್ತಾವಿತ ಒಡಂಬಡಿಕೆಯಿಂದ ಬಿ.ಡಬ್ಲ್ಯು.ಎಸ್.ಎಸ್.ಬಿ.ಗೆ ಅನಾನುಕೂಲವಾಗಿದ್ದು, ಬೆಂಗಳೂರು ನೀರು ಸರಬರಾಜಿಗೆ ಸಂದಿಗ್ಧತೆ ಉಂಟಾಗುವುದರಿಂದ 02 ಟಿ.ಎಂ.ಸಿ. ನೀರಿನ ಸರಬರಾಜಿನ ಷರತ್ತನ್ನು ಕಾವೇರಿ ಟ್ರಿಬ್ಯುನಲ್ ಆದೇಶದ ಅನುಗುಣವಾಗಿ ಪರಿಷ್ಕರಿಸುವ ಅವಶ್ಯಕತೆ ಇದೆ ಎಂದು ತಿಳಿಸಿರುತ್ತಾರೆ. ಈ ಕೋರಿಕೆಗೆ ಸ್ಪಂದಿಸಿ ದಿನಾಂಕ 10.12.2008 ರಂದು ವಿಶೇಷ ಕರ್ತವ್ಯಾಧಿಕಾರಿ, ಜಲಸಂಪನ್ಮೂಲ ಇಲಾಖೆ ಇವರು ಸರ್ವೋಚ್ಛ ನ್ಯಾಯಾಲಯದಲ್ಲಿ ಕಾವೇರಿ ನ್ಯಾಯಾಧೀಕರಣದ

ಅಂತಿಮ ತೀರ್ಪಿನ ವಿರುದ್ಧ ಬಾಕಿ ಇರುವ ಮೇಲ್ಮನವಿಗಳು ಇತ್ಯರ್ಥವಾದ ನಂತರ ಪ್ರಸ್ತಾವಿತ ತಿದ್ದುಪಡಿಗಳ ಬಗ್ಗೆ ಪರಿಶೀಲಿಸಲು ಅವಕಾಶವಿರುತ್ತದೆ ಎಂದು ತಿಳಿಸಿರುತ್ತಾರೆ. ಇದೇ ಅಭಿಪ್ರಾಯವನ್ನು ೦೫.೦೩.೨೦೦೯ ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ಇವರಿಗೆ ಸಲ್ಲಿಸಲಾಗಿದೆ. 20.09.2009 ರಂದು ಅಧ್ಯಕ್ಷರು, ಬಿ.ಡಬ್ಲ್ಯು.ಎಸ್.ಎಸ್.ಬಿ. ನೈಸ್ ಒಡನೆ 2 ಟಿ.ಎಂ.ಸಿ. ನೀರು ಸರಬರಾಜು ಒಪ್ಪಂದವನ್ನು ನೀರಾವರಿ ಇಲಾಖೆ, ಮುಖ್ಯ ಅಭಿಯಂತರರು, ಮೈಸೂರು ಇವರು ಅನುಷ್ಠಾನಗೊಳಿಸಿದ್ದು, ಬಿ.ಡಬ್ಲ್ಯು.ಎಸ್.ಎಸ್.ಬಿ. ಯನ್ನು ಈ ವಿಷಯದಲ್ಲಿ ಸಂಪರ್ಕಿಸಿರುವುದಿಲ್ಲ ಎಂದು ಆಕ್ಷೇಪಿಸಿರುತ್ತಾರೆ. ಮೂಲಭೂತವಾಗಿ ಬೆಂಗಳೂರಿಗೆ ನೀರನ್ನು ಸಂಸ್ಕರಿಸಿ ಸರಬರಾಜು ಮಾಡುವ ಜವಾಬ್ದಾರಿ ಬಿ.ಡಬ್ಲ್ಯು.ಎಸ್.ಎಸ್.ಬಿ. ಸಂಸ್ಥೆಯದ್ದಾದುದರಿಂದ ಹಾಗೂ ಒಪ್ಪಂದದ ಕಂಡಿಕೆ 2.4 (2 ಟಿ.ಎಂ.ಸಿ. ನೀರಿನಲ್ಲಿ ಸೂಕ್ತ ಅನುಪಾತದಲ್ಲಿ ಕಡಿತ) ಬಿ.ಡಬ್ಲ್ಯು.ಎಸ್.ಎಸ್.ಬಿ. ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ ಎಂದು ಸ್ಪಷ್ಟೀಕರಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಅಧ್ಯಕ್ಷರು, ಬಿ.ಡಬ್ಲ್ಯು.ಎಸ್.ಎಸ್.ಬಿ. ತಮ್ಮ ಸಂಸ್ಥೆಯ ನೀರಿನ ಪಾಲಿನಿಂದ ನೀರಾವರಿ ಇಲಾಖೆ ಅಥವಾ ಇತರೆ ಇಲಾಖೆಗಳು ನೀರು ಹಂಚಿಕೆ ಮಾಡುವುದು ಅಸಮರ್ಪಕ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಹಾಗೂ ಈ ಪ್ರವೃತ್ತಿಯನ್ನು ಸ್ಥಗಿತಗೊಳಿಸಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ತದನಂತರ ನೈಸೆಲ್ ಸಂಸ್ಥೆಯು ದಿನಾಂಕ 29.08.2012 ರಂದು ಜಲಮಂಡಳಿಗೆ ಪತ್ರವನ್ನು ಬರೆದು ಹಾರೋಹಳ್ಳಿ ಜಲರೇಚಕ ಯಂತ್ರಾಗಾರ ಮಾತ್ರವಲ್ಲದೇ ಕಾವೇರಿ 4ನೇ ಹಂತದ 1ನೇ ಘಟ್ಟದ ಅಡಿಯಲ್ಲಿ ನಿರ್ಮಿಸಲಾಗಿರುವ ಜಲಾಗಾರಗಳಿಂದಲೂ ನೀರನ್ನು ಸರಬರಾಜು ಮಾಡುವಂತೆ ಕೋರಿರುತ್ತಾರೆ. ತತ್ಸಂಬಂಧವಾಗಿ ದಿನಾಂಕ 21.05.2001 ರ ತಾತ್ವಿಕ ಅನುಮೋದನೆಯನ್ನು ಪರಿಷ್ಕರಿಸುವಂತೆ ಕೋರಿರುತ್ತಾರೆ.

ಈ ಪ್ರಸ್ತಾವನೆಗೆ ದಿನಾಂಕ 02.11.2012 ರಲ್ಲಿ ಅಧ್ಯಕ್ಷರು, ಬಿ.ಡಬ್ಲ್ಯು.ಎಸ್.ಎಸ್.ಬಿ. ಬೆಂಗಳೂರು ಜಲಮಂಡಳಿ ಕಾರ್ಯವ್ಯಾಪ್ತಿ 300 ಚ.ಕಿ.ಮೀ. ಯಿಂದ 800 ಚ.ಕಿ.ಮೀ. ವಿಸ್ತೀರ್ಣವಾಗಿರುವ ಹಿನ್ನೆಲೆಯಲ್ಲಿ ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣದ ಇತ್ಯರ್ಥವಾದ ನಂತರ ನೈಸ್ ಕಂಪನಿಗೆ ಕಾವೇರಿ ನದಿ ಮೂಲದಿಂದ ನೀರು ನೀಡುವ ಬಗ್ಗೆ ಪರಿಶೀಲಿಸುವ ಅವಕಾಶ ಇರುತ್ತದೆ ಎಂದು ತಿಳಿಸಿರುತ್ತಾರೆ. ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ನೈಸೆಲ್/ನೀಸೆಲ್ ಸಂಸ್ಥೆಗೆ 159 ದಶಲಕ್ಷ ಲೀಟರನ್ನು ಸರಬರಾಜು ಮಾಡಲು ಸಾಧ್ಯವಾಗುವುದಿಲ್ಲ ಎಂದು ಬಿ.ಡಬ್ಲ್ಯು.ಎಸ್.ಎಸ್.ಬಿ. ಸ್ಪಷ್ಟೀಕರಿಸಿರುವುದು ಸಮಿತಿಗೆ ಮನದಟ್ಟಾಗಿದೆ. ವಾಸ್ತವಿಕವಾಗಿ ಬೆಂಗಳೂರು ನೀರು ಸರಬರಾಜು ಅವಕಾಶಕ್ಕೆ ನೈಸೆಲ್/ನೀಸಲ್ ಸಂಸ್ಥೆಯ ಒಡಂಬಡಿಕೆಯನ್ನು ತಾಳೆ ಹಾಕಿರುವುದು ಅಸಮರ್ಪಕ ಹಾಗೂ ಅಸಮಂಜಸ ಎಂದು ಸಮಿತಿ ತೀರ್ಮಾನಿಸುತ್ತದೆ. ಬೆಂಗಳೂರು ನೀರು ಸರಬರಾಜು ಕಾರ್ಯವ್ಯಾಪ್ತಿ ಸಮಗ್ರವಾಗಿ ಬಿ.ಡಬ್ಲ್ಯು.ಎಸ್.ಎಸ್.ಬಿ. ಬಳಿ ಇರುವ ಹಿನ್ನೆಲೆಯಲ್ಲಿ ಹಾಗೂ ಕಾವೇರಿ ನ್ಯಾಯಾಧೀಕರಣದ ಮುಂದಿರುವ ಪ್ರಕರಣದಲ್ಲಿ ಇದೂ ಒಂದು ಅಂಶವಾಗಿರುವ ಹಿನ್ನೆಲೆಯಲ್ಲಿ ನೀರಾವರಿ ಇಲಾಖೆ ಬಿ.ಡಬ್ಲ್ಯು.ಎಸ್.ಎಸ್.ಬಿ. ಯನ್ನು ಸಂಪರ್ಕಿಸದೇ ತಾತ್ವಿಕ ಅನುಮೋದನೆಯನ್ನು ನೀಡಿರುವುದು ಅಸಂಬದ್ಧ ಹಾಗೂ ಕಾನೂನುಬಾಹಿರ ಎಂದು ಸಮಿತಿ ತೀರ್ಮಾನಿಸುತ್ತದೆ. ಇದಲ್ಲದೆ, ನೈಸೆಲ್ ಸಂಸ್ಥೆ ಸಲ್ಲಿಸಿರುವ ಪ್ರಸ್ತಾವನೆಯ ಅನುಗುಣವಾಗಿ 5 ನಗರ ಸಮುಚ್ಚಯಗಳ ಕ್ರೋಢೀಕೃತ ಬೇಡಿಕೆ ದಿನಂಪ್ರತಿ 159 ದಶಲಕ್ಷ ಲೀಟರುಗಳಾಗಿದ್ದು, ಒಡಂಬಡಿಕೆಯನ್ನು 2 ಟಿ.ಎಂ.ಸಿ. ನೀರಿನ ಸರಬರಾಜಿಗಾಗಿ ಒಪ್ಪಿಸಲಾಗಿದೆ. ಮೇಲ್ನೋಟಕ್ಕೆ ಅವಶ್ಯಕತೆಯ ಅನುಗುಣವಾಗಿ ಸರಬರಾಜನ್ನು ನಿಯಂತ್ರಿಸುವಲ್ಲಿ ನೀರಾವರಿ ಇಲಾಖೆ ನಿರ್ಲಕ್ಷ್ಯತಾ ಧೋರಣೆ ತಳೆದಿರುವುದು ಸಮಿತಿಗೆ ಮನದಟ್ಟಾಗಿದೆ. ಈಗಾಗಲೇ ಬಿ.ಡಬ್ಲ್ಯು.ಎಸ್.ಎಸ್.ಬಿ. ಸ್ಪಷ್ಟೀಕರಿಸಿರುವಂತೆ ಕಾವೇರಿ ನ್ಯಾಯಾಧೀಕರಣದ ತೀರ್ಪಿನ ಮೇಲ್ಮನವಿ ಇತ್ಯರ್ಥವಾದ ನಂತರ ಹಾಗೂ ನಗರ ಸಮುಚ್ಚಯಗಳ ಸಮಗ್ರ ಅಭಿವೃದ್ಧಿ ಸಂಪೂರ್ಣ ಹಂತದಲ್ಲಿರುವ ಸ್ತರದಲ್ಲಿ ಈ ಪ್ರಸ್ತಾವನೆಯನ್ನು ನಗರಾಭಿವೃದ್ಧಿ ಇಲಾಖೆ

ಪರಿಗಣಿಸಬಹುದೆಂದು ಸಮಿತಿಯು ಅಭಿಪ್ರಾಯ ಪಡುತ್ತದೆ. ಪ್ರಸಕ್ತ ಸ್ಥಿತಿಗತಿಗಳ ಅನುಗುಣವಾಗಿ ಯೋಜನಾ ಅನುಷ್ಠಾನದ ಪ್ರಗತಿ ಬೆಂಗಳೂರಿನ ನಗರ ಸಮುಚ್ಛಯದ ಆಸುಪಾಸಿನಲ್ಲಿರುವ ಪೆರಿಫರಲ್ ರಸ್ತೆ ಹಾಗೂ ಲಿಂಕ್ ರಸ್ತೆಗೆ ಸೀಮಿತವಾಗಿರುವ ಹಿನ್ನೆಲೆಯಲ್ಲಿ ಈ ಸ್ತರದಲ್ಲಿ ಈ ಒಡಂಬಡಿಕೆಯ ಅನುಷ್ಠಾನವನ್ನು ಸ್ಥಗಿತಗೊಳಿಸುವುದು ಸೂಕ್ತವೆಂದು ಸಮಿತಿ ತೀರ್ಮಾನಿಸುತ್ತದೆ.

ನೈಸೆಲ್ ಸಂಸ್ಥೆ ಸಲ್ಲಿಸಿರುವ ಪ್ರಸ್ತಾವನೆಗಳನ್ನು ಪರಿಶೀಲಿಸಿದಾಗ 2002 ರಿಂದ 2015ರ ಮಧ್ಯಂತರದಲ್ಲಿ 5 ನಗರ ಸಮುಚ್ಛಯಗಳಿಗೆ ಸಂಬಂಧಿಸಿದಂತೆ 109.17 ದಶಲಕ್ಷ ಲೀಟರಿನ ನೀರಿನ ಅವಶ್ಯಕತೆ ಇರುವುದಾಗಿ ಪ್ರತಿಪಾದಿಸಲಾಗಿದೆ. ಆದರೆ 2015ರ ಅಂತ್ಯಕ್ಕೆ ಖಾಸಗಿ ಪಾಲುದಾರರು ಸಾಧಿಸಿರುವ ಪ್ರಗತಿ ಪೆರಿಫರೆಲ್ ರಸ್ತೆ, ಲಿಂಕ್ ರಸ್ತೆ ಹಾಗೂ 5 ಇಂಟರ್ ಛೇಂಜ್‌ಗಳ ನಿರ್ಮಾಣಕ್ಕೆ ಸೀಮಿತವಾಗಿದೆ. ಈ ಹಿನ್ನೆಲೆಯಲ್ಲಿ ನಿಯತಕಾಲಿಕವಾಗಿ ವಾಸ್ತವಿಕ ಪ್ರಗತಿಯ ಆಧಾರದ ಮೇಲೆ ಕಟ್ಟುನಿಟ್ಟಾಗಿ ಹಾಗೂ ಅವಶ್ಯಕತೆಯ ಅನುಗುಣವಾಗಿ, ಭೌತಿಕ ಪ್ರಗತಿಯ ಅನುಗುಣವಾಗಿ ನೀರು ಸರಬರಾಜು ಮಾಡಲು ಒಡಂಬಡಿಕೆಯನ್ನು ಮೇಲ್ಕಂಡವಿ ಇತ್ಯರ್ಥವಾದ ನಂತರ ಪರಿಷ್ಕರಿಸಿ ಜಾರಿಗೊಳಿಸಬಹುದಾಗಿದೆ ಎಂದು ಸಮಿತಿಯು ಅಭಿಪ್ರಾಯ ಪಡುತ್ತದೆ. ಸಮಿತಿಯು ಹಲವಾರು ಪ್ರಕರಣಗಳಲ್ಲಿ ಬಿ.ಎಂ.ಐ.ಸಿ. ಯೋಜನೆಯ ಅನುಷ್ಠಾನದಲ್ಲಿ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಭಾಗಿಯಾಗುವ ಸರ್ಕಾರದ ವಿವಿಧ ಇಲಾಖೆಗಳು ಹಾಗೂ ಸರ್ಕಾರದ ಇತರೆ ಪೂರಕ ಸಂಸ್ಥೆಗಳ ನಡುವೆ ಸಂಪೂರ್ಣ ಅಸಮನ್ವಯತೆ ಇರುವುದನ್ನು ಗಮನಿಸಿದೆ. ***ಈ ಪ್ರಕರಣದಲ್ಲಿ ನಗರಾಭಿವೃದ್ಧಿ ಇಲಾಖೆ ವ್ಯಾಪ್ತಿಗೆ ಬರುವ ಬಿ.ಡಬ್ಲ್ಯು.ಎಸ್.ಎಸ್.ಬಿ. ಹಾಗೂ ನೀರಾವರಿ ಇಲಾಖೆ ಈ ಖಾಸಗಿ ಸಹಭಾಗಿತ್ವ ಯೋಜನೆಯ ನಿರ್ವಹಣೆಯಲ್ಲಿ ಪರಸ್ಪರ ಸಮನ್ವಯತೆಯಿಂದ ಕಾರ್ಯೋನ್ಮುಖವಾಗದಿರುವುದು ಸಮಿತಿಗೆ ಸ್ಪಷ್ಟವಾಗಿದೆ. ಇದರಿಂದಾಗಿ ಕಾವೇರಿ ನ್ಯಾಯಾಧೀಕರಣ ತೀರ್ಪು, ಬಿ.ಡಬ್ಲ್ಯು.ಎಸ್.ಎಸ್.ಬಿ. ಕಾರ್ಯವ್ಯಾಪ್ತಿ ಹಾಗೂ ಕ್ರಿಯಾ ಒಪ್ಪಂದದ ವಿವಿಧ ಆಯಾಮಗಳನ್ನು ಉಲ್ಲಂಘಿಸಿ ವಿವಾದಾತ್ಮಕ ಪರಿಸ್ಥಿತಿಯನ್ನು ಸೃಷ್ಟಿ ಮಾಡಿರುವುದು ಸಮಿತಿಗೆ ದಾಖಲಾತಿಗಳಿಂದ ವ್ಯಕ್ತವಾಗಿದೆ. ಈ ಹಿನ್ನೆಲೆಯಲ್ಲಿ ಖಾಸಗಿ ಸಹಭಾಗಿತ್ವದಲ್ಲಿ ಅನುಷ್ಠಾನಗೊಳಿಸಲಾಗುವ ಯೋಜನೆಗಳಿಗೆ ಸಂಬಂಧಿಸಿದಂತೆ ಸರ್ಕಾರದ ವಿವಿಧ ಇಲಾಖೆಗಳ ನಡುವೆ ಸಮನ್ವಯತೆಯನ್ನು ನಿರ್ವಹಿಸಲು ಸೂಕ್ತ ನೀತಿ ನಿರ್ಧಾರವನ್ನು ಜಾರಿಗೊಳಿಸಿ ಮಾರ್ಗಸೂಚಿಗಳನ್ನು ಅನುಷ್ಠಾನಗೊಳಿಸಲು ಸರ್ಕಾರವು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.***

### ***XXIII. <u>ಅನುಚ್ಛೇದ –11 – ಸಮೂಹ ಸಂಸ್ಥೆಗಳು ಹಾಗೂ ಸಮೂಹ ಸಂಸ್ಥೆಗಳ ಭಾಗಿದಾರರು ನಿರ್ವಹಿಸಬೇಕಾಗಿರುವ ಬಂಡವಾಳ ಹೂಡಿಕೆಯ ಬಗ್ಗೆ ಸಮಿತಿಯ ವಿಶ್ಲೇಷಣೆ ಹಾಗೂ ಶಿಫಾರಸ್ಸುಗಳು.</u>***

ಸಮಿತಿಯು ಸಮೂಹ ಸಂಸ್ಥೆಗಳ ಪಾಲುದಾರರು 15% ಬಂಡವಾಳ ಹೂಡಿಕೆಯನ್ನು ಕ್ರಿಯಾ ಒಪ್ಪಂದದ ಅನುಷ್ಠಾನದ ಸಂದರ್ಭದಲ್ಲಾಗಲೀ ಅಥವಾ 21.03.2004 ರಂದು ಸಾಧಿಸಲಾದ ಫೈನಾನ್ಷಿಯಲ್ ಕ್ಲೋಷರ್ ಸಮಯದಲ್ಲಾಗಲೀ ಹೂಡಿರುವ ಬಗ್ಗೆ ವಿಶ್ಲೇಷಿಸಿತು.

ಮೂಲಭೂತವಾಗಿ ಈ ಸಮೂಹ ಸಂಸ್ಥೆಗಳು ಯೋಜನೆಯ ಅಂದಾಜು ವೆಚ್ಚವಾದ 1583 ಕೋಟಿ ರೂ.ಗಳ ಪ್ರತಿಶತ 33 ರಷ್ಟು ಅಂದರೆ 522 ಕೋಟಿ ರೂ.ಗಳನ್ನು ಈಕ್ವಿಟಿ ಸ್ವರೂಪದಲ್ಲಿ ಹೂಡುವುದಾಗಿ ದೃಢೀಕರಿಸಿರುವುದನ್ನು ಸಮಿತಿಯು ಗಮನಿಸಿದೆ. 2ನೇ ಸ್ತರದಲ್ಲಿ ಸೋಮಶೇಖರ ರೆಡ್ಡಿ ಪ್ರಕರಣದಲ್ಲಿ ಖಾಸಗಿ ಪಾಲುದಾರರು 522 ಕೋಟಿ ರೂ.ಗಳನ್ನು ಪ್ರಮೋಟರ್ಸ್ ಬಂಡವಾಳ ಹೂಡಿಕೆಯಾಗಿ

ಸಂಘಟಿಸುವುದಾಗಿ ನೀಡಿರುವ ಹೇಳಿಕೆಯನ್ನೂ ಪರಿಗಣಿಸಿ ರಾಜ್ಯ ಉಚ್ಚ ನ್ಯಾಯಾಲಯವು ಕ್ರಿಯಾ ಒಪ್ಪಂದ ಸಮರ್ಪಕ ಎಂದು ತೀರ್ಪನ್ನು ನೀಡಿದೆ.

ಈ ಹಿನ್ನೆಲೆಯಲ್ಲಿ ಸಮಿತಿಯು 522 ಕೋಟಿ ರೂ.ಗಳ ಬಂಡವಾಳವನ್ನು ಕ್ರಿಯಾ ಒಪ್ಪಂದ ಜಾರಿಗೊಂಡ 03.04.1997 ಹಾಗೂ ಫೈನಾನ್ಷಿಯಲ್ ಕ್ಲೋಷರ್ ಸಾಧಿಸಿದ 29.03.2004 ರ ಮಧ್ಯಂತರ ಅವಧಿಯಲ್ಲಿ ಹೂಡಿರುವ ಬಗ್ಗೆ ವಿಶ್ಲೇಷಿಸಿದೆ. ಯೋಜನಾ ವೆಚ್ಚದ 33% ಅಂದರೆ 522 ಕೋಟಿ ರೂ.ಗಳ ಬಂಡವಾಳದ ಬದಲಾಗಿ ಬಂಡವಾಳ ಹೂಡಿಕೆಯನ್ನು ದಿನಾಂಕ 06.10.1999ರ ಪೂರಕ ಒಪ್ಪಂದದ ಮುಖಾಂತರ 15% ಇಳಿಮುಖಗೊಳಿಸಲಾಗಿದೆ. ಈ ಪರಿಷ್ಕರಣೆಯ ಬಗ್ಗೆ ಆರ್ಥಿಕ ಇಲಾಖೆ, ಅಧಿಕಾರದತ್ತ ಸಮಿತಿ, ಸಚಿವ ಸಂಪುಟದ ಉಪ ಸಮಿತಿ ಹಾಗೂ ಇತರೆ ಸಂಬಂಧಿತ ಪ್ರಾಧಿಕಾರಗಳು ಪ್ರತಿಕ್ರಿಯಿಸದೇ ಇರುವುದನ್ನು ಸಮಿತಿ ಗಮನಿಸಿದೆ. 15% ದರದಲ್ಲಿ 237 ಕೋಟಿ ರೂ.ಗಳನ್ನು ಹೂಡಬೇಕಾಗುವುದು. ಸೋಮಶೇಖರ ರೆಡ್ಡಿ ಪ್ರಕರಣದಲ್ಲಿ ದೃಢೀಕರಿಸಿದ 522 ಕೋಟಿ ರೂ.ಗಳ ಬಂಡವಾಳದ ಹೂಡಿಕೆಯನ್ನು ಹಾದಿ ತಪ್ಪಿಸಲು ಖಾಸಗಿ ಪಾಲುದಾರರು ವೇಗದ ಹೆದ್ದಾರಿಯನ್ನು ಸೆಕ್ಷನ್ 'ಎ', 'ಬಿ' ಮತ್ತು 'ಸಿ' ಆಗಿ ವಿಭಜಿಸಲು ಮನವಿಯನ್ನು ನೀಡಿರುತ್ತಾರೆ. ಅಧಿಕಾರದತ್ತ ಸಮಿತಿ, ಆರ್ಥಿಕ ಇಲಾಖೆ ಈ ವಿಭಜನೆಯಿಂದಾಗುವ ಹೂಡಿಕೆಯ ಮೇಲಿನ ಪರಿಣಾಮಗಳನ್ನು ವಿಶ್ಲೇಷಿಸದೆ ಸಚಿವ ಸಂಪುಟಕ್ಕೆ ಪರಿಷ್ಕೃತ ಸ್ತರಗಳ ಅನುಷ್ಠಾನಕ್ಕೆ ಶಿಫಾರಸ್ಸುಗಳನ್ನು ಮಾಡಿರುತ್ತದೆ. 1999 ರಲ್ಲಿ ಈ ರೀತಿಯ ವಿಭಜನೆಯಿಂದಾಗಿ ಹೊಸ ಘಟಕಕ್ಕೆ ಹೂಡಬೇಕಾದ ಬಂಡವಾಳವನ್ನು ಆ ಘಟಕದ ವಾಸ್ತವಿಕ ವೆಚ್ಚಕ್ಕೆ/2002 ರ ಅಸೈನ್‌ಮೆಂಟ್ ಒಪ್ಪಂದದ ಮುಖಾಂತರ ಯೋಜನೆಯನ್ನು ವಿಭಜಿಸಿದ್ದು, ಸೆಕ್ಷನ್ 'ಎ' ಭಾಗವನ್ನು ನೀಸೆಲ್ ಸಂಸ್ಥೆಗೆ ಹಸ್ತಾಂತರಿಸಲಾಗಿದೆ. ಇದರಿಂದಾಗಿ ನೀಸೆಲ್ ಸಂಸ್ಥೆಗೆ ಅನ್ವಯಿಸುವಂತೆ ಬಂಡವಾಳ ವೆಚ್ಚ ಹಾಗೂ ಸಂಬಂಧಿತ ಈಕ್ವಿಟಿ ಹೂಡಿಕೆ ಕಡಿಮೆಯಾಗುತ್ತದೆ. ಇದೇ ಅನುಪಾತದಲ್ಲಿ ನೈಸೆಲ್ ಸಂಸ್ಥೆಯ ಹೂಡಿಕೆಯೂ ಸಹ ಕಡಿಮೆಯಾಗುತ್ತದೆ. ಬಂಡವಾಳ ಹೂಡಿಕೆಯನ್ನು ಗುರುತರವಾಗಿ ಇಳಿಮುಖಗೊಳಿಸಲು ಖಾಸಗಿ ಪಾಲುದಾರರು ಉದ್ದೇಶಪೂರ್ವಕವಾಗಿಯೇ ಯೋಜನಾ ಅನುಷ್ಠಾನದ ಸ್ತರ ಅಥವಾ ಘಟಕಗಳನ್ನು ಪರಿಷ್ಕರಿಸಿದ್ದಾರೆ ಎಂದು ಸಮಿತಿ ತೀರ್ಮಾನಿಸುತ್ತದೆ. ಈ ಬೆಳವಣಿಗೆಯಿಂದಾಗಿ ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನ ಅನುಗುಣವಾಗಿ ನೈಸೆಲ್ ಕಂಪನಿ ಹೂಡಬೇಕಾದ ಬಂಡವಾಳ ಹೂಡಿಕೆಯನ್ನು ಪ್ರಯತ್ನಪೂರ್ವಕವಾಗಿ ಇಳಿಮುಖಗೊಳಿಸಲಾಗಿದೆ ಎಂದು ಸಮಿತಿ ತೀರ್ಮಾನಿಸುತ್ತದೆ. 1999ರ ನಂತರ ಸೆಕ್ಷನ್ 'ಎ' ಭಾಗದ 64 ಕಿ.ಮೀ. ರಸ್ತೆಗಾಗಿ ಅಂದಾಜು ವೆಚ್ಚ 550 ಕೋಟಿ ರೂ.ಗಳಾಗಿದ್ದು, ಈ ಪೈಕಿ 33% ಅನ್ನು ಪರಿಗಣಿಸಿದರೆ 165 ಕೋಟಿ ಅಥವಾ ಚಾಲ್ತಿಯಲ್ಲಿರುವ 15% ಪರಿಗಣಿಸಿದರೆ 85 ಕೋಟಿ ರೂ.ಗಳಾಗುತ್ತದೆ. ವಿಪರ್ಯಾಸವೆಂದರೆ 2003 ರವರೆಗೂ ಭೂಸ್ವಾಧೀನ ವೆಚ್ಚಕ್ಕಾಗಿ 10 ಕೋಟಿ ರೂ.ಗಳನ್ನೂ ಸಹ ನೈಸೆಲ್ ಕಂಪನಿಯು ಪಾವತಿಸಿರುವುದಿಲ್ಲ.

ಸೋಮಶೇಖರ ರೆಡ್ಡಿ ಪ್ರಕರಣದಲ್ಲಿ ನೈಸೆಲ್ ಸಂಸ್ಥೆಗೆ ನಗರ ಸಮುಚ್ಚಯಗಳನ್ನು ಟೋಲ್ ರಸ್ತೆ ಸಂಪೂರ್ಣಗೊಂಡ ನಂತರ ಅನುಷ್ಠಾನಗೊಳಿಸುವಂತೆ ನಿರ್ದೇಶಿಸಿರುವುದನ್ನು ಸಮಿತಿ ಗಮನಿಸಿದೆ. ಈ ಪರಿಸ್ಥಿತಿಯಲ್ಲಿ ನೈಸೆಲ್ ಸಂಸ್ಥೆಯು ಸಮಗ್ರ ಯೋಜನಾ ವೆಚ್ಚದ ಆಧಾರದ ಮೇಲೆ ಬಂಡವಾಳ ಹೂಡಿಕೆಯನ್ನು ನ್ಯಾಯಾಲಯದ ಮುಂದೆ ನೀಡಿರುವ ದೃಢೀಕರಣದ ಆಧಾರದ ಮೇಲೆ ಮಾಡುವುದು ಅನಿವಾರ್ಯವಾಗಿತ್ತು. ಈ ಹಿನ್ನೆಲೆಯಲ್ಲಿ 522 ಕೋಟಿ ರೂ.ಗಳ ಬಂಡವಾಳ ಹೂಡಿಕೆಯ ಪ್ರಮೇಯವನ್ನು ಸಡಿಲಗೊಳಿಸುವ ಉದ್ದೇಶದಿಂದ ಟೋಲ್ ರಸ್ತೆಯನ್ನು ಸೆಕ್ಷನ್ 'ಎ', ಸೆಕ್ಷನ್ 'ಬಿ' ಮತ್ತು ಸೆಕ್ಷನ್ 'ಸಿ' ಎಂದು ವಿಭಜಿಸಲಾಯಿತು ಎಂದು ಸಮಿತಿ ಅಭಿಪ್ರಾಯ ಪಡುತ್ತದೆ. ಸಮಾನಾಂತರವಾಗಿ ಪ್ರತಿ ಘಟಕದಲ್ಲೂ ಸಹ ಒಂದು ನಗರವನ್ನು ಸಂಬಂಧಿತ ನಗರ ಸಮುಚ್ಚಯ

ಎಂಬ ಶೀರ್ಷಿಕೆಯಡಿಯಲ್ಲಿ ಅನುಷ್ಠಾನಗೊಳಿಸಲು ಪ್ರತಿಪಾದಿಸಿತು. ವಾಸ್ತವಿಕವಾಗಿ ಸಮಗ್ರ ಯೋಜನೆಯನ್ನು ಸೆಕ್ಷನ್ 'ಎ', ಸೆಕ್ಷನ್ 'ಬಿ' ಮತ್ತು ಸೆಕ್ಷನ್ 'ಸಿ' ಸ್ತರಗಳಲ್ಲಿ ವಿಭಜಿಸಲು 06.10.1999ರ ಪೂರಕ ಒಪ್ಪಂದದ ಮುಖಾಂತರ ಅನುಮತಿಯನ್ನು ನೀಡಿರುವುದನ್ನು ಸಮಿತಿಯು ಗಮನಿಸಿದೆ. ಈ ಪ್ರಕರಣದಲ್ಲಿ ಖಾಸಗಿ ಪಾಲುದಾರರ ಬಂಡವಾಳ ಹೂಡಿಕೆ ಕೇವಲ 125 ಕೋಟಿ ರೂ.ಗಳಿಗೆ ಈ ವಿಭಜನೆಯಿಂದ ಸೀಮಿತವಾಗಿರುವ ಸಾಧ್ಯತೆಯನ್ನು ಆರ್ಥಿಕ ಇಲಾಖೆ ಅಥವಾ ಕಾನೂನು ಇಲಾಖೆ ಉಪೇಕ್ಷಿಸಿದೆ ಎಂಬ ಅಭಿಪ್ರಾಯ ಮೇಲ್ನೋಟಕ್ಕೆ ವ್ಯಕ್ತವಾಗುತ್ತದೆ. ಖಾಸಗಿ ಪಾಲುದಾರರ ಸಮೂಹ ಸಂಸ್ಥೆಗಳು 31.03.2005ರ ಅಂತ್ಯಕ್ಕೆ ನಿರೂಪಿತ 237 ಕೋಟಿ ರೂ.ಗಳನ್ನು ಹೂಡುವುದರಲ್ಲಿ ವಿಫಲವಾಗಿರುವುದರಿಂದ ಕ್ರಿಯಾ ಒಪ್ಪಂದ ಅನುಚ್ಛೇಧ 11ರ ಸ್ಪಷ್ಟ ಉಲ್ಲಂಘನೆಯಾಗಿದೆ ಎಂದು ಸಮಿತಿ ತೀರ್ಮಾನಿಸುತ್ತದೆ.

ನ್ಯಾಯಾಲಯಗಳ ತೀರ್ಪಿನ ಹಿನ್ನೆಲೆಯಲ್ಲಿ ವಿಶ್ಲೇಷಿಸಿದಾಗ ಕರ್ನಾಟಕದ ಉಚ್ಛ ನ್ಯಾಯಾಲಯವು 03.05.2005 ರಂದು ನೈಸೆಲ್ ಸಂಸ್ಥೆ ಪಡೆದಿರುವ 150 ಕೋಟಿ ರೂ.ಗಳ ಸಾಲ ಕ್ರಮಬದ್ಧ ಎಂದು ತೀರ್ಮಾನಿಸಿರುವುದನ್ನು ಸಮಿತಿ ಗಮನಿಸಿದೆ. ಇದಕ್ಕೆ ಪೂರಕವಾಗಿ ಪ್ರಥಮ ಸ್ತರದ ಫೈನಾನ್ಷಿಯಲ್ ಕ್ಲೋಷರ್ ಸಹಾ ಕ್ರಮಬದ್ಧ ಎಂದು ನ್ಯಾಯಾಲಯದಲ್ಲಿ ನಿರ್ಧರಿಸಲಾಗಿದೆ. ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನಲ್ಲಿ ನೈಸೆಲ್ ಸಂಸ್ಥೆ ಟೋಲ್ ರಸ್ತೆ ಸಂಪೂರ್ಣಗೊಳಿಸುವವರೆವಿಗೂ ನಗರ ಸಮುಚ್ಛಯವನ್ನು ಅನುಷ್ಠಾನಗೊಳಿಸಬಾರದು ಎಂಬ ಅಭಿಪ್ರಾಯ ವ್ಯಕ್ತವಾಗುವಂತೆ ತೀರ್ಪನ್ನು ನೀಡಲಾಗಿದೆ. ಆದಾಗ್ಯೂ, 03.05.2005 ರಂದು ಟೌನ್‌ಶಿಪ್ ಒಳಗೊಂಡಂತೆ ಸೆಕ್ಷನ್ 'ಎ' ಅನುಷ್ಠಾನಕ್ಕೆ ಮಾನ್ಯ ಉಚ್ಛ ನ್ಯಾಯಾಲಯದ ಅನುಮತಿ ನೀಡಿರುವುದನ್ನು ಸಮಿತಿ ಗಮನಿಸಿದೆ.

**ಮೇಲೆ ವಿಶ್ಲೇಷಿಸಿರುವ ಹಿನ್ನೆಲೆಯಲ್ಲಿ ಖಾಸಗಿ ಪಾಲುದಾರರು ಸೋಮಶೇಖರ ರೆಡ್ಡಿ ಪ್ರಕರಣದಲ್ಲಿ 522 ಕೋಟಿ ರೂ.ಗಳ ಬಂಡವಾಳ ಹೂಡಿಕೆಯ ಬಗ್ಗೆ ನೀಡಿರುವ ಹೇಳಿಕೆ ನಿರರ್ಥಕವಾಗಿದೆ ಎಂದು ಸಮಿತಿ ತೀರ್ಮಾನಿಸುತ್ತದೆ. 2ನೇ ಸ್ತರದಲ್ಲಿ 31.03.2005ರ ಅಂತ್ಯಕ್ಕೆ ಪರಿಷ್ಕೃತ ಮಿತಿಯಾದ 237 ಕೋಟಿ ರೂ.ಗಳ ಬಂಡವಾಳ ಹೂಡಿಕೆಯ ಬಗ್ಗೆಯೂ ನಿರ್ದಿಷ್ಟ ಮಾಹಿತಿ ಇರುವುದಿಲ್ಲ. ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ನೈಸೆಲ್ ಸಂಸ್ಥೆಯ ಲೆಕ್ಕ ಪರಿಶೋಧನೆಗೊಂಡ ಬ್ಯಾಲೆನ್ಸ್ ಶೀಟ್ ಆಧಾರದ ಮೇಲೆ ಕ್ರಿಯಾ ಒಪ್ಪಂದದ ಈ ಅನುಚ್ಛೇಧದ ಪಾಲನೆಯನ್ನು ಸರ್ಕಾರವು ದೃಢೀಕರಿಸಿಕೊಂಡು ನ್ಯೂನ್ಯತೆಗಳನ್ನು ಸರಿದೂಗಿಸಲು ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.**

ನೈಸೆಲ್/ನೀಸೆಲ್ ಸಂಸ್ಥೆ ಆರ್ಥಿಕ ಬೆಂಬಲ ನೀಡುವ ಹಣಕಾಸು ಸಂಸ್ಥೆಗಳು ಅಥವಾ ಬ್ಯಾಂಕುಗಳಿಗೆ ಸರ್ಕಾರದ ಪರವಾಗಿ **Comfort Letter** ಸ್ವರೂಪದಲ್ಲಿ ನಿರಾಪೇಕ್ಷಣಾ ಪತ್ರವನ್ನು ನೀಡಿರುವುದು ಸಮಿತಿಯ ಗಮನಕ್ಕೆ ಬಂದಿದೆ. ಫೈನಾನ್ಷಿಯಲ್ ಕ್ಲೋಷರ್‌ಗೆ ಅನುವು ಮಾಡಿಕೊಡುವ ಏಕೈಕ ಉದ್ದೇಶದಿಂದ ಭೂಸ್ವಾಧೀನ ಪ್ರಕ್ರಿಯೆ ಹಸ್ತಾಂತರ ಹಾಗೂ ಶುದ್ಧ ಕ್ರಯ ಪತ್ರಗಳ ನೋಂದಣಿ ಇತ್ಯಾದಿ ವಿಧಿ ವಿಧಾನಗಳನ್ನು ಆದ್ಯತೆಯ ಮೇರೆಗೆ ಸರ್ಕಾರವು ಜಾರಿಗೊಳಿಸಿರುವುದು ಸಮಿತಿಗೆ ಸ್ಪಷ್ಟವಾಗಿದೆ. ಆದರೆ ಇದೇ ಸ್ತರದಲ್ಲಿ ಈ ಸೌಲಭ್ಯಗಳನ್ನು ಖಾಸಗಿ ಪಾಲುದಾರರಿಗೆ ವಿಸ್ತರಿಸುವ ಪೂರ್ವದಲ್ಲಿ ನಿರೂಪಿತ ಮಾನದಂಡಗಳ ಅನುಗುಣವಾಗಿ ನಿರ್ವಹಿಸಿರುವುದನ್ನು ದೃಢೀಕರಿಸಿಕೊಳ್ಳುವಲ್ಲಿ ಕರ್ನಾಟಕ ಸರ್ಕಾರ ಹಾಗೂ ಸರ್ಕಾರದ ಪ್ರತಿನಿಧಿತ್ವವನ್ನು ಹೊಂದಿರುವ ಎಲ್ಲಾ ಇಲಾಖೆಗಳೂ ಸಂಪೂರ್ಣವಾಗಿ ವಿಫಲವಾಗಿದೆಯೆಂದು ಸಮಿತಿ ತೀರ್ಮಾನಿಸುತ್ತದೆ. **Comfort letter** ನೀಡುವ ಪೂರ್ವದಲ್ಲಿ **Balance Sheet** ಗಳನ್ನು ಪರಿಶೀಲಿಸಿ ಬಂಡವಾಳ ಹೂಡಿಕೆಯನ್ನು ದೃಢೀಕರಿಸಿಕೊಳ್ಳುವ ಹಕ್ಕು ಹಾಗೂ ಅವಕಾಶವನ್ನು ಜಾರಿಗೊಳಿಸುವಲ್ಲಿ ಲೋಕೋಪಯೋಗಿ ಇಲಾಖೆ ನಿರ್ಲಕ್ಷ್ಯತಾ ಧೋರಣೆಯನ್ನು

ತಳೆದಿರುವುದು ಸ್ಪಷ್ಟವಾಗಿದೆ. ಇದಲ್ಲದೆ, ಪರ್ಯಾಯವಾಗಿ ಅನುಚ್ಛೇಧ 11 ರ ನಿರ್ವಹಣೆಯ ಬಗ್ಗೆಯೂ ಲೋಕೋಪಯೋಗಿ ಇಲಾಖೆ ಹಾಗೂ ಆರ್ಥಿಕ ಇಲಾಖೆ ನಿರ್ಲಕ್ಷ್ಯತಾ ಧೋರಣೆಯನ್ನು ತಳೆದಿರುವುದು ಸ್ಪಷ್ಟವಾಗಿದೆ. ಬೇಷರತ್ತಾಗಿ ಖಾಸಗಿ ಪಾಲುದಾರರಿಗೆ ಈ ಸೌಲಭ್ಯವನ್ನು ವಿಸ್ತರಿಸಿದ್ದು, ತದನಂತರ ಖಾಸಗಿ ಪಾಲುದಾರರು ಕ್ರೋಢೀಕರಿಸಿರುವ ಸಾಲಗಳು, ಬಾಧ್ಯತೆಗಳು ಹಾಗೂ ಸರ್ಕಾರದ ವಿರುದ್ಧ ಸೃಜಿಸಿರುವ ಬಾಧ್ಯತೆಗಳ ಬಗ್ಗೆ ಸರ್ಕಾರಕ್ಕೆ ಹಾಗೂ ಸರ್ಕಾರದ ಪ್ರತಿನಿಧಿತ್ವವನ್ನು ಹೊಂದಿರುವ ಇಲಾಖೆಗಳಿಗೆ ಯಾವುದೇ ನಿಯಂತ್ರಣವಿಲ್ಲದಂತಾಗಿದೆ.

ಮೇಲೆ ವಿಶ್ಲೇಷಿಸಿರುವ ಹಿನ್ನೆಲೆಯಲ್ಲಿ ಐ.ಸಿ.ಐ.ಸಿ.ಐ. ಬ್ಯಾಂಕ್ ಸಾಲ ನೀಡಲು ಕ್ರಿಯಾ ಒಪ್ಪಂದಕ್ಕೆ ವ್ಯತಿರಿಕ್ತವಾಗಿ ಷರತ್ತುಗಳನ್ನು ಸೇರ್ಪಡೆ ಮಾಡಿದ್ದರೂ ಸಹ ಈ ಬಗ್ಗೆ ಪ್ರತಿಕ್ರಿಯಿಸುವ ಹಕ್ಕನ್ನು ಲೋಕೋಪಯೋಗಿ ಇಲಾಖೆ ಹಾಗೂ ಸರ್ಕಾರ ಕಳೆದುಕೊಂಡಂತಾಗಿದೆ ಎಂದು ಸಮಿತಿ ತೀರ್ಮಾನಿಸುತ್ತದೆ. ನೈಸೆಲ್ ಸಂಸ್ಥೆಯು ಫೈನಾನ್ಷಿಯಲ್ ಕ್ಲೋಷರ್ ದಾಖಲಾತಿಯನ್ನು ಅಧಿಕೃತವಾಗಿ ಲೋಕೋಪಯೋಗಿ ಇಲಾಖೆಗೆ ನೀಡಲು ನಿರಾಕರಿಸಿರುವದು ಸಮಿತಿಯು ಮಾಡಿರುವ ವಿಶ್ಲೇಷಣೆಗಳಿಗೆ ಪೂರಕ ಸಾಕ್ಷಿಯಾಗಿರುತ್ತದೆ. ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಕ್ರಿಯಾ ಒಪ್ಪಂದದ ಅನುಚ್ಛೇಧ 11 ಅನ್ನು ಪಾಲಿಸುವಲ್ಲಿ ನೈಸೆಲ್/ನೀಸೆಲ್ ಸಂಸ್ಥೆ ವಿಫಲವಾಗಿದೆ ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. ಈ ಹಿನ್ನೆಲೆಯಲ್ಲಿ ಸರ್ಕಾರವು ಅಧಿಕೃತವಾಗಿ ಫೈನಾನ್ಷಿಯಲ್ ಕ್ಲೋಷರ್ ಹಾಗೂ ಬ್ಯಾಲೆನ್ಸ್ ಶೀಟ್‌ಗಳನ್ನು ಖಾಸಗಿ ಪಾಲುದಾರರಿಂದ ಪಡೆದು ವಸ್ತುಸ್ಥಿತಿಯ ಆರ್ಥಿಕ ಮೌಲ್ಯಮಾಪನವನ್ನು ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

ನ್ಯಾಯಾಲಯದ ತೀರ್ಪಿನ ಹಿನ್ನೆಲೆಯಲ್ಲಿ ನೈಸೆಲ್/ನೀಸೆಲ್ ಸಂಸ್ಥೆ ಪಡೆದಿರುವ 150 ಕೋಟಿ ರೂ.ಗಳ ಸಾಲ ಸಕ್ರಮ ಪ್ರಕ್ರಿಯೆಯೆಂದು ಸಮಿತಿ ನಿರ್ಧರಿಸುತ್ತದೆ. ಆದರೆ ಸೋಮಶೇಖರ ರೆಡ್ಡಿ ಪ್ರಕರಣದಲ್ಲಿ 522 ಕೋಟಿ ರೂ.ಗಳ ಬಂಡವಾಳ ನಿರ್ವಹಣೆಯ ಪ್ರಮಾಣ ಪತ್ರವನ್ನು ಖಾಸಗಿ ಪಾಲುದಾರರು ಉಲ್ಲಂಘಿಸಿರುತ್ತಾರೆ. ಇದಲ್ಲದೆ, ಮಾಪನಗಳು ಪರಿಷ್ಕರಣೆಯಾದ ನಂತರವೂ ಅನುಚ್ಛೇಧ 11 ರ ಅಡಿಯಲ್ಲಿ ಹೂಡಿಕೆ ಮಾಡಬೇಕಾದ 237 ಕೋಟಿ ರೂ.ಗಳ ಬಗ್ಗೆ ಸಮಿತಿಗೆ ಅಧಿಕೃತವಾಗಿ ಸರ್ಕಾರದಿಂದಾಗಲೀ ಅಥವಾ ಸರ್ಕಾರದ ಪ್ರತಿನಿಧಿತ್ವ ಹೊಂದಿರುವ ಇಲಾಖೆಗಳಿಂದಾಗಲೀ ಮಾಹಿತಿ ಇರುವುದಿಲ್ಲ. ಸರ್ಕಾರವು ನೀಡಿರುವ Comfort Letter ಗಳ ಹಿನ್ನೆಲೆಯಲ್ಲಿ ನೈಸೆಲ್ ಹಾಗೂ ನೀಸೆಲ್ ಸಂಸ್ಥೆ 237 ಕೋಟಿ ರೂ.ಗಳ ಬಂಡವಾಳ ಹೂಡಿಕೆಯನ್ನು ಮಾಡದೇ 150 ಕೋಟಿ ರೂ.ಗಳ ಸಾಲವನ್ನು ಪಡೆದಿದ್ದಲ್ಲಿ, ಅದು ಕ್ರಿಯಾ ಒಪ್ಪಂದದ ಸ್ಪಷ್ಟ ಹಾಗೂ ನೇರ ಉಲ್ಲಂಘನೆಯಾಗುತ್ತದೆ. ಕರ್ನಾಟಕದ ಉಚ್ಛ ನ್ಯಾಯಾಲಯವು 03.05.2005ರ ತೀರ್ಪಿನಲ್ಲಿ ಬಂಡವಾಳ ಹೂಡಿಕೆಯನ್ನು ದೃಢೀಕರಿಸಿರುವುದನ್ನು ಸಮಿತಿಯು ಗಮನಿಸಿದೆ. ಆದರೆ ಇದಕ್ಕೆ ಪೂರಕವಾಗಿ ರಾಜ್ಯ ಸರ್ಕಾರವು ಆರ್ಥಿಕ ಇಲಾಖೆಯ ಅಭಿಪ್ರಾಯ ಪಡೆದಿರುವ ಬಗ್ಗೆ ಅಥವಾ ಲೆಕ್ಕತಪಾಸಣೆಗಳಿಗೆ ಒಳಪಟ್ಟ ಬ್ಯಾಲೆನ್ಸ್ ಶೀಟ್‌ಗಳನ್ನು ಪರಿಶೀಲಿಸಿರುವ ಬಗ್ಗೆ ಸಮಿತಿಗೆ ಮಾಹಿತಿ ಇರುವುದಿಲ್ಲ. ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನ ಉಲ್ಲಂಘನೆಯಾಗಿರುವುದು ಸ್ಪಷ್ಟವಾಗಿದೆ. ಈ ಹಿನ್ನೆಲೆಯಲ್ಲಿ ಕ್ರಿಯಾ ಒಪ್ಪಂದದ ಅನುಚ್ಛೇಧ 11ರ ಉಲ್ಲಂಘನೆಯ ಆಧಾರದ ಮೇಲೆ ಸರ್ಕಾರವು ಸೂಕ್ತ ಕ್ರಮ ಕೈಗೊಂಡು ಕನಿಷ್ಠ ಪಕ್ಷ ಪ್ರಸಕ್ತ ಸ್ಥಿತಿಯಲ್ಲಿ ಆರ್ಥಿಕ ಮೌಲ್ಯಮಾಪನವನ್ನು ಕೈಗೊಂಡು ಹೂಡಿಕೆಯ ಸ್ವರೂಪ, ಹೂಡಿಕೆಯ ಮೌಲ್ಯ, Carrying Cost, ಸರ್ಕಾರಕ್ಕೆ ಪರೋಕ್ಷವಾಗಿ ಸೃಜನೆಯಾಗಿರುವ ಬಾಧ್ಯತೆ ಇತ್ಯಾದಿಗಳನ್ನು ನಿಖರವಾಗಿ ಇತ್ಯರ್ಥಗೊಳಿಸಲು ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

*ಲೆಕ್ಕಪರಿಶೋಧಕರಿಂದ ಅನುಮೋದಿಸಲ್ಪಟ್ಟ ನೈಸೆಲ್ ಕಂಪನಿಯ ಬ್ಯಾಲೆನ್ಸ್ ಶೀಟ್‌ಗಳನ್ನು 1997 ರಿಂದ 2005 ರ ಅಂತ್ಯದವರೆಗೆ ಪರಿಶೀಲಿಸಿದಾಗ ಸ್ನ್ಯಾಬ್ ಇಂಜಿನೀಯರಿಂಗ್ ಮತ್ತು ಅಮೇರಿಕಾದ ಬಿ.ಹೆಚ್.ಐ*

***ಸಂಸ್ಥೆಗಳು ಅನುಚ್ಛೇಧ 11 ರ ಪ್ರಕಾರ ಪ್ರತಿಶತ 15 ರಷ್ಟು ಸ್ವಂತ ಬಂಡವಾಳವನ್ನು ನೈಸೆಲ್ ಕಂಪನಿಯಲ್ಲಿ ತೊಡಗಿಸಿರುವ ಬಗ್ಗೆ ನಿರ್ದಿಷ್ಟ ಮಾಹಿತಿ ಲಭ್ಯವಿರುವುದಿಲ್ಲ. ಆದಾಗ್ಯೂ, ಮೊದಲನೇ ಹಂತದ ಯೋಜನೆಯ ಸಲಹೆಗಾರರ ಸಾಮರ್ಥ್ಯದಲ್ಲಿ ಸ್ಯಾಬ್ ಇಂಜಿನೀಯರಿಂಗ್ ಸಂಸ್ಥೆಗೆ 5% ಸೇವಾ ಶುಲ್ಕವನ್ನು ನೀಡಿರುವ ಬಗ್ಗೆ ಬ್ಯಾಲೆನ್ಸ್ ಶೀಟ್‌ನಲ್ಲಿ ತೋರಿಸಲಾಗಿದೆ. ಅಂದರೆ, ಸ್ಯಾಬ್ ಇಂಜಿನೀಯರಿಂಗ್ ಸಂಸ್ಥೆ ಪಾಲುದಾರರ ಬದಲಾಗಿ ಸರ್ವೀಸ್ ಏಜೆಂಟ್ ಆಗಿ ಕಾರ್ಯನಿರ್ವಹಿಸಿರುವುದು ಕಂಡುಬಂದಿದೆ. 29.03.2004 ರ ಫೈನಾನ್ಷಿಯಲ್ ಕ್ಲೋಷರ್ ನಂತರ ಸ್ಯಾಬ್ ಇಂಜಿನೀಯರಿಂಗ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರು ಸುಮಾರು 25 ಕೋಟಿ ರೂ.ಗಳ ಬಂಡವಾಳವನ್ನು ನೈಸೆಲ್ ಕಂಪನಿಯಲ್ಲಿ ತೊಡಗಿಸಿರುತ್ತಾರೆ. ಸ್ಯಾಬ್ ಇಂಜಿನೀಯರಿಂಗ್ ಹಾಗೂ ನೈಸೆಲ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರು ಒಬ್ಬರೇ ಆಗಿರುತ್ತಾರೆ. ಈ ಬಂಡವಾಳವನ್ನು ನೈಸೆಲ್‌ಗೆ ಹಸ್ತಾಂತರಿಸಲು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದಿಂದ ಅನುಮತಿ ಪಡೆದಿರುವುದು ದಾಖಲಾತಿಗಳಿಂದ ವ್ಯಕ್ತವಾಗಿದೆ. ಅಂದರೆ ಫೈನಾನ್ಷಿಯಲ್ ಕ್ಲೋಷರ್ ಮುಖಾಂತರ ಸೇವಾ ಶುಲ್ಕದ ಒಂದು ಭಾಗವನ್ನು ಸ್ಯಾಬ್ ಇಂಜಿನೀಯರಿಂಗ್ ಮುಖಾಂತರ ತಮ್ಮ ಸ್ವಂತ ಬಂಡವಾಳವಾಗಿ ನೈಸೆಲ್‌ನಲ್ಲಿ ಹೂಡಿಕೆ ಮಾಡಿದ್ದಾರೆ ಎಂಬ ಅಭಿಪ್ರಾಯ ಮೂಡುತ್ತದೆ. ಈ ಹಿನ್ನೆಲೆಯಲ್ಲಿ ಸ್ಯಾಬ್ ಇಂಜಿನೀಯರಿಂಗ್ ಕಂಪನಿ ಸ್ವಂತ ಬಂಡವಾಳವನ್ನು ನೈಸೆಲ್ ಕಂಪನಿಯಲ್ಲಿ ಹೂಡದೇ ಕ್ರಿಯಾ ಒಪ್ಪಂದದ ಅನುಚ್ಛೇದ 11 ಅನ್ನು ಉಲ್ಲಂಘಿಸಿರುವುದು ಸ್ಪಷ್ಟವಾಗಿದೆ.***

## ***XXIV. ಕ್ರಿಯಾ ಒಪ್ಪಂದದ ಅನುಚ್ಛೇಧ 12 ರ ಅಡಿಯಲ್ಲಿ ತೆರಿಗೆ ವಿನಾಯಿತಿಗೆ ಸಂಬಂಧಿಸಿದಂತೆ ಸಮಿತಿಯ ವಿಶ್ಲೇಷಣೆ ಹಾಗೂ ಶಿಫಾರಸ್ಸುಗಳು:***

ಕ್ರಿಯಾ ಒಪ್ಪಂದದ ಅನುಚ್ಛೇಧ 12 ರಲ್ಲಿ ತೆರಿಗೆಗಳ ರಿಯಾಯಿತಿಯ ಬಗ್ಗೆ ಪ್ರತಿಪಾದಿಸಲಾಗಿದೆ. ಈ ಅನುಚ್ಛೇಧದಲ್ಲಿ 7 ಉಪ ಕಂಡಿಕೆಗಳಿದ್ದು, ಈ ಪೈಕಿ ಉಪಕಂಡಿಕೆ 12.1.2 ನಿರ್ಧಿಷ್ಟವಾಗಿ ನೈಸೆಲ್ ಸಂಸ್ಥೆ ಅಭಿವೃದ್ಧಿಪಡಿಸಬೇಕಾಗಿರುವ ನಗರ ಸಮುಚ್ಛಯಗಳಿಗೆ ಅನ್ವಯಿಸುತ್ತದೆ. ಈ ಕಂಡಿಕೆ ಅನುಗುಣವಾಗಿ ಖಾಸಗಿ ಪಾಲುದಾರರು ಪಾವತಿಸಬೇಕಾಗಿರುವ ಯಾವುದೇ ನಿರ್ಧರಣೆಯಿಂದ ನಿವೇಶನಗಳು ಸಾರ್ವಜನಿಕರಿಗೆ ಮಾರಾಟ ಆಗುವವರೆವಿಗೂ ರಿಯಾಯಿತಿಯ ಸೌಲಭ್ಯವನ್ನು ವಿಸ್ತರಿಸಲಾಗಿದೆ.

ಇದಲ್ಲದೆ, ಕಂಡಿಕೆ 12.1.1 ರ ಅನುಗುಣವಾಗಿ ಟೋಲ್ ರಸ್ತೆಯ ಪ್ರತಿ ಭಾಗ ನಗರ ಸಮುಚ್ಛಯದ ರಸ್ತೆಗಳು, ಸಾರ್ವಜನಿಕ ಹಾಗೂ ಸಾಮಾನ್ಯ ಸೌಲಭ್ಯಗಳು ಈ ಪ್ರದೇಶಗಳಿಗೆ ಸಂಪೂರ್ಣವಾಗಿ ರಾಜ್ಯ ಹಾಗೂ ಸ್ಥಳೀಯ ಕರ ನಿರ್ಧರಣೆಯಿಂದ ರಿಯಾಯಿತಿಯನ್ನು ನೀಡಬಹುದಾಗಿದೆ.

ಈ ಹಿನ್ನೆಲೆಯಲ್ಲಿ ಪ್ರಥಮ ಸ್ತರದಲ್ಲಿ ಮುದ್ರಾಂಕ ಹಾಗೂ ನೋಂದಣಿ ಶುಲ್ಕ ವಿನಾಯಿತಿಯ ಬಗ್ಗೆ ಸಮಿತಿಯು ಈ ಕೆಳಕಂಡಂತೆ ವಿಶ್ಲೇಷಣೆ ಹಾಗೂ ಶಿಫಾರಸ್ಸುಗಳನ್ನು ಮಾಡುತ್ತದೆ:

ನೈಸೆಲ್ ಸಂಸ್ಥೆಗೆ ಕ್ರಿಯಾ ಒಪ್ಪಂದ ಹಾಗೂ ಸೋಮಶೇಖರ ರೆಡ್ಡಿ ತೀರ್ಪಿನ ಅನುಗುಣವಾಗಿ ಕ್ರೋಢೀಕೃತವಾಗಿ 20,193 ಎಕರೆಗಳನ್ನು ನೀಡಬೇಕಾಗಿದ್ದು, ಈ ಪೈಕಿ ಕ್ರಿಯಾ ಒಪ್ಪಂದದ ಶೆಡ್ಯೂಲ್-1ರ ಅನುಗುಣವಾಗಿ 6999 ಎಕರೆ ಜಮೀನು ಟೋಲ್ ರಸ್ತೆ ಹಾಗೂ ಎಕ್ಸ್‌ಪ್ರೆಸ್ ವೇ ನಿರ್ಮಾಣಕ್ಕೆ ನಿಗದಿಪಡಿಸಲಾಗಿದೆ. ಅಂದರೆ, 13,194 ಎಕರೆ ಜಮೀನನ್ನು ನಗರ ಸಮುಚ್ಛಯಗಳ ಅಭಿವೃದ್ಧಿಗೆ ಮೀಸಲಿಡಲಾಗಿದೆ.

ಕರ್ನಾಟಕ ಟೌನ್ ಅಂಡ್ ಕಂಟ್ರಿ ಪ್ಲಾನಿಂಗ್ 1961 ರ ಅನುಗುಣವಾಗಿ ವಸತಿ ಪ್ರದೇಶದ ಅಭಿವೃದ್ಧಿಗೆ ನಿರ್ಧಿಷ್ಟ ಮಾನದಂಡಗಳನ್ನು ನಿರೂಪಿಸಲಾಗಿದೆ. ಈ ಮಾನದಂಡಗಳ ಅನುಗಣವಾಗಿ ಅಭಿವೃದ್ಧಿಗೆ ಒಳಪಡುವ ಒಟ್ಟು ವಿಸ್ತೀರ್ಣದಲ್ಲಿ ಶೇ.55 ರಷ್ಟನ್ನು ಸಾರ್ವಜನಿಕ ಹಾಗೂ ಸಾಮಾನ್ಯ ಸೌಲಭ್ಯಗಳಿಗಾಗಿ ಮೀಸಲಿಟ್ಟು, ವಾಸ್ತವಿಕ ನಿವೇಶನ ಅಥವಾ ವಸತಿಗಳಿಗೆ ಅಭಿವೃದ್ಧಿಯನ್ನು ಒಟ್ಟು ವಿಸ್ತೀರ್ಣದ ಶೇ.45ಕ್ಕೆ ಸೀಮಿತಗೊಳಿಸುವುದು ಅವಶ್ಯಕವಾಗಿರುತ್ತದೆ. ಸಾರ್ವಜನಿಕ ಹಾಗೂ ಸಾಮಾನ್ಯ ಸೌಲಭ್ಯಗಳ ಪ್ರದೇಶವನ್ನು ಕ್ರಿಯಾ ಒಪ್ಪಂದದ ಅನುಗುಣವಾಗಿ ಸಮರ್ಪಕ ಸಂದರ್ಭದಲ್ಲಿ ಸರ್ಕಾರಕ್ಕೆ ಹಸ್ತಾಂತರಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ವಿಶ್ಲೇಷಿಸಿದಾಗ ನಗರ ಸಮುಚ್ಛಯಗಳಲ್ಲಿ ನೈಸೆಲ್ ಸಂಸ್ಥೆಯು ಅಭಿವೃದ್ಧಿಪಡಿಸಿ ಮಾರಬಹುದಾದ ವಸತಿ ನಿವೇಶನಗಳ ವಿಸ್ತೀರ್ಣ ಸುಮಾರು 5938 ಎಕರೆಗಳಾಗುತ್ತದೆ. ಕ್ರಿಯಾ ಒಪ್ಪಂದದ ಅನುಗುಣವಾಗಿ ಈ ವಿಸ್ತೀರ್ಣದ 5 ನಗರ ಸಮುಚ್ಛಯಗಳಲ್ಲಿ ಅಭಿವೃದ್ಧಿಪಡಿಸಲಾದ ನಿವೇಶನಗಳನ್ನು ನೈಸೆಲ್ ಸಂಸ್ಥೆ ಸಾರ್ವಜನಿಕರಿಗೆ ಮಾರಾಟದ ಮುಖಾಂತರ ಹಸ್ತಾಂತರ ಮಾಡಬಹುದಾಗಿದೆ.

ಮೇಲೆ ವಿಶ್ಲೇಷಿಸಿರುವ ಹಿನ್ನೆಲೆಯಲ್ಲಿ ದಿನಾಂಕ 19.08.1998 ರಂದು ಮಾನ್ಯ ಮುಖ್ಯಮಂತ್ರಿಗಳ ಉಪಸ್ಥಿತಿಯಲ್ಲಿ ನಡೆದ ಸಭೆಯ ನಡವಳಿಗಳ ಅನುಗುಣವಾಗಿ ನೈಸೆಲ್ ಸಂಸ್ಥೆಗೆ ಶೇ.100 ರಷ್ಟು ಮುದ್ರಾಂಕ ಶುಲ್ಕ ಹಾಗೂ ನೋಂದಣಿ ಶುಲ್ಕ ವಿನಾಯಿತಿಯನ್ನು ನೀಡುವಂತೆ ಸೂಚಿಸಲಾಗಿದೆ. ಈ ನಿರ್ಧಾರದ ಅನುಗುಣವಾಗಿ ಲೋಕೋಪಯೋಗಿ ಇಲಾಖೆ ದಿನಾಂಕ 11.11.1998 ಹಾಗೂ 14,06.1999 ರಂದು ಕಂದಾಯ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತದೆ. ದಿನಾಂಕ 19.08.1998ರ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆಸಲಾದ ಸಭೆಯ ನಡವಳಿಗಳನ್ನು ಪರಿವೀಕ್ಷಿಸಿದಾಗ ಕಂಡಿಕೆ 4.02ರ ಅಡಿಯಲ್ಲಿ ನೈಸೆ ಲಿಮಿಟೆಡ್ ಹಾಗೂ ಸಹಭಾಗಿತ್ವದ ಸಂಸ್ಥೆಗಳಿಗೆ ಕ್ರಿಯಾ ಒಪ್ಪಂದದ ಅನುಗುಣವಾಗಿ ಮುದ್ರಾಂಕ ಹಾಗೂ ನೋಂದಣಿ ಶುಲ್ಕ ವಿನಾಯಿತಿ ನೀಡುವಂತೆ ನಿರ್ದೇಶನ ನೀಡಲಾಗಿದೆ. ತದನಂತರ ದಿನಾಂಕ 22.09.2000 ರಂದು ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆಸಲಾದ ಸಭೆಯಲ್ಲಿ ಈ ಕೆಳಕಂಡಂತೆ ನಿರ್ಧಾರಗಳನ್ನು ಕೈಗೊಳ್ಳಲಾಗಿದೆ:

"ಕ್ರಿಯಾ ಒಪ್ಪಂದದ ಅನುಗುಣವಾಗಿ ನೋಂದಣಿ ಹಾಗೂ ಮುದ್ರಾಂಕ ಶುಲ್ಕಗಳ ರಿಯಾಯಿತಿ ಸೌಲಭ್ಯಗಳನ್ನು ನೀಡಬೇಕಾಗುವುದು. ಈ ರಿಯಾಯಿತಿಯ ಒಟ್ಟು ಮೌಲ್ಯ 56 ಕೋಟಿ ರೂ.ಗಳಾಗಿದ್ದು, ಈ ಮೌಲ್ಯವನ್ನು ಭೂ ಸ್ವಾಧೀನದ ಮೌಲ್ಯದ ಆಧಾರದ ಮೇಲೆ ಅಂದಾಜಿಸಲಾಗಿದೆ. ಒಟ್ಟು ಸ್ವಾಧೀನದ ಮೌಲ್ಯ 400 ಕೋಟಿ ರೂ.ಗಳು ಎಂದು ಅಂದಾಜಿಸಲಾಗಿದೆ. ***ಪ್ರಸ್ತುತವಾಗಿ ಚಾಲ್ತಿಯಲ್ಲಿರುವ ಕರ್ನಾಟಕ ಸರ್ಕಾರದ ಮೂಲಭೂತ ಸೌಕರ್ಯದ ನೀತಿಯ ಅನುಗುಣವಾಗಿ ನೀಡಬಹುದಾದ ರಿಯಾಯಿತಿಯನ್ನು ನೋಂದಣಿ ಹಾಗೂ ಮುದ್ರಾಂಕ ಶುಲ್ಕದ ಪ್ರತಿಶತ 50ಕ್ಕೆ ಸೀಮಿತಗೊಳಿಸಬೇಕಾಗುವುದು.*** ವಾಸ್ತವಿಕವಾಗಿ ನೈಸ್ ಸಂಸ್ಥೆಯು ನಗರ ಸಮುಚ್ಛಯಗಳನ್ನು ಅಭಿವೃದ್ಧಿಪಡಿಸಿ ವಸತಿ ನಿವೇಶನಗಳನ್ನು ಮಾರಾಟ ಮಾಡಿದಾಗ ಸುಮಾರು 152 ಕೋಟಿ ರೂ.ಗಳಷ್ಟು ನೋಂದಣಿ ಹಾಗೂ ಮುದ್ರಾಂಕ ಶುಲ್ಕ ಸ್ವೀಕೃತವಾಗುವುದು. ಈ ಹಿನ್ನೆಲೆಯಲ್ಲಿ ಈ ಸಮಗ್ರ ಅಂಶಗಳನ್ನು ಪರಿಗಣಿಸಿ ಬಿ.ಎಂ.ಐ.ಸಿ.ಪಿ. ಯೋಜನೆಯ ಪ್ರತಿಶತ 100 ರಷ್ಟು ಅಂದರೆ ಸಂಪೂರ್ಣವಾಗಿ ನೋಂದಣಿ ಹಾಗೂ ಮುದ್ರಾಂಕ ಶುಲ್ಕದಿಂದ ವಿನಾಯಿತಿ ನೀಡಲು ಒಪ್ಪಂದದಲ್ಲಿ ನಮೂದಿಸಲಾಗಿದೆ". ಈ ನಿರ್ದೇಶನಗಳ ಅನುಗುಣವಾಗಿ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ ಇವರಿಗೆ ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು.

ತದನಂತರ 16.11.2000 ರಂದು ನಡೆದ ಸಚಿವ ಸಂಪುಟದಲ್ಲಿ ಈ ಬಗ್ಗೆ ಅಂತಿಮವಾಗಿ ನಿರ್ಧಾರ ಕೈಗೊಂಡು ನಿರ್ದೇಶನಗಳನ್ನು ಜಾರಿಗೊಳಿಸಲಾಗಿದೆ. ಈ ನಿರ್ದೇಶನಗಳನ್ನು ಸಚಿವ ಸಂಪುಟ ಟಿಪ್ಪಣಿ ಸಂಖ್ಯೆ.ಕಂಇ/3/ಮುನೋಮು/99 (ವಿಷಯ ಸಂಖ್ಯೆ.533/2000) ಆಧಾರದ ಮೇಲೆ ಕೈಗೊಂಡಿರುವುದು ಸಮಿತಿಗೆ ದಾಖಲಾತಿಗಳಿಂದ ಮನದಟ್ಟಾಗಿದೆ.

ಮೂಲಭೂತವಾಗಿ ನೈಸೆಲ್ ಸಂಸ್ಥೆ ನಗರ ಸಮುಚ್ಛಯಗಳಲ್ಲಿ ಅಭಿವೃದ್ಧಿಪಡಿಸುವ ವಸತಿ ನಿವೇಶನಗಳನ್ನು ಅಭಿವೃದ್ಧಿಯಾದ ನಂತರ ಸಾರ್ವಜನಿಕರಿಗೆ ಮಾರಾಟ ಮಾಡುವುದರಿಂದ ನೋಂದಣಿ ಹಾಗೂ ಮುದ್ರಾಂಕ ಶುಲ್ಕದಲ್ಲಿ ಗುರುತರವಾಗಿ ಆಗುವ ಏರಿಕೆಯಿಂದ ಸರ್ಕಾರದ ಸ್ವೀಕೃತಿ ಹೆಚ್ಚಾಗುವ ಹಿನ್ನೆಲೆಯಲ್ಲಿ ಪ್ರಸಕ್ತ ಸಂದರ್ಭದಲ್ಲಿ ನೋಂದಣಿ ಹಾಗೂ ಮುದ್ರಾಂಕ ಶುಲ್ಕದ ವಿನಾಯಿತಿ ನೀಡಲಾಗಿದೆ. ಅಂಕಿ ಅಂಶಗಳ ಪ್ರಕಾರ ಸರ್ಕಾರವು 56 ಕೋಟಿ ರೂ.ಗಳ ಮೌಲ್ಯದ ವಿನಾಯಿತಿ ನೀಡಲು ನಿರ್ಧರಿಸಿದ್ದು, ಇದರ ವಿರುದ್ಧ ನೈಸೆಲ್ ಸಂಸ್ಥೆ ನಗರ ಸಮುಚ್ಛಯದ ನಿವೇಶನಗಳನ್ನು ಮಾರಾಟ ಮಾಡಿದಾಗ 155 ಕೋಟಿ ರೂ.ಗಳ ಆದಾಯ ಸ್ವೀಕೃತವಾಗುವುದಾಗಿ ನಿರ್ಧರಿಸಿದೆ. ಈ ಹಿನ್ನೆಲೆಯಲ್ಲಿ ವಾಸ್ತವಿಕವಾಗಿ ವಿನಾಯಿತಿಗೆ ಒಳಪಡುವ ಜಮೀನಿನ ವಿಸ್ತೀರ್ಣವನ್ನು ಈಗಾಗಲೇ ವಿಶ್ಲೇಷಿಸಿರುವಂತೆ 5850 ಎಕರೆ ಎಂದು ನಿರ್ಧರಿಸಲಾಗಿದೆ. ಅಂದರೆ, ನಗರಗಳ ಅಭಿವೃದ್ಧಿ ಪ್ರದೇಶಕ್ಕೆ ಮೀಸಲಿಡಲಾದ ಒಟ್ಟು ಜಮೀನಿನ ಪೈಕಿ 5850 ಎಕರೆ ಜಮೀನು ಸಾರ್ವಜನಿಕರ ಮಾರಾಟಕ್ಕೆ ನೈಸ್ ಸಂಸ್ಥೆಗೆ ಲಭ್ಯವಿದೆ ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. ಟಿಪ್ಪಣಿಯ ವಿಶ್ಲೇಷಣೆಯಿಂದ ನೋಂದಣಿ ಹಾಗೂ ಮುದ್ರಾಂಕ ಶುಲ್ಕದ ವಿನಾಯಿತಿ ***"ನೈಸೆಲ್ ಸಂಸ್ಥೆ ಮಾರಾಟ ಮಾಡಬಹುದಾದ ಜಮೀನಿಗೆ"*** ಸೀಮಿತಗೊಂಡಿರುವುದು ಸ್ಪಷ್ಟವಾಗಿದೆ. ತಾತ್ವಿಕವಾಗಿ ಮಾರಾಟ ಮಾಡಬಹುದಾದ ಜಮೀನಿಗೆ ವಿನಾಯಿತಿ ನೀಡುವ ಸರ್ಕಾರದ ಧ್ಯೇಯೋದ್ದೇಶ ಈ ಟಿಪ್ಪಣಿಯಿಂದ ಸ್ಪಷ್ಟವಾಗಿದೆ. ಕರ್ನಾಟಕ ಸರ್ಕಾರದ ವ್ಯವಹಾರ ನಿರ್ವಹಣೆ ನಿಯಮಗಳು 1997ರ 1ನೇ ಶೆಡ್ಯೂಲಿನ 11ನೇ ಐಟಂ ಪ್ರಕಾರ ಈ ಪ್ರಸ್ತಾವನೆಗೆ ಸಚಿವ ಸಂಪುಟದ ಅನುಮೋದನೆಯ ಅವಶ್ಯಕತೆ ಇರುವ ಹಿನ್ನೆಲೆಯಲ್ಲಿ ಈ ಟಿಪ್ಪಣಿಯನ್ನು ಸಚಿವ ಸಂಪುಟದಲ್ಲಿ ಮಂಡಿಸಲಾಗಿದೆ. ಅಂತಿಮವಾಗಿ ಟಿಪ್ಪಣಿಯ ಕಂಡಿಕೆ 7 ರಲ್ಲಿ ವಿವಿಧ ಸರ್ವೆ ನಂಬರುಗಳ 5850 ಎಕರೆ ಜಮೀನಿನ ಭೂಮಿಯನ್ನು ಕೆ.ಐ.ಎ.ಡಿ.ಬಿ.ಯಿಂದ ನೈಸ್, ಬೆಂಗಳೂರು ಇವರಿಗೆ 2ನೇ ಮಾರಾಟಕ್ಕೆ ತಗಲುವ ಮುದ್ರಾಂಕ ಶುಲ್ಕ ಶೇ.100 ರಷ್ಟು ವಿನಾಯಿತಿಯನ್ನು ಹಾಗೂ ಪ್ರತಿ ರೂ.1000ಕ್ಕೆ 1 ರೂ.ನಂತೆ ನೋಂದಣಿ ಶುಲ್ಕ, ಈ ಎರಡೂ ಅಂಶಗಳನ್ನು ಸೇರಿ ಸಹ ಸೇರಿ ಒಟ್ಟು 56 ಕೋಟಿ ರೂ. ವಿನಾಯಿತಿಯನ್ನು 1957ರ ಕರ್ನಾಟಕ ಮುದ್ರಾಂಕ ಕಾಯಿದೆಯ ಸೆಕ್ಷನ್ 9(1)ರ ಅಡಿಯ ಪ್ರಾವಿಶೋ ಪ್ರಕಾರ ನೀಡಲು ಸಚಿವ ಸಂಪುಟದ ಅನುಮೋದನೆಯನ್ನು ಕೋರಲಾಗಿದೆ. ದಿನಾಂಕ 17.11.2000ದ ಸಚಿವ ಸಂಪುಟದ ನಿರ್ಣಯದ ಅನುಗುಣವಾಗಿ ಟಿಪ್ಪಣಿಯ ಕಂಡಿಕೆ ಸಂಖ್ಯೆ 7 ರಲ್ಲಿ ಒಳಗೊಂಡಿರುವ ಪ್ರಸ್ತಾವನೆಯನ್ನು ಸಚಿವ ಸಂಪುಟ ಅನುಮೋದಿಸಿದೆ. ತದನಂತರ ಯೋಜನಾ ಸಮನ್ವಯಕರು, ಬಿ.ಎಂ.ಐ.ಸಿ.ಪಿ., ಲೋಕೋಪಯೋಗಿ ಇಲಾಖೆ ಇವರು ಸಚಿವ ಸಂಪುಟದ ನಿರ್ಧಾರ ಹಾಗೂ ನಿರ್ದೇಶನಗಳನ್ನು ಉಪೇಕ್ಷಿಸಿ ದಿನಾಂಕ 07.12.2000 ರ ಅನಧಿಕೃತ ಟಿಪ್ಪಣಿಯ ಮುಖಾಂತರ ಸರ್ಕಾರದ ಕಾರ್ಯದರ್ಶಿ, ಕಂದಾಯ ಇಲಾಖೆ ಇವರಿಗೆ ಬಿ.ಎಂ.ಐ.ಸಿ. ಯೋಜನಾ ಅನುಷ್ಠಾನಕ್ಕೆ ಅವಶ್ಯಕವಿರುವ 20,193 ಎಕರೆ ಜಮೀನಿನ ವಿಸ್ತೀರ್ಣದ ಸಂಪೂರ್ಣ ಜಮೀನಿಗೆ ಶೇ.100 ರಷ್ಟು ನೋಂದಣಿ ಹಾಗೂ ಮುದ್ರಾಂಕ ಶುಲ್ಕದ ವಿನಾಯಿತಿ ನೀಡುವಂತೆ ಸೂಚಿಸಿರುತ್ತಾರೆ. ವಾಸ್ತವಿಕವಾಗಿ ಸಚಿವ ಸಂಪುಟದ ಟಿಪ್ಪಣಿಯಲ್ಲಿ ನಿರ್ದಿಷ್ಟವಾಗಿ 5850 ಎಕರೆ ಜಮೀನಿಗೆ ವಿನಾಯಿತಿಯನ್ನು ಸೀಮಿತಗೊಳಿಸುವಂತೆ ಸೂಚಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಯೋಜನಾ ಸಮನ್ವಯಕರು ಬಿ.ಎಂ.ಐ.ಸಿ.ಪಿ. ಇವರು ತಮ್ಮ ಅಧಿಕಾರದತ್ತ ವ್ಯಾಪ್ತಿಯನ್ನು ಮೀರಿ ಸಚಿವ ಸಂಪುಟದ ನಿರ್ದೇಶನವನ್ನು ಖಾಸಗಿ ಪಾಲುದಾರರಿಗೆ ಅನಧಿಕೃತ ಲಾಭವನ್ನು ವಿಸ್ತರಿಸುವ ಉದ್ದೇಶದಿಂದ ಸಚಿವ ಸಂಪುಟದ ನಿರ್ದೇಶನವನ್ನು

ಉಲ್ಲಂಘಿಸಿರುವುದು ಸಮಿತಿಗೆ ಸ್ಪಷ್ಟವಾಗಿದೆ. ಈ ಅನಧಿಕೃತ ಟಿಪ್ಪಣಿಗೆ ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿಗಳೂ ಸಹ ಸಹಮತಿಯನ್ನು ಸೂಚಿಸಿರುವುದು ದಾಖಲಾತಿಗಳಿಂದ ಸಮಿತಿಗೆ ವ್ಯಕ್ತವಾಗಿದೆ. ಈ ಹಿನ್ನೆಲೆಯಲ್ಲಿ ಯೋಜನಾ ಸಮನ್ವಯಕರು ಹಾಗೂ ಇಲಾಖಾ ಕಾರ್ಯದರ್ಶಿಗಳು ಕರ್ತವ್ಯ ಲೋಪ ಹಾಗೂ ನಿರ್ಲಕ್ಷ್ಯತೆಯನ್ನು ಎಸಗಿರುವುದು ಸಮಿತಿಗೆ ಸ್ಪಷ್ಟವಾಗಿದೆ. ಧ್ಯೇಯೋದ್ದೇಶಗಳನ್ನು ವಿಶ್ಲೇಷಿಸಿದಾಗ ಪ್ರಸ್ತಾವಿತ ಅಧಿಕಾರಿಗಳ ಪ್ರಾಮಾಣಿಕತೆ ಹಾಗೂ ಕರ್ತವ್ಯ ನಿಷ್ಠೆ ಸಂಶಯಾಸ್ಪದ ಎಂದು ಸಮಿತಿ ತೀರ್ಮಾನಿಸುತ್ತದೆ. ಹಾಗೂ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕಠಿಣ ಶಿಸ್ತಿನ ಕ್ರಮ ಜರುಗಿಸಬೇಕೆಂದು ಸಮಿತಿ ಶಿಫಾರಸ್ಸು ಮಾಡುತ್ತದೆ. ತದನಂತರ ಶ್ರೀ ಸಿದ್ದರಾಮಯ್ಯ, ಸರ್ಕಾರ ಉಪ ಕಾರ್ಯದರ್ಶಿ, ಕಂದಾಯ ಇಲಾಖೆ ಇವರು ಟಿಪ್ಪಣಿ ಸಂಖ್ಯೆ.ಆರ್‌ಡಿ/3/ಮುನೋಮು/99 ದಿನಾಂಕ 04.01.2001 ರ ಕಂಡಿಕೆ 79 ರಲ್ಲಿ ಈ ಕೆಳಕಂಡಂತೆ ವಿಶ್ಲೇಷಿಸಿರುತ್ತಾರೆ:

"ಸಚಿವ ಸಂಪುಟದ ಟಿಪ್ಪಣಿ 63 ರ ಅನುಗುಣವಾಗಿ 5850 ಎಕರೆ ವಿಸ್ತೀರ್ಣದ ಜಮೀನು ಮಾರಾಟಕ್ಕೆ ಲಭ್ಯವಿದೆ. ಆದರೆ, ನೈಸೆಲ್ ಸಂಸ್ಥೆ ನೀಡಿರುವ ವಿವರಗಳು ಹಾಗೂ ಲೋಕೋಪಯೋಗಿ ಇಲಾಖೆ ದೃಢೀಕರಿಸಿರುವ ವಿವರಗಳಿಗೆ ಅನುಸಾರವಾಗಿ 14,337 ಎಕರೆ ಖಾಸಗಿ ಜಮೀನಿಗೆ ನೋಂದಣಿ ಹಾಗೂ ಮುದ್ರಾಂಕ ಶುಲ್ಕ ವಿನಾಯಿತಿ ನೀಡಬೇಕಾಗುವುದು. ಈ ವಿನಾಯಿತಿ ಸರ್ಕಾರ ನಿಗದಿಪಡಿಸಿರುವ 56 ಕೋಟಿ ರೂ.ಗಳ ಮಿತಿಗೆ ಒಳಪಟ್ಟಿರುತ್ತದೆ. ಈ ವಿಶ್ಲೇಷಣೆಯ ಅನುಗುಣವಾಗಿ ಸಚಿವ ಸಂಪುಟದ ಟಿಪ್ಪಣಿ ಪರಿಷ್ಕೃತ ಎಂದು ಪರಿಗಣಿಸಬೇಕಾಗುವುದು. ಸಚಿವ ಸಂಪುಟ 56 ಕೋಟಿ ರೂ.ಗಳ ಮೌಲ್ಯದ ವಿನಾಯಿತಿಯನ್ನು ಅನುಮೋದಿಸಿರುವ ಹಿನ್ನೆಲೆಯಲ್ಲಿ ಈ ಮೌಲ್ಯಕ್ಕೆ ಸಂಬಂಧಿಸಿದಂತೆ ಯಥಾಸ್ಥಿತಿಯನ್ನು ನಿರ್ವಹಿಸಿ ವಿನಾಯಿತಿಗೆ ಒಳಪಡುವ ಜಮೀನಿನ ವಿಸ್ತೀರ್ಣವನ್ನು ಮಾತ್ರ ಮಾರ್ಪಾಡು ಮಾಡಲಾಗಿದೆ. ಆದುದರಿಂದ ತತ್ಸಂಬಂಧವಾಗಿ ಆದೇಶವನ್ನು ಜಾರಿಗೊಳಿಸಬಹುದಾಗಿದೆ".

ಉಲ್ಲೇಖಿತ ಟಿಪ್ಪಣಿಯಿಂದ ಸರ್ಕಾರದ ಉಪ ಕಾರ್ಯದರ್ಶಿ, ಕಂದಾಯ ಇಲಾಖೆ ಇವರು ಸಚಿವ ಸಂಪುಟದ ತಾತ್ವಿಕ ಹಾಗೂ ವಾಸ್ತವಿಕ ನಿರ್ಣಯಗಳನ್ನು ಅನಧಿಕೃತವಾಗಿ ಮಾರ್ಪಾಡು ಮಾಡಿರುವುದು ಸ್ಪಷ್ಟವಾಗಿದೆ. ಏಕೆಂದರೆ, ಸಚಿವ ಸಂಪುಟದ ನಿರ್ಣಯ ಸ್ಪಷ್ಟ ಹಾಗೂ ನಿರ್ದಿಷ್ಟವಾಗಿ 5850 ಎಕರೆ ವಿಸ್ತೀರ್ಣದ ಜಮೀನಿಗೆ ಅನ್ವಯಿಸುವಂತೆ ವಿನಾಯಿತಿ ನೀಡುವಂತೆ ನಿರ್ದೇಶಿಸಿದೆ. ಈ ವಿನಾಯಿತಿಯ ಮೌಲ್ಯವನ್ನು 56 ಕೋಟಿ ರೂ.ಗಳು ಎಂದು ಇತ್ಯರ್ಥ ಮಾಡಲಾಗಿದೆ. ಇದಕ್ಕೆ ವ್ಯತಿರಿಕ್ತವಾಗಿ ಪ್ರಸ್ತಾವಿತ ಟಿಪ್ಪಣಿಯಲ್ಲಿ ನೈಸೆಲ್ ಸಂಸ್ಥೆ ನೀಡಿರುವ ಪ್ರಸ್ತಾವನೆಯ ಆಧಾರದ ಮೇಲೆ 5850 ಎಕರೆ ಬದಲಾಗಿ 14337 ಎಕರೆ ಜಮೀನಿಗೆ ವಿನಾಯಿತಿ ಸೌಲಭ್ಯವನ್ನು ವಿಸ್ತರಿಸಲಾಗಿದೆ. ವಾಸ್ತವಿಕವಾಗಿ ಸಚಿವ ಸಂಪುಟದ ನಿರ್ಧಾರವನ್ನು ಪರಿಷ್ಕರಿಸಲು ಸರ್ಕಾರದ ಯಾವುದೇ ಸ್ತರದ ಅಧಿಕಾರಿಗಳಿಗೆ ಅಧಿಕಾರವನ್ನು ನೀಡಿರುವುದಿಲ್ಲ. ಕರ್ನಾಟಕ ಸರ್ಕಾರದ ವ್ಯವಹಾರ ನಿರ್ವಹಣೆ ನಿಯಮಗಳ ನಿಯಮ 33ರ ಅನುಗುಣವಾಗಿ ಸಚಿವ ಸಂಪುಟದ ನಿರ್ಧಾರದ ಪರಿಷ್ಕರಣೆ, ತಿದ್ದುಪಡಿ ಅಥವಾ ಮಾರ್ಪಾಡಿಗೆ ಸಂಬಂಧಿಸಿದಂತೆ ಪ್ರಸ್ತಾವನೆಯನ್ನು ಸಚಿವ ಸಂಪುಟಕ್ಕೆ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಈ ನಿರ್ದೇಶನಗಳನ್ನು ಉಲ್ಲಂಘಿಸಿ ಸ್ವಯಂ ಪ್ರೇರಿತವಾಗಿ ನೈಸೆಲ್ ಸಂಸ್ಥೆಗೆ ಅನಧಿಕೃತ ಸೌಲಭ್ಯವನ್ನು ವಿಸ್ತರಿಸಿರುವುದು ಈ ಟಿಪ್ಪಣಿಯ ಉಲ್ಲೇಖದಿಂದ ಸ್ವಯಂ ವೇದ್ಯವಾಗಿದೆ. ಈ ನಿರ್ಧಾರ ಪ್ರಸ್ತಾವಿತ ಅಧಿಕಾರಿಯ ಸ್ವೇಚ್ಛಾ ವಿಹಾರಿ ಪ್ರವೃತ್ತಿಯನ್ನು ಬಿಂಬಿಸುತ್ತದೆ ಎಂದು ಸಮಿತಿ ತೀರ್ಮಾನಿಸುತ್ತದೆ. ಈ ವ್ಯತಿರಿಕ್ತ ಹಾಗೂ ಅನಧಿಕೃತ ಬದಲಾವಣೆಗಳ ಪ್ರಸ್ತಾವನೆಯನ್ನು ಶ್ರೀ ಸಿ. ಚಿಕ್ಕಣ್ಣ, ಸರ್ಕಾರದ ಕಾರ್ಯದರ್ಶಿ, ಕಂದಾಯ ಇಲಾಖೆ ಇವರು ಯಾವುದೇ ಷರಾ ಅಥವಾ ಆಕ್ಷೇಪಣೆ ಅಥವಾ ಅಭಿಪ್ರಾಯ ವ್ಯಕ್ತಪಡಿಸದೇ ಅನುಮೋದಿಸಿರುವುದು ಸಮಿತಿಗೆ ದಾಖಲಾತಿಗಳಿಂದ ಸ್ಪಷ್ಟವಾಗಿದೆ. ಪ್ರಸ್ತಾವಿತ ವಿಷಯಕ್ಕೆ ಸಂಬಂಧಿಸಿದ ಟಿಪ್ಪಣಿಯನ್ನು ಅವಲೋಕಿಸಿದಲ್ಲಿ, ಕಂಡಿಕೆ 83 ರಲ್ಲಿ "ಬದಲಾವಣೆ ಮಾಡಿ ಕರಡು ಆದೇಶವನ್ನು ಒಪ್ಪಿಸಲಾಗಿದೆ" ಎಂದು ದಾಖಲಿಸಿದೆ. ಇದರಿಂದ ಮೂಲ ಕರಡು ಆದೇಶ ಸಚಿವ ಸಂಪುಟದ ನಿರ್ಧಾರಗಳಿಗೆ ಅನುಗುಣವಾಗಿ ಪ್ರತಿಪಾದನೆಯಾಗಿತ್ತು ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ.

*ಉದ್ದೇಶಪೂರ್ವಕವಾಗಿ ಸಚಿವ ಸಂಪುಟದ ನಿರ್ಧಾರವನ್ನು ವ್ಯತಿರಿಕ್ತವಾಗಿ ಅರ್ಥೈಸಿ ಅನಧಿಕೃತವಾಗಿ ಹಾಗೂ ನಿಯಮಬಾಹಿರವಾಗಿ ಜಾರಿಗೊಳಿಸಿದೆ. ಇದರಿಂದಾಗಿ ನೈಸಲ್ ಸಂಸ್ಥೆಗೆ 8487 ಎಕರೆ ವಿಸ್ತೀರ್ಣದ ಖಾಸಗಿ ಜಮೀನಿಗೆ ಸರ್ಕಾರ ನಿರೂಪಿಸಿದ ಗರಿಷ್ಠ ಮಿತಿಯನ್ನು ಮೀರಿ ವಿನಾಯಿತಿ ನೀಡಲಾಗಿದೆ. ಇದೊಂದು ಗುರುತರ ಹಾಗೂ ಅಕ್ಷಮ್ಯ ವೈಫಲ್ಯತೆಯಾಗಿರುವ ಹಿನ್ನೆಲೆಯಲ್ಲಿ ವರದಿಯಲ್ಲಿ ಪ್ರತಿಪಾದಿಸಿರುವ ಅಧಿಕಾರಿಗಳ ವಿರುದ್ಧ ಸರ್ಕಾರಕ್ಕೆ ರಾಜಸ್ವ ನಷ್ಟ ಉಂಟು ಮಾಡಿದ ಆಧಾರದ ಮೇಲೆ ಕ್ರಮ ಜರುಗಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಈ ಪ್ರಕರಣದಲ್ಲಿ ಟಿಪ್ಪಣಿಗಳ ಉಲ್ಲೇಖ, ವ್ಯತಿರಿಕ್ತ ಅಭಿಪ್ರಾಯಗಳು ಇತ್ಯಾದಿಗಳನ್ನು ಗಮನಿಸಿದಲ್ಲಿ ಕರ್ತವ್ಯ ನಿರ್ವಹಣೆಯಲ್ಲಿ ನಿಷ್ಠೆ ಹಾಗೂ ಪ್ರಾಮಾಣಿಕತೆಯ ಕೊರತೆ ಇರುವುದು ಸ್ಪಷ್ಟವಾಗಿದೆ.*

ಈ ಟಿಪ್ಪಣಿಯ ನಿರ್ದೇಶನಗಳ ಅನುಗುಣವಾಗಿ ದಿನಾಂಕ 24.01.2001ರ ಸರ್ಕಾರಿ ಆದೇಶದ ಮುಖಾಂತರ ನೈಸೆಲ್/ನೀಸೆಲ್ ಸಂಸ್ಥೆಗೆ 14337 ಎಕರೆ ವಿಸ್ತೀರ್ಣದ ಜಮೀನಿಗೆ ಅನ್ವಯಿಸುವಂತೆ ಮಾರಾಟ ಮತ್ತು ಕರಾರು ಪತ್ರಗಳ ನೋಂದಣಿಗೆ ತಗಲುವ ಮುದ್ರಾಂಕ ಶುಲ್ಕದಲ್ಲಿ ಶೇ.100ರಷ್ಟು ವಿನಾಯಿತಿಯನ್ನು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ನೀಡಲಾಗಿದೆ:

1. ಎಕ್ಸ್‌ಪ್ರೆಸ್ ಹೈವೇಯನ್ನು ಮೈಸೂರು ಮತ್ತು ಬೆಂಗಳೂರು ಈ ಎರಡು ಕಡೆಯಿಂದ ಏಕ ಕಾಲದಲ್ಲಿ ಪ್ರಾರಂಭಿಸುವುದು
2. ಈ ಆದೇಶದ ದಿನಾಂಕದಿಂದ 3 ತಿಂಗಳ ಒಳಗಾಗಿ ಎಕ್ಸ್‌ಪ್ರೆಸ್ ಹೈವೇಗೆ ಭೂ ಸ್ವಾಧೀನಪಡಿಸಿಕೊಳ್ಳುವ ಜಮೀನಿನ ಸರ್ವೆ ನಂಬರುಗಳ ವಿವರ ಒದಗಿಸುವುದು. ಇದರಲ್ಲಿ ಸರ್ಕಾರಿ ಜಮೀನು, ಅರಣ್ಯ ಜಮೀನು ಮತ್ತು ಖಾಸಗಿ ಜಮೀನಿನ ಪ್ರತ್ಯೇಕ ವಿವರ ಒದಗಿಸುವುದು.
3. ಸದರಿ ಸರ್ವೆ ನಂಬರುಗಳಲ್ಲಿನ ಜಮೀನಿಗೆ ಸರ್ಕಾರವು ನಿಗದಿಪಡಿಸಿರುವ ಈಗಿನ ಗೈಡೆನ್ಸ್ ಬೆಲೆ ಮತ್ತು ಅದಕ್ಕೆ ತಗಲುವ ಮುದ್ರಾಂಕ ಮತ್ತು ನೋಂದಣಿ ಶುಲ್ಕ ಒದಗಿಸುವುದು.

ಮುಂದುವರಿದಂತೆ, 24.01.2001ರ ಸರ್ಕಾರಿ ಆದೇಶದ ಮುಖಾಂತರ 14,337 ಎಕರೆ ಜಮೀನು ಗುತ್ತಿಗೆ ಮತ್ತು ಕರಾರು ಪತ್ರ ನೋಂದಣಿಗೆ ಪ್ರತಿ 1000 ರೂ. ಮೌಲ್ಯಕ್ಕೆ ರೂ.1 ರಂತೆ ನೋಂದಣಿ ಪಾವತಿ ವಿನಾಯಿತಿ ನೀಡಲಾಗಿದೆ.

ಮುಂದುವರಿದಂತೆ ದಿನಾಂಕ 31.08.2002ರ ಅನಧಿಕೃತ ಟಿಪ್ಪಣಿಯ ಮುಖಾಂತರ ಜಂಟಿ ನಿರ್ದೇಶಕರು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಇವರು ದಿನಾಂಕ 09.08.2002 ರಂದು ನೈಸೆಲ್ ಸಂಸ್ಥೆಯು ಕರ್ನಾಟಕ ಸರ್ಕಾರದೊಡನೆ ಅನುಷ್ಠಾನಗೊಳಿಸಿದ ತ್ರಿಪಕ್ಷೀಯ ಒಪ್ಪಂದದ ಅನುಗುಣವಾಗಿ 14,337 ಎಕರೆ ವಿಸ್ತೀರ್ಣದ ಜಮೀನಿನ ಪೈಕಿ 4211 ಎಕರೆ ವಿಸ್ತೀರ್ಣದ ಖಾಸಗಿ ಜಮೀನನ್ನು ನೀಸ್ ಸಂಸ್ಥೆಯ ಪರವಾಗಿ ಹಸ್ತಾಂತರಿಸಿರುವ ಹಿನ್ನೆಲೆಯಲ್ಲಿ ಸರ್ಕಾರಿ ಆದೇಶವನ್ನು ಮಾರ್ಪಡಿಸುವಂತೆ ಕಂದಾಯ ಇಲಾಖೆಗೆ ಕೋರಿರುತ್ತಾರೆ. ಪುನಃ ಈ ಕೋರಿಕೆಯನ್ನು 06.09.2002 ರಂದು ಪುನರುಚ್ಚಿಸಲಾಗಿದೆ. ಈ ಕೋರಿಕೆಯ ಹಿನ್ನೆಲೆಯಲ್ಲಿ ದಿನಾಂಕ 21.09.2002ರ ಆದೇಶದ ಮುಖಾಂತರ 14,337 ಎಕರೆ ಜಮೀನಿನ ಪೈಕಿ 10,126 ಎಕರೆ ಜಮೀನಿಗೆ ನೈಸೆಲ್ ಸಂಸ್ಥೆಯ ಪರವಾಗಿ ಹಾಗೂ 4211 ಎಕರೆಗೆ ಅನ್ವಯಿಸುವಂತೆ ನೀಸೆಲ್ ಸಂಸ್ಥೆಗೆ ವಿನಾಯಿತಿ ನೀಡಿ ಆದೇಶ ಹೊರಡಿಸಲಾಗಿದೆ.

ತ್ರಿಪಕ್ಷೀಯ ಒಪ್ಪಂದದ ಹಿನ್ನೆಲೆಯಲ್ಲಿ ನೈಸೆಲ್/ನೀಸೆಲ್ ಸಂಸ್ಥೆಗಳಿಗೆ ಒಟ್ಟು ವಿನಾಯಿತಿ ನೀಡಿರುವ ಪ್ರದೇಶದ ವಿಸ್ತೀರ್ಣವನ್ನು ವಿಭಜಿಸಿ ಪರಿಷ್ಕೃತ ಆದೇಶದಲ್ಲಿ ಸೂಚಿಸಲಾಗಿದೆ. ಈ ವಿಷಯಕ್ಕೆ ಸಂಬಂಧಿಸಿದ ಟಿಪ್ಪಣಿಗಳನ್ನು ಪರಿವೀಕ್ಷಿಸಿದಲ್ಲಿ, ಮೂಲ ಆದೇಶವನ್ನು ಜಾರಿಗೊಳಿಸಿದ 18 ತಿಂಗಳುಗಳ ನಂತರ ಕಂದಾಯ ಇಲಾಖೆಯ ಉಪಕಾರ್ಯದರ್ಶಿಗಳು ವಿಸ್ತೀರ್ಣವನ್ನು ಪರಿಷ್ಕರಿಸಿ 5850 ರ ಬದಲಾಗಿ 14,337 ಎಕರೆಗಳಿಗೆ ವಿನಾಯಿತಿ ನೀಡಿರುವ ಬಗ್ಗೆ ಸಚಿವ ಸಂಪುಟದ ಒಪ್ಪಿಗೆಯನ್ನು ಪಡೆಯಬೇಕಾಗಬಹುದು ಎಂದು ಸೂಚಿಸಿದ್ದಾರೆ. ಅಂದರೆ, ಈ ಸೂಕ್ಷ್ಮಕರ ಹಾಗೂ ಆರ್ಥಿಕ ಪರಿಣಾಮ ಬೀರುವ ಅಧಿಕೃತ ಆದೇಶವನ್ನು ಘಟನೋತ್ತರವಾಗಿ ಸಕ್ರಮಗೊಳಿಸಲು 18 ತಿಂಗಳ ನಂತರ ಪ್ರಸ್ತಾಪಿಸಲಾಗಿದೆ. ಈ ಪ್ರಸ್ತಾವನೆಗೆ ಪ್ರತಿಕ್ರಿಯಿಸುತ್ತಾ, ಶ್ರೀ ಸಿ. ಕೃಷ್ಣಪ್ಪ, ಸರ್ಕಾರದ ಕಾರ್ಯದರ್ಶಿ, ಕಂದಾಯ ಇಲಾಖೆ ಇವರು ಪ್ರಸಕ್ತ ಸ್ಥಿತಿಯಲ್ಲಿ ವಿನಾಯಿತಿ, ಆರ್ಥಿಕ ಬಾಧ್ಯತೆ 56 ಕೋಟಿ ರೂ.ಗಳಿಂದ 54 ಕೋಟಿ ರೂ.ಗಳಿಗೆ ಇಳಿಮುಖವಾಗಿರುವ ಹಿನ್ನೆಲೆಯಲ್ಲಿ ಪರಿಷ್ಕೃತ ಸರ್ಕಾರಿ ಆದೇಶವನ್ನು ಸಚಿವ ಸಂಪುಟದ ಅನುಮೋದನೆ ಇಲ್ಲದೆ ಜಾರಿಗೊಳಿಸುವ ಬಗ್ಗೆ ಸಚಿವ ಸಂಪುಟ ಶಾಖೆಯ ಅಭಿಪ್ರಾಯವನ್ನು ಕೋರಿರುತ್ತಾರೆ. ಸಚಿವ ಸಂಪುಟ ವ್ಯವಹಾರಗಳ ಶಾಖೆಯ ಉಪ ಕಾರ್ಯದರ್ಶಿಗಳು ಕರ್ನಾಟಕ ಸರ್ಕಾರದ ವ್ಯವಹಾರಗಳ ನಿಯಮ 77ರ ಅಡಿಯಲ್ಲಿ ಸಚಿವ ಸಂಪುಟದ ಅನುಮೋದನೆ ಕಡ್ಡಾಯ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಆದಾಗ್ಯೂ, ವಿಷಯವನ್ನು ತುರ್ತಾಗಿ ಇತ್ಯರ್ಥಗೊಳಿಸಬೇಕಾದಲ್ಲಿ, ಪ್ರಥಮ ಸ್ತರದಲ್ಲಿ ಮುಖ್ಯಮಂತ್ರಿಗಳ ಅನುಮೋದನೆಯನ್ನು ಪಡೆದು ನಂತರ ಘಟನೋತ್ತರ ಸಕ್ರಮೀಕರಣಕ್ಕೆ ಸಚಿವ ಸಂಪುಟಕ್ಕೆ ಸಲ್ಲಿಸಬಹುದಾಗಿದೆ ಎಂದು ಸೂಚಿಸಿರುತ್ತಾರೆ. ಈ ನಿರ್ದೇಶನಗಳ ಅನುಗುಣವಾಗಿ ದಿನಾಂಕ 18.09.2002 ರಂದು ಪರಿಷ್ಕೃತ ಆದೇಶಕ್ಕೆ ಮುಖ್ಯಮಂತ್ರಿಗಳ ಅನುಮೋದನೆಯನ್ನು ಪಡೆದಿರುವುದು ದಾಖಲಾತಿಗಳಿಂದ ಸಮಿತಿಗೆ ಸ್ಪಷ್ಟವಾಗಿದೆ. ಆದರೆ, ಸಚಿವ ಸಂಪುಟ ಶಾಖೆ ಸೂಚಿಸಿದಂತೆ ಪರಿಷ್ಕೃತ ಅಥವಾ ಬದಲಾಯಿತ ಆದೇಶಕ್ಕೆ ಘಟನೋತ್ತರವಾಗಿ ಸಚಿವ ಸಂಪುಟದ ಅನುಮೋದನೆಯನ್ನು ಪಡೆದಿರುವ ಬಗ್ಗೆ ನಿರ್ದಿಷ್ಟ ಸ್ಪಷ್ಟೀಕರಣ ಅಥವಾ ಮಾಹಿತಿ ಲಭ್ಯವಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಮೂಲ ಆದೇಶ ಹಾಗೂ ಪರಿಷ್ಕೃತ ಆದೇಶಗಳನ್ನು ನಿಯಮಬಾಹಿರ ಹಾಗೂ ಅನಧಿಕೃತ ಎಂದು ಪರಿಗಣಿಸುವುದು ಅನಿವಾರ್ಯ ಎಂದು ಸಮಿತಿ ತೀರ್ಮಾನಿಸುತ್ತದೆ. ಮುಂದುವರಿದಂತೆ, ಕಛೇರಿಯ ಟಿಪ್ಪಣಿಗಳು ಹಾಗೂ ವಿಧಿ ವಿಧಾನಗಳನ್ನು ಸಮಗ್ರವಾಗಿ ಅವಲೋಕಿಸಿದಲ್ಲಿ, ಕಂದಾಯ ಇಲಾಖೆಯ ಸಕ್ಷಮ ಅಧಿಕಾರಿಗಳು ಪ್ರಥಮ ಸ್ತರದಿಂದಲೇ ಸಚಿವ ಸಂಪುಟದ ನಿರ್ಧಾರಗಳನ್ನು ಉಪೇಕ್ಷಿಸಿ, ಉಲ್ಲಂಘಿಸಿ ಪ್ರಯತ್ನಪೂರ್ವಕವಾಗಿ ಘಟನೋತ್ತರ ಸಕ್ರಮೀಕರಣವನ್ನು ನಿರ್ಲಕ್ಷಿಸಿರುವುದು ಸ್ಪಷ್ಟವಾಗಿದೆ.

ನೈಸೆಲ್ ಸಂಸ್ಥೆಗೆ ಕ್ರಿಯಾ ಒಪ್ಪಂದದ ಅನುಗುಣವಾಗಿ ನೀಡಬೇಕಾಗಿರುವ 20,193 ಎಕರೆ ಜಮೀನು ಖಾಸಗಿ ಹಾಗೂ ಸರ್ಕಾರಿ ಜಮೀನನ್ನು ಒಳಗೊಂಡಿರುತ್ತದೆ. ಕ್ರಿಯಾ ಒಪ್ಪಂದದ ಷರತ್ತುಗಳ ಅನ್ವಯವಾಗಿ Transferable Toll Road Assets ಎಂದು ವರ್ಗೀಕರಣವಾದ ಟೋಲ್ ರಸ್ತೆ, ಎಕ್ಸ್‌ಪ್ರೆಸ್ ಹೈವೇ ಹಾಗೂ ಸಂಬಂಧಿತ ಸೌಲಭ್ಯಗಳನ್ನು 30 ವರ್ಷಗಳ ಗುತ್ತಿಗೆಯ ಅವಧಿಯ ನಂತರ ಸರ್ಕಾರಕ್ಕೆ ಹಿಂದಿರುಗಿಸಬೇಕಾಗುವುದು. ಇದರಿಂದ ಹಿಂದಿರುಗಿಸಬೇಕಾದ ಜಮೀನುಗಳು ಗುತ್ತಿಗೆ ಆಧಾರದ ಮೇಲೆ ನೀಡಬೇಕಾಗುವುದು. ಕ್ರಿಯಾ ಒಪ್ಪಂದದ ಅನುಗುಣವಾಗಿ ನೈಸ್ ಸಂಸ್ಥೆಯು 20,193 ಎಕರೆ ಜಮೀನಿನ ಪೈಕಿ 6999 ಎಕರೆ ಜಮೀನನ್ನು ರಸ್ತೆಗಳ ನಿರ್ಮಾಣಕ್ಕೆ ಬಳಸಿ 30 ವರ್ಷಗಳ ನಂತರ ಸರ್ಕಾರಕ್ಕೆ ಹಿಂದಿರುಗಿಸಬೇಕಾಗುವುದು. ಉಳಿದ 13,194 ಎಕರೆ ಜಮೀನನ್ನು ಎಕ್ಸ್‌ಪ್ರೆಸ್ ಹೈವೇ ಆಸುಪಾಸಿನಲ್ಲಿ ನಗರ ಸಮುಚ್ಛಯದ ಅಭಿವೃದ್ಧಿಗಾಗಿ ಬಳಸಬೇಕಾಗುವುದು. ಈ ವಿಸ್ತೀರ್ಣದಲ್ಲಿ ಪ್ರತಿಶತ 45ರಷ್ಟು ವಿಸ್ತೀರ್ಣದ ಜಮೀನನ್ನು ಅಂದರೆ, ಸಚಿವ ಸಂಪುಟ ಸೂಚಿಸಿರುವ ಸುಮಾರು 5850 ಎಕರೆ ಜಮೀನಿನಲ್ಲಿ ನಿವೇಶನಗಳನ್ನು

ಅಭಿವೃದ್ಧಿಪಡಿಸಿ ಮಾರಾಟ ಮಾಡಲು ಅವಕಾಶ ಕಲ್ಪಿಸಲಾಗಿದೆ. ಅಂದರೆ, ನಗರ ಸಮುಚ್ಛಯ ಪ್ರದೇಶಗಳಲ್ಲಿ ಮಾರಾಟ ಮಾಡಬಹುದಾದ ಜಮೀನಿಗೆ ಈ ವಿನಾಯಿತಿ ಅನ್ವಯಿಸುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ 14,337 ಎಕರೆ ಜಮೀನಿಗೆ ವಿನಾಯಿತಿ ನೀಡಿರುವುದರಿಂದ ಖಾಸಗಿ ಪಾಲುದಾರರು ನಗರ ಸಮುಚ್ಛಯವನ್ನು ಹೊರತುಪಡಿಸಿ ಇತರೆ ಪ್ರದೇಶಗಳಲ್ಲೂ ಸಹ ನೋಂದಣಿ ಹಾಗೂ ಮುದ್ರಾಂಕ ಶುಲ್ಕದ ವಿನಾಯಿತಿ ಸೌಲಭ್ಯವನ್ನು ಪಡೆಯಲು ಅನುಕೂಲ ಮಾಡಿಕೊಟ್ಟಂತಾಗಿದೆ. ಈ ಸೌಲಭ್ಯದಿಂದಾಗಿ ಖಾಸಗಿ ಪಾಲುದಾರರಿಗೆ ಅನಧಿಕೃತ ಲಾಭ ಆಗುತ್ತದೆ ಎಂದು ಸಮಿತಿ ತೀರ್ಮಾನಿಸುತ್ತದೆ. ವಾಸ್ತವಿಕವಾಗಿ ಸಚಿವ ಸಂಪುಟ ಸೂಚಿಸಿರುವ 5850 ಎಕರೆ ಜಮೀನಿಗೆ ಮಾತ್ರ ಸರ್ಕಾರಕ್ಕೆ ಮಾರಾಟದ ಸಂದರ್ಭದಲ್ಲಿ ಹೆಚ್ಚುವರಿ ಮುದ್ರಾಂಕ ಹಾಗೂ ನೋಂದಣಿ ಶುಲ್ಕ ಲಭಿಸುತ್ತದೆ. ಇದನ್ನು ಹೊರತುಪಡಿಸಿ ಹೆಚ್ಚುವರಿಯಾಗಿ ನೀಡಿರುವ 8487 ಎಕರೆ ಜಮೀನಿಗೆ ಅನ್ವಯಿಸುವಂತೆ ವಿನಾಯಿತಿ ಸೌಲಭ್ಯವು ಸಂಪೂರ್ಣವಾಗಿ ಖಾಸಗಿ ಪಾಲುದಾರರ ಆದಾಯವಾಗಿರುತ್ತದೆ. ಈ ಅನುದ್ದೇಶಿತ ಹಾಗೂ ಅನಧಿಕೃತ ಲಾಭದ ಬಳಕೆಯ ಪ್ರವೃತ್ತಿಯನ್ನು ವಿಶ್ಲೇಷಿಸುವುದು ಅವಶ್ಯಕ ಎಂದು ಸಮಿತಿ ತೀರ್ಮಾನಿಸುತ್ತದೆ. ಸಮಿತಿಗೆ ಸಲ್ಲಿಸಿರುವ ದಾಖಲಾತಿಗಳ ಅನುಗುಣವಾಗಿ ಈವರೆವಿಗೂ ಖಾಸಗಿ ಪಾಲುದಾರರು 27 ಪ್ರಕರಣಗಳಲ್ಲಿ 1699 ಎಕರೆ ಜಮೀನಿಗೆ ಅನ್ವಯಿಸುವಂತೆ ಸುಮಾರು 9 ಕೋಟಿ ರೂ.ಗಳ ವಿನಾಯಿತಿ ಸೌಲಭ್ಯವನ್ನು ಬಳಸಿರುತ್ತಾರೆ. ಪ್ರಸಕ್ತವಾಗಿ ಸರ್ಕಾರ ನಿರೂಪಿಸಿದ 56 ಕೋಟಿ ರೂ.ಗಳ ಮಿತಿಯಲ್ಲಿ ವಿನಾಯಿತಿ ಸೌಲಭ್ಯವನ್ನು ಬಳಸಲಾಗಿದೆ. ಆದಾಗ್ಯೂ, ಪ್ರವೃತ್ತಿಯನ್ನು ವಿಶ್ಲೇಷಿಸಿದಾಗ ನಗರ ಸಮುಚ್ಛಯದ ಜಮೀನಿನ ಬದಲಾಗಿ ವಿನಾಯಿತಿಯ ಸೌಲಭ್ಯವನ್ನು ಸಂಪೂರ್ಣವಾಗಿ ಬಿ.ಎಂ.ಐ.ಸಿ. ಯೋಜನೆಯ ಸೆಕ್ಷನ್ 'ಎ' ಭಾಗದ ಖಾಸಗಿ ಜಮೀನಿನ ನೋಂದಣಿಗೆ ಬಳಸಿರುವುದು ಸ್ಪಷ್ಟವಾಗಿದೆ. ಏಕೆಂದರೆ, ಈ ವರದಿಯನ್ನು ಸಲ್ಲಿಸಿದ ದಿನಾಂಕಕ್ಕೆ ಅನ್ವಯಿಸುವಂತೆ ಪ್ರಗತಿಯು ಸೆಕ್ಷನ್ 'ಎ' ಗೆ ಮಾತ್ರ ಸೀಮಿತವಾಗಿದೆ. ಅಂದರೆ, ಎಕ್ಸ್‌ಪ್ರೆಸ್ ವೇ ಮತ್ತು ಟೌನ್‌ಶಿಪ್ ಅಭಿವೃದ್ಧಿಯಲ್ಲಿ ಯಾವುದೇ ಪ್ರಗತಿಯನ್ನು ಖಾಸಗಿ ಪಾಲುದಾರರು ಸಾಧಿಸಿರುವುದಿಲ್ಲ. ಆದುದರಿಂದ ಈವರೆವಿಗೂ ವಿನಾಯಿತಿ ಪಡೆದ ಜಮೀನುಗಳು ಈ ಸೌಲಭ್ಯಕ್ಕೆ ಅರ್ಹವಿರುವುದಿಲ್ಲ. ಬಹುತೇಕವಾಗಿ ಬೆಂಗಳೂರಿನ ಆಸುಪಾಸಿನಲ್ಲಿ ಈವರೆವಿಗೂ ಖಾಸಗಿ ಪಾಲುದಾರರು ಅನುಷ್ಠಾನಗೊಳಿಸಿರುವ ಸೆಕ್ಷನ್ 'ಎ' ಅಂದರೆ, ಪೆರಿಫೆರಲ್ ರಸ್ತೆ, ಲಿಂಕ್ ರಸ್ತೆ ಹಾಗೂ ಇಂಟರ್ ಛೇಂಜ್ ಇತ್ಯಾದಿಗಳ ವ್ಯಾಪ್ತಿಯ ಹೆಚ್ಚುವರಿ ಜಮೀನಿಗೆ ಅನ್ವಯಿಸುವಂತೆ ಈ ವಿನಾಯಿತಿ ಸೌಲಭ್ಯವನ್ನು ಬಳಸಲಾಗಿದೆ. ಮುಂದುವರಿದಂತೆ, ಋಣಭಾರ ಪತ್ರಗಳ ಪರಿವೀಕ್ಷಣೆಯಿಂದ ಈವರೆವಿಗೂ ಬೆಂಗಳೂರಿನ ಆಸುಪಾಸಿನಲ್ಲಿ ವಿನಾಯಿತಿಯನ್ನು ಪಡೆದು ನೋಂದಣಿ ಮಾಡಿಸಲಾದ 1699 ಎಕರೆ ಜಮೀನಿನ ಪೈಕಿ 492.07 ಎಕರೆ ಜಮೀನಿಗೆ ಅನ್ವಯಿಸುವಂತೆ ಖಾಸಗಿ ಪಾಲುದಾರರು ಜಂಟಿ ಅಭಿವೃದ್ಧಿ ಕರಾರನ್ನು ವಿವಿಧ ಅಭಿವೃದ್ಧಿದಾರರೊಡನೆ ಜಾರಿಗೊಳಿಸಿರುವುದು ದಾಖಲಾತಿಗಳಿಂದ ಸಮಿತಿಗೆ ಸ್ಪಷ್ಟವಾಗಿದೆ. ಈ ವಿಸ್ತೀರ್ಣವು ಬೆಂಗಳೂರು ದಕ್ಷಿಣ ತಾಲ್ಲೂಕಿನ 7 ಹಳ್ಳಿಗಳಿಗೆ ಅನ್ವಯಿಸುತ್ತದೆ. ಕ್ರಿಯಾ ಒಪ್ಪಂದದ ಅನುಗುಣವಾಗಿ ಬೆಂಗಳೂರು ದಕ್ಷಿಣ ತಾಲ್ಲೂಕಿನ ಪ್ರಸ್ತಾವಿತ ಹಳ್ಳಿಗಳಲ್ಲಿ ನಗರ ಸಮುಚ್ಛಯದ ಅಭಿವೃದ್ಧಿಯ ಪ್ರಶ್ನೆ ಉದ್ಭವಿಸುವುದಿಲ್ಲ. ಪ್ರಸ್ತಾವಿತ ಆದೇಶಗಳನ್ನು ನಿರ್ಧಿಷ್ಟವಾಗಿ ಉಲ್ಲೇಖಿಸುವುದಾದರೆ, ನಗರ ಸಮುಚ್ಛಯದ ಪ್ರದೇಶಕ್ಕೆ ಮಾತ್ರ ಈ ವಿನಾಯಿತಿ ಲಭ್ಯವಿರುತ್ತದೆ. ನೈಸೆಲ್ ಸಂಸ್ಥೆಗೆ ಹಿಂದುರಿಗಸಬೇಕಾದ ಜಮೀನು ಗುತ್ತಿಗೆ ಕರಾರಿಗೆ ಒಳಪಟ್ಟಿದ್ದು, ಸಮಿತಿಯ ಬಳಿ ಲಭ್ಯವಿರುವ ಮಾಹಿತಿಯ ಅನುಗುಣವಾಗಿ ಸೆಕ್ಷನ್ 'ಎ' ಅಡಿಯಲ್ಲಿ ಅನುಷ್ಠನಗೊಳಿಸಲಾದ ರಸ್ತೆ ಕಾಮಗಾರಿಗಳ ವ್ಯಾಪ್ತಿಯು ಪ್ರತಿಶತ 90 ರಷ್ಟು ಸರ್ಕಾರಿ ಜಮೀನಾಗಿರುತ್ತದೆ. ಅಂದರೆ, ಈ ಜಮೀನನ್ನು ನೈಸೆಲ್ ಸಂಸ್ಥೆಗೆ ಪ್ರತಿ ಎಕರೆಗೆ ಪ್ರತಿ ವರ್ಷಕ್ಕೆ ರೂ.10 ರಂತೆ 40 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಲಾಗಿರುತ್ತದೆ. ಸೆಕ್ಷನ್ 'ಎ' ಅಡಿಯಲ್ಲಿ ಕ್ರಿಯಾ ಒಪ್ಪಂದಕ್ಕಿಂತ ಹೆಚ್ಚುವರಿಯಾಗಿ ಜಮೀನನ್ನು ನೀಡಿರುವುದರಿಂದ ಈ ಹೆಚ್ಚುವರಿ ಜಮೀನನ್ನು ವಾಣಿಜ್ಯ ಉದ್ದೇಶಕ್ಕಾಗಿ ಖಾಸಗಿ ಪಾಲುದಾರರು ಬಳಸುತ್ತಿದ್ದಾರೆ. ಇದರಿಂದ ಖಾಸಗಿ ಪಾಲುದಾರರಿಗೆ

ಮೊದಲನೇ ಸ್ತರದಲ್ಲಿ ಮುದ್ರಣ ಮತ್ತು ನೋಂದಣಿ ಶುಲ್ಕದ ವಿನಾಯಿತಿಯ ಅನುಚಿತ ಲಾಭ ಹಾಗೂ ಎರಡನೇ ಸ್ತರದಲ್ಲಿ ಜಂಟಿ ಅಭಿವೃದ್ಧಿ ಕರಾರಿನ ಮುಖಾಂತರ ಕ್ರೋಢೀಕೃತವಾಗುವ ಲಾಭ ಅನಿವಾರ್ಯವಾಗಿ ವಿಸ್ತರಿಸಿದಂತಾಗಿದೆ. ಕ್ರಿಯಾ ಒಪ್ಪಂದದ ಷರತ್ತಿನ ಅನುಗುಣವಾಗಿ ರಸ್ತೆಗಳಿಗೆ ಅಗತ್ಯವಿರುವ ಜಮೀನು ಹಾಗೂ ಟೌನ್ ಶಿಪ್ ಪ್ರದೇಶದ ಪ್ರತಿಶತ 55 ರಷ್ಟು ಜಮೀನನ್ನು ಅಂತಿಮವಾಗಿ ಸರ್ಕಾರಕ್ಕೆ ಹಿಂದಿರುಗಿಸಬೇಕಾಗುವುದು. ಅಂದರೆ, 13,255 (6999+7256) ಜಮೀನನ್ನು ಸರ್ಕಾರಕ್ಕೆ ಖಾಸಗಿ ಪಾಲುದಾರರು ಗುತ್ತಿಗೆ ಅವಧಿಯ ನಂತರ ಹಾಗೂ ವಿವಿಧ ಸ್ತರಗಳಲ್ಲಿ ಹಸ್ತಾಂತರಿಸಬೇಕಾಗುವುದು. ಈ ಹಿನ್ನೆಲೆಯಲ್ಲಿ ವಿನಾಯಿತಿ ಸಮರ್ಪಕವೆನಿಸಿದರೂ ಸಹ ವಿಶಿಷ್ಟವಾಗಿ ನಗರ ಸಮುಚ್ಛಯದ ವ್ಯಾಪ್ತಿಯ ಪ್ರದೇಶಕ್ಕೆ ನೀಡಿರುವ ವಿನಾಯಿತಿಯ ಸೌಲಭ್ಯವನ್ನು ಸೆಕ್ಷನ್ 'ಎ' ವ್ಯಾಪ್ತಿಯ ಜಮೀನಿಗೆ ಬಳಸಿರುವುದು ಗುರುತರ ಅಪರಾಧವೆಂದು ಸಮಿತಿಯು ತೀರ್ಮಾನಿಸುತ್ತದೆ. ಇದಲ್ಲದೆ, ತ್ರಿಪಕ್ಷೀಯ ಒಪ್ಪಂದದ ಅನುಗುಣವಾಗಿ ಇಂಟರ್ ಛೇಂಜ್ ವ್ಯಾಪ್ತಿಯ ಜಮೀನನ್ನು ಮಾರಾಟ ಮಾಡುವ ಅಧಿಕಾರವನ್ನು ಖಾಸಗಿ ಪಾಲುದಾರರಿಗೆ ನೀಡಲಾಗಿದೆ. ಪ್ರಸಕ್ತ ವಿದ್ಯಮಾನಗಳನ್ನು ಗಮನಿಸಿದಲ್ಲಿ, ಖಾಸಗಿ ಪಾಲುದಾರರು. ಮಾರಾಟ ಮಾಡುವ ಜಮೀನಿಗೂ ಸಹ ವಿನಾಯಿತಿಯ ಸೌಲಭ್ಯವನ್ನು ಬಳಸಿರುವುದು ಸ್ಪಷ್ಟವಾಗಿದೆ. ಉದಾಹರಣೆಗೆ, ಮಾದಾವರ ಗ್ರಾಮ ವ್ಯಾಪ್ತಿಯಲ್ಲಿ 10.02 ಎಕರೆ ವಿಸ್ತೀರ್ಣದ ಜಮೀನನ್ನು ಶುದ್ಧ ಕ್ರಯ ಪತ್ರದ ಮುಖಾಂತರ ನೀಸೆಲ್ ಸಂಸ್ಥೆ ಮೆ:ಡಿ.ಜಿ.ಎಂ. ರಿಯಾಲಿಟೀಸ್ ಸಂಸ್ಥೆಗೆ ಮಾರಾಟ ಮಾಡಿದ್ದು, ಈ ಜಮೀನಿಗೆ ವಿನಾಯಿತಿ ಸೌಲಭ್ಯವನ್ನು ಬಳಸಲಾಗಿದೆ. ಮಾರಾಟದ ಸರಾಸರಿ ಮೊತ್ತ ಪ್ರತಿ ಎಕರೆಗೆ 2 ಕೋಟಿ ರೂ.ಗಳ ಆಸುಪಾಸಿನಲ್ಲಿದೆ. ಇದರ ವಿರುದ್ಧ ಭೂ ಮಾಲೀಕರಿಗೆ ನೀಡುವ ಪರಿಹಾರದ ಮೊತ್ತ ಪ್ರತಿ ಎಕರೆಗೆ 4.5 ರಿಂದ 20 ಲಕ್ಷ ರೂ.ಗಳ ಮಧ್ಯದಲ್ಲಿದೆ. ಅಂದರೆ, ಸರ್ಕಾರದ ಧ್ಯೇಯೋದ್ದೇಶಗಳಿಗೆ ಹಾಗೂ ಕ್ರಿಯಾ ಒಪ್ಪಂದಕ್ಕೆ ವ್ಯತಿರಿಕ್ತವಾಗಿ ವಿನಾಯಿತಿ ಸೌಲಭ್ಯವನ್ನು ಅನುಚಿತ ಅಥವಾ ಅನಧಿಕೃತ ಲಾಭವನ್ನು ಪಡೆಯಲು ಖಾಸಗಿ ಪಾಲುದಾರರು ಬಳಸಿರುವುದು ಸಮಿತಿಗೆ ಸ್ಪಷ್ಟವಾಗಿದೆ. ಕ್ರಿಯಾ ಒಪ್ಪಂದದ ಅನುಗುಣವಾಗಿ ಖಾಸಗಿ ಪಾಲುದಾರರ ಆದಾಯ ಮೂಲಗಳು ಟೋಲ್ ಫೀ ಮತ್ತು ಟೌನ್ ಶಿಪ್ ನಿವೇಶನಗಳ ಮಾರಾಟದ ಸ್ವೀಕೃತಿಗಳಾಗಿರುತ್ತವೆ. ಈ ನಿರ್ಬಂಧನೆಗಳನ್ನು ಉಲ್ಲಂಘಿಸಿ ಕಂದಾಯ ಇಲಾಖೆ ಹಾಗೂ ಲೋಕೋಪಯೋಗಿ ಇಲಾಖೆಯ ವ್ಯತಿರಿಕ್ತ ಆದೇಶ ಹಾಗೂ ನಿರ್ದೇಶನಗಳ ಪರಿಣಾಮವಾಗಿ ಖಾಸಗಿ ಪಾಲುದಾರರು ವಿನಾಯಿತಿ ಸೌಲಭ್ಯವನ್ನು ವಾಣಿಜ್ಯ ಉದ್ದೇಶಕ್ಕಾಗಿ ದುರ್ಬಳಕೆ ಮಾಡಿರುವುದು ಸ್ಪಷ್ಟವಾಗಿದೆ. ***ಈ ಹಿನ್ನೆಲೆಯಲ್ಲಿ ಸರ್ಕಾರವು ಈ ಕೂಡಲೇ ಸಚಿವ ಸಂಪುಟದ ನಿರ್ಧಾರಕ್ಕನುಗುಣವಾಗಿ ನೋಂದಣಿ ಶುಲ್ಕ ಹಾಗೂ ಮುದ್ರಾಂಕ ಶುಲ್ಕದ ವಿನಾಯಿತಿಯನ್ನು 5850 ಎಕರೆ ಜಮೀನಿಗೆ ಸೀಮಿತಗೊಳಿಸಿ ಪರಿಷ್ಕೃತ ಆದೇಶವನ್ನು ಜಾರಿಗೊಳಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಇದಕ್ಕೆ ಪೂರಕವಾಗಿ ಈಗಾಗಲೇ ವಿನಾಯಿತಿಯ ಸೌಲಭ್ಯವನ್ನು ಬಳಸಿರುವ 1699 ಎಕರೆ ವಿಸ್ತೀರ್ಣದ ಜಮೀನಿನ ವಿವರಗಳನ್ನು ಪರಿವೀಕ್ಷಿಸಿ, ವಿನಾಯಿತಿ ಸೌಲಭ್ಯವನ್ನು ಹಿಂಪಡೆಯಲು ಕಾನೂನು ರೀತ್ಯಾ ಕ್ರಮ ಜರುಗಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಪರ್ಯಾಯವಾಗಿ ಖಾಸಗಿ ಪಾಲುದಾರರು ಮೂಲ ಕ್ರಿಯಾ ಒಪ್ಪಂದ ಅಥವಾ ಯೋಜನಾ ತಾಂತ್ರಿಕ ವರದಿಯಲ್ಲಿ ಪ್ರತಿಪಾದಿಸಿರುವ ಸ್ವೀಕೃತಿಗಳ ಮೌಲ್ಯಕ್ಕೆ ಈ ಅನಪೇಕ್ಷಿತ ಸೌಲಭ್ಯದ ಲಾಭಾಂಶವನ್ನು ಸೇರ್ಪಡೆ ಮಾಡಿ ಗುತ್ತಿಗೆ ಅವಧಿಯನ್ನು ಸೂಕ್ತ ಅನುಪಾತದಲ್ಲಿ ಪರಿಷ್ಕರಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.***

ದಿನಾಂಕ 04.07.2003ರ ತಿದ್ದುಪಡಿ ಆದೇಶದ ಮುಖಾಂತರ 24.01.2001 ಹಾಗೂ 21.09.2002ರ ಆದೇಶಕ್ಕೆ ಪ್ರಮುಖ ಬದಲಾವಣೆಗಳನ್ನು ಜಾರಿಗೊಳಿಸಲಾಗಿದೆ. ಈ ಆದೇಶಗಳಲ್ಲಿ ವಿನಾಯಿತಿಯನ್ನು "ಮಾರಾಟ ಕರಾರು ಪತ್ರಗಳು" ಎಂಬ ಪ್ರವರ್ಗಕ್ಕೆ ಸೀಮಿತಗೊಳಿಸಿದ್ದು, ಈ ವರ್ಗೀಕರಣವನ್ನು "ಗುತ್ತಿಗೆ ಹಾಗೂ ಶುದ್ಧ ಕ್ರಯ ಪತ್ರಗಳು" ಎಂದು ತಿದ್ದುಪಡಿ ಮಾಡಲಾಗಿದೆ.

ಅಂದರೆ, ಸರ್ಕಾರದ ಧ್ಯೇಯದ್ದೇಶಗಕ್ಕನುಗುಣವಾಗಿ ಮಾರಾಟ ಮಾಡಬಹುದಾದ ಜಮೀನಿಗೆ ವಿನಾಯಿತಿ ನೀಡಬೇಕಾಗಿದ್ದರಿಂದ ಮಾರಾಟ ಕರಾರು ಪತ್ರಗಳು ಎಂದು ಮೂಲ ಆದೇಶದಲ್ಲಿ ಉಲ್ಲೇಖಿಸಲಾಗಿದೆ. ಇದನ್ನು ಗುತ್ತಿಗೆ ಹಾಗೂ ಶುದ್ಧ ಕ್ರಯ ಪತ್ರಗಳು ಎಂದು ಬದಲಾವಣೆ ಮಾಡಿದ್ದರಿಂದ ನೈಸೆಲ್ ಸಂಸ್ಥೆಗೆ ಸರ್ಕಾರಿ ಹಾಗೂ ಖಾಸಗಿ ಜಮೀನು ಈ ಎರಡೂ ಪ್ರವರ್ಗಕ್ಕೆ ಸಂಬಂಧಿಸಿದ ಜಮೀನುಗಳಿಗೆ ಸಂಪೂರ್ಣವಾಗಿ ವಿನಾಯಿತಿ ನೀಡಿದಂತಾಗಿದೆ. ಏಕೆಂದರೆ, ಸರ್ಕಾರಿ ಜಮೀನಿನ ಒಂದು ಭಾಗವನ್ನು ಗುತ್ತಿಗೆ ಆಧಾರದ ಮೇಲೆ ನೋಂದಣಿ ಮಾಡಬೇಕಾಗಿದ್ದು, ಖಾಸಗಿ ಜಮೀನನ್ನು ಶುದ್ಧ ಕ್ರಯ ಪತ್ರದ ಮುಖಾಂತರ ಈಗಾಗಲೇ ಹಸ್ತಾಂತರ ಮಾಡಲಾಗುತ್ತಿದೆ. ಸರ್ಕಾರದ ಮಟ್ಟದಲ್ಲಿ ಮಾರಾಟ ಮಾಡಬಹುದಾದ ಭೂಮಿಗೆ ವಿನಾಯಿತಿಯನ್ನು ಸೀಮಿತಗೊಳಿಸಬೇಕಾಗುವುದು. ಆದರೆ ನಗರ ಸಮುಚ್ಛಯಗಳಲ್ಲಿ ಮಾರಾಟ ಮಾಡಬಹುದಾದ ಜಮೀನಿನ ವಿವರಗಳು ಅಂದರೆ, ಖಾಸಗಿ ಅಥವಾ ಸರ್ಕಾರಿ, ಗ್ರಾಮ, ಸರ್ವೆ ನಂಬರು ಇತ್ಯಾದಿಗಳ ಅನುಪಸ್ಥಿತಿಯಲ್ಲಿ ಬರೀ ಅಂಕಿ ಅಂಶಗಳ ಆಧಾರದ ಮೇಲೆ ಈ ಆದೇಶವನ್ನು ಜಾರಿಗೊಳಿಸಿದೆ. ಇದರಿಂದಾಗಿ ಆದೇಶದ ಅನುಷ್ಠಾನ ಈವರೆವಿಗೂ ಗೊಂದಲಮಯವಾಗಿದೆ. *ಈ ಹಿನ್ನೆಲೆಯಲ್ಲಿ ಈ ಸೌಲಭ್ಯದ ಮುಂದುವರಿದ ಶೋಷಣೆಯನ್ನು ನಿಯಂತ್ರಿಸಲು ಸರ್ಕಾರವು ಈ ಕೂಡಲೇ ಸಚಿವ ಸಂಪುಟವು ಪ್ರತಿಪಾದಿಸಿದ ೨೮೫೦ ಎಕರೆ ಜಮೀನನ್ನು* **Cledestal Map** *ಮುಖಾಂತರ ನಿರ್ದಿಷ್ಟವಾಗಿ ಗುರುತಿಸಿ ಈ ಆಧಾರದ ಮೇಲೆ ವಿನಾಯಿತಿಯನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಕ್ರಿಯಾ ಒಪ್ಪಂದದ ಶೆಡ್ಯೂಲ್ 1 ಅನುಗುಣವಾಗಿ ಈಗಾಗಲೇ ನೈಸೆಲ್ ಸಂಸ್ಥೆ ಅನುಷ್ಠಾನಗೊಳಿಸಿರುವ ಸೆಕ್ಷನ್ 'ಎ' ಕಾಮಗಾರಿಗಳಿಗೆ ಅನ್ವಯಿಸುವಂತೆ 554 ಎಕರೆ ವಿಸ್ತೀರ್ಣದ ಜಮೀನು ಪ್ರದೇಶವನ್ನು ಹೆಚ್ಚುವರಿಯಾಗಿ ನೀಡಿರುವುದು ಎಲ್ಲಾ ಸ್ತರಗಳಲ್ಲಿಯೂ ಅಂದರೆ, ನ್ಯಾಯಾಲಯಗಳಲ್ಲಿ, ಪ್ರಮಾಣ ಪತ್ರಗಳಲ್ಲಿ ಸಾಬೀತಾಗಿದೆ. ಈ 554 ಎಕರೆ ವಿಸ್ತೀರ್ಣದ ಜಮೀನಿನ ವ್ಯಾಪ್ತಿಯಲ್ಲಿ ಖಾಸಗಿ ಪಾಲುದಾರರು ಬಳಸಿರುವ ವಿನಾಯಿತಿ ಸೌಲಭ್ಯದ ವಿವರಗಳನ್ನು ಕೂಡಲೇ ಕ್ರೋಢೀಕರಿಸಿ ವಿನಾಯಿತಿಯ ಮೌಲ್ಯವನ್ನು ಸರ್ಕಾರವು ಹಿಂಪಡೆಯಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.*

*ದಿನಾಂಕ 21.09.2002ರ ಆದೇಶದ ಅನುಗುಣವಾಗಿ ವೇಗದ ಹೆದ್ದಾರಿಯನ್ನು ಮೈಸೂರು ಕಡೆಯಿಂದ ನೈಸೆಲ್ ಸಂಸ್ಥೆ ಹಾಗೂ ಬೆಂಗಳೂರು ಕಡೆಯಿಂದ ನೀಸೆಲ್ ಸಂಸ್ಥೆ ಅನುಕ್ರಮವಾಗಿ ಎರಡೂ ಕಡೆಯಿಂದ ಏಕಕಾಲದಲ್ಲಿ ಪ್ರಾರಂಭಿಸತಕ್ಕದ್ದು ಎಂಬ ನಿರ್ಬಂಧನೆಗೆ ಒಳಪಟ್ಟು ವಿನಾಯಿತಿ ಸೌಲಭ್ಯ ನೀಡಲಾಗಿದೆ. ಆದರೆ, ನೈಸೆಲ್ ಸಂಸ್ಥೆ ಅಥವಾ ನೀಸೆಲ್ ಸಂಸ್ಥೆ ಈ ಷರತ್ತನ್ನು ಈವರೆವಿಗೂ ಪಾಲಿಸದೇ ಇರುವುದು ದಾಖಲಾತಿಗಳಿಂದ ಸ್ಪಷ್ಟವಾಗಿದೆ. ಆದುದರಿಂದ ನಿರ್ಬಂಧನೆ ಅಥವಾ ಷರತ್ತುಗಳ ಉಲ್ಲಂಘನೆಯ ಆಧಾರದ ಮೇಲೆ ವಿನಾಯಿತಿಯ ಸೌಲಭ್ಯವನ್ನು ಈ ಕೂಡಲೇ ಸ್ಥಗಿತಗೊಳಿಸುವ ಪ್ರಸ್ತಾವನೆಯನ್ನು ಸರ್ಕಾರವು ಜಾರಿಗೊಳಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.*

*ಎರಡನೇ ಸ್ತರದಲ್ಲಿ ಸಮಿತಿಯು ಕರ್ನಾಟಕ ಪ್ರವೇಶ ತೆರಿಗೆ ಅಧಿನಿಯಮದಡಿ ಖಾಸಗಿ ಪಾಲುದಾರರು ಕೋರಿರುವ ವಿನಾಯಿತಿ ಹಾಗೂ ಸಂಬಂಧಪಟ್ಟ ಬೆಳವಣಿಗೆಗಳ ಬಗ್ಗೆ ಈ ಕೆಳಕಂಡಂತೆ ವಿಶ್ಲೇಷಣೆ ಹಾಗೂ ಶಿಫಾರಸ್ಸುಗಳನ್ನು ಮಾಡುತ್ತದೆ:*

ದಿನಾಂಕ 07.12.2011 ರ ಪತ್ರಾಂಕಿತ ಅಧಿಸೂಚನೆಯ ಮುಖಾಂತರ ಆರ್ಥಿಕ ಸಚಿವಾಲಯವು ಪ್ರವೇಶ ತೆರಿಗೆ ಅಧಿನಿಯಮ ಖಂಡ 11 ಎ ಅಡಿಯಲ್ಲಿ ಲಭ್ಯವಿರುವ ಸೌಲಭ್ಯವನ್ನು ಬಳಸಿ ಸಾರ್ವಜನಿಕ ಹಿತಾಸಕ್ತಿಯಲ್ಲಿ 05.02.2007 ರಿಂದ ಪೂರ್ವಾನ್ವಯವಾಗಿ ಅನ್ವಯಿಸುವಂತೆ

ನೈಸೆಲ್/ನೀಸೆಲ್ ಹಾಗೂ ನಂದಿ ಇಂಜಿನೀಯರಿಂಗ್ ನಿಯಮಿತ ಈ ಸಂಸ್ಥೆಗಳಿಗೆ ಈ ಕೆಳಕಂಡ ಪ್ರವರ್ಗದ ಸಾಮಗ್ರಿಗಳಿಗೆ ಅನ್ವಯಿಸುವಂತೆ ಪ್ರವೇಶ ತೆರಿಗೆ ವಿನಾಯಿತಿಯನ್ನು ನೀಡಲಾಗಿದೆ:

1. ನಿರ್ಮಾಣ ಸರಕುಗಳು, ಡಾಂಬರು ಒಳಗೊಂಡಂತೆ.

2. ಯಂತ್ರಗಳು, ಉಪಕರಣಗಳು ಹಾಗೂ ಸಂಬಂಧಿತ ಬಿಡಿ ಭಾಗಗಳು

ಆದರೆ ಈ ವಿನಾಯಿತಿಗಳನ್ನು ಕೆಲವು ನಿರ್ಬಂಧನೆಗೆ ಒಳಪಟ್ಟಂತೆ ನೀಡಿರುವುದನ್ನು ಸಮಿತಿಯು ಗಮನಿಸಿದೆ. ಸ್ಥೂಲ ವಿವರಗಳು ಕೆಳಕಂಡಂತಿದೆ:

1. ಕ್ರಿಯಾ ಒಪ್ಪಂದದಲ್ಲಿ ನಮೂದಿಸಲಾದ ಯೋಜನಾ ಅನುಷ್ಠಾನದ ಕಾಲಮಿತಿಯ ನಿರ್ಬಂಧನೆಗೆ ಒಳಪಟ್ಟಿರುತ್ತದೆ.

2. ಯಂತ್ರೋಪಕರಣಗಳು ಹಾಗೂ ಸಾಮಗ್ರಿಗಳಿಗೆ ಸಂಬಂಧಿಸಿದಂತೆ ಪ್ರತಿ ಕ್ಲೇಮು ಕನಿಷ್ಠ 25 ಲಕ್ಷ ರೂ.ಗಳ ಮಿತಿಗೆ ಒಳಪಟ್ಟಿರಬೇಕು ಹಾಗೂ ನಿರ್ಮಾಣ ಸಾಮಗ್ರಿಗಳಿಗೆ ಈ ಮಿತಿಯು 1 ಲಕ್ಷ ರೂ.ಗಳಾಗಿರುತ್ತದೆ.

3. ಬಳಸಲಾದ ಸಾಮಗ್ರಿಗಳ ಅವಶ್ಯಕತೆಯನ್ನು ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಅಭಿಯಂತರರು ದೃಢೀಕರಿಸಬೇಕು.

4. ಈ ವಿನಾಯಿತಿಯು ಕ್ರಿಯಾ ಒಪ್ಪಂದದ ಅನುಚ್ಛೇಧ 12.1.1 ರಲ್ಲಿ ಪ್ರತಿಪಾದಿಸಲಾಗಿರುವ ಕಾಮಗಾರಿಗಳಿಗೆ ಸೀಮಿತವಾಗಿರುತ್ತದೆ.

5. ಈ ಸೌಲಭ್ಯವು ನೈಸೆಲ್ ಮತ್ತು ಅದರ ಸಹ ಸಂಸ್ಥೆಗಳಿಗೆ ಅನ್ವಯಿಸುತ್ತದೆ. ಈ ಪ್ರಕರಣಗಳಲ್ಲಿ ವಾಣಿಜ್ಯ ತೆರಿಗೆ ಇಲಾಖೆ ಜಾರಿಗೊಳಿಸುವ ಕರ ನಿರ್ಧರಣೆ ಆಧಾರವಾಗಿರುತ್ತದೆ.

6. ಡೀಸೆಲ್ ಅನ್ನು ಈ ವಿನಾಯಿತಿಯಿಂದ ಹೊರತುಪಡಿಸಲಾಗಿದೆ.

ಪ್ರಸ್ತಾವಿತ ಅಧಿಸೂಚನೆಗೆ ಪ್ರತಿಕ್ರಿಯಿಸಿರುವ ನೈಸೆಲ್ ಸಂಸ್ಥೆ 09.01.2012 ರಂದು ಪ್ರವೇಶ ತೆರಿಗೆ, ಮಾರಾಟ ತೆರಿಗೆ ಹಾಗೂ ವ್ಯಾಟ್‌ಗೆ ಅನ್ವಯಿಸುವಂತೆ ತಿದ್ದುಪಡಿ ಹಾಗೂ ಸೇರ್ಪಡೆಗಳನ್ನು ಕೋರಿರುವುದು ಸಮಿತಿಗೆ ದಾಖಲಾತಿಗಳಿಂದ ಸ್ಪಷ್ಟವಾಗಿದೆ. ಪ್ರಥಮ ಸ್ತರದಲ್ಲಿ ಈ ಆದೇಶ ಕ್ರಿಯಾ ಒಪ್ಪಂದದ ಅನುಸಾರವಾಗಿಲ್ಲ ಎಂಬುದು ಖಾಸಗಿ ಪಾಲುದಾರರ ಪ್ರತಿಪಾದನೆಯಾಗಿರುತ್ತದೆ. ನಿರ್ದಿಷ್ಟ ಅಂಶಗಳ ಸ್ಥೂಲ ವಿವರಗಳು ಈ ಕೆಳಕಂಡಂತಿದೆ:

1. ಡೀಸೆಲ್‌ಗೆ ಪ್ರವೇಶ ತೆರಿಗೆ ವಿನಾಯಿತಿ

2. ಕರ್ನಾಟಕ ವಾಣಿಜ್ಯ ತೆರಿಗೆ ಅಧಿನಿಯಮ, ವ್ಯಾಟ್ ಅಧಿನಿಯಮ ಹಾಗೂ ಪ್ರವೇಶ ತೆರಿಗೆ ಅಧಿನಿಯಮಗಳ ಅಡಿ ಯೋಜನಾ ಅನುಷ್ಠಾನಕ್ಕೆ ಖರೀದಿಸಲಾದ ಎಲ್ಲಾ ಸಾಮಗ್ರಿಗಳಿಗೆ ವಿನಾಯಿತಿ.

3. ಉಪ ಗುತ್ತಿಗೆದಾರರು ಹಾಗೂ ನೀಸೆಲ್ ಸಂಸ್ಥೆ ವಿಧಿಸಿ ಸಂಗ್ರಹಿಸಿರುವ ತೆರಿಗೆಗಳ ಮರುಪಾವತಿ.

4. ನೋಂದೀಕೃತವಲ್ಲದ ವಹಿವಾಟುದಾರರಿಂದ ಮಾಡಿದ ಖರೀದಿಗಳಿಗೆ ಸಂಪೂರ್ಣ ವಿನಾಯಿತಿ.

ಈ ಕೋರಿಕೆಗೆ ಪ್ರತಿಕ್ರಿಯಿಸಿರುವ ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ಇವರು ದಿನಾಂಕ 22.06.2012ರ ಉಲ್ಲೇಖದ ಮುಖಾಂತರ ಈ ಕೆಳಗೆ ನಮೂದಿಸಿದ ಅಂಶಗಳನ್ನೊಳಗೊಂಡ ಸ್ಪಷ್ಟೀಕರಣವನ್ನು ನೀಡಿರುವುದನ್ನು ಸಮಿತಿಯು ಗಮನಿಸಿದೆ:

1. ಯಾವುದೇ ಮೂಲಭೂತ ಸೌಕರ್ಯ ಅಭಿವೃದ್ಧಿ ಯೋಜನೆಗೆ ರಾಜ್ಯ ಸರ್ಕಾರವು ಡೀಸೆಲ್‌ಗೆ ಅನ್ವಯಿಸುವಂತೆ ವಿನಾಯಿತಿಯನ್ನು ನೀಡಿರುವುದಿಲ್ಲ. ಡೀಸೆಲ್ ಅನ್ನು ಸಾರ್ವತ್ರಿಕವಾಗಿ ಹಲವಾರು ಅನುಷ್ಠಾನಗಳಲ್ಲಿ ಬಳಸಬಹುದಾಗಿರುವುದರಿಂದ ಇದನ್ನು ಯೋಜನೆಯ ಒಂದು ಪ್ರಮುಖ ಸಾಮಗ್ರಿ ಎಂದು ಪರಿಗಣಿಸಲಾಗುವುದಿಲ್ಲ.

2. ಅನುಚ್ಛೇಧ 12 ಅನ್ನು ಕೂಲಂಕುಷವಾಗಿ ವಿಶ್ಲೇಷಿಸಿದಾಗ ಈ ವಿನಾಯಿತಿಯ ಸೌಲಭ್ಯ ಯೋಜನಾ ಸಂಸ್ಥೆ ಹಾಗೂ ಸಹ ಸಂಸ್ಥೆಗಳಿಗೆ ಅನ್ವಯಿಸುವಂತೆ ಮಾಡಲಾಗುವ ಕರ ನಿರ್ಧರಣೆಗೆ ಈ ವಿನಾಯಿತಿ ಅನ್ವಯಿಸುತ್ತದೆ. ಆದುದರಿಂದ ನೈಸೆಲ್ ಹಾಗೂ ಸಹ ಸಂಸ್ಥೆಗಳು ನೇರವಾಗಿ ಸರ್ಕಾರಕ್ಕೆ ನೀಡಬೇಕಾಗಿರುವ ತೆರಿಗೆಗಳಿಗೆ ಈ ವಿನಾಯಿತಿ ಅನ್ವಯಿಸುತ್ತದೆ.

3. ನಿರ್ಮಾಣ ಸಾಮಗ್ರಿಗಳನ್ನು ಖರೀದಿಸುವ ನೋಂದಾಯಿತ ವಹಿವಾಟುದಾರರು ತೆರಿಗೆಗಳನ್ನು ಪಾವತಿಸಬೇಕಾಗುತ್ತದೆ. ಈ ತೆರಿಗೆಯ ಬಾಧ್ಯತೆ ಖರೀದಿಸುವವರ ನಿರ್ದಿಷ್ಟ ಕರ್ತವ್ಯವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಈ ವಹಿವಾಟುದಾರರಿಂದ ಅಥವಾ ಖರೀದಿಸಲಾದ ಸಾಮಗ್ರಿಗಳಿಗೆ ಅನ್ವಯಿಸುವಂತೆ ತೆರಿಗೆ ವಿನಾಯಿತಿಯನ್ನು ನೈಸೆಲ್ ಅಥವಾ ಇದರ ಸಂಸ್ಥೆಗಳಿಗೆ ವಿಸ್ತರಿಸಲು ಸಾಧ್ಯವಿರುವುದಿಲ್ಲ.

4. ಮಾನ್ಯ ಉಚ್ಛ ನ್ಯಾಯಾಲಯ ಹಾಗೂ ಸರ್ವೋಚ್ಛ ನ್ಯಾಯಾಲಯಗಳ ತೀರ್ಪುಗಳಲ್ಲಿ ಪ್ರಮುಖವಾಗಿ ಭೂ ನಿರ್ವಹಣೆ ಹಾಗೂ ಸಂಬಂಧಿತ ವಿಷಯಗಳಿಗೆ ಪ್ರತಿಪಾದಿಸಲಾಗಿದೆ. ಅನುಚ್ಛೇಧ 2 ಕ್ಕೆ ಸಂಬಂಧಿಸಿದಂತೆ ಯಾವುದೇ ನಿರ್ದೇಶನಗಳು ಇರುವುದಿಲ್ಲ.

ಮೇಲೆ ಪ್ರತಿಪಾದಿಸಿರುವ ಹಿನ್ನೆಲೆಯಲ್ಲಿ ದಿನಾಂಕ 07.12.2011 ರ ಆದೇಶವು ಸಕ್ರಮವಾಗಿದೆ ಎಂದು ಪ್ರತಿಪಾದಿಸಲಾಗಿದೆ. ಪ್ರಸ್ತಾವಿತ ಕರಡನ್ನು ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ ಇವರು ಅನುಮೋದಿಸಿರುವುದು ದಾಖಲಾತಿಗಳಿಂದ ಸಮಿತಿಗೆ ಸ್ಪಷ್ಟವಾಗಿದೆ.

ಖಾಸಗಿ ಪಾಲುದಾರರು ಸಲ್ಲಿಸಿರುವ ವಿವರಗಳ ಅನುಗುಣವಾಗಿ 2004-05 ರಿಂದ 2015-16ರ ಅವಧಿಗೆ ಮರುಪಾವತಿಯ ಪ್ರವರ್ಗವಾರು ಪ್ರಸ್ತಾವನೆಯ ವಿವರಗಳನ್ನು ಸಲ್ಲಿಸಿರುತ್ತಾರೆ. ಕ್ರೋಢೀಕೃತವಾಗಿ 30.58 ಕೋಟಿ ರೂ.ಗಳು ಮಾರಾಟ ತೆರಿಗೆ/ವ್ಯಾಟ್ (ಅಂತರ ರಾಜ್ಯ ಹಾಗೂ ಯು.ಆರ್.ಡಿ. ಒಳಗೊಂಡಂತೆ), ಉಪ ಗುತ್ತಿಗೆದಾರರು ಪಾವತಿಸಿರುವ ತೆರಿಗೆ ಹಾಗೂ ಡಾಂಬರಿನ ಪ್ರವೇಶ ತೆರಿಗೆಯನ್ನು ಒಳಗೊಂಡಿರುತ್ತದೆ. ಈ ತಃಖ್ತೆಗೆ ಪೂರಕವಾಗಿ ಪಾವತಿಯ ವಿವರಗಳನ್ನು ಪ್ರವೇಶ ತೆರಿಗೆಗೆ ಅನ್ವಯಿಸುವಂತೆ ಸಲ್ಲಿಸಲಾಗಿದೆ. ಸಮಿತಿಗೆ ಸಲ್ಲಿಸಲಾಗಿರುವ ದಾಖಲಾತಿಗಳ ಅನುಗುಣವಾಗಿ 2005-06ರ ಅಂತ್ಯದವರೆಗೆ ಪ್ರವೇಶ ತೆರಿಗೆ ಮರುಪಾವತಿಯಾಗಿದೆ ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. 2006-07 ರಿಂದ 2015-16ರ ಅವಧಿಗೆ ಅನ್ವಯಿಸುವಂತೆ 1.90 ಕೋಟಿ ರೂ.ಗಳ ಪ್ರವೇಶ ತೆರಿಗೆಯ ಮರುಪಾವತಿ ಬಾಕಿ ಇದೆ ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. ದಿನಾಂಕ 06.08.2014ರ ಉಲ್ಲೇಖದ ಮುಖಾಂತರ ಖಾಸಗಿ ಪಾಲುದಾರರು 05.02.2007 ರಿಂದ 2015ರ ಅಂತ್ಯಕ್ಕೆ ಬಾಕಿ ಇರುವ ಪ್ರವೇಶ ತೆರಿಗೆಯ ಮರುಪಾವತಿಯ ಬಗ್ಗೆ ನೆನಪೋಲೆಯನ್ನು ಸಲ್ಲಿಸಿರುವುದನ್ನು ಸಮಿತಿ ಗಮನಿಸಿದೆ. ಇದಲ್ಲದೆ, ದಿನಾಂಕ 08.06.2014 ರಂದು ಖಾಸಗಿ ಪಾಲುದಾರರು ಪ್ರವೇಶ ತೆರಿಗೆ ವಿನಾಯಿತಿ ಅಥವಾ ಮರುಪಾವತಿಯ ಸೌಲಭ್ಯವನ್ನು ಪಡೆಯಲು ಬಳಕೆಯ ಪ್ರಮಾಣ ಪತ್ರವನ್ನು ಒದಗಿಸುವಂತೆ ಯೋಜನಾ ಸಮನ್ವಯಕರು ಬಿ.ಎಂ.ಐ.ಸಿ.ಎ.ಪಿ.ಎ ಇವರಿಗೆ ಕೋರಿರುತ್ತಾರೆ. ಸ್ಥಳೀಯ ವ್ಯಾಟ್ ಕಛೇರಿ ಸಹಾಯಕ ಆಯುಕ್ತರು ಇವರು ದಿನಾಂಕ 09.09.2014 ರಂದು ನೈಸೆಲ್ ಸಂಸ್ಥೆಗೆ ನೀಡಿರುವ ಹಿಂಬರಹವನ್ನು ಗಮನಿಸಿದಾಗ ಪ್ರಸ್ತಾವಿತ ಮರುಪಾವತಿಯನ್ನು ಸಂಸ್ಕರಿಸುವಲ್ಲಿ ಖಾಸಗಿ ಪಾಲುದಾರರ ವೈಫಲ್ಯತೆ ಪ್ರಮುಖವಾಗಿರುವುದು ಸಮಿತಿಗೆ ಮನದಟ್ಟಾಗಿದೆ. ಏಕೆಂದರೆ, 07.12.2011 ರಲ್ಲಿ ನಿರೂಪಿಸಿರುವ ಪೂರ್ವಭಾವಿ ಅವಶ್ಯಕತೆಗಳಿಗೆ ಅನುಗುಣವಾಗಿ ಖಾಸಗಿ ಪಾಲುದಾರರು ದಾಖಲಾತಿಗಳನ್ನು ಇಲಾಖೆಗೆ ಸಲ್ಲಿಸಿರುವುದಿಲ್ಲ.

ಏತನ್ಮಧ್ಯೆ ಖಾಸಗಿ ಪಾಲುದಾರರು 2011-12, 2010-11 ಹಾಗೂ 2009-10ನೇ ಸಾಲಿನ ಪ್ರವೇಶ ತೆರಿಗೆ ಮರುಪಾವತಿಯ ಬಗ್ಗೆ ವಾಣಿಜ್ಯ ತೆರಿಗೆ ಇಲಾಖೆಗೆ ಮನವಿಗಳನ್ನು ಸಲ್ಲಿಸಿರುವುದನ್ನು ಸಮಿತಿ ಗಮನಿಸಿದೆ. ವಾಣಿಜ್ಯ ತೆರಿಗೆಗೆ ಅನ್ವಯಿಸುವಂತೆ ಉಪ ಆಯುಕ್ತರು, ವಾಣಿಜ್ಯ ತೆರಿಗೆ ಇಲಾಖೆ ಇವರು 9.83 ಲಕ್ಷ ರೂ.ಗಳ ಬಾಕಿ ಪಾವತಿಯ ಕುರಿತು (ವ್ಯಾಟ್ ತೆರಿಗೆ) ದಿನಾಂಕ 10.03.2011 ರಂದು ನೋಟೀಸನ್ನು ಜಾರಿಗೊಳಿಸಿರುತ್ತಾರೆ. ಮುಂದುವರಿದಂತೆ 2.43 ಲಕ್ಷ ರೂ.ಗಳ ಪ್ರವೇಶ ತೆರಿಗೆಯ ಬಾಕಿಗೆ ಅನ್ವಯಿಸುವಂತೆ ಖಾಸಗಿ ಪಾಲುದಾರರಿಗೆ ನೋಟೀಸನ್ನು ಜಾರಿಗೊಳಿಸಲಾಗಿದೆ. ಈ ನೋಟೀಸನ್ನು ಅವಲೋಕಿಸಿದಾಗ ಬಿಟುಮಿನ್ ಹಾಗೂ ಡೀಸೆಲ್ ಒಳಗೊಂಡಂತೆ ಪ್ರವೇಶ ತೆರಿಗೆಯನ್ನು ಪರಿಗಣಿಸಿರುವುದು ಸಮಿತಿಗೆ ಸ್ಪಷ್ಟವಾಗಿದೆ.

ಏತನ್ಮಧ್ಯೆ, ದಿನಾಂಕ 22.10.2010 ರಂದು ನೈಸೆಲ್ ಸಂಸ್ಥೆ ವಿನಾಯಿತಿಗೆ ಸಲ್ಲಿಸಿರುವ ಮನವಿಯನ್ನು ಆರ್ಥಿಕ ಇಲಾಖೆ ಅವಲೋಕಿಸಿ ಕ್ರಿಯಾ ಒಪ್ಪಂದದ ಹಿನ್ನೆಲೆಯಲ್ಲಿ ನೀಡಬಹುದಾದ ವಿನಾಯಿತಿಗಳ ಬಗ್ಗೆ ದಿನಾಂಕ 19.07.2011 ರಂದು ದೃಢೀಕರಿಸಿರುವುದನ್ನು ಸಮಿತಿ ಗಮನಿಸಿದೆ. ದಿನಾಂಕ 07.12.2011 ರ ಸರ್ಕಾರಿ ಆದೇಶದ ಮುಖಾಂತರ ಕ್ರಿಯಾ ಒಪ್ಪಂದದ ಅನುಚ್ಛೇಧ 12 ರ ಅಡಿಯಲ್ಲಿ ತೆರಿಗೆಗಳ ವಿನಾಯಿತಿ ಹಾಗೂ ಮರುಪಾವತಿಗಳ ಸೌಲಭ್ಯವನ್ನು ಖಾಸಗಿ ಪಾಲುದಾರರಿಗೆ ವಿಸ್ತರಿಸಲು ವಿಧಿ ವಿಧಾನಗಳನ್ನು ಪ್ರತಿಪಾದಿಸಲಾಗಿದೆ. 28.03.2013 ರ ಅಂತ್ಯಕ್ಕೆ ಖಾಸಗಿ ಪಾಲುದಾರರ ಉಲ್ಲೇಖದ ಅನುಗುಣವಾಗಿ ವ್ಯಾಟ್ ಮತ್ತು ಮಾರಾಟ ತೆರಿಗೆ ಒಳಗೊಂಡಂತೆ 29.95 ಕೋಟಿ ರೂ.ಗಳ ಮರುಪಾವತಿಯ ಪ್ರಸ್ತಾವನೆಯನ್ನು ಖಾಸಗಿ ಪಾಲುದಾರರು ವಾಣಿಜ್ಯ ತೆರಿಗೆ ಇಲಾಖೆಗೆ ಸಲ್ಲಿಸಿರುತ್ತಾರೆ. ಮಾರಾಟ ತೆರಿಗೆ ಮತ್ತು ವ್ಯಾಟ್‌ಗೆ ಸಂಬಂಧಿಸಿದಂತೆ 2004-05 ರಿಂದ 2012-13 ರ ಅವಧಿಯಲ್ಲಿ ಖಾಸಗಿ ಪಾಲುದಾರರು 391.40 ಕೋಟಿ ರೂ.ಗಳನ್ನು ಪಾವತಿಸಿರುವ ಬಗ್ಗೆ

ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ. ಮಾರ್ಚ್ 2013 ರಿಂದ ಜೂನ್ 2014 ರ ಅವಧಿಯಲ್ಲಿ ಹಲವಾರು ಬಾಕಿ ಕ್ಲೇಮುಗಳ ಮರುಪಾವತಿಗೆ ನೆನಪೋಲೆಗಳನ್ನು ಖಾಸಗಿ ಪಾಲುದಾರರು ಬರೆದಿರುವುದನ್ನು ಸಮಿತಿ ಗಮನಿಸಿದೆ. ಅಂತಿಮವಾಗಿ 17.07.2014 ರಂದು ಸಮಗ್ರ ವಿವರಗಳನ್ನೊಳಗೊಂಡ ತಃಖ್ತೆಯನ್ನು ಖಾಸಗಿ ಪಾಲುದಾರರು ಮರುಪಾವತಿಗಾಗಿ ಸಲ್ಲಿಸಿರುವುದನ್ನು ಸಮಿತಿ ಗಮನಿಸಿದೆ. ಈ ಉಲ್ಲೇಖದೊಡನೆ ಸಲ್ಲಿಸಲಾದ ಅಂತಿ ಅಂಶಗಳ ಅನುಗುಣವಾಗಿ 2004-05 ರಿಂದ 2013-14ರ ಅವಧಿಯಲ್ಲಿ ಮಾರಾಟ ತೆರಿಗೆ, ಪ್ರವೇಶ ತೆರಿಗೆ, ವ್ಯಾಟ್, ನೋಂದಣಿಯಾಗದ ವಹಿವಾಟುದಾರರ ತೆರಿಗೆಯ ಬಾಧ್ಯತೆ, ಕಾಮಗಾರಿ ಗುತ್ತಿಗೆ ತೆರಿಗೆ, ಇತ್ಯಾದಿಗಳನ್ನು ಒಳಗೊಂಡಂತೆ 43.79 ಕೋಟಿ ರೂ.ಗಳನ್ನು ಪಾವತಿಸಿರುವುದು ದಾಖಲಾತಿಗಳಿಂದ ಸಮಿತಿಗೆ ಸ್ಪಷ್ಟವಾಗಿದೆ. ಈ ಪೈಕಿ 13.55 ಕೋಟಿ ರೂ.ಗಳು ಉಪ ಗುತ್ತಿಗೆಗೆ ಅನ್ವಯಿಸುತ್ತದೆ. 2.93 ಕೋಟಿ ರೂ.ಗಳು ಡೀಸೆಲ್ ಪ್ರವೇಶ ತೆರಿಗೆಗೆ ಅನ್ವಯಿಸುತ್ತದೆ. 9.09 ಕೋಟಿ ರೂ.ಗಳು ಡೀಸೆಲ್ ಮಾರಾಟ ತೆರಿಗೆಗೆ ಅನ್ವಯಿಸುತ್ತದೆ. ಆರ್ಥಿಕ ಇಲಾಖೆಯ ನಿರ್ದೇಶನ ಹಾಗೂ ಆದೇಶಗಳ ಅನುಗುಣವಾಗಿ ಈ ಮೂರೂ ಶೀರ್ಷಿಕೆಗಳಡಿಯಲ್ಲಿ ಮರುಪಾವತಿಗೆ ಖಾಸಗಿ ಪಾಲುದಾರರು ಅರ್ಹರಿರುವುದಿಲ್ಲ. ಖಾಸಗಿ ಪಾಲುದಾರರು ರಿಟ್ ಅರ್ಜಿ ಸಂಖ್ಯೆ.268/15 ಹಾಗೂ 294-436/15 ಈ ಪ್ರಕರಣಗಳಲ್ಲಿ 2005-06 ಹಾಗೂ 2006-07ನೇ ಸಾಲಿನ ಮರುಕರ ನಿರ್ಧರಣೆಯನ್ನು ಖಾಸಗಿ ಪಾಲುದಾರರು ನ್ಯಾಯಾಲಯದಲ್ಲಿ ಪ್ರಶ್ನಿಸಿರುತ್ತಾರೆ. 2006-07ನೇ ಸಾಲಿಗೆ ಸಂಬಂಧಿಸಿದಂತೆ ರಿಟ್ ಅರ್ಜಿ ಸಂಖ್ಯೆ.49399/14 ಹಾಗೂ 52259/401/14 ದಾಖಲಿಸಿರುವುದನ್ನು ಸಮಿತಿಯು ಗಮನಿಸಿದೆ. ಕರ್ನಾಟಕದ ಉಚ್ಛ ನ್ಯಾಯಾಲಯವು ಕರ ನಿರ್ಧರಣೆಯಲ್ಲಿ ಇತ್ಯರ್ಥಗೊಳಿಸಲಾದ ಮೊತ್ತದ ವಸೂಲಾತಿಯನ್ನು ಸ್ಥಗಿತಗೊಳಿಸುವ ನಿರ್ಬಂಧನೆಗೆ ಒಳಪಟ್ಟಂತೆ ಈ ದಾವೆಯನ್ನು 05.08.2015 ರಂದು 4 ವಾರಗಳಿಗೆ ಮುಂದೂಡಿರುತ್ತಾರೆ.

*ಸಮಿತಿಗೆ ಸಲ್ಲಿಸಲಾದ ದಾಖಲಾತಿಗಳ ಅನುಗುಣವಾಗಿ ನೀಸೆಲ್ ಪರವಾಗಿ ಕಾಮಗಾರಿ ನಿರ್ವಹಿಸಿದ ಉಪ ಗುತ್ತಿಗೆದಾರರು ಜಿ.ಪಿ.ಆರ್. ಇನ್‌ಫ್ರಾ ಪ್ರಾಜೆಕ್ಟ್ಸ್ ಹಾಗೂ ಸಾಧನಾ ಎಂಟರ್‌ಪ್ರೈಸಸ್ ಸಂಸ್ಥೆಗಳಿಂದ ಕ್ರೋಢೀಕೃತವಾಗಿ 4.82 ಕೋಟಿ ರೂ.ಗಳು ಬಾಕಿ ಇದ್ದು, ವ್ಯಾಟ್ ಅಧಿನಿಯಮದ ನಿಯಮ 45 ರ ಅಡಿಯಲ್ಲಿ ವಸೂಲಾತಿ ಕ್ರಮವನ್ನು ಜರುಗಿಸಲು ವಾಣಿಜ್ಯ ತೆರಿಗೆ ಉಪ ಆಯುಕ್ತರು ಕ್ರಮ ಜಾರಿಗೊಳಿಸಿರುತ್ತಾರೆ. ಈ ಬಾಕಿಗಳು 2013-14 ಹಾಗೂ 2012-13 ನೇ ಆರ್ಥಿಕ ಸಾಲುಗಳಿಗೆ ಅನ್ವಯಿಸುತ್ತದೆ.* ನೀಸೆಲ್ ಸಂಸ್ಥೆಯು ರಿಟ್ ಅರ್ಜಿ ಸಂಖ್ಯೆ.268/2015 ರಲ್ಲಿ ಉಚ್ಛ ನ್ಯಾಯಾಲಯವು ನೀಡಿರುವ ಮಧ್ಯಂತರ ಆದೇಶದ ಹಿನ್ನೆಲೆಯಲ್ಲಿ ವಸೂಲಾತಿ ಪ್ರಕ್ರಿಯೆಯನ್ನು ಸ್ಥಗಿತಗೊಳಿಸುವಂತೆ ದಿನಾಂಕ 05.09.2015 ರಂದು ಕೋರಿರುವುದನ್ನು ಸಮಿತಿ ಗಮನಿಸಿದೆ.

*ಮೇಲೆ ಪ್ರತಿಪಾದಿಸಿರು ಬೆಳವಣಿಗೆಗಳ ಹಿನ್ನೆಲೆಯಲ್ಲಿ ಸಮಿತಿಯು ಈ ಕೆಳಕಂಡಂತೆ ಶಿಫಾರಸ್ಸುಗಳನ್ನು ಮಾಡುತ್ತದೆ:*

1. *ತ್ರಿಯಾ ಒಪ್ಪಂದದ ಅನುಚ್ಛೇಧ 12 ರ ಅನುಗುಣವಾಗಿ ಡೀಸೆಲ್ ಪ್ರವೇಶ ತೆರಿಗೆಗೆ ವಿನಾಯಿತಿ ನೀಡುವುದು ಅಸಮರ್ಪಕ ಎಂಬ ಅಭಿಪ್ರಾಯವನ್ನು ಆರ್ಥಿಕ ಇಲಾಖೆ ವ್ಯಕ್ತಪಡಿಸಿದೆ. ಆದುದರಿಂದ ಪ್ರವೇಶ ತೆರಿಗೆ ವಿನಾಯಿತಿ ಅಥವಾ ಮರುಪಾವತಿಯನ್ನು ಪರಿಗಣಿಸುವುದು ಸೂಕ್ತವಲ್ಲವೆಂದು ಸಮಿತಿ ತೀರ್ಮಾನಿಸುತ್ತದೆ. ಈ ಹಿನ್ನೆಲೆಯಲ್ಲಿ ಮರುಪಾವತಿಯ ಪ್ರಸ್ತಾವನೆಯನ್ನು ಸೂಕ್ತವಾಗಿ ಪರಿಷ್ಕರಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.*

2. *ತ್ರಿಯಾ ಒಪ್ಪಂದದ ಅನುಚ್ಛೇಧ 12 ರ ಅನುಗುಣವಾಗಿ ಯೋಜನಾ ಅನುಷ್ಠಾನ ಮಾಡುತ್ತಿರುವ ಸಂಸ್ಥೆ ಹಾಗೂ ಅದರ ಸಹ ಸಂಸ್ಥೆಗಳು ರಾಜ್ಯ ಹಾಗೂ ಸ್ಥಳೀಯ ತೆರಿಗೆಗಳ ನಿರ್ಧಾರಣೆಯಿಂದ*

ವಿನಾಯಿತಿ ಪಡೆಯಬಹುದಾಗಿದೆ. ಅಂದರೆ, ನೈಸೆಲ್/ನೀಸೆಲ್ ಹಾಗೂ ಎನ್.ಇ.ಎಲ್. ಸಂಸ್ಥೆಗಳು ನೇರವಾಗಿ ಸರ್ಕಾರಕ್ಕೆ ನೀಡಬೇಕಾಗಿರುವ ತೆರಿಗೆಗಳಿಗೆ ಈ ವಿನಾಯಿತಿ ಅನ್ವಯಿಸುತ್ತದೆ. ಈ ನಿರ್ದಿಷ್ಟ ಪ್ರತಿಪಾದನೆಯನ್ನು ಅವಲೋಕಿಸಿದಾಗ ಈ ಸೌಲಭ್ಯವನ್ನು ಈ ಸಂಸ್ಥೆಗಳ ಉಪ ಗುತ್ತಿಗೆದಾರರು, ಗುತ್ತಿಗೆದಾರರು ಹಾಗೂ ನೋಂದೀಕೃತ ವಹಿವಾಟುದಾರರು ರಿಯಾಯಿತಿ ಪಡೆಯಲು ಕ್ರಿಯಾ ಒಪ್ಪಂದದಲ್ಲಿ ಅವಕಾಶವನ್ನು ಕಲ್ಪಿಸಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಈ ಶೀರ್ಷಿಕೆಯಡಿಯಲ್ಲಿ ಈಗಾಗಲೇ ಪ್ರತಿಪಾದಿಸಿರುವಂತೆ ಸಲ್ಲಿಸಿರುವ ಕ್ಲೇಮುಗಳನ್ನು ಕಡಿತಗೊಳಿಸಲು ಆರ್ಥಿಕ ಇಲಾಖೆ ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

3. ಯೋಜನಾ ಸಮನ್ವಯಕರು, ಲೋಕೋಪಯೋಗಿ ಇಲಾಖೆ (ಬಿ.ಎಂ.ಐ.ಸಿ.) ಇವರು ದಿನಾಂಕ 11.10.2002 ರ ಪ್ರಮಾಣಪತ್ರದ ಮುಖಾಂತರ ಬಿ.ಎಂ.ಐ.ಸಿ. ಯೋಜನೆಯನ್ನು ಮೂಲಭೂತ ಸೌಕರ್ಯ ಯೋಜನೆ ಎಂದು ದೃಢೀಕರಿಸಿರುವುದನ್ನು ಸಮಿತಿಯು ಗಮನಿಸಿದೆ. ಇದರ ಅನುಗುಣವಾಗಿ ದಿನಾಂಕ 26.12.1997 ರ ಸರ್ಕಾರದ ನೀತಿ ನಿರ್ಧಾರದ ಪ್ರತಿಪಾದನೆಗಳನ್ನೊಳಗೊಂಡ ಆದೇಶ ಈ ಮೂಲಭೂತ ಸೌಕರ್ಯ ಯೋಜನೆಗೆ ಅನ್ವಯವಾಗುತ್ತದೆ ಎಂದು ಅರ್ಥೈಸಬಹುದಾಗಿದೆ. ಈ ಆದೇಶದಡಿಯಲ್ಲಿ ಸರ್ಕಾರಿ ನೀತಿ ನಿರ್ಧಾರದನುಗುಣವಾಗಿ ಘೋಷಿಸಿರುವ ರಿಯಾಯಿತಿ ಹಾಗೂ ವಿನಾಯಿತಿಗಳು ಬಹುತೇಕವಾಗಿ ಬಿ.ಎಂ.ಐ.ಸಿ. ಯೋಜನೆಗೆ ನೀಡಿರುವ ಸೌಲಭ್ಯಗಳಿಗೆ ಅನುಗುಣವಾಗಿರುವುದನ್ನು ಸಮಿತಿ ಗಮನಿಸಿದೆ. ಈ ಹಿನ್ನೆಲೆಯಲ್ಲಿ ಕ್ರಿಯಾ ಒಪ್ಪಂದದ ನಿರೂಪಣೆಗಳಿಗೆ ಅನುಗುಣವಾಗಿ ನೈಸೆಲ್ ಮತ್ತು ಅದರ ಸಹ ಸಂಸ್ಥೆಗಳು ಸರ್ಕಾರಕ್ಕೆ ಪಾವತಿಸಬೇಕಾದ ನಿವ್ವಳ ವ್ಯಾಟ್ ಮೊತ್ತಕ್ಕೆ ವಿನಾಯಿತಿಯನ್ನು ಅಥವಾ ಮರುಪಾವತಿಯ ಸೌಲಭ್ಯವನ್ನು ಸೀಮಿತಗೊಳಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

4. ಕ್ರಿಯಾ ಒಪ್ಪಂದದ ಅನುಚ್ಛೇಧ 12.1.1 ರ ಅನುಗುಣವಾಗಿ ರಾಜ್ಯ ಹಾಗೂ ಸ್ಥಳೀಯ ತೆರಿಗೆಗಳಿಂದ ಟೋಲ್ ರಸ್ತೆ, ಟೋಲ್ ರಸ್ತೆಯ ಭಾಗ, ನಗರ ಸಮುಚ್ಛಯಗಳ ರಸ್ತೆ, ಸಾರ್ವಜನಿಕ ಬಳಕೆಯ ಪ್ರದೇಶ, ಸಾಮಾನ್ಯ ಸೌಲಭ್ಯಗಳು (ನಗರ ಸಮುಚ್ಛಯಗಳಲ್ಲಿ) ಈ ಘಟಕಗಳಿಗೆ ವಿನಾಯಿತಿ ಅಥವಾ ಮರುಪಾವತಿ ಸೌಲಭ್ಯವನ್ನು ನೀಡಬಹುದಾಗಿದೆ. ಈ ಹಿನ್ನೆಲೆಯಲ್ಲಿ ಕ್ರಿಯಾ ಒಪ್ಪಂದದ ಅನುಚ್ಛೇಧ 12 ರ ಅಡಿಯಲ್ಲಿ ಪ್ರತಿಪಾದಿಸಿರುವ ಯೋಜನಾ ಅನುಷ್ಠಾನದ ಘಟಕಗಳಿಗೆ ಸೀಮಿತವಾದಂತೆ ಕಟ್ಟುನಿಟ್ಟಾಗಿ ವಿನಾಯಿತಿ ಹಾಗೂ ಮರುಪಾವತಿಯನ್ನು ಪರಿಗಣಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

5. ಪ್ರವೇಶ ತೆರಿಗೆ, ಮಾರಾಟ ತೆರಿಗೆ, ವ್ಯಾಟ್ ಇತ್ಯಾದಿಗಳ ಮರುಪಾವತಿಗೆ ಸಂಬಂಧಿಸಿದಂತೆ ಸುಮಾರು 9 ವರ್ಷಗಳಿಂದ ಕ್ರಿಯಾ ಒಪ್ಪಂದದ ಅನುಚ್ಛೇಧ 12 ರಡಿಯಲ್ಲಿ ಕ್ರಮ ಜಾರಿಗೊಳಿಸುವಲ್ಲಿ ವಿಳಂಬವಾಗಿರುವುದನ್ನು ಸಮಿತಿಯು ಗಮನಿಸಿದೆ. ಸಮಿತಿಗೆ ಸಲ್ಲಿಸಲಾದ ದಾಖಲಾತಿಗಳಿಂದ ಲೋಕೋಪಯೋಗಿ ಇಲಾಖೆಯಿಂದ ದೃಢೀಕರಣದ ಇತ್ಯರ್ಥ, ವೆಚ್ಚದ ದೃಢೀಕರಣದ ಇತ್ಯರ್ಥ ಹಾಗೂ ಖಾಸಗಿ ಪಾಲುದಾರರಿಂದ ಅವಶ್ಯಕ ವಿವರಗಳು ಅಂದರೆ ಕರ ನಿರ್ಧರಣಾ ಆದೇಶಗಳು, ಪಾವತಿಯ ವಿವರಗಳು, ನೋಂದಣಿಯಾಗದ ಖರೀದಿದಾರರ ಮೂಲಕ ವಹಿವಾಟುಗಳು, ವರ್ಷಾವಾರು ಪ್ರವೇಶ ತೆರಿಗೆ ವಿವರಗಳು, ನಿರ್ಮಾಣ ಸಾಮಗ್ರಿಗಳ ಖರೀದಿಗೆ ಸಂಬಂಧಿಸಿದಂತೆ ಸಾಮಗ್ರಿವಾರು, ವರ್ಷಾವಾರು ವಿವರಗಳು ಇತ್ಯಾದಿಗಳನ್ನು ಲೋಕೋಪಯೋಗಿ ಇಲಾಖೆಗೆ ಅಥವಾ ಆಯುಕ್ತರು, ವಾಣಿಜ್ಯ ತೆರಿಗೆ ಇಲಾಖೆ ಇವರಿಗೆ ಸಲ್ಲಿಸುವಲ್ಲಿ ಆಗಿರುವ ವಿಳಂಬದಿಂದಾಗಿಯೂ ಮರುಪಾವತಿ ಅನಿಯತವಾಗಿ ಹಾಗೂ ಅನಿವಾರ್ಯವಾಗಿ ವಿಳಂಬವಾಗಿರುವುದನ್ನು ಸಮಿತಿಯು

ಗಮನಿಸಿದೆ. 2011 ರ ಸರ್ಕಾರಿ ಆದೇಶದಲ್ಲಿ ವರ್ಷದ ಮೊದಲನೇ ಅರ್ಧದ ಮರುಪಾವತಿಯ ಪ್ರಸ್ತಾವನೆಯನ್ನು ಜುಲೈ ತಿಂಗಳಲ್ಲಿ ಹಾಗೂ ಎರಡನೇ ಅರ್ಧದ ಮರುಪಾವತಿಯ ಪ್ರಸ್ತಾವನೆಯನ್ನು ಮುಂಬರುವ ವರ್ಷದ ಮೊದಲ ತಿಂಗಳಲ್ಲಿ ಸಲ್ಲಿಸುವ ಬಗ್ಗೆ ಪ್ರತಿಪಾದಿಸಲಾಗಿದೆ. ಈ ಕ್ಲೇಮುಗಳನ್ನು ಲೋಕೋಪಯೋಗಿ ಇಲಾಖೆ ಒಂದು ತಿಂಗಳ ಅವಧಿಯೊಳಗಾಗಿ ಪರಿಶೀಲಿಸಿ ಇತ್ಯರ್ಥಗೊಳಿಸುವ ಬಗ್ಗೆ ಉಲ್ಲೇಖಿಸಲಾಗಿದೆ. ಖಾಸಗಿ ಪಾಲುದಾರರು, ಉಪ ಗುತ್ತಿಗೆದಾರರು ಹಾಗೂ ಡೀಸೆಲ್ ರಿಯಾಯಿತಿ ಇತ್ಯಾದಿಗಳ ಬಗ್ಗೆ ಸೃಷ್ಟಿಸಿರುವ ಸಂದಿಗ್ಧತೆಯಿಂದಾಗಿ ಮರುಪಾವತಿ ವಿಳಂಬವಾಗಿದೆ ಎಂದು ಸಮಿತಿ ತೀರ್ಮಾನಿಸುತ್ತದೆ.

6. ಸಮಿತಿಯ ಶಿಫಾರಸ್ಸುಗಳು ಕರ್ನಾಟಕದ ಉಚ್ಛ ನ್ಯಾಯಾಲಯದಲ್ಲಿ ಬಾಕಿ ಇರುವ ಮೇಲ್ಮನವಿ ಸಂಖ್ಯೆ.268/15 ಮತ್ತು 294-436/15 ನಿರ್ಬಂಧನೆಗೆ ಒಳಪಟ್ಟಿರುತ್ತದೆ. ಉಚ್ಛ ನ್ಯಾಯಾಲಯವು 4 ವಾರಗಳ ಕಾಲಾವಕಾಶವನ್ನು ನೀಡಿರುವುದನ್ನು ಸಮಿತಿಯು ಗಮನಿಸಿದೆ. ಆರ್ಥಿಕ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿರುವ ವಾಣಿಜ್ಯ ತೆರಿಗೆ ಇಲಾಖೆ ಹಾಗೂ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿರುವ ಬಿ.ಎಂ.ಐ.ಸಿ.ಪಿ. ನಿರೂಪಿತ ಅವಧಿಯೊಳಗೆ ಸಮಗ್ರ ವಿವರಗಳನ್ನು ಕ್ರಿಯಾ ಒಪ್ಪಂದ ಹಾಗೂ ಚಾಲ್ತಿಯಲ್ಲಿರುವ ಆದೇಶಗಳ ಹಿನ್ನೆಲೆಯಲ್ಲಿ ನ್ಯಾಯಾಲಯಕ್ಕೆ ತಪ್ಪದೇ ಸಲ್ಲಿಸಬೇಕೆಂದು ಸಮಿತಿಯು ಆಗ್ರಹಿಸುತ್ತದೆ. ಏಕೆಂದರೆ, ಕರ ನಿರ್ಧರಣೆಯ ಇತ್ಯರ್ಥದಲ್ಲಿ ವಿಳಂಬವಾದಲ್ಲಿ ಸರ್ಕಾರದ ಬೊಕ್ಕಸಕ್ಕೆ ತಪ್ಪಿಸಬಹುದಾದಂತಹ ಬಡ್ಡಿಯ ಹಾಗೂ ದಂಡದ ನಷ್ಟವಾಗುವ ಸಾಧ್ಯತೆಯಿದೆ. ನಿರ್ದಿಷ್ಟವಾಗಿ ಕ್ರಿಯಾ ಒಪ್ಪಂದದ ಹಿನ್ನೆಲೆಯಲ್ಲಿ ಲಭ್ಯವಿರುವ ವಿನಾಯಿತಿ, ರಿಯಾಯಿತಿ ಅಥವಾ ಮರುಪಾವತಿಯ ಸೌಲಭ್ಯಗಳ ಬಗ್ಗೆ ನ್ಯಾಯಾಲಯಕ್ಕೆ ಸ್ಪಷ್ಟೀಕರಣವನ್ನು ಸಮಗ್ರವಾಗಿ ಹಾಗೂ ನಿಖರವಾಗಿ ಸಲ್ಲಿಸಲು ಆರ್ಥಿಕ ಇಲಾಖೆಯು ಈ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಈ ವರದಿಯನ್ನು ಸಲ್ಲಿಸಿದ ಮೂರು ತಿಂಗಳೊಳಗಾಗಿ ಕರ ನಿರ್ಧರಣೆ ಹಾಗೂ ಮರು ನಿರ್ಧರಣೆಗಳ ಆಧಾರದ ಮೇಲೆ ಇತ್ಯರ್ಥಗೊಳಿಸಲಾದ ತೆರಿಗೆ ಮೊತ್ತವನ್ನು ತಾರ್ಕಿಕ ಅಂತ್ಯಕ್ಕೆ ತಲುಪಿಸಿ, ವಿನಾಯಿತಿ ಅಥವಾ ಮರುಪಾವತಿಯನ್ನು ಜಾರಿಗೊಳಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

## XXV. ಬಿ.ಎಂ.ಐ.ಸಿ. ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ನಡೆಸಿರುವ ಗಣಿಗಾರಿಕೆ ಹಾಗೂ ಇದರಿಂದಾಗಿ ಖಾಸಗಿ ಪಾಲುದಾರರಿಗೆ ಆಗಿರುವ ಅನುದ್ದೇಶಿತ ಲಾಭಗಳು

ದಿನಾಂಕ 20.08.2003 ರ ಕರ್ನಾಟಕ ರಾಜ್ಯ ಪತ್ರದ ವಿಶೇಷ ಪತ್ರಿಕೆಯ ಅನುಗುಣವಾಗಿ ನೈಸೆಲ್ ಸಂಸ್ಥೆಗೆ ಕೆ.ಐ.ಎ.ಡಿ.ಬಿ. ಮುಖಾಂತರ ಬೆಂಗಳೂರು ದಕ್ಷಿಣ ತಾಲ್ಲೂಕಿನ ಉತ್ತರಹಳ್ಳಿ ಹೋಬಳಿಯ ಗೊಲ್ಲಹಳ್ಳಿ ವ್ಯಾಪ್ತಿಯಲ್ಲಿ 120 ಎಕರೆ 30 ಗುಂಟೆ ಸರ್ಕಾರಿ ಜಮೀನನ್ನು ಗುತ್ತಿಗೆ ಹಾಗೂ ಮಾರಾಟದ ಆಧಾರದ ಮೇಲೆ ನೀಡಲಾಗಿದೆ. ಈ ನಿರ್ಧಾರವನ್ನು 03.04.1997 ರಂದು ಜಾರಿಗೊಳಿಸಲಾದ ಕ್ರಿಯಾ ಒಪ್ಪಂದ, 13.02.2001 ರಂದು ನಡೆಸಲಾದ ಅಧಿಕಾರದತ್ತ ಸಮಿತಿಯ 5ನೇ ಸಭೆಯ ತೀರ್ಮಾನಗಳ ಅನುಗುಣವಾಗಿ ಜಾರಿಗೊಳಿಸಲಾಗಿದೆ. ಸರ್ಕಾರಿ ಆದೇಶ ಸಂಖ್ಯೆ ಪಿ.ಡಬ್ಲ್ಯೂ.ಡಿ./155/95/ಸರ್ಕಾರಿ ಜಮೀನು/2001 ದಿನಾಂಕ 18.06.2001ರ ಅನುಗುಣವಾಗಿ 1999-2000 ದ ವರ್ಷಕ್ಕೆ ಅನ್ವಯವಾಗುವ ಮಾರ್ಗಸೂಚಿ ದರಗಳ ಅನುಗುಣವಾಗಿ ಖಾಸಗಿ ಪಾಲುದಾರರು ಫೈನಾನ್ಷಿಯಲ್ ಕ್ಲೋಷರ್ ಆದ 10 ವರ್ಷಗಳ ಒಳಗೆ ಖರೀದಿಸಬೇಕಾಗುವುದು. ದಿನಾಂಕ 20.08.2003 ರ ವಿಶೇಷ ರಾಜ್ಯ ಪತ್ರದ ಅಧಿಸೂಚನೆಯ ಅನುಗುಣವಾಗಿ 07.10.1999ರ ಸರ್ಕಾರಿ ಆದೇಶದ ಮುಖಾಂತರ ಹಸ್ತಾಂತರಿಸಲಾದ ಜಮೀನಿಗೆ ತಿದ್ದುಪಡಿಯನ್ನು ಜಾರಿಗೊಳಿಸಿದ್ದು, ಚಿಕ್ಕತೋಗೂರು ಗ್ರಾಮದ ವ್ಯಾಪ್ತಿಯ ಸರ್ವೆ ನಂ.12 ಹಾಗೂ 19 ರ ಸರ್ಕಾರಿ

ಜಮೀನನ್ನು ಆರ್ಥಿಕವಾಗಿ ದುರ್ಬಲವಾದ ಪ್ರವರ್ಗದವರಿಗೆ ಆಶ್ರಯ ಯೋಜನೆಯಡಿಯಲ್ಲಿ 1987-88 ರಲ್ಲಿ ನೀಡಿರುವ ಹಿನ್ನೆಲೆಯಲ್ಲಿ ಈ ಅಧಿಸೂಚನೆಯಿಂದ ಪ್ರಸ್ತಾವಿತ 49 ಎಕರೆ ಜಮೀನನ್ನು ಹಿಂಪಡೆಯಲಾಗಿದೆ. ಮುಂದುವರಿದಂತೆ 5ನೇ ಅಧಿಕಾರದತ್ತ ಸಮಿತಿಯ ಸಭೆಯಲ್ಲಿ ವಿಶೇಷ ಭೂಸ್ವಾಧೀನಾಧಿಕಾರಿ ಬಿ.ಎಂ.ಐ.ಸಿ.ಪಿ. ಅವರು ಬಿ.ಎಂ. ಕಾವಲ್ ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯ ಸರ್ವೆ ನಂ.52, 53, 65 ಹಾಗೂ 67 ಮತ್ತು 99 ಅರಣ್ಯ ಇಲಾಖೆಗೆ ಸೇರಿರುವುದರಿಂದ ಲೋಕೋಪಯೋಗಿ ಇಲಾಖೆಗೆ ಪರ್ಯಾಯವಾಗಿ ಜಮೀನನ್ನು ನೀಡುವಂತೆ ಕೋರಿರುವುದು ಸಮಿತಿಯ ಗಮನಕ್ಕೆ ಬಂದಿದೆ. ತತ್ಸಂಬಂಧವಾಗಿ 21.07.2003 ರಂದು ತಿದ್ದುಪಡಿ ಆದೇಶವನ್ನು ಜಾರಿಗೊಳಿಸಲಾಗಿದೆ. ಈ ಹಿನ್ನೆಲೆಯಲ್ಲಿ 07.10.1999 ರ ಆದೇಶವನ್ನು ಭಾಗಶಃ ಮಾರ್ಪಾಡು ಮಾಡಿ ಗೊಲ್ಲಹಳ್ಳಿ ಗ್ರಾಮ ವ್ಯಾಪ್ತಿಯ 120.30 ಎಕರೆ ಹಾಗೂ ಮಾದಾವರ ಗ್ರಾಮ ವ್ಯಾಪ್ತಿಯ 69.23 ಎಕರೆ ಅಂದರೆ ಕ್ರೋಢೀಕೃತವಾಗಿ 190.13 ಎಕರೆ ವಿಸ್ತೀರ್ಣದ ಜಮೀನನ್ನು ದಿನಾಂಕ 27.08.2003 ರ ಗೆಜೆಟ್ ನೋಟಿಫಿಕೇಷನ್ ಮೂಲಕ ನೈಸೆಲ್ ಸಂಸ್ಥೆಗೆ ಗುತ್ತಿಗೆ ಹಾಗೂ ಕ್ರಯದ ಆಧಾರದ ಮೇಲೆ ನೀಡಲಾಗಿರುವುದನ್ನು ಸಮಿತಿ ಗಮನಿಸಿದೆ. ಈ ಆದೇಶವನ್ನು 23.08.20003 ರಂದು ಕಂದಾಯ ಇಲಾಖೆ ನೀಡಿರುವ ಸಹಮತಿಯೊಂದಿಗೆ ಜಾರಿಗೊಳಿಸಲಾಗಿದೆ. ಪ್ರಸ್ತಾವಿತ ಆದೇಶದ ಅನುಗುಣವಾಗಿ ಬೆಂಗಳೂರು ದಕ್ಷಿಣ ತಾಲ್ಲೂಕಿನ ಉತ್ತರಹಳ್ಳಿ ಹೋಬಳಿಯ ಗೊಲ್ಲಹಳ್ಳಿ ಗ್ರಾಮದ ಸರ್ವೆ ನಂ.38, 39 ಹಾಗೂ 58ರ 120.30 ಎಕರೆಗಳನ್ನು ದಿನಾಂಕ 22.11.2003 ರಂದು ಕೆ.ಐ.ಎ.ಡಿ.ಬಿ. ಸಂಸ್ಥೆಯು ಸ್ವಾಧೀನಪತ್ರದ ಮೂಲಕ ನೈಸೆಲ್ ಸಂಸ್ಥೆಗೆ ಹಸ್ತಾಂತರಿಸಿದೆ. ಪ್ರಸ್ತಾವಿತ ಗ್ರಾಮದ ಸರ್ವೆ ನಂ.39 ರಲ್ಲಿ ಕಟ್ಟಡ ಕಲ್ಲಿಗಾಗಿ ಮಂಜೂರಾಗಿದ್ದ 19 ಕಲ್ಲು ಗಣಿ ಗುತ್ತಿಗೆಗಳು ಮತ್ತು ಸರ್ವೆ ನಂ.58 ರಲ್ಲಿ ಮಂಜೂರಾತಿದ್ದ 7 ಕಟ್ಟಡ ಕಲ್ಲು ಗಣಿ ಗುತ್ತಿಗೆಗಳನ್ನು ದಿನಾಂಕ 24.10.2009 ರಿಂದ ಅನ್ವಯವಾಗುವಂತೆ ರದ್ದುಪಡಿಸಿದ್ದು, 120.30 ಎಕರೆ ಸರ್ಕಾರಿ ಜಾಗವನ್ನು ತೆರವುಗೊಳಿಸಲಾಗಿದೆ.

ಈ ಹಿನ್ನೆಲೆಯಲ್ಲಿ ದಿನಾಂಕ 08.06.2015 ರಂದು ನಡೆದ ಸದನ ಸಮಿತಿಯ ಸಭೆಯಲ್ಲಿ ಈ ಕೆಳಕಂಡ ಅಂಶಗಳ ಬಗ್ಗೆ ಸ್ಥಳ ಪರಿವೀಕ್ಷಣೆಯನ್ನು ಕೈಗೊಂಡು ವರದಿಯನ್ನು ಸಲ್ಲಿಸುವಂತೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಸಮಿತಿಯು ನಿರ್ದೇಶಿಸಿತು:

1. ಪ್ರಸ್ತಾವಿತ ಸರ್ವೆ ನಂಬರುಗಳಲ್ಲಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ಮಂಜೂರಾಗಿದ್ದ 25 ಕಲ್ಲು ಗಣಿ ಗುತ್ತಿಗೆಗಳ ಪ್ರಸಕ್ತ ಸ್ಥಿತಿಗತಿಗಳು.
2. ನೈಸೆಲ್ ಸಂಸ್ಥೆ ನಿರ್ಮಿಸಿರುವ ಬಿ.ಎಂ.ಐ.ಸಿ. ರಸ್ತೆ ಹಾಗೂ ನೀಸೆಲ್ ಸಂಸ್ಥೆಯ ಮುಖಾಂತರ ಜಾರಿಗೊಳಿಸಿರುವ ಪೆರಿಫರಲ್ ರಸ್ತೆ, ಲಿಂಕ್ ರಸ್ತೆ ಹಾಗೂ ಎಕ್ಸ್‌ಪ್ರೆಸ್ ಹೆದ್ದಾರಿಯ ಕಾಮಗಾರಿಗಳಲ್ಲಿ ಬಳಸಿರುವ ಉಪ ಖನಿಜದ ಪ್ರಮಾಣವನ್ನು ಇತ್ಯರ್ಥಗೊಳಿಸಲು ಸರ್ವೇಕ್ಷಣೆ.

ಸಮಿತಿಯ ನಿರ್ದೇಶನಗಳ ಅನುಗುಣವಾಗಿ ಉಲ್ಲೇಖ ಸಂಖ್ಯೆ.ಹಿಭೂವಿ/ಗಭೂ/ಬಿಎನ್‌ಜಿ/8/2015-15 ಅಕ್ಟೋಬರ್ 2015ರ ಉಲ್ಲೇಖದಲ್ಲಿ ಪ್ರಸ್ತಾವಿತ ಸರ್ವೇಕ್ಷಣಾ ಕ್ರಮಗಳ ವರದಿಯನ್ನು ಸಮಿತಿಗೆ ಸಲ್ಲಿಸಲಾಗಿದೆ. ಸರ್ವೆ ನಂ.39ಕ್ಕೆ ಅನ್ವಯಿಸುವಂತೆ 1997 ರಿಂದ 2006 ರ ಅವಧಿಯಲ್ಲಿ ಕಲ್ಲು ಗಣಿ ಗುತ್ತಿಗೆ ಮಂಜೂರಾತಿಯನ್ನು 18 ಗುತ್ತಿಗೆದಾರರಿಗೆ ನೀಡಿದ್ದು, ಗುತ್ತಿಗೆ ಊರ್ಜಿತ ಅವಧಿ 5-10 ವರ್ಷದವರೆಗೆ ಇರುತ್ತವೆ. ಈಗಾಗಲೇ ಪ್ರಸ್ತಾಪಿಸಿರುವಂತೆ ಸಮಗ್ರವಾಗಿ ಈ ಗುತ್ತಿಗೆಯನ್ನು 20.04.2009 ರಿಂದ ಅನ್ವಯವಾಗುವಂತೆ ರದ್ದುಪಡಿಸಲಾಗಿದೆ. ಸಮಿತಿಯ ನಿರ್ದೇಶನಗಳ ಅನುಗುಣವಾಗಿ ಗೊಲ್ಲಹಳ್ಳಿ ಗ್ರಾಮದ ಸರ್ವೆ ನಂ.39 ರಲ್ಲಿ 2009 ರಲ್ಲಿ ಕಲ್ಲು ಗಣಿ ಗುತ್ತಿಗೆಗಳು ರದ್ದಾದ ಅವಧಿಯವರೆಗೆ 3,67,112 ಮೆಟ್ರಿಕ್ ಟನ್ ಉಪ ಖನಿಜವನ್ನು ಪೂರೈಸಲಾಗಿರುವುದು

ದಾಖಲಾತಿಗಳಿಂದ ಸಮಿತಿಗೆ ಸ್ಪಷ್ಟವಾಗಿದೆ. ಪ್ರಸ್ತುತವಾಗಿ ಗುಂಡಿಗಳ ಗಾತ್ರವನ್ನು ಕ್ಯೂಬಿಕ್ ಮೀಟರ್‌ಗಳಲ್ಲಿ ಇತ್ಯರ್ಥಗೊಳಿಸಿದಾಗ 55,00,929.518 ಕ್ಯು.ಮೀ. ಗುಂಡಿಯ ಗಾತ್ರವಾಗಿರುತ್ತದೆ. ಇದನ್ನು ಮೆಟ್ರಿಕ್ ಟನ್‌ಗಳಿಗೆ ಪರಿವರ್ತನೆ ಮಾಡಿದಾಗ 2009 ರಲ್ಲಿ ಗಣಿ ಗುತ್ತಿಗೆಗಳು ರದ್ದಾದ ನಂತರ ಮೇ 2015ರವರೆಗೆ 1,41,00,332.63 ಮೆಟ್ರಿಕ್ ಟನ್ ಪ್ರಮಾಣದ ಕಟ್ಟಡ ಕಲ್ಲನ್ನು ಏತನ್ಮಧ್ಯೆ ಹೊರತೆಗೆದಿರುವುದು ಸ್ಪಷ್ಟವಾಗಿದೆ. ಇದೇ ರೀತಿಯಲ್ಲಿ ಗೊಲ್ಲಹಳ್ಳಿ ಗ್ರಾಮದ ಸರ್ವೆ ನಂ.58 ರಲ್ಲಿ 2009 ರಿಂದ 2015ರ ಅವಧಿಯಲ್ಲಿ 31,80,386.95 ಮೆಟ್ರಿಕ್ ಟನ್ ಕಟ್ಟಡ ಕಲ್ಲು ಉಪ ಖನಿಜವನ್ನು ಹೊರತೆಗೆದಿರುವುದು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಹಿರಿಯ ಭೂ ವಿಜ್ಞಾನಿ ನೀಡಿರುವ ವರದಿಯಿಂದ ಸ್ಪಷ್ಟವಾಗಿದೆ. ಅಂದರೆ, ಕ್ರೋಢೀಕೃತವಾಗಿ 2009-15ರ ಅವಧಿಯಲ್ಲಿ 1,72,80,719.25 ಮೆಟ್ರಿಕ್ ಟನ್ ಕಟ್ಟಡ ಕಲ್ಲು ಉಪ ಖನಿಜವನ್ನು ಹೊರತೆಗೆಯಲಾಗಿದೆ.

ಪ್ರಸ್ತಾವಿತ ಗಣಿಗಾರಿಕೆಗೆ ಸಂಬಂಧಿಸಿದಂತೆ, ನೈಸೆಲ್ ಸಂಸ್ಥೆಗೆ ವರ್ತುಲ ರಸ್ತೆಗೆ ಉಪಯೋಗಿಸಿರುವ ಉಪಖನಿಜಕ್ಕೆ ಸಂಬಂಧಿಸಿದಂತೆ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮ 1994ರ ಅಡಿಯಲ್ಲಿ ವಿಧಿಸಲಾದ ರಾಜಧನ ಪಾವತಿ ಮಾಡುವಂತೆ ಆದೇಶಿಸಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ 20.08.2009 ರಂದು ನೋಟೀಸ್ ಜಾರಿಗೊಳಿಸಿರುವುದನ್ನು ಸಮಿತಿಯು ಗಮನಿಸಿದೆ. ಪ್ರಸ್ತಾವಿತ ನೋಟೀಸಿಗೆ ಪ್ರತಿಕ್ರಿಯಿಸಿರುವ ನೈಸೆಲ್ ಸಂಸ್ಥೆಯು ಕ್ರಿಯಾ ಒಪ್ಪಂದದ ಅನುಚ್ಛೇಧ 12 ರ ಅಡಿಯಲ್ಲಿ ರಸ್ತೆ ನಿರ್ಮಿಸಲು ಉಪಯೋಗಿಸಿರುವ ಜಲ್ಲಿ ಕಲ್ಲಿಗೆ ತೆರಿಗೆ ವಿನಾಯಿತಿ ಇರುವುದಾಗಿ ಪ್ರತಿಕ್ರಿಯಿಸಿದೆ. ಮುಂದುವರೆದು, ನೈಸೆಲ್ ಸಂಸ್ಥೆಯು ಯಾವುದೇ ಕಲ್ಲು ಗಣಿ ಗುತ್ತಿಗೆಯಿಂದ ಪಡೆದಿರುವುದಿಲ್ಲ ಎಂದು ಸ್ಪಷ್ಟೀಕರಿಸಿದೆ. 08.02.2011 ರಂದು ನೈಸೆಲ್ ಸಂಸ್ಥೆಯು ತನ್ನ ಸ್ವಾಧೀನದಲ್ಲಿರುವ ಗೊಲ್ಲಹಳ್ಳಿ ಗ್ರಾಮದ ಸರ್ವೆ ನಂ.39 ರಲ್ಲಿ ನಡೆಯುತ್ತಿರುವ ಅನಧಿಕೃತ ಗಣಿಗಾರಿಕೆಯನ್ನು ನಿಲ್ಲಿಸುವಂತೆ ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ಮನವಿಯನ್ನು ಸಲ್ಲಿಸಿರುವುದನ್ನು ಸಮಿತಿಯು ಗಮನಿಸಿದೆ. ಈ ಮನವಿಗೆ ಪ್ರತಿಕ್ರಿಯಿಸಿದ ಗಣಿ ಮತ್ತು ಭೂವಿಜ್ಞಾನ ಇಲಾಖೆ 08.10.2010 ಮತ್ತು 10.11.2011 ರಂದು ಪ್ರಸ್ತಾವಿತ ಸರ್ವೆ ನಂಬರುಗಳಲ್ಲಿನ ಜಮೀನನ್ನು ಈಗಾಗಲೇ ಹಸ್ತಾಂತರಿಸಿರುವುದರಿಂದ ಈ ಜಮೀನು ನೈಸೆಲ್ ಸಂಸ್ಥೆಯ ಖಾಸಗಿ ಆಸ್ತಿಯಾಗಿದ್ದು, ಆ ಜಾಗದಲ್ಲಿ ಒಪ್ಪಂದದಲ್ಲಿ ನಮೂದಿಸಿರುವ ಇತರೇ ಅನಧಿಕೃತ ಚಟುವಟಿಕೆಗಳನ್ನು ನಿಯಂತ್ರಿಸುವುದು ನೈಸ್ ಸಂಸ್ಥೆಯ ಜವಾಬ್ದಾರಿಯಾಗಿರುತ್ತದೆಂದು ಸ್ಪಷ್ಟೀಕರಿಸಿದೆ. ಮುಂದುವರಿದಂತೆ, ಪ್ರಸ್ತಾವಿತ ಉಲ್ಲೇಖಗಳಲ್ಲಿ ನೈಸೆಲ್ ಸಂಸ್ಥೆಯು ಅನಧಿಕೃತ ಕಲ್ಲು ಗಣಿಗಾರಿಕೆಯನ್ನು ನಿರ್ಬಂಧಿಸಲು ಅನುವಾಗುವಂತೆ ರಕ್ಷಣಾ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಲಾಗಿದೆ. ಇದಕ್ಕೆ ಪೂರಕವಾಗಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯು ಗೊಲ್ಲಹಳ್ಳಿ ಗ್ರಾಮದ ಸರ್ವೆ ನಂ.39 ಮತ್ತು 58 ರಲ್ಲಿ ಅಕ್ರಮ ಗಣಿಗಾರಿಕೆಯನ್ನು ನಿಯಂತ್ರಿಸಲು ಅಕ್ರಮ ಗಣಿಗಾರಿಕೆ ಹಾಗೂ ಸಾಗಾಣಿಕೆಗೆ ಸಂಬಂಧಿಸಿದಂತೆ ದಿನಾಂಕ 04.12.2006 ರಿಂದ 07.01.2015ರ ಅವಧಿಯಲ್ಲಿ ತಲಗಟ್ಟಪುರ ಪೋಲೀಸ್ ಠಾಣಾ ವ್ಯಾಪ್ತಿಯಲ್ಲಿ 11 ಪ್ರಕರಣಗಳನ್ನು ದಾಖಲಿಸಿರುವುದನ್ನು ಸಮಿತಿಯು ಗಮನಿಸಿದೆ. ಅಕ್ರಮವಾಗಿ ಉಪ ಖನಿಜ ಸಾಗಿಸುತ್ತಿದ್ದ ವಾಹನಗಳಿಗೆ 4,69,795 ರೂ.ಗಳನ್ನು ದಂಡವಾಗಿ ವಿಧಿಸಲಾಗಿದೆ.

ಈ ಸಮಗ್ರ ಬೆಳವಣಿಗೆಗಳನ್ನು ಗಮನಿಸಿದಾಗ ನೈಸೆಲ್ ಸಂಸ್ಥೆಗೆ ಪ್ರಸ್ತಾವಿತ ಜಮೀನನ್ನು 22.11.2003 ರಂದು ಹಸ್ತಾಂತರಿಸಿದ ನಂತರವೂ ಅವ್ಯಾಹಿತವಾಗಿ ಗಣಿಗಾರಿಕೆ ನಡೆದಿರುವುದು ಸ್ಪಷ್ಟವಾಗಿದೆ. 24.10.2009 ರಂದು ಕಲ್ಲು ಗಣಿ ಗುತ್ತಿಗೆಗಳನ್ನು ರದ್ದುಪಡಿಸಿದ ನಂತರ ನಡೆದಿರುವ ಅಕ್ರಮ ಗಣಿಗಾರಿಕೆಯ ಪ್ರಾಥಮಿಕ ಹೊಣೆಗಾರಿಕೆ ನೈಸೆಲ್ ಸಂಸ್ಥೆಯದು ಎಂದು ಸಮಿತಿ ತೀರ್ಮಾನಿಸುತ್ತದೆ. ಏಕೆಂದರೆ, ಗೊಲ್ಲಹಳ್ಳಿ ಸರ್ವೆ ನಂ.39 ಮತ್ತು 58 ರಲ್ಲಿನ ಸರ್ಕಾರಿ ಜಮೀನನ್ನು ನೈಸೆಲ್ ಸಂಸ್ಥೆಗೆ ಹಸ್ತಾಂತರಿಸಿದ ನಂತರ ಕ್ರಿಯಾ ಒಪ್ಪಂದದ ಅನುಗುಣವಾಗಿ ಈ ಜಮೀನಿನ

ಸಂಪೂರ್ಣ ಹಕ್ಕು ಹಾಗೂ ಬಾಧ್ಯತೆ ನೈಸೆಲ್ ಸಂಸ್ಥೆಯದ್ದಾಗಿದ್ದು, ಈ ಜಮೀನನ್ನು ಅವರ ಖಾಸಗಿ ಜಾಗವೆಂದು ಪರಿಗಣಿಸಬೇಕಾಗುವುದು. ಈ ಹಿನ್ನೆಲೆಯಲ್ಲಿ 24.10.2009ರ ನಂತರ ಕಲ್ಲು ಗಣಿ ಗುತ್ತಿಗೆಯನ್ನು ಪರವಾನಗಿ ಪಡೆಯದೇ ಖಾಸಗಿ ಜಾಗದಲ್ಲಿ ನಡೆಸಿರುವುದು ಎಂ.ಎಂ.ಡಿ.ಆರ್. ಕಾಯಿದೆ 1957 ಹಾಗೂ ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿಗಳು 1994 ರ ಸ್ಪಷ್ಟ ಹಾಗೂ ನೇರ ಉಲ್ಲಂಘನೆಯಾಗುತ್ತದೆ ಎಂದು ಸಮಿತಿ ತೀರ್ಮಾನಿಸುತ್ತದೆ.

2009-10ನೇ ಸಾಲಿನ ನವೆಂಬರ್ ಮಾಹೆಯಿಂದ 2015-16ನೇ ಸಾಲಿನ ಮೇ ತಿಂಗಳವರೆಗೆ 67 ತಿಂಗಳುಗಳ ಅವಧಿಗೆ ಕ್ರೋಢೀಕೃತವಾಗಿ ನಡೆಸಲಾಗಿರುವ 1,72,80,719.25 ಮೆಟ್ರಿಕ್ ಟನ್‌ಗಳನ್ನು ಸಮಾನವಾಗಿ ವಿಭಜಿಸಿದಾಗ ಪ್ರತಿ ತಿಂಗಳಿಗೆ 2,57,929.82 ಟನ್‌ಗಳ ಪ್ರಮಾಣದ ಉಪ ಖನಿಜವನ್ನು ಗಣಿಗಾರಿಕೆ ಮಾಡಲಾಗಿದೆ ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. 5 ವರ್ಷಗಳಿಗೂ ಮೀರಿ ಈ ಗಣಿಗಾರಿಕೆಯು ನಡೆದಿರುವ ಹಿನ್ನೆಲೆಯಲ್ಲಿ ಸಮಾನಾಂತರವಾಗಿ 2009-10 ರಿಂದ 2015-16 ರ ಅವಧಿಗೆ ಕ್ರೋಢೀಕೃತ ಪ್ರಮಾಣಗಳನ್ನು ವಿಭಜಿಸಲಾಗಿದೆ. ಅನ್ವಯಿಸುವ ವರ್ಷಗಳ ಲೋಕೋಪಯೋಗಿ ಇಲಾಖೆಯ ಶೆಡ್ಯೂಲ್ ಆಫ್ ರೇಟ್ ಅನುಗುಣವಾಗಿ ಪ್ರಸ್ತಾವಿತ ವರ್ಷಗಳಲ್ಲಿ ಗಣಿಗಾರಿಕೆ ನಡೆಸಲಾದ ಉಪ ಖನಿಜದ ಮೌಲ್ಯ ಈ ಕೆಳಕಂಡಂತಿದೆ:

| ಕ್ರಮ ಸಂಖ್ಯೆ | ವರ್ಷ | ಹೊರ ತೆಗೆದಿರುವ ಕಟ್ಟಡ ಕಲ್ಲು ಉಪ ಖನಿಜದ ಪ್ರಮಾಣ (ಮೆಟ್ರಿಕ್ ಟನ್ನುಗಳಲ್ಲಿ) | ಪಿ.ಡಬ್ಲ್ಯೂ.ಡಿ. ಶೆಡ್ಯೂಲ್ ಆಫ್ ರೇಟ್ ಅನ್ವಯ ಪ್ರತಿ ಮೆಟ್ರಿಕ್ ಟನ್ ಉಪ ಖನಿಜದ ಮೌಲ್ಯ (ರೂ.ಗಳಲ್ಲಿ) | ಉಪಖನಿಜದ ಮೌಲ್ಯ (ರೂ.ಗಳಲ್ಲಿ) |
|---|---|---|---|---|
| 1. | 2009-10 | 12,89,605.915 | 114.06 | 14,70,92,450.66 |
| 2. | 2010-11 | 30,95,054.196 | 114.06 | 35,30,21,881.59 |
| 3. | 2011-12 | 30,95,054.196 | 114.06 | 35,30,21,881.59 |
| 4. | 2012-13 | 30,95,054.196 | 76.04 | 23,53,47,921.06 |
| 5. | 2012-14 | 30,95,054.196 | 95.05 | 29,41,84,901.32 |
| 6. | 2014-15 | 30,95,054.196 | 114.06 | 35,30,21,881.59 |
| 7. | 2015-16 | 5,15,842.366 | 114.06 | 5,88,36,980.26 |
| ಒಟ್ಟು | | **1,72,80,719.2** | | **179,45,27,898** |

ii. ಎರಡನೇ ಸ್ತರದಲ್ಲಿ ಬಿ.ಎಂ.ಐ.ಸಿ. ಯೋಜನೆಯಡಿಯಲ್ಲಿ ಅನುಷ್ಠಾನಗೊಳಿಸಲಾದ ಪೆರಿಫೆರಲ್ ರಸ್ತೆ, ಲಿಂಕ್ ರಸ್ತೆ, ಸೇತುವೆಗಳು ಹಾಗೂ ಎಕ್ಸ್‌ಪ್ರೆಸ್ ವೇ ನಿರ್ಮಾಣದಲ್ಲಿ ಬಳಸಲಾದ ಕಟ್ಟಡ ಕಲ್ಲು, ಜಲ್ಲಿ ಕಲ್ಲು ಮತ್ತು ಸಾಧಾರಣ ಮರಳು ಉಪ ಖನಿಜಕ್ಕೆ ಅನ್ವಯಿಸುವಂತೆ ರಾಜಧನ ಪಾವತಿಯ ಬಗ್ಗೆ ಸಮಿತಿಯು ವಿಚಾರ ವಿನಿಮಯ ನಡೆಸಿತು. ನೀಸ್ ರಸ್ತೆಯ ಈ ಕೆಳಗೆ ನಮೂದಿಸಿರುವ ಕಾಮಗಾರಿಗಳ ಘಟಕಗಳಲ್ಲಿ ಖಾಸಗಿ ಪಾಲುದಾರರು ಬಳಸಿರಬಹುದಾದ ಉಪಖನಿಜಗಳನ್ನು ನಿರೂಪಿತ ಮಾನದಂಡಗಳ ಹಿನ್ನೆಲೆಯಲ್ಲಿ ಅಂದಾಜಿಸಲಾಯಿತು:

1. ನೈಸ್ ಎಕಾನಾಮಿಕ್ ಕಾರಿಡಾರ್ ರಸ್ತೆ – ಎನ್.ಹೆಚ್.4 ನೆಲಮಂಗಲ ಜಂಕ್ಷನ್‌ನಿಂದ ಹೊಸೂರು ರಸ್ತೆಯ ಜಂಕ್ಷನ್‌ವರೆಗೆ.
2. ಪೆರಿಫೆರಲ್ ರಸ್ತೆ
3. ಸೇತುವೆಗಳು (105)

4. ಕಲ್ಲಿನ ಕಾಂಪೌಂಡ್
5. ಪಿ.ಇ.ಎಸ್. ಕಾಲೇಜು ಜಂಕ್ಷನ್‌ನಿಂದ ಸೋಮಪುರ ಗೇಟ್‌ವರೆಗಿನ ರಸ್ತೆ, ಪೆರಿಫರಲ್ ರಸ್ತೆ, ಸೇತುವೆಗಳು ಮತ್ತು ಕಲ್ಲಿನ ಕಾಂಪೌಂಡ್ – 11 ಕಿ.ಮೀ.ಗಳು.

ಕ್ರೋಢೀಕೃತವಾಗಿ ಸುಮಾರು 67 ಕಿ.ಮೀ. ರಸ್ತೆಯನ್ನು ಪರಿಗಣಿಸಿದ್ದು, ಈ ರಸ್ತೆಗೆ ಉಪಯೋಗಿಸಿರುವ ಕಟ್ಟಡ ಕಲ್ಲನ್ನು 22,09,121.80 ಮೆಟ್ರಿಕ್ ಟನ್ ಎಂದು ಅಂದಾಜಿಸಲಾಗಿದೆ. ಜಲ್ಲಿ ಕಲ್ಲು ಮತ್ತು ಸಾಧಾರಣ ಮರಳು ಉಪ ಖನಿಜದ ಪ್ರಮಾಣವನ್ನು 3,88,582.40 ಮೆಟ್ರಿಕ್ ಟನ್ ಎಂದು ಅಂದಾಜಿಸಲಾಗಿದೆ. ಪ್ರಸ್ತಾವಿತ ಪ್ರಮಾಣಗಳಿಗೆ ಕನಿಷ್ಠ ದರಗಳಲ್ಲಿ ಪ್ರತಿ ಮೆಟ್ರಿಕ್ ಟನ್‌ಗೆ 30 ರೂ.ಗಳೆಂದು ಅಳವಡಿಸಲಾಗಿದೆ. ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿಗಳು 1994 ರ ನಿಯಮ 43(5)ರ ಅನ್ವಯ ರಾಜಧನವನ್ನು ಪಾವತಿಸುವಲ್ಲಿ ಆಗಿರುವ ವೈಫಲ್ಯತೆಯಿಂದಾಗಿ ನಿರೂಪಿತ ದರಗಳ 5 ಪಟ್ಟನ್ನು ದಂಡವಾಗಿ ವಿಧಿಸಿದಲ್ಲಿ, ಅನುಕ್ರಮವಾಗಿ ಕಟ್ಟಡ ಕಲ್ಲು ಉಪಖನಿಜಕ್ಕೆ 33,13,68,270 ರೂ.ಗಳನ್ನು ಹಾಗೂ ಸಾಧಾರಣ ಮರಳಿಗೆ 5,82,87,360 ರೂ.ಗಳನ್ನು ಖಾಸಗಿ ಪಾಲುದಾರರು ಪಾವತಿಸಬೇಕಾಗುವುದು. ಕ್ರೋಢೀಕೃತವಾಗಿ ರಾಜಧನಕ್ಕೆ ಅನ್ವಯಿಸುವಂತೆ 38,96,55,630 ರೂ.ಗಳನ್ನು ಖಾಸಗಿ ಪಾಲುದಾರರು ಇಲಾಖೆಗೆ ಪಾವತಿಸಬೇಕಾಗಿದೆ.

iii. ದಿನಾಂಕ 02.03.2015 ರಂದು ಸಮಿತಿಯು ಕೈಗೊಂಡ ಸ್ಥಳ ಪರಿವೀಕ್ಷಣೆಯಲ್ಲಿ ಪೆರಿಫರಲ್ ಹಾಗೂ ರಿಂಗ್ ರಸ್ತೆ ಹಲವಾರು ಅಲೈನ್‌ಮೆಂಟ್‌ಗಳಲ್ಲಿ ಗುಡ್ಡ ಪ್ರದೇಶಗಳಲ್ಲಿ ಹಾದುಹೋಗಿರುವುದನ್ನು ಸಮಿತಿಯು ಗಮನಿಸಿತು. ಬಹುತೇಕವಾಗಿ ಹಾರ್ಡ್‌ರಾಕ್ ಪ್ರವರ್ಗಕ್ಕೆ ಸೇರಿರುವ ಕಲ್ಲುಗುಡ್ಡ ಪ್ರದೇಶವನ್ನು ಸಮತಟ್ಟುಗೊಳಿಸಿ ರಸ್ತೆ ನಿರ್ಮಾಣ ಮಾಡಿರುವುದು ಮೇಲ್ನೋಟಕ್ಕೆ ವ್ಯಕ್ತವಾದ ಹಿನ್ನೆಲೆಯಲ್ಲಿ ಈ ಪ್ರಕ್ರಿಯೆಯಲ್ಲಿ ಹೊರತೆಗೆದಿರುವ ಕಟ್ಟಡ ಕಲ್ಲು ಉಪಖನಿಜದ ಪ್ರಮಾಣವನ್ನು ಅಂದಾಜಿಸಿ ಪಾವತಿಸಬೇಕಾದ ರಾಜಧನದ ಬಗ್ಗೆ ಕ್ರಮ ಕೈಗೊಳ್ಳುವಂತೆ ಸಮಿತಿ ಗಣಿ ಭೂ ವಿಜ್ಞಾನ ಇಲಾಖೆಗೆ ನಿರ್ದೇಶಿಸಿತು. ಹಿರಿಯ ಭೂ ವಿಜ್ಞಾನಿ, ಬೆಂಗಳೂರು ನಗರ ಜಿಲ್ಲೆ ಇವರು ನೀಡಿರುವ ವರದಿಯ ಅನುಗುಣವಾಗಿ ಸದರಿ ಪ್ರದೇಶದಲ್ಲಿ ಇಲಾಖೆಯ ಪರವಾನಗಿ ಇಲ್ಲದೇ ಹೊರತೆಗೆದಿರುವ ಕಟ್ಟಡ ಕಲ್ಲು ಉಪ ಖನಿಜದ ಪ್ರಮಾಣವನ್ನು 8,01,276 ಕ್ಯೂ.ಮೀ. ಎಂದು ಅಂದಾಜಿಸಲಾಗಿದೆ. ಕೆ.ಎಂ.ಎಂ.ಸಿ.ಆರ್. 1994 ರ ನಿಯಮ 44(3)ರ ಅನ್ವಯ ಲೋಕೋಪಯೋಗಿ ಇಲಾಖೆಯ 2009-10ನೇ ಸಾಲಿನ ದರಪಟ್ಟಿಗಳನ್ನು ಅಳವಡಿಸಿದಲ್ಲಿ, ದಂಡವನ್ನು ಒಳಗೊಂಡಂತೆ 24,03,82,300 ರೂ.ಗಳನ್ನು ಖಾಸಗಿ ಪಾಲುದಾರರು ಸರ್ಕಾರಕ್ಕೆ ಪಾವತಿಸಬೇಕಾಗಿದೆ.

***<u>ಮೇಲೆ ಪ್ರತಿಪಾದಿಸಿರುವ ವಿಷಯಗಳ ಹಿನ್ನೆಲೆಯಲ್ಲಿ ಸಮಿತಿಯು ಈ ಕೆಳಕಂಡಂತೆ ವಿಶ್ಲೇಷಣೆ ಹಾಗೂ ಶಿಫಾರಸ್ಸುಗಳನ್ನು ಮಾಡುತ್ತದೆ:</u>***

ಪ್ರಥಮ ಸ್ತರದಲ್ಲಿ ಸಮಿತಿಯು 03.04.1997 ರಂದು ಅನುಷ್ಠಾನಗೊಳಿಸಲಾದ ಕ್ರಿಯಾ ಒಪ್ಪಂದದ ಹಿನ್ನೆಲೆಯಲ್ಲಿ ನೈಸ್‌ಲ್ ಸಂಸ್ಥೆಗೆ ನೀಡಲಾಗಿರುವ ಜಮೀನಿನಲ್ಲಿ ಅಥವಾ ಭೂಮಿಯಲ್ಲಿ ಲಭ್ಯವಿರುವ ಖನಿಜ ಅಥವಾ ಉಪ ಖನಿಜದ ಮೇಲೆ ಇರುವ ಹಕ್ಕಿನ ಬಗ್ಗೆ ವಿಶ್ಲೇಷಿಸುವುದು ಅವಶ್ಯಕ ಎಂದು ತೀರ್ಮಾನಿಸುತ್ತದೆ. ವಾಸ್ತವಿಕವಾಗಿ ಕ್ರಿಯಾ ಒಪ್ಪಂದ ಅನುಚ್ಛೇಧ 22.2 ರ ಅಡಿಯಲ್ಲಿ ಕ್ರಿಯಾ ಒಪ್ಪಂದದ ಅನುಷ್ಠಾನ, ನಿರ್ವಹಣೆ ಅರ್ಥೈಸುವ ಪ್ರಕ್ರಿಯ ಇತ್ಯಾದಿಗಳನ್ನು ಭಾರತದಲ್ಲಿ ಚಾಲ್ತಿಯಲ್ಲಿರುವ

ನಿಯಮಗಳ ಹಿನ್ನೆಲೆಯಲ್ಲಿ ನಿಯಂತ್ರಿಸಬೇಕು ಎಂದು ಉಲ್ಲೇಖಿಸಲಾಗಿದೆ. ಆರ್‌ಬಿಟ್ರೇಷನ್ ಮಾತ್ರ ಇಂಗ್ಲೆಂಡ್ ರಾಷ್ಟ್ರದ ಕಾನೂನುಗಳ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಈ ಹಿನ್ನೆಲೆಯಲ್ಲಿ ನೈಸೆಲ್ ಸಂಸ್ಥೆಯು ಸ್ವಚ್ಛಂದವಾಗಿ ಜಮೀನಿನಲ್ಲಿ ಲಭ್ಯವಿರುವ ಖನಿಜ, ಉಪಖನಿಜಗಳನ್ನು ತೆಗೆಯುವುದು ಅಥವಾ ಬಳಸುವುದು ಚಾಲ್ತಿಯಲ್ಲಿರುವ ಅಧಿನಿಯಮಗಳ ಅಥವಾ ಕಾನೂನಿನ ಸ್ಪಷ್ಟ ಉಲ್ಲಂಘನೆಯಾಗುತ್ತದೆ ಎಂದು ಸಮಿತಿಯು ತೀರ್ಮಾನಿಸುತ್ತದೆ. ಏಕೆಂದರೆ, ಅನುಚ್ಛೇಧ 22.8ರ ಅಡಿಯಲ್ಲಿ ನೈಸೆಲ್/ನೀಸೆಲ್ ಸಂಸ್ಥೆ ಭಾರತ ದೇಶದಲ್ಲಿ ಚಾಲ್ತಿಯಲ್ಲಿರುವ ನಿಯಮಾವಳಿಗಳಿಗೆ ಬದ್ಧವಾಗಿ ಗುತ್ತಿಗೆಯನ್ನು ಒಪ್ಪಂದದ ಅನುಗುಣವಾಗಿ ನಿರ್ವಹಿಸಬೇಕಾಗುವುದು. ನೈಸೆಲ್/ನೀಸೆಲ್ ಸಂಸ್ಥೆ ತನ್ನ ಸುಪರ್ದಿಯಲ್ಲಿರುವ ಭೂಮಿಯಲ್ಲಿನ ಖನಿಜ/ಉಪಖನಿಜಗಳನ್ನು ಬಳಸಬೇಕಾದಲ್ಲಿ ಚಾಲ್ತಿಯಲ್ಲಿರುವ ಅದರಲ್ಲೂ ನಿರ್ದಿಷ್ಟವಾಗಿ ಗಣಿಗಾರಿಕೆ ಹಾಗೂ ಖನಿಜಗಳಿಗೆ ಅನ್ವಯಿಸುವ ಅಧಿನಿಯಮ ಹಾಗೂ ನಿಯಮಗಳಲ್ಲಿ ಪ್ರತಿಪಾದಿಸಿರುವ ವಿಧಿ ವಿಧಾನಗಳನ್ನು ಪಾಲಿಸುವುದು ಕ್ರಿಯಾ ಒಪ್ಪಂದದ ಅನುಗುಣವಾಗಿ ಪೂರ್ವಭಾವಿ ಅವಶ್ಯಕತೆಯಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಪ್ರಸಕ್ತ ಪ್ರಕರಣದಲ್ಲಿ ಚಾಲ್ತಿಯಲ್ಲಿರುವ ಖನಿಜ/ಉಪಖನಿಜಗಳ ಗಣಿಗಾರಿಕೆ ಹಾಗೂ ಬಳಕೆಗೆ ಸಂಬಂಧಿಸಿದ ನಿಯಮಾವಳಿಗಳು ಮತ್ತು ಕ್ರಿಯಾ ಒಪ್ಪಂದವನ್ನು ನೈಸೆಲ್/ನೀಸೆಲ್ ಸಂಸ್ಥೆ ಉಲ್ಲಂಘಿಸಿದೆ ಎಂದು ಸಮಿತಿ ತೀರ್ಮಾನಿಸುತ್ತದೆ. ಈ ಬೆಳವಣಿಗೆಯಿಂದಾಗಿ ಗಣಿ ಮತ್ತು ಭೂವಿಜ್ಞಾನ ಇಲಾಖೆ ಪ್ರಸ್ತಾವಿತ ನಿಯಮಗಳಡಿಯಲ್ಲಿ ನಿಯಮಾವಳಿಗಳ ಉಲ್ಲಂಘನೆಯ ಆಧಾರದ ಮೇಲೆ ಕ್ರಮ ಜಾರಿಗೊಳಿಸಲು ಬದ್ಧವಾಗಿರುತ್ತದೆ ಎಂದು ಸಮಿತಿ ತೀರ್ಮಾನಿಸುತ್ತದೆ. ಸೋಮಶೇಖರ ರೆಡ್ಡಿ ಪ್ರಕರಣದಲ್ಲಿ ಮೇಲ್ಮನವಿಯನ್ನು ಇತ್ಯರ್ಥಗೊಳಿಸುವಾಗ ನ್ಯಾಯಾಲಯವು ಕ್ರಿಯಾ ಒಪ್ಪಂದವನ್ನು ಮೂಲರೂಪದಲ್ಲಿ ತಾತ್ವಿಕವಾಗಿ ಹಾಗೂ ಅಕ್ಷರಶ: ಪಾಲಿಸಬೇಕು ಎಂದು ನಿರ್ದೇಶಿಸಿರುವ ಹಿನ್ನೆಲೆಯಲ್ಲಿ ಹಾಗೂ ಕ್ರಿಯಾ ಒಪ್ಪಂದದ ಅನುಚ್ಛೇಧ 22.8 ರಲ್ಲಿ ಪ್ರತಿಪಾದಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಅನಧಿಕೃತ ಗಣಿಗಾರಿಕೆ ಕ್ರಿಯಾ ಒಪ್ಪಂದದ ಸ್ಪಷ್ಟ ಹಾಗೂ ನೇರ ಉಲ್ಲಂಘನೆಯಾಗಿದೆ ಎಂದು ಸಮಿತಿ ತೀರ್ಮಾನಿಸುತ್ತದೆ. ಈ ಪ್ರತಿಪಾದನೆಗೆ ಪೂರಕವಾಗಿ ಈ ಕೆಳಕಂಡ ಸ್ತರಗಳಲ್ಲಿ ಗಣಿಗಾರಿಕೆಯ ಪ್ರಮುಖ ಸ್ತರಗಳು ಕೆಳಕಂಡಂತಿದೆ:

24.10.2009 ರಿಂದ ಅನ್ವಯವಾಗುವಂತೆ ಪ್ರಸ್ತಾವಿತ 25 ಗಣಿ ಗುತ್ತಿಗೆಗಳನ್ನು ರದ್ದು ಮಾಡಲಾಗಿದೆ. ಮೂಲವಾಗಿ ಬೆಂಗಳೂರು ನಗರ ಜಿಲ್ಲೆಯ ಬಿ.ಎಂ. ಕಾವಲ್ ವ್ಯಾಪ್ತಿಯ 307 ಎಕರೆ 16 ಗುಂಟೆ ವಿಸ್ತೀರ್ಣದ ಜಮೀನು ಅರಣ್ಯ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿರುವುದರಿಂದ ಪ್ರಸ್ತಾವಿತ ಜಮೀನನ್ನು ಪರ್ಯಾಯವಾಗಿ ನೀಡಲಾಗಿದೆ. ಸಮಿತಿಗೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಸಲ್ಲಿಸಿರುವ ಮಾಹಿತಿಯ ಅನುಗುಣವಾಗಿ ಗೊಲ್ಲಹಳ್ಳಿ ಗ್ರಾಮದ ಸರ್ವೆ ನಂ.39 ರಲ್ಲಿ ನೈಸೆಲ್ ಸಂಸ್ಥೆಗೆ ಹಸ್ತಾಂತರಿಸುವ ಪೂರ್ವದಲ್ಲಿ 18 ಗಣಿ ಗುತ್ತಿಗೆಗಳು ಜಾರಿಯಲ್ಲಿರುವುದು ಸ್ಪಷ್ಟವಾಗಿದೆ. ಪ್ರಸ್ತಾವಿತ ಗುತ್ತಿಗೆಯನ್ನು 1995 ರಿಂದ 2006ರ ಅವಧಿಯಲ್ಲಿ ಮಂಜೂರಾತಿ ಮಾಡಲಾಗಿದೆ. ಇದಲ್ಲದೆ, ಗೊಲ್ಲಹಳ್ಳಿ ಗ್ರಾಮದ ಸರ್ವೆ ನಂ.58 ರಲ್ಲಿ 7 ಗಣಿ ಗುತ್ತಿಗೆ ಮಂಜೂರಾತಿಗಳು ಜಾರಿಯಲ್ಲಿದ್ದು, ಪ್ರಸ್ತಾವಿತ ಮಂಜೂರಾತಿಗಳನ್ನು 1995 ರಿಂದ 2001 ರ ಅವಧಿಯಲ್ಲಿ ನೀಡಲಾಗಿದೆ. ಕ್ರೋಢೀಕೃತವಾಗಿ ಸರ್ವೆ ನಂ.39 ಹಾಗೂ 58 ರಲ್ಲಿ 25 ಗಣಿ ಗುತ್ತಿಗೆಗಳು ಜಾರಿಯಲ್ಲಿದೆ. ಲಭ್ಯವಿರುವ ದಾಖಲಾತಿಗಳ ಅನುಗುಣವಾಗಿ ದಿನಾಂಕ 22.11.2003 ರಂದು ಕೆ.ಐ.ಎ.ಡಿ.ಬಿ. ವತಿಯಿಂದ ಉಲ್ಲೇಖಿತ ಸರ್ವೆ ನಂಬರುಗಳನ್ನು ಒಳಗೊಂಡಂತೆ ಗೊಲ್ಲಹಳ್ಳಿ ಗ್ರಾಮದ ವ್ಯಾಪ್ತಿಯಲ್ಲಿ 120.30 ಎಕರೆ ಜಮೀನನ್ನು ನೈಸೆಲ್ ಸಂಸ್ಥೆಗೆ ಹಸ್ತಾಂತರ ಮಾಡಲಾಗಿದೆ. ಪ್ರಸ್ತಾವಿತ ಜಮೀನಿನಲ್ಲಿ ನಡೆಸಲಾಗುತ್ತಿದ್ದ ಗಣಿ ಗುತ್ತಿಗೆಗಳ ಪರವಾನಗಿಗಳ ಊರ್ಜಿತ ಅವಧಿ 22.12.2005 ರಿಂದ 10.11.2017ರ ಅವಧಿಯಲ್ಲಿ ಅಂತ್ಯಗೊಳ್ಳಬೇಕಾಗುವುದು. ನೈಸೆಲ್ ಸಂಸ್ಥೆಯ ಪರವಾಗಿ ಪ್ರಸ್ತಾವಿತ ಜಮೀನನ್ನು ಸ್ವಾಧೀನಪಡಿಸಿಕೊಂಡು ಹಸ್ತಾಂತರಿಸಿರುವ ಹಿನ್ನೆಲೆಯಲ್ಲಿ 24.10.2009ರಿಂದ

ಅನ್ವಯವಾಗುವಂತೆ ಪ್ರಸ್ತಾವಿತ 25 ಗಣಿ ಗುತ್ತಿಗೆಗಳನ್ನು ರದ್ದು ಮಾಡಲಾಗಿದೆ. ಅಂದರೆ, ಈ ದಿನಾಂಕದ ನಂತರ ಗೊಲ್ಲಹಳ್ಳಿ ಗ್ರಾಮದ ಸರ್ವೆ ನಂ.39 ಹಾಗೂ 58 ರಲ್ಲಿ ಗಣಿಗಾರಿಕೆಯ ಚಟುವಟಿಕೆಗಳು ಅನಧಿಕೃತ ಎಂದು ಪರಿಗಣಿಸಬೇಕಾಗುವುದು. ಆದಾಗ್ಯೂ, ಈ ಪ್ರದೇಶದಲ್ಲಿ ಅನಿಯಂತ್ರಿತವಾಗಿ ಹಾಗೂ ಅನಧಿಕೃತವಾಗಿ ಗಣಿಗಾರಿಕೆ ನಡೆದಿರುವುದು ದಾಖಲಾತಿಗಳಿಂದ ಸಮಿತಿಗೆ ಸ್ಪಷ್ಟವಾಗಿದೆ. ದಿನಾಂಕ 08.10.2010 ರಂದು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಹಿರಿಯ ಭೂ ವಿಜ್ಞಾನಿಗಳು ಪ್ರಸ್ತಾವಿತ ಪ್ರದೇಶದಲ್ಲಿ ಗಣಿಗಾರಿಕೆ ಸ್ಥಗಿತಗೊಂಡಿರುವುದನ್ನು ನೈಸೆಲ್/ನೀಸೆಲ್ ಸಂಸ್ಥೆಗೆ ಸ್ಥಳ ಪರಿವೀಕ್ಷಣೆಯ ಮುಖಾಂತರ ದೃಢೀಕರಿಸಿರುತ್ತಾರೆ. ಈ ದೃಢೀಕರಣಕ್ಕೆ ಪೂರಕವಾಗಿ ನೈಸೆಲ್ ಸಂಸ್ಥೆ ಹಸ್ತಾಂತರಿತ ಜಮೀನಿನಲ್ಲಿ ಅಕ್ರಮ ಗಣಿಗಾರಿಕೆಯನ್ನು ನಿಯಂತ್ರಿಸಲು ಕಾಂಪೌಂಡ್ ಗೋಡೆ/ತಂತಿ ಬೇಲಿ, ಕಂದಕ ಇತ್ಯಾದಿ ಸುರಕ್ಷತಾ ಕಾಮಗಾರಿಗಳನ್ನು ಜಾರಿಗೊಳಿಸುವಂತೆ ಸೂಚಿಸಿರುತ್ತಾರೆ. ಆದಾಗ್ಯೂ, ನೈಸೆಲ್/ನೀಸೆಲ್ ಸಂಸ್ಥೆ ತಮ್ಮ ಸುಪರ್ದಿಯಲ್ಲಿರುವ ಜಮೀನಿನಲ್ಲಿ ಅಕ್ರಮ ಗಣಿಗಾರಿಕೆಯನ್ನು ನಿಲ್ಲಿಸಲು ಕ್ರಮ ಕೈಗೊಳ್ಳದೇ ಇರುವುದು ಸಮಿತಿಗೆ ಸ್ಪಷ್ಟವಾಗಿದೆ. ಏಕೆಂದರೆ, ದಿನಾಂಕ 10.01.2011 ರಂದು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಹಿರಿಯ ವಿಜ್ಞಾನಿಗಳು ದಿನಾಂಕ 14.10.2010 ರಂದು ಕೈಗೊಂಡ ಸ್ಥಳ ತನಿಖೆಯಲ್ಲಿ ಅಕ್ರಮ ಗಣಿಗಾರಿಕೆ ಜಾರಿಯಲ್ಲಿರುವುದು ವ್ಯಕ್ತವಾಗಿದೆ ಎಂದು ಉಲ್ಲೇಖಿಸಿದ್ದಾರೆ. ಸದರಿ ಅಕ್ರಮ ಗಣಿಗಾರಿಕೆಯಲ್ಲಿ ತೊಡಗಿದ ವಾಹನ ಹಾಗೂ ಚಾಲಕರನ್ನು ವಶಪಡಿಸಿಕೊಂಡ ನ್ಯಾಯಾಲಯದಲ್ಲಿ ಪ್ರಕರಣ ಹೂಡಲು ತಲಘಟ್ಟಪುರ ಪೋಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣವನ್ನು ದಾಖಲಿಸಿರುವ ಬಗ್ಗೆ ಉಲ್ಲೇಖಿತ ಪತ್ರದಲ್ಲಿ ಪ್ರತಿಪಾದಿಸಲಾಗಿದೆ. ಈ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಇಲಾಖೆ ನೀಡಿರುವ ಸೂಚನೆಗಳನ್ನು ಗಂಭೀರವಾಗಿ ಪರಿಗಣಿಸದೇ ಅಕ್ರಮ ಗಣಿಗಾರಿಕೆಗೆ ಪರೋಕ್ಷವಾಗಿ ನೈಸೆಲ್/ನೀಸೆಲ್ ಸಂಸ್ಥೆ ಆಸ್ಪದ ನೀಡಿದೆ ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. ಪ್ರಸ್ತಾವಿತ ಪ್ರದೇಶವನ್ನು ಸರ್ಕಾರವು ನೈಸೆಲ್/ನೀಸೆಲ್ ಸಂಸ್ಥೆಗೆ ಹಸ್ತಾಂತರಿಸಿರುವುದರಿಂದ ಈ ಕ್ಷೇತ್ರ ನೈಸೆಲ್ ಸಂಸ್ಥೆಯ ಖಾಸಗಿ ಆಸ್ತಿಯಾಗಿದ್ದು, ಇದರ ಸಂರಕ್ಷಣೆ ಹಕ್ಕುದಾರರಾದ ನೈಸೆಲ್/ನೀಸೆಲ್ ಸಂಸ್ಥೆಯ ಪ್ರಾಥಮಿಕ ಕರ್ತವ್ಯವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಕ್ರಮ ಗಣಿಗಾರಿಕೆ ಪ್ರಕರಣಗಳನ್ನು ಹಕ್ಕುದಾರರಾದ ನೈಸೆಲ್/ನೀಸೆಲ್ ಸಂಸ್ಥೆ ನೇರವಾಗಿ ಕ್ಷೇತ್ರೀಯ ರಕ್ಷಣಾ ವ್ಯವಸ್ಥೆ ಹಾಗೂ ಕಂದಾಯ ಇಲಾಖೆಯ ಗಮನಕ್ಕೆ ತಂದು ಕ್ರಮ ಜಾರಿಗೊಳಿಸುವಂತೆ ಸೂಚಿಸಲಾಗಿದೆ. ಆದಾಗ್ಯೂ ನೈಸೆಲ್/ನೀಸೆಲ್ ಸಂಸ್ಥೆ 08.02.2011ರ ಪತ್ರದ ಮುಖಾಂತರ ಸೋಮಶೇಖರ ಎಂಬ ಗುತ್ತಿಗೆದಾರರು ಸರ್ವೆ ನಂ.39ರ ವ್ಯಾಪ್ತಿಯ 4 ಎಕರೆ ವಿಸ್ತೀರ್ಣದ ಪ್ರದೇಶದಲ್ಲಿ ನಕಲಿ ದಾಖಲಾತಿಗಳ ಮೇಲೆ ಅಕ್ರಮ ಗಣಿಗಾರಿಕೆ ನಡೆಸುತ್ತಿದ್ದು, ತತ್ಸಂಬಂಧವಾಗಿ ಕ್ಷೇತ್ರೀಯ ಪೋಲೀಸ್ ಠಾಣೆಯಲ್ಲಿ ಎಫ್.ಐ.ಆರ್. ದಾಖಲಿಸಿರುವುದಾಗಿ ಸ್ಪಷ್ಟೀಕರಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ನಿಯಮಾವಳಿಗಳ ಅನುಸಾರ ಈ ಕಾನೂನು ಬಾಹಿರ ಚಟುವಟಿಕೆಗಳನ್ನು ಸ್ಥಗಿತಗೊಳಿಸಬೇಕೆಂದು ಕೋರಿರುತ್ತಾರೆ. ಈ ಎಲ್ಲಾ ಬೆಳವಣಿಗೆಗಳನ್ನು ಗಮನಿಸಿದಾಗ ಪ್ರಸ್ತಾವಿತ ಜಮೀನಿಗೆ ಖಾಸಗಿ ಹಕ್ಕುದಾರರಾದ ನೈಸೆಲ್/ನೀಸೆಲ್ ಸಂಸ್ಥೆ ಅಕ್ರಮ ಹಾಗೂ ಅನಧಿಕೃತ ಗಣಿಗಾರಿಕೆಯನ್ನು ನಿಯಂತ್ರಿಸುವಲ್ಲಿ ಯಾವುದೇ ಕ್ರಮ ಕೈಗೊಳ್ಳದೇ ಸಾಂಕೇತಿಕವಾಗಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಕೋರಿಕೆಯನ್ನು ಸಲ್ಲಿಸಿರುವುದು ದಾಖಲಾತಿಗಳಿಂದ ಸಮಿತಿಗೆ ಸ್ಪಷ್ಟವಾಗಿದೆ. ಪ್ರಸ್ತಾವಿತ ಜಮೀನನ್ನು ಹಸ್ತಾಂತರಿಸುವ ಸಮಯದಲ್ಲಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ತಾಂತ್ರಿಕ ಸಿಬ್ಬಂದಿ ಹಾಗೂ ನೈಸೆಲ್/ನೀಸೆಲ್ ಸಂಸ್ಥೆಯ ಪ್ರತಿನಿಧಿಗಳ ಉಪಸ್ಥಿತಿಯಲ್ಲಿ ಗಣಿಗಾರಿಕೆ ರಹಿತ ಭೂಮಿಯನ್ನು ಹಸ್ತಾಂತರಿಸಿರುವುದು ದಾಖಲಾತಿಗಳಿಂದ ಸಮಿತಿಗೆ ಸ್ಪಷ್ಟವಾಗಿದೆ. ಆದುದರಿಂದ ಖಾಸಗಿ ಪಾಲುದಾರರು ತಮ್ಮ ಸುಪರ್ದಿಯಲ್ಲಿರುವ ಜಮೀನಿನಲ್ಲಿ ಅಕ್ರಮ ಗಣಿಗಾರಿಕೆಯನ್ನು ನಿಯಂತ್ರಿಸುವಲ್ಲಿ ವಿಫಲವಾಗಿರುವುದು ಸ್ಪಷ್ಟವಾಗಿರುತ್ತದೆ. ಏತನ್ಮಧ್ಯೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆ 30.12.2010 ರಿಂದ 07.01.2015ರ ಅವಧಿಯಲ್ಲಿ ಅಂಜನಾಪುರ ಗೊಲ್ಲಹಳ್ಳಿ ವ್ಯಾಪ್ತಿಯಲ್ಲಿ ಸರ್ವೆ ನಂ.39 ಹಾಗೂ 58

ರಲ್ಲಿ ನಡೆಯುತ್ತಿರುವ ಅಕ್ರಮ ಹಾಗೂ ಅನಧಿಕೃತ ಗಣಿಗಾರಿಕೆ 8 ಎಫ್.ಐ.ಆರ್. ಗಳನ್ನು ತಲಘಟ್ಟಪುರ ಪೋಲೀಸ್ ಠಾಣೆಯಲ್ಲಿ ದಾಖಲಿಸಿದೆ. ಈ ಪೈಕಿ 30.12.2010 ರಂದು ತಲಘಟ್ಟಪುರ ಠಾಣೆಯಲ್ಲಿ ಸರ್ವೆ ನಂ.39 ರಲ್ಲಿ ಈಗಾಗಲೇ ಪ್ರಸ್ತಾಪಿಸಲಾಗಿರುವ ಸೋಮಶೇಖರ ಎಂಬ ವ್ಯಕ್ತಿ ಅಕ್ರಮ ಗಣಿಗಾರಿಕೆ ನಡೆಸುತ್ತಿರುವ ಬಗ್ಗೆ ದೂರು ದಾಖಲಾಗಿದೆ. ಈ ಬೆಳವಣಿಗೆಗಳಿಂದ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಸಮಾನಾಂತರವಾಗಿ ಹಾಗು ಸಮಯೋಚಿತವಾಗಿ ಅಕ್ರಮ ಗಣಿಗಾರಿಕೆಯನ್ನು ನಿಯಂತ್ರಿಸಲು ಕ್ರಮ ಕೈಗೊಂಡಿರುವುದು ಸಮಿತಿಗೆ ಸ್ಪಷ್ಟವಾಗಿದೆ. ಈ ಎಲ್ಲಾ ಬೆಳವಣಿಗೆಗಳನ್ನು ಉಪೇಕ್ಷಿಸಿ ನೈಸೆಲ್/ನೀಸೆಲ್ ಸಂಸ್ಥೆ ನಿಯತಕಾಲಿಕವಾಗಿ ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ಕಾನೂನು ರೀತ್ಯಾ ಕ್ರಮ ಜರುಗಿಸುವಂತೆ ಕೋರುತ್ತಿರುವುದು ಒಂದು ನಿರರ್ಥಕ ಪ್ರಕ್ರಿಯೆ ಎಂದು ಸಮಿತಿ ತೀರ್ಮಾನಿಸುತ್ತದೆ. ಸಂಪೂರ್ಣವಾಗಿ ತನ್ನ ಸುಪರ್ದಿಯಲ್ಲಿರುವ ಖಾಸಗಿ ಮಾಲೀಕತ್ವದ ಜಮೀನಿನಲ್ಲಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆಗೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಜವಾಬ್ದಾರಿಯುತವನ್ನಾಗಿ ಮಾಡುವ ಪ್ರಯತ್ನವನ್ನು ನೈಸೆಲ್ ಸಂಸ್ಥೆ ಮಾಡಿರುವುದು ಸಮಿತಿಗೆ ದಾಖಲಾತಿಗಳಿಂದ ಸ್ಪಷ್ಟವಾಗಿದೆ. ಈ ಹಿನ್ನೆಲೆಯಲ್ಲಿ ನೈಸೆಲ್/ನೀಸೆಲ್ ಸಂಸ್ಥೆ ಪರೋಕ್ಷವಾಗಿ ಅಕ್ರಮ ಗಣಿಗಾರಿಕೆಯನ್ನು ಉತ್ತೇಜಿಸಿದೆ ಎಂದು ಸಮಿತಿ ತೀರ್ಮಾನಿಸುತ್ತದೆ. ಇದಲ್ಲದೆ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ದಿನಾಂಕ 14.06.2010 ರಿಂದ 24.04.2013ರ ಅವಧಿಯಲ್ಲಿ 41 ಪ್ರಕರಣಗಳಿಗೆ ಅನ್ವಯಿಸುವಂತೆ 4,69,795 ರೂ.ಗಳ ದಂಡವನ್ನು ವಿಧಿಸಿ ವಸೂಲಿ ಮಾಡಿದೆ. ಈ ಪೈಕಿ 17 ಪ್ರಕರಣಗಳು ನೈಸೆಲ್/ನೀಸೆಲ್ ಸಂಸ್ಥೆಯ ಖಾಸಗಿ ಸುಪರ್ದಿಯಲ್ಲಿರುವ ಗೊಲ್ಲಹಳ್ಳಿ ಗ್ರಾಮದ ವ್ಯಾಪ್ತಿಯಲ್ಲಿ ಇರುವುದು ಸಮಿತಿಗೆ ದಾಖಲಾತಿಗಳಿಂದ ಸ್ಪಷ್ಟವಾಗಿದೆ. ಅಂದರೆ 24.10.2009ರಿಂದ ಅನ್ವಯವಾಗುವಂತೆ ಗೊಲ್ಲಹಳ್ಳಿ ಗ್ರಾಮ ವ್ಯಾಪ್ತಿಯ ಎಲ್ಲಾ ಗಣಿಗಾರಿಕೆ ಗುತ್ತಿಗೆಗಳು ರದ್ದಾದ ನಂತರ ಇಲಾಖೆ ಅಕ್ರಮ ಗಣಿಗಾರಿಕೆಯನ್ನು ಪ್ರಸ್ತಾವಿತ ಪ್ರದೇಶದಲ್ಲಿ ನಿಯಂತ್ರಿಸಲು ಕ್ರಮ ಕೈಗೊಂಡಿರುವುದು ಸ್ಪಷ್ಟವಾಗಿದೆ. ಸಮಾನಾಂತರವಾಗಿ ನೈಸೆಲ್/ನೀಸೆಲ್ ಸಂಸ್ಥೆ ಕನಿಷ್ಠ ಅವಶ್ಯಕತೆಯಾದ ಹಾಗೂ ಸುರಕ್ಷತಾ ಕ್ರಮಗಳಾದ ಕಾಂಪೌಂಡ್ ನಿರ್ಮಾಣ, ತಂತಿ ಬೇಲಿ ನಿರ್ಮಾಣ, ಕಂದಕಗಳ ನಿರ್ಮಾಣ ಹಾಗೂ ಕಾವಲುಗಾರರ ನಿಯೋಜನೆಯಲ್ಲಿಯೂ ಸಹ ನಿರ್ಲಕ್ಷ್ಯತಾ ಧೋರಣೆಯನ್ನು ತಳೆದಿದೆ. ಈ ಎಲ್ಲಾ ಬೆಳವಣಿಗೆಗಳಿಂದ ಅಕ್ರಮ ಗಣಿಗಾರಿಕೆಯ ನಿಯಂತ್ರಣದಲ್ಲಿ ಖಾಸಗಿ ಪಾಲುದಾರರ ನೀರಸ ಪ್ರತಿಕ್ರಿಯೆ ಅನುಮಾನಾಸ್ಪದ ಎಂದು ಸಮಿತಿಯು ತೀರ್ಮಾನಿಸುತ್ತದೆ.

ವಾಸ್ತವಿಕವಾಗಿ ಬಿ.ಎಂ.ಐ.ಸಿ. ಯೋಜನಾ ಅನುಷ್ಠಾನ ಪ್ರದೇಶದಲ್ಲಿ ಗೊಲ್ಲಹಳ್ಳಿ ಗ್ರಾಮದ ಸರ್ವೆ ನಂ.39 ಹಾಗೂ 58ನ್ನು ಯೋಜನಾ ಅನುಷ್ಠಾನಕ್ಕೆ ಹಸ್ತಾಂತರಿಸುವ ಪೂರ್ವದಲ್ಲಿ 25 ಕಲ್ಲು ಗಣಿ ಗುತ್ತಿಗೆಗಳು ಚಾಲ್ತಿಯಲ್ಲಿರುವುದು ಸಮಿತಿಗೆ ಸ್ಪಷ್ಟವಾಗಿದೆ. ಅನಧಿಕೃತ ಗಣಿಗಾರಿಕೆಯನ್ನು ದೃಢೀಕರಿಸಿಕೊಳ್ಳುವ ಸಲುವಾಗಿ 2009ರಲ್ಲಿ ಕಲ್ಲು ಗಣಿ ಗುತ್ತಿಗೆಗಳು ರದ್ದಾದ ಅವಧಿಯವರೆಗೆ ಹೊರತೆಗೆದಿರುವ ಕಟ್ಟಡ ಕಲ್ಲು, ಉಪ ಖನಿಜದ ಪ್ರಮಾಣ ಹಾಗೂ 2015 ರಲ್ಲಿ ಸರ್ವೇಕ್ಷಣೆಯ ಮುಖಾಂತರ ಹೊರತೆಗೆದಿರುವ ಕಟ್ಟಡ ಕಲ್ಲಿನ ಪ್ರಮಾಣದ ವ್ಯತ್ಯಾಸವನ್ನು ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಇತ್ಯರ್ಥಗೊಳಿಸಿದೆ. ಗೊಲ್ಲಹಳ್ಳಿ ಗ್ರಾಮದ ಸರ್ವೆ ನಂ.39ರಲ್ಲಿನ 84 ಎಕರೆ 14 ಗುಂಟೆ ಮತ್ತು ಸರ್ವೆ ನಂ.58 ರಲ್ಲಿನ 31 ಎಕರೆ 14 ಗುಂಟೆ ಜಮೀನಿನಲ್ಲಿ ಸಮೀಕ್ಷೆ ಕೈಗೊಳ್ಳಲಾಗಿದೆ. ಅಂಕಿ ಅಂಶಗಳ ಪ್ರಕಾರ ಪ್ರಸ್ತಾವಿತ ಜಮೀನಿನಲ್ಲಿ 2009ನೇ ಸಾಲಿನಲ್ಲಿ ಕಲ್ಲು ಗಣಿ ಗುತ್ತಿಗೆಗಳ ರದ್ದಾದ ನಂತರ ಅನಧಿಕೃತವಾಗಿ ಕಲ್ಲು ಗಣಿಗಾರಿಕೆ ನಡೆಸಿ ಹೊರತೆಗೆದಿರುವ ಕಟ್ಟಡ ಕಲ್ಲಿನ ಉಪ ಖನಿಜದ ಪ್ರಮಾಣವು 1,72,80,719.25 ಅಂದರೆ ಈ ಪ್ರಮಾಣದ ಖನಿಜವನ್ನು 67ತಿಂಗಳುಗಳ ಅವಧಿಯಲ್ಲಿ ಅನಧಿಕೃತವಾಗಿ ರದ್ದಾದ ಗಣಿ ಪ್ರದೇಶಗಳಿಂದ ಹೊರತೆಗೆದಿರುವುದು ಅಂಕಿ ಅಂಶಗಳಿಂದ ಸಮಿತಿಗೆ ಸ್ಪಷ್ಟವಾಗಿದೆ. ಗಣಿಯಿಂದ ಹೊರತೆಗೆದಿರುವ ಖನಿಜ ಅಥವಾ ಕಲ್ಲನ್ನು ಸಾಗಾಣಿಕೆ ಮಾಡುವುದು ಅತ್ಯವಶ್ಯಕವಾಗಿರುತ್ತದೆ ಅಥವಾ ಪರ್ಯಾಯವಾಗಿ ಅನುಷ್ಠಾನಗೊಳಿಸಲಾಗುತ್ತಿರುವ ಕಾಮಗಾರಿಯಲ್ಲಿ ಬಳಸುವ ಸಾಧ್ಯತೆ ಇರುತ್ತದೆ.

ಸರಾಸರಿ ಆಧಾರದ ಮೇಲೆ ಪ್ರತಿ ತಿಂಗಳು 8,597 ಮೆಟ್ರಿಕ್ ಟನ್ ಕಲ್ಲನ್ನು ಗಣಿಗಾರಿಕೆಯಲ್ಲಿ ಸಂಸ್ಕರಿಸಿ ಸಾಗಾಣಿಕೆ ಮಾಡಲಾಗಿದೆ. ಈ ಅವಧಿಯಲ್ಲಿ ಪ್ರತಿದಿನ ಸುಮಾರು 8,597 ಮೆ.ಟನ್ ಕಲ್ಲಿನ ಗಣಿಗಾರಿಕೆ ಆಗಿದೆ ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ.ಈ ಹಿನ್ನೆಲೆಯಲ್ಲಿ ನೈಸೆಲ್/ನೀಸೆಲ್ ಸಂಸ್ಥೆ ತಮ್ಮ ಖಾಸಗಿ ಸುಪರ್ದಿಯಲ್ಲಿರುವ ಗೊಲ್ಲಹಳ್ಳಿ ಗ್ರಾಮದ ಸರ್ವೆ ನಂ.39 ಹಾಗೂ 58 ರಲ್ಲಿ 7 ವರ್ಷಗಳ ಅವಧಿಗೂ ಮೀರಿ ಅವ್ಯಾಹಿತವಾಗಿ ಅಕ್ರಮ ಗಣಿಗಾರಿಕೆಯಲ್ಲಿ ಭಾಗಿಯಾಗಿದೆ ಹಾಗೂ ಗಣಿಗಾರಿಕೆ ಉತ್ಪಾದನೆಯನ್ನು ವಿಲೇವಾರಿ ಮಾಡಿ ಅನಧಿಕೃತವಾಗಿ ಹಾಗೂ ನಿಯಮಬಾಹಿರವಾಗಿ ಆದಾಯವನ್ನು ಗಳಿಸಿದೆ ಎಂದು ಸಮಿತಿ ತೀರ್ಮಾನಿಸುತ್ತದೆ. ಈ ಪ್ರಮಾಣದ ಗಣಿಗಾರಿಕೆ ಹಾಗೂ ಸಾಗಾಣಿಕೆ ವಹಿವಾಟುಗಳು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಗಮನಕ್ಕೆ ಬರದೇ ಇರುವುದೂ ಸಹ ದುರ್ಲಭ ಸಾಧ್ಯತೆ ಎಂದು ಸಮಿತಿ ತೀರ್ಮಾನಿಸುತ್ತದೆ. 7 ವರ್ಷಗಳ ಹಿಂದೆ 20.08.2009 ರಂದು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಹಿರಿಯ ಭೂ ವಿಜ್ಞಾನಿಗಳು ನೈಸೆಲ್/ನೀಸೆಲ್ ಸಂಸ್ಥೆಗೆ 23.06.2007ರ ದರಗಳಲ್ಲಿ ವರ್ತುಲ ರಸ್ತೆಗೆ ಬಳಸಲಾಗಿರುವ ಉಪ ಖನಿಜಕ್ಕೆ ರಾಜಧನ ಪಾವತಿಸುವಂತೆ ಸೂಚಿಸಿರುತ್ತಾರೆ. ಪ್ರಸ್ತಾವಿತ ಉಲ್ಲೇಖದಲ್ಲಿ ರಾಜಧನ ಪಾವತಿಸುವಲ್ಲಿ ವಿಫಲವಾದಲ್ಲಿ, ನೈಸೆಲ್/ನೀಸೆಲ್ ಸಂಸ್ಥೆಯ ವಿರುದ್ಧ ಕೆ.ಎಂ.ಎಂ.ಸಿ.ಆರ್. 1994 ನಿಯಮಾವಳಿಗಳ ಅಡಿಯಲ್ಲಿ ಕ್ರಮ ಕೈಗೊಳ್ಳುವುದಾಗಿ ಉಲ್ಲೇಖಿಸಲಾಗಿದೆ. ಈ ಬೇಡಿಕೆಗೆ ಸ್ಪಂದಿಸಿರುವ ನೈಸೆಲ್/ನೀಸೆಲ್ ಸಂಸ್ಥೆ 31.08.2009ರ ಪತ್ರದ ಮುಖಾಂತರ ಕ್ರಿಯಾ ಒಪ್ಪಂದದ ಅನುಚ್ಛೇಧ 12ರ ಅಡಿಯಲ್ಲಿ ಯೋಜನಾ ಸಂಸ್ಥೆಯು **"ತೆರಿಗೆಗಳ"** ಪಾವತಿಯಿಂದ ವಿನಾಯಿತಿ ಪಡೆದಿರುವುದಾಗಿ ಸ್ಪಷ್ಟೀಕರಿಸಿರುತ್ತಾರೆ. ಮುಂದುವರಿದಂತೆ, ನೈಸೆಲ್/ನೀಸೆಲ್ ಸಂಸ್ಥೆ ಯೋಜನಾ ಅನುಷ್ಠಾನದ ಉಪ ಉತ್ಪನ್ನದ ಸ್ವರೂಪದಲ್ಲಿ ಲಭ್ಯವಾದ ಖನಿಜವನ್ನು ಬಳಸಿರುವುದಾಗಿ ಸ್ಪಷ್ಟೀಕರಿಸಿರುತ್ತಾರೆ. ಈ ಪತ್ರ ವ್ಯವಹಾರದ ನಂತರ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ರಾಜಧನಕ್ಕೆ ಸಂಬಂಧಿಸಿದಂತೆ ಯಾವುದೇ ಡಿಮ್ಯಾಂಡ್ ನೋಟೀಸ್ ಜಾರಿಗೊಳಿಸಿರುವ ಬಗ್ಗೆ ಸಮಿತಿಗೆ ದಾಖಲಾತಿಗಳು ಲಭ್ಯವಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಈ ಭಾರೀ ಪ್ರಮಾಣದ ಅಕ್ರಮ ಗಣಿಗಾರಿಕೆಯ ಬಗ್ಗೆ ನಿರ್ಲಿಪ್ತ ಹಾಗೂ ನಿರ್ಲಕ್ಷ್ಯದ ಧೋರಣೆಯನ್ನು ತಳೆದಿರುವುದು ಸಮಿತಿಗೆ ಮನದಟ್ಟಾಗಿದೆ.

ಬಿ.ಎಂ.ಐ.ಸಿ. ರಸ್ತೆ ಮತ್ತು ನೀಸೆಲ್ ವತಿಯಿಂದ ಅನುಷ್ಠಾನಗೊಳಿಸುತ್ತಿರುವ ವರ್ತುಲ ರಸ್ತೆ ನಿರ್ಮಾಣದ ಸಂದರ್ಭದಲ್ಲಿ ಪಥ ಹಾದು ಹೋಗುವ ಮಾರ್ಗದಲ್ಲಿ ಗುಡ್ಡಗಳನ್ನು ಸಮತಟ್ಟುಗೊಳಿಸುವುದು ಮೇಲ್ನೋಟಕ್ಕೆ ಸ್ಪಷ್ಟವಾಗಿದೆ. ಸಮಿತಿಯ ನಿರ್ದೇಶನಗಳ ಅನುಸಾರವಾಗಿ ಗುಡ್ಡಗಳನ್ನು ಸಮತಟ್ಟುಗೊಳಿಸಿರುವ ಪ್ರದೇಶದ ವ್ಯಾಪ್ತಿಯಲ್ಲಿ ಲಭ್ಯವಿದ್ದ ಉಪ ಖನಿಜದ ಪ್ರಮಾಣವನ್ನು ಅಂದಾಜಿಸಲಾಗಿದೆ. ಸಮತಟ್ಟುಗೊಳಿಸಲಾದ ಪ್ರದೇಶದಲ್ಲಿ ಹಾದು ಹೋಗುವ ರಸ್ತೆಯ ನಿರ್ಮಾಣಕ್ಕೆ ಮಾಡಿರುವ ಅಗೆತದ ಪರಿಣಾಮವಾಗಿ ಖಾಸಗಿ ಪಾಲುದಾರರಿಗೆ 21,07,355.58 ಮೆಟ್ರಿಕ್ ಟನ್ ಪ್ರಮಾಣದ ಉಪ ಖನಿಜ ಲಭ್ಯವಾಗಿದೆ ಎಂದು ಅಂದಾಜಿಸಲಾಗಿದೆ. ಪ್ರಸಕ್ತ ಸ್ಥಿತಿಯಲ್ಲಿ ಲಭ್ಯವಾಗಿರುವ ಉಪಕರಣಗಳನ್ನು ಕಾಮಗಾರಿಗಳ ಅನುಷ್ಠಾನದಲ್ಲಿ ಅಥವಾ ವಿಲೇವಾರಿ ಮುಖಾಂತರ ಬಳಸಿರುವ ಸಾಧ್ಯತೆ ಇರುತ್ತದೆ. ಈ ಎರಡೂ ಪ್ರಕರಣಗಳಲ್ಲಿ ನಿಯಮಾವಳಿಗಳ ಅನುಸಾರ ಬಳಸಲಾದ ಉಪಖನಿಜಕ್ಕೆ ರಾಜಧನವನ್ನು ಪಾವತಿಸಬೇಕಾಗುವುದು. ಇದಲ್ಲದೆ, ಉಪ ಖನಿಜದ ಹೊರತೆಗೆಯುವಿಕೆ, ಲಭ್ಯತೆ ಹಾಗೂ ಬಳಕೆಯ ಬಗ್ಗೆ ಇಲಾಖೆಯಿಂದ ಪೂರ್ವಭಾವಿಯಾಗಿ ಅನುಮತಿಯನ್ನು ಪಡೆಯದೇ ಇರುವ ಹಿನ್ನೆಲೆಯಲ್ಲಿ ಕೆ.ಎಂ.ಎಂ.ಸಿ.ಆರ್. ಅಧಿನಿಯಮ 1994ರ ಅಡಿಯಲ್ಲಿ ದಂಡವನ್ನು ಪಾವತಿಸುವುದು ಅತ್ಯವಶ್ಯಕ ಎಂದು ಸಮಿತಿ ತೀರ್ಮಾನಿಸುತ್ತದೆ.

ಮೇಲೆ ವಿಶ್ಲೇಷಿಸಿರುವ ಮೂರೂ ಪ್ರಕರಣಗಳಲ್ಲೂ ನಿಯಮಾವಳಿಗಳನುಸಾರ ರಾಜಧನವನ್ನು ಹಾಗೂ ದಂಡವನ್ನು ಪಾವತಿಸುವುದು ಅತ್ಯವಶ್ಯಕವಾಗಿರುತ್ತದೆ. ಎಂ.ಎಂ.ಡಿ.ಆರ್ ಅಧಿನಿಯಮ 1957ರ ಅನುಗುಣವಾಗಿ ಅನುಮತಿ ಅಥವಾ ಪರವಾನಗಿ ಇಲ್ಲದೇ ಗಣಿಗಾರಿಕೆ ನಡೆಸುವುದು ಕಾನೂನು ಬಾಹಿರವಾಗಿರುತ್ತದೆ. ಅನುಚ್ಛೇಧ 4(1)(ಎ) ಅಡಿಯಲ್ಲಿ ಅಧಿನಿಯಮದಲ್ಲಿ ನಿರೂಪಿಸಿರುವ ನಿರ್ಬಂಧನೆಗಳನ್ನು ಪಾಲಿಸದೇ ಉಪಖನಿಜಗಳನ್ನು ಸಾಗಾಣಿಕೆ ಮಾಡಿರುವುದನ್ನು ನಿರ್ಬಂಧಿಸಲಾಗಿದೆ.

ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿಗಳು 1994ರ ನಿಯಮ 43(5)ರ ಅನ್ವಯ ಬಾಕಿ ಇರುವ ರಾಜಧನದ 5 ಪಟ್ಟನ್ನು ದಂಡವಾಗಿ ವಿಧಿಸಬಹುದಾಗಿದೆ.

ಮೇಲೆ ಉಲ್ಲೇಖಿಸಿರುವ ನಿಯಮಾವಳಿಗಳ ಹಿನ್ನೆಲೆಯಲ್ಲಿ ಮೇಲೆ ವಿವರಿಸಿರುವ ಮೂರೂ ಸ್ತರಗಳಲ್ಲಿ ಖಾಸಗಿ ಪಾಲುದಾರರು ನಡೆಸಿರುವ ಅನಧಿಕೃತ ಗಣಿಗಾರಿಕೆಗೆ ಸಂಬಂಧಿಸಿದಂತೆ ಪಾವತಿಸಬೇಕಾದ ರಾಜಧನ ಹಾಗೂ ದಂಡದ ಕ್ರೋಢೀಕೃತ ವಿವರಗಳು ಕೆಳಕಂಡಂತಿದೆ:

| ಕ್ರಮ ಸಂಖ್ಯೆ | ಪ್ರಕರಣದ ಸ್ವರೂಪ | ಖನಿಜ/ಪ್ರಮಾಣ (ಮೆಟ್ರಿಕ್ ಟನ್) | ಮೊತ್ತ (ಕೋಟಿ ರೂ.ಗಳಲ್ಲಿ) |
|---|---|---|---|
| 1. | ಪರವಾನಗಿ ರದ್ದಾದ 25 ಗಣಿಗಳಲ್ಲಿ ಅಕ್ರಮ ಗಣಿಗಾರಿಕೆ | ಕಟ್ಟಡ ಕಲ್ಲು /1,72,80,719.25 | 179.45 (ಖನಿಜದ ಮೌಲ್ಯ) |
| 2. | ಬಿ.ಎಂ.ಐ.ಸಿ. ರಸ್ತೆ ಮತ್ತು ನೈಸ್ ವರ್ತುಲ ರಸ್ತೆ ನಿರ್ಮಾಣಕ್ಕೆ ಬಳಸಿರುವ ಉಪಖನಿಜ | 1. ಕಟ್ಟಡ ಕಲ್ಲು /22,09,121.80<br>2. ಸಾಧಾರಣ ಮರಳು /3,88,582.40 | 33.14<br>05.82 |
| 3. | ಬಿ.ಎಂ.ಐ.ಸಿ. ರಸ್ತೆ ಮತ್ತು ನೀಸ್ ವರ್ತುಲ ರಸ್ತೆ ಪಥದಲ್ಲಿ ಗುಡ್ಡಗಳನ್ನು ಸಮತಟ್ಟುಗೊಳಿಸಿ ಲಭ್ಯವಾದ ಉಪಖನಿಜದ ಪ್ರಮಾಣ | ಕಟ್ಟಡ ಕಲ್ಲು /21,07,355.88 | 24.04 |
| | | | 242.45 |

ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮ 1994ರ ಅನುಗುಣವಾಗಿ ಖಾಸಗಿ ಪಾಲುದಾರರು ಕಟ್ಟಡದ ಕಲ್ಲಿನ ಮೌಲ್ಯ ಹಾಗೂ ರಾಜಧನವನ್ನು ಒಳಗೊಂಡಂತೆ ರೂ.242.45 ಕೋಟಿ ರೂ.ಗಳನ್ನು ಪಾವತಿಸಬೇಕೆಂದು ಸಮಿತಿಯು ತೀರ್ಮಾನಿಸುತ್ತದೆ. ಈ ನಿರ್ಧಾರಕ್ಕೆ ಪೂರಕವಾಗಿ 2009 ರಲ್ಲಿ ನೈಸೆಲ್ ಸಂಸ್ಥೆಯು ಕ್ರಿಯಾ ಒಪ್ಪಂದದ ಅನುಚ್ಛೇಧ 12ರ ಅಡಿಯಲ್ಲಿ ತೆರಿಗೆಗಳಿಂದ ಇರುವ ವಿನಾಯಿತಿಯ ಬಗ್ಗೆ ಸ್ಪಷ್ಟೀಕರಿಸಿರುವುದನ್ನು ಸಮಿತಿ ಗಮನಿಸಿದೆ. ವಾಸ್ತವಿಕವಾಗಿ ಅನುಚ್ಛೇಧ 12ರ ಅಡಿಯಲ್ಲಿ ರಾಜ್ಯ ಹಾಗೂ ಸ್ಥಳೀಯ ತೆರಿಗೆಗಳ ಕಡಿತ ಹಾಗೂ ಸಂಪೂರ್ಣ ವಿನಾಯಿತಿಯ ಬಗ್ಗೆ ಪ್ರತಿಪಾದಿಸಲಾಗಿದೆ. ನಿರ್ದಿಷ್ಟವಾಗಿ ರಾಜ್ಯ ಹಾಗೂ ಸ್ಥಳೀಯ ತೆರಿಗೆಗಳು, ಶುಲ್ಕಗಳು, ನೋಂದಣಿ ಶುಲ್ಕ, ಮುದ್ರಾಂಕ ಶುಲ್ಕ ಹಾಗೂ ಪರಿವರ್ತನಾ ಶುಲ್ಕದ ಬಗ್ಗೆ ಪ್ರತಿಪಾದಿಸಲಾಗಿದೆ. ಸಮಗ್ರವಾಗಿ ಎಲ್ಲಾ ನಿರ್ಧಾರಣೆಗಳಿಂದ ವಿನಾಯಿತಿ ನೀಡಬೇಕು ಎನ್ನುವ ಅಭಿಪ್ರಾಯ ಪ್ರಸ್ತಾವಿತ ಅನುಚ್ಛೇಧದಲ್ಲಿ ವ್ಯಕ್ತವಾಗುತ್ತದೆ. ಈ ಅನುಚ್ಛೇಧದ ಉಪ ಕಂಡಿಕೆಗಳನ್ನು ಅವಲೋಕಿಸಿದಾಗ ವಿನಾಯಿತಿಗಳು

ಅನ್ವಯವಾಗುವ ಯೋಜನಾ ಪ್ರವೇಶವನ್ನು ಉಲ್ಲೇಖಿಸಲಾಗಿರುವುದು ಸ್ಪಷ್ಟವಾಗುತ್ತದೆ. ಇದರಡಿಯಲ್ಲಿ ಟೋಲ್ ರಸ್ತೆ, ಟೌನ್ ಶಿಪ್ ರಸ್ತೆ, ಸಾರ್ವಜನಿಕ ಬಳಕೆಯ ಸೌಲಭ್ಯ ಹಾಗೂ ಸಾಮಾನ್ಯ ಸೌಲಭ್ಯಗಳ ಬಗ್ಗೆ ಪ್ರತಿಪಾದಿಸಲಾಗಿದೆ. ಸಂಬಂಧಪಟ್ಟಂತೆ ಸರ್ಕಾರದಿಂದ ವಿನಾಯಿತಿ ಪಡೆಯಲು ಪಾಲಿಸಬೇಕಾದ ವಿಧಿವಿಧಾನಗಳ ಬಗ್ಗೆ ವಿವರಿಸಲಾಗಿದೆ. ಅನುಚ್ಛೇದ 12.3 ರ ಅಡಿಯಲ್ಲಿ ಕೆ.ಐ.ಎ.ಡಿ.ಬಿ. ಹಾಗೂ ಸರ್ಕಾರದ ಇತರ ಪ್ರಾಧಿಕಾರಗಳಿಗೆ ಶುಲ್ಕರಹಿತವಾಗಿ ಟೌನ್ ಶಿಪ್‌ಗಳನ್ನು ಹಸ್ತಾಂತರಿಸುವುದರಿಂದ ಈ ಸಂಸ್ಥೆಗಳು ಯೋಜನಾ ಅನುಷ್ಠಾನಕ್ಕೆ ಉತ್ತೇಜನ ನೀಡುವ ಸದಭಿಪ್ರಾಯದೊಂದಿಗೆ ವಿನಾಯಿತಿಯನ್ನು ಖಾಸಗಿ ಪಾಲುದಾರರಿಗೆ ನೀಡುವಲ್ಲಿ ಪೂರಕ ಪಾತ್ರ ತಳೆಯಬೇಕೆಂದು ವಿವರಿಸಲಾಗಿದೆ. ಕ್ರಿಯಾ ಒಪ್ಪಂದದ ಅನುಚ್ಛೇದ 12 ಅನ್ನು ಸಮಗ್ರವಾಗಿ ಅವಲೋಕಿಸಿದಾಗ ಪ್ರತಿಪಾದಿಸಲಾದ ಎಲ್ಲಾ ವಿನಾಯಿತಿಗಳೂ ಸಹ ತೆರಿಗೆ ಸ್ವರೂಪದ ನಿರ್ಧರಣೆಗಳಿಗೆ ಮಾತ್ರ ಅನ್ವಯಿಸಿರುವುದು ಸಮಿತಿಗೆ ಸ್ಪಷ್ಟವಾಗಿದೆ.

ಕ್ರಿಯಾ ಒಪ್ಪಂದದ ಅನುಚ್ಛೇಧ 12ರಲ್ಲಿ Taxes, Assessments and Levies ಎಂಬ ಪದವನ್ನು ಬಳಸಲಾಗಿದೆ. ಪ್ರಸಕ್ತ ಪ್ರಕರಣದಲ್ಲಿ ಗಣಿಗಾರಿಕೆ ಮಾಡಲಾದ ಕಬ್ಬಿಣ ಕಲ್ಲಿನ ಮೌಲ್ಯ ಹಾಗೂ ರಾಜಧನದ ಪಾವತಿ ಬಾಕಿ ಇದೆ. ಮಾನ್ಯ ಸರ್ವೋಚ್ಚ ನ್ಯಾಯಾಲಯವು ಪ್ರಕರಣ ಸಂಖ್ಯೆ 1532-1533/1993 ದಿನಾಂಕ 15.01.2000 ದಲ್ಲಿ ನೀಡಿರುವ ತೀರ್ಪನ್ನು ಈ ಸಂದರ್ಭದಲ್ಲಿ ಅವಲೋಕಿಸುವುದು ಸಮಂಜಸ ಎಂದು ಸಮಿತಿ ತೀರ್ಮಾನಿಸುತ್ತದೆ. ಸ್ಟೇಟ್ ಆಫ್ ವೆಸ್ಟ್ ಬೆಂಗಾಲ್ ವರ್ಸಸ್ ಕೆಸೋರಾಮ್ ಇಂಡಸ್ಟ್ರೀಸ್ ಲಿಮಿಟೆಡ್ ಪ್ರಕರಣದಲ್ಲಿ ರಾಜಧನವನ್ನು "ತೆರಿಗೆ" ಎಂದು ವ್ಯಾಖ್ಯಾನಿಸಿರುವುದು ಸಮರ್ಪಕವಲ್ಲ ಎಂದು ತೀರ್ಪು ನೀಡಿದೆ. ರಾಜಧನ, ಗುತ್ತಿಗೆಗೆ ನೀಡಿರುವ ಜಮೀನಿನಿಂದ ಗಳಿಸುವ ಖನಿಜದ ಹಕ್ಕಿಗೆ ಪರಿಹಾರಾರ್ಥವಾಗಿ ನೀಡುವ ಒಂದು ಮೌಲ್ಯ ಎಂದು ವ್ಯಾಖ್ಯಾನಿಸಲಾಗಿದೆ. ಈ ಹಿನ್ನೆಲೆಯಲ್ಲಿ ಕ್ರಿಯಾ ಒಪ್ಪಂದದ ಅನುಚ್ಛೇಧ 12 ರಲ್ಲಿ ವ್ಯಾಖ್ಯಾನಿಸಲಾಗಿರುವ Taxes, Assessments and Levies ಪ್ರವರ್ಗದಡಿಯಲ್ಲಿ ರಾಜಧನದಿಂದ ವಿನಾಯಿತಿ ಪಡೆಯುವುದು ಕ್ರಿಯಾ ಒಪ್ಪಂದದ ಅಸಮರ್ಪಕ ಬಳಕೆಯಾಗುತ್ತದೆ ಎಂದು ಸಮಿತಿ ಅಭಿಪ್ರಾಯ ಪಡುತ್ತದೆ. ರಾಜಧನಕ್ಕೆ Assessments ಅಥವಾ ನಿರ್ಧರಣೆ ಅನ್ವಯಿಸುವುದಿಲ್ಲ. Levies ಗೆ ಸಂಬಂಧಿಸಿದಂತೆ ಅನಧಿಕೃತ ಗಣಿಗಾರಿಕೆ ಅನ್ವಯವಾಗುವುದಿಲ್ಲವೆಂದು ಸಮಿತಿ ತೀರ್ಮಾನಿಸುತ್ತದೆ. ಪ್ರಸಕ್ತ ಪ್ರಕರಣದಲ್ಲಿ ಯೋಜನಾ ಅನುಷ್ಠಾನದ ಅವಧಿ ಕ್ರಿಯಾ ಒಪ್ಪಂದದ ನಿರೂಪಣೆಗೆ ಅನುಗುಣವಾಗಿ ಸಂಪೂರ್ಣಗೊಳ್ಳುವವರೆವಿಗೂ ಪ್ರಸ್ತಾವಿತ ಜಮೀನು ಖಾಸಗಿ ಪಾಲುದಾರರ ಸುಪರ್ದಿಯಲ್ಲಿರುತ್ತದೆ.

ಈ ವಿಶ್ಲೇಷಣೆಗೆ ಪೂರಕವಾಗಿ ನೈಸೆಲ್ ಸಂಸ್ಥೆಯೊಡನೆ ಅನುಷ್ಠಾನಗೊಳಿಸಲಾದ ಕ್ರಿಯಾ ಒಪ್ಪಂದದಲ್ಲಿ ಖಾಸಗಿ ಪಾಲುದಾರರು ಯೋಜನಾ ಅನುಷ್ಠಾನ ಪ್ರವೇಶದಲ್ಲಿ ಒಪ್ಪಂದದ ಪ್ರಕಾರ ಜಾರಿಗೊಳಿಸಬಹುದಾದ ಅಥವಾ ಅನುಷ್ಠಾನಗೊಳಿಸಬಹುದಾದ ಚಟುವಟಿಕೆಗಳನ್ನು ಪರಿಗಣಿಸುವುದು ಸೂಕ್ತವೆಂದು ಸಮಿತಿ ತೀರ್ಮಾನಿಸುತ್ತದೆ. ಕ್ರಿಯಾ ಒಪ್ಪಂದದ ಷೆಡ್ಯೂಲ್ 4ರ ಅಡಿಯಲ್ಲಿ ಖಾಸಗಿ ಪಾಲುದಾರರು ಕೈಗೊಳ್ಳಬಹುದಾದ ಚಟುವಟಿಕೆಗಳ ಬಗ್ಗೆ 21 ಶೀರ್ಷಿಕೆಗಳಡಿಯಲ್ಲಿ ವಿವರಗಳನ್ನು ನೀಡಲಾಗಿದೆ. ಇದನ್ನು ಅವಲೋಕಿಸಿದಾಗ ಮೈನಿಂಗ್ ಹಾಗೂ ಕ್ವಾರಿಯಿಂಗ್ ಚಟುವಟಿಕೆಗಳನ್ನು ಕೈಗೊಳ್ಳಲು ಯಾವುದೇ ಅವಕಾಶವನ್ನು ಕಲ್ಪಿಸದೇ ಇರುವುದು ಸಮಿತಿಗೆ ಸ್ಪಷ್ಟವಾಗಿದೆ. ಈ ಹಿನ್ನೆಲೆಯಲ್ಲಿ ಖಾಸಗಿ [illegible] [illegible] [illegible] [illegible] ಅಸ್ತಿತ್ವದಲ್ಲಿರುವ ಜಮೀನು ಹಸ್ತಾಂತರಿಸುವ ಸರ್ಕಾರ [illegible] [illegible] [illegible] [illegible] [illegible] ಜವಾಬ್ದಾರರಾಗುತ್ತಾರೆ ಎಂದು [illegible]

F11 (O)

*ಒಪ್ಪಂದದ ಸ್ಪಷ್ಟ ಉಲ್ಲಂಘನೆಯಾಗಿಯುವುದರಿಂದ ರಾಜಧನ ಹಾಗೂ ನಿಯಮಾವಳಿಗಳ ಅನುಸಾರ ವಿಧಿಸಬಹುದಾದ ದಂಡವನ್ನು ಖಾಸಗಿ ಪಾಲುದಾರರಿಂದ ಕಡ್ಡಾಯವಾಗಿ ವಸೂಲಿ ಮಾಡಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.*

ಬಿ.ಎಂ.ಐ.ಸಿ. ರಸ್ತೆ ಮತ್ತು ನೀಸ್ ವರ್ತುಲ ರಸ್ತೆ ನಿರ್ಮಾಣದ ಸಂದರ್ಭದಲ್ಲಿ ಗುಡ್ಡಗಳನ್ನು ಸಮತಟ್ಟುಗೊಳಿಸಿದ್ದು, ಈ ಪ್ರಕ್ರಿಯೆಯಲ್ಲಿ ಲಭ್ಯವಾದ ಖನಿಜಕ್ಕೆ ಸಂಬಂಧಿಸಿದಂತೆ ಕೆ.ಎಂ.ಎಂ.ಸಿ.ಆರ್. 1994 ರ ನಿಯಮ 44(3)ರ ಅಡಿಯಲ್ಲಿ ದಂಡವು ಒಳಗೊಂಡಂತೆ 24.04 ಕೋಟಿ ರೂ.ಗಳ ರಾಜಧನವನ್ನು ವಿಧಿಸಬಹುದಾಗಿದೆ. ವಾಸ್ತವಿಕವಾಗಿ ಕಾಮಗಾರಿಗಳ ಅನುಷ್ಠಾನದಲ್ಲಿ ದೊರಕುವ ಖನಿಜಗಳಿಗೂ ಸಹ ರಾಜಧನವನ್ನು ವಿಧಿಸಬೇಕಾಗುವುದು. ಈ ಷರತ್ತು ಕಾಮಗಾರಿಯ ಅನುಷ್ಠಾನದಲ್ಲಿ ದೊರಕುವ ಖನಿಜ ಹಾಗೂ ಕಾಮಗಾರಿ ಅನುಷ್ಠಾನಕ್ಕೆ ಬಳಸುವ ಖನಿಜ ಈ ಎರಡೂ ಅಂಶಗಳಿಗೆ ಅನ್ವಯವಾಗುತ್ತದೆ. ಸರ್ವೋಚ್ಛ ನ್ಯಾಯಾಲಯವು ಮೇಲ್ಮನವಿ 2235/1996 ದಿನಾಂಕ 24.11.2000 ಪ್ರಕರಣದಲ್ಲಿ ರೈಲ್ವೆ ಇಲಾಖೆಗೆ ಅನ್ವಯಿಸುವಂತೆ ಕಾಮಗಾರಿಗಳ ಅನುಷ್ಠಾನದ ಸಂದರ್ಭದಲ್ಲಿ ದೊರಕುವ ಖನಿಜಗಳನ್ನು ಕಾಮಗಾರಿಗಳ ಅನುಷ್ಠಾನದಲ್ಲಿ ಬಳಸಿದಲ್ಲಿ ರಾಜಧನ ಅನ್ವಯವಾಗುತ್ತದೆ ಹಾಗೂ ವಿಧಿಸಬಹುದಾಗಿದೆ ಎಂದು ನ್ಯಾಯಾಲಯ ನಿರ್ದೇಶಿಸಿದೆ. ಪ್ರಸ್ತಾವಿತ ಪ್ರಕರಣದಲ್ಲಿ ರೈಲ್ವೆ ಇಲಾಖೆಯು ಗುಡ್ಡದ ಕಡಿತದಿಂದ ಲಭಿಸುವ ಖನಿಜವನ್ನು ರೈಲ್ವೆ ಹಳಿಗಳನ್ನು ನಿರ್ಮಾಣ ಮಾಡಲು ಬಳಸಿದ್ದು, ನಿರ್ದಿಷ್ಟ ಗಣಿಗಾರಿಕೆ ಗುತ್ತಿಗೆ ಇಲ್ಲದಿದ್ದಾಗ್ಯೂ ಸಹ ಬಳಸಿದ ಖನಿಜಕ್ಕೆ ರಾಜಧನವನ್ನು ನೀಡಬೇಕಾಗುವುದು ಎಂದು ಮಾನ್ಯ ಸರ್ವೋಚ್ಛ ನ್ಯಾಯಾಲಯವು ತನ್ನ ತೀರ್ಪಿನಲ್ಲಿ ಉಲ್ಲೇಖಿಸಿದೆ.

*ಈ ಹಿನ್ನೆಲೆಯಲ್ಲಿ ರಸ್ತೆ ಪಥದ ಅಗೆತದಲ್ಲಿ ಲಭ್ಯವಾಗಿರುವ ಖನಿಜಕ್ಕೆ ಸಂಬಂಧಿಸಿದಂತೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಇತ್ಯರ್ಥಗೊಳಿಸಿರುವ ಖನಿಜ ಬಳಕೆಯ ಪ್ರಮಾಣಗಳ ಆಧಾರದ ಮೇಲೆ ದಂಡವನ್ನು ಒಳಗೊಂಡಂತೆ ರಾಜಧನವನ್ನು ಪಾವತಿಸುವುದು ನಿಯಮಾವಳಿಗಳ ಅನುಸಾರ ಕಡ್ಡಾಯ ಎಂದು ಸಮಿತಿ ತೀರ್ಮಾನಿಸುತ್ತದೆ. ಸರ್ವೋಚ್ಛ ನ್ಯಾಯಾಲಯದ ತೀರ್ಪಿನ ಅನುಗುಣವಾಗಿ ಬೆಳಗಾವಿ ಜಿಲ್ಲೆ ಮುಚ್ಚೂರು ಘಾಟ್ ಬಳಿ ರಸ್ತೆ ಪಥದಲ್ಲಿ ದೊರೆಯುವ ಖನಿಜಕ್ಕೆ ನಿಯಮಾನುಸಾರ ರಾಜಧನ ಪಾವತಿಸಿ ಕಾಮಗಾರಿಯಲ್ಲಿ ಬಳಸುವಂತೆ 22.02.2014 ರಂದು ವಿಶ್ವ ಬ್ಯಾಂಕ್ ಆಯೋಜಿತ ಕೆ-ಶಿಪ್ ಸಂಸ್ಥೆಗೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ನಿರ್ದೇಶಿಸಿರುವುದು 27.02.2015 ರ ಸುತ್ತೋಲೆಯಿಂದ ಸಮಿತಿಗೆ ಸ್ಪಷ್ಟವಾಗಿದೆ. ಲಭ್ಯವಿರುವ ಖನಿಜವನ್ನು ರಾಜಧನದ ಪಾವತಿಯ ನಿರ್ಬಂಧನೆಗೆ ಒಳಪಟ್ಟಂತೆ ಬಳಸುವ ಬಗ್ಗೆ ಗೋವಾ ರಾಜ್ಯದ ಗಡಿಯಾದ ಮಾಜಾಳಿಯಿಂದ ಉತ್ತರ ಕನ್ನಡದ ಜಿಲ್ಲೆಯ ಗಡಿಯವರೆಗೆ 143.8 ಕಿ.ಮೀ. ರಸ್ತೆ ನಿರ್ಮಾಣದ ಕಾಮಗಾರಿಯಲ್ಲಿ ಗುತ್ತಿಗೆದಾರರು ಪ್ರಶ್ನಿಸಿದ್ದು, ಸರ್ವೋಚ್ಛ ನ್ಯಾಯಾಲಯದ ತೀರ್ಪಿನ ಅನುಸಾರ ರಾಜಧನ ಪಾವತಿಸುವುದು ಕಡ್ಡಾಯ ಎಂದು ಇಲಾಖೆ ಸ್ಪಷ್ಟೀಕರಿಸಿದೆ. ಈ ಹಿನ್ನೆಲೆಯಲ್ಲಿ ರಾಜಧನ ಹಾಗೂ ದಂಡದ ಮೊತ್ತಕ್ಕೆ ಅನ್ವಯಿಸುವಂತೆ ಖಾಸಗಿ ಪಾಲುದಾರರಿಗೆ ನೋಟೀಸನ್ನು ಜಾರಿ ಮಾಡಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.*

ಬಿ.ಎಂ.ಐ.ಸಿ. ಯೋಜನಾ ಅನುಷ್ಠಾನ ಪ್ರದೇಶದಲ್ಲಿ ವ್ಯಾಪಕವಾಗಿ ಅಕ್ರಮ ಗಣಿಗಾರಿಕೆ 2009 ರಿಂದಲೂ ನಡೆದಿರುವುದು ಸಮಿತಿಯ ನಿರ್ದೇಶನಗಳ ಅನುಗುಣವಾಗಿ ಗಣಿ ಮತ್ತು ಭೂವಿಜ್ಞಾನ ಇಲಾಖೆ ಕೈಗೊಂಡಿರುವ ಸರ್ವೇಕ್ಷಣೆಯ ವರದಿಯಿಂದ ಸಾಬಿತಾಗಿದೆ. ಇಲಾಖೆ ಅಕ್ರಮ ಗಣಿಗಾರಿಕೆಯ ಆಧಾರದ ಮೇಲೆ ದಾಖಲಿಸಿರುವ ಎಫ್.ಐ.ಆರ್. ಗಳು 7 ವರ್ಷಗಳ ಅವಧಿಯಲ್ಲಿ ಕೇವಲ 13 ಆಗಿರುತ್ತದೆ. *ಈ ಅಂಕಿ ಅಂಶಗಳು ತುಲನಾತ್ಮಕವಾಗಿ ವಿಶ್ಲೇಷಿಸಿದಾಗ ಗಣಿ ಮತ್ತು ಭೂ ವಿಜ್ಞಾನ ಇಲಾಖೆ 7 ವರ್ಷಗಳ ಅವಧಿಯಲ್ಲಿ ನಡೆದಿರುವ 1.72 ಕೋಟಿ ಮೆಟ್ರಿಕ್ ಟನ್ ಪ್ರಮಾಣದ ಅಕ್ರಮ*

*ಗಣಿಗಾರಿಕೆಯನ್ನು ನಿಯಂತ್ರಿಸುವಲ್ಲಿ ಉದ್ದೇಶಪೂರ್ವಕವಾಗಿ ನಿರ್ಲಕ್ಷ್ಯತಾ ಧೋರಣೆ ತಳೆದಿರುವುದಾಗಿ ಸಮಿತಿ ಅಭಿಪ್ರಾಯ ಪಡುತ್ತದೆ. ಇದಲ್ಲದೆ, 2009 ರಲ್ಲಿ ಕ್ರಿಯಾ ಒಪ್ಪಂದದ ಅನುಚ್ಛೇಧ 12ರ ಅಡಿಯಲ್ಲಿ ಖಾಸಗಿ ಪಾಲುದಾರರು ಕ್ಲೈಮು ಮಾಡಿರುವ ವಿನಾಯಿತಿಯ ಬಗ್ಗೆ ಗಣಿ ಮತ್ತು ಭೂವಿಜ್ಞಾನ ಇಲಾಖೆ 7 ವರ್ಷಗಳಿಗೂ ಮೀರಿ ನಿರ್ಲಿಪ್ತತಾ ಧೋರಣೆಯನ್ನು ತಳೆದಿದೆ. ಅನುಚ್ಛೇಧ 12ರ ಬಗ್ಗೆ 2009 ರಿಂದ ಕಾನೂನು ಇಲಾಖೆ ಹಾಗೂ ಕಾನೂನು ತಜ್ಞರಿಂದ ಯಾವುದೇ ಅಭಿಪ್ರಾಯವನ್ನು ಪಡೆಯದೇ ಇರುವುದು ಇಲಾಖೆಯ ನಿರ್ಲಕ್ಷ್ಯತಾ ಧೋರಣೆಗೆ ಕೈಗನ್ನಡಿಯಾಗಿದೆ. ಇದರಿಂದಾಗಿ, 2009-2015ರ ಅವಧಿಯಲ್ಲಿ 242.45 ಕೋಟಿ ರೂ.ಗಳ ಮೌಲ್ಯದ ಖನಿಜವನ್ನು ಅಕ್ರಮವಾಗಿ ತೆಗೆಯುವಲ್ಲಿ ಹಾಗೂ ಬಳಸುವಲ್ಲಿ ಇಲಾಖೆ ಪರೋಕ್ಷವಾಗಿ ಪಾಲುದಾರಿಕೆ ವಹಿಸಿದೆ ಎಂದು ಸಮಿತಿ ತೀರ್ಮಾನಿಸುತ್ತದೆ. ಈ ಹಿನ್ನೆಲೆಯಲ್ಲಿ ಈ ಗುರುತರ ವೈಫಲ್ಯಕ್ಕೆ ಕಾರಣರಾದ ನಿರ್ದೇಶಕರು ಹಾಗೂ ಹಿರಿಯ ಭೂ ವಿಜ್ಞಾನಿಗಳ ವಿರುದ್ಧ ನಿಯಮಾವಳಿಗಳ ಅನುಷ್ಠಾನದಲ್ಲಿ ಕರ್ತವ್ಯ ಲೋಪವನ್ನು ಎಸಗಿರುವವರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.*

*ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ನೈಸೆಲ್ ಹಾಗೂ ನೀಸ್ ಸಂಸ್ಥೆ 242.45 ಕೋಟಿ ರೂ.ಗಳ ಮೌಲ್ಯದ ಅನುದ್ದೇಶಿತ ಆದಾಯವನ್ನು ಪಡೆದಿದೆ ಎಂದು ಸಮಿತಿ ತೀರ್ಮಾನಿಸುತ್ತದೆ. ಇದರಿಂದಾಗಿ ಮೂಲ ಕ್ರಿಯಾ ಒಪ್ಪಂದಕ್ಕೆ ಪೂರಕವಾಗಿ ಪ್ರತಿಪಾದಿಸಲಾಗಿರುವ ಸ್ವೀಕೃತಿಯ ದರಗಳು ಅಸಮಂಜಸವಾಗುತ್ತದೆ. ವಾಸ್ತವಿಕ ಸ್ಥಿತಿಗತಿಗಳ ಆಧಾರದ ಮೇಲೆ ಖಾಸಗಿ ಪಾಲುದಾರರಿಗೆ ಲಭ್ಯವಾಗುವ ಯೋಜನೆಯ ಪ್ರತಿಫಲಗಳನ್ನು ಪ್ರಸಕ್ತ ಸಂದರ್ಭದಲ್ಲಿ ಉದ್ದೇಶಿತ ಆದಾಯ ಹಾಗೂ ಅನುದ್ದೇಶಿತ ಆದಾಯ ಈ ಎರಡೂ ಅಂಶಗಳ ಮೇಲೆ ಪರಿಷ್ಕರಣ ಮಾಡುವ ಅವಶ್ಯಕತೆ ಇರುತ್ತದೆ ಎಂದು ಸಮಿತಿ ಅಭಿಪ್ರಾಯ ಪಡುತ್ತದೆ. ಆದುದರಿಂದ ಪ್ರಸ್ತಾವಿತ 242.45 ಕೋಟಿ ರೂ.ಗಳನ್ನು ಖಾಸಗಿ ಪಾಲುದಾರರಿಗೆ ಮೂಲ ಕ್ರಿಯಾ ಒಪ್ಪಂದದ ಪ್ರಕಾರ ಲಭ್ಯವಾಗುವ ಪ್ರತಿಫಲಕ್ಕೆ ಸೇರ್ಪಡೆ ಮಾಡಿ ಸೂಕ್ತ ಅನುಪಾತದಲ್ಲಿ ಟೋಲ್ ಕನ್ಸೆಷನ್ ಅವಧಿಯನ್ನು ಪರಿಷ್ಕರಿಸಲು ಸರ್ಕಾರವು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.*

ಪ್ರಸಕ್ತ ಪ್ರಕರಣದಲ್ಲಿ ದಿನಾಂಕ 22.11.2003 ರಂದು ಗೊಲ್ಲಹಳ್ಳಿ ಗ್ರಾಮದ ಸರ್ವೆ ನಂ.38, 39 ಹಾಗೂ 58 ರಲ್ಲಿ 120.30 ಎಕರೆ ಜಮೀನನ್ನು ಭೌತಿಕವಾಗಿ ನೈಸೆಲ್ ಸಂಸ್ಥೆಗೆ ಹಸ್ತಾಂತರ ಮಾಡಲಾಗಿದೆ. ಆದರೆ ಪ್ರಸ್ತಾವಿತ ಗಣಿ ಗುತ್ತಿಗೆಗಳ ಊರ್ಜಿತ ಅವಧಿ ಮುಕ್ತಾಯಗೊಂಡ ನಂತರ ವಿಳಂಬಿತವಾಗಿ 24.10.2009 ರಂದು ಅಧಿಕೃತವಾಗಿ ಗುತ್ತಿಗೆಗಳನ್ನು ರದ್ದತಿಗೊಳಿಸಲಾಗಿದೆ. ಊರ್ಜಿತ ಅವಧಿ ಹಾಗೂ ಗುತ್ತಿಗೆ ರದ್ದತಿಯಲ್ಲಾಗಿರುವ ವಿಳಂಬದ ವಿವರಗಳು ಕೆಳಕಂಡಂತಿದೆ:

| ಕ್ರ. ಸಂ. | ಗುತ್ತಿಗೆದಾರರ ಹೆಸರು | ಕಲ್ಲು ಗಣಿ ಗುತ್ತಿಗೆ ಸಂಖ್ಯೆ | ವಿಸ್ತೀರ್ಣ (ಎಕರೆ ಗಳಲ್ಲಿ) | ಗುತ್ತಿಗೆ ಮಂಜೂರಾತಿ ದಿನಾಂಕ | ಅವಧಿ | ಗುತ್ತಿಗೆ ಅಂತ್ಯಗೊಂಡ ದಿನಾಂಕ | ಗುತ್ತಿಗೆ ಅಂತ್ಯಗೊಂಡ ದಿನಾಂಕ ಹಾಗೂ ರದ್ದತಿಯ ದಿನಾಂಕದ ವ್ಯತ್ಯಾಸ |
|---|---|---|---|---|---|---|---|
| 1. | ಅಕ್ಕಯ್ಯಮ್ಮ | 435 | 2.00 | 27.01.1997 | 10 ವರ್ಷ | 26.01.2007 | 2 ವರ್ಷ |
| 2. | ಹಮೀದಾಬೇಗಂ | 113 | 1.12 | 23.12.2000 | 5 ವರ್ಷ | 22.12.2005 | 4 ವರ್ಷ |
| 3. | ಎಲ್. ಮುನಿರಾಜು | 187 | 2.00 | 25.02.2002 | 5 ವರ್ಷ | 24.02.2007 | 2 ವರ್ಷ |
| 4. | ಗುರುನಾಥ ಗ್ರಾನೈಟ್ಸ್ | 145 | 2.00 | 20.06.2001 | 5 ವರ್ಷ | 19.06.2006 | 3 ವರ್ಷ |
| 5. | ಕೃಷ್ಣ ಸ್ಟೋನ್ಸ್ | 201 | 1.00 | 21.05.2001 | 5 ವರ್ಷ | 20.05.2006 | 3 ವರ್ಷ |
| 5. | ವೆಂಕಟೇಶ್ವರ ಕ್ರಷರ್ಸ್ | 253 | 5.00 | 26.09.1995 | 10 ವರ್ಷ | 25.09.2005 | 4 ವರ್ಷ |
| 7. | ವಿಠಲ್ ಅಸೋಸಿಯೇಟ್ಸ್ | 161 | 2.00 | 28.08.2001 | 5 ವರ್ಷ | 27.09.2006 | 3 ವರ್ಷ |
| 8. | ಮುನಿರಾಜು ಪಿ | 153 | 3.00 | 04.08.2001 | 5 ವರ್ಷ | 03.08.2006 | 3 ವರ್ಷ |
| 9. | ಕೆ. ನಾಗರಾಜು | 268 | 0.25 | 01.04.2003 | 5 ವರ್ಷ | 31.03.2008 | 2 ವರ್ಷ |
| 10. | ಮ.ವೆಸ್ಟರ್ನ್ ಗ್ರಾನೈಟ್ಸ್ | 104 | 3.00 | 12.09.2000 | 5 ವರ್ಷ | 11.09.2005 | 4 ವರ್ಷ |

| ಕ್ರ. ಸಂ. | ಗುತ್ತಿಗೆದಾರರ ಹೆಸರು | ಹಳ್ಳಿ ಗಣಿ ಗುತ್ತಿಗೆ ಸಂಖ್ಯೆ | ವಿಸ್ತೀರ್ಣ (ಎಕರೆ ಗಳಲ್ಲಿ) | ಗುತ್ತಿಗೆ ಮಂಜೂರಾತಿ ದಿನಾಂಕ | ಅವಧಿ | ಗುತ್ತಿಗೆ ಅಂತ್ಯಗೊಂಡ ದಿನಾಂಕ | ಗುತ್ತಿಗೆ ಅಂತ್ಯಗೊಂಡ ದಿನಾಂಕ ಹಾಗೂ ರದ್ದತಿಯ ದಿನಾಂಕದ ವ್ಯತ್ಯಾಸ |
|---|---|---|---|---|---|---|---|
| 11. | ಆರ್. ಶ್ರೀನಿವಾಸ್ | 97 | 1.00 | 06.06.2000 | 5 ವರ್ಷ | 05.06.2005 | 4 ವರ್ಷ |
| 12. | ಕೆ.ಪಿ. ರಹೀಂ ಖಾನ್ | 100 | 1.00 | 10.01.1995 | 10 ವರ್ಷ | 09.01.2005 | 4 ವರ್ಷ |
| 13. | ಕೆ.ಪಿ. ರಹೀಂ ಖಾನ್ | 101 | .20 | 12.08.1999 | 5 ವರ್ಷ | 11.08.2004 | 5 ವರ್ಷ |
| 14. | ಆರ್. ಚಾಂದ್ ಪಾಷಾ | 102 | .20 | 12.08.1999 | 5 ವರ್ಷ | 11.08.2004 | 5 ವರ್ಷ |
| 15. | ಮೆ. ಗುರು ಗ್ರಾನೈಟ್ಸ್ | 29 | 4.00 | 25.03.1995 | 10 ವರ್ಷ | 24.03.2005 | 4 ವರ್ಷ |
| 16. | ಹೆಚ್.ಎನ್. ನಾಗರಾಜು | 138 | .30 | 14.05.2001 | 5 ವರ್ಷ | 13.05.2006 | 3 ವರ್ಷ |

ಮೇಲಿನ ಕೋಷ್ಟಕವನ್ನು ಗಮನಿಸಿದಾಗ ಸರ್ವೆ ನಂ.39 ಹಾಗೂ 58 ಗೊಲ್ಲಹಳ್ಳಿ ಗ್ರಾಮದ 25 ಗಣಿ ಗುತ್ತಿಗೆಗಳ ಪೈಕಿ 16 ಗಣಿ ಗುತ್ತಿಗೆಗಳಿಗೆ ಅನ್ವಯಿಸುವಂತೆ ವಾಸ್ತವಿಕವಾಗಿ ಗುತ್ತಿಗೆಯ ಊರ್ಜಿತ ಅವಧಿ ಮುಗಿದ 2 ರಿಂದ 5 ವರ್ಷದ ವಿಳಂಬದ ನಂತರ ಗಣಿ ಮತ್ತು ಭೂ ವಿಜ್ಞಾನ ಇಲಾಖೆ 24.10.2009 ರಂದು ಗುತ್ತಿಗೆಗಳನ್ನು ರದ್ದುಪಡಿಸುವುದು ಸ್ಪಷ್ಟವಾಗಿದೆ. ಮೇಲ್ನೋಟಕ್ಕೆ ಗುತ್ತಿಗೆ ಊರ್ಜಿತ ಅವಧಿ ಮುಗಿದ ನಂತರ ಉಲ್ಲೇಖಿತ ಪರವಾನಗಿದಾರರು ಅನಧಿಕೃತವಾಗಿ 2 ರಿಂದ 5 ವರ್ಷದ ಅವಧಿಯವರೆಗೆ ಅನಧಿಕೃತವಾಗಿ ಗಣಿಗಾರಿಕೆ ನಡೆಸಿದ್ದಾರೆ ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. ಗಣಿ ಗುತ್ತಿಗೆದಾರಿಕೆಯ ಪರವಾನಗಿಯ ನವೀಕರಣ ಅಥವಾ ವಿಸ್ತರಣೆಯ ಬಗ್ಗೆ ನಿರ್ದಿಷ್ಟ ದಾಖಲಾತಿಗಳು ಸಮಿತಿಗೆ ಲಭ್ಯವಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಗಣಿ ಗುತ್ತಿಗೆದಾರಿಕೆಯ ಪರವಾನಗಿಗಳ ನಿರ್ವಹಣೆಯಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆ ನಿರ್ಲಕ್ಷ್ಯತಾ ಧೋರಣೆಯನ್ನು ತಳೆದಿರುವುದು ಸಮಿತಿಗೆ ಸ್ಪಷ್ಟವಾಗಿದೆ. ಊರ್ಜಿತ ಅವಧಿಯ ನಂತರವೂ ಅನಧಿಕೃತ ಗಣಿಗಾರಿಕೆ ನಿಯಂತ್ರಿಸುವಲ್ಲಿ ವಿಫಲವಾಗಿರುವ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರನ್ನು ಗುರುತಿಸಿ ಕರ್ತವ್ಯ ಲೋಪದ ಆಧಾರದ ಮೇಲೆ ಶಿಸ್ತಿನ ಕ್ರಮ ಜರುಗಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

ಎರಡನೇ ಸ್ತರದಲ್ಲಿ ಈಗಾಗಲೇ ಈ ವರದಿಯಲ್ಲಿ ಉಲ್ಲೇಖಿಸಿರುವಂತೆ ದಿನಾಂಕ 22.11.2003 ರಂದು ಅಧಿಕೃತವಾಗಿ ಪ್ರಸ್ತಾವಿತ ಜಮೀನನ್ನು ನೈಸೆಲ್ ಸಂಸ್ಥೆಗೆ ಸ್ವಾಧೀನದ ಪ್ರಕಾರ ಹಸ್ತಾಂತರಿಸಲಾಗಿದೆ. ಆದರೆ, 6 ವರ್ಷಗಳ ವಿಳಂಬದ ನಂತರ 24.10.2009 ರಂದು ಗಣಿ ಗುತ್ತಿಗೆಯನ್ನು ಅಧಿಕೃತವಾಗಿ ರದ್ದುಪಡಿಸಲಾಗಿದೆ. ಈ ಅತೀವ ವಿಳಂಬವು ಇಲಾಖೆಯ ನಿರ್ಲಕ್ಷ್ಯತಾ ಧೋರಣೆಗೆ ಸ್ಪಷ್ಟ ನಿದರ್ಶನವಾಗಿದೆ ಎಂದು ಸಮಿತಿ ತೀರ್ಮಾನಿಸುತ್ತದೆ. 22.11.2003 ರಿಂದ ಆಗಸ್ಟ್ 2009ರ ಅವಧಿಯಲ್ಲಿ ಲೋಕೋಪಯೋಗಿ ಇಲಾಖೆಯಾಗಲೀ ಕೆ.ಐ.ಎ.ಡಿ.ಬಿ. ಯಾಗಲೀ ಅಥವಾ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಾಗಲೀ ಪ್ರಸ್ತಾವಿತ ಗಣಿಗಾರಿಕೆಯ ಪರವಾನಗಿಗಳನ್ನು ನವೀಕರಿಸುವ ಅಥವಾ ರದ್ದುಪಡಿಸುವ ಅಥವಾ ಕನಿಷ್ಟ ಪಕ್ಷ ಗಂಭೀರವಾಗಿ ಅವಲೋಕಿಸಿ ಕ್ರಮ ಕೈಗೊಂಡಿರುವ ಬಗ್ಗೆ ಸಮಿತಿಗೆ ದಾಖಲಾತಿಗಳಿಂದ ವ್ಯಕ್ತವಾಗಿರುವುದಿಲ್ಲ. ಈ ಎರಡೂ ಸ್ತರಗಳಲ್ಲಿ ಆಗಿರುವ ವೈಫಲ್ಯತೆಗೆ ಕಾರಣಕರ್ತರಾಗಿರುವವರನ್ನು ಗುರುತಿಸಿ ಕ್ರಮ ಜರುಗಿಸಬೇಕೆಂದು ಸಮಿತಿ ಶಿಫಾರಸ್ಸು ಮಾಡುತ್ತದೆ. ಬಿ.ಎಂ.ಐ.ಸಿ. ಯೋಜನಾ ಅನುಷ್ಠಾನದ ಜವಾಬ್ದಾರಿಯನ್ನು ಹೊತ್ತಿರುವ ವಿವಿಧ ಇಲಾಖೆಗಳ ನಡುವೆ ಇರುವ ಸಮನ್ವಯತೆಯ ಕೊರತೆಗೆ ಈ ಪ್ರಕರಣವ ಒಂದು ಸ್ಪಷ್ಟ ನಿದರ್ಶನವಾಗಿದೆ ಎಂದು ಸಮಿತಿ ತೀರ್ಮಾನಿಸುತ್ತದೆ. ಯೋಜನಾ ಅನುಷ್ಠಾನದ ಸಮಗ್ರ ಸಮನ್ವಯತೆಯ ಜವಾಬ್ದಾರಿಯನ್ನು ಹೊತ್ತಿರುವ ಲೋಕೋಪಯೋಗಿ ಇಲಾಖೆ ಕೆ.ಐ.ಎ.ಡಿ.ಬಿ.ಯ ಸಹಯೋಗದೊಂದಿಗೆ ಸ್ವಾಧೀನ ಪ್ರಕ್ರಿಯೆಗೆ ಒಳಪಟ್ಟಿರುವ ಜಮೀನಿನ ಬಳಕೆಯ ಸ್ವರೂಪದ ಬಗ್ಗೆ ಕ್ರೋಢೀಕೃತವಾಗಿ ಮಾಹಿತಿಯನ್ನು ಸಮಿತಿಯು ನಿರ್ವಹಿಸಲು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

ನೈಸೆಲ್/ನೀಸೆಲ್ ಸಂಸ್ಥೆಯು 22.11.2003 ರಂದು ಪ್ರಸ್ತಾವಿತ ಜಮೀನಿನ ಸ್ವಾಧೀನವನ್ನು ಅಧಿಕೃತವಾಗಿ ಪಡೆದುಕೊಂಡ ನಂತರ ಅನಧಿಕೃತ ಗಣಿಗಾರಿಕೆಯ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುವಲ್ಲಿ ವಿಳಂಬತಾ ಧೋರಣೆಯನ್ನು ತಳೆದಿರುವುದು ಅನುಮಾನಾಸ್ಪದ ಎಂದು ಸಮಿತಿ ತೀರ್ಮಾನಿಸುತ್ತದೆ. ಏಕೆಂದರೆ, ಸಮಿತಿಗೆ ಲಭ್ಯವಿರುವ ದಾಖಲಾತಿಗಳ ಅನುಗುಣವಾಗಿ ನೈಸೆಲ್ ಸಂಸ್ಥೆ ತನ್ನ ಸುಪರ್ದಿಯಲ್ಲಿರುವ ಜಮೀನಿನ ಅನಧಿಕೃತ ಗಣಿಗಾರಿಕೆ ಬಗ್ಗೆ 2010 ರಲ್ಲಿ ಅಂದರೆ ಸ್ವಾಧೀನ ತೆಗೆದುಕೊಂಡ 7 ವರ್ಷಗಳ ವಿಳಂಬದ ನಂತರ ಸರ್ಕಾರದ ಗಮನವನ್ನು ಸೆಳೆದಿರುವುದು ದಾಖಲಾತಿಗಳಿಂದ ಸಮಿತಿಗೆ ಸ್ಪಷ್ಟವಾಗಿದೆ. ಆದುದರಿಂದ ನೈಸೆಲ್/ನೀಸೆಲ್ ಸಂಸ್ಥೆಯೂ ಸಹ ಅನಧಿಕೃತ ಗಣಿಗಾರಿಕೆ ಚಟುವಟಿಕೆಯ ಬಗ್ಗೆ ನಿರ್ಲಕ್ಷತಾ ಧೋರಣೆಯನ್ನು ತಳೆದಿರುವುದು ವಿವಾದಾತ್ಮಕ ಹಾಗೂ ಸಂಶಯಾಸ್ಪದ ಎಂದು ಸಮಿತಿಯು ತೀರ್ಮಾನಿಸುತ್ತದೆ.

ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಕಸಬಾ ಹೋಬಳಿ ಭೀಮನಕೆರೆ ಗ್ರಾಮದ ಸರ್ವೆ ನಂ.120 ರಲ್ಲಿ ಈಗಾಗಲೇ ಚರ್ಚಿಸಿರುವ ಸ್ವರೂಪದಲ್ಲಿ ಅನಧಿಕೃತ ಗಣಿಗಾರಿಕೆ ನಡೆದಿರುವ ಬಗ್ಗೆ ಸಮಿತಿಯು ವಿಚಾರ ವಿನಿಮಯ ನಡೆಸಿತು. ಪ್ರಸ್ತಾವಿತ ಸರ್ವೆ ನಂಬರಿನ 9 ಎಕರೆ ಸರ್ಕಾರಿ ಜಮೀನನ್ನು ಬಿ.ಎಂ.ಐ.ಸಿ. ಯೋಜನಾ ಅನುಷ್ಠಾನಕ್ಕೆ 07.10.1999 ರಂದು ನೈಸೆಲ್ ಸಂಸ್ಥೆಗೆ ಹಸ್ತಾಂತರ ಮಾಡಲಾಗಿತ್ತು. ಪ್ರಸ್ತಾವಿತ ಸರ್ವೆ ನಂಬರುಗಳಲ್ಲಿ 15 ಗಣಿ ಗುತ್ತಿಗೆ ಪರವಾನಗಿಯನ್ನು ನೀಡಲಾಗಿದ್ದು, 23.11.2001 ರಿಂದ 05.12.2004 ರ ಅವಧಿಯಲ್ಲಿ ಈ ಪರವಾನಗಿಯನ್ನು ರದ್ದುಗೊಳಿಸಿರುವುದು ಸಮಿತಿಗೆ ದಾಖಲಾತಿಗಳಿಂದ ವ್ಯಕ್ತವಾಗಿದೆ. ಪರವಾನಗಿ ನೀಡಿದ ಪ್ರದೇಶದ ವಿಸ್ತೀರ್ಣ 14.04 ಎಕರೆಗಳಾಗಿರುತ್ತದೆ. ದಿನಾಂಕ 18.08.2012 ರಂದು ಮಂಡ್ಯ ಜಿಲ್ಲೆಯ ಹಿರಿಯ ಭೂ ವಿಜ್ಞಾನಿ ಸ್ಥಳ ಪರಿವೀಕ್ಷಣೆ ಕೈಗೊಂಡು ಅನಧಿಕೃತ ಗಣಿಗಾರಿಕೆಗೆ ಬಳಸಲಾಗುತ್ತಿದ್ದ ಕಂಪ್ರೆಸರ್, ಟ್ರ್ಯಾಕ್ಟರ್ ಇತ್ಯಾದಿಗಳನ್ನು ಪೋಲೀಸ್ ಠಾಣಾ ವಶಕ್ಕೆ ನೀಡಿ ಕೆ.ಎಂ.ಎಂ.ಸಿ.ಆರ್. 1994 ಅಡಿಯಲ್ಲಿ 74,500 ರೂ.ಗಳ ದಂಡವನ್ನು ವಿಧಿಸಿರುವುದು ದಾಖಲಾತಿಗಳಿಂದ ಸಮಿತಿಗೆ ಮನದಟ್ಟಾಗಿದೆ. ದಿನಾಂಕ 15.05.2015ರ ಸ್ಥಳ ಪರಿವೀಕ್ಷಣೆಯ ಅನುಗುಣವಾಗಿ ಗಣಿಗಾರಿಕೆ ಸ್ಥಗಿತಗೊಂಡಿದ್ದು, ಪ್ರಸಕ್ತ ಸ್ಥಿತಿಗತಿಗಳ ಬಗ್ಗೆ ಛಾಯಾಚಿತ್ರಗಳನ್ನು ಸಮಿತಿಗೆ ನೀಡಲಾಗಿದೆ. ***ಗೊಲ್ಲಹಳ್ಳಿ ಗ್ರಾಮದ ಸರ್ವೆ ನಂ.39 ಹಾಗೂ 58 ರಲ್ಲಿ ದೃಢೀಕೃತವಾಗಿರುವ ಅಕ್ರಮ ಗಣಿಗಾರಿಕೆಯ ಹಿನ್ನೆಲೆಯಲ್ಲಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಈ ಗಣಿಯಲ್ಲಿ ಲಭ್ಯವಿರುವ ಖನಿಜ, ಉಪ ಖನಿಜಗಳ ಅನಧಿಕೃತ ಬಳಕೆಯನ್ನು ನಿಯಂತ್ರಿಸಲು ಪೂರ್ವಭಾವಿಯಾಗಿ ಕ್ರಮಗಳನ್ನು ಜಾರಿಗೊಳಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.***

## *XXVI. ಅನುಚ್ಛೇಧ – 13 – ಮನವಿಗಳು ಹಾಗೂ ಖಾತ್ರಿಗಳು*

ಅನುಚ್ಛೇಧ 13.1.3 ಅನ್ನು ಅವಲೋಕಿಸಿದಾಗ ಖಾಸಗಿ ಪಾಲುದಾರರು ಕ್ರಿಯಾ ಒಪ್ಪಂದದ ನಿರ್ಬಂಧನೆಗಳಿಗೆ ಬದ್ಧರಾಗಿರುವುದು ಕಡ್ಡಾಯವಾಗಿದ್ದು, ಉಲ್ಲಂಘನೆಯಾದ ಪ್ರಕರಣಗಳಲ್ಲಿ ಕ್ರಿಯಾ ಒಪ್ಪಂದವನ್ನು ಸರ್ಕಾರವು ಜಾರಿಗೊಳಿಸಬಹುದು ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. ಈ ವರದಿಯ ಇತರೆ ಭಾಗಗಳಲ್ಲಿ ಈಗಾಗಲೇ ವಿಶ್ಲೇಷಿಸಿರುವಂತೆ ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪು ಕ್ರಿಯಾ ಒಪ್ಪಂದವನ್ನು ದೃಢೀಕರಿಸಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಹಾಗೂ ಖಾಸಗಿ ಪಾಲುದಾರರು ಕ್ರಿಯಾ ಒಪ್ಪಂದವನ್ನು ಕಟ್ಟುನಿಟ್ಟಾಗಿ ಪಾಲಿಸುವ ಅವಶ್ಯಕತೆ ಇರುತ್ತದೆ. ಹಲವಾರು ಸಂದರ್ಭಗಳಲ್ಲಿ ಅಂದರೆ ಖಾಸಗಿ ಜಮೀನಿನ ಅವಶ್ಯಕತೆಯನ್ನು ನಿರೂಪಿಸುವಾಗ ಅಥವಾ ವರದಿಯ ವಿವಿಧ ಭಾಗಗಳಲ್ಲಿ ಖಾಸಗಿ ಪಾಲುದಾರರು ಪಡೆದಿರುವ ಅನುದ್ದೇಶಿತ ಲಾಭಗಳಿಗೆ ಅಥವಾ ಸವಲತ್ತುಗಳಿಗೆ

ಸಂಬಂಧಿಸಿದಂತ ಕ್ರಿಯಾ ಒಪ್ಪಂದದ ನೇರ ಹಾಗೂ ಸ್ಪಷ್ಟ ಉಲ್ಲಂಘನೆಯಾಗಿರುವುದು ಸಮಿತಿಗೆ ಸ್ಪಷ್ಟವಾಗಿದೆ. ಆದಾಗ್ಯೂ, ಲೋಕೋಪಯೋಗಿ ಇಲಾಖೆ ಅಥವಾ ಸರ್ಕಾರವು ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪನ್ನು ಉಲ್ಲಂಘಿಸಿರುವ ಬಗ್ಗೆ ನ್ಯಾಯಾಂಗ ನಿಂದನೆ ಅಥವಾ ಇತರೆ ಸ್ವರೂಪದ ದಾವೆಗಳನ್ನು ಹೂಡಿರುವ ಬಗ್ಗೆ ಸಮಿತಿಗೆ ಮಾಹಿತಿ ಇರುವುದಿಲ್ಲ. *ಈ ಹಿನ್ನಲೆಯಲ್ಲಿ ಕ್ರಿಯಾ ಒಪ್ಪಂದದ ಈ ಉಪ ಕಂಡಿಕೆ ಉಲ್ಲಂಘನೆಯಾಗಿದೆ ಎಂದು ಸಮಿತಿ ಅಭಿಪ್ರಾಯ ಪಡುತ್ತದೆ. ಹಾಗೂ ಖಾಸಗಿ ಪಾಲುದಾರರ ವಿರುದ್ಧ ನಿರ್ದಿಷ್ಟವಾಗಿ ಸೋಮಶೇಖರ ರೆಡ್ಡಿ ಪ್ರಕರಣದ ಕಂಡಿಕೆ 51ರ ಉಲ್ಲಂಘನೆಯ ಆಧಾರದ ಮೇಲೆ ಕಾನೂನು ಕ್ರಮ ಜರುಗಿಸುವ ಪ್ರಸ್ತಾವನೆಯನ್ನು ಸರ್ಕಾರವು ಪರಿಗಣಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.*

*ಅನುಚ್ಛೇಧ 13.1.4 ರ ಅಡಿಯಲ್ಲಿ ಕ್ರಿಯಾ ಒಪ್ಪಂದದ ಪಾಲನೆಯು ಯಾವುದೇ ಅಧಿಶಾಸನ, ತೀರ್ಪು, ಆದೇಶ, ನ್ಯಾಯಾಂಗದ ನಿರ್ದೇಶನಗಳು ಹಾಗೂ ಖಾಸಗಿ ಪಾಲುದಾರರಿಗೆ ಸಂಬಂಧಿಸಿದ ಆರ್‌ಬಿಟ್ರೇಶನ್ ತೀರ್ಪುಗಳ ನಿರ್ಬಂಧನೆಗೆ ಒಳಪಟ್ಟಿರುವುದಿಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸಲಾಗಿದೆ. ಅಂದರ ಕ್ರಿಯಾ ಒಪ್ಪಂದದ ಅನುಷ್ಠಾನ ಈ ಯಾವುದೇ ಘಟಕಗಳಿಂದ ನಿರ್ಬಂಧಿತವಾಗುವುದಿಲ್ಲ ಎಂದು ಕಂಪನಿ ಉಲ್ಲೇಖಿಸಿದೆ. ಆದರೆ ಈ ವರದಿಯ ವಿವಿಧ ಭಾಗಗಳಲ್ಲಿ ಪ್ರತಿಪಾದಿಸಿರುವಂತೆ ಯೋಜನಾ ಅನುಷ್ಠಾನದಲ್ಲಿ ಕಾನೂನು ಸಂದಿಗ್ಧತೆ ವ್ಯಾಪಕವಾಗಿದ್ದು, ಕ್ರಿಯಾ ಒಪ್ಪಂದದ ಪಾಲನೆಯಲ್ಲಿ ಸಂದಿಗ್ಧತೆ ಉಂಟಾಗಿದೆ. ಸೋಮಶೇಖರ ರೆಡ್ಡಿ ಪ್ರಕರಣದಲ್ಲಿ ಹಾಗೂ ಇದಕ್ಕೆ ಸಂಬಂಧಿತ ಮೇಲ್ಮನವಿಗಳಲ್ಲಿ ಉಚ್ಛ ಹಾಗೂ ಸರ್ವೋಚ್ಛ ನ್ಯಾಯಾಲಯಗಳ ತೀರ್ಪನ್ನು ಉಲ್ಲಂಘಿಸಿರುವ ಬಗ್ಗೆ ಈ ವರದಿಯಲ್ಲಿ ಪ್ರತಿಪಾದಿಸಲಾಗಿದೆ. ಈ ಹಿನ್ನಲೆಯಲ್ಲಿ ಕ್ರಿಯಾ ಒಪ್ಪಂದದ ಈ ಅನುಚ್ಛೇಧ ಸ್ಪಷ್ಟವಾಗಿ ಉಲ್ಲಂಘನೆಯಾಗಿದೆ ಎಂದು ಸಮಿತಿಯು ತೀರ್ಮಾನಿಸುತ್ತದೆ.*

## *XXVII. ಅನುಚ್ಛೇಧ – 15.4–FORCE MAJEURE ಷರತ್ತುಗಳ ಬಗ್ಗೆ.*

ಈ ಕೆಳಗೆ ನಮೂದಿಸಿದ ಘಟನಾವಳಿಗಳು/ಸಂದರ್ಭಗಳು/ಬೆಳವಣಿಗೆಗಳು ಈ ಷರತ್ತುಗಳ ಅನುಷ್ಠಾನಕ್ಕೆ ಪೂರಕವಾಗಿದೆ ಎಂದು ಸಮಿತಿಯು ಅಭಿಪ್ರಾಯ ಪಡುತ್ತದೆ:

1. ನೈಸೆಲ್/ನೀಸೆಲ್ ಸಂಸ್ಥೆಯು 64 ಕಿ.ಮೀ. ಉದ್ದದ ಟೋಲ್ ರಸ್ತೆಯನ್ನು ಸಿಮೆಂಟ್ ಕಾಂಕ್ರೀಟ್ ವಿನ್ಯಾಸದಲ್ಲಿ ಫೈನಾನ್ಷಿಯಲ್ ಕ್ಲೋಷರ್ ಆದ 8 ವರ್ಷಗಳ ಅವಧಿಯೊಳಗೆ ಸಂಪೂರ್ಣಗೊಳಿಸಬೇಕಾಗಿದ್ದು, ಈ ನಿರ್ಬಂಧನೆಯನ್ನು ಪಾಲಿಸುವಲ್ಲಿ ವಿಫಲವಾಗಿದೆ. ಈ ಅನುಚ್ಛೇಧದ ಅನುಗುಣವಾಗಿ ಸರ್ಕಾರವು ಕ್ರಮ ಕೈಗೊಳ್ಳಬಹುದಾಗಿದೆ.
2. ನೈಸೆಲ್ ಸಂಸ್ಥೆಯು ಯೋಜನೆಯ ಸೆಕ್ಷನ್ 'ಎ' ಘಟಕವನ್ನು ನೀಸೆಲ್ ಸಂಸ್ಥೆಗೆ ವಹಿಸಿಕೊಟ್ಟಿದೆ. ಈ ಸೆಕ್ಷನ್ 'ಎ' ಘಟಕದಲ್ಲಿ ಸಂಬಂಧಿತ ನಗರ ಸಮುಚ್ಛಯವೆಂದು ವ್ಯಾಖ್ಯಾನಿಸಿ ಟೌನ್‌ಶಿಪ್–1 ಅನ್ನು ಸೇರ್ಪಡೆ ಮಾಡಲಾಗಿದೆ. ಈ ವ್ಯವಸ್ಥೆಯನ್ನು ಫೈನಾನ್ಷಿಯಲ್ ಕ್ಲೋಷರ್ ಸಾಧಿಸುವ ಉದ್ದೇಶದಿಂದ ಮಾಡಲಾಗಿದ್ದು, ಇದು ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನ ಸ್ಪಷ್ಟ ಉಲ್ಲಂಘನೆಯಾಗಿರುವ ಹಿನ್ನಲೆಯಲ್ಲಿ ಈ ಅನುಚ್ಛೇಧದಲ್ಲಿ ಸರ್ಕಾರವು ಕ್ರಮ ಜರುಗಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಏಕೆಂದರೆ, ಅನುಷ್ಠಾನ ಘಟಕದ ಪರಿಷ್ಕರಣೆ ಹಾಗೂ ಸಂಬಂಧಿತ ನಗರ ಸಮುಚ್ಛಯದ ಸೇರ್ಪಡೆ ಪ್ರಕ್ರಿಯೆಗೆ ಸಚಿವ ಸಂಪುಟದ ಅನುಮೋದನೆ ಇರುವುದಿಲ್ಲ ಹಾಗೂ ದಿನಾಂಕ 06.10.1999 ರಂದು ಜಾರಿಗೊಳಿಸಲಾದ ಪೂರಕ ಒಡಂಬಡಿಕೆಗೆ ಇದು ವಿರುದ್ಧವಾಗಿದೆ.

೩. ೦೯.೦೩.೨೦೦೨ ರಂದು ಅನುಷ್ಠಾನಗೊಳಿಸಲಾದ ಅನಧಿಕೃತ ತ್ರಿಪಕ್ಷೀಯ ಒಪ್ಪಂದದಲ್ಲಿ ೧೦ ಇಂಟರ್ ಛೇಂಜ್ ವ್ಯಾಪ್ತಿಯಲ್ಲಿನ ಜಮೀನಿನ ಅಭಿವೃದ್ಧಿ ಹಾಗೂ ಮಾರಾಟದ ಷರತ್ತನ್ನು ಸೇರ್ಪಡೆ ಮಾಡಲಾಗಿದೆ. ಈ ಪರಿಷ್ಕರಣೆ ಕ್ರಿಯಾ ಒಪ್ಪಂದದ ಷರತ್ತುಗಳಿಗೆ ವ್ಯತಿರಿಕ್ತವಾಗಿರುವುದರಿಂದ ಸರ್ಕಾರವು ಈ ಅನುಚ್ಛೇಧದಡಿ ಕ್ರಮ ಕೈಗೊಳ್ಳುವ ಪ್ರಸ್ತಾವನೆಯನ್ನು ಪರಿಶೀಲಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

4. ಸಂಬಂಧಿತ ನಗರ ಸಮುಚ್ಛಯದ ಸೇರ್ಪಡೆ ಹಾಗೂ ಇಂಟರ್ ಛೇಂಜ್ ವ್ಯಾಪ್ತಿಯ ಜಮೀನಿನ ಅಭಿವೃದ್ಧಿ ಹಾಗೂ ಮಾರಾಟ, ಹೊಸದಾಗಿ ಪರಿಷ್ಕರಿಸಲಾದ ಸೆಕ್ಷನ್ 'ಎ' ಅಡಿಯಲ್ಲಿ ಹೆಚ್ಚುವರಿಯಾಗಿ ಸೇರ್ಪಡೆ ಮಾಡಿದ ಸೌಲಭ್ಯಗಳಾಗಿದೆ. ಆದುದರಿಂದ ಸೆಕ್ಷನ್ 'ಎ' ವ್ಯಾಪ್ತಿಯಲ್ಲಿ ಮೂಲ ಕ್ರಿಯಾ ಒಪ್ಪಂದದಲ್ಲಿ ಪ್ರತಿಪಾದಿಸಲಾಗಿರುವ ಟೋಲ್ ರಸ್ತೆ ಬಂಡವಾಳ ಹೂಡಿಕೆಯನ್ನು ಕ್ರಿಯಾ ಒಪ್ಪಂದ ಹಾಗೂ ಯೋಜನಾ ತಾಂತ್ರಿಕ ವರದಿಯ ಮಾನದಂಡಗಳ ಅನುಗುಣವಾಗಿ ದೃಢೀಕರಿಸಿಕೊಳ್ಳಲು ಸರ್ಕಾರವು ಆರ್ಥಿಕ ಸಂಸ್ಥೆಗಳಿಂದ ಸಮಗ್ರ ವಿವರಗಳನ್ನು ಪಡೆದು ನಿಯತಕಾಲಿಕ ಮರುಪಾವತಿಯನ್ನು ಪರಿವೀಕ್ಷಿಸುವ ವ್ಯವಸ್ಥೆಯನ್ನು ಜಾರಿಗೊಳಿಸಲು ಕಾನೂನು ರೀತ್ಯಾ ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಆಗ್ರಹಿಸುತ್ತದೆ. ಕ್ರಿಯಾ ಒಪ್ಪಂದದ ಅನುಚ್ಛೇಧ 22.5 ರ ಅಡಿಯಲ್ಲಿ ಪ್ರತಿಪಾದಿಸಿರುವ ಗೌಪ್ಯತೆಯ ಷರತ್ತಿನ ದುರ್ಬಳಕೆಯನ್ನು ನಿಯಂತ್ರಿಸಲು ಸರ್ಕಾರವು ಕಾನೂನು ರೀತ್ಯ ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಏಕೆಂದರೆ, ಈ ಷರತ್ತು ಖಾಸಗಿ ಪಾಲುದಾರರು ಹಾಗೂ ಸರ್ಕಾರವು ಯೋಜನಾ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸ್ವೀಕರಿಸಿರುವ ಮಾಹಿತಿಯನ್ನು ಗೌಪ್ಯವಾಗಿಡಬೇಕೆಂದು ಪ್ರತಿಪಾದಿಸಿದೆ. ಖಾಸಗಿ ಪಾಲುದಾರರಿಗೆ ಯೋಜನಾ ಅನುಷ್ಠಾನದ ಅತ್ಯವಶ್ಯಕವಾದ ಮಾಹಿತಿಯನ್ನು ಸರ್ಕಾರಕ್ಕೆ ನೀಡುವುದನ್ನು ನಿರಾಕರಿಸುವ ಬಗ್ಗೆ ಉಲ್ಲೇಖವಿರುವುದಿಲ್ಲ. ಇದಲ್ಲದೆ, ಮಾಹಿತಿ ಹಕ್ಕು ನಿಯಮದಡಿ ಪ್ರಸಕ್ತ ಸ್ಥಿತಿಯಲ್ಲಿ ಈ ಷರತ್ತು ತನ್ನ ಔಚಿತ್ಯತೆ ಹಾಗೂ ಸಮಂಜಸತೆಯನ್ನು ಕಳೆದುಕೊಂಡಿದೆ.

## XXVIII. *ಅನುಚ್ಛೇಧ 16.1–ಅನುಷ್ಠಾನದ ವೈಫಲ್ಯತೆಗಳು ಹಾಗೂ ಯೋಜನೆಯನ್ನು ಅಂತ್ಯಗೊಳಿಸಲು ಜಾರಿಗೊಳಿಸಬೇಕಾದ ಪ್ರಕ್ರಿಯೆಗಳ ಬಗ್ಗೆ ಸಮಿತಿಯ ವಿಶ್ಲೇಷಣೆ ಹಾಗೂ ಶಿಫಾರಸ್ಸುಗಳು:*

ಈ ಅನುಚ್ಛೇಧದಡಿಯಲ್ಲಿ ಕರ್ನಾಟಕ ಸರ್ಕಾರ ಈ ಕ್ರಿಯಾ ಒಪ್ಪಂದದ ಅಡಿಯಲ್ಲಿ ಜಾರಿಗೊಳಿಸಲು ಅಥವಾ ಪಾಲಿಸಲು ಅಥವಾ ಬದ್ಧವಾಗಿರುವ ಕ್ರಮಗಳನ್ನು ಕೈಗೊಳ್ಳುವಲ್ಲಿ ವಿಳಂಬವಾದಲ್ಲಿ ಅದೇ ಅನುಪಾತದಲ್ಲಿ ಯೋಜನಾ ಅನುಷ್ಠಾನ ಅವಧಿಯನ್ನು, ನಿರ್ಧಿಷ್ಟವಾಗಿ ಟೋಲ್ ಕನ್ಸೆಷನ್ ಅವಧಿಯಿಂದ ವಿಸ್ತರಿಸಲು ಅವಕಾಶವನ್ನು ಕಲ್ಪಿಸಲಾಗಿದೆ. ಈ ವರದಿಯ ಸಂಬಂಧಿತ ಭಾಗದಲ್ಲಿ ಚರ್ಚಿಸಿರುವಂತೆ ಯೋಜನಾ ಅನುಷ್ಠಾನಕ್ಕೆ ಅನುಚ್ಛೇಧ 6.6.1 ರಲ್ಲಿ ನಿಗದಿಪಡಿಸಲಾಗಿರುವ ಕಾಲಮಿತಿ ಉಲ್ಲಂಘನೆಯಾಗಿರುವುದು ಸ್ಪಷ್ಟವಾಗಿದೆ. ಹಲವಾರು ಸಾರ್ವಜನಿಕ ಹಿತಾಸಕ್ತಿಯ ಪ್ರಕರಣಗಳು ಮೇಲ್ಮನವಿಗಳು, ವಿವಿಧ.ಸ್ತರದ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳು, ತಡೆಯಾಜ್ಞೆಗಳು ಹಾಗೂ ಮಧ್ಯಂತರ ಆದೇಶಗಳು ಯೋಜನಾ ಅನುಷ್ಠಾನದಲ್ಲಿ ಕ್ಲಿಷ್ಟತೆ ಹಾಗೂ ಸಂದಿಗ್ಧತೆಯನ್ನು ಉಂಟು ಮಾಡಿದೆ. ಈ ಸನ್ನಿವೇಶದಲ್ಲಿ ನಿರ್ಧಿಷ್ಟವಾಗಿ ಯೋಜನಾ ಅನುಷ್ಠಾನದಲ್ಲಾಗಿರುವ ವಿಳಂಬಕ್ಕೆ ಜವಾಬ್ದಾರಿಯನ್ನು ನಿಗದಿಪಡಿಸುವ ಪ್ರಕ್ರಿಯೆ ನಿರರ್ಥಕವಾಗುತ್ತದೆ ಎಂದು ಸಮಿತಿಯು ಅಭಿಪ್ರಾಯ ಪಡುತ್ತದೆ. ಆದಾಗ್ಯೂ, ಖಾಸಗಿ ಪಾಲುದಾರರು ಕ್ರಿಯಾ ಒಪ್ಪಂದದ ಫೇಸ್–1 ಹಾಗೂ ಫೇಸ್–2 ಅಂದರೆ ಲಿಂಕ್ ರಸ್ತೆ, ಪೆರಿಫರಲ್ ರಸ್ತೆ ಹಾಗೂ ವೇಗದ ಹೆದ್ದಾರಿಯ ಪ್ರಥಮ 12 ಕಿ.ಮೀ. ಭಾಗವನ್ನು ಹೊರತುಪಡಿಸಿ ಈವರೆವಿಗೂ ಯಾವುದೇ ಗುರುತರ ಪ್ರಗತಿಯನ್ನು ಇತರ ಸ್ತರಗಳಲ್ಲಿ

ಸಾಧಿಸಿರುವುದಿಲ್ಲ. ಮೂಲ ಕ್ರಿಯಾ ಒಪ್ಪಂದದ ಅನುಗುಣವಾಗಿ ಮೊದಲನೇ ಸ್ತರವನ್ನು 2009 ರಲ್ಲಿ ಸಂಪೂರ್ಣಗೊಳಿಸಬೇಕಾಗುತ್ತದೆ. ಎರಡನೇ ಸ್ತರವನ್ನು 2012 ರಲ್ಲಿ ಸಂಪೂರ್ಣಗೊಳಿಸಿ ಬಾಕಿ ಇರುವ ಟೋಲ್ ರಸ್ತೆಯನ್ನು 2017 ಅಂತ್ಯಕ್ಕೆ ಸಂಪೂರ್ಣಗೊಳಿಸಬೇಕಾಗುವುದು. ಕ್ರಿಯಾ ಒಪ್ಪಂದಕ್ಕೆ ಜಾರಿಗೊಳಿಸಲಾದ ಪರಿಷ್ಕರಣೆಗಳು, ಮಾರ್ಪಾಡುಗಳು ಹಾಗೂ ತಿದ್ದುಪಡಿಗಳ ಅನುಗುಣವಾಗಿ ಪರಿಷ್ಕೃತ ಯೋಜನಾ ಅನುಷ್ಠಾನದ ಸ್ತರಗಳು ಕೆಳಕಂಡಂತಿದೆ:

*ಸೆಕ್ಷನ್ 'ಎ' – 9.8 ಕಿ.ಮೀ. ಲಿಂಕ್ ರಸ್ತೆ, 41 ಕಿ.ಮೀ. ಪೆರಿಫೆರಲ್ ರಸ್ತೆ, 12 ಕಿ.ಮೀ. ವೇಗದ ಹೆದ್ದಾರಿ ಹಾಗೂ ನಗರ ಸಮೂಹಗಳು 1 ಮತ್ತು 2*

*ಸೆಕ್ಷನ್ 'ಬಿ' – 34 ಕಿ.ಮೀ. ವೇಗದ ಹೆದ್ದಾರಿ, ನಗರ ಸಮೂಹಗಳು 4 ಮತ್ತು 5*

*ಸೆಕ್ಷನ್ 'ಸಿ' – 70 ಕಿ.ಮೀ. ವೇಗದ ಹೆದ್ದಾರಿ ಮತ್ತು ನಗರ ಸಮೂಹ 7*

ವಾಸ್ತವಿಕವಾಗಿ ಭೌತಿಕ ಪ್ರಗತಿಯನ್ನು ಸಾಧಿಸಲು ನಿಗದಿಪಡಿಸಿದ ದಿನಾಂಕಗಳನ್ನು ಫೈನಾನ್ಷಿಯಲ್ ಕ್ಲೋಷರ್ ಸಾಧಿಸಿದ ದಿನಾಂಕದಿಂದ ಪರಿಗಣಿಸಬೇಕಾಗುವುದು. ಏಪ್ರಿಲ್ 2004 ರಲ್ಲಿ ಫೈನಾನ್ಷಿಯಲ್ ಕ್ಲೋಷರ್ ಅನ್ನು ಸಾಧಿಸಲಾಗಿದೆ. ಈ ಫೈನಾನ್ಷಿಯಲ್ ಕ್ಲೋಷರ್ ಯೋಜನಾ ಅನುಷ್ಠಾನದ ಸೆಕ್ಷನ್ 'ಎ' ಭಾಗಕ್ಕೆ ಅನ್ವಯಿಸುತ್ತದೆ. ಈ ಸ್ತರವನ್ನು 2008 ರಲ್ಲಿ ಭಾಗಶಃ ಸಂಪೂರ್ಣಗೊಳಿಸಲಾಗಿದೆ. ಖಾಸಗಿ ಪಾಲುದಾರರು ಪೆರಿಫೆರಲ್ ಮತ್ತು ಲಿಂಕ್ ರಸ್ತೆಯ ಗುರುತರ ಭಾಗಕ್ಕೆ ಅನ್ವಯಿಸುವಂತೆ Completion Certificate ಗಳನ್ನು ನೀಡುವಂತೆ ಕೋರಿರುತ್ತಾರೆ. ಆದಾಗ್ಯೂ ಮೂಲ ಕ್ರಿಯಾ ಒಪ್ಪಂದದಲ್ಲಿ ನಿಗದಿಪಡಿಸಲಾಗಿರುವ ಗುರಿಗಳು ಪರಿಷ್ಕೃತ ಸನ್ನಿವೇಶದಲ್ಲಿ ಅಸಮರ್ಪಕ ಹಾಗೂ ಅಸಮಂಜಸವಾಗಿದೆ ಎಂದು ಸಮಿತಿ ತೀರ್ಮಾನಿಸುತ್ತದೆ. ಪ್ರಸಕ್ತ ಸನ್ನಿವೇಶದಲ್ಲಿ ಯೋಜನಾ ಅನುಷ್ಠಾನಕ್ಕೆ ಕರ್ನಾಟಕ ಸರ್ಕಾರ ನೀಡಬಹುದಾದ ಜಮೀನಿನ ವಿಸ್ತೀರ್ಣವು ಖಚಿತವಾಗಿ ಇತ್ಯರ್ಥಗೊಂಡಿದೆ. ಜಮೀನಿನ ವಿವಾದಕ್ಕೆ ಸಂಬಂಧಿಸಿದಂತೆ 2006 ರಲ್ಲಿ ಈ ವಿವಾದ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ತಾರ್ಕಿಕ ಅಂತ್ಯಕ್ಕೆ ತಲುಪಿರುವುದನ್ನು ಸಮಿತಿಯು ಗಮನಿಸಿದೆ. ಸೋಮಶೇಖರ ವರದಿ ಪ್ರಕರಣದ ತೀರ್ಪಿನ ಕಂಡಿಕೆ 51ರ ಅನುಗುಣವಾಗಿ ಘಟಕವಾರು ಜಮೀನಿನ ಅವಶ್ಯಕತೆ ಇತ್ಯರ್ಥವಾಗಿರುವ ಹಿನ್ನೆಲೆಯಲ್ಲಿ ಭೌತಿಕ ಪ್ರಗತಿಯ ಗುರಿಗಳನ್ನು ಬದಲಾಯಿತ ಸನ್ನಿವೇಶದಲ್ಲಿ ಪರಿಷ್ಕರಣೆಗೊಳಿಸಿ ಜಾರಿಗೊಳಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಸಮಿತಿಗೆ ಲಭ್ಯವಿರುವ ದಾಖಲಾತಿಗಳ ಅನುಗುಣವಾಗಿ ಕ್ರಿಯಾ ಒಪ್ಪಂದದಲ್ಲಿ ಪ್ರತಿಪಾದಿಸಲಾಗಿರುವ ಗುರಿ ಹಾಗೂ ಸಾಧನೆಗಳಿಗೆ ಸಂಬಂಧಿಸಿದಂತೆ ಲೋಕೋಪಯೋಗಿ ಇಲಾಖೆ ಖಾಸಗಿ ಪಾಲುದಾರರೊಡನೆ ಯಾವುದೇ ಪತ್ರ ವ್ಯವಹಾರವನ್ನು ಜಾರಿಗೊಳಿಸಿರುವುದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಖಾಸಗಿ ಪಾಲುದಾರರು ವಿವಿಧ ಸ್ತರದ ನ್ಯಾಯಾಲಯಗಳ ಮುಖಾಂತರ ಯೋಜನಾ ಅನುಷ್ಠಾನದ ಹಲವಾರು ಆಯಾಮಗಳಿಗೆ ಸಂಬಂಧಿಸಿದಂತೆ ಪ್ರಕರಣಗಳನ್ನು ದಾಖಲಿಸಿರುವುದನ್ನು ಸಮಿತಿಯು ಗಮನಿಸಿದೆ. ಪ್ರಸಕ್ತವಾಗಿ ಸರ್ವೋಚ್ಚ ನ್ಯಾಯಾಲಯದ ಮುಂದೆ 2 ನ್ಯಾಯಾಂಗ ನಿಂದನೆ ಪ್ರಕರಣಗಳು ಇತ್ಯರ್ಥವಾಗಬೇಕಾಗಿದೆ.

ಪ್ರಸಕ್ತ ಅನುಚ್ಛೇದದ ಅನುಗುಣವಾಗಿ ಖಾಸಗಿ ಪಾಲುದಾರರು ಜಾರಿಗೊಳಿಸುವ ಯಾವುದೇ ಕ್ರಮದಿಂದಾಗಿ ಸರ್ಕಾರವು ತನ್ನ ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ಆಗುವ ವಿಳಂಬದ ಬಗ್ಗೆ ಪ್ರತಿಪಾದಿಸಲಾಗಿದೆ. ಇಂತಹ ಸಂದರ್ಭವನ್ನು ಗಮನದಲ್ಲಿರಿಸಿ ಖಾಸಗಿ ಪಾಲುದಾರರಿಂದಾಗಿ ಸರ್ಕಾರ ಕ್ರಮ ಕೈಗೊಳ್ಳುವಲ್ಲಿ ಆಗುವ ವಿಳಂಬವನ್ನು ಸರಿದೂಗಿಸಲು ಅವಕಾಶ ಕಲ್ಪಿಸಲಾಗಿದೆ. ಈ

ಅನುಚ್ಛೇಧವನ್ನು ಸಮಗ್ರವಾಗಿ ಅವಲೋಕಿಸಿದಾಗ ಖಾಸಗಿ ಪಾಲುದಾರರು ಯೋಜನಾ ಅನುಷ್ಠಾನದಲ್ಲಿ ಎಸಗುವ ವಿಳಂಬಕ್ಕೆ ನೇರ ಹಾಗೂ ಸ್ಪಷ್ಟ ಜವಾಬ್ದಾರಿಯನ್ನು ನಿಗದಿಪಡಿಸಬಲ್ಲ ಯಾವುದೇ ಷರತ್ತನ್ನು ವಿಧಿಸಿರುವುದಿಲ್ಲ. ಎಲ್ಲಾ ಸಂದರ್ಭದಲ್ಲೂ ಸರ್ಕಾರದ ಪತಿಯಿಂದ ಆಗುವ ವಿಳಂಬಕ್ಕೆ ಮಾತ್ರ ಈ ಅನುಚ್ಛೇಧ ಸೀಮಿತವಾಗಿದೆ. ***ಈ ಹಿನ್ನಲೆಯಲ್ಲಿ ಖಾಸಗಿ ಪಾಲುದಾರರ ವೈಫಲ್ಯತೆಗೆ ಸಂಬಂಧಿಸಿದಂತೆ ಕೈಗೊಳ್ಳಬಹುದಾದ ಕ್ರಮಗಳು ಅಂದರೆ, ಅನುಷ್ಠಾನಾವಧಿಯ ಪರಿಷ್ಕರಣೆ, ಟೋಲ್ ಕನ್ಸೆಷನ್ ಅವಧಿಯ ಪರಿಷ್ಕರಣೆ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಸೂಕ್ತ ಷರತ್ತುಗಳನ್ನು ಸೇರ್ಪಡೆ ಮಾಡಲು ಲೋಕೋಪಯೋಗಿ ಇಲಾಖೆಯು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.***

### *XXIX. <u>ಅನುಚ್ಛೇಧ 16.2.1-ಯೋಜನಾ ಅನುಷ್ಠಾನದ ಭೌತಿಕ ಪ್ರಗತಿಯ ಸಾಧನೆಯಲ್ಲಿ ಆಗುವ ವೈಫಲ್ಯತೆಗೆ ಖಾಸಗಿ ಪಾಲುದಾರರ ಮೇಲೆ ನಿಗದಿಪಡಿಸಬಹುದಾದ ಜವಾಬ್ದಾರಿಗಳು</u>*

ಯೋಜನಾ ಅನುಷ್ಠಾನದ ಸೆಕ್ಷನ್ 'ಎ' ಸ್ತರವನ್ನು ನೀಸೆಲ್ ಸಂಸ್ಥೆಗೆ 2002 ರಲ್ಲಿ ಅಸೈನ್‌ಮೆಂಟ್ ಒಪ್ಪಂದದ ಮುಖಾಂತರ ಹಸ್ತಾಂತರ ಮಾಡುವ ಪೂರ್ವದಲ್ಲಿ 31.03.2000 ರಂದು ಜಾರಿಗೊಳಿಸಲಾದ ಪೂರಕ ಒಪ್ಪಂದದ ಮುಖಾಂತರ ವೈಫಲ್ಯತೆಯನ್ನು ಸಂಬಂಧಿತ ಯೋಜನಾ ಅನುಷ್ಠಾನದ ಸ್ತರಕ್ಕೆ ಸೀಮಿತಗೊಳಿಸಲು ಕ್ರಮ ಕೈಗೊಳ್ಳಲಾಗಿದೆ. ಮೊದಲನೇ ಸ್ತರದಲ್ಲಿ 02/2002 ರಲ್ಲಿ ನೈಸೆಲ್ ಸಂಸ್ಥೆಯು ನೀಸೆಲ್ ಸಂಸ್ಥೆಗೆ ಸೆಕ್ಷನ್ 'ಎ' ಸ್ತರವನ್ನು ಹಸ್ತಾಂತರಗೊಳಿಸಿದ್ದು, 6 ತಿಂಗಳ ನಂತರ ಲೋಕೋಪಯೋಗಿ ಇಲಾಖೆ, ನೈಸೆಲ್ ಹಾಗೂ ನೀಸೆಲ್ ಸಂಸ್ಥೆಯ ನಡುವೆ ತ್ರಿಪಕ್ಷೀಯ ಒಪ್ಪಂದವನ್ನು ಜಾರಿಗೊಳಿಸಲಾಗಿದೆ. ಆದಾಗ್ಯೂ ಸೆಕ್ಷನ್ 'ಎ' ಸ್ತರದ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಯೋಜನಾ ಅನುಷ್ಠಾನದ ಕುಂಠಿತ ಪ್ರಗತಿಯ ಆಧಾರದ ಮೇಲೆ ಖಾಸಗಿ ಪಾಲುದಾರರ ವಿರುದ್ಧ ನೋಟೀಸ್ ಜಾರಿ ಮಾಡಿರುವ ಯಾವುದೇ ಪ್ರಕರಣಗಳಿಗೆ ಸಂಬಂಧಿಸಿದಂತೆ ಸಮಿತಿಗೆ ಮಾಹಿತಿ ಲಭ್ಯವಿರುವುದಿಲ್ಲ. ಟೋಲ್ ರಿಯಾಯಿತಿ ಒಪ್ಪಂದದ ಉಲ್ಲಂಘನೆ ಆಧಾರದ ಮೇಲೆ ಹಾಗೂ ಟೋಲ್ ರಸ್ತೆ ನಿರ್ಮಾಣದಲ್ಲಿ ತಾಂತ್ರಿಕ ಮಾನದಂಡಗಳನ್ನು ಉಪೇಕ್ಷಿಸಿ ನಿರೂಪಿತ ಅವಧಿಯಲ್ಲಿ ಕಾಂಕ್ರೀಟ್ ರಸ್ತೆಯನ್ನು ಮಾಡುವಲ್ಲಿ ವಿಫಲವಾಗಿರುವ ಆಧಾರದ ಮೇಲೆ ನೋಟೀಸುಗಳನ್ನು ಜಾರಿ ಮಾಡಿರುವುದನ್ನು ಸಮಿತಿ ಗಮನಿಸಿದೆ. ಆದರೆ ಕ್ರಿಯಾ ಒಪ್ಪಂದದ ಈ ಅನುಚ್ಛೇಧದಡಿ ಭೌತಿಕ ಪ್ರಗತಿಯ ಸಾಧನೆಯಲ್ಲಿ ಖಾಸಗಿ ಪಾಲುದಾರರು ಎಸಗಿರುವ ವಿಳಂಬದ ಬಗ್ಗೆ ಲೋಕೋಪಯೋಗಿ ಇಲಾಖೆಯು ನಿರ್ಲಕ್ಷ್ಯತಾ ಧೋರಣೆಯನ್ನು ತಳೆದಿದೆ ಎಂಬ ಅಭಿಪ್ರಾಯ ಮೇಲ್ನೋಟಕ್ಕೆ ವ್ಯಕ್ತವಾಗುತ್ತದೆ. ಕ್ಲೆಡಸ್ಟಲ್ ಮ್ಯಾಪುಗಳ ಸಲ್ಲಿಕೆ, ಫೈನಾನ್ಷಿಯಲ್ ಕ್ಲೋಷರ್ ದಾಖಲಾತಿಗಳ ಸಲ್ಲಿಕೆ ಇತ್ಯಾದಿ ಪ್ರಕ್ರಿಯೆಗಳಲ್ಲಿ ಖಾಸಗಿ ಪಾಲುದಾರರು ಪ್ರತಿಕೂಲ ಧೋರಣೆಯನ್ನು ತಳೆದಿರುವುದು ಸಮಿತಿಗೆ ದಾಖಲಾತಿಯಿಂದ ವ್ಯಕ್ತವಾಗಿದೆ. **ಈ ಸೂಕ್ಷ್ಮಕರ ದಾಖಲಾತಿಗಳ ಅನುಪಸ್ಥಿತಿಯಲ್ಲಿ ಲೋಕೋಪಯೋಗಿ ಇಲಾಖೆ ಭೌತಿಕ ಪ್ರಗತಿಯ ಮಾನದಂಡಗಳನ್ನು ಇತ್ಯರ್ಥಪಡಿಸುವಲ್ಲಿ ವಿಫಲವಾಗಿರುವುದು ಸ್ಪಷ್ಟವಾಗಿದೆ. ಕರ್ನಾಟಕ ಸರ್ಕಾರವು ಬಹುತೇಕ ಪ್ರಕರಣಗಳಲ್ಲಿ ಖಾಸಗಿ ಪಾಲುದಾರರು ಸೃಷ್ಟಿಸಿರುವ ಸಂದಿಗ್ಧ ಹಾಗೂ ಕ್ಲಿಷ್ಟಕರ ಪರಿಸ್ಥಿತಿಯಿಂದಾಗಿ ನಿರೂಪಿತ ಜವಾಬ್ದಾರಿಗಳನ್ನು ಸಮಯೋಚಿತವಾಗಿ ನಿರ್ವಹಿಸುವಲ್ಲಿ ವಿಳಂಬವನ್ನು ಎಸಗಿರುವುದು ಅನಿವಾರ್ಯ ಬೆಳವಣಿಗೆ ಎಂದು ಸಮಿತಿ ತೀರ್ಮಾನಿಸುತ್ತದೆ. ಯೋಜನೆಯು ಸಮಗ್ರವಾಗಿ 2012ಕ್ಕೆ ಅಂತ್ಯಗೊಳ್ಳಬೇಕಾಗಿದ್ದು, ಈ ವರದಿಯಲ್ಲಿ ಪ್ರತಿಪಾದಿಸಿರುವ ಹಲವಾರು ಕಾರಣಗಳಿಂದಾಗಿ ಅನುಷ್ಠಾನದಲ್ಲಿ ಸೃಷ್ಟಿಯಾಗಿರುವ ಸಂದಿಗ್ಧತೆಯ ಹಿನ್ನೆಲೆಯಲ್ಲಿ ಅಧಿಕೃತವಾಗಿ ಯೋಜನಾ ಅನುಷ್ಠಾನದ ಗುರಿ ಹಾಗೂ ಸಾಧನೆಗಳ ಅವಧಿಯನ್ನು ಪರಿಷ್ಕರಿಸಲು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತದೆ.** *ಇದಲ್ಲದೆ, ಅನುಚ್ಛೇಧ 16.2.5 ರಲ್ಲಿ ಖಾಸಗಿ ಪಾಲುದಾರರು ಕ್ರಿಯಾ ಒಪ್ಪಂದವನ್ನು ನಿಬಂಧನೆಯಲ್ಲ ಎಂದು (REPUDIATES) ಎಂದು ತಿರಸ್ಕರಿಸಿರುವ ಪ್ರಕರಣಗಳಲ್ಲಿ*

*ಖಾಸಗಿ ಪಾಲುದಾರರ ವೈಫಲ್ಯತೆ ಎಂದು ನಿರ್ಧರಿಸಬಹುದಾಗಿದೆ. ಈ ವರದಿಯಲ್ಲಿ ಕ್ರಿಯಾ ಒಪ್ಪಂದದ ಉಲ್ಲಂಘನೆಯ ಬಗ್ಗೆ ವ್ಯಾಪಕವಾಗಿ ಚರ್ಚಿಸಲಾಗಿದೆ. ಈ ಹಿನ್ನೆಲೆಯಲ್ಲಿ ಈ ಅನುಚ್ಛೇಧದಡಿ ಸಂಪೂರ್ಣ ವಿವರಗಳನ್ನು ಒದಗಿಸಿ ಖಾಸಗಿ ಪಾಲುದಾರರಿಗೆ DEFAULT ಅನ್ನು ಸರ್ಕಾರವು ಜಾರಿಗೊಳಿಸಲು ಕಾನೂನು ರೀತ್ಯಾ ಕ್ರಮ ಜರುಗಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.*

## XXX. *ಅನುಚ್ಛೇಧ – 17.6 – ಕ್ಯಾರಿಯಿಂಗ್ ಕಾಸ್ಟ್ ಇತ್ಯರ್ಥದಲ್ಲಿ ಪ್ರಗತಿ ಹಾಗೂ ಅನುಷ್ಠಾನದ ವಿವರಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುವ ಬಗ್ಗೆ.*

ನೈಸೆಲ್ ಸಂಸ್ಥೆಯು ಈ ಅನುಚ್ಛೇಧದ ಅನುಗುಣವಾಗಿ ಸೆಕ್ಷನ್ 'ಎ' ವ್ಯಾಪ್ತಿಯ ಟೋಲ್ ರಸ್ತೆಯ ನಿರ್ಮಾಣ ವೆಚ್ಚ ಹಾಗೂ ಇತರೆ ವೆಚ್ಚಗಳ ಸಮಗ್ರ ವಿವರಗಳನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಿರುವುದಿಲ್ಲ. ಈ ಹಿನ್ನೆಲೆಯಲ್ಲಿ Carrying Costs ಇತ್ಯರ್ಥದಲ್ಲಿ ಸಂದಿಗ್ಧತೆ ಉಂಟಾಗುತ್ತದೆ ಎಂದು ಸಮಿತಿ ಅಭಿಪ್ರಾಯ ಪಡುತ್ತದೆ. ಇದಲ್ಲದೆ, ನೈಸೆಲ್ ಸಂಸ್ಥೆಯು ಪೆರಿಫರಲ್ ರಸ್ತೆ, ಲಿಂಕ್ ರಸ್ತೆ ಹಾಗೂ ಎಕ್ಸ್‌ಪ್ರೆಸ್ ವೇ ಭಾಗಗಳಕಾಮಗಾರಿಗಳಿಗೆ ಸಂಬಂಧಿಸಿದಂತೆ ಸಮಗ್ರ ವೆಚ್ಚದ ವಿವರಗಳನ್ನು ನೀಡಿರುವುದಿಲ್ಲ. ನೈಸೆಲ್/ನೀಸೆಲ್ ಸಂಸ್ಥೆಯು 41 ಕಿ.ಮೀ. ವ್ಯಾಪ್ತಿಯ ಟೋಲ್ ರಸ್ತೆಯ ನಿರ್ಮಾಣಕ್ಕಾಗಿ ಪಡೆದ ಸಾಲದ ಸ್ವರೂಪದ ಬಂಡವಾಳ ಹೂಡಿಕೆ ಹಾಗೂ ಈ ಸಾಲದ ಮೇಲೆ ಈವರೆವಿಗೂ ಭರಿಸಿರುವ ಬಡ್ಡಿ, ಸೇವಾ ಶುಲ್ಕಗಳು ಹಾಗೂ ಇತರೆ ಅನ್ವಯಿಸುವ ವೆಚ್ಚಗಳ ವಿವರಗಳನ್ನು ಸರ್ಕಾರಕ್ಕೆ ಸಲ್ಲಿಸಿರುವುದಿಲ್ಲ. **ಈ ಹಿನ್ನೆಲೆಯಲ್ಲಿ ನೈಸೆಲ್/ನೀಸೆಲ್ ಸಂಸ್ಥೆಯು ಕ್ರಿಯಾ ಒಪ್ಪಂದದಲ್ಲಿ ಪ್ರತಿಪಾದಿಸಲಾಗಿರುವ ಈ ಅನುಚ್ಛೇಧದ ಅನುಗುಣವಾಗಿ Carrying Costs ಇತ್ಯರ್ಥಗೊಳಿಸುವಲ್ಲಿ ಸಂಪೂರ್ಣ ಅಸಹಕಾರವನ್ನು ತೋರಿಸಿದೆ ಎಂದು ಸಮಿತಿ ತೀರ್ಮಾನಿಸುತ್ತದೆ. ಈ ವೈಫಲ್ಯತೆಯು ಕ್ರಿಯಾ ಒಪ್ಪಂದದ ಸ್ಪಷ್ಟ ಉಲ್ಲಂಘನೆಯಾಗಿರುವ ಹಿನ್ನೆಲೆಯಲ್ಲಿ ಈ ವಿವರಗಳನ್ನು ಪಡೆಯಲು ಲೋಕೋಪಯೋಗಿ ಇಲಾಖೆ ಹಾಗೂ ರಾಜ್ಯ ಸರ್ಕಾರ ಕ್ರಿಯಾ ಒಪ್ಪಂದದ ನಿರ್ಬಂಧನೆಗಳ ಹಿನ್ನೆಲೆಯಲ್ಲಿ ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಖಾಸಗಿ ಪಾಲುದಾರರು ಎಲ್ಲಾ ಸಂದರ್ಭಗಳಲ್ಲೂ ಗೌಪ್ಯತೆ ಷರತ್ತಿನ ಅಡಿಯಲ್ಲಿ ಗುರುತರ ಮಾಹಿತಿಗಳನ್ನು ಸಲ್ಲಿಸಲು ನಿರಾಕರಿಸುತ್ತಿರುವುದನ್ನು ಸಮಿತಿಯು ಗಮನಿಸಿದೆ. ಆದರೆ, ಕ್ರಿಯಾ ಒಪ್ಪಂದದಲ್ಲಿ ಅವಶ್ಯಕವಿರುವ ಮಾಹಿತಿಯನ್ನು ವಿನಿಮಯವನ್ನು ಮಾಡಿಕೊಳ್ಳುವ ಅವಕಾಶವನ್ನು ಕಲ್ಪಿಸಲಾಗಿದೆ ಯೋಜನೆಯ ಅನುಷ್ಠಾನದ ವಿಳಂಬ ಹಾಗೂ ವೈಫಲ್ಯತೆಯ ಹಿನ್ನಲೆಯಲ್ಲಿ ಕ್ಯಾರಿಯಿಂಗ್ ಕಾಸ್ಟ್ ಇತ್ಯರ್ಥ ಮಾಡಲು ಈ ದಾಖಲಾತಿಗಳು ಅವಶ್ಯಕವಾಗಿವೆ. ಆದುದರಿಂದ ಗೌಪ್ಯತೆ ಷರತ್ತಿನ ಅಸಮಂಜಸತೆಯ ಬಗ್ಗೆ ಸ್ಪಷ್ಟೀಕರಣ ಪಡೆಯಲು ಕಾನೂನು ರೀತಿಯ ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.**

## XXXI. *ಅನುಚ್ಛೇಧ – 18.3.2 – ವಿವಾದಗಳ ಬಗ್ಗೆ*

1. ಕರ್ನಾಟಕ ಸರ್ಕಾರ ಹಾಗೂ ನೈಸೆಲ್ ಸಂಸ್ಥೆಯೊಡನೆ ಪೆರಿಫರಲ್ ರಸ್ತೆ ಹಾಗೂ ಲಿಂಕ್ ರಸ್ತೆಗೆ ಜಮೀನಿನ ವಿಸ್ತೀರ್ಣದ ಬಗ್ಗೆ ವಿವಾದವಿರುವುದನ್ನು ಸಮಿತಿಯು ಗಮನಿಸಿದೆ.
2. ಈ ವಿವಾದವನ್ನು ಅನುಚ್ಛೇಧ 18.2 ರ ಅಡಿಯಲ್ಲಿ ಪ್ರತಿಪಾದಿಸಿರುವಂತೆ ಪರಿಣಿತರ ಮುಖಾಂತರ ಇತ್ಯರ್ಥಗೊಳಿಸುವುದರ ಬದಲಾಗಿ ನೈಸೆಲ್ ಸಂಸ್ಥೆಯು ಕರ್ನಾಟಕ ಸರ್ಕಾರದ ವಿರುದ್ಧ ನ್ಯಾಯಾಂಗ ನಿಂದನೆ ಅರ್ಜಿ ಪ್ರಕರಣವನ್ನು ದಾಖಲಿಸಿರುವುದನ್ನು ಸಮಿತಿಯು ಗಮನಿಸಿದೆ.
3. ತತ್ಸಂಬಂಧವಾಗಿ ಸರ್ವೋಚ್ಛ ನ್ಯಾಯಾಲಯವು 11.01.2010 ರಂದು ಪೆರಿಫರಲ್ ರಸ್ತೆ ಹಾಗೂ ಲಿಂಕ್ ರಸ್ತೆಗೆ ಅನ್ವಯಿಸುವಂತೆ ಜಮೀನಿನ ಅವಶ್ಯಕತೆಯ ವಿಷಯ ವಿವಾದಾತ್ಮಕ ಎಂದು ದೃಢೀಕರಿಸಿರುವುದನ್ನು ಸಮಿತಿಯು ಗಮನಿಸಿದೆ.
4. ಸರ್ವೋಚ್ಛ ನ್ಯಾಯಾಲಯದ ನಿರ್ದೇಶನಗಳ ಅನುಗುಣವಾಗಿ ಮುಖ್ಯಮಂತ್ರಿಗಳ ನಾಯಕತ್ವದಲ್ಲಿ ಉನ್ನತ ಮಟ್ಟದ ಸಮಿತಿಯನ್ನು ಸೃಜಿಸಲಾಗಿದೆ.

5. ಪ್ರಸ್ತಾವಿತ ಉನ್ನತ ಮಟ್ಟದ ಸಮಿತಿಯು ಪೆರಿಫರಲ್ ರಸ್ತೆಗೆ ಸಂಬಂಧಿ[illegible] ವಿಸ್ತೀರ್ಣದ ಜಮೀನನ್ನು ಹೆಚ್ಚುವರಿಯಾಗಿ ನೀಡಿರುವುದನ್ನು ಸಮಿತಿ[illegible]
6. ಆದಾಗ್ಯೂ, ನೈಸೆಲ್ ಸಂಸ್ಥೆಯು ನ್ಯಾಯಾಂಗ ನಿಂದನೆ ಪ್ರಕರಣ[illegible] ನ್ಯಾಯಾಲಯದ ಮುಂದೆ ದಾಖಲಿಸಿದ್ದು, ಈ ಪ್ರಕರಣ ಇತ್ಯರ್ಥವಾಗ[illegible]

*ಮೇಲೆ ಉಲ್ಲೇಖಿಸಿರುವ ಹಿನ್ನೆಲೆಯಲ್ಲಿ ಸಮಿತಿಯು ಈ ಕೆಳಕಂಡಂತೆ ಶಿಫಾರಸ್ಸು ಮಾಡ[illegible]*

1. ***ಈ ಅನುಚ್ಛೇಧದಡಿ ಪರಸ್ಪರ ವಿಚಾರ ವಿನಿಯಮಯದಿಂದ ವಿವಾದಗಳನ್ನು [illegible] ಅವಕಾಶ ಕಲ್ಪಿಸಿದ್ದು, ಈ ಸೌಲಭ್ಯವನ್ನು ಖಾಸಗಿ ಪಾಲುದಾರರಾಗಲಿ [illegible] ಇಲಾಖೆಯವರಾಗಲಿ ಈವರೆವಿಗೆ ಬಳಸಿರುವುದಿಲ್ಲ.ಯೋಜನಾ ಅನುಷ್ಠಾನದ [illegible] ನ್ಯಾಯಾಲಯಗಳ ಮುಖಾಂತರ ಪ್ರತಿಕ್ರಿಯೆ ನೀಡುವ ಖಾಸಗಿ [illegible] ಸಮಿತಿಯು ಖೇದದಿಂದ ಗಮನಿಸಿದೆ.***

ಖಾಸಗಿ ಪಾಲುದಾರರು ಜಮೀನಿನ ವಿಸ್ತೀರ್ಣದ ಸಂದಿಗ್ಧತೆಗೆ ಸಂಬಂಧಿಸಿದಂತೆ [illegible] ಪ್ರಕರಣದ ತೀರ್ಪನ್ನು ಉಪೇಕ್ಷಿಸಿದ್ದಾರೆ. ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನ [illegible] ಯೋಜನೆಯ ಅನುಷ್ಠಾನಕ್ಕೆ ಘಟಕವಾರು ಜಮೀನಿನ ಅವಶ್ಯಕತೆಯನ್ನು [illegible] ತರ್ಕಬದ್ಧವಾಗಿ ಈ ತೀರ್ಪಿನ ನಂತರ ಉದ್ಭವಿಸುವ ಸಂದಿಗ್ಧತೆಯನ್ನು ಮೊದಲ [illegible] ಒಪ್ಪಂದದ ಅನುಚ್ಛೇಧ 18.2 ರ ಅನುಗುಣವಾಗಿ ಇತ್ಯರ್ಥಗೊಳಿಸುವಲ್ಲಿ ನೈಸೆಲ್/[illegible] ಸಂಸ್ಥೆ ನಿರ್ಲಕ್ಷ್ಯತಾ ಧೋರಣೆಯನ್ನು ತಳೆದಿರುವುದು ಸಮಿತಿಗೆ ಸ್ಪಷ್ಟವಾಗಿದೆ. ಈ [illegible] **ಪಾಲುದಾರರು ವಿವಾದಗಳನ್ನು ಇತ್ಯರ್ಥಪಡಿಸಲು ಲಭ್ಯವಿರುವ ಅಥವಾ [illegible] ಪ್ರತಿಪಾದಿಸಲಾಗಿರುವ ಸಮರ್ಪಕ ಸೌಲಭ್ಯಗಳನ್ನು ಪ್ರಥಮ ಸ್ತರದಲ್ಲಿ ಬಳಸದೇ [illegible] ಕ್ರಿಯಾ ಒಪ್ಪಂದದ ಈ ಅನುಚ್ಛೇಧವನ್ನು ಉಪೇಕ್ಷಿಸಿದ್ದರಿಂದ ಕಾನೂನಿನ [illegible] ಯೋಜನೆಯ ಅನುಷ್ಠಾನದಲ್ಲಿ ವ್ಯತಿರಿಕ್ತ ಪರಿಣಾಮ ಬೀರುತ್ತದೆ ಎಂದು ಸಮಿತಿ [illegible] ರಾಜ್ಯ ಸರ್ಕಾರವು ಕ್ರಿಯಾ ಒಪ್ಪಂದದ ಅನುಚ್ಛೇಧ 18ರ ಪರಿಣಾಮಕಾರಿ ಬಳಕೆ[illegible] ಜಾರಿಗೊಳಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.**ಈ ಅನುಚ್ಛೇಧದಡಿ *ಸರ್ಕಾರ [illegible] ಪಾಲುದಾರರು 30 ದಿನಗಳ ನೋಟೀಸನ್ನು ಜಾರಿ ಮಾಡಿ ಚರ್ಚೆ ಮೂಲಕ [illegible] ಸ್ತರದಲ್ಲಿ ಪರಿಹರಿಸಲು ಕ್ರಮ ಕೈಗೊಳ್ಳಬೇಕಾಗುವುದು. ಈ ಸ್ತರದಲ್ಲಿ ವಿವಾದಗಳು [illegible] ಇದ್ದಲ್ಲಿ, ಪರಸ್ಪರ ಸಹಮತಿಸುವ ವೃತ್ತಿಪರ ಸಲಹೆಗಾರರ [illegible] ಬಗೆಹರಿಸಿಕೊಳ್ಳಬೇಕಾಗುವುದು. ವೃತ್ತಿಪರ ಸಲಹೆಗಾರರು 60 ದಿನಗಳಲ್ಲಿ ನಿರ್ಧಾರ[illegible] ಅಥವಾ ಈ ನಿರ್ಧಾರವು ಯಾವುದೇ ಒಂದು ಪಕ್ಷ ಒಪ್ಪದೇ ಇದ್ದಲ್ಲಿ, [illegible] ಮುಖಾಂತರ ಪ್ರಕರಣವನ್ನು Arbitration ವಹಿಸಬಹುದಾಗಿದೆ. ಸಮಿತಿಗೆ ಲಭ್ಯ[illegible] ಅನುಗುಣವಾಗಿ ಈ ಕ್ರಮಗಳನ್ನು 1997 ರಿಂದ 2016 ರವರೆಗೆ ಕೈಗೊಂಡಿರು[illegible] ವಿತರಣೆ (ನಗರ ಸಮುಚ್ಛಯ-1) ಹಾಗೂ ಸರ್ವೋಚ್ಛ ನ್ಯಾಯಾಲಯದ [illegible] ನ್ಯಾಯಾಂಗ ನಿಂದನೆಗಳನ್ನು ದಾಖಲಿಸುವ ಪೂರ್ವದಲ್ಲಿ ಈ ಅನುಚ್ಛೇಧದಡಿ [illegible] ವಿವಾದಗಳನ್ನು ಇತ್ಯರ್ಥಗೊಳಿಸಲು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. [illegible] ಪ್ರಕರಣಗಳಲ್ಲಿ ಕರ್ನಾಟಕ ಸರ್ಕಾರವು ಪ್ರತಿವಾದಿಯಾಗಿರುವುದರಿಂದ ಈ [illegible] ವೈಫಲ್ಯತೆಯ ಜವಾಬ್ದಾರಿ ಖಾಸಗಿ ಪಾಲುದಾರರದ್ದಾಗಿದೆ ಎಂದು ಸಮಿತಿ [illegible] ಹಿನ್ನೆಲೆಯಲ್ಲಿ ಕ್ರಿಯಾ ಒಪ್ಪಂದದ ಈ ಸೌಲಭ್ಯವನ್ನು ಖಾಸಗಿ ಪಾಲುದಾರರ [illegible] ತೀರ್ಮಾನಿಸುತ್ತದೆ.*

### XXXII. ಅನುಚ್ಛೇದ 18.3.2.2 – ವಿವಾದಗಳನ್ನು ಇತ್ಯರ್ಥಗೊಳಿಸುವ ಮಧ್ಯಸ್ಥಿಕೆಯ ಸ್ಥಳದ ಬಗ್ಗೆ

ನೈಸೆಲ್ ಸಂಸ್ಥೆಯು ಮೂಲವಾಗಿ ಯೋಜನೆಯ ಸೃಜನೆಯಲ್ಲಿ ಭಾಗಿಯಾಗಿದ್ದ ಕಂಪನಿಗಳ ಸಮುಚ್ಚಯದ (ಅಂದರೆ ವಿ.ಹೆಚ್.ಪಿ., ಸ್ಟ್ಯಾಬ್ ಇಂಜಿನೀಯರಿಂಗ್ ಹಾಗೂ ಕಲ್ಯಾಣಿ ಗ್ರೂಪ್) ಪ್ರತಿನಿಧಿತ್ವದ ಆಧಾರದ ಮೇಲೆ ಯೋಜನಾ ಅನುಷ್ಠಾನಕ್ಕೆ ಸೃಜಿಸಲಾದ ಒಂದು "Special Purpose Vehicle" ಆಗಿರುತ್ತದೆ. *ನೈಸೆಲ್ ಸಂಸ್ಥೆಯು ಭಾರತ ದೇಶದ ಕಂಪನಿಗಳ ಅಧಿನಿಯಮ 1956ರ ಅಡಿಯಲ್ಲಿ ಸೃಜನೆಯಾದ ಒಂದು ಸಂಸ್ಥೆಯಾಗಿರುವ ಹಿನ್ನೆಲೆಯಲ್ಲಿ ಈ ಸಂಸ್ಥೆಯನ್ನು ಭಾರತದಲ್ಲಿ ಅನ್ವಯವಾಗುವ ಅಧಿನಿಯಮ ಹಾಗೂ ನಿಯಮಗಳ ಅಡಿಯಲ್ಲಿ ಸೃಜನೆಯಾದ ಒಂದು ಸಂಸ್ಥೆ ಎಂದು ಪರಿಗಣಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು Arbitration ಸ್ಥಳವನ್ನು ಭಾರತ ದೇಶ ಹಾಗೂ ನಿರ್ದಿಷ್ಟವಾಗಿ ಬೆಂಗಳೂರು ಎಂದು ಪರಿಷ್ಕರಿಸಲು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.*

ಇದಲ್ಲದೆ, ನೈಸೆಲ್ ಸಂಸ್ಥೆಯಲ್ಲಿ ಭಾಗಿಯಾಗಿರುವ ಸಮುಚ್ಚಯ ಕಂಪನಿಗಳ ಪೈಕಿ ಕಲ್ಯಾಣಿ ಗ್ರೂಪ್ ಒಂದು ಸಂಸ್ಥೆಯಾಗಿದ್ದು, ಕಲ್ಯಾಣಿ ಗ್ರೂಪ್ 85 ಕೋಟಿ ರೂ.ಗಳನ್ನು ಬಂಡವಾಳ ಸ್ವರೂಪದಲ್ಲಿ ಹೂಡಿಕೆ ಮಾಡಿರುವುದು ಸಮಿತಿಯ ಗಮನಕ್ಕೆ ಬಂದಿದೆ. ಈ ಕಂಪನಿಯು ಒಂದು ಪ್ರಮುಖ ಪಾಲುದಾರರಾಗಿರುವ ಹಿನ್ನೆಲೆಯಲ್ಲಿ ಹಾಗೂ ಭಾರತ ಮೂಲದ ಕಂಪನಿಯಾಗಿರುವ ಹಿನ್ನೆಲೆಯಲ್ಲಿ Arbitration ಸ್ಥಳವನ್ನು ಬೆಂಗಳೂರು ಎಂದು ಪರಿಷ್ಕರಿಸುವುದು ಅವಶ್ಯಕ ಎಂದು ಸಮಿತಿಯು ಅಭಿಪ್ರಾಯ ಪಡುತ್ತದೆ.

*ಕ್ರಿಯಾ ಒಪ್ಪಂದದ ಭಾಗಿದಾರರು ಸ್ವಯಂ ಪ್ರೇರಿತವಾಗಿ ಒಂದು ಪ್ರಾಧಿಕಾರಕ್ಕಾಗಲೀ ಅಥವಾ ನ್ಯಾಯಾಲಯಕ್ಕಾಗಲೀ ಕ್ಷೇತ್ರೀಯ ವ್ಯಾಪ್ತಿಯನ್ನು ನಿರ್ಧರಿಸಲಾಗುವುದಿಲ್ಲ. ಏಕೆಂದರೆ, ವಿವಾದ ಉದ್ಭವಿಸುವ ವ್ಯಾಪ್ತಿಗೆ ಅನುಗುಣವಾಗಿ ಕ್ಷೇತ್ರ ವ್ಯಾಪ್ತಿಯನ್ನು ನಿರ್ಧರಿಸುವುದು ಸಾಮಾನ್ಯ ಜ್ಞಾನವಾಗಿದೆ. ಅಂದರೆ ಘಟನೆಯಾದ ಸ್ಥಳವೇ ಕ್ಷೇತ್ರ ವ್ಯಾಪ್ತಿಯಾಗುತ್ತದೆ. ಆದುದರಿಂದ ಕ್ರಿಯಾ ಒಪ್ಪಂದದಲ್ಲಿ ವ್ಯಾಜ್ಯಗಳ ಕ್ಷೇತ್ರ ವ್ಯಾಪ್ತಿಯನ್ನು ಇಂಗ್ಲೆಂಡ್ ರಾಷ್ಟ್ರದ ನ್ಯಾಯಾಲಯಗಳು ಎಂದು ಪ್ರತಿಪಾದಿಸಿರುವುದು ಅನುಷ್ಠಾನಗೊಳಿಸಲಾದ ಪ್ರಸ್ತಾವನೆಯಾಗಿದೆ.*

### XXXIII. ಅನುಚ್ಛೇದ-20– ಅಸೈನ್‌ಮೆಂಟ್ – ನೈಸೆಲ್ ಸಂಸ್ಥೆಯು ನೀಸೆಲ್ ಸಂಸ್ಥೆಗೆ ವಹಿಸಿರುವ ಘಟಕ-1 ರ ಕಾಮಗಾರಿಗಳು ಹಾಗೂ ತ್ರಿಪಕ್ಷೀಯ ಒಪ್ಪಂದದ ಬಗ್ಗೆ

*ಅನುಚ್ಛೇಧದ ಉಪ ಕಂಡಿಕೆ 20.2 ರ ಅಡಿಯಲ್ಲಿ ಯೋಜನೆಯ ಸ್ತರಗಳನ್ನು ಖಾಸಗಿ ಪಾಲುದಾರರು ಅಸೈನ್ ಮಾಡುವ ಬಗ್ಗೆ ಪ್ರತಿಪಾದಿಸಲಾಗಿದೆ.*

ಕ್ರಿಯಾ ಒಪ್ಪಂದದ ಈಅನುಚ್ಛೇಧದ ಅನುಗುಣವಾಗಿ ನೈಸೆಲ್ ಸಂಸ್ಥೆಯು ಯೋಜನಾ ಅನುಷ್ಠಾನದ ಮೊದಲನೇ ಹಂತದ ಕಾಮಗಾರಿಗಳನ್ನು ಪುನರ್ ವಿಂಗಡಿಸಿ ನೀಸೆಲ್ ಸಂಸ್ಥೆಗೆ 13.02.2002 ರಂದು ವಹಿಸಿರುವುದನ್ನು ಸಮಿತಿಯು ಗಮನಿಸಿದೆ. ಈ ಅಸೈನ್‌ಮೆಂಟ್ ಒಪ್ಪಂದವು ನೈಸೆಲ್ ಹಾಗೂ ನೀಸೆಲ್ ಸಂಸ್ಥೆ ಅನುಷ್ಠಾನಗೊಳಿಸಿದ್ದು, ಇದರಲ್ಲಿ, ಸರ್ಕಾರದ ಪಾತ್ರವಿರುವುದಿಲ್ಲ. ತದನಂತರ 09.03.2002 ರ ತ್ರಿಪಕ್ಷೀಯ ಒಪ್ಪಂದದ ಪ್ರಕಾರ 13.02.2002ರ ಅಸೈನ್‌ಮೆಂಟ್ ಡೀಡ್ ಅನ್ನು ದೃಢೀಕರಿಸಿರುವುದನ್ನು ಸಮಿತಿಯು ಗಮನಿಸಿದೆ. ತ್ರಿಪಕ್ಷೀಯ ಒಪ್ಪಂದವನ್ನು ಸರ್ಕಾರದ ಪರವಾಗಿ

ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ಇವರು ಜಾರಿಗೊಳಿಸಿರುತ್ತಾರೆ. ಈ ಪ್ರಕ್ರಿಯೆಯಲ್ಲಿ ಕೆಳಗೆ ಉಲ್ಲೇಖಿಸಿರುವ ವೈಫಲ್ಯತೆಗಳಾಗಿರುವುದನ್ನು ಸಮಿತಿಯು ಗಮನಿಸಿದೆ:

1. 18.02.2002 ರ ಅಸೈನ್‌ಮೆಂಟ್ ಒಪ್ಪಂದದ ಕಂಡಿಕೆ 1.1.1 ಮತ್ತು 1.1.5 ರಲ್ಲಿ ಈ ಮಾರ್ಪಾಡುಗಳನ್ನು ಸೇರ್ಪಡೆ ಮಾಡಲಾಗಿದೆ:

1.1.1 Assigned portion of the Infrastructure Corridor shall mean and consist of the following items:

a. Toll Road
b. Acquisition of land and such rights title and interest therein as may be necessary for the above mentioned roads and development and **sale of land**
c. Basic development and sale of land including that at 10 Interchanges and Township-1

1.1.5 Toll road shall mean Section 'A' referred to in the FWA being phase-1 road
and phase -2 road and shall constitute the following:

- Peripheral road across the southern city of Bangalore linking NH-7 on Hosur Road to NH-4 on Tumkur Road – 41 kms.
- Ground level link road from existing road upto proposed interchanges at Hemmigepura on peripheral road – 9.8 kms.
- Bangalore-Mysore Express way from Hemmigepura to Industrial Township at Bidadi – approximately 13 kms.

ವಾಸ್ತವಿಕವಾಗಿ ಕ್ರಿಯಾ ಒಪ್ಪಂದದಲ್ಲಿ ಸ್ಟೇಜ್-1 ಎಂಬ ಯಾವುದೇ ಭಾಗ ಇರುವುದಿಲ್ಲ. ಟೋಲ್ ರಸ್ತೆಯ ಫೇಸ್-1 ಮತ್ತು ಫೇಸ್-2 ರಸ್ತೆಗಳನ್ನು ಒಟ್ಟುಗೂಡಿಸಿ ಸೆಕ್ಷನ್ 'ಎ' ಎಂಬ ಭಾಗವನ್ನು ಪೂರಕ ಒಪ್ಪಂದದ ಮುಖಾಂತರ ಸೇರಿಸಲಾಗಿದೆ. ನೈಸೆಲ್ ಸಂಸ್ಥೆಯು ನೀಸಲ್ ಸಂಸ್ಥೆಗೆ ಈ ಭಾಗವನ್ನು ವಹಿಸುವಾಗ ಸೆಕ್ಷನ್ 'ಎ' ಭಾಗದ ರಸ್ತೆ ಮತ್ತು ನಗರ ಸಮುಚ್ಛಯ -1 ಅನ್ನು ಮೊದಲನೇ ಹಂತ ಎಂದು ವರ್ಗೀಕರಿಸಿದೆ. ಈ ಅಸೈನ್‌ಮೆಂಟ್ ಕರಾರಿಗೆ ದಿನಾಂಕ 15.10.2001 (ಕರಾರಿನ ಪೂರ್ವದಲ್ಲಿ) ಹಾಗೂ ದಿನಾಂಕ 27.05.2002 ಮತ್ತು 29.06.2002 ರಂದು ಲೋಕೋಪಯೋಗಿ ಇಲಾಖೆಯಿಂದ ಕನ್ಸೆಂಟ್ ಲೆಟರ್‌ಗಳನ್ನು ನೀಡಿರುವುದನ್ನು ಸಮಿತಿಯು ಗಮನಿಸಿದೆ. ವಾಸ್ತವಿಕವಾಗಿ ಸೆಕ್ಷನ್ 'ಎ' ಭಾಗದಲ್ಲಿ ಸಂಬಂಧಿತ ನಗರ ಸಮುಚ್ಛಯ ನೆಪದಲ್ಲಿ ನಗರ ಸಮುಚ್ಛಯ-1 ಅನ್ನು ಸೇರ್ಪಡೆ ಮಾಡುವುದರ ಬಗ್ಗೆ ಸರ್ಕಾರ ಸಹಮತಿ ಸೂಚಿಸಿರುವುದಿಲ್ಲ. ಈ ಹಿನ್ನೆಲೆಯಲ್ಲಿ ನೀಸಲ್ ಸಂಸ್ಥೆಗೆ ವಹಿಸಿರುವ ಕಾಮಗಾರಿಯ ಸ್ತರಗಳು ಅನಧಿಕೃತ ಎಂದು ಸಮಿತಿ ಪರಿಗಣಿಸುತ್ತದೆ.

[illegible] ಒಪ್ಪಂದದ ಮೂಲಕ ಅನಧಿಕೃತವಾಗಿ ಸೃಜಿಸಲಾಗಿರುವ ಇಂಟರ್ ಛೇಂಜ್‌ಗಳ [illegible] ಅಭಿವೃದ್ಧಿ ಹಾಗೂ ಮಾರಾಟದ ಷರತ್ತಿಗೆ ಅಧಿಕಾರದತ್ತ ಸಮಿತಿಯ ಸಹಮತಿ [illegible] .2002 ರಂದು ನಡೆಸಲಾದ ಅಧಿಕಾರದತ್ತ ಸಮಿತಿಯ ಸಭೆಯಲ್ಲಿ ಈ ರೀತಿ [illegible]

[illegible] required by the promoters and agreed by the Law [illegible] Tripatriate Agreement between GOK, NICE and NECE [illegible] into **FOR ENABLING NECE TO AVAIL OF THE [illegible] BENEFITS"**

ಈ [illegible] ಓದಿದಾಗ ಇಂಟರ್ ಛೇಂಜ್ ವ್ಯಾಪ್ತಿಯ ಜಮೀನಿನ ಮಾರಾಟದ ಬಗ್ಗೆ [illegible] ಯಾವುದೇ ಪ್ರತಿಪಾದನೆ ಮಾಡದೇ ಇರುವುದು ಸ್ಪಷ್ಟವಾಗಿದೆ. ಈ ಹಿನ್ನೆಲೆಯಲ್ಲಿ [illegible] ಒಪ್ಪಂದ ತ್ರಿಯಾ ಒಪ್ಪಂದದ ಅನುಚ್ಛೇಧ 4 ರ ಸ್ಪಷ್ಟ ಹಾಗೂ ನೇರ [illegible] ಇದಲ್ಲದೆ, ತ್ರಿಪಕ್ಷೀಯ ಒಪ್ಪಂದದ ಕರಡನ್ನು ಅಧಿಕಾರದತ್ತ ಸಮಿತಿ [illegible] ಬಗ್ಗೆ ಯಾವುದೇ ನಡಾವಳಿಗಳಲ್ಲಿ ಉಲ್ಲೇಖವಿರುವುದಿಲ್ಲ.

[illegible] ಇಲಾಖೆ ಕಡತ ಸಂಖ್ಯೆ PWD/155/CRM/95/Modfn/FWA/2002-[illegible] ಈ ಒಪ್ಪಂದಗಳ ಬಗ್ಗೆ ಉಲ್ಲೇಖಗಳಿದೆ. ಟಿಪ್ಪಣಿ ಹಾಳೆಯ ಕಂಡಿಕೆ 159-162 ರಲ್ಲಿ [illegible] ಸಮನ್ವಯಾಧಿಕಾರಿಯವರು ನೈಸೆಲ್ ಸಂಸ್ಥೆ ದಿನಾಂಕ 04.10.2001 ರ ಪತ್ರದ [illegible] ಅನುಚ್ಛೇಧ 20 ರ ಅಡಿಯಲ್ಲಿ ಯೋಜನೆಯ ಭಾಗವನ್ನು ಅಸ್ಸೈನ್ ಮಾಡಲು [illegible] ತಿಳಿಸಲಾಗಿದೆ. ಈ ಕೋರಿಕೆಯ ಅನುಗುಣವಾಗಿ,ಅನುಮೋದನೆಗಾಗಿ [illegible] ಮಂಡಿಸಿದ್ದು, ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ಇವರು ಒಪ್ಪಿಗೆ [illegible] ತತ್ಸಂಬಂಧವಾಗಿ ದಿನಾಂಕ 15.10.2001 ರ ಪತ್ರದಲ್ಲಿ ಕನ್ಸೆಂಟ್ ಲೆಟರ್ [illegible]

[illegible] ನೈಸೆಲ್ ಸಂಸ್ಥೆ ದಿನಾಂಕ 18.02.2002 ರಂದು ನೀಸೆಲ್ ಒಡನೆ ಅಸ್ಸೈನ್‌ಮೆಂಟ್ [illegible] ಮಾಡಿಕೊಂಡಿದ್ದು, ಪ್ರತಿಯನ್ನು ದಿನಾಂಕ 02.04.2002 ರಂದು ಲೋಕೋಪಯೋಗಿ [illegible] ದಿನಾಂಕ 17.05.2002 ರಂದು ಕಾನೂನು ಇಲಾಖೆ ಈ ಅಸ್ಸೈನ್‌ಮೆಂಟ್ [illegible] ಈ ರೀತಿ ಅಭಿಪ್ರಾಯ ವ್ಯಕ್ತಪಡಿಸಿದೆ:

[illegible] the file that the Administrative Department has not [illegible] regarding the assignment deed dated 18.02.2002. It [illegible] the Administrative Department to examine, verify and [illegible] the FWA permits such an assignment and, if so, whether [illegible] Deed is within the permissible limits of the Frame Work [illegible] is also required to examine the terms and conditions

contained in the Assignment Deed and whether it is agreeable to the said terms and conditions".

ಅಸ್ಸೈನ್‌ಮೆಂಟ್ ಒಪ್ಪಂದ ಅನುಷ್ಠಾನವಾದ ಮೂರು ತಿಂಗಳ ನಂತರ ಘಟನೋತ್ತರವಾಗಿ ಪ್ರತಿಯನ್ನು ಕಾನೂನು ಇಲಾಖೆಯ ಅಭಿಪ್ರಾಯಕ್ಕೆ ಸಲ್ಲಿಸುವುದು ಗುರುತರ ವೈಫಲ್ಯತೆಯಾಗಿರುತ್ತದೆ. ಇದಲ್ಲದೆ, ಪ್ರಸ್ತಾವಿತ ಅಸ್ಸೈನ್‌ಮೆಂಟ್ ಒಪ್ಪಂದದ ಕಂಡಿಕೆ 1.1.1 ರ ಪ್ರತಿಪಾದನೆಗಳು ಕ್ರಿಯಾ ಒಪ್ಪಂದದ ನೇರ ಹಾಗೂ ಸ್ಪಷ್ಟ ಉಲ್ಲಂಘನೆಯಾಗಿದ್ದು, ಈ ಅಂಶಗಳ ಬಗ್ಗೆ ಪ್ರಸ್ತಾವಿತ ಕಡತದಲ್ಲಿ ಪರಿಶೀಲಿಸಿರುವುದಿಲ್ಲ. ಲೋಕೋಪಯೋಗಿ ಇಲಾಖೆಯ ಟಿಪ್ಪಣಿ ಮೂಲ ಕ್ರಿಯಾ ಒಪ್ಪಂದದಲ್ಲಿ ಅಸ್ಸೈನ್‌ಮೆಂಟ್ ಒಪ್ಪಂದ ಮಾಡಿಕೊಳ್ಳಲು ಇರುವ ಸೌಲಭ್ಯದ ಬಗ್ಗೆ ಚರ್ಚಿಸುವುದಕ್ಕೆ ಸೀಮಿತವಾಗಿದೆ. *ಅನಧಿಕೃತವಾಗಿ ಇಂಟರ್ ಛೇಂಜ್ ವ್ಯಾಪ್ತಿಯ ಜಮೀನನ್ನು ಮಾರಾಟ ಮಾಡಿ ಕ್ರಿಯಾ ಒಪ್ಪಂದದಲ್ಲಿ ಪ್ರತಿಪಾದಿಸದೇ ಇರುವ ಅನುದ್ದೇಶಿತ ಆದಾಯಗಳನ್ನು ಗಳಿಸುವ ಸೌಲಭ್ಯವನ್ನು ಈ ಒಪ್ಪಂದದಲ್ಲಿ ಸೃಷ್ಟಿ ಮಾಡಲಾಗಿದೆ. ಇಂತಹ ಗಂಭೀರ ಹಾಗೂ ಗುರುತರ ತಿದ್ದುಪಡಿಯನ್ನು ನಿರ್ಲಕ್ಷಿಸಿರುವುದು ಅಕ್ಷಮ್ಯ ಅಪರಾಧವಾಗಿರುತ್ತದೆ. ಆದುದರಿಂದ ಈ ಅಸ್ಸೈನ್‌ಮೆಂಟ್ ಒಪ್ಪಂದದ ಪ್ರಸ್ತಾವನೆಯ ಸಾಧಕ ಬಾಧಕಗಳ ಬಗ್ಗೆ ವಿಶ್ಲೇಷಿಸದೇ ಅನುಮತಿ ನೀಡಿರುವ ಅಂದಿನ ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.*

ಈ ವೈಫಲ್ಯತೆಯು ಪುನಃ ಮರುಕಳಿಸಿದೆ. ಸಮಸಂಖ್ಯೆಯ ಕಡತದ ಮುಖಾಂತರ ದಿನಾಂಕ 27.05.2002 ರಲ್ಲಿ 2ನೇ ಕನ್ಸೆಂಟ್ ಲೆಟರ್ ಅನ್ನು ಹೊರಡಿಸಲಾಗಿದ್ದು, ಈ ಪತ್ರದ ಪ್ರಮುಖ ಭಾಗ ಈ ಕೆಳಕಂಡಂತಿದೆ:

"The Frame Work Agreement shall be read on the lines that NECEL has stepped in place of NICEL for execution of the Section'A' of the Project. The terms and conditions of the Agreement for Assignment and Development dated 18.02.2002 entered in between NICEL and NECEL will hold good only to the extent they are not inconsistent with the provisions of the Frame Work Agreement"

ಈ ಪತ್ರದಲ್ಲಿ ಅಸ್ಸೈನ್‌ಮೆಂಟ್ ಒಪ್ಪಂದ ಕ್ರಿಯಾ ಒಪ್ಪಂದದ ನಿರ್ಬಂಧನೆಗಳಿಗೆ ಒಳಪಟ್ಟಿರಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಲಾಗಿದೆ. ಆದರೆ ಈ ಅಭಿಪ್ರಾಯ ನಿರರ್ಥಕವಾಗಿದೆ. ಏಕೆಂದರೆ, ಅಸ್ಸೈನ್‌ಮೆಂಟ್ ಒಪ್ಪಂದ ಆದ ಮೂರು ತಿಂಗಳ ನಂತರ ಸಾಂಕೇತಿಕವಾಗಿ ಈ ಅಭಿಪ್ರಾಯ ವ್ಯಕ್ತಪಡಿಸಲಾಗಿದೆ. 28.06.2002 ರಂದು ಕಾನೂನು ಇಲಾಖೆಗೆ ಪುನಃ ಈ ಬಗ್ಗೆ ಕಡತವನ್ನು ಸಲ್ಲಿಸಿದ್ದು, ಕಾನೂನು ಇಲಾಖೆಯ ಅಭಿಪ್ರಾಯ ಕೆಳಕಂಡಂತಿದೆ:

"Administrative Department has stated that the assignment Deed entered into between Nandi Infrastructure Corridor Enterprises Limited and Nandi Economic Corridor Enterprises Limited, dated 18.02.2002, is in accordance with the provisions of Article20.2 and 20.2.2 of the Frame Work Agreement entered into between NICEL and Government of

Karnataka dated 03.04.1997. No legal issue is involved. In the background of the above noting of the Administrative Department, the letters at Annexure-I and III at pages 27 and 25 have been examined. They are in order. Minor corrections are effected wherever needed".

ಈ ಅಭಿಪ್ರಾಯವನ್ನು ಗಮನಿಸಿದಾಗ ಕಾನೂನು ಇಲಾಖೆಯ ವಿಶ್ಲೇಷಣೆಯನ್ನು ಕರಡು ಪತ್ರದ ಅನುಮೋದನೆಗೆ ಸೀಮಿತಗೊಳಿಸಿರುವುದು ಸ್ಪಷ್ಟವಾಗಿದೆ. ಈ ಸ್ತರದಲ್ಲೂ ಸಹ ಅಸೈನ್‌ಮೆಂಟ್ ಒಪ್ಪಂದದ ಷರತ್ತುಗಳ ಬಗ್ಗೆ ಲೋಕೋಪಯೋಗಿ ಇಲಾಖೆ ಅಭಿಪ್ರಾಯವನ್ನು ಕೋರುವುದರಲ್ಲಿ ನಿರ್ಲಕ್ಷ್ಯತಾ ಧೋರಣೆಯನ್ನು ತಳೆದಿದೆ. ಕ್ರಿಯಾ ಒಪ್ಪಂದದ ಅನುಚ್ಛೇಧ 20 ಕ್ಕೆ ಸೀಮಿತವಾದಂತೆ ಕಾನೂನು ಇಲಾಖೆಯ ಅಭಿಪ್ರಾಯವನ್ನು ಪಡೆದಿದ್ದು, ಒಪ್ಪಂದದ ನಿರ್ಬಂಧನೆಗಳು ಹಾಗೂ ಆತಂಕಕಾರಿ ಹಾಗೂ ಅನಧಿಕೃತ ಷರತ್ತುಗಳ ಬಗ್ಗೆ ಸೂಕ್ಷ್ಮಕರವಾಗಿ ಗಮನ ಹರಿಸುವಲ್ಲಿ ಲೋಕೋಪಯೋಗಿ ಇಲಾಖೆ ಸಂಪೂರ್ಣವಾಗಿ ವಿಫಲವಾಗಿದೆ.

ಈ ಬೆಳವಣಿಗೆಗಳನ್ನು ಗಮನಿಸಿದಾಗ 09.08.2002ರ ತ್ರಿಪಕ್ಷೀಯ ಒಪ್ಪಂದದಲ್ಲಿ ಅನಧಿಕೃತವಾಗಿ ಸೇರ್ಪಡೆ ಮಾಡಿರುವ "Development and Sale of land at 10 interchanges" ಷರತ್ತಿಗೆ ಲೋಕೋಪಯೋಗಿ ಇಲಾಖೆ, ಆರ್ಥಿಕ ಇಲಾಖೆ ಹಾಗೂ ಕಾನೂನು ಇಲಾಖೆ ನಿರ್ದಿಷ್ಟವಾಗಿ ಅನುಮೋದಿಸಿರುವ ಬಗ್ಗೆ ಪ್ರಸ್ತಾವಿತ ಕಡತದಲ್ಲಿ ಉಲ್ಲೇಖವಿರುವುದಿಲ್ಲ. ಈ ಅನುಮೋದನೆಯ ಅನುಪಸ್ಥಿಯಲ್ಲಿಯೂ ಸಹ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆಯವರು 09.08.2002ರ ತ್ರಿಪಕ್ಷೀಯ ಒಪ್ಪಂದಕ್ಕೆ ಸಹಿ ಮಾಡಿರುತ್ತಾರೆ. ಮೂಲ ಕ್ರಿಯಾಒಪ್ಪಂದದ ಅನುಗುಣವಾಗಿ ಹಾಗೂ ಯೋಜನಾ ತಾಂತ್ರಿಕ ವರದಿಯಲ್ಲಿ ತಿಳಿಸಿರುವಂತೆ ನಗರ ಸಮುಚ್ಛಯಗಳಲ್ಲಿ ಮಾತ್ರ ಜಮೀನಿನ ಅಭಿವೃದ್ಧಿ ಹಾಗೂ ಮಾರಾಟದ ಸೌಲಭ್ಯ ನೀಡಲಾಗಿದೆ. ಇದಲ್ಲದೆ ತ್ರಿಪಕ್ಷೀಯ ಒಪ್ಪಂದದಲ್ಲಿ ಮಾರಾಟ ಮಾಡಬಹುದಾದ ಜಮೀನಿನ ವಿಸ್ತೀರ್ಣದ ಬಗ್ಗೆ ಯಾವುದೇ ಉಲ್ಲೇಖವಿರುವುದಿಲ್ಲ. ಟೋಲ್ ರಸ್ತೆಗೆ ನಿಗಧಿಪಡಿಸಲಾದ 6999 ಎಕರೆಗಳ ವಿಸ್ತೀರ್ಣದಲ್ಲಿ 16 ಇಂಟರ್ ಛೇಂಜ್‌ಗಳ ಬಗ್ಗೆ ಉಲ್ಲೇಖಿಸಿದ್ದು ಈ ಪೈಕಿ, 10 ಇಂಟರ್ ಛೇಂಜ್‌ಗಳು 09.08.2002ರ ತ್ರಿಪಕ್ಷೀಯ ಒಪ್ಪಂದದ ವ್ಯಾಪ್ತಿಗೆ ಒಳಪಡುತ್ತದೆ. ಯೋಜನಾ ತಾಂತ್ರಿಕ ವರದಿಯ ಅನುಗುಣವಾಗಿ ಪ್ರತಿ ಇಂಟರ್‌ಛೇಂಜ್‌ಗೆ 75 ಎಕರೆ ಜಮೀನಿನ ಅವಶ್ಯಕತೆ ಇರುತ್ತದೆ. ಅಂದರೆ, ಈ ಷರತ್ತನ್ನು ಅಳವಡಿಸುವ ಮೂಲಕ ಸೆಕ್ಷನ್ 'ಎ' ವ್ಯಾಪ್ತಿಯ 10 ಇಂಟರ್ ಛೇಂಜ್‌ಗಳ 750 ಎಕರೆಗಳ ಜಮೀನನ್ನು ಮಾರಾಟ ಮಾಡುವ ಸೌಲಭ್ಯವನ್ನು ಖಾಸಗಿ ಪಾಲುದಾರರಿಗೆ ವಿಸ್ತರಿಸಲಾಗಿದೆ.

ಕಾನೂನು ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: LAW/234/OPN-II/99, ದಿನಾಂಕ 23.04.1994 ರ ಅನುಗುಣವಾಗಿ ಆಡಳಿತಾತ್ಮಕ ಇಲಾಖೆ ಅಂದರೆ, ಲೋಕೋಪಯೋಗಿ ಇಲಾಖೆಯು ಕ್ರಿಯಾಒಪ್ಪಂದದ ಬದಲಾವಣೆ ಅಥವಾ ತಿದ್ದುಪಡಿಯನ್ನು ಪ್ರಥಮ ಸ್ತರದಲ್ಲಿ ಆರ್ಥಿಕ ಇಲಾಖೆ ಹಾಗು ಅಂತಿಮವಾಗಿ ಸಚಿವ ಸಂಪುಟದ ಅನುಮೋದನೆಯೊಂದಿಗೆ ಜಾರಿಗೊಳಿಸಬೇಕಾಗುವುದು. ಈ ಪ್ರಕರಣದಲ್ಲಿ ಪ್ರಸ್ತಾವಿತ ತ್ರಿಪಕ್ಷೀಯ ಒಪ್ಪಂದವನ್ನು ಸಚಿವ ಸಂಪುಟದ ಹಾಗೂ ಆರ್ಥಿಕ ಇಲಾಖೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿರುವುದಿಲ್ಲ. ಇದೊಂದು ಗುರುತರ ವ್ಯತ್ಯಾಸವಾಗಿದೆ. ಮೂಲ ಕ್ರಿಯಾಒಪ್ಪಂದವನ್ನು ಸಚಿವ ಸಂಪುಟದ ಉಪ ಸಮಿತಿ ಅಮೂಲಾಗ್ರವಾಗಿ ಪರಿಶೀಲಿಸಿ ಅನುಮೋದಿಸಿರುವ ಹಿನ್ನೆಲೆಯಲ್ಲಿ ಯಾವುದೇ ಬದಲಾವಣೆ, ತಿದ್ದುಪಡಿ ಹಾಗೂ ಪರಿಷ್ಕರಣೆಯ ಆರ್ಥಿಕ ಪರಿಣಾಮವನ್ನು ಆರ್ಥಿಕ ಇಲಾಖೆ ಪರಿಶೀಲಿಸುವುದು ಅವಶ್ಯಕವಾಗಿರುತ್ತದೆ. ಎನ್.ಒ.ಸಿ, ಪ್ರಸ್ತಾವಿತ

ಬದಲಾವಣೆಗಳಿಂದ ಹೂಡಿಕೆಯ ಮೇಲಿನ ಪ್ರತಿಫಲ ಹಾಗೂ ಇತರ ಆರ್ಥಿಕ ಪರಿಣಾಮಗಳು ಪರಿಷ್ಕೃತವಾಗಬೇಕಾಗುವುದು, ಈ ಸೂಕ್ಷ್ಮತರ ಅಂಶವನ್ನು ಪರಿಗಣಿಸದ ಲೋಕೋಪಯೋಗಿ ಇಲಾಖೆ ತ್ರಿಪಕ್ಷೀಯ ಒಪ್ಪಂದವನ್ನು ಅನಧಿಕೃತವಾಗಿ ಕಾನೂನು ಇಲಾಖೆಯ ಅಭಿಪ್ರಾಯವನ್ನು ನಿರ್ಲಕ್ಷಿಸಿ ಜಾರಿಗೊಳಿಸಿರುವುದು ಅಕ್ಷಮ್ಯ ಅಪರಾಧ ಎಂದು ಸಮಿತಿ ತೀರ್ಮಾನಿಸಿರುತ್ತದೆ. 06.10.1999 ಹಾಗೂ 31.03.2000ರಂದು ಲೋಕೋಪಯೋಗಿ ಇಲಾಖೆ ಪೂರಕ ಒಪ್ಪಂದವನ್ನು ಸಚಿವ ಸಂಪುಟದ ಅನುಮೋದನೆಯೊಂದಿಗೆ ಜಾರಿಗೊಳಿಸಿದೆ. ಆದರೆ, 09.08.2002ರ ತ್ರಿಪಕ್ಷೀಯ ಒಪ್ಪಂದಕ್ಕೆ ಅನ್ವಯಿಸುವಂತೆ ಈ ವಿಧಿವಿಧಾನವನ್ನು ಪಾಲಿಸಿರುವುದಿಲ್ಲ. ಈ ಹಿನ್ನಲೆಯಲ್ಲಿ, ಉದ್ದೇಶಪೂರ್ವಕವಾಗಿಯೇ ಇಂತಹ ಗುರುತರ ಹಾಗೂ ಪ್ರಮುಖ ಬದಲಾವಣೆಯನ್ನು ಸಕ್ಷಮ ಪ್ರಾಧಿಕಾರದ ಗಮನಕ್ಕೆ ತರದೆ ಜಾರಿಗೊಳಿಸಿರುವುದು ಸ್ಪಷ್ಟವಾಗುತ್ತದೆ. ಈ ಒಪ್ಪಂದದ ಫಲಶ್ರುತಿಯಾಗಿ ಇಂಟರ್ ಛೇಂಜ್ ವ್ಯಾಪ್ತಿಯ 14 ಗ್ರಾಮಗಳ ಆಸು-ಪಾಸಿನ 756.33 ಎಕರೆಗಳ ಖಾಸಗಿ ಜಮೀನಿಗೆ ಅನ್ವಯಿಸುವಂತೆ ನೈಸಲ್/ನೀಸಲ್ ಸಂಸ್ಥೆ 4951.93 ಕೋಟಿ ರೂ.ಗಳ ಮೌಲ್ಯದ ವಹಿವಾಟನ್ನು ಜಂಟಿ ಅಭಿವೃದ್ಧಿ, ಅಡಮಾನ ಹಾಗೂ ಮಾರಾಟದ ಮೂಲಕ ಜಾರಿಗೊಳಿಸಿದೆ. ಯೋಜನೆಯ ಆರ್ಥಿಕ ಆಯಾಮಗಳ ವಿಶ್ಲೇಷಣೆಗಾಗಿ ನೇಮಕಾತಿ ಮಾಡಿದ ಐಸೆಕ್ (ISEC) ಸಂಸ್ಥೆಯು ಋಣಭಾರ ಪತ್ರಗಳ ಪರಿಶೀಲನೆ ನಡೆಸಿದ್ದು, ಈ ಪರಿಶೀಲನೆಯಲ್ಲಿ ಈ ವಹಿವಾಟುಗಳು ವ್ಯಕ್ತವಾಗಿದೆ. ಇದರಿಂದ ಖಾಸಗಿ ಪಾಲುದಾರರಿಗೆ ಕ್ರಿಯಾಒಪ್ಪಂದದಲ್ಲಿ ಪ್ರತಿಪಾದಿಸದಿರುವ ಆದಾಯ ಮೂಲವನ್ನು ಸೃಷ್ಟಿ ಮಾಡಲಾಗಿದೆ.ಪ್ರಸ್ತಾವಿತ ತ್ರಿಪಕ್ಷೀಯ ಒಪ್ಪಂದದ ಕಂಡಿಕೆ 4 ರಲ್ಲಿ ಕ್ರಿಯಾ ಒಪ್ಪಂದದಲ್ಲಿರುವ benefits, duties, interests and obligations Stage-1ಗೆ ಅನ್ವಯಿಸುವಂತೆ ನೀಸಲ್ ಸಂಸ್ಥೆಗೆ ಸಮಗ್ರವಾಗಿ ಹಸ್ತಾಂತರಿಸುವ ಬಗ್ಗೆ ಉಲ್ಲೇಖಿಸಲಾಗಿದೆ. ಆದರೆ, ಇಂಟರ್ ಛೇಂಜ್ ವ್ಯಾಪ್ತಿಯ ಜಮೀನಿನ ಅಭಿವೃದ್ಧಿ ಹಾಗೂ ಮಾರಾಟದ ಬಗ್ಗೆ ಕ್ರಿಯಾಒಪ್ಪಂದದಲ್ಲಿ ಉಲ್ಲೇಖವಿರುವುದಿಲ್ಲ. ಈ ಹಿನ್ನಲೆಯಲ್ಲಿ, ತ್ರಿಪಕ್ಷೀಯ ಒಪ್ಪಂದವು ಕ್ರಿಯಾಒಪ್ಪಂದದ ನೇರ ಹಾಗೂ ಸ್ಪಷ್ಟ ಉಲ್ಲಂಘನೆಯಾಗಿದೆ. ಲೋಕೋಪಯೋಗಿ ಇಲಾಖೆಯು ತ್ರಿಪಕ್ಷೀಯ ಒಪ್ಪಂದ ಅನುಷ್ಠಾನವಾದ 14 ವರ್ಷಗಳ ನಂತರವೂ ಅನಧಿಕೃತ ಸೌಲಭ್ಯಗಳ ವಿಸ್ತರಣೆಯ ಬಗ್ಗೆ ಕ್ರಿಯಾಒಪ್ಪಂದದ ವ್ಯಾಪ್ತಿಯಲ್ಲಿ ಕಾನೂನು ರೀತಿಯ ಕ್ರಮ ಜರುಗಿಸಿರುವುದಿಲ್ಲ. ಈ ಗುರುತರ ಬದಲಾವಣೆಯ ಬಗ್ಗೆ ನಿರ್ಲಿಪ್ತ ಧೋರಣೆಯನ್ನು ತಳೆದಿರುವುದು ಅಕ್ಷಮ್ಯ ಅಪರಾಧವಾಗಿದೆ. ಈ ಹಿನ್ನಲೆಯಲ್ಲಿ ಈ ವೈಫಲ್ಯತೆಯ ಬಗ್ಗೆ ಸಮಗ್ರ ತನಿಖೆಯನ್ನು ಜಾರಿಗೊಳಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

ತ್ರಿಪಕ್ಷೀಯ ಒಪ್ಪಂದ ಅನುಷ್ಠಾನವಾದ 5 ವರ್ಷಗಳ ನಂತರ ದಿನಾಂಕ 30.08.2007ರಂದು ನಡೆಸಲಾದ ಸಚಿವ ಸಂಪುಟ ಸಭೆಯಲ್ಲಿ ಪ್ರಕರಣ ಸಂಖ್ಯೆ:ಸಿ429:2007 (ಕಡತ ಸಂಖ್ಯೆ: ಪಿಡಬ್ಲ್ಯೂಡಿ 32 ಬಿಎಂಐಸಿ 2007) ಮುಖಾಂತರ ಟಿಪ್ಪಣಿ ಸಲ್ಲಿಸಲಾಗಿದೆ. ಈ ಟಿಪ್ಪಣಿ ಹಾಗೂ ಇದರಲ್ಲಿ ಒಳಗೊಂಡಿರುವ ಪ್ರಸ್ತಾವನೆಯನ್ನು ನಿರ್ದಿಷ್ಟವಾಗಿ ಕಂಡಿಕೆ ಸಂಖ್ಯೆ.4 ಅನ್ನು ಸಚಿವ ಸಂಪುಟ ಅನುಮೋದಿಸಿದೆ. ಕಂಡಿಕೆ ಸಂಖ್ಯೆ:4ರ ಪ್ರಸ್ತಾವನೆಗಳು ಕೆಳಕಂಡಂತಿದೆ:

4. In order to protect the interest and the properties of the State and its istrumentalities, approval of the Cabinet is solicited for the following:

i. Any person carrying out Bangalore-Mysore Infrastructure Corridor Project shall not be entitled to receive more than 20193 acres of land and that too, in the same proportion as indicated in paragraph

51 of the Judgement passed by the Hon'ble High Court of Karnataka in Writ Petiton No.29221/1997 (Somashekara Reddy's case).

ii. No sale deed shall be executed in favour of Nandi Infrastructure Corridor Enterprises Ltd., selling any of the lands in the BMIC project till the disposal of the Writ Petition No.327/2006 before the Hon'ble Supreme Court of India.

iii. NICE or anyone who is to implement the Bangalore-Mysore Infrastructure Corridor Project, shall not be entitled to sell/alleniate any portion of the land in the interchanges/road protion of BMIC project, Necessary steps be taken by the concerned department to cancel the agreement dated 09.08.2002, entered into between NICE, NECE and Government of Karnataka in so far as it introduces clause for sale of land in para 1.1.3 or elsewhere in the said agreement.

iv. Global tenders be called through Swiss challenge method. In respect of the proposal given by the Global Infrastructure Consortium regarding Bangalore-Mysore Ingrastructure Corridor project, subject to the outcome of the Writ Petition No.327 of 2006 pending before the Supreme Court of India and the Writ Petition pending before the Hon'ble High Court of Karnataka.

ಈ ನಿರ್ಧಾರಗಳ ಅನುಗುಣವಾಗಿ ಅಧಿಸೂಚನೆ ಸಂಖ್ಯೆ:33/2007-08 ದಿನಾಂಕ 17.09.2007ರ ಮುಖಾಂತರ ರಾಜ್ಯ ಸರ್ಕಾರವು ಗ್ಲೋಬಲ್ ಟೆಂಡರ್‌ಗಳನ್ನು Swiss challenge ಅಡಿಯಲ್ಲಿ ಆಹ್ವಾನಿಸಿತು. ನೈಸಲ್ ಸಂಸ್ಥೆಯು ಈ ಕ್ರಮವನ್ನು ಪ್ರಶ್ನಿಸಿ ಸರ್ವೋಚ್ಛ ನ್ಯಾಯಾಲಯದ ಮುಂದೆ ರಿಟ್ ಪಿಟಿಷನ್ ಸಂಖ್ಯೆ:545/2007ನ್ನು ದಾಖಲಿಸಿತು.

ಗ್ಲೋಬಲ್ Swiss challenge ವ್ಯವಸ್ಥೆಯಡಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸುವ ಪ್ರಸ್ತಾವನೆಯನ್ನು ಸರ್ಕಾರವು ಆದೇಶ ಸಂಖ್ಯೆ.ಪಿಡಬ್ಲ್ಯೂಡಿ/53/ಸಿಆರ್‌ಎಂ/2007 ಬೆಂಗಳೂರು ದಿನಾಂಕ 18.10.2008 ರ ಮುಖಾಂತರ ಹಿಂಪಡೆಯಿತು. ಇದೇ ಆದೇಶದಲ್ಲಿ ಸೋಮಶೇಖರ ರೆಡ್ಡಿ ಪ್ರಕರಣದ ನಿರ್ದೇಶನದ ಅನುಗುಣವಾಗಿ ಸವಿವರವಾದ ತಾಂತ್ರಿಕ ನಕ್ಷೆಗಳು ಹಾಗೂ ಜಂಟಿ ಅಳತೆಯ ನಂತರ ಜಮೀನನ್ನು ನೀಡುವಂತೆ ನಿರ್ದೇಶಿಸಲಾಯಿತು.

F12(*)

ಈ ಬೆಳವಣಿಗೆಗಳನ್ನು ಗಮನಿಸಿದಾಗ ನಿರ್ದಿಷ್ಟವಾಗಿ 30.08.2007ರ ಸಚಿವ ಸಂಪುಟದ ಅನುಮೋದಿತ ಟಿಪ್ಪಣಿಯ ಕಂಡಿಕೆ 4(iii) ಬಗ್ಗೆ ಪ್ರತಿಪಾದನೆ ಇರುವುದಿಲ್ಲ. ಅಂದರೆ, ತ್ರಿಪಕ್ಷೀಯ ಒಪ್ಪಂದದಲ್ಲಿ ಸೇರ್ಪಡೆ ಮಾಡಲಾದ ಇಂಟರ್ ಛೇಂಜ್ ವ್ಯಾಪ್ತಿಯ ಜಮೀನಿನ ಮಾರಾಟದ ಸೌಲಭ್ಯವನ್ನು ರದ್ದುಪಡಿಸುವ ಬಗ್ಗೆ ಸಚಿವ ಸಂಪುಟದ ತೀರ್ಮಾನ ಅನುಷ್ಠಾನವಾಗದೇ ಇರುವುದು ಸಮಿತಿಗೆ ಸ್ಪಷ್ಟವಾಗಿದೆ.

*<u>ಮೇಲೆ ವಿಶ್ಲೇಷಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸಮಿತಿಯು ಈ ಕೆಳಕಂಡಂತೆ ಶಿಫಾರಸ್ಸು ಮಾಡುತ್ತದೆ:</u>*

1. *30.08.2007ರ ಸಚಿವ ಸಂಪುಟದ ನಿರ್ಧಾರಗಳ ಅನುಗುಣವಾಗಿ ತ್ರಿಪಕ್ಷೀಯ ಒಪ್ಪಂದದ ಕಂಡಿಕೆ 1.1.3 ನ್ನು ರದ್ದುಗೊಳಿಸಲು ಸರ್ಕಾರವು ಕಾನೂನು ರೀತ್ಯ ಕ್ರಮ ಜರುಗಿಸಬೇಕೆಂದು ಸಮಿತಿಯು ಆಗ್ರಹಿಸುತ್ತದೆ. ಏಕೆಂದರೆ, ಇಂಟರ್ ಛೇಂಜ್ ವ್ಯಾಪ್ತಿಯ ಜಮೀನಿನ ಮಾರಾಟ ಸೌಲಭ್ಯ ಕ್ರಿಯಾಒಪ್ಪಂದದ ಯೋಜನಾ ತಾಂತ್ರಿಕ ವರದಿಯ ಸ್ಪಷ್ಟ ಹಾಗೂ ನೇರ ಉಲ್ಲಂಘನೆಯಾಗಿರುತ್ತದೆ.*

2. *ಲೋಕೋಪಯೋಗಿ ಇಲಾಖೆಗೆ ಕ್ರಿಯಾಒಪ್ಪಂದದ ಪಾಲನೆಯನ್ನು ಒಳಗೊಂಡಂತೆ ಯೋಜನಾ ಅನುಷ್ಠಾನದ ಸಮಗ್ರ ಸಮನ್ವಯತೆಯ ಜವಾಬ್ದಾರಿಯನ್ನು ವಹಿಸಲಾಗಿದೆ. ಆದ್ದಾಗ್ಯೂ, 02/2002ರ ಅಸೈನ್‌ಮೆಂಟ್ ಅಗ್ರಿಮೆಂಟ್ ಹಾಗೂ 08/2002ರ ತ್ರಿಪಕ್ಷೀಯ ಒಪ್ಪಂದದ ಅನಧಿಕೃತ ಪರಿಷ್ಕರಣೆ, ತಿದ್ದುಪಡಿ ಅಥವಾ ಸೇರ್ಪಡೆಗಳನ್ನು ಸೂಕ್ಷ್ಮಕರವಾಗಿ ಅವಲೋಕಿಸುವಲ್ಲಿ ಲೋಕೋಪಯೋಗಿ ಇಲಾಖೆ ಸಂಪೂರ್ಣವಾಗಿ ವಿಫಲವಾಗಿದೆ. ಲೋಕೋಪಯೋಗಿ ಇಲಾಖೆಯು ಕಾನೂನು ಇಲಾಖೆಗೆ ಒಪ್ಪಂದಗಳ ಅನುಷ್ಠಾನದ ಸಮರ್ಪಕತೆಯ ಬಗ್ಗೆ ಅಭಿಪ್ರಾಯ ಕೋರಿದೆ. ಆದರೆ, ಒಪ್ಪಂದದಲ್ಲಿರುವ ಆತಂಕಕಾರಿ ಹಾಗೂ ಅನಧಿಕೃತ ತಿದ್ದುಪಡಿಗಳ ಬಗ್ಗೆ ನಿರ್ಲಕ್ಷ್ಯತಾ ಧೋರಣೆಯನ್ನು ತಳೆದಿರುವುದು ಸ್ಪಷ್ಟವಾಗಿದೆ. ಮೇಲ್ನೋಟಕ್ಕೆ ಇದೊಂದು ಪ್ರಯತ್ನ ಪೂರ್ವಕ ವೈಫಲ್ಯತೆ ಎಂಬ ಅಭಿಪ್ರಾಯ ಸ್ಪಷ್ಟವಾಗಿರುವುದರಿಂದ ತ್ರಿಪಕ್ಷೀಯ ಒಪ್ಪಂದವನ್ನು ಜಾರಿಗೊಳಿಸುವಲ್ಲಿ ಪಾತ್ರ ವಹಿಸಿರುವ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ಹಾಗೂ ಸಂಬಂಧಿತ ಅಧಿಕಾರಿಗಳ ವಿರುದ್ಧ ಕಠಿಣ ಶಿಸ್ತಿನ ಕ್ರಮ/ಕಾನೂನು ರೀತಿಯ ಕ್ರಮ ಜರುಗಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.*

3. *ಈ ವರದಿಯ ವಿವಿಧ ಭಾಗಗಳಲ್ಲಿ ಪ್ರತಿಪಾದಿಸಿರುವಂತೆ ತ್ರಿಪಕ್ಷೀಯ ಒಪ್ಪಂದದ ಅನಧಿಕೃತ ಸೌಲಭ್ಯವನ್ನು ಖಾಸಗಿ ಪಾಲುದಾರರು ದುರ್ಬಳಕೆ ಮಾಡಿರುವುದು ಐಸೆಕ್ ಸಂಸ್ಥೆಯ ವಿಶ್ಲೇಷಣೆಯಿಂದ ಸ್ಪಷ್ಟವಾಗಿದೆ. ಮಾರ್ಗಸೂಚಿ ದರಗಳ ಅನುಗುಣವಾಗಿ ಸೆಕ್ಷನ್ 'ಎ' ವ್ಯಾಪ್ತಿಯ ಅಡಿಯಲ್ಲಿ ಸುಮಾರು 4,956 ಕೋಟಿ ರೂಗಳ ವಹಿವಾಟುಗಳನ್ನು ಜಾರಿಗೊಳಿಸಲಾಗಿದೆ. ಈ ವಹಿವಾಟುಗಳ ಪೈಕಿ ಜಮೀನಿನ ಮಾರಾಟವು ಒಳಗೊಂಡಿದೆ. ಕ್ರಿಯಾಒಪ್ಪಂದದ ಹಾಗೂ ಯೋಜನಾ ತಾಂತ್ರಿಕ ವರದಿಯ ನಿರೂಪಣೆಯ ಹಿನ್ನೆಲೆಯಲ್ಲಿ ಈ ಸ್ವೀಕೃತಿಯನ್ನು ಅನುದ್ದೇಶಿತ ಲಾಭ ಎಂದು ಪರಿಗಣಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಈ ಅನುದ್ದೇಶಿತ ಲಾಭದ ಅಂಶವನ್ನು ಪರಿಗಣಿಸಿ ಟೋಲ್ ಸ್ವೀಕೃತಿಗಳನ್ನು ಇದರೊಂದಿಗೆ ಸೇರ್ಪಡೆ ಮಾಡಿ ಟೋಲ್ ಕನ್ಸೆಷನ್ ಪಿರಿಯಡ್ ಅನ್ನು ಸೂಕ್ತ ಅನುಪಾತದಲ್ಲಿ ಪರಿಷ್ಕರಿಸಲು ಸರ್ಕಾರವು ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.*

4. ನೈಸೆಲ್ ಸಂಸ್ಥೆಯು ಟೋಲ್ ರಸ್ತೆಯ ಸೆಕ್ಷನ್ 'ಎ' ಭಾಗದ ಕಾಮಗಾರಿಗಳನ್ನು ಅಸೈನ್‌ಮೆಂಟ್ ಕರಾರಿನ ಮುಖಾಂತರ ಮೊದಲ ಸ್ತರದಲ್ಲಿ ಸೇರ್ಪಡೆ ಮಾಡಿದೆ. ಇದಲ್ಲದೆ, ಒಂದು ಸಂಬಂಧಿತ ನಗರ ಸಮುಚ್ಚಯವನ್ನು ಅಂದರೆ ಟೌನ್‌ಶಿಪ್-1 ಅನ್ನು ಸಹ ಮೊದಲ ಸ್ತರದ ಕಾಮಗಾರಿಯಲ್ಲಿ ಸೇರ್ಪಡೆ ಮಾಡಲಾಗಿದೆ. ಮೇಲ್ನೋಟಕ್ಕೆ ಈ ಪರಿಷ್ಕರಣೆ 06.10.1999ರ ಪೂರಕ ಒಪ್ಪಂದಕ್ಕೆ ವ್ಯತಿರಿಕ್ತವಾಗಿರುವುದನ್ನು ಸಮಿತಿಯು ಗಮನಿಸಿದೆ.

5. ಕಂಡಿಕೆ 1 ರಲ್ಲಿ ಉಲ್ಲೇಖಿಸಲಾದ ಸೇರ್ಪಡೆಗಳನ್ನು ಒಳಗೊಂಡಂತೆ ಪರಿಷ್ಕೃತ ಸ್ಟೇಜ್-1 ಅನ್ನು ನೈಸೆಲ್ ಸಂಸ್ಥೆ ಅಳವಡಿಸಿದ್ದು, ಈ ಸ್ತರದ ಅನುಷ್ಠಾನವನ್ನು ನೀಸೆಲ್ ಸಂಸ್ಥೆಗೆ ವಹಿಸಿಕೊಡಲಾಗಿದೆ. ಈ ವ್ಯವಸ್ಥೆಯು ದಿನಾಂಕ 06.10.1999 ರ ಪೂರಕ ಒಪ್ಪಂದಕ್ಕೆ ವ್ಯತಿರಿಕ್ತವಾಗಿರುವುದನ್ನು ಸಮಿತಿಯು ಗಮನಿಸಿದೆ.

6. ನೈಸೆಲ್ ಸಂಸ್ಥೆಯು ಮೊದಲನೇ ಹಂತದಲ್ಲಿ ಸಂಬಂಧಿತ ನಗರ ಸಮುಚ್ಛಯದ ಶೀರ್ಷಿಕೆಯಡಿಯಲ್ಲಿ ಟೌನ್‌ಶಿಪ್-1 ಅನ್ನು ಸೇರ್ಪಡೆ ಮಾಡಿರುವುದನ್ನು ಸಮಿತಿಯು ಗಮನಿಸಿದೆ. ವಾಸ್ತವಿಕವಾಗಿ ಸಚಿವ ಸಂಪುಟವು ಯೋಜನೆಯ ಪ್ರತಿ ಘಟಕದಲ್ಲೂ ಸಂಬಂಧಿತ ನಗರ ಸಮುಚ್ಛಯವನ್ನು ಸೇರ್ಪಡೆ ಮಾಡುವ ಬಗ್ಗೆ ಆಕ್ಷೇಪಿಸಿದ್ದು, ಈ ಪ್ರಸ್ತಾವನೆಯನ್ನು ತಿರಸ್ಕರಿಸಲಾಗಿದೆ.

7. ತ್ರಿಪಕ್ಷೀಯ ಒಪ್ಪಂದದಲ್ಲಿ ನೈಸೆಲ್ ಸಂಸ್ಥೆಯು ಒಂದು ಹೊಸಾ ಆಯಾಮವನ್ನು ಸೇರ್ಪಡೆ ಮಾಡಿದೆ. ವಾಸ್ತವಿಕವಾಗಿ ಇಂಟರ್ ಛೇಂಜ್‌ಗಳ ವ್ಯಾಪ್ತಿಯಲ್ಲಿನ ಜಮೀನಿನ ಅಭಿವೃದ್ಧಿ ಹಾಗೂ ಮಾರಾಟದ ಸೌಲಭ್ಯವನ್ನು ತ್ರಿಪಕ್ಷೀಯ ಒಪ್ಪಂದದಲ್ಲಿ ಸೇರ್ಪಡೆ ಮಾಡಲಾಗಿದೆ. ಟೋಲ್ ರಸ್ತೆಯ ಪಥದಲ್ಲಿ ಬರುವ 10 ಇಂಟರ್ ಛೇಂಜ್‌ಗಳಿಗೆ ಅನ್ವಯಿಸುವಂತೆ ಈ ಸೌಲಭ್ಯವನ್ನು ಕಲ್ಪಿಸಿರುವುದನ್ನು ಸಮಿತಿಯು ಗಮನಿಸಿದೆ. ವಾಸ್ತವಿಕವಾಗಿ ಈ ಸ್ವರೂಪದ ಸೌಲಭ್ಯವನ್ನು ವಿಸ್ತರಿಸುವ ಬಗ್ಗೆ ಮೂಲ ಕ್ರಿಯಾ ಒಪ್ಪಂದದಲ್ಲಿ ಯಾವುದೇ ಪ್ರತಿಪಾದನೆ ಇರುವುದಿಲ್ಲ. ಆದಾಗ್ಯೂ, ಸಹ ಲೋಕೋಪಯೋಗಿ ಇಲಾಖೆ ಹಾಗೂ ಅಧಿಕಾರದತ್ತ ಸಮಿತಿ ಈ ಅನಧಿಕೃತ ಸೇರ್ಪಡೆಯ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ವ್ಯಕ್ತಪಡಿಸದೇ ಇರುವುದನ್ನು ಸಮಿತಿಯು ಖೇದದಿಂದ ಗಮನಿಸಿದೆ. ಪ್ರಸ್ತಾವಿತ ಅಸೈನ್‌ಮೆಂಟ್ ಒಪ್ಪಂದ ಹಾಗೂ ತ್ರಿಪಕ್ಷೀಯ ಒಪ್ಪಂದದಲ್ಲಿ 2 ಅಂಶಗಳಿಗೆ ಸಂಬಂಧಿಸಿದಂತೆ ಕ್ರಿಯಾ ಒಪ್ಪಂದ, ಸಚಿವ ಸಂಪುಟದ ಉಲ್ಲೇಖಗಳು ಹಾಗೂ ನಿರ್ಧಾರಗಳ ನೇರ ಉಲ್ಲಂಘನೆಯಾಗಿದೆ. ಮೊದಲನೆಯದಾಗಿ ಸಂಬಂಧಿತ ನಗರ ಸಮುಚ್ಛಯದ ಸೇರ್ಪಡೆ ಹಾಗೂ ಎರಡನೆಯದಾಗಿ 10 ಇಂಟರ್ ಛೇಂಜ್ ವ್ಯಾಪ್ತಿಯ ಜಮೀನಿನ ಮಾರಾಟದ ಸೌಲಭ್ಯ. ಇದಲ್ಲದೆ, ಇಲಾಖಾ ಸ್ಪಷ್ಟೀಕರಣ ಅನುಗುಣವಾಗಿ ತ್ರಿಪಕ್ಷೀಯ ಒಪ್ಪಂದಕ್ಕೆ ತಾತ್ವಿಕವಾಗಿ ಅಥವಾ ನಿಖರವಾಗಿ ಸಚಿವ ಸಂಪುಟ ಅನುಮೋದನೆಯನ್ನು ನೀಡಿರುವುದಿಲ್ಲ. ಈ ಹಿನ್ನೆಲೆಯಲ್ಲಿ ತ್ರಿಪಕ್ಷೀಯ ಒಪ್ಪಂದದ ಮೂಲಕ ಜಾರಿಗೊಳಿಸಲಾದ ತಿದ್ದುಪಡಿಗಳು, ಸೇರ್ಪಡೆಗಳು ಹಾಗೂ ಪರಿಷ್ಕರಣೆಗಳನ್ನು ಅನಧಿಕೃತ ಎಂದು ಸಮಿತಿ ತೀರ್ಮಾನಿಸುತ್ತದೆ. ಈ ವರದಿಯಲ್ಲಿ ಈಗಾಗಲೇ ಉಲ್ಲೇಖಿಸಿದಂತೆ ಕಾನೂನು ಇಲಾಖೆಯು ಮೂಲಭೂತವಾಗಿ ಕ್ರಿಯಾ ಒಪ್ಪಂದವನ್ನು ಸಚಿವ ಸಂಪುಟದ ಅನುಮೋದನೆಯೊಂದಿಗೆ ಜಾರಿಗೊಳಿಸಿರುವುದರಿಂದ ಕ್ರಿಯಾ ಒಪ್ಪಂದಕ್ಕೆ ಮಾಡುವ ಸೇರ್ಪಡೆಗಳು, ತಿದ್ದುಪಡಿಗಳು ಹಾಗೂ ಪರಿಷ್ಕರಣೆಗಳೂ ಸಹ ಸಚಿವ ಸಂಪುಟದ ಅನುಮೋದನೆಯೊಂದಿಗೆ ಜಾರಿಗೊಳಿಸದಿದ್ದಲ್ಲಿ ಅನಧಿಕೃತ ಎಂದು ಅಭಿಪ್ರಾಯ ನೀಡಿರುವುದನ್ನು ಸಮಿತಿಯು ಗಮನಿಸಿದೆ. ಇದಲ್ಲದೆ, ಸುಪ್ರೀಂಕೋರ್ಟ್ ರಲ್ಲಿ ಪ್ರಕರಣದ ತೀರ್ಪಿನಲ್ಲಿ ಕ್ರಿಯಾ

*ಒಪ್ಪಂದನವನ್ನು ಅಕ್ಷರಶಃ ಹಾಗೂ ತಾತ್ವಿಕವಾಗಿ ಪಾಲಿಸಬೇಕೆಂದು ನಿರ್ದೇಶಿಸಲಾಗಿದೆ. ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ತ್ರಿಪಕ್ಷೀಯ ಒಪ್ಪಂದವನ್ನು ಈ ಕೂಡಲೇ ಹಿಂಪಡೆಯಲು ಸರ್ಕಾರವು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಇದಕ್ಕೆ ಪೂರಕವಾಗಿ ಈ ತ್ರಿಪಕ್ಷೀಯ ಒಪ್ಪಂದದ ಅನುಷ್ಠಾನಕ್ಕೆ ಕಾರಣಕರ್ತರಾದ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳನ್ನು ಗುರುತಿಸಿ ಅವರ ವಿರುದ್ಧ ಕಠಿಣ ಶಿಸ್ತಿನ ಕ್ರಮ ಜರುಗಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.*

8. ಪ್ರಸ್ತಾವಿತ ಉಲ್ಲಂಘನೆಗಳಿಂದಾಗಿ ನೈಸೆಲ್ ಸಂಸ್ಥೆಯು ಪೆರಿಫರಲ್ ರಸ್ತೆ ಮತ್ತು ಲಿಂಕ್ ರಸ್ತೆಯ ವ್ಯಾಪ್ತಿಯಲ್ಲಿ ಕ್ರಿಯಾ ಒಪ್ಪಂದದಲ್ಲಿ ಪ್ರತಿಪಾದಿಸದೇ ಇರುವ ಅಭಿವೃದ್ಧಿ ಕಾಮಗಾರಿಗೆ ಜಮೀನನ್ನು ಬಳಸುತ್ತಿರುವುದು ಸಮಿತಿಯ ಗಮನಕ್ಕೆ ಬಂದಿದೆ. ಈ ಅಭಿವೃದ್ಧಿ ಕಾಮಗಾರಿಗಳಲ್ಲಿ ನಿವಾಸಿ ಬಡಾವಣೆಗಳು, ಅಪಾರ್ಟ್‌ಮೆಂಟ್‌ಗಳು ಹಾಗೂ ಬಹುಪಯೋಗಿ ವಾಣಿಜ್ಯ ಸಂಕೀರ್ಣಗಳು ಸೇರ್ಪಡೆಯಾಗಿರುವುದು ಸಮಿತಿಯ ಗಮನಕ್ಕೆ ಬಂದಿದೆ. ಉದಾಹರಣೆಗೆ ಮಾದಾವರ, ಕೆಂಗೇರಿ, ಕೊಮ್ಮಘಟ್ಟ, ವರಾಹಸಂದ್ರ, ಸೋಮಪುರ, ಪಂತರಪಾಳ್ಯ, ಹೊಸಕೆರೆಹಳ್ಳಿ ಗ್ರಾಮಗಳ ವ್ಯಾಪ್ತಿಯಲ್ಲಿ ಈ ಸ್ವರೂಪದ ಅನಧಿಕೃತ ನಿವಾಸಿ ಸಮುಚ್ಛಯಗಳನ್ನು ಅಭಿವೃದ್ಧಿ ಪಡಿಸಲು ಕ್ರಮ ಕೈಗೊಳ್ಳಲಾಗಿದೆ. ಈ ಹಿನ್ನೆಲೆಯಲ್ಲಿ ತ್ರಿಪಕ್ಷೀಯ ಒಪ್ಪಂದವು ಖಾಸಗಿ ಪಾಲುದಾರರಿಗೆ ಅನಧಿಕೃತ ಹಾಗೂ ಅನಪೇಕ್ಷಿತ ಲಾಭವನ್ನು ವಿಸ್ತರಿಸಿದೆ ಎಂದು ಸಮಿತಿಯು ತೀರ್ಮಾನಿಸುತ್ತದೆ. *ಕ್ರಿಯಾ ಒಪ್ಪಂದದ ಅನುಗುಣವಾಗಿ ಖಾಸಗಿ ಪಾಲುದಾರರ ಆದಾಯ ಅಥವಾ ಸ್ವೀಕೃತಿಗಳು, ಟೋಲ್ ಸಂಗ್ರಹಣೆ ಹಾಗೂ ನಗರ ಸಮುಚ್ಛಯಗಳಲ್ಲಿ ನಿವೇಶನದ ಮಾರಾಟ ಈ ಪ್ರಕ್ರಿಯೆಗೆ ಸೀಮಿತವಾಗಿರಬೇಕಾಗುತ್ತದೆ. ಪ್ರಸ್ತಾವಿತ ಉಲ್ಲಂಘನೆಯಿಂದಾಗಿ ಖಾಸಗಿ ಪಾಲುದಾರರಿಗೆ ಯೋಜನಾ ಅನುಷ್ಠಾನ ಪ್ರದೇಶದ ಅನಿಯಂತ್ರಿತ ಹಾಗೂ ಅನಧಿಕೃತ ಬಳಕೆಗೆ ಸಹಮತಿ ಸೂಚಿಸಿದಂತಾಗಿದೆ. ಈಗಾಗಲೇ ಕರ್ನಾಟಕದ ಉಚ್ಛ ನ್ಯಾಯಾಲಯ 28.02.2005ರ ತನ್ನ ತೀರ್ಪಿನಲ್ಲಿ ಹಾಗೂ ಸರ್ವೋಚ್ಛ ನ್ಯಾಯಾಲಯ 20.04.2006ರ ತೀರ್ಪಿನಲ್ಲಿ ತ್ರಿಪಕ್ಷೀಯ ಒಪ್ಪಂದವನ್ನು ಅಧಿಕೃತ ಎಂದು ಘೋಷಿಸಿರುವುದನ್ನು ಸಮಿತಿಯು ಗಮನಿಸಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರವು 18.02.2002ರ ಅಸೈನ್‌ಮೆಂಟ್ ಕರಾರು ಹಾಗೂ 09.08.2002ರ ತ್ರಿಪಕ್ಷೀಯ ಒಪ್ಪಂದದ ಅಧಿಕೃತ ಸ್ಥಿತಿಗತಿಗಳ ಬಗ್ಗೆ ನ್ಯಾಯಾಲಯಗಳಲ್ಲಿ ಸೂಕ್ತವಾಗಿ ಪ್ರತಿಪಾದಿಸಿ, ಕಲ್ಪಿಸಲಾದ ಅನಧಿಕೃತ ಸೌಲಭ್ಯಗಳನ್ನು ಹಿಂಪಡೆಯಲು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.*

9. *ನೈಸೆಲ್/ನೀಸೆಲ್ ಸಂಸ್ಥೆಯು ನಗರ ಸಮುಚ್ಛಯ-1 ಅನ್ನು ಸ್ಥಳಾಂತರ ಮಾಡಿದ್ದು, ಮೂಲವಾಗಿ ಗುರುತಿಸಲಾದ ಸ್ಥಳದಲ್ಲಿ ಸ್ವಾಧೀನಪಡಿಸಿಕೊಳ್ಳಲಾದ ಭೂಮಿಯನ್ನು ಪೆರಿಫರಲ್ ರಸ್ತೆಯ ಅನುಷ್ಠಾನದ ಬಳಕೆಗಾಗಿ ಎಂದು ವರ್ಗೀಕರಿಸಿರುವುದನ್ನು ಸಮಿತಿಯು ಗಮನಿಸಿದೆ. ಆದರೆ ಈ ಬಳಕೆಗೆ ವ್ಯತಿರಿಕ್ತವಾಗಿ ಮೂಲವಾಗಿ ಪ್ರತಿಪಾದಿಸಲಾದ ಟೌನ್‌ಶಿಪ್-1 ಪ್ರದೇಶದ ಜಮೀನನ್ನು ಬಡಮನವರ್ತೆ ಕಾವಲ್, ಹೆಮ್ಮಿಗೆಪುರ ಹಾಗೂ ವರಾಹಸಂದ್ರ ಗ್ರಾಮಗಳ ವ್ಯಾಪ್ತಿಯಲ್ಲಿ ನಿವಾಸಿ ಬಡಾವಣೆಗಳನ್ನು ನಿರ್ಮಿಸಿರುವುದನ್ನು ಸಮಿತಿಯು ಗಮನಿಸಿದೆ. ಈ ಅಭಿವೃದ್ಧಿ ಕಾಮಗಾರಿಗಳು ಕ್ರಿಯಾ ಒಪ್ಪಂದದ ನೇರ ಹಾಗೂ ಸ್ಪಷ್ಟ ಉಲ್ಲಂಘನೆಯಾಗಿದೆ. ಇದಲ್ಲದೆ, ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನ ಉಲ್ಲಂಘನೆಯೂ ಸಹ ಆಗಿದೆ. ಈ ಹಿನ್ನೆಲೆಯಲ್ಲಿ ಬಿ.ಎಂ.ಐ.ಸಿ.ಪಿ.ಎ. ಸಂಸ್ಥೆಯು ಕ್ರಿಯಾ ಒಪ್ಪಂದದಲ್ಲಿ ಪ್ರತಿಪಾದಿಸಲಾಗಿರುವ ಷರತ್ತುಗಳ ಉಲ್ಲಂಘನೆಯ ಆಧಾರದ ಮೇಲೆ ಯೋಜನಾ ಅನುಷ್ಠಾನದ ಪ್ರದೇಶಕ್ಕೆ ಮೇಲೆ ವಿನಾಯಿತಿಯ ಹಿನ್ನೆಲೆಯಲ್ಲಿ ಅನಧಿಕೃತ ಎಂದು*

*ವರ್ಗೀಕರಿಸಬಹುದಾದ ಸಮಗ್ರ ಬೆಳವಣಿಗೆಗಳನ್ನು ಕೂಡಲೇ ಸ್ಥಗಿತಗೊಳಿಸಿ ನಿಯಂತ್ರಿಸಲು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.*

10. *ಬಿ.ಎಂ.ಐ.ಎ.ಪಿ.ಎ ಪ್ರಾಧಿಕಾರವು ಸೆಕ್ಷನ್ 'ಎ' ವ್ಯಾಪ್ತಿಯಲ್ಲಿ ಕ್ರಿಯಾ ಒಪ್ಪಂದದಲ್ಲಿ ಪ್ರತಿಪಾದಿಸದೇ ಇರುವ ಅಭಿವೃದ್ಧಿ ಕಾಮಗಾರಿಗಳ ನಕ್ಷೆಯ ಮಂಜೂರಾತಿಯ ಪ್ರಸ್ತಾವನೆಗಳನ್ನು ಸ್ಥಗಿತಗೊಳಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ತ್ರಿಪಕ್ಷೀಯ ಒಪ್ಪಂದವು ಅನಧಿಕೃತವಾಗಿರುವುದರಿಂದ ಇದರ ಆಧಾರದ ಮೇಲೆ ಸಲ್ಲಿಸುವ ಅಭಿವೃದ್ಧಿಯ ಪ್ರಸ್ತಾವನೆಗಳನ್ನು ತಿರಸ್ಕರಿಸಬೇಕೆಂದು ಸಮಿತಿಯು ಆಗ್ರಹಿಸುತ್ತದೆ. ಇದಲ್ಲದೆ, ಸಮಿತಿಯು ಸ್ಥಳ ಪರಿವೀಕ್ಷಣೆಯಲ್ಲಿ ಎಲೆಕ್ಟ್ರಾನಿಕ್ ಸಿಟಿ ಬಳಿಯಿರುವ ದೊಡ್ಡ ತೋಗೂರು ವ್ಯಾಪ್ತಿಯ ಪ್ರದೇಶದಲ್ಲಿ ಐಷಾರಾಮಿ ಕಲ್ಯಾಣ ಭವನವನ್ನು ನಿರ್ಮಿಸಿರುವುದನ್ನು ಸಮಿತಿಯು ಗಮನಿಸಿದೆ. ಇದೇ ರೀತಿ ಮಾದಾವರ ಬಳಿ ನೀಲಕಂಠ ಕನ್ವೆನ್‌ಷನ್ ಹಾಲ್ ನಾಮಾಂಕಿತದ ಕಲ್ಯಾಣ ಮಂಟಪವನ್ನು ನಿರ್ಮಿಸಲಾಗಿದೆ. ಬಿ.ಎಂ.ಐ.ಸಿ.ಎ.ಪಿ.ಎ ಸಾಕ್ಷಿಗಳ ಹೇಳಿಕೆಗೆ ಅನುಗುಣವಾಗಿ ಈ ಎರಡೂ ನಿರ್ಮಾಣಗಳಿಗೆ ಮಂಜೂರಾತಿಯನ್ನು ನೀಡಿರುವುದಿಲ್ಲ. ಆದುದರಿಂದ ಈ ನಿರ್ಮಾಣವನ್ನು ಅನಧಿಕೃತ ಎಂದು ತೀರ್ಮಾನಿಸಿ ತೆರವುಗೊಳಿಸಲು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.*

## *XXXIV. ಅನುಚ್ಛೇಧ-22 – ಸಾಮಾನ್ಯ ಷರತ್ತುಗಳು*

ಈ ಕರಾರಿನ ಅನುಚ್ಛೇಧ 22.1 ರ ಅಡಿಯಲ್ಲಿ ಖಾಸಗಿ ಪಾಲುದಾರರು ಹಾಗೂ ಕರ್ನಾಟಕ ಸರ್ಕಾರ ತರ್ಕಬದ್ಧವಾಗಿ ಕೋರಿರುವ ಮಾಹಿತಿಯನ್ನು ಪರಸ್ಪರ ವಿನಿಮಯ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಈ ಮಾಹಿತಿಯು ಸಕ್ರಮವಾಗಿ ಖಾಸಗಿ ಪಾಲುದಾರರು ಹಾಗೂ ಸರ್ಕಾರ ನಿರ್ವಹಿಸಬೇಕಾದ ಕರ್ತವ್ಯಕ್ಕೆ ಅನ್ವಯಿಸುವಂತೆ ಹಾಗೂ ಕ್ರಿಯಾ ಒಪ್ಪಂದದಲ್ಲಿ ಉಲ್ಲೇಖಿಸಿರುವಂತೆ ಪರಸ್ಪರ ಒಪ್ಪಂದದೊಂದಿಗೆ ನಿಗದಿಪಡಿಸಲಾದ ರೀತಿಯಲ್ಲಿ ಹಾಗೂ ನಮೂನೆಯಲ್ಲಿ ಮಾಹಿತಿಯನ್ನು ಒದಗಿಸಬೇಕಾಗುವುದು. ಖಾಸಗಿ ಪಾಲುದಾರರು ರಾಜ್ಯ ಸರ್ಕಾರದ ಪ್ರತಿನಿಧಿಗಳನ್ನು ಯೋಜನಾ ಅನುಷ್ಠಾನ ಪ್ರದೇಶಕ್ಕೆ ಭೇಟಿ ನೀಡಲು ಅನುಮತಿ ನೀಡುವ ಬಗ್ಗೆ ಪ್ರತಿಪಾದಿಸಲಾಗಿದೆ. ಈ ಅನುಮತಿಯು ಕ್ರಿಯಾ ಒಪ್ಪಂದದ ಕಂಡಿಕೆ 4.1.4ರ ನಿರ್ಬಂಧನೆಗೆ ಒಳಪಟ್ಟಿರುತ್ತದೆ. ಈ ಹಿನ್ನೆಲೆಯಲ್ಲಿ ಸಮಿತಿಯು ಕಂಡಿಕೆ 4.1.4 ಅನ್ನು ಪರಿಶೀಲಿಸಿದೆ. ಈ ಅನುಚ್ಛೇಧದಲ್ಲಿ ಕರ್ನಾಟಕ ರಾಜ್ಯ ಸರ್ಕಾರವು ಭೇಟಿ ನೀಡುವ ಹಕ್ಕನ್ನು ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಪರಿವೀಕ್ಷಣೆ ಮಾಡುವ, ಸಲಹೆ ನೀಡುವ, ಶಿಫಾರಸ್ಸು ಮಾಡುವ, ಬದಲಾವಣೆಗಳನ್ನು ಸೂಚಿಸುವ ಹಕ್ಕು ಎಂದು ಪರಿಗಣಿಸಲಾಗುವುದಿಲ್ಲ ಎಂದು ಉಲ್ಲೇಖಿಸಲಾಗಿದೆ. ಈ ಷರತ್ತನನ್ನು ಅವಲೋಕಿಸಿದಾಗ ಕರ್ನಾಟಕ ರಾಜ್ಯ ಸರ್ಕಾರದ ಪಾತ್ರವು ಕೇವಲ ಯೋಜನಾ ಪ್ರದೇಶಕ್ಕೆ ಭೇಟಿ ನೀಡುವುದಕ್ಕೆ ಸೀಮಿತವಾಗಿರುವುದು ಸ್ಪಷ್ಟವಾಗಿದೆ. ಸಮಿತಿಗೆ ಲಭ್ಯವಿರುವ ಮಾಹಿತಿಗಳ ಅನುಗುಣವಾಗಿ ಅಧಿಕಾರದತ್ತ ಸಮಿತಿಯಾಗಲೀ ಅಥವಾ ಸಮಗ್ರ ಸಮನ್ವಯತೆಯ ನಿರ್ವಹಣೆಗೆ ಜವಾಬ್ದಾರಿಯುತವಾದ ಲೋಕೋಪಯೋಗಿ ಇಲಾಖೆಯಾಗಲೀ ಈವರೆವಿಗೂ ಯೋಜನಾ ಪ್ರದೇಶಕ್ಕೆ ಭೇಟಿ ನೀಡಿರುವುದಿಲ್ಲ. ಬಿ.ಎಂ.ಐ.ಸಿ. ಯೋಜನಾ ಅನುಷ್ಠಾನದಲ್ಲಿ ಭೂನಿರ್ವಹಣೆ ಕ್ಲಿಷ್ಟಕರ ಹಾಗೂ ಸಂದಿಗ್ಧ ಹಂತವನ್ನು ತಲುಪಿದ್ದು, ವಾಸ್ತವಿಕ ಅನುಷ್ಠಾನ ಪ್ರದೇಶಕ್ಕೆ ಅಧಿಕಾರದತ್ತ ಸಮಿತಿ ಅಥವಾ ಲೋಕೋಪಯೋಗಿ ಇಲಾಖೆ ನಿಯತಕಾಲಿಕವಾಗಿ ಭೇಟಿ ನೀಡಿದ್ದಲ್ಲಿ, ಪಥಗಳ ಬದಲಾವಣೆ, ವಿನ್ಯಾಸದ ಮಾನದಂಡಗಳ ಪಾಲನೆ, ಮಾರ್ಗದ ಹಕ್ಕಿನ ನಿಯಂತ್ರಣ, ಅನಧಿಕೃತ ಬಳಕೆ ಹಾಗೂ ನಿರ್ಮಾಣವನ್ನು ಪರಿಣಾಮಕಾರಿಯಾಗಿ ಹಾಗೂ ಸಮಯೋಚಿತವಾಗಿ ನಿಯಂತ್ರಿಸಲು

ಸಾಧ್ಯವಾಗುತ್ತಿತ್ತು ಎಂದು ಸಮಿತಿ ಅಭಿಪ್ರಾಯ ಪಡುತ್ತದೆ. ಕ್ರಿಯಾ ಒಪ್ಪಂದದ ಈ ಅನುಚ್ಛೇಧದಲ್ಲಿ ಕಲ್ಪಿಸಲಾಗಿರುವ ಅವಕಾಶಗಳನ್ನು ಬಳಸುವಲ್ಲಿ ಲೋಕೋಪಯೋಗಿ ಇಲಾಖೆ ಹಾಗೂ ಕೆ.ಐ.ಎ.ಡಿ.ಬಿ. ವಿಫಲವಾಗಿರುವುದು ಸ್ಪಷ್ಟವಾಗಿದೆ. 2ನೇ ಸ್ತರದಲ್ಲಿ ಪರಸ್ಪರ ಸಹಮತಿಯೊಂದಿಗೆ ಮಾಹಿತಿಯನ್ನು ವಿನಿಮಯ ಮಾಡುವ ಅವಕಾಶವನ್ನು ಕಲ್ಪಿಸಲಾಗಿದೆ. ಸರ್ಕಾರದ ಪರವಾಗಿ ಫೈನಾನ್ಷಿಯಲ್ ಕ್ಲೋಷರ್ ಸಾಧಿಸಲು ಹಾಗೂ ಜಮೀನಿನ ಖಾತ್ರಿಯ ಮೇಲೆ ಬಂಡವಾಳ ಸೃಜನೆಗಾಗಿ ಸಾಲಗಳನ್ನು ಪಡೆಯುವ ಸಂದರ್ಭದಲ್ಲಿ ನಿರಾಪೇಕ್ಷಣಾ ಪತ್ರಗಳನ್ನು ನೀಡಿರುವುದು ಅಥವಾ ಸಹಮತಿ ಪತ್ರಗಳನ್ನು ನೀಡಿರುವುದು ಸಮಿತಿಯ ಗಮನಕ್ಕೆ ಬಂದಿದೆ. ಇದೇ ಆಧಾರದ ಮೇಲೆ ಲೋಕೋಪಯೋಗಿ ಇಲಾಖೆ ಫೈನಾನ್ಷಿಯಲ್ ಕ್ಲೋಷರ್ ದಾಖಲಾತಿಗಳನ್ನು ಕೋರಿದಾಗ ನೈಸೆಲ್ ಸಂಸ್ಥೆ ಗೌಪ್ಯತೆಯ ಷರತ್ತಿನ ಆಧಾರದ ಮೇಲೆ ತಿರಸ್ಕರಿಸಿರುವುದೂ ಸಹ ಸಮಿತಿಯ ಗಮನಕ್ಕೆ ಬಂದಿದೆ. ಸರ್ಕಾರದ ಸಹಮತಿಯೊಂದಿಗೆ ಅನುಷ್ಠಾನಗೊಳಿಸಲಾದ ನಿರ್ಧಾರಗಳಿಗೆ ಅನ್ವಯವಾಗುವಂತೆ ಸಂಬಂಧಿತ ದಾಖಲಾತಿಗಳನ್ನು ಪರಸ್ಪರ ಸಹಮತಿಯೊಂದಿಗೆ ಕ್ರಿಯಾ ಒಪ್ಪಂದದ ಈ ಅನುಚ್ಛೇಧದಲ್ಲಿ ಪಡೆಯಲು ಅವಕಾಶವಿದೆ ಎಂದು ಸಮಿತಿ ತೀರ್ಮಾನಿಸುತ್ತದೆ. ಸಮಯೋಚಿತವಾಗಿ ಕ್ರಿಯಾ ಒಪ್ಪಂದದ ಈ ಅನುಚ್ಛೇಧವನ್ನು ಬಳಸುವಲ್ಲಿ ಸರ್ಕಾರ ಹಾಗೂ ಸರ್ಕಾರವನ್ನು ಪ್ರತಿನಿಧಿಸುವ ಇಲಾಖೆಗಳು/ಸಂಸ್ಥೆಗಳು ನಿರ್ಲಕ್ಷ್ಯತಾ ಧೋರಣೆಯನ್ನು ತಳೆದಿರುವುದರಿಂದ ಯೋಜನೆಯ ಮೌಲ್ಯಮಾಪನವನ್ನು ಪ್ರಸಕ್ತ ಸ್ಥಿತಿಗತಿಗಳ ಅನುಗುಣವಾಗಿ ಕೈಗೊಳ್ಳುವುದರಲ್ಲಿ ಲೋಕೋಪಯೋಗಿ ಇಲಾಖೆಯು ನಿಷ್ಕ್ರಿಯವಾಗಿದೆ ಎಂದು ಸಮಿತಿ ತೀರ್ಮಾನಿಸುತ್ತದೆ. ***ಈ ಹಿನ್ನೆಲೆಯಲ್ಲಿ ಕ್ರಿಯಾ ಒಪ್ಪಂದದ ಈ ಅನುಚ್ಛೇಧವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಿ ಪರಸ್ಪರ ಸಹಮತಿಯೊಂದಿಗೆ ಸೂಕ್ಷ್ಮಕರ ಹಾಗೂ ಗುರುತರ ಮಾಹಿತಿಯನ್ನು ವಿನಿಮಯ ಮಾಡಿಕೊಳ್ಳಲು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.ಕನಿಷ್ಠ ಪಕ್ಷ ಖಾಸಗಿ ಪಾಲುದಾರರ ಬ್ಯಾಲೆನ್ಸ್ ಶೀಟ್‌ಗಳು ಮುಂಗಡ ಅಥವಾ ಸಾಲದ ಒಪ್ಪಂದಗಳು ಇತ್ಯಾದಿಗಳನ್ನು ಪಡೆಯಲು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.*** ಸಮಿತಿಯು ನೈಸೆಲ್/ನೀಸೆಲ್ ಸಂಸ್ಥೆಯ ಟೋಲ್ ಸಂಗ್ರಹಣೆಯ ಪ್ರವೃತ್ತಿಗಳ ಬಗ್ಗೆ ಮಾಹಿತಿಯನ್ನು ಕೋರಿದಾಗ ಲೋಕೋಪಯೋಗಿ ಇಲಾಖೆಯು ಸ್ವಯಂ ಪ್ರೇರಿತವಾಗಿ ವಾಹನಗಳ ಗಣತಿಯನ್ನು ಜಾರಿಗೊಳಿಸಿ ಈ ಅಂಕಿ ಅಂಶಗಳ ಆಧಾರದ ಮೇಲೆ ಸಾಂದರ್ಭಿಕವಾಗಿ ಸಂಗ್ರಹಣೆಯ ವಿವರಗಳನ್ನು ಸಮಿತಿಗೆ ಒದಗಿಸಿದೆ. ರಾಜ್ಯ ಸರ್ಕಾರವು ಖಾಸಗಿ ಪಾಲುದಾರರೊಡನೆ ಪ್ರತ್ಯೇಕವಾಗಿ Toll Concession Agreement ಅನ್ನು ಜಾರಿಗೊಳಿಸಿದ್ದು, ಈ ಒಪ್ಪಂದವನ್ನು ಜಾರಿಗೊಳಿಸಲು ರಾಜ್ಯ ಹೆದ್ದಾರಿ ಕಾಯಿದೆಗೆ ಪರಿಷ್ಕರಣೆ ಅಥವಾ ತಿದ್ದುಪಡಿಯನ್ನು ತಂದಿರುವುದನ್ನು ಸಮಿತಿಯು ಗಮನಿಸಿದೆ. ಇದಲ್ಲದೆ, ಯೋಜನೆಗೆ ಪ್ರತಿಫಲವನ್ನು ಇತ್ಯರ್ಥಗೊಳಿಸುವಲ್ಲಿ ಟೋಲ್ ಸಂಗ್ರಹಣೆ ಪ್ರಮುಖ ಪಾತ್ರ ವಹಿಸುತ್ತದೆ. ಆದುದರಿಂದ ಟೋಲ್ ಸಂಗ್ರಹಣೆಯ ಪ್ರವೃತ್ತಿಯನ್ನು ಮಾಪನಗಳ ವಿರುದ್ಧ ನಿಯತಕಾಲಿಕವಾಗಿ ಪರಿವೀಕ್ಷಿಸುವುದು ಸರ್ಕಾರದ ಹಕ್ಕಾಗಿರುತ್ತದೆ. ಆದಾಗ್ಯೂ, ಖಾಸಗಿ ಪಾಲುದಾರರ ವತಿಯಿಂದ ಟೋಲ್ ಸಂಗ್ರಹಣೆಯ ನಿಖರ ಅಂಕಿ ಅಂಶಗಳನ್ನು ಹಾಗೂ ವಾಹನ ದಟ್ಟಣೆಯ ಪ್ರಗತಿಯ ದರಗಳನ್ನು ವಸ್ತುಸ್ಥಿತಿಗೆ ಅನುಗುಣವಾಗಿ ಪಡೆಯುವಲ್ಲಿ ಲೋಕೋಪಯೋಗಿ ಇಲಾಖೆ ನಿರ್ಲಕ್ಷ್ಯತಾ ಧೋರಣೆ ತಳೆದಿದೆ. ಏಕೆಂದರೆ, ಈವರೆವಿಗೂ ಲೋಕೋಪಯೋಗಿ ಇಲಾಖೆಯ ಬಳಿ ಟೋಲ್ ಸ್ವೀಕೃತಿಯ ಬಗ್ಗೆ ಯಾವುದೇ ವಿವರಗಳು ಲಭ್ಯವಿರುವುದಿಲ್ಲ. ಆದಾಗ್ಯೂ ಸಹ ಕ್ರಿಯಾ ಒಪ್ಪಂದ ಅಥವಾ ಟೋಲ್ ಒಪ್ಪಂದದ ಅನುಗುಣವಾಗಿ ವಾರ್ಷಿಕವಾಗಿ ಟೋಲ್ ದರಗಳನ್ನು ಸರ್ಕಾರ ಪರಿಷ್ಕರಿಸುತ್ತಿದೆ. ಈ ಪರಿಷ್ಕರಣೆಯನ್ನು ಕ್ರಿಯಾ ಒಪ್ಪಂದದ ಷರತ್ತಿಗೆ ಸೀಮಿತಗೊಳಿಸಲಾಗಿದೆ. ಸಮಾನಾಂತರವಾಗಿ ಸ್ವೀಕೃತಿಯ ಅಂಕಿ ಅಂಶಗಳನ್ನು ಪರಿಷ್ಕರಣೆಯ ಪೂರ್ವದಲ್ಲಿ ಖಾಸಗಿ ಪಾಲುದಾರರಿಂದ ಈ ಅನುಚ್ಛೇಧದಡಿಯಲ್ಲಿ ಪಡೆಯಲು ಲೋಕೋಪಯೋಗಿ ಇಲಾಖೆ ವಿಫಲವಾಗಿದೆ. *ಈ ವೈಫಲ್ಯತೆಯಿಂದಾಗಿ ಈ ವರದಿಯಲ್ಲಿ ಈಗಾಗಲೇ ಪ್ರತಿಪಾದಿಸಿರುವಂತೆ ತಾಂತ್ರಿಕ ಮಾನದಂಡಗಳ ಪಾಲನೆಯಲ್ಲಿ ಲೋಪದೋಷಗಳಿದ್ದಾಗ್ಯೂ ಸಹ, ಟೋಲ್*

ದರಗಳ ಪರಿಷ್ಕರಣೆಯಲ್ಲಿ ಲೋಕೋಪಯೋಗಿ ಇಲಾಖೆ ನಿಸ್ಸಹಾಯಕವಾಗಿದೆ. ಈ ಪ್ರತಿಪಾದನೆಯ ಹಿನ್ನೆಲೆಯಲ್ಲಿ ಕ್ರಿಯಾ ಒಪ್ಪಂದದ ಈ ಅನುಚ್ಛೇದವನ್ನು ಪರಿಣಾಮಕಾರಿಯಾಗಿ ಬಳಸಲು ಸರ್ಕಾರ ಹಾಗೂ ಸರ್ಕಾರದ ಪ್ರತಿನಿಧಿತ್ವ ಹೊಂದಿರುವ ಸಂಸ್ಥೆಗಳು ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.ನೈಸೆಲ್ ಸಂಸ್ಥೆಯು ಸಹ ಪ್ರಸ್ತಾವಿತ ಉಲ್ಲೇಖಗಳನ್ನು ಅಧಿಕಾರದತ್ತ ಸಮಿತಿಗಾಗಲೀ ಅಥವಾ ಲೋಕೋಪಯೋಗಿ ಇಲಾಖೆಗಾಗಲಿ ಅನುಚ್ಛೇದ 22.5ರ ಅಡಿಯಲ್ಲಿ ಸಲ್ಲಿಸಲು ನಿರಾಕರಿಸಿದೆ. ಹಲವು ಪ್ರಕರಣಗಳಲ್ಲಿ ವಿವಿಧ ಸ್ತರದ ನ್ಯಾಯಾಲಯಗಳ ತೀರ್ಪುಗಳ ಹಿನ್ನೆಲೆಯಲ್ಲಿ ಮಾಹಿತಿಗಳ ಔಚಿತ್ಯತೆಯನ್ನು ನೈಸೆಲ್/ನೀಸೆಲ್ ಕಂಪನಿ ಪ್ರಶ್ನಿಸಿ ನಿರಾಕರಿಸಿರುವುದು ಸಮಿತಿಯ ಗಮನಕ್ಕೆ ಬಂದಿದೆ. ಖಾಸಗಿ ಪಾಲುದಾರರು ಸರ್ಕಾರಕ್ಕೆ ಸಲ್ಲಿಸದೇ ಇರುವ ಪ್ರಮುಖ ದಾಖಲಾತಿಗಳ ವಿವರ ಕೆಳಕಂಡಂತಿದೆ:

1. ಐ.ಸಿ.ಐ.ಸಿ.ಐ. ಬ್ಯಾಂಕಿಗೆ ಸರ್ಕಾರಿ ಜಮೀನನ್ನು ಪರಭಾರೆ ಮಾಡಿ ಸಾಧಿಸಲಾದ ಫೈನಾನ್ಷಿಯಲ್ ಕ್ಲೋಷರ್ ದಾಖಲಾತಿಗಳು.
2. ಕ್ರಿಯಾ ಒಪ್ಪಂದದ ಅನುಚ್ಛೇಧ 21 ರ ಅನುಗುಣವಾಗಿ ಮುಂಗಡ/ಸಾಲ ನೀಡುವ ಸಂಸ್ಥೆಗಳಿಗೆ ಸಲ್ಲಿಸಿರುವ ದಾಖಲಾತಿಗಳು. ವಾಸ್ತವಿಕವಾಗಿ ರಾಜ್ಯ ಸರ್ಕಾರವು ಈ ಬಾಧ್ಯತೆಗಳಿಗೆ ಅನುಚ್ಛೇಧ 21 ರ ಅಡಿಯಲ್ಲಿ ಪರೋಕ್ಷವಾಗಿ ಖಾತ್ರಿಯನ್ನು ಒದಗಿಸಿದೆ.
3. ಲೆಕ್ಕಪರಿಶೋಧನೆ ಮಾಡಲಾದ ವಾರ್ಷಿಕ ಲೆಕ್ಕಪತ್ರಗಳು ಲಾಭ ಮತ್ತು ನಷ್ಟದ ತಃಖ್ತೆಗಳು 1997-98 ರಿಂದ 2014-15 ಆರ್ಥಿಕ ಸಾಲಿನ ಅವಧಿಗೆ.
4. ಸರ್ವೋಚ್ಛ ನ್ಯಾಯಾಲಯದ ದಿನಾಂಕ 03.11.2009ರ ಆದೇಶದ ಅನುಗುಣವಾಗಿ 13,237 ಎಕರೆಗಳ ಖಾಸಗಿ ಜಮೀನಿನ ವಿವರ.
5. ನ್ಯಾಯಾಂಗ ನಿಂದನೆ ಪ್ರಕರಣ 96/2007ರ ಅನುಗುಣವಾಗಿ ಯೋಜನಾ ಅನುಷ್ಠಾನಕ್ಕೆ ಅವಶ್ಯವಿರುವ 6956 ಎಕರೆ ಜಮೀನಿನ ವಿವರಗಳು.
6. ಮಾನ್ಯ ಸರ್ವೋಚ್ಛ ನ್ಯಾಯಾಲಯದ 03.11.2009ರ ತೀರ್ಪಿನ ಅನುಗುಣವಾಗಿ 41 ಕಿ.ಮೀ. ಪೆರಿಫೆರಲ್ ರಸ್ತೆಗೆ ಅವಶ್ಯಕವಿರುವ 2193 ಎಕರೆ ಜಮೀನಿನ ವಿವರಗಳು.
7. ಸರ್ವೋಚ್ಛ ನ್ಯಾಯಾಲಯದ ತೀರ್ಪು ದಿನಾಂಕ 03.11.2009ರ ಅನುಗುಣವಾಗಿ 9.8 ಕಿ.ಮೀ. ವ್ಯಾಪ್ತಿಯ ಲಿಂಕ್ ರಸ್ತೆಗೆ ಅವಶ್ಯಕವಿರುವ 278 ಎಕರೆ ಜಮೀನಿನ ವಿವರಗಳು.
8. 03.11.2009ರ ಸರ್ವೋಚ್ಛ ನ್ಯಾಯಾಲಯದ ತೀರ್ಪಿನ ಅನುಗುಣವಾಗಿ 111 ಕಿ.ಮೀ. ಎಕ್ಸ್‌ಪ್ರೆಸ್ ವೇ ನಿರ್ಮಾಣಕ್ಕೆ ಅವಶ್ಯಕವಿರುವ 4928 ಎಕರೆ ಜಮೀನಿನ ವಿವರಗಳು.
9. ಸರ್ವೋಚ್ಛ ನ್ಯಾಯಾಲಯದ 03.11.2009ರ ತೀರ್ಪಿನ ಅನುಗುಣವಾಗಿ 5 ನಗರ ಸಮುಚ್ಛಯಗಳಿಗೆ ಅವಶ್ಯವಿರುವ 13,194 ಎಕರೆ ಜಮೀನಿನ ವಿವರಗಳು.
10. ಯೋಜನೆಯ ಸೆಕ್ಷನ್ 'ಎ' ವ್ಯಾಪ್ತಿಯ ಕೆಡಸ್ಟ್ರಲ್ ಪ್ಲಾನ್ ದಾಖಲೆಗಳು – ಇಂಟರ್ ಛೇಂಜ್ ವ್ಯಾಪ್ತಿಯಲ್ಲಿ ಅಭಿವೃದ್ಧಿಗೆ ಸಂಬಂಧಿಸಿದಂತೆ ಯೋಜನಾ ತಾಂತ್ರಿಕ ವರದಿ 1996ರ ಅನುಗುಣವಾಗಿ ಕೈಗೊಂಡ ಕ್ರಮದ ವಿವರಗಳು.
11. ಕ್ರಿಯಾ ಒಪ್ಪಂದದ ಅನುಚ್ಛೇಧ 3.8.3ರ ಅನುಗುಣವಾಗಿ ತಯಾರಿಸಲಾದ ಯೋಜನಾ ನಕ್ಷೆಗಳು.

ಈ ಹಿನ್ನೆಲೆಯಲ್ಲಿ "The Parties shall furnish to each other all information reasonably requested in regard to the performances of their respective duties and obligations under this agreement........." ಎಂಬ ಪ್ರತಿಪಾದನೆಯನ್ನು

ಉಲ್ಲಂಘಿಸಿರುವುದು ಸ್ಪಷ್ಟವಾಗಿದೆ. ಏಕೆಂದರೆ, *ಕ್ರಿಯಾ ಒಪ್ಪಂದದ ಅನುಗುಣವಾಗಿ ಅವರು ಪಾಲಿಸಬೇಕಾದ ಕರ್ತವ್ಯಗಳು ಹಾಗೂ ಅವರ ಬದ್ಧತೆಗಳನ್ನು ಈ ಷರತ್ತಿನಡಿ ನಿರ್ವಹಿಸುವಲ್ಲಿ ಖಾಸಗಿ ಪಾಲುದಾರರು ವಿರೋಧಿ ಧೋರಣೆಯನ್ನು ತಳೆದಿರುತ್ತಾರೆ. ಆದುದರಿಂದ ಈ ಅನುಚ್ಛೇಧದ ಉಲ್ಲಂಘನೆಯ ಆಧಾರದ ಮೇಲೆ ಸರ್ಕಾರವು ಕಾನೂನು ರೀತ್ಯಾ ಕ್ರಮ ಜರುಗಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.*

## *XXXV. <u>ಅನುಚ್ಛೇಧ 22.2 – ತಿದ್ದುಪಡಿಗಳು ಹಾಗೂ ಪೂರಕ ಒಪ್ಪಂದಗಳ ಬಗ್ಗೆ ಸಮಿತಿಯ ವಿಶ್ಲೇಷಣೆ ಹಾಗೂ ಶಿಫಾರಸ್ಸುಗಳು:</u>*

ದಿನಾಂಕ 03.04.1997 ರಂದು ಮೂಲ ಕ್ರಿಯಾ ಒಪ್ಪಂದವನ್ನು ಜಾರಿಗೊಳಿಸಲಾಯಿತು. 17.02.1999 ರಂದು ನೈಸೆಲ್ ಸಂಸ್ಥೆಯವರು ಪೆರಿಫರೆಲ್ ರಸ್ತೆ ಮತ್ತು ಲಿಂಕ್ ರಸ್ತೆಗಳನ್ನು ತ್ವರಿತವಾಗಿ ಸಂಪೂರ್ಣಗೊಳಿಸಿ ಫೈನಾನ್ಷಿಯಲ್ ಕ್ಲೋಷರ್ ಅನ್ನು ಸಾಧಿಸುವ ಹಿತದೃಷ್ಟಿಯಿಂದ ಈ ಕೆಳಕಂಡ ಮಾರ್ಪಾಡುಗಳನ್ನು ಅಥವಾ ತಿದ್ದುಪಡಿಗಳನ್ನು ಮೂಲ ಕ್ರಿಯಾ ಒಪ್ಪಂದದಲ್ಲಿ ಜಾರಿಗೊಳಿಸುವಂತೆ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ಇವರಿಗೆ ಕೋರಿರುವುದನ್ನು ಸಮಿತಿ ಗಮನಿಸಿದೆ.

ಮೂಲವಾಗಿ ಯೋಜನಾ ಅನುಷ್ಠಾನವನ್ನು 6 ಸ್ತರದಲ್ಲಿ ಸಂಪೂರ್ಣಗೊಳಿಸಲು ಉದ್ದೇಶಿಸಲಾಗಿದ್ದು, ವಿವರಗಳು ಕೆಳಕಂಡಂತಿದೆ:

1ನೇ ಸ್ತರ

ಎ – ನೆಲಮಟ್ಟದ 9.8 ಕಿ.ಮೀ ಉದ್ದದ ಲಿಂಕ್ ರಸ್ತೆ ಬೆಂಗಳೂರು ಬಳಿ
ಬಿ – ದಕ್ಷಿಣ ಭಾಗದಲ್ಲಿ ರಾಜ್ಯ ಹೆದ್ದಾರಿ 17 ಅನ್ನು ಪ್ರಾರಂಭಿಕ ಸ್ಥಳದಲ್ಲಿ ಸೇರ್ಪಡೆ ಮಾಡಲು 3 ಕಿ.ಮೀ. ವರ್ತುಲ ರಸ್ತೆ.

2ನೇ ಸ್ತರ

ಎ. ಹೊರವರ್ತುಲ ರಸ್ತೆಯ ಉಳಿದ 38 ಕಿ.ಮೀ.ಗಳು
ಬಿ. ಬೆಂಗಳೂರು ಮತ್ತು ಬಿಡದಿಯನ್ನು ಸಂಪರ್ಕಿಸುವ ವೇಗದ ಹೆದ್ದಾರಿ

3ನೇ ಸ್ತರ

ಎ. ಬಿಡದಿಯಿಂದ ಚನ್ನಪಟ್ಟಣ ಸಂಪರ್ಕಿಸುವ 24 ಕಿ.ಮೀ. ವೇಗದ ಹೆದ್ದಾರಿ
ಬಿ. ನಗರ ಸಮುಚ್ಛಯ 4 ಮತ್ತು 5

4ನೇ ಸ್ತರ

ಚನ್ನಪಟ್ಟಣದಿಂದ ಶ್ರೀರಂಗಪಟ್ಟಣಕ್ಕೆ ಸಂಪರ್ಕ ಕಲ್ಪಿಸುವ 69 ಕಿ.ಮೀ. ವೇಗದ ಹೆದ್ದಾರಿ

5ನೇ ಸ್ತರ

ಎ. ಮೈಸೂರು ಬಳಿ ಲಿಂಕ್ ರಸ್ತೆ
ಬಿ. ಶ್ರೀರಂಗಪಟಣದಿಂದ ಮೈಸೂರಿಗೆ 6 ಕಿ.ಮೀ. ವೇಗದ ಹೆದ್ದಾರಿ.

6ನೇ ಸ್ತರ

ಎ. ಬೆಂಗಳೂರಿನಲ್ಲಿ 3.1 ಕಿ.ಮೀ. ಮೇಲ್ಮಟ್ಟದ ರಸ್ತೆ
ಬಿ. ನಗರ ಸಮುಚ್ಛಯ 7

ಪ್ರಸ್ತಾವಿತ ಸ್ತರಗಳನ್ನು ಪರಿಷ್ಕರಿಸಿ ಸ್ತರ 1, 2 ಮತ್ತು 3 ಅನ್ನು ಸೆಕ್ಷನ್ 'ಎ' ಎಂದು ಪರಿಗಣಿಸಲು ಪ್ರತಿಪಾದಿಸಲಾಯಿತು. ಸ್ತರ 3 ಅನ್ನು ಸೆಕ್ಷನ್ 'ಬಿ' ಎಂದು ಪರಿಷ್ಕರಿಸಿ, ಸ್ತರ 4, 5, 6 ಅನ್ನು ಸೆಕ್ಷನ್ 'ಸಿ' ಎಂದು ವರ್ಗೀಕರಿಸಲು ಪ್ರತಿಪಾದಿಸಲಾಯಿತು.

ಪ್ರಸ್ತಾವಿತ ಸ್ತರಗಳ ಮರುವರ್ಗೀಕರಣಕ್ಕೆ ಪೂರಕವಾಗಿ ಯೋಜನಾ ಅನುಷ್ಠಾನದಲ್ಲಿ ಲೋಪದೋಷಗಳಾದಲ್ಲಿ, ಸರ್ಕಾರವು ಕೈಗೊಳ್ಳಬಹುದಾದ ಕ್ರಮಗಳು ಪ್ರಸ್ತಾವಿತ ಅಥವಾ ಅನುಷ್ಠಾನಗೊಳಿಸಲಾಗುತ್ತಿರುವ ಸ್ತರಗಳಿಗೆ ಮಾತ್ರ ಸೀಮಿತವಾಗಿರಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿತು. ಕ್ರಿಯಾ ಒಪ್ಪಂದದ ಷರತ್ತುಗಳ ಅನುಗುಣವಾಗಿ ಅನುಷ್ಠಾನವನ್ನು ರದ್ದುಗೊಳಿಸುವ ಅಧಿಕಾರವು ಸಂಬಂಧಪಟ್ಟ ಸ್ತರಕ್ಕೆ ಸೀಮಿತವಾಗಿದ್ದು, ಸಮಗ್ರ ಯೋಜನೆಯಿಂದ ಹೊರತಾಗಿರಬೇಕು ಎಂಬ ಷರತ್ತನ್ನು ಸೇರ್ಪಡೆ ಮಾಡುವ ಬಗ್ಗೆ ಪ್ರಸ್ತಾಪಿಸಲಾಯಿತು. ಇದಲ್ಲದೆ, ಸಮಗ್ರ ಯೋಜನೆಗೆ ಅಭಿವೃದ್ಧಿಪಡಿಸುವ ಸಾಮಾನ್ಯ ಸವಲತ್ತುಗಳು ಯೋಜನಾ ಅನುಷ್ಠಾನದಲ್ಲಿ ವಿಫಲವಾಗಿರುವ ಸ್ತರಗಳಿಂದ ಹೊರತಾಗಿರಬೇಕು ಎಂಬ ಅಂಶವನ್ನು ಪ್ರತಿಪಾದಿಸಲಾಯಿತು. ಅಂದರೆ, ಯಾವುದೇ ಸ್ತರದ ಅನುಷ್ಠಾನದಲ್ಲಿ ವೈಫಲ್ಯತೆಯಾಗಿ ಕ್ರಿಯಾ ಒಪ್ಪಂದದ ಅನುಗುಣವಾಗಿ ಯೋಜನೆಯನ್ನು ಅಂತ್ಯಗೊಳಿಸುವ ಅಧಿಕಾರವನ್ನು ಸರ್ಕಾರವು ಜಾರಿಗೊಳಿಸುವ ಸಂದರ್ಭ ಒದಗಿ ಬಂದಲ್ಲಿ, ಆ ಸ್ವರೂಪದ ಪ್ರಕ್ರಿಯೆಗೆ ಈ ಕೆಳಕಂಡ ನಿರ್ಬಂಧನೆಗಳನ್ನು ಪಾಲಿಸುವ ಪ್ರಯತ್ನ ಪೂರ್ವಕ ಯತ್ನವನ್ನು ಈ ಬದಲಾವಣೆಗಳಿಂದ ಖಾಸಗಿ ಪಾಲುದಾರರು ಅನುಷ್ಠಾನಗೊಳಿಸಲು ಪ್ರಯತ್ನಿಸಿರುವುದು ಸಮಿತಿಗೆ ಸ್ಪಷ್ಟವಾಗಿದೆ:

1. ಯೋಜನಾ ಅನುಷ್ಠಾನದ ವೈಫಲ್ಯತೆಗೆ ಸಂಬಂಧಪಟ್ಟ ಸ್ತರಕ್ಕೆ ಸೀಮಿತವಾಗಿರುವಂತೆ ನಿರ್ಬಂಧ
2. ಯೋಜನೆಯನ್ನು ಅಂತ್ಯಗೊಳಿಸಲು ನಿರ್ಧಾರ ಕೈಗೊಂಡಲ್ಲಿ, ಮೂಲಭೂತ ಸೌಕರ್ಯ ಅಭಿವೃದ್ಧಿ ಯೋಜನೆಯಡಿ ಅಭಿವೃದ್ಧಿಪಡಿಸಲಾದ ಸಾಮಾನ್ಯ ಅಥವಾ ಸಾರ್ವಜನಿಕ ಸವಲತ್ತು ಅಥವಾ ಅಭಿವೃದ್ಧಿ ಕಾಮಗಾರಿಗಳನ್ನು ಕ್ರಿಯಾ ಒಪ್ಪಂದದ ಉಲ್ಲಂಘನೆಯಿಂದ ಹೊರತುಪಡಿಸುವ ನಿರ್ಬಂಧ.

ಇದಕ್ಕೆ ಪೂರಕವಾಗಿ ಕ್ರಿಯಾ ಒಪ್ಪಂದದ ಕಂಡಿಕೆ 1.2.3 ರಲ್ಲಿ ಪ್ರತಿಪಾದಿಸಲಾಗಿರುವ "ಅಫಿಲಿಯೇಟ್ಸ್" ಉಲ್ಲೇಖದ ಸಾರಾಂಶವನ್ನು ಪರಿಷ್ಕರಿಸುವ ಬಗ್ಗೆ ಪ್ರತಿಪಾದಿಸಲಾಯಿತು. ಪರಿಷ್ಕೃತ ಮಾನದಂಡಗಳ ಅನುಗುಣವಾಗಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಯಾವುದೇ ವ್ಯಕ್ತಿ ಅಥವಾ ಸಂಸ್ಥೆ ಪ್ರತಿಶತ 10 ರಷ್ಟು ಷೇರು ಬಂಡವಾಳವನ್ನು ಮೂಲ ಕಂಪನಿಯಲ್ಲಿ ಹೊಂದಿರುವ ಬಗ್ಗೆ ಪ್ರತಿಪಾದಿಸಲಾಯಿತು. "ಅಫಿಲಿಯೇಟ್ಸ್" ವ್ಯಾಪ್ತಿಗೆ ಮೂಲ ಕಂಪನಿಯ ಸ್ವರೂಪಕ್ಕೆ ಹೊರತಾದ ಅಧೀನ ಕಂಪನಿಗಳನ್ನು ಪರಿಗಣಿಸುವ ಬಗ್ಗೆ ಪ್ರತಿಪಾದಿಸಲಾಯಿತು. ಇದಲ್ಲದೆ, ಕ್ರಿಯಾ ಒಪ್ಪಂದದ ಅನುಚ್ಛೇಧ 11 ರಲ್ಲಿ ಉಲ್ಲೇಖಿಸಲಾಗಿರುವ ಸಮುಚ್ಛಯ ಕಂಪನಿಗಳ ವ್ಯಾಖ್ಯಾನವನ್ನು ಪರಿಷ್ಕರಿಸಿ ಸಮುಚ್ಛಯ ಕಂಪನಿಗಳು ಕ್ರಿಯಾ ಒಪ್ಪಂದವನ್ನು ಅನುಷ್ಠಾನಗೊಳಿಸಿದ ದಿನಾಂಕದಿಂದ ಅಂದರೆ ದಿನಾಂಕ 03.04.1997ಕ್ಕೆ ಅನ್ವಯಿಸುವಂತೆ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಕ್ರೋಢೀಕೃತವಾಗಿ ಮೂಲ ಕಂಪನಿಯಲ್ಲಿ ಪ್ರತಿಶತ 15ರ ಬಂಡವಾಳ ಹೂಡಿಕೆಯನ್ನು ಕಡ್ಡಾಯವಾಗಿ ನಿರ್ವಹಿಸುವಂತೆ ಪ್ರತಿಪಾದಿಸಲಾಯಿತು.

ಏತನ್ಮಧ್ಯೆ, ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ಇವರು ಕ್ರಿಯಾ ಒಪ್ಪಂದದಲ್ಲಿ [illegible] ಸಾರ್ವತ್ರಿಕ ಪದವಾದ "Best Efforts" ಬಗ್ಗೆ ವಿವಾದಾತ್ಮಕ ಅಭಿಪ್ರಾಯವನ್ನು [illegible] ಸಮಿತಿಯು ಗಮನಿಸಿದೆ. ಕ್ರಿಯಾ ಒಪ್ಪಂದದ ಬಹುತೇಕ ಅನುಚ್ಛೇದಗಳಲ್ಲಿ [illegible] ಸರ್ಕಾರವು ಕಡ್ಡಾಯವಾಗಿ ಪಾಲಿಸಬೇಕಾದ ವಿಧಿ ವಿಧಾನಗಳ ಬಗ್ಗೆ "[illegible]" ಎಂಬ ಪದಗಳನ್ನು ಬಳಸಿ ನಿರ್ದಿಷ್ಟಪಡಿಸಲಾಗಿದೆ. ಆದರೆ ಇದೇ ಸ್ತರದಲ್ಲಿ ನೈಸ್ [illegible] ಕಡ್ಡಾಯವಾಗಿ ಪಾಲಿಸಬೇಕಾದ ವಿಧಿವಿಧಾನಗಳು ಹಾಗೂ ನಿರ್ಬಂಧಗಳ ಬಗ್ಗೆ [illegible] ಉಲ್ಲೇಖವಿರುವುದಿಲ್ಲ. ಇದೇ ಹಿನ್ನೆಲೆಯಲ್ಲಿ ಕ್ರಿಯಾ ಒಪ್ಪಂದದಲ್ಲಿ ಬಳಸಲಾಗಿರುವ "[illegible]" ಪದವು ಒಂದು ಸಾರ್ವತ್ರಿಕ ಬಳಕೆಯಾಗಿದ್ದು, ಈ ನಿರೂಪಣೆಯನ್ನು ಪಾಲಿಸದಿದ್ದಲ್ಲಿ [illegible] ಆಗುವ ಬಾಧ್ಯತೆಯ ಬಗ್ಗೆ ನಿರ್ದಿಷ್ಟ ಪ್ರತಿಪಾದನೆ ಇಲ್ಲದಿರುವ ಬಗ್ಗೆ ಸ್ಪಷ್ಟೀಕರಿಸಲಾಗಿದೆ.

ದಿನಾಂಕ 03.03.1999 ರಂದು ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ಇವರು [illegible] ಇಲಾಖೆಯ ಕಾರ್ಯದರ್ಶಿಗಳಿಗೆ ಬರೆದಿರುವ ಉಲ್ಲೇಖದಲ್ಲಿ ಕ್ರಿಯಾ ಒಪ್ಪಂದದ [illegible] ಬಾಧ್ಯತೆಯನ್ನು ಕೇವಲ ಟೋಲ್ ರಸ್ತೆಗೆ ಸೀಮಿತಗೊಳಿಸಿ ನಗರ ಸಮುಚ್ಚಯಗಳನ್ನು [illegible] ಹೊರತುಪಡಿಸಿರುವ ಬಗ್ಗೆ ಪ್ರತಿಪಾದಿಸಿರುವುದನ್ನು ಸಮಿತಿ ಗಮನಿಸಿದೆ.

ದಿನಾಂಕ 26.03.1999 ರಂದು ಕ್ರಿಯಾ ಒಪ್ಪಂದಕ್ಕೆ ಪ್ರತಿಪಾದಿಸಿರುವ ಬದಲಾವಣೆಗಳ ಬಗ್ಗೆ [illegible] ಅಭಿಪ್ರಾಯವನ್ನು ನೀಡುವಂತೆ ಕಾನೂನು ಇಲಾಖೆಗೆ ಕೋರಿರುವುದನ್ನು ಸಮಿತಿ [illegible] ಸಮಾನಾಂತರವಾಗಿ ಯೋಜನಾ ಸಮನ್ವಯಕರು, ಬಿ.ಎಂ.ಐ.ಸಿ.ಪಿ. ಇವರು 13.0[illegible].1999 ರಂದು ಇದೇ ಕೋರಿಕೆಯನ್ನು ಪುನರುಚ್ಚಿಸಿರುತ್ತಾರೆ.

ದಿನಾಂಕ 28.04.1999 ರಂದು ಉಪ ಕಾರ್ಯದರ್ಶಿ, ಕಾನೂನು ಇಲಾಖೆ ಇವರು [illegible] ಪರಿಷ್ಕರಣೆಗಳ ಆರ್ಥಿಕ ಪರಿಣಾಮವನ್ನು ವಿಶ್ಲೇಷಿಸಲು ಆರ್ಥಿಕ ಇಲಾಖೆಯನ್ನು [illegible] ಸೂಚಿಸಿರುತ್ತಾರೆ. ಇದಲ್ಲದೆ, ಪರಿಷ್ಕೃತ ಒಪ್ಪಂದವನ್ನು ಸಚಿವ ಸಂಪುಟದ ಅನುಮೋದನೆ [illegible] ಜಾರಿಗೊಳಿಸುವುದು ಅವಶ್ಯಕ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ.

ದಿನಾಂಕ 14.07.1999ರ ಅನಧಿಕೃತ ಟಿಪ್ಪಣಿಯಲ್ಲಿ ಲೋಕೋಪಯೋಗಿ [illegible] ಕಾರ್ಯದರ್ಶಿಯವರು ನೈಸೆಲ್ ಸಂಸ್ಥೆ ಪ್ರತಿಪಾದಿಸಿರುವ ಪರಿಷ್ಕರಣೆಗಳು ಮೂಲ ಒಪ್ಪಂದದ ಸ್ವರೂಪವನ್ನು ಬದಲಾಯಿಸುವುದಿಲ್ಲ ಹಾಗೂ ಪರಿಷ್ಕರಣೆಯನ್ನು ಜಾರಿಗೊಳಿಸುವುದರಿಂದ [illegible] ಪಾಲುದಾರರ ಬಾಧ್ಯತೆಯು ಕುಂಠಿತವಾಗುವುದಿಲ್ಲ ಎಂಬ ಅಭಿಪ್ರಾಯವನ್ನು [illegible] ಆಧಾರದ ಮೇಲೆ ಕಾನೂನು ಇಲಾಖೆಯ ಅಭಿಪ್ರಾಯವನ್ನು ಕೋರಿರುತ್ತಾರೆ.

22.07.1999 ರಂದು ಸರ್ಕಾರದ ಮಟ್ಟದಲ್ಲಿ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ಇವರು ತಿದ್ದುಪಡಿಗಳ ಅವಶ್ಯಕತೆ ಹಾಗೂ ಆರ್ಥಿಕ ಪರಿಣಾಮಗಳ ಬಗ್ಗೆ [illegible] ಲೋಕೋಪಯೋಗಿ ಇಲಾಖೆ ಇವರಿಂದ ಸ್ಪಷ್ಟೀಕರಣ ಕೋರಿರುವುದನ್ನು ಸಮಿತಿ [illegible] ಅಭಿಪ್ರಾಯವನ್ನು ದಿನಾಂಕ 31.07.1999ರ ಅನಧಿಕೃತ ಟಿಪ್ಪಣಿಯಲ್ಲಿ ಪುನರುಚ್ಚಿಸಲಾಗಿದೆ.

ದಿನಾಂಕ 06.09.1999 ರ ಯೋಜನಾ ನಿರ್ದೇಶಕರು, ಬಿ.ಎಂ.ಐ.ಸಿ. [illegible] ಪ್ರೇರಿತ ವಿಶ್ಲೇಷಣೆ ಹಾಗೂ ಅಭಿಪ್ರಾಯವನ್ನು ಕಂಡಿಕೆವಾರು ಪುನರುಚ್ಚಿಸುವುದು [illegible] ಸಮಿತಿ ತೀರ್ಮಾನಿಸುತ್ತದೆ. ಏಕೆಂದರೆ, ಪ್ರಸ್ತಾವಿತ ಅನಧಿಕೃತ ಟಿಪ್ಪಣಿಯಲ್ಲಿ [illegible] ಪ್ರತಿಪಾದಿಸಿರುವ ಬದಲಾವಣೆಗಳನ್ನು ಬಹುತೇಕವಾಗಿ ಸಮರ್ಥಿಸಿ [illegible] ವ್ಯಕ್ತಪಡಿಸಲಾಗಿದೆ. ಈ ಟಿಪ್ಪಣಿಗೆ Termination Purchase Price [illegible]

ಪ್ರತಿಪಾದಿಸಲಾಗಿದ್ದು, ವಿವಿಧ ಸನ್ನಿವೇಶಗಳಲ್ಲಿ ಸರ್ಕಾರಕ್ಕೆ ಅಥವಾ ಖಾಸಗಿ ಪಾಲುದಾರರಿಗೆ ಇರುವ ಬಾಧ್ಯತೆಗಳ ಬಗ್ಗೆ ವಿವರಗಳನ್ನು ನೀಡಲಾಗಿದೆ. ಯೋಜನೆಯನ್ನು ಅಂತ್ಯಗೊಳಿಸಿದಲ್ಲಿ ಖಾಸಗಿ ಪಾಲುದಾರರಿಗೆ ನೀಡಬೇಕಾಗುವ Termination Purchase Priceಅನ್ನು ಎರಡು ಸಾಧ್ಯತೆಗಳಡಿ ವಿಶ್ಲೇಷಿಸಲಾಗಿದೆ. ಮೊದಲನೆಯದಾಗಿ ಈ ತಿದ್ದುಪಡಿಯ ಮುಖಾಂತರ ಪ್ರತಿಪಾದಿಸಲಾಗಿರುವ ಸ್ತರವಾರು ಅನುಷ್ಠಾನವನ್ನು ಒಪ್ಪಿದಲ್ಲಿ ಸೃಷ್ಟಿಯಾಗುವ ಬಾಧ್ಯತೆಯ ಬಗ್ಗೆ ಕ್ರಿಯಾ ಒಪ್ಪಂದದ ಹಿನ್ನೆಲೆಯಲ್ಲಿ ಮೌಲ್ಯವನ್ನು ನಿರ್ಧರಿಸಲಾಗಿದೆ. ಎರಡನೇಯದಾಗಿ ಸ್ತರವಾರು ವಿಭಜನೆಯನ್ನು ಒಪ್ಪದಿದ್ದಲ್ಲಿ ಉಂಟಾಗುವ ಬಾಧ್ಯತೆಯ ಮೌಲ್ಯವನ್ನು ನಿರ್ಧರಿಸಲಾಗಿದೆ. ಯೋಜನೆಯನ್ನು ಅಂತ್ಯಗೊಳಿಸುವ ಪ್ರಸಂಗ ಸರ್ಕಾರದ ವೈಫಲ್ಯತೆಯಿಂದ ಅಥವಾ ಖಾಸಗಿ ಪಾಲುದಾರರ ವೈಫಲ್ಯತೆಯಿಂದ ಉದ್ಭವವಾಗುವ ಸಾಧ್ಯತೆಯಿರುವುದರಿಂದ ಈ ಎರಡೂ ಸಾಧ್ಯತೆಗಳನ್ನು ಪರಿಗಣಿಸಲಾಗಿದೆ. ಸ್ಥೂಲ ವಿವರಗಳು ಕೆಳಕಂಡಂತಿದೆ:

(ಕೋಟಿ ರೂ.ಗಳಲ್ಲಿ)

| | | ಮರುವರ್ಗೀಕರಣದ ಒಪ್ಪಿಗೆ | | ಯಥಾ ಸ್ಥಿತಿ ನಿರ್ವಹಣೆ | |
|---|---|---|---|---|---|
| ಕ್ರ.. ಸಂ. | ಘಟಕಗಳು | ಸರ್ಕಾರದ ವೈಫಲ್ಯತೆ | ಖಾಸಗಿ ಪಾಲುದಾರರ ವೈಫಲ್ಯತೆ | ಸರ್ಕಾರದ ವೈಫಲ್ಯತೆ | ಖಾಸಗಿ ಪಾಲುದಾರರ ವೈಫಲ್ಯತೆ |
| 1. | ಟೋಲ್ ರಸ್ತೆ | – | – | (+) 497 | (–) 4.66 |
| 2. | ಸೆಕ್ಷನ್ ಎ(1&2) | – | – | – | (+) 227 (GOKP) |
| 3. | ಸೆಕ್ಷನ್ ಎ & ಬಿ (1,2,3) | – | – | – | (+) 491 (GOKP) |
| 4. | ಸೆಕ್ಷನ್ ಎ | 278.4 | (–) 106.50 | – | – |
| 5. | ಸೆಕ್ಷನ್ ಬಿ | 87 | (–) 57 | – | – |
| 6. | ಸೆಕ್ಷನ್ ಸಿ | 127.6 | (–) 302.5 | – | – |

ಮುಂದುವರಿದಂತೆ ಪೂರಕ ಒಪ್ಪಂದದ ಮುಖಾಂತರ ಈ ಕೆಳಕಂಡ ತಿದ್ದುಪಡಿ ಹಾಗೂ ಸೇರ್ಪಡೆಗಳನ್ನು ಜಾರಿಗೊಳಿಸುವ ಬಗ್ಗೆ ಸಚಿವ ಸಂಪುಟಕ್ಕೆ ಸಲ್ಲಿಸಲಾದ ಟಿಪ್ಪಣಿಯಲ್ಲಿ ಪ್ರತಿಪಾದಿಸಲಾಗಿದೆ:

1. ಉಲ್ಲೇಖಗಳ ಪರಿಷ್ಕರಣೆ

    ಎ. ಅಫಿಲಿಯೇಟ್ಸ್ – ಅನುಚ್ಛೇಧ 1.2

    ಬಿ. ಸಮೂಹ ಸಂಸ್ಥೆಯ ಸದಸ್ಯರು – ಅನುಚ್ಛೇಧ 11.1

2. ಹೊಸ ಉಲ್ಲೇಖಗಳ ಸೇರ್ಪಡೆ

    ಎ. ಸಂಬಂಧಿತ ನಗರ ಸಮುಚ್ಛಯಗಳು

    ಬಿ. ವಿಭಾಗಗಳು

    ಸಿ. ವಿಭಾಗ ಎ, ಬಿ ಮತ್ತು ಸಿ – ಅನುಚ್ಛೇಧ 1 ರಲ್ಲಿ ಸೇರ್ಪಡೆ

3. ಕ್ರಿಯಾ ಒಪ್ಪಂದದ ಅನುಚ್ಛೇಧ 6.3 ರ ಪರಿಷ್ಕರಣೆ ಅಥವಾ ತಿದ್ದುಪಡಿ

4. ಅನುಚ್ಛೇಧ 6.3.3 ರ ಅಡಿಯಲ್ಲಿ "Motor Vehicles Only" ಎಂಬ ಪದಗಳ ಸೇರ್ಪಡೆ.

5. ಕ್ರಿಯಾ ಒಪ್ಪಂದದ ಅನುಚ್ಛೇಧ 16.2.1. 16.5.1.1.1. 16.6.1.1 ಗಳಿಗೆ ತಿದ್ದುಪಡಿ ಹಾಗೂ ಪರಿಷ್ಕರಣೆ

ಕ್ರಿಯಾ ಒಪ್ಪಂದದ ಅನುಚ್ಛೇಧ 22.2 ರಲ್ಲಿ ಪೂರಕ ಒಪ್ಪಂದಗಳಿಗೆ, ತಿದ್ದುಪಡಿಗಳಿಗೆ, ಪರಿಷ್ಕರಣೆಗೆ ಹಾಗೂ ಸೇರ್ಪಡೆಗಳಿಗೆ ಕಲ್ಪಿಸಲಾಗಿರುವ ಅವಕಾಶದ ಹಿನ್ನೆಲೆಯಲ್ಲಿ ಪ್ರಸ್ತಾವಿತ ಪರಿಷ್ಕರಣೆಯನ್ನು ಜಾರಿಗೊಳಿಸುವಂತೆ ಪ್ರತಿಪಾದಿಸಿರುವುದನ್ನು ಸಮಿತಿ ಗಮನಿಸಿದೆ. ಕಡತವನ್ನು ಲೋಕೋಪಯೋಗಿ ಇಲಾಖೆ ಸಚಿವರಿಗೆ ಸಲ್ಲಿಸಲಾಗಿದ್ದು, ಕ್ರಿಯಾ ಒಪ್ಪಂದದ ಕಂಡಿಕೆ 4.1.2 ರ ಅನುಗುಣವಾಗಿ ತಿದ್ದುಪಡಿ ಅಥವಾ ಪರಿಷ್ಕರಣೆ ಅಧಿಕಾರದತ್ತ ಸಮಿತಿಯ ವ್ಯಾಪ್ತಿಗೆ ಒಳಪಟ್ಟಿರುವುದಿಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸಲಾಗಿದೆ. ಕ್ರಿಯಾ ಒಪ್ಪಂದದ ಅನುಚ್ಛೇಧ 4.1.2 ರ ಅನುಗುಣವಾಗಿ ಕ್ರಿಯಾ ಒಪ್ಪಂದದ ಸಮಗ್ರ ಪಾಲನೆಯ ಪರಿವೀಕ್ಷಣೆಯ ಅಧಿಕಾರವನ್ನು ಅಧಿಕಾರದತ್ತ ಸಮಿತಿಗೆ ನೀಡಿರುವ ಹಿನ್ನೆಲೆಯಲ್ಲಿ ಈ ಪ್ರತಿಪಾದನೆ ಅಸಂಬದ್ಧವಾಗಿರುತ್ತದೆ. ***ಕ್ರಿಯಾ ಒಪ್ಪಂದದ ಪಾಲನೆಯ ಜವಾಬ್ದಾರಿ ಹೊತ್ತಿರುವ ಅಧಿಕಾರದತ್ತ ಸಮಿತಿಯು ಕ್ರಿಯಾ ಒಪ್ಪಂದಕ್ಕೆ ಮಾಡಲಾಗುವ ತಿದ್ದುಪಡಿಗಳನ್ನು ಹಾಗೂ ಪರಿಷ್ಕರಣೆಗಳನ್ನು ಅವಲೋಕಿಸುವುದು ಆದ್ಯ ಕರ್ತವ್ಯವಾಗಿರುತ್ತದೆ. ಈ ಪೂರಕ ಒಪ್ಪಂದದ ಮುಖಾಂತರ ಯೋಜನಾ ಅನುಷ್ಠಾನದಲ್ಲಿ ಗುರುತರ ಬದಲಾವಣೆಗಳನ್ನು ಜಾರಿಗೊಳಿಸಿರುವ ಹಿನ್ನೆಲೆಯಲ್ಲಿ ಲೋಕೋಪಯೋಗಿ ಇಲಾಖೆಯ ನಿರ್ಧಾರ ಕ್ರಿಯಾ ಒಪ್ಪಂದಕ್ಕೆ ವ್ಯತಿರಿಕ್ತವಾಗಿದೆ. ಈ ಪ್ರಕರಣದಲ್ಲಿ ಪ್ರಸ್ತಾವನೆಯನ್ನು ನೇರವಾಗಿ ಸಚಿವ ಸಂಪುಟಕ್ಕೆ ಪರಿಗಣನೆಗೆ ಸಲ್ಲಿಸಲಾಗಿದೆ. ಈ ಪ್ರಸ್ತಾವನೆಯನ್ನು ಸಂಸ್ಕರಿಸಲು ಕಾರಣಕರ್ತರಾದ ಅಧಿಕಾರಿ/ಸಿಬ್ಬಂದಿ ವರ್ಗದವರನ್ನು ಗುರುತಿಸಿ ಶಿಸ್ತಿನ ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.***

ಸಮಿತಿಗೆ ಲಭ್ಯವಿರುವ ದಾಖಲಾತಿಗಳ ಹಿನ್ನೆಲೆಯಲ್ಲಿ ದಿನಾಂಕ 06.10.1999 ರಂದು ಪೂರಕ ಒಪ್ಪಂದವನ್ನು ಜಾರಿಗೊಳಿಸಲಾಗಿದೆ. ಪೂರಕ ಒಪ್ಪಂದದಲ್ಲಿ ಅನುಚ್ಛೇಧ 1.2 ರ ಅಡಿಯಲ್ಲಿ Affiliate ಉಲ್ಲೇಖವನ್ನು ಮಾರ್ಪಾಡು ಮಾಡಲಾಗಿದೆ. ಎರಡನೆಯದಾಗಿ ಅನುಚ್ಛೇಧ 11 ರ ಅಡಿಯಲ್ಲಿ Consortium ವ್ಯಾಖ್ಯಾನವನ್ನು ತಿದ್ದುಪಡಿ ಮಾಡಲಾಗಿದೆ. ಅನುಚ್ಛೇಧ 6.6.3 ರ ಅಡಿಯಲ್ಲಿ ಯೋಜನೆಯ ವಿವಿಧ ಸ್ತರದ ಅನುಷ್ಠಾನಕ್ಕೆ ನಿಗದಿಪಡಿಸಲಾದ ಕಾಲಮಿತಿಯನ್ನು ಮಾರ್ಪಾಡು ಮಾಡಲಾಗಿದೆ. ಅನುಚ್ಛೇಧ 1.2 ರ ಅಡಿಯಲ್ಲಿ ಯೋಜನಾ ಅನುಷ್ಠಾನದ ಸ್ತರಗಳನ್ನು 6 ಸ್ತರಗಳಾಗಿ ಮರು ವಿಂಗಡಿಸಲಾಗಿದೆ. ಪ್ರಮುಖವಾಗಿ ಅನುಚ್ಛೇಧ 16.6.1.3 ಅನ್ನು ಸೇರ್ಪಡೆ ಮಾಡಲಾಗಿದೆ. ಈ ಅನುಚ್ಛೇಧದ ಅನುಗುಣವಾಗಿ ಸಾರ್ವತ್ರಿಕ ಬಳಕೆಗಾಗಿ ಸೃಜಿಸಲಾಗುವ ಕೊಳಚೆ ನೀರು ಸಂಸ್ಕರಣಾ ಘಟಕ, ವಿದ್ಯುತ್ ಉತ್ಪಾದನಾ ಘಟಕಗಳು, ದೂರವಾಣಿ ಸಂಪರ್ಕ ಸೌಲಭ್ಯಗಳನ್ನು ಖಾಸಗಿ ಪಾಲುದಾರರು ಯೋಜನಾ ಅನುಷ್ಠಾನದಲ್ಲಿ ವಿಫಲವಾದ ಸಂದರ್ಭದಲ್ಲಿ ಖರೀದಿಸುವ ಸೌಲಭ್ಯವನ್ನು ಹಿಂಪಡೆಯಲಾಗಿದೆ.

***ಮೇಲೆ ಪ್ರತಿಪಾದಿಸಿರುವ ಪೂರಕ ಒಪ್ಪಂದದ ಅನುಷ್ಠಾನದ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಸಮಿತಿಯು ಈ ಕೆಳಕಂಡಂತೆ ವಿಶ್ಲೇಷಣೆ ಹಾಗೂ ಶಿಫಾರಸ್ಸುಗಳನ್ನು ಮಾಡುತ್ತದೆ.***

ಯೋಜನಾ ಅನುಷ್ಠಾನದ ಸ್ತರಗಳನ್ನು ಪರಿಷ್ಕರಿಸಿ ಪೂರಕ ಒಪ್ಪಂದದ ಮುಖಾಂತರ ವೈಫಲ್ಯತೆ ಉಂಟಾದ ಪ್ರಸಂಗಗಳಲ್ಲಿ Termination Purchase Price ಷರತ್ತಿನಡಿ ಖರೀದಿಸುವ

[illegible] ಸ್ತರಕ್ಕೆ ಮಾತ್ರ ಸೀಮಿತಗೊಳಿಸಲಾಗಿದೆ. ಈ ಷರತ್ತಿನಿಂದಾಗಿ ರಾಜ್ಯ [illegible]ವನ್ನು ಸಡಿಲಗೊಳಿಸಿದಂತಾಗಿದೆ ಎಂದು ಸಮಿತಿ ಅಭಿಪ್ರಾಯ ಪಡುತ್ತದೆ. [illegible] ಹಿತದೃಷ್ಟಿಯಿಂದ ಯೋಜನೆಯ ಮರು ವಿಂಗಡಣೆ ಬಂಡವಾಳ ಸೃಜನೆಗೆ [illegible]ವನ್ನು ನಿರ್ಮಿಸಿದೆ. ಆದರೆ ವೈಫಲ್ಯತೆಗೆ ಕ್ರಮವನ್ನು ಜರುಗಿಸುವಾಗ ರಾಜ್ಯ [illegible]ವನ್ನು ಸಂಬಂಧಿತ ಸ್ತರಕ್ಕೆ ಸೀಮಿತಗೊಳಿಸುವುದರಿಂದ ಯೋಜನೆಯ ಸಮಗ್ರ [illegible] ಈ ಪರಿಷ್ಕರಣೆ ವ್ಯತಿರಿಕ್ತ ಪರಿಣಾಮ ಬೀರುವುದು ಸ್ಪಷ್ಟವಾಗಿದೆ. ಏಕೆಂದರೆ, [illegible] ವಿಫಲರಾಗಿದ್ದಾಗ್ಯೂ ಸಹ, ಇನ್ನುಳಿದ ಸ್ತರಗಳಲ್ಲಿ ಖಾಸಗಿ ಪಾಲುದಾರರು [illegible] ಮುಂದುವರಿಸುವ ಸೌಲಭ್ಯವನ್ನು ಕಲ್ಪಿಸಲಾಗಿದೆ. ಸರ್ಕಾರದ ವೈಫಲ್ಯತೆ ಅಥವಾ [illegible] ವೈಫಲ್ಯತೆಯ ಸಂದರ್ಭದಲ್ಲಿ ಸೃಷ್ಟಿಯಾಗುವ ಆರ್ಥಿಕ ಪರಿಣಾಮಗಳನ್ನು [illegible]ಲಾಗಿದೆ. ಮೂಲಭೂತವಾಗಿ ಖಾಸಗಿ ಪಾಲುದಾರರು ಒಪ್ಪಂದದ ಪಾಲನೆಯಲ್ಲಿ [illegible] ಆರ್ಥಿಕ ಬಾಧ್ಯತೆಯನ್ನು ವಿಶ್ಲೇಷಿಸುವುದು ಅವಶ್ಯಕವಾಗುತ್ತದೆ. ಇಂತಹ [illegible] ಅನುಚ್ಛೇಧ 16.8 ರ ಅಡಿಯಲ್ಲಿ ರಾಜ್ಯ ಸರ್ಕಾರವು ಅಂತ್ಯಗೊಳಿಸುವ ಖರೀದಿ [illegible]ಬೇಕಾಗುತ್ತದೆ. ಸ್ಥಿರಾಸ್ತಿಗಳು ಹಸ್ತಾಂತರವಾಗುವ ಪೂರ್ವದಲ್ಲಿ ಇರುವ [illegible], ಖಾಸಗಿ ಪಾಲುದಾರರೇ ಭರಿಸಬೇಕಾಗುತ್ತದೆ. ಖಾಸಗಿ ಪಾಲುದಾರರ ಬಂಡವಾಳ [illegible] ಮೌಲ್ಯ ಬಾಧ್ಯತೆಗಳನ್ನು ಸರಿದೂಗಿಸಲು ಅವಶ್ಯಕ ಮಟ್ಟದಲ್ಲಿರುವುದು [illegible]. ಇಂತಹ ಪರಿಸ್ಥಿತಿಯಲ್ಲಿ ನಿಖರವಾಗಿ ಸರ್ಕಾರದ ಬಾಧ್ಯತೆಯನ್ನು ಖಾಸಗಿ [illegible] ಬಂಡವಾಳ ಹೂಡಿಕೆಯ ಅಥವಾ ಷೇರು ಬಂಡವಾಳದ ಹಿನ್ನೆಲೆಯಲ್ಲಿ [illegible] ಕನಿಷ್ಠ ಅವಶ್ಯಕತೆಯಾಗಿರುತ್ತದೆ. ನೈಸೆಲ್/ನೀಸೆಲ್ ಸಂಸ್ಥೆಯ [illegible] ಪ್ರಮುಖ ಸಂಸ್ಥೆಗಳು ನಿರೂಪಿಸಿರುವ ಮಾನದಂಡಗಳ ಅನುಗುಣವಾಗಿ ಷೇರು [illegible]ಅನುಪಾತವನ್ನು ನಿರ್ವಹಿಸದೇ ಇರುವ ಬಗ್ಗೆ ಈ ವರದಿಯಲ್ಲಿ ಪ್ರತಿಪಾದಿಸಲಾಗಿದೆ. [illegible] ಗೌಪ್ಯತೆಯ ಷರತ್ತಿನಡಿಯಲ್ಲಿ ನೈಸೆಲ್/ನೀಸೆಲ್ ಹಾಗೂ ಸಹಯೋಗಿ [illegible]ಪತ್ರಗಳನ್ನು ಅಥವಾ ಬ್ಯಾಲೆನ್ಸ್ ಶೀಟ್‌ಗಳನ್ನು ಈವರೆವಿಗೂ ಅಧಿಕೃತವಾಗಿ [illegible] ಇಲಾಖೆಗೆ ಸಲ್ಲಿಸಿರುವುದಿಲ್ಲ. ಪ್ರಸ್ತಾವಿತ ಪರಿಷ್ಕರಣೆಗಳು ಜಾರಿಗೊಂಡ [illegible] ವಾರ್ಷಿಕ ಲೆಕ್ಕಪತ್ರಗಳನ್ನು ಸಲ್ಲಿಸಿರುವ ಬಗ್ಗೆ ನಿರ್ಧಿಷ್ಟ ಮಾಹಿತಿ ಇರುವುದಿಲ್ಲ. ***ಈ [illegible] ಪೂರ್ಣ ಭಾಗವನ್ನು, ಖಾಸಗಿ ಪಾಲುದಾರರ ವೈಫಲ್ಯತೆಯಿಂದಾಗಿ [illegible] ಆ ದಿನಾಂಕದ ಪೂರ್ವದಲ್ಲಿ ಬಾಕಿ ಇರುವ ಸಾಲಗಳನ್ನು ತೀರುವಳಿ [illegible] ಉಪಲಬ್ಧವಿರುವ ಬಗ್ಗೆ ಯಾವುದೇ ಪ್ರಸ್ತಾವನೆಯನ್ನು ಮಾಡದ [illegible] ದೋಷಪೂರ್ವಕ ಎಂದು ಸಮಿತಿ ತೀರ್ಮಾನಿಸುತ್ತದೆ.***

[illegible] ನೀಡಲಾಗಿರುವ ಟಿಪ್ಪಣಿಯಲ್ಲಿ ಅನುಚ್ಛೇಧ 16.5, 16.6, 16.8 ಅಡಿಯಲ್ಲಿ [illegible] ಆರ್ಥಿಕ ಬಾಧ್ಯತೆಗಳನ್ನು ಲೆಕ್ಕ ಹಾಕಲಾಗಿದೆ. ಇಲ್ಲಿ ಅಳವಡಿಸಲಾದ ಅಂಕಿ [illegible] ಆಧಾರದ ಮೇಲೆ ಇತ್ಯರ್ಥಗೊಳಿಸಲಾಗಿದೆ. ನೈಸೆಲ್ ಸಂಸ್ಥೆಯು [illegible] ಫೈನಾನ್ಸಿಯಲ್ ಕ್ಲೋಷರ್ ಅನ್ನು 29.03.2004 ರಂದು ಸಾಧಿಸಿದೆ. ಸಂಬಂಧಪಟ್ಟ [illegible] ನೈಸೆಲ್ ಸಂಸ್ಥೆ ಆಡಳಿತಾತ್ಮಕ ಇಲಾಖೆಗೆ ಸಲ್ಲಿಸಿರುವುದಿಲ್ಲ. ಈ ಹಿನ್ನೆಲೆಯಲ್ಲಿ [illegible] Purchase Price ಲೆಕ್ಕಾಚಾರಗಳಲ್ಲಿ ಅಳವಡಿಸಿರುವ Equity ಹಾಗೂ Debt [illegible] ಕೇವಲ ಸಾಂಕೇತಿಕ ಎಂದು ಸಮಿತಿ ತೀರ್ಮಾನಿಸುತ್ತದೆ. ಘಟಕವಾರು [illegible] ಮೇಲ್ನೋಟಕ್ಕೆ ಸರ್ಕಾರಕ್ಕೆ ಯಾವುದೇ ಆರ್ಥಿಕ ಬಾಧ್ಯತೆ [illegible], [illegible] ಅಭಿಪ್ರಾಯ ವ್ಯಕ್ತವಾಗುತ್ತದೆ. ಆದರೆ ಪ್ರಸಕ್ತ ಸಂದರ್ಭದಲ್ಲಿ ರಾಜ್ಯ [illegible]ವನ್ನು ಅಂತ್ಯಗೊಳಿಸಿದಲ್ಲಿ ನೀಡಬೇಕಾಗುವ Termination Purchase

Price ಬಗ್ಗೆ ಸಂಬಂಧಿತ ಅನುಚ್ಛೇಧದಡಿಯಲ್ಲಿ ಚರ್ಚಿಸಲಾಗಿದೆ. *ಈ ಅಂತಿ ಅಂಶಗಳನ್ನು ಪರಿಗಣಿಸಿದಾಗ ಪೂರಕ ಒಪ್ಪಂದವನ್ನು ಜಾರಿಗೊಳಿಸುವ ಏಕೈಕ ಉದ್ದೇಶದಿಂದ ಈ ಎಲ್ಲಾ ಕ್ರಮಗಳನ್ನು ಕೈಗೊಂಡಿರುವುದು ಸ್ಪಷ್ಟವಾಗುತ್ತದೆ. ಈ ಹಿನ್ನಲೆಯಲ್ಲಿ ಪ್ರತಿಪಾದಿಸಿರುವ ಅಂತಿ ಅಂಶಗಳ ನಿಖರತೆ ಹಾಗೂ ವಸ್ತು ನಿಷ್ಠತೆ ಆಧಾರ ರಹಿತ ಎಂದು ಸಮಿತಿ ತೀರ್ಮಾನಿಸುತ್ತದೆ. ಕ್ರಿಯಾ ಒಪ್ಪಂದದ ಅನುಚ್ಛೇಧ 16.8.1 ರಲ್ಲಿ* Termination Purchase Price *ನಿರ್ಧಾರ ಮಾಡುವ ವಿಧಿ ವಿಧಾನಗಳನ್ನು ತಿಳಿಸಲಾಗಿದೆ. ಖಾಸಗಿ ಪಾಲುದಾರರು ಹಾಗೂ ಸರ್ಕಾರ ಪರಸ್ಪರ ಸಹಮತಿಸುವ* Appraiser *ಮುಖಾಂತರ* Termination Purchase Price *ಇತ್ಯರ್ಥಗೊಳಿಸಬೇಕಾಗುವುದು. ಇವರ ಮೌಲ್ಯ ಮಾಪನವನ್ನು ಒಪ್ಪದಿದ್ದಲ್ಲಿ,* Indian Institute of Chartered Accounts *ಮುಖಾಂತರ ಮೌಲ್ಯ ಮಾಪನ ಮಾಡಿಸಬೇಕಾಗುವುದು. ಈ ಹಿನ್ನಲೆಯಲ್ಲಿ ಯೋಜನೆಯ ಸೆಕ್ಷನ್ 'ಎ' ಭಾಗಕ್ಕೆ ನಿರ್ಧರಿಸಿರುವ ಬಾಧ್ಯತೆಗಳು ಅಸಮಂಜಸ ಹಾಗೂ ಅಸಮರ್ಪಕವಾಗಿದೆ.*

ಇದಲ್ಲದೆ. ಪ್ರಸ್ತಾವಿತ ಪೂರಕ ಒಪ್ಪಂದದ ಮುಖಾಂತರ ಯೋಜನೆಯಡಿಯಲ್ಲಿ ಸೃಜಿಸಲಾಗುವ ಸಾರ್ವತ್ರಿಕ ಸೌಲಭ್ಯಗಳನ್ನು ಖರೀದಿಸುವ ಅವಕಾಶವನ್ನು ನಿರ್ಬಂಧಿಸಲಾಗಿದೆ. ಉದಾಹರಣೆಗೆ ಮರು ವರ್ಗೀಕರಣ ಮಾಡಿದ ನಂತರ ಫೇಸ್-1 ಅಡಿಯಲ್ಲಿ 1ನೇ ಹಾಗೂ 2ನೇ ಸಮುಚ್ಛಯ ಒಳಗೊಂಡಿರುತ್ತದೆ. ಈ ಸ್ತರದಲ್ಲಿ ಯೋಜನೆಯನ್ನು ಅಂತ್ಯಗೊಳಿಸುವಲ್ಲಿ ಸರ್ಕಾರವು ನಗರ ಸಮುಚ್ಛಯಗಳನ್ನು ಸ್ವಾಧೀನಪಡಿಸಿಕೊಳ್ಳಬಹುದಾಗಿದೆ. ಆದರೆ ಸಂಬಂಧಿತ ಸಾರ್ವತ್ರಿಕ ಸೌಲಭ್ಯಗಳನ್ನು ಅಂದರೆ ವಿದ್ಯುತ್ ಉತ್ಪಾದನಾ ಘಟಕ, ಕೊಳಚೆ ಸಂಸ್ಕರಣಾ ಘಟಕ ಹಾಗೂ ಸಂಬಂಧಿತ ಸಾರ್ವತ್ರಿಕ ಸೌಲಭ್ಯಗಳನ್ನು ಖರೀದಿಸುವ ಅಥವಾ ವಶಪಡಿಸಿಕೊಳ್ಳುವ ಅವಕಾಶವನ್ನು ನಿರ್ಬಂಧಿಸಲಾಗಿದೆ. ಇದರಿಂದಾಗಿ ನಗರ ಸಮುಚ್ಛಯದ ಸ್ವಾಧೀನ ಪ್ರಕ್ರಿಯೆಯೂ ಸಹ ನಿರರ್ಥಕವಾಗುತ್ತದೆ. ಈ ಸೂಕ್ಷ್ಮಕರ ವೈಫಲ್ಯತೆಯನ್ನು ಉಪೇಕ್ಷಿಸಿ ಪೂರಕ ಒಪ್ಪಂದವನ್ನು ಅನುಷ್ಠಾನಗೊಳಿಸಿರುವುದು ಅಕ್ಷಮ್ಯ ವೈಫಲ್ಯತೆ ಸಮಿತಿ ತೀರ್ಮಾನಿಸುತ್ತದೆ. ಪ್ರಸ್ತಾವಿತ ತಿದ್ದುಪಡಿಯಿಂದ ಯೋಜನೆಯ ಸಮಗ್ರ ಧ್ಯೇಯೋದ್ದೇಶ ಅಂದರೆ ಬೆಂಗಳೂರಿನಿಂದ ಮೈಸೂರಿಗೆ ವೇಗದ ಹೆದ್ದಾರಿ ಸೃಜನೆ ಸಂದಿಗ್ಧ ಪರಿಸ್ಥಿತಿ ತಲುಪುವ ಸಾಧ್ಯತೆ ಇದೆ ಎಂದು ಸಮಿತಿ ತೀರ್ಮಾನಿಸುತ್ತದೆ. ಏಕೆಂದರೆ, ಉಲ್ಲಂಘನೆ ಆಧಾರದ ಮೇಲೆ ಅನುಷ್ಠಾನವನ್ನು ರದ್ದುಗೊಳಿಸುವ ಅಧಿಕಾರ ಸಂಬಂಧಿತ ಸ್ತರಕ್ಕೆ ಮಾತ್ರ ಸೀಮಿತವಾಗಿರುತ್ತದೆ. *ಇಂತಹ ಪ್ರಕರಣಗಳಲ್ಲಿ ಬೇರೆ ಮೂಲಗಳಿಂದ ಅನುಷ್ಠಾನವನ್ನು ಮುಂದುವರಿಸಬೇಕಾಗಿದ್ದು, ಇತರೆ ಸ್ತರಗಳಲ್ಲಿ ಖಾಸಗಿ ಪಾಲುದಾರರೇ ಅನುಷ್ಠಾನವನ್ನು ಮುಂದುವರಿಸುವಂತಹ ಅನಿವಾರ್ಯತೆ ಉಂಟಾಗುತ್ತದೆ. ಇಂತಹ ಪ್ರಕರಣಗಳಲ್ಲಿ ಸಮನ್ವಯತೆಯ ಕೊರತೆಯಿರುವುದು ಸಾಮಾನ್ಯ ಜ್ಞಾನವಾಗಿದೆ. ಈ ಹಿನ್ನಲೆಯಲ್ಲಿ ಪ್ರಸ್ತಾವಿತ ತಿದ್ದುಪಡಿ ಯೋಜನೆಯ ಸಮಗ್ರ ಅನುಷ್ಠಾನದ ಹಿತಾಸಕ್ತಿಗೆ ವಿರುದ್ಧವಾಗಿದೆ ಎಂದು ಸಮಿತಿ ತೀರ್ಮಾನಿಸುತ್ತದೆ.*

ಯಾವುದೇ ಸ್ತರದಲ್ಲಿ ಖಾಸಗಿ ಪಾಲುದಾರರು ಕ್ರಿಯಾ ಒಪ್ಪಂದದ ಅನುಷ್ಠಾನದಲ್ಲಿ ವಿಫಲವಾದಲ್ಲಿ ಮುಕ್ತಾಯಗೊಳಿಸುವ ದರವನ್ನು ನೀಡಿ ಸರ್ಕಾರವು ಜಮೀನನ್ನು ಹಿಂಪಡೆಯಬಹುದಾಗಿದೆ. ಅಂತಹ ಸಂದರ್ಭಗಳಲ್ಲಿ ಜಮೀನಿನ ತಳಹದಿ ಹಾಗೂ ಮೇಲ್ಕಟ್ಟದ ಭಾಗ ಖಾಸಗಿ ಪಾಲುದಾರರ ಸುಪರ್ದಿಯಲ್ಲಿಯೇ ಇರುವ ಅವಕಾಶವನ್ನು ಕಲ್ಪಿಸುವಂತಹ ತಿದ್ದುಪಡಿಯನ್ನು ಪ್ರತಿಪಾದಿಸಿರುವುದನ್ನು ಸಮಿತಿ ಗಮನಿಸಿದೆ. ಈ ತಿದ್ದುಪಡಿ ಅನುಸಾರವಾಗಿ ವಾಸ್ತವಿಕವಾಗಿ ನಿರ್ಮಾಣವಾದ ಟೋಲ್ ರಸ್ತೆ ವ್ಯಾಪ್ತಿ ಪ್ರದೇಶ ಹೊರತುಪಡಿಸಿ ಇನ್ಯಾವುದೇ ಭೂ ಪ್ರದೇಶಕ್ಕೆ ರಾಜ್ಯ ಸರ್ಕಾರ ಹಕ್ಕನ್ನು ಸ್ಥಾಪಿಸಲು ಸಾಧ್ಯವಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಈ ಪ್ರಸ್ತಾವಿತ ಪರಿಷ್ಕರಣೆ ಸಂಪೂರ್ಣವಾಗಿ ವಿವಾದಾತ್ಮಕ ಹಾಗೂ ನಕಾರಾತ್ಮಕ ಎಂದು ಸಮಿತಿ ತೀರ್ಮಾನಿಸುತ್ತದೆ.

ಪರಿಶೀಲನೆಯ ಬಳಿಕ ಸಮಿತಿಯು ಕ್ರಿಯಾ ಒಪ್ಪಂದದ ಅನುಚ್ಛೇಧ ೬.೬.೩ ರ ಪರಿಷ್ಕರಣೆಯ ಪರಿಣಾಮವನ್ನು ವಿಶ್ಲೇಷಿಸಿದೆ. 9.8 ಕಿ.ಮೀ. ಉದ್ದದ ಲಿಂಕ್ ರಸ್ತೆಯನ್ನು ಸಂಪೂರ್ಣಗೊಳಿಸಲು ಮೂಲ ಕ್ರಿಯಾ ಒಪ್ಪಂದದಲ್ಲಿ ಇರುವ 5 ವರ್ಷದ ಅವಧಿಯನ್ನು 8 ವರ್ಷ ಎಂದು ಪರಿಷ್ಕರಿಸಲಾಗಿದೆ. ಇದಲ್ಲದೆ, ಹೊರ ವರ್ತುಲ ರಸ್ತೆಯ ದಕ್ಷಿಣ ಭಾಗದ 3 ಕಿ.ಮೀ. ರಸ್ತೆಯಿಂದ ರಾಜ್ಯ ಹೆದ್ದಾರಿ 17 ಕ್ಕೆ ಸಂಪರ್ಕ ರಸ್ತೆಯನ್ನು ಸಂಪೂರ್ಣಗೊಳಿಸಲು ಕಾಲಾವಧಿಯನ್ನು 5 ರಿಂದ 8 ವರ್ಷಗಳಿಗೆ ವಿಸ್ತರಿಸಲಾಗಿದೆ. ಅನುಷ್ಠಾನ ಸ್ತರದ ಮರು ವರ್ಗೀಕರಣದಿಂದಾಗಿ ಸ್ತರ 1 ಹಾಗೂ ಸ್ತರ 2 ಅನ್ನು ವಿಲೀನಗೊಳಿಸಿ ಮೂರು ವರ್ಷಗಳನ್ನು ಹೆಚ್ಚುವರಿಯಾಗಿ ನೀಡಲಾಗಿದೆ. ಕ್ರೋಢೀಕೃತವಾಗಿ 12.8 ಕಿ.ಮೀ. ರಸ್ತೆಯನ್ನು ಸಂಪೂರ್ಣಗೊಳಿಸಲು ಮೂರು ವರ್ಷಗಳ ಅವಧಿಯನ್ನು ಹೆಚ್ಚುವರಿಯಾಗಿ ನೀಡಿರುವುದು ಅಸಮರ್ಥನೀಯ ಎಂದು ಸಮಿತಿ ತೀರ್ಮಾನಿಸುತ್ತದೆ. ಇದೇ ಸ್ವರೂಪದಲ್ಲಿ ಅನುಷ್ಠಾನ ಸ್ತರದ ಮರು ವರ್ಗೀಕರಣದಲ್ಲಿ ಅನಿಯತವಾಗಿ ಹೆಚ್ಚುವರಿ ಅವಧಿಯನ್ನು ವಿಸ್ತರಿಸಿರುವುದನ್ನು ಸಮಿತಿಯು ಗಮನಿಸಿದೆ. ***ಈ ಹಿನ್ನೆಲೆಯಲ್ಲಿ ಅನುಷ್ಠಾನ ಸ್ತರದ ಮರು ವರ್ಗೀಕರಣದಿಂದಾಗಿ ಖಾಸಗಿ ಪಾಲುದಾರರಿಗೆ ಅನುದ್ದೇಶಿತ ಹಾಗೂ ಅನಾವಶ್ಯಕ ಕಾಲಾವಧಿಯನ್ನು ವಿಸ್ತರಿಸಿದಂತಾಗಿದೆ ಎಂದು ಸಮಿತಿ ತೀರ್ಮಾನಿಸುತ್ತದೆ.***

ಇದಲ್ಲದೆ, ಸಮಿತಿಯು ಸಚಿವ ಸಂಪುಟಕ್ಕೆ ಸಲ್ಲಿಸಿರುವ ಟಿಪ್ಪಣಿಯಲ್ಲಿ ಪ್ರತಿಪಾದಿಸಲಾಗಿರುವ Termination Purchase Price ಅಂಕಿ ಅಂಶಗಳನ್ನು ಅವಲೋಕಿಸಿದೆ. ನಿರೂಪಿತ ಸೂತ್ರಗಳಲ್ಲಿ Present Value of future earnings ಅಂಶಗಳನ್ನು ಪರಿಗಣಿಸುವಲ್ಲಿ ವ್ಯಾಪಕ ವೈಫಲ್ಯತೆ ಉಂಟಾಗಿದೆ. ಇದಲ್ಲದೆ, ಲೋಕೋಪಯೋಗಿ ಇಲಾಖೆ ಕಾರ್ಯದರ್ಶಿಯವರ ಟಿಪ್ಪಣಿಯಲ್ಲಿ ಹಲವು ಪ್ರಕರಣಗಳಲ್ಲಿ ಕಂಪನಿಯ ಷೇರು ಬಂಡವಾಳ ಕೆಲವು ಸ್ತರಗಳಲ್ಲಿ ವಾಸ್ತವಿಕ ವೆಚ್ಚಕ್ಕಿಂತ ಕಡಿಮೆಯಾಗುವುದರಿಂದ ರಾಜ್ಯ ಸರ್ಕಾರಕ್ಕೆ ಯಾವುದೇ ಬಾಧ್ಯತೆ ಉಂಟಾಗುವುದಿಲ್ಲ ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಈ ಪೂರಕ ಒಪ್ಪಂದದ ತಿದ್ದುಪಡಿಯ ಸಮಯದಲ್ಲಿ ಪ್ರತಿಪಾದಿಸಿರುವ Present Value of future earnings ಮೌಲ್ಯ ಸಂಪೂರ್ಣವಾಗಿ ಅಸಮರ್ಪಕವಾಗಿರುವುದು ಸಮಿತಿಗೆ ಸ್ಪಷ್ಟವಾಗಿದೆ. ಮೇಲ್ನೋಟಕ್ಕೆ ಖಾಸಗಿ ಪಾಲುದಾರರು ಒದಗಿಸಿರುವ ಅಂಕಿ ಅಂಶಗಳನ್ನು ಯಾವುದೇ ತಪಾಸಣೆಗೆ ಒಳಪಡಿಸದೇ ಯಥಾವತ್ತಾಗಿ ಅಳವಡಿಸಲಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಆದುದರಿಂದ ಪಿ.ವಿ.ಎಫ್.ಇ. ಅನ್ವಯಿಸುವಂತೆ ವೃತ್ತಿಪರ ಪರಿಣತರಿಂದ ಬದಲಾಯಿತ ಸನ್ನಿವೇಶದಲ್ಲಿ ಸೂಕ್ತ ತಿದ್ದುಪಡಿಗಳನ್ನು ಜಾರಿಗೊಳಿಸಬೇಕೆಂದು ಸಮಿತಿಯು ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತದೆ.

ಪೂರಕ ಒಪ್ಪಂದದ ಷರತ್ತುಗಳ ಪಾಲನೆಯ ಅವಶ್ಯಕತೆಯನ್ನು ಅಥವಾ ಸಿಂಧುತ್ವವನ್ನು ವಿವಿಧ ಸ್ತರದ ನ್ಯಾಯಾಲಯಗಳ ತೀರ್ಪಿನ ಹಿನ್ನೆಲೆಯಲ್ಲಿ ವಿಶ್ಲೇಷಿಸುವುದು ಅವಶ್ಯಕವೆಂದು ಸಮಿತಿ ತೀರ್ಮಾನಿಸುತ್ತದೆ. ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಅನುಗುಣವಾಗಿ ಬಿ.ಎಂ.ಐ.ಸಿ. ಯೋಜನೆಗೆ ಸಂಬಂಧಿಸಿದಂತೆ "The Frame Work Agreement, as conceived originally should be implemented in letter and spirit" ಎಂಬ ನಿರ್ದೇಶನ ಹಾಗೂ ತೀರ್ಪನ್ನು ನೀಡಲಾಗಿದೆ. ಅಂದರೆ ಮೂಲ ಕ್ರಿಯಾ ಒಪ್ಪಂದವನ್ನು ಅಕ್ಷರಶ: ಹಾಗೂ ತಾತ್ವಿಕವಾಗಿ ಪಾಲಿಸುವ ಬಗ್ಗೆ ನಿರ್ದೇಶನ ನೀಡಲಾಗಿದೆ. ***ಈ ಹಿನ್ನೆಲೆಯಲ್ಲಿ ಮೂಲ ಕ್ರಿಯಾ ಒಪ್ಪಂದದ ಅನುಷ್ಠಾನದ ನಂತರ ಜಾರಿಗೊಳಿಸಲಾಗಿರುವ ಪೂರಕ ಒಪ್ಪಂದಗಳ ಸಿಂಧುತ್ವವನ್ನು ರದ್ದುಗೊಳಿಸಿದಂತಾಗಿದೆ. ಆದುದರಿಂದ ಪ್ರಸ್ತಾವಿತ ಪೂರಕ ಒಪ್ಪಂದವನ್ನು ನ್ಯಾಯಾಲಯದ ತೀರ್ಪಿನ ಹಿನ್ನೆಲೆಯಲ್ಲಿ ಹಿಂಪಡೆಯಲು ಸರ್ಕಾರವು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಪ್ರಸಕ್ತವಾಗಿ ಬಿ.ಎಂ.ಐ.ಸಿ. ಯೋಜನಾ ಅನುಷ್ಠಾನವು ಸೆಕ್ಷನ್ 'ಎ' ಸ್ತರಕ್ಕೆ ಸೀಮಿತವಾಗಿರುವ ಹಿನ್ನೆಲೆಯಲ್ಲಿ ಹಾಗೂ ಸೆಕ್ಷನ್ 'ಎ' ಅನುಷ್ಠಾನವನ್ನು ಅಸೈನ್‌ಮೆಂಟ್ ಒಪ್ಪಂದದ ಮುಖಾಂತರ ನೀಸೆಲ್ ಸಂಸ್ಥೆಗೆ ವಹಿಸಿರುವ ಹಿನ್ನೆಲೆಯಲ್ಲಿ***

ಪ್ರಸಕ್ತ ಪರಿಸ್ಥಿತಿಯಲ್ಲಿ Termination Purchase Price ವಿವರಗಳು ವಿವಿಧ ಸಂದರ್ಭಗಳಲ್ಲಿ ಅಂದರೆ GOK events of default ಹಾಗೂ Company events of default ಪರಿಸ್ಥಿತಿಯಲ್ಲಿ ವಿಶ್ಲೇಷಿಸಲಾಗಿದೆ. ಈ ವಿಶ್ಲೇಷಣೆಯ ಆಧಾರದ ಮೇಲೆ ಯೋಜನೆಯ ಸ್ತರಗಳನ್ನು ಮಾರ್ಪಾಡು ಮಾಡಲು ಸೂಚಿಸಲಾಗಿದೆ. ಈ ಎಲ್ಲಾ ಅಂಶಗಳನ್ನು ಪರಿಗಣಿಸಿದಾಗ ಯೋಜನೆಯ ಅನುಷ್ಠಾನದ ಅವಧಿಯ ವಿಸ್ತರಣೆ, ಯೋಜನಾ ಅನುಷ್ಠಾನದ ಸ್ತರದ ವರ್ಗೀಕರಣದ ಬದಲಾವಣೆ, ಸಾರ್ವತ್ರಿಕ ಸೌಲಭ್ಯಗಳನ್ನು ಸ್ವಾಧೀನಪಡಿಸಿಕೊಳ್ಳುವ ಹಕ್ಕಿನ ರದ್ಧತಿ ಈ ಅಂಶಗಳು ಸರ್ಕಾರಕ್ಕೆ ನಷ್ಟವನ್ನುಂಟು ಮಾಡುವುದು ಸ್ಪಷ್ಟವಾಗಿದೆ. ಈ ಪೂರಕ ಒಪ್ಪಂದಕ್ಕೆ ಅನ್ವಯಿಸುವಂತೆ ಖಾಸಗಿ ಪಾಲುದಾರರ ಪ್ರಸ್ತಾವನೆಗಳನ್ನು ಗಮನಿಸಿದಲ್ಲಿ ಟೋಲ್ ರಸ್ತೆ ಹೊರತುಪಡಿಸಿ ಇನ್ನುಳಿದ ಭಾಗವನ್ನು ಹಿಂಪಡೆಯುವುದರಿಂದ ನಿರ್ಬಂಧ ವಿಧಿಸುವ ಪ್ರಯತ್ನ ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತಾವಿತ ಪೂರಕ ಒಪ್ಪಂದವನ್ನು ಸೂಕ್ಷ್ಮತರವಾಗಿ ಪುನರ್ ಪರಿಶೀಲಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

## XXXVI. ಬಿ.ಎಂ.ಐ.ಸಿ. ಯೋಜನೆಯ ಅನುಷ್ಠಾನದಲ್ಲಿ ಭೂಮಿ ನಿರ್ವಹಣೆಯ ಬಗ್ಗೆ ಸಮಿತಿಯ ವಿಶ್ಲೇಷಣೆ ಹಾಗೂ ಶಿಫಾರಸ್ಸುಗಳು.

*ಕೆ.ಐ.ಎ.ಡಿ.ಬಿ. ಅಧಿನಿಯಮದ ಅನುಗುಣವಾಗಿ ಭೂಸ್ವಾಧೀನ ಪ್ರಕ್ರಿಯೆಯ ವಿವಿಧ ಸ್ತರಗಳು ಕೆಳಕಂಡಂತಿದೆ:*

| ಪರಿಚ್ಛೇಧ | ವಿವರ |
|---|---|
| 1(3) | ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದ ವ್ಯಾಪ್ತಿಗೆ ಒಳಪಡುವ ಪ್ರದೇಶಗಳ ಹಾಗೂ ಅನ್ವಯಿಸುವ ಪ್ರದೇಶಗಳ ಬಗ್ಗೆ ಪ್ರಕಟಣೆ. |
| 3(1) | ರಾಜ್ಯದಲ್ಲಿನ ಯಾವುದೇ ಪ್ರದೇಶವನ್ನು ಕೈಗಾರಿಕಾ ಪ್ರದೇಶವೆಂದು ಘೋಷಿಸುವ ಸೌಲಭ್ಯ |
| 4 | ನಿರ್ಧಿಷ್ಟಪಡಿಸಲಾದ ಕೈಗಾರಿಕಾ ಪ್ರದೇಶಕ್ಕೆ ಸೇರ್ಪಡೆ ಅಥವಾ ರದ್ಧತಿ ಮಾಡುವ ಅಧಿಕಾರ |
| 28(1) | ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಉದ್ದೇಶದ ಪ್ರಕಟಣೆ (ಪ್ರಾಥಮಿಕ ಅಧಿಸೂಚನೆ) |
| 28(2) | ಭೂ ಮಾಲೀಕರಿಗೆ ಅಥವಾ ವಾರಸುದಾರರಿಗೆ ಸ್ವಾಧೀನ ಪ್ರಸ್ತಾವನೆಗೆ ಸಂಬಂಧಿಸಿದಂತೆ ಕಾರಣ ಕೇಳುವ ನೋಟೀಸ್ ವಿತರಣೆ |
| 28(3) | 28(2)ರ ಅಡಿಯಲ್ಲಿನ ನೋಟೀಸಿನ ಉತ್ತರಗಳನ್ನು ಪರಿಗಣಿಸಿ ಸಮರ್ಪಕ ಆದೇಶಗಳ ಜಾರಿ |
| 28(4) | ಸ್ವಾಧೀನಕ್ಕಾಗಿ ಅಧಿಸೂಚನೆಯ ಘೋಷಣೆ (ಅಂತಿಮ ಅಧಿಸೂಚನೆ) |
| 28(5) | ಈ ಪರಿಚ್ಛೇಧದ ಅಡಿಯಲ್ಲಿ 28(4) ರ ಘೋಷಣೆಯ ನಂತರ ಭೂಮಿಯ ಋಣಭಾರದಿಂದ ಮುಕ್ತವಾಗಿ ಸರ್ಕಾರದ ಬಳಿ ಇರುತ್ತದೆ (Land vests with the Government) |
| 28(6) | ರಾಜ್ಯ ಸರ್ಕಾರವು ಭೂಮಾಲೀಕರಿಗೆ 30 ದಿನಗಳೊಳಗೆ ಭೂಮಿಯ ಒಡೆತನವನ್ನು ನೀಡುವಂತೆ ಈ ಪರಿಚ್ಛೇಧದ ಅಡಿಯಲ್ಲಿ ಕೇಳಬಹುದು. |
| 28(7) | ಆದೇಶ ಪಾಲನೆ ಮಾಡದಿರುವ ಪ್ರಕರಣಗಳಲ್ಲಿ ರಾಜ್ಯ ಸರ್ಕಾರವು ಅಗತ್ಯವಿರುವ ಶಕ್ತಿಯನ್ನು ಉಪಯೋಗಿಸಿ ಭೂಮಿಯ ಒಡೆತನವನ್ನು ತೆಗೆದುಕೊಳ್ಳಬಹುದು. |
| 28(8) | ಭೂಮಿಯ ಒಡೆತನವನ್ನು ತೆಗೆದುಕೊಂಡ ನಂತರ ರಾಜ್ಯ ಸರ್ಕಾರವು ಭೂಮಿಯನ್ನು ಮಂಡಳಿಗೆ ಹಸ್ತಾಂತರಿಸಬಹುದು. |
| 29(1) | ಭೂ ಸ್ವಾಧೀನಕ್ಕಾಗಿ ರಾಜ್ಯ ಸರ್ಕಾರವು ಪರಿಹಾರವನ್ನು ನೀಡುವ ಬಗ್ಗೆ. |

F13(O)

| | |
|---|---|
| 29(2) | ಒಪ್ಪಂದದ ಮೂಲಕ ಪರಿಹಾರ ನಿಗದಿಯಾದಲ್ಲಿ, ಆ ಪರಿಹಾರವನ್ನು ಪಾವತಿಸುವ ಬಗ್ಗೆ |
| 29(3) ಮತ್ತು 29(4) | ಪರಿಹಾರದ ಬಗ್ಗೆ ಒಪ್ಪಂದ ಇಲ್ಲದೇ ಇರುವ ಪ್ರಕರಣದಲ್ಲಿ, ಮನವಿಗಳನ್ನು ಪಾಲಿಸಿದ ನಂತರ ರಾಜ್ಯ ಸರ್ಕಾರವು ಅಂತಹ ಪ್ರಕರಣಗಳನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸುವುದು. |
| 30 | 29(3) ಮತ್ತು (4) ಅಡಿಯಲ್ಲಿ ದಾಖಲಾದ ಪ್ರಕರಣಗಳಿಗೆ ಜಿಲ್ಲಾಧಿಕಾರಿಯಿಂದ ವಿಚಾರಣೆ ಹಾಗೂ ಪರಿಹಾರಕ್ಕೆ ಸಂಬಂಧಿಸಿದಂತೆ ಭೂ ಸ್ವಾಧೀನ ಅಧಿನಿಯಮ 1984 ರ ಅಡಿಯಲ್ಲಿ ಮುಂದಿನ ಕ್ರಮ |

***ಕೆ.ಐ.ಎ.ಡಿ.ಬಿ. ಭೂಸ್ವಾಧೀನ ಪ್ರಕ್ರಿಯೆಯ ಸ್ಥೂಲ ವಿವರಗಳು ಕೆಳಕಂಡಂತಿದೆ:***

| 3(1)ರ ಅಡಿಯಲ್ಲಿ ಅಧಿಸೂಚನೆ | 1(3)ರ ಅಡಿಯಲ್ಲಿ ಅಧಿಸೂಚನೆ | 28(1)ರ ಅಡಿಯಲ್ಲಿ ಅಧಿಸೂಚನೆ | 28(4)ರ ಅಡಿಯಲ್ಲಿ ಅಧಿಸೂಚನೆ | ಸರ್ಕಾರಿ ಜಮೀನು ಸೇರಿದಂತೆ ಹಸ್ತಾಂತರಿಸಲಾದ ಜಮೀನು | ಶುದ್ಧ ಕ್ರಯ ಪತ್ರ ಜಾರಿಗೊಳಿಸಿರುವ ಜಮೀನು |
|---|---|---|---|---|---|
| 26,488 ಎಕರೆಗಳು (1998ರಿಂದ 2004ರ ಅವಧಿಯಲ್ಲಿ : 2006 ಮತ್ತು 2009ರಲ್ಲಿ 8 ಎಕರೆಗಳನ್ನು ಘೋಷಿಸಲಾಗಿದೆ) | 19,361 ಎಕರೆಗಳು (1998ರಿಂದ 2004ರ ಅವಧಿಯಲ್ಲಿ : 2006 ಮತ್ತು 2009ರಲ್ಲಿ 8 ಎಕರೆಗಳನ್ನು ಘೋಷಿಸಲಾಗಿದೆ) | 18,218 ಎಕರೆಗಳು (1998ರಿಂದ 2004ರ ಅವಧಿಯಲ್ಲಿ : 2006 ಮತ್ತು 2009ರಲ್ಲಿ 8 ಎಕರೆಗಳನ್ನು ಘೋಷಿಸಲಾಗಿದೆ) | 4,810 ಎಕರೆಗಳು (2003 ಹಾಗೂ 2004ರಲ್ಲಿ ಜಾರಿಗೊಳಿಸಲಾಗಿದೆ: 2005ರಲ್ಲಿ 2 4 ಗುಂಟೆ, 2006ರಲ್ಲಿ 198 ಎಕರೆ, 2008ರಲ್ಲಿ 100 ಎಕರೆ, 2009ರಲ್ಲಿ ನಗರ ಸಮುಚ್ಛಯಕ್ಕಾಗಿ 1,916 ಎಕರೆಗಳು) | 7,159 ಎಕರೆಗಳು (ಫೆಬ್ರವರಿ 2004ರಿಂದ ಸೆಪ್ಟೆಂಬರ್ 2009ರ ಅವಧಿಯಲ್ಲಿ) | 1,699 ಎಕರೆಗಳು (ಮಾರ್ಚ್ 2004 ಹಾಗೂ ಆಗಸ್ಟ್ 2011ರ ಅವಧಿಯಲ್ಲಿ) |

ಕ್ರಿಯಾ ಒಪ್ಪಂದದ ಅನುಗುಣವಾಗಿ ಬಿ.ಎಂ.ಐ.ಸಿ. ಯೋಜನೆಗೆ 148 ಹಳ್ಳಿಗಳ ವ್ಯಾಪ್ತಿಯ 20,193 ಎಕರೆ ಜಮೀನಿನ ಅವಶ್ಯಕತೆ ಇರುತ್ತದೆ. ಪ್ರಮುಖವಾಗಿ ಬೆಂಗಳೂರು, ರಾಮನಗರ, ಮಂಡ್ಯ ಹಾಗೂ ಮೈಸೂರು ಜಿಲ್ಲೆಯ ವ್ಯಾಪ್ತಿಯಲ್ಲಿ ಯೋಜನೆ ಅನುಷ್ಠಾನವಾಗಬೇಕಾಗಿರುವುದು ದಾಖಲಾತಿಗಳಿಂದ ಸಮಿತಿಗೆ ಮನದಟ್ಟಾಗಿದೆ. ಈ ಪೈಕಿ ಬೆಂಗಳೂರು ಹಾಗೂ ರಾಮನಗರ ಜಿಲ್ಲೆಗಳಲ್ಲಿ ಕ್ರೋಢೀಕೃತವಾಗಿ 86 ಗ್ರಾಮಗಳು ಯೋಜನಾ ವ್ಯಾಪ್ತಿಗೆ ಒಳಪಟ್ಟು ಸಕ್ರಮವಾಗಿ ಈ ಜಿಲ್ಲೆಗಳಲ್ಲಿ 6,785 ಹಾಗೂ 6,331 ಎಕರೆ ಜಮೀನನ್ನು ಯೋಜನೆಗೆ ಒದಗಿಸಬೇಕಾಗುವುದು. ಯೋಜನಾ ಅನುಷ್ಠಾನಕ್ಕೆ ಅವಶ್ಯಕವಿರುವ 20,193 ಎಕರೆ ಜಮೀನಿನ ಪೈಕಿ ಪ್ರತಿಶತ 65 ರಷ್ಟು ಅಂದರೆ 13,116 ಎಕರೆ ಜಮೀನು ಈ ಎರಡು ಜಿಲ್ಲೆಗಳಿಗೆ ಸೇರಿರುತ್ತದೆ. ಟೋಲ್ ರಸ್ತೆ ಅನ್ವಯಿಸುವಂತೆ ಅವಶ್ಯಕವಿರುವ 6,999 ಎಕರೆ ಜಮೀನಿನ ಪೈಕಿ 3,367 ಎಕರೆ ಜಮೀನನ್ನು ಯೋಜನೆಯ ಸೆಕ್ಷನ್ 'ಎ' ಅನುಷ್ಠಾನಕ್ಕೆ ಬಳಸಬೇಕಾಗಿದ್ದು, ಉಳಿದ 3,362 ಎಕರೆ ಜಮೀನಿನಲ್ಲಿ ಸೆಕ್ಷನ್ 'ಬಿ' ಮತ್ತು ಸೆಕ್ಷನ್ 'ಸಿ' ಗಳಲ್ಲಿ ವೇಗದ ಹೆದ್ದಾರಿ ಘಟಕಗಳನ್ನು ಅನುಷ್ಠಾನಗೊಳಿಸಬೇಕಾಗುವುದು. ಈ ಅಂಕಿ ಅಂಶಗಳನ್ನು ಗಮನಿಸಿದಾಗ ಬೆಂಗಳೂರು ಹಾಗೂ ಬೆಂಗಳೂರು ನಗರ ಸಮುಚ್ಛಯದ ವ್ಯಾಪ್ತಿ

ಪ್ರದೇಶದಲ್ಲಿ ಗರಿಷ್ಠ ಪ್ರಮಾಣದಲ್ಲಿ ಭೂಮಿಯ ಅವಶ್ಯಕತೆಯನ್ನು ಬಿಂಬಿಸಲಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಈ ಪ್ರದೇಶಗಳಲ್ಲಿ ಭೂಮಿಯ ಬೆಲೆ ಗರಿಷ್ಠ ಪ್ರಮಾಣದಲ್ಲಿದ್ದು, ಖಾಸಗಿ ಪಾಲುದಾರರಿಗೆ ಲಿಂಕ್ ರಸ್ತೆ, ಪೆರಿಫೆರಲ್ ರಸ್ತೆ ಮತ್ತು ಪರಿಷ್ಕೃತ ಫೇಸ್-1 ಭಾಗವಾಗಿರುವ ಎಕ್ಸ್‌ಪ್ರೆಸ್ ವೇ ವ್ಯಾಪ್ತಿಯಲ್ಲಿ ಭೂಮಿಯ ಬೆಲೆ ಏರಿಕೆ ಸೌಲಭ್ಯವನ್ನು ಪರೋಕ್ಷವಾಗಿ ವಿಸ್ತರಿಸಿದಂತಾಗಿದೆ ಎಂದು ಸಮಿತಿ ತೀರ್ಮಾನಿಸುತ್ತದೆ.*ತ್ರಿಪಕ್ಷೀಯ ಒಪ್ಪಂದದ ಹಿನ್ನೆಲೆಯಲ್ಲಿ ಖಾಸಗಿ ಪಾಲುದಾರರು ಸುಮಾರು 756 ಎಕರೆಗಳ ಜಮೀನನ್ನು ವಿವಿಧ ಸ್ವರೂಪಗಳಲ್ಲಿ ಪರಭಾರೆ ಮಾಡಿದ್ದು, ಈ ವರದಿಯಲ್ಲಿ ಪ್ರತಿಪಾದಿಸಿರುವಂತೆ ಮಾರ್ಗಸೂಚಿ ದರಗಳ ಆಧಾರದ ಮೇಲೆ ಇದರ ವಹಿವಾಟಿನ ಮೌಲ್ಯ 4,956 ಕೋಟಿ ರೂ.ಗಳಾಗಿರುತ್ತದೆ. ಈ ಅಂಶಗಳನ್ನು ಪರಿಗಣಿಸಿದಾಗ ಯೋಜನಾ ತಾಂತ್ರಿಕ ವರದಿಯಲ್ಲಿ ಪ್ರತಿಪಾದಿಸಲಾದ ಐ.ಆರ್.ಆರ್. ಹಾಗೂ ಎನ್.ಪಿ.ವಿ. ಗಳನ್ನು ವಾಸ್ತವಿಕ ಸ್ಥಿತಿಗತಿಗಳ ಅಥವಾ ವಹಿವಾಟುಗಳ ಹಿನ್ನೆಲೆಯಲ್ಲಿ ಪರಿಷ್ಕರಿಸುವುದು ಸಮರ್ಪಕ ಎಂದು ಸಮಿತಿ ತೀರ್ಮಾನಿಸುತ್ತದೆ.*

*ಬಿ.ಎಂ.ಐ.ಸಿ. ಯೋಜನೆಗೆ ಕ್ರಿಯಾ ಒಪ್ಪಂದದ ಅನುಗುಣವಾಗಿ ಅವಶ್ಯಕವಿರುವ ಜಮೀನಿನ ಸಮಗ್ರ ವಿವರಗಳು ಕೆಳಕಂಡಂತಿದೆ:*

(ಎಕರೆಗಳಲ್ಲಿ)

| ಕ್ರ. ಸಂ. | ತಾಲ್ಲೂಕಿನ ಹೆಸರು | ಗ್ರಾಮಗಳ ಸಂಖ್ಯೆ | ಖಾಸಗಿ ಜಮೀನಿನ ವಿಸ್ತೀರ್ಣ | ಸರ್ಕಾರಿ ಜಮೀನಿನ ವಿಸ್ತೀರ್ಣ | ಒಟ್ಟು | ಪ್ರತಿಶತ |
|---|---|---|---|---|---|---|
| 1. | ಬೆಂ.ಉತ್ತರ | 15 | 766.13 | 315.18 | 1081.31 | 05.35 |
| 2. | ಬೆಂ.ದಕ್ಷಿಣ | 40 | 3955.20 | 1748.19 | 5703.39 | 28.24 |
| 3. | ರಾಮನಗರ | 25 | 4195.01 | 2136.30 | 6331.40 | 31.35 |
| 4. | ಚನ್ನಪಟ್ಟಣ | 17 | 1762.35 | 927.14 | 2689.69 | 13.31 |
| 5. | ಮದ್ದೂರು | 13 | 424.08 | 100.12 | 524.92 | 02.59 |
| 6. | ಮಂಡ್ಯ | 13 | 531.37 | 192.32 | 723.69 | 03.58 |
| 7. | ಶ್ರೀರಂಗಪಟ್ಟಣ | 17 | 2556.06 | 265.15 | 2821.75 | 13.97 |
| 8. | ಮೈಸೂರು | 02 | 144.14 | 0.27 | 144.41 | 00.71 |
| | ಒಟ್ಟು ಅರಣ್ಯ ಜಮೀನು | - | - | 168 | 168 | 0.83 |
| | ಒಟ್ಟು (%) | 142 | 14337(71) | 5856(29) | 20193 | 100 |

I. ವೇಗದ ಹೆದ್ದಾರಿ ಪೆರಿಫೆರಲ್ ರಸ್ತೆ ಹಾಗೂ ಲಿಂಕ್ ರಸ್ತೆಗೆ ಸುಮಾರು 6999 ಎಕರೆ ಜಮೀನಿನ ಅವಶ್ಯಕತೆಯಿದ್ದು, ವೇಗದ ಹೆದ್ದಾರಿಯ ಘಟಕವಾರು ವಿವರಗಳು ಕೆಳಕಂಡಂತಿದೆ:

1. 4 ಪಥದ 90 ಮೀ. ಮಾರ್ಗದ ಹಕ್ಕಿರುವ 111 ಕಿ.ಮೀ. ಉದ್ದದ ವೇಗದ ಹೆದ್ದಾರಿ – 6 ಪಥಗಳಿಗೆ ವಿಸ್ತರಿಸುವ ಸೌಲಭ್ಯದೊಂದಿಗೆ.

2. 41 ಕಿ.ಮೀ. ಉದ್ದದ 75 ಮೀ. ಮಾರ್ಗದ ಹಕ್ಕಿನ ಪೆರಿಫೆರಲ್ ರಸ್ತೆ – ರಾಷ್ಟ್ರೀಯ ಹೆದ್ದಾರಿ 4 ಮತ್ತು 7 ರ ಸಂಪರ್ಕ.

3. 9.1 ಕಿ.ಮೀ. ಉದ್ದದ 60 ಮೀ. ಮಾರ್ಗದ ಹಕ್ಕಿರುವ ಲಿಂಕ್ ರಸ್ತೆ – ವೇಗದ ಹೆದ್ದಾರಿಗೆ ಕ್ಲೋವರ್ ಲೀಫ್ ಮತ್ತು ಕಾರ್ಡ್ ರಸ್ತೆ ಮತ್ತು ಮೈಸೂರು ರಸ್ತೆ ಸಂಪರ್ಕ ಕಲ್ಪಿಸಲು.

4. ಲಿಂಕ್ ರಸ್ತೆಯನ್ನು ಸಿರ್ಸಿ ವೃತ್ತದ ಭಾಗಕ್ಕೆ ಸಂಪರ್ಕ ಕಲ್ಪಿಸುವ 3.1 ಕಿ.ಮೀ. ಉದ್ದದ ಉನ್ನತ ಮಟ್ಟದ ರಸ್ತೆ.

5. ವೇಗದ ಹೆದ್ದಾರಿ, ಪೆರಿಫೆರಲ್ ರಸ್ತೆ ಮತ್ತು ಲಿಂಕ್ ರಸ್ತೆಗಳಲ್ಲಿ ಸಕ್ರಮವಾಗಿ ನಿರ್ಮಿಸಬೇಕಾದ 8, 7 ಹಾಗೂ 1 ಇಂಟರ್ ಛೇಂಜ್‌ಗಳು.

II. 5 ನಗರ ಸಮುಚ್ಛಯಗಳಿಗೆ ಅವಶ್ಯಕವಿರುವ 13,194 ಎಕರೆ ವಿಸ್ತೀರ್ಣದ ಜಮೀನು. ಕ್ರೋಢೀಕೃತವಾಗಿ 20,193 ಎಕರೆ ವಿಸ್ತೀರ್ಣದ ಜಮೀನಿನ ಅವಶ್ಯಕತೆಯಿದ್ದು, ಕ್ರಿಯಾ ಒಪ್ಪಂದದ ಶೆಡ್ಯೂಲ್–1 ಅನುಗುಣವಾಗಿ ಹಾಗೂ ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನ ಕಂಡಿಕೆ 51ರ ಅನುಗುಣವಾಗಿ ಅವಶ್ಯಕವಿರುವ ಘಟಕವಾರು ಜಮೀನು ಹಾಗೂ 12.02.2004 ರಂದು ಅನುಮೋದಿಸಲಾದ ಓ.ಡಿ.ಪಿ. ಅನುಗುಣವಾಗಿ ಅವಶ್ಯಕವಿರುವ ಜಮೀನಿನ ತುಲನಾತ್ಮಕ ವಿವರಗಳು ಕೆಳಕಂಡಂತಿದೆ:

(ಎಕರೆಗಳಲ್ಲಿ)

| ಘಟಕಗಳು | ಕ್ರಿಯಾ ಒಪ್ಪಂದದ ಶೆಡ್ಯೂಲ್–1 ಹಾಗೂ ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನ ಅನುಗುಣವಾಗಿ | ದಿನಾಂಕ 12.02.2004ರ ಓಡಿಪಿ ಅನುಗುಣವಾಗಿ ಜಮೀನಿನ ವಿಸ್ತೀರ್ಣ | ವ್ಯತ್ಯಾಸ |
|---|---|---|---|
| ರಸ್ತೆಗಳು | 6999 | 9471 | +2472 |
| ಟೌನ್‌ಶಿಪ್–1 | 2775 | 3014 | +239 |
| ಟೌನ್‌ಶಿಪ್–2 | 1836 | 2026 | +190 |
| ಟೌನ್‌ಶಿಪ್–4 | 1615 | 1729 | +114 |
| ಟೌನ್‌ಶಿಪ್–5 | 2682 | 1482 | –1200 |
| ಟೌನ್‌ಶಿಪ್–7 | 4286 | 2471 | –1815 |
| *ಒಟ್ಟು* | *20193* | *20193* | *3015* |

ಈ ಅಂಕಿ ಅಂಶಗಳನ್ನು ಗಮನಿಸಿದಾಗ ಓ.ಡಿ.ಪಿ. ಅನುಗುಣವಾಗಿ ನಗರ ಸಮುಚ್ಛಯಗಳಿಗೆ ಅನ್ವಯಿಸುವಂತೆ ಜಮೀನಿನ ಅವಶ್ಯಕತೆಯನ್ನು ಕ್ರಿಯಾ ಒಪ್ಪಂದದಲ್ಲಿ ಉಲ್ಲೇಖಿಸಿರುವ 13,194 ಎಕರೆಗಳಿಂದ 10,772 ಎಕರೆ ಜಮೀನಿಗೆ ಇಳಿಮುಖಗೊಳಿಸಿರುವುದನ್ನು ಸಮಿತಿ ಗಮನಿಸಿದೆ. ಇದೇ ಸ್ತರದಲ್ಲಿ ಟೋಲ್ ರಸ್ತೆಗೆ ಅವಶ್ಯಕವಿರುವ ಜಮೀನನ್ನು 6999 ಎಕರೆಗಳಿಂದ 9471 ಎಕರೆಗಳಿಗೆ ಪರಿಷ್ಕರಿಸಲಾಗಿದೆ.

ನಗರ ಸಮುಚ್ಛಯಗಳಿಗೆ ಅನ್ವಯಿಸುವಂತೆ ನಗರ ಸಮುಚ್ಛಯ 1, 2 ಹಾಗೂ 4 ಕ್ಕೆ ಅನ್ವಯಿಸುವಂತೆ ಓ.ಡಿ.ಪಿ. ಅನುಮೋದನೆ ಹಿನ್ನೆಲೆಯಲ್ಲಿ ಹೆಚ್ಚುವರಿ ಜಮೀನಿನ ಅವಶ್ಯಕತೆಯನ್ನು ಪ್ರತಿಪಾದಿಸಲಾಗಿದೆ. ನಗರ ಸಮುಚ್ಛಯ 5 ಹಾಗೂ 7ಕ್ಕೆ ಅವಶ್ಯಕವಿರುವ ಜಮೀನನ್ನು ಇಳಿಮುಖಗೊಳಿಸಲಾಗಿದೆ. ಈ ಅಂಕಿ ಅಂಶಗಳನ್ನು ಗಮನಿಸಿದಾಗ ಕ್ರೋಢೀಕೃತವಾಗಿ 3015 ಎಕರೆ ವಿಸ್ತೀರ್ಣದ ಜಮೀನನ್ನು ವೇಗದ ಹೆದ್ದಾರಿಯ ಹಾಗೂ ನಗರ ಸಮುಚ್ಛಯಗಳ ಮೈಸೂರು ಪ್ರದೇಶದಿಂದ ಕಡಿತಗೊಳಿಸಿ

ಬೆಂಗಳೂರಿನ ಹಾಗೂ ಬೆಂಗಳೂರು ನಗರ ಸಮುಚ್ಛಯದ ಪ್ರದೇಶಗಳಿಗೆ ಹೆಚ್ಚುವರಿಯಾಗಿ ಬಿಂಬಿಸಿರುವುದು ಸಮಿತಿಗೆ ಮನದಟ್ಟಾಗಿದೆ. ಕ್ರೋಢೀಕೃತವಾಗಿ ಅವಶ್ಯಕತೆಯನ್ನು 20,193 ಎಕರೆ ಜಮೀನಿಗೆ ಸೀಮಿತಗೊಳಿಸಿದ್ದಾಗ್ಯೂ ಸಹ ಈ ಬದಲಾವಣೆಯಿಂದಾಗಿ ಗರಿಷ್ಠ ಮೌಲ್ಯದ ಜಮೀನಿನ ಅವಶ್ಯಕತೆಯನ್ನು ಹೆಚ್ಚುವರಿಯಾಗಿ ಪ್ರಯತ್ನಪೂರ್ವಕವಾಗಿ ಓ.ಡಿ.ಪಿ. ಸೋಗಿನಲ್ಲಿ ಬಿಂಬಿಸಿರುವುದು ಸಮಿತಿಗೆ ಸ್ಪಷ್ಟವಾಗಿದೆ.

ಈಗಾಗಲೇ ವಿಶ್ಲೇಷಿಸಿರುವಂತೆ ವೇಗದ ಹೆದ್ದಾರಿ, ಪೆರಿಫೆರಲ್ ರಸ್ತೆ ಮತ್ತು ಲಿಂಕ್ ರಸ್ತೆ 6999 ಎಕರೆ ಜಮೀನಿನ ಅವಶ್ಯಕತೆಯಿದ್ದು, ಪ್ರತಿ ಕಿ.ಮೀ. ರಸ್ತೆ ನಿರ್ಮಾಣಕ್ಕೆ ಸರಾಸರಿ 43.20 ಎಕರೆಗಳ ಅವಶ್ಯಕತೆಯನ್ನು ಪರಿಗಣಿಸಬಹುದಾಗಿದೆ. ಈ ವಿಸ್ತೀರ್ಣವನ್ನು 75 ಮೀ. ಮಾರ್ಗದ ಹಕ್ಕಿನ ನಿಯಂತ್ರಣವನ್ನು ಪರಿಗಣಿಸಿ ಇತ್ಯರ್ಥಗೊಳಿಸಲಾಗಿದೆ. ವಾಸ್ತವಿಕವಾಗಿ ಮಾರ್ಗದ ಹಕ್ಕಿನ ವ್ಯಾಪ್ತಿಯನ್ನು ಘಟಕವಾರು ಪರಿಗಣಿಸಿದಲ್ಲಿ ವೇಗದ ಹೆದ್ದಾರಿಗೆ ಪ್ರತಿ ಕಿ.ಮೀ. 40.79 ಎಕರೆ (90 ಮೀ. ಮಾರ್ಗದ ಹಕ್ಕು), ಪೆರಿಫೆರಲ್ ರಸ್ತೆಗೆ 53.48 ಎಕರೆ (ಮಾರ್ಗದ ಹಕ್ಕು 75 ಮೀ), ಲಿಂಕ್ ರಸ್ತೆಗೆ 28.36 ಎಕರೆಗಳು (ಮಾರ್ಗದ ಹಕ್ಕು 60 ಮೀ.) ಅವಶ್ಯಕತೆಯಿರುತ್ತದೆ. **ವಾಸ್ತವಿಕವಾಗಿ ಪೆರಿಫೆರಲ್ ರಸ್ತೆಯ ಮಾರ್ಗದ ಹಕ್ಕು 90 ಮೀ. ಬದಲಾಗಿ 75 ಮೀ. ಇರುವುದನ್ನು ಸಮಿತಿ ಗಮನಿಸಿದೆ. ಘಟಕವಾರು ವಾಸ್ತವಿಕ ಸರಾಸರಿ ಜಮೀನಿನ ಬಳಕೆ ವಿವರಗಳು ಕೆಳಕಂಡಂತಿದೆ:**

| ಕ್ರ. ಸಂ. | ಸೆಕ್ಷನ್ ವೈಸ್ ಟೋಲ್ ರಸ್ತೆ | ಕಿ.ಮೀ.ಗಳಲ್ಲಿ | ಬೇಕಾಗಿರುವ ಒಟ್ಟು ಜಮೀನು (ಎಕರೆಗಳಲ್ಲಿ) (ಶೇಕಡವಾರು) | ಮಾರ್ಗದ ಹಕ್ಕು | ಪ್ರತಿ ಕಿ.ಮೀ.ಗೆ ಉಪಯೋಗಿಸಿರುವ ಒಟ್ಟು ಜಮೀನು | |
|---|---|---|---|---|---|---|
| 1. | ಎಲಿವೇಟೆಡ್ ಕಾರಿಡಾರ್ | 3.10 | – | 30 ಮೀ. | – | |
| 2. | ಪೆರಿಫೆರಲ್ ರಸ್ತೆ | 41 | 2193(31) | 75 ಮೀ | 53.48 | 49 |
| 3. | ಲಿಂಕ್ ರಸ್ತೆ | 13.2 | 278(4) | 60 ಮೀ | 28.36 | |
| 4. | ಎಕ್ಸ್‌ಪ್ರೆಸ್ ವೇ (ಸೆಕ್ಷನ್ ಎ) (ಬೆಂಗಳೂರಿನಿಂದ ಬಿಡದಿ) | 13.2 | 896(13) | 90 ಮೀ | 67.87 | |
| 5. | ಎಕ್ಸ್‌ಪ್ರೆಸ್ ವೇ (ಸೆಕ್ಷನ್-ಬಿ ಮತ್ತು ಸಿ) (ಬಿಡದಿಯಿಂದ ಮೈಸೂರು | 97.8 | 3632(52) | 90 ಮೀ | 37.23 | 41 |
| | ಒಟ್ಟು | 162 | 6999(100) | 75 | 43.20 | |

ಮೇಲಿನ ಕೋಷ್ಟಕವನ್ನು ಗಮನಿಸಿದಾಗ ಪೆರಿಫೆರಲ್ ರಸ್ತೆ, ಲಿಂಕ್ ರಸ್ತೆ ಮತ್ತು 8 ಇಂಟರ್ ಛೇಂಜ್‌ಗಳಿಗೆ ವಾಸ್ತವಿಕವಾಗಿ ಬಳಸಿರುವ 1497 ಎಕರೆ ಎಂಬುದು ವ್ಯಕ್ತವಾಗುತ್ತದೆ. ಕ್ರಿಯಾ ಒಪ್ಪಂದ ಹಾಗೂ ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನ ಅನುಗುಣವಾಗಿ ಈ ಘಟಕಗಳಿಗೆ ಅವಶ್ಯಕತೆಯನ್ನು 2471 ಎಕರೆ ಎಂದು ನಿರ್ಧರಿಸಲಾಗಿದೆ. ವಾಸ್ತವಿಕ ಅನುಷ್ಠಾನಕ್ಕೆ ಬಳಸಲಾಗಿರುವ 1497 ಎಕರೆಗಳಿಗೆ ಹೋಲಿಸಿದಲ್ಲಿ 974 ಎಕರೆಗಳನ್ನು ಹೆಚ್ಚುವರಿಯಾಗಿ ನೀಡಲಾಗಿದೆ ಎಂದು ಸಮಿತಿ ತೀರ್ಮಾನಿಸುತ್ತದೆ. ಇದಲ್ಲದೆ, ಕೆ.ಐ.ಎ.ಡಿ.ಬಿ. ನ್ಯಾಯಾಲಯದ ತೀರ್ಪಿಗೆ ವ್ಯತಿರಿಕ್ತವಾಗಿ 605.23 ಎಕರೆ ವಿಸ್ತೀರ್ಣದ ಜಮೀನನ್ನು ಹೆಚ್ಚುವರಿಯಾಗಿ ಹಸ್ತಾಂತರಿಸಿರುವ ಹಿನ್ನೆಲೆಯಲ್ಲಿ ವಾಸ್ತವಿಕ ಬಳಕೆಯನ್ನು ಪರಿಗಣಿಸಿದಲ್ಲಿ, ಹೆಚ್ಚುವರಿ ಜಮೀನಿನ ವಿಸ್ತೀರ್ಣ 1579 ಎಕರೆಗಳು ಆಗಿರುವುದು

ಮೇಲ್ನೋಟಕ್ಕೆ ವ್ಯಕ್ತವಾಗುತ್ತದೆ. ಆದಾಗ್ಯೂ, ಕ್ರಿಯಾ ಒಪ್ಪಂದ ಹಾಗೂ ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನ ನಿರ್ದೇಶನಗಳಿಗೆ ಈ ವರದಿಯು ಬದ್ಧವಾಗಿರುವುದರಿಂದ ನೈಸೆಲ್/ನೀಸೆಲ್ ಸಂಸ್ಥೆಗೆ ಕೆ.ಐ.ಎ.ಡಿ.ಬಿ. ಮುಖಾಂತರ ಹಸ್ತಾಂತರಿಸಿರುವ ಜಮೀನಿನ ವಿಸ್ತೀರ್ಣದ ಹಿನ್ನೆಲೆಯಲ್ಲಿ ಘಟಕವಾರು ಬಳಕೆ/ಹೆಚ್ಚುವರಿಯನ್ನು ಇತ್ಯರ್ಥಗೊಳಿಸಬೇಕಾಗುವುದು. ವಿವರಗಳು ಕೆಳಕಂಡಂತಿದೆ:

(ಎಕರೆಗಳಲ್ಲಿ)

| ಬಿಎಂಐಸಿ ಯೋಜನೆಯ ಘಟಕಗಳು | ಸರ್ಕಾರಿ+ಖಾಸಗಿ ಜಮೀನು | ಖಾಸಗಿ ಜಮೀನು | | | ಸರ್ಕಾರಿ ಜಮೀನು | ನೈಸೆಲ್ ಸಂಸ್ಥೆಗೆ ಹಸ್ತಾಂತರಿಸಿರುವ ಜಮೀನು (5)+(6) | ಜಮೀನಿನ ಹೆಚ್ಚುವರಿ/ ಕೊರತೆ |
|---|---|---|---|---|---|---|---|
| | ಕ್ರಿಯಾ ಒಪ್ಪಂದ ಹಾಗೂ ಉಚ್ಚ ನ್ಯಾಯಾಲಯದ ತೀರ್ಪು | 28(1) | 28(4) | ನೈಸೆಲ್‌ಗೆ ಹಸ್ತಾಂತರಿಸಿದ ಜಮೀನು | ನೈಸೆಲ್‌ಗೆ ಹಸ್ತಾಂತರಿಸಿದ ಜಮೀನು | | |
| ಪೆರಿಫೆರಲ್ ರಸ್ತೆ | 2193 | 3880 | 2373 | 1651 | 1096 | 2747 | +554 |
| ಲಿಂಕ್ ರಸ್ತೆ | 278 | 354 | 239 | 233.02 | 96.23 | 329.25 | +51.25 |
| ಎಕ್ಸ್‌ಪ್ರೆಸ್ ವೇ (ಸ-ಎ) | 896 | 435 | 282 | 275.03 | 349.10 | 624.14 | -272.25 |
| ಎಕ್ಸ್‌ಪ್ರೆಸ್ ವೇ (ಸ-ಬಿ,ಸಿ) | 3632 | 3902 | 0 | 0 | 1087.06 | 1087.06 | -2544.33 |
| ಒಟ್ಟು ಟೋಲ್ ರಸ್ತೆ | 6999 | 8571 | 2894 | 2159.60 | 2629 | 4788.06 | -2210.33 |
| ಟೌನ್ ಶಿಪ್-1 | 2775 | 2420 | 1916 | 0 | 481 | 481 | -2294 |
| ಟೌನ್ ಶಿಪ್-2 | 1836 | 1699 | 0 | 0 | 320 | 320 | -1516 |
| ಟೌನ್ ಶಿಪ್-3 | 1615 | 1529 | 0 | 0 | 474 | 474 | -1141 |
| ಟೌನ್ ಶಿಪ್-4 | 2682 | 1335 | 0 | 0 | 901 | 901 | -1781 |
| ಟೌನ್ ಶಿಪ್-5 | 4286 | 2664 | 0 | 0 | 195 | 195 | -4091 |
| ಒಟ್ಟು ಟೌನ್‌ಶಿಪ್‌ಗಳು | 13194 | 9647 | 1916 | 0 | 2371 | 2371 | -10823 |
| ಒಟ್ಟು | 20193 | 18218 | 4810 | 2159.6 | 5000 | 7159.06 | -13033.33 |

ಖಾಸಗಿ ಜಮೀನಿಗೆ ಸಂಬಂಧಿಸಿದಂತೆ 14.10.1998 ರಂದು ಕೆ.ಐ.ಎ.ಡಿ.ಬಿ. ಯೊಂದಿಗೆ ಒಪ್ಪಂದವಾಗಿದ್ದು, ಈ ಒಪ್ಪಂದದನುಗುಣವಾಗಿ 23,846 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಬೇಕಾಗುವುದು. ಆದರೆ ಸದರಿ ಒಪ್ಪಂದದಲ್ಲಿ ಘಟಕ, ಸರ್ವೆ ನಂಬರ್ ಇತ್ಯಾದಿ ವಿವರಗಳು ಇರುವುದಿಲ್ಲ. ಯೋಜನಾ ಅನುಷ್ಠಾನಕ್ಕೆ ಸಮಗ್ರವಾಗಿ 20,193 ಎಕರೆ ಜಮೀನು ಅವಶ್ಯಕವಿರುವ ಹಿನ್ನೆಲೆಯಲ್ಲಿ ದಿನಾಂಕ 14.10.1998ರ ಒಪ್ಪಂದ ಅಸಮರ್ಪಕ ಹಾಗೂ ಅಸಮಂಜಸ ಎಂದು ಸಮಿತಿ ತೀರ್ಮಾನಿಸುತ್ತದೆ. ಈ ಒಪ್ಪಂದದ ಅನುಗುಣವಾಗಿ ಕೆ.ಐ.ಎ.ಡಿ.ಬಿ. ಕಲಂ 3(1)ರ ಅಡಿಯಲ್ಲಿ 29267 ಎಕರೆಗಳಿಗೆ ಅಂದರೆ ಒಪ್ಪಂದಕ್ಕಿಂತ ಇನ್ನೂ ಹೆಚ್ಚುವರಿಯಾಗಿ ಅಧಿಸೂಚನೆಯನ್ನು ಜಾರಿಗೊಳಿಸಿದೆ. ಕಲಂ 1(3)ರ ಅಡಿಯಲ್ಲಿ 19,414 ಎಕರೆ ಜಾರಿಗೊಳಿಸಿದೆ. ಕಲಂ 28(1)ರ ಅಡಿಯಲ್ಲಿ 18,218 ಎಕರೆಹಾಗೂ ಕಲಂ 28(4) ರಲ್ಲಿ 4810 ಎಕರೆ ಜಮೀನಿಗೆ ಅಧಿಸೂಚನೆ ಹೊರಡಿಸಿದೆ.

ಕ್ರೋಢೀಕೃತವಾಗಿ ಕೆ.ಐ.ಎ.ಡಿ.ಬಿ. ನಿಯಮಾವಳಿಗಳ ಅಡಿಯಲ್ಲಿ ವಿವಿಧ ಸ್ತರಗಳಲ್ಲಿ ಭೂಸ್ವಾಧೀನ ಪ್ರಕ್ರಿಯೆಗೆ ಒಳಪಡಿಸಿರುವ ಖಾಸಗಿ ಜಮೀನಿನ ವಿವರಗಳು ಕೆಳಕಂಡಂತಿದೆ:

1. ಕಲಂ 3(1) ರಲ್ಲಿ ಘೋಷಿಸಲಾದ ಖಾಸಗಿ ಜಮೀನಿನ ವಿಸ್ತೀರ್ಣ - 29267 ಎಕರೆಗಳು
2. ಕಲಂ1(3) ರಲ್ಲಿ ಘೋಷಿಸಲಾದ ಖಾಸಗಿ ಜಮೀನಿನ ವಿಸ್ತೀರ್ಣ - 19414 ಎಕರೆಗಳು

3. ಕಲಂ 28(1) ರ ಅಡಿಯಲ್ಲಿ ಪ್ರಾಥಮಿಕ ಅಧಿಸೂಚನೆಗೆ ಒಳಪಟ್ಟ ಜಮೀನಿನ ವಿಸ್ತೀರ್ಣ – 18218 ಎಕರೆಗಳು
4. ಕಲಂ 28(4) ಅಡಿಯಲ್ಲಿ ಅಂತಿಮ ಅಧಿಸೂಚನೆಗೆ ಒಳಪಟ್ಟ ಜಮೀನಿನ ವಿಸ್ತೀರ್ಣ – 4810 ಎಕರೆಗಳು

ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನಲ್ಲಿ ಇತ್ಯರ್ಥವಾದಂತೆ ಹಾಗೂ ಕ್ರಿಯಾ ಒಪ್ಪಂದದಲ್ಲಿ ನಮೂದಿಸಿರುವ ಘಟಕವಾರು ವಿಸ್ತೀರ್ಣಕ್ಕೆ ಹೋಲಿಸಿದಲ್ಲಿ ಲಿಂಕ್ ರಸ್ತೆ ಹಾಗೂ ಪೆರಿಫೆರಲ್ ರಸ್ತೆಗಳ ವ್ಯಾಪ್ತಿಯಲ್ಲಿ ಸಕ್ರಮವಾಗಿ 51.25 ಎಕರೆಗಳು ಹಾಗೂ 554 ಎಕರೆಗಳನ್ನು ಹೆಚ್ಚುವರಿಯಾಗಿ ನೀಡಿರುವುದು ಸ್ಪಷ್ಟವಾಗಿದೆ. ಸರ್ವೋಚ್ಛ ನ್ಯಾಯಾಲಯದ ಮುಂದೆ ಖಾಸಗಿ ಪಾಲುದಾರರ ನ್ಯಾಯವಾದಿಗಳು ಕ್ರಿಯಾ ಒಪ್ಪಂದಕ್ಕಿಂತ ವಿಭಿನ್ನ ಅಥವಾ ಹೆಚ್ಚುವರಿಯಾಗಿ ಯಾವುದೇ ಜಮೀನನ್ನು ಕ್ಲೇಮು ಮಾಡುವುದಿಲ್ಲ ಎಂದು ಪ್ರತಿಪಾದಿಸಿರುತ್ತಾರೆ. ಸರ್ವೋಚ್ಛ ನ್ಯಾಯಾಲಯವೂ ಸಹ ಎ.ಐ.ಎಂ.ಓ. ಪ್ರಕರಣದಲ್ಲಿ ಕ್ರಿಯಾ ಒಪ್ಪಂದವನ್ನು ಮೂಲ ಸ್ವರೂಪದಲ್ಲಿ ಜಾರಿಗೊಳಿಸಿದಂತೆ ಅಕ್ಷರಶ: ಹಾಗೂ ತಾತ್ವಿಕವಾಗಿ ಪಾಲಿಸಬೇಕು ಎಂದು ನಿರ್ದೇಶಿಸಿದೆ. ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಕ್ರಿಯಾ ಒಪ್ಪಂದಕ್ಕಿಂತ ಹೆಚ್ಚುವರಿಯಾಗಿ ಪಡೆದಿರುವ ಪ್ರಸ್ತಾವಿತ ಜಮೀನನ್ನು ಸ್ವಾಧೀನ ಪ್ರಕ್ರಿಯೆಯಿಂದ ಹೊರತುಪಡಿಸುವುದು ಅತ್ಯಾವಶ್ಯಕವಾಗಿರುತ್ತದೆ. ಆದರೆ ನೈಸೆಲ್/ನೀಸೆಲ್ ಸಂಸ್ಥೆಯು ಯೋಜನಾ ಅನುಷ್ಠಾನದ 19 ವರ್ಷಗಳ ನಂತರವೂ ಕ್ಲಡಸ್ಟಲ್ ಮ್ಯಾಪುಗಳನ್ನು ನೀಡಿರುವುದಿಲ್ಲ. ಇದಲ್ಲದೆ, ಅನುಷ್ಠಾನಗೊಳಿಸಲಾದ ಪಂಕ್ತೀಕರಣ ಕ್ರಿಯಾ ಒಪ್ಪಂದದ ಪಂಕ್ತೀಕರಣಕ್ಕಿಂತ ವಿಭಿನ್ನವಾಗಿದ್ದು, ಓ.ಡಿ.ಪಿ. ಅನುಗುಣವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ವಾಸ್ತವಿಕ ಬಳಕೆಯನ್ನು ದೃಢೀಕರಣಗೊಳಿಸಲು ದಿನಾಂಕ 22.04.2015 ರಂದು ನಡೆಸಲಾದ ಸಮಿತಿಯ ಸಭೆಯಲ್ಲಿ ಕೆ.ಐ.ಎ.ಡಿ.ಬಿ. ಮತ್ತು ಲೋಕೋಪಯೋಗಿ ಇಲಾಖೆಗೆ ಜಂಟಿಯಾಗಿ ಸೆಕ್ಷನ್ 'ಎ', 'ಬಿ' ಮತ್ತು 'ಸಿ', ಘಟಕಗಳಲ್ಲಿ ಮೋಜಣಿಯನ್ನು ಕೈಗೊಂಡು ವಸ್ತು ಸ್ಥಿತಿಗೆ ಅನುಗುಣವಾಗಿ ವರದಿಯನ್ನು ನೀಡುವಂತೆ ನಿರ್ದೇಶಿಸಲಾಯಿತು. ಮೂಲಭೂತವಾಗಿ ಹೆಚ್ಚುವರಿ ಜಮೀನನ್ನು ಕೈಬಿಡುವ ಬಗ್ಗೆ ದಿನಾಂಕ 17.07.2015 ರಂದು ವಾಣಿಜ್ಯ ಇಲಾಖೆ ಸಲ್ಲಿಸುವ ವರದಿಗೆ 2 ತಿಂಗಳ ನಂತರ ಲೋಕೋಪಯೋಗಿ ಇಲಾಖೆ ದಿನಾಂಕ 09.09.2015 ರಂದು ಅಭಿಪ್ರಾಯ ನೀಡಿರುತ್ತದೆ. ತತ್ಸಂಬಂಧವಾಗಿ ದಿನಾಂಕ 17.10.2015 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಇವರು ಅನುಸರಣಾ ಕ್ರಮದ ಬಗ್ಗೆ ಸಮಿತಿಗೆ ವರದಿಯನ್ನು ಸಲ್ಲಿಸಿರುತ್ತಾರೆ.

ಕೆ.ಐ.ಎ.ಡಿ.ಬಿ. ಒದಗಿಸಿದ ಸರ್ವೇಯರುಗಳ ಸಹಾಯದಿಂದ ದಿನಾಂಕ 13.08.2015 ರಿಂದ 21.08.2015ರ ವರೆಗೆ ಸರ್ವೇಕ್ಷಣಾ ಕಾರ್ಯವನ್ನು ಈ ಕೆಳಕಂಡ ಮಾಪನಗಳ ಮೇಲೆ ಜಾರಿಗೊಳಿಸಲಾಗಿದೆ:

1. ಕೆ.ಐ.ಎ.ಡಿ.ಬಿ. ಅಧಿಕಾರಿಗಳು ಹಾಗೂ ಭೂಮಾಪಕರು ಜಂಟಿಯಾಗಿ ಸರ್ವೆ ನಡೆಸಿರುತ್ತಾರೆ.
2. ಭೂಮಾಪಕರು ಸ್ಥಳದಲ್ಲಿ ತೋರಿಸಿರುವಂತೆ ರಸ್ತೆ ಭೂ ಗಡಿಯಿಂದ ದೂರವಿರುವ ಹಾಗೂ ರಸ್ತೆ ಭೂಗಡಿಯಿಂದ ಹೊರಭಾಗದಲ್ಲಿರುವ ಜಮೀನುಗಳ ಸರ್ವೆ ನಂಬರ್ ಪ್ರಕಾರ ಲಭ್ಯವಿರುವ ವಿಸ್ತೀರ್ಣವನ್ನು ಜೆ.ಎಂ.ಸಿ. ದಾಖಲೆಗಳ ಆಧಾರದ ಮೇಲೆ ಇತ್ಯರ್ಥಗೊಳಿಸಲಾಗಿದೆ.
3. ಪೆರಿಫೆರಲ್ ಮತ್ತು ಲಿಂಕ್ ರಸ್ತೆಗೆ ಸಂಬಂಧಿಸಿದಂತೆ ಗೂಗಲ್ ಮ್ಯಾಪ್ ಮೇಲೆ ಗ್ರಾಮಗಳ ಸರ್ವೆ ನಂಬರ್ ಹಾಗೂ ರಸ್ತೆಯ ಪಂಕ್ತೀಕರಣವನ್ನು ಸೂಪರ್ ಇಂಪೋಸ್ ಮಾಡಿ, ನಕ್ಷೆಗಳನ್ನು ತಾಳೆ ಮಾಡಿ ಭಾಗಶ: ಪೂರ್ಣಗೊಂಡಿರುವ ಲಿಂಕ್ ರಸ್ತೆ, ಪೆರಿಫೆರಲ್ ರಸ್ತೆ, ಇಂಟರ್ ಛೇಂಜ್‌ಗಳಿಗೆ ಅವಶ್ಯಕವಿರುವ ಜಮೀನನ್ನು ಗುರುತಿಸಲಾಗಿದೆ. ಇದಲ್ಲದೆ, ಭೂಗಡಿಯಿಂದ ದೂರದಲ್ಲಿರುವ

ಹಾಗೂ ಭೂಗತಯಿಂದ ಹೊರಭಾಗದಲ್ಲಿರುವ ಜಮೀನನ್ನು ಗುರುತಿಸಲಾಗಿದೆ. ಪ್ರಸಕ್ತವಾಗಿ ಯೋಜನಾ ಅನುಷ್ಠಾನವು ಸೆಕ್ಷನ್ 'ಎ' ಗೆ ಸೀಮಿತವಾಗಿರುವ ಹಿನ್ನೆಲೆಯಲ್ಲಿ ಸೂಚಿಸಿರುವ ಪ್ರಸ್ತಾವವು ಸೆಕ್ಷನ್ 'ಎ' ಗೆ ಸೀಮಿತವಾಗಿರುತ್ತದೆ. ಸೆಕ್ಷನ್ 'ಬಿ' ಮತ್ತು 'ಸಿ' ಗೆ ಸಂಬಂಧಿಸಿದಂತೆ ಸರ್ವೇಕ್ಷಣೆಯನ್ನು ಜಾರಿಗೊಳಿಸಿರುವುದಿಲ್ಲ.

ಕೆ.ಐ.ಎ.ಡಿ.ಬಿ ಸಂಸ್ಥೆಯು ನ್ಯಾಯಾಂಗ ನಿಂದನೆಯ ಅರ್ಜಿ ಸಂಖ್ಯೆ.144/2006, ಸಂಖ್ಯೆ.96/2007 ಹಾಗೂ ಸಿವಿಲ್ ಅಪೀಲ್ 3492-3494/2005 ಈ ಆಧಾರದ ಮೇಲೆ ಡಿ-ನೋಟಿಫಿಕೇಷನ್ ಜಾರಿಗೊಳಿಸುವ ಬಗ್ಗೆ ನ್ಯಾಯಾಂಗ ನಿರ್ಬಂಧನ ಇದೆ ಎಂದು ಪ್ರತಿಪಾದಿಸಿದೆ.

ಪ್ರಕರಣ ಸಂಖ್ಯೆ.144/2006-07 ನ್ನು ಗಮನಿಸಿದಾಗ ಶ್ರೀ ಅಶೋಕ ಹಾರ್ನಹಳ್ಳಿ, ಅಡ್ವೊಕೇಟ್ ಜನರಲ್ ಇವರು ರಾಜ್ಯ ಸರ್ಕಾರವು ಮುಂದಿನ ವಿಚಾರಣಾ ದಿನಾಂಕದವರೆಗೂ ಯಾವುದೇ ಜಮೀನನ್ನು ಡಿ-ನೋಟಿಫೈ ಮಾಡಲಾಗುವುದಿಲ್ಲ ಎಂಬ ಹೇಳಿಕೆ ನೀಡಿರುತ್ತಾರೆ. ಈ ಪ್ರಕರಣವನ್ನು ಪ್ರಕರಣ ಸಂಖ್ಯೆ.3492 ಹಾಗೂ 3494 ಈ ಪ್ರಕರಣಗಳ ಆಧಾರದ ಮೇಲೆ ಇತ್ಯರ್ಥ ಮಾಡಲಾಗಿದೆ. ಅಂತಿಮವಾಗಿ ನ್ಯಾಯಾಲಯವು ಮುಂಬರುವ ತೀರ್ಪಿನ ಅಥವಾ ಆದೇಶದ ಅವಧಿಯವರೆಗೂ ಯಾವುದೇ ಜಮೀನನ್ನು ಡಿ-ನೋಟಿಫೈ ಮಾಡಬಾರದು ಎಂಬ ಆಜ್ಞೆಯನ್ನು ಜಾರಿಗೊಳಿಸಿರುತ್ತದೆ. ಈ ಹಿನ್ನೆಲೆಯಲ್ಲಿ ನ್ಯಾಯಾಲಯದ ನಿರ್ದೇಶನ ಸಾಂದರ್ಭಿಕ ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. ಈ ಹಿನ್ನೆಲೆಯಲ್ಲಿ ಸಮಿತಿಯು ಈ ಕೆಳಕಂಡಂತೆ ಶಿಫಾರಸ್ಸು ಮಾಡುತ್ತದೆ:

1. ವಾಸ್ತವಿಕವಾಗಿ ಕೆ.ಐ.ಎ.ಡಿ.ಬಿ. ಅಧಿನಿಯಮದಡಿ ಡಿ-ನೋಟಿಫಿಕೇಷನ್ ಪ್ರಕ್ರಿಯೆಯ ಬಗ್ಗೆ ಪ್ರಸ್ತಾವನೆ ಇರುವುದಿಲ್ಲ. ಆದರೆ ಕೆ.ಐ.ಎ.ಡಿ.ಬಿ. ಅಧಿನಿಯಮದ ನಿಯಮ 4 ರ ಅಡಿಯಲ್ಲಿ ರಾಜ್ಯ ಸರ್ಕಾರವು ಯಾವುದೇ ಸಮಯದಲ್ಲಿ ಒಂದು ಅಧಿಸೂಚನೆಯ ಮುಖಾಂತರ ಯಾವುದೇ ಕೈಗಾರಿಕಾ ಪ್ರದೇಶಕ್ಕೆ ಹೆಚ್ಚುವರಿ ಪ್ರದೇಶವನ್ನು ಸೇರ್ಪಡೆ ಮಾಡುವ ಅಥವಾ ಹೊರತುಪಡಿಸುವ ಅಧಿಕಾರವನ್ನು ನೀಡಲಾಗಿದೆ. ಅಪರ ಮುಖ್ಯ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಇವರ ಟಿಪ್ಪಣಿ ಅನುಸಾರವಾಗಿ ಗುರುತಿಸಲಾದ ಹೆಚ್ಚುವರಿ ಜಮೀನು ಯೋಜನಾ ಅನುಷ್ಠಾನಕ್ಕೆ ಅವಶ್ಯಕ ಇರದೇ ಇರುವ ಹಿನ್ನೆಲೆಯಲ್ಲಿ ಅಧಿನಿಯಮದ ನಿಯಮ 4 ರ ಅಡಿಯಲ್ಲಿ ಕೈಗಾರಿಕಾ ಪ್ರದೇಶದಿಂದ ಹೊರತುಪಡಿಸುವುದನ್ನು ಪರಿಗಣಿಸಬಹುದಾಗಿದೆ.

2. ಪ್ರಸಕ್ತ ಪ್ರಕರಣದಲ್ಲಿ 28(1) ವ್ಯಾಪ್ತಿಯಲ್ಲಿ ಅಧಿಸೂಚಿಸಿರುವ ಜಮೀನನ್ನು ಅಧಿಸೂಚನೆಯಿಂದ ಕೈಬಿಡುವ ಬಗ್ಗೆ ಪ್ರಸ್ತಾಪಿಸಲಾಗಿದೆ. ತಾತ್ವಿಕವಾಗಿ ಅಥವಾ ತಾಂತ್ರಿಕವಾಗಿ 28(1) ವ್ಯಾಪ್ತಿಯ ಜಮೀನನ್ನು ಅಧಿಸೂಚನೆಯಿಂದ ರದ್ದತಿಗೊಳಿಸುವ ಪ್ರಕ್ರಿಯೆಯನ್ನು "ಡಿ-ನೋಟಿಫಿಕೇಷನ್" ಎಂದು ವ್ಯಾಖ್ಯಾನಿಸಲಾಗುವುದಿಲ್ಲ.ಏಕೆಂದರೆ, ಕಲಂ 28(4) ರ ಅಂತಿಮ ಅಧಿಸೂಚನೆಯ ನಂತರ ಭೂಮಿಯನ್ನು "NOTIFY" ಎಂದು ವರ್ಗೀಕರಿಸಲಾಗುವುದು ಈ ಹಿನ್ನೆಲೆಯಲ್ಲಿ 28(1) ಅಧಿಸೂಚನೆಯಲ್ಲಿರುವ ಹೆಚ್ಚುವರಿ ಜಮೀನನ್ನು ಸ್ವಾಧೀನ ಪ್ರಕ್ರಿಯೆಯಿಂದ ಹೊರತುಪಡಿಸುವುದನ್ನು ಮಂಡಳಿ ಪರಿಗಣಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

3. 2ನೇ ಪ್ರವರ್ಗದಲ್ಲಿ ಕ್ರಿಯಾ ಒಪ್ಪಂದಕ್ಕೆ ವ್ಯತಿರಿಕ್ತವಾಗಿ ಪೆರಿಫೆರಲ್ ರಸ್ತೆ ಮತ್ತು ಲಿಂಕ್ ರಸ್ತೆ ಭಾಗದಲ್ಲಿ ೬೬೪ ಎಕರೆ ಜಮೀನನ್ನು ಹೆಚ್ಚುವರಿಯಾಗಿ ನೀಡಲಾಗಿದೆ. ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನ ಅನುಗುಣವಾಗಿ ಕ್ರಿಯಾ ಒಪ್ಪಂದದ ಉಲ್ಲೇಖಗಳನ್ನು ವಾಸ್ತವಿಕವಾಗಿ

ಹಾಗೂ ತಾತ್ವಿಕವಾಗಿ ಪಾಲಿಸಬೇಕಾಗುವುದು. ಇದಲ್ಲದೆ, ನೈಸೆಲ್ ಸಂಸ್ಥೆ ನ್ಯಾಯಾಲಯದಲ್ಲಿ ನೀಡಿರುವ "ಪ್ರಮಾಣ ಪತ್ರ" ದಲ್ಲಿ ಹೆಚ್ಚುವರಿ ಜಮೀನನ್ನು ಸರ್ಕಾರ ಹಿಂಪಡೆಯಲು ಯಾವುದೇ ಆಕ್ಷೇಪಣೆ ಇರುವುದಿಲ್ಲವೆಂದು ಉಲ್ಲೇಖಿಸಿರುತ್ತಾರೆ. ಈ ಹಿನ್ನಲೆಯಲ್ಲಿ ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನ ಅನುಗುಣವಾಗಿ ಕ್ರಿಯಾ ಒಪ್ಪಂದದ ಶೆಡ್ಯೂಲ್ I ರಲ್ಲಿ ನಮೂದಿಸಲಾದ ಘಟಕವಾರು ಜಮೀನಿನ ಅವಶ್ಯಕತೆಯ ವಿರುದ್ಧವಾಗಿ ವಾಸ್ತವಿಕವಾಗಿ ನೀಡಿರುವ 554 ಎಕರೆ ಜಮೀನಿನ ವಿಸ್ತೀರ್ಣವನ್ನು ಕೆ.ಐ.ಎ.ಡಿ.ಬಿ. ಅಧಿನಿಯಮ 4 ರಡಿಯಲ್ಲಿ ಹಿಂಪಡೆಯಲು ಪ್ರಕರಣದ ತೀರ್ಪಿನ ಕಂಡಿಕೆ 51 ರ ಹಿನ್ನೆಲೆಯಲ್ಲಿ ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ವಾಸ್ತವಿಕವಾಗಿ ಅನುಷ್ಠಾನಗೊಳಿಸಿರುವ ಪಂಕ್ತೀಕರಣವನ್ನು ಕಂದಾಯ ನಕ್ಷೆಗಳ ಮೇಲೆ ಅಳವಡಿಸಿರುವ ವಿವರಗಳಿರುವ ವಿನ್ಯಾಸವನ್ನು ನೈಸೆಲ್/ನೀಸೆಲ್ ಸಂಸ್ಥೆ ಈವರೆವಿಗೂ ಸಲ್ಲಿಸಿರುವುದಿಲ್ಲ. ಆದುದರಿಂದ ಲೋಕೋಪಯೋಗಿ ಇಲಾಖೆಯು ಕೆ.ಐ.ಎ.ಡಿ.ಬಿ. ಸಹಯೋಗದೊಂದಿಗೆ ಈ ಸಮಗ್ರ ಸರ್ವೇಕ್ಷಣೆಯನ್ನು ಜಾರಿಗೊಳಿಸಿ ವರದಿ ಸಲ್ಲಿಸಿದ ಮೂರು ತಿಂಗಳೊಳಗಾಗಿ ಅನುಷ್ಠಾನಗೊಳಿಸಿದ ಪಂಕ್ತೀಕರಣದ ಹಿನ್ನೆಲೆಯಲ್ಲಿ ಗುರುತಿಸಲಾದ ಹೆಚ್ಚುವರಿ ಜಮೀನನ್ನು (554 ಎಕರೆಗಳು) ಹಿಂಪಡೆಯಲು ಕ್ರಮ ಜರುಗಿಸಬೇಕೆಂದು ಸ ಮಿತಿಯು ಶಿಫಾರಸ್ಸು ಮಾಡುತ್ತದೆ.

4. ಈ ಎಲ್ಲಾ ಪ್ರವರ್ಗದ ಜಮೀನುಗಳನ್ನು ನೋಟಿಫಿಕೇಷನ್ ವ್ಯಾಪ್ತಿಯಿಂದ ಹೊರತುಪಡಿಸುವ ಪೂರ್ವದಲ್ಲಿ ವಾಸ್ತವಿಕ ಬಳಕೆಯಾದ ಜಮೀನು ಹಾಗೂ ಹೆಚ್ಚುವರಿಯಾಗಿರುವ ಜಮೀನನ್ನು ಜಂಟಿ ಮೋಜಣಿ ಮುಖಾಂತರ ಗುರುತಿಸಿ ನಿರ್ದಿಷ್ಟ ವಿವರಗಳನ್ನು ಸಲ್ಲಿಸುವಂತೆ ಸಮಿತಿ ಸೂಚಿಸಿತು. ಈ ಹಿನ್ನೆಲೆಯಲ್ಲಿ ದಿನಾಂಕ 03.04.2015 ಹಾಗೂ 05.06.2015 ರಂದು ಅಪರ ಮುಖ್ಯ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಇವರು ಲೋಕೋಪಯೋಗಿ ಇಲಾಖೆಯೊಡನೆ ಸಭೆಗಳನ್ನು ನಡೆಸಿದ್ದು, ಪ್ರಸ್ತಾವಿತ ಸಭೆಯಲ್ಲಿ ಈ ಕೆಳಕಂಡ ಅಂಶಗಳಿಗೆ ಸಂಬಂಧಿಸಿದಂತೆ ಲೋಕೋಪಯೋಗಿ ಇಲಾಖೆಯ ಅಭಿಪ್ರಾಯವನ್ನು ಕೋರಲಾಗಿತ್ತು:

a. 3(1) ಅಡಿಯಲ್ಲಿ ಅಧಿಸೂಚನೆಯಾಗಿದ್ದು, 1(3) ರ ಅಡಿಯಲ್ಲಿ ಮುಂದುವರಿಯದೇ ಉಳಿದುಕೊಂಡಿರುವ 2097 ಎಕರೆ ಖಾಸಗಿ ಜಮೀನಿನ ಸ್ಥಿತಿಗತಿಗಳ ಬಗ್ಗೆ.

b. 1(3) ರ ಅಡಿಯಲ್ಲಿ ಅಧಿಸೂಚನೆಯಾಗಿದ್ದು, 28(1)ರ ಅಡಿಯಲ್ಲಿ ಮುಂದುವರಿಯದೇ ಉಳಿದುಕೊಂಡಿರುವ 1190 ಎಕರೆ ಜಮೀನಿನ ಬಗ್ಗೆ.

c. ಪೆರಿಫರೆಲ್ ಮತ್ತು ಲಿಂಕ್ ರಸ್ತೆ ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ 28(1) ರ ಅಡಿಯಲ್ಲಿ ಅಧಿಸೂಚನೆಯಾಗಿದ್ದು, 28(4)ರ ಅಡಿಯಲ್ಲಿ ಕ್ರಮ ಕೈಗೊಳ್ಳದೇ ಇರುವ 1484 ಎಕರೆ ಜಮೀನಿನ ಸ್ಥಿತಿಗತಿಗಳ ಬಗ್ಗೆ.

d. ನಗರ ಸಮುಚ್ಛಯಗಳಿಗಾಗಿ ಹೆಚ್ಚುವರಿ ಅಧಿಸೂಚನೆ ಹೊರಡಿಸಿರುವ 2320 ಎಕರೆ ಖಾಸಗಿ ಜಮೀನಿನ ಸ್ಥಿತಿಗತಿಗಳ ಬಗ್ಗೆ.

e. ನಗರ ಸಮುಚ್ಛಯಕ್ಕೆ ಅನ್ವಯಿಸುವಂತೆ ಬಳಕೆಯಾಗದೇ ಇರುವ 3458 ಎಕರೆ ಸರ್ಕಾರಿ ಜಮೀನಿನ ಸ್ಥಿತಿಗತಿಗಳ ಬಗ್ಗೆ.

*ಪ್ರಮುಖವಾಗಿ ಈ ವರದಿಯ ಸಮರ್ಪಕ ಭಾಗಗಳಲ್ಲಿ ಈಗಾಗಲೇ ಉಲ್ಲೇಖಿಸಿರುವಂತೆ ಪೆರಿಫರಲ್ ಲಿಂಕ್ ರಸ್ತೆಗೆ ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪು ಕ್ರಿಯಾ ಒಪ್ಪಂದಕ್ಕೆ ವ್ಯತಿರಿಕ್ತವಾಗಿ 2193 ಎಕರೆ ಜಮೀನಿಗೆ*

ಬದಲಾಗಿ 2747 ಎಕರೆ ವಿಸ್ತೀರ್ಣದ ಜಮೀನನ್ನು ಹಸ್ತಾಂತರಿಸಲಾಗಿದೆ. ಇದರಿಂದಾಗಿ 551 ಎಕರೆ ಹೆಚ್ಚುವರಿಯಾಗಿ ಹಸ್ತಾಂತರಿಸಿದಂತಾಗಿದೆ. ಈ ಬಗ್ಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೂ ತಿಳಿಸಲಾಗಿದೆ. ಹಾಗೂ ಉನ್ನತ ಮಟ್ಟದ ಸಮಿತಿಯೂ ಸಹ ಹೆಚ್ಚುವರಿಯನ್ನು ದೃಢೀಕರಿಸಿದೆ. ಪೆರಿಫರಲ್ ರಸ್ತೆ ಸಂಪೂರ್ಣವಾಗಿರುವ ಹಿನ್ನೆಲೆಯಲ್ಲಿ ಕೆ.ಐ.ಎ.ಡಿ.ಬಿ. ಸಂಸ್ಥೆಯು ಈ 554 ಎಕರೆ ಜಮೀನಿನ ವಿವರಗಳನ್ನು ಗುರುತಿಸಿದ್ದು, ಸರ್ವೆ ನಂಬರುವಾರು ವಿವರಗಳನ್ನು ನೀಡಿರುತ್ತದೆ. ಈ ಪೈಕಿ 404.75 ಎಕರೆ ಸರ್ಕಾರಿ ಜಮೀನಾಗಿರುತ್ತದೆ. ದಿನಾಂಕ 20.03.2012 ರಂದು ಸರ್ವೋಚ್ಚ ನ್ಯಾಯಾಲಯಕ್ಕೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಪಂಕ್ತೀಕರಣದ ಬದಲಾವಣೆಯ ಬಗ್ಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ಪ್ರತಿಪಾದಿಸಿರುತ್ತಾರೆ. ಇದೇ ಪ್ರಮಾಣ ಪತ್ರದಲ್ಲಿ ಲೋಕೋಪಯೋಗಿ ಇಲಾಖೆ ಕಾರ್ಯದರ್ಶಿಯವರು 554 ಎಕರೆ ಜಮೀನನ್ನು ಹೆಚ್ಚುವರಿಯಾಗಿ ನೀಡಲಾಗಿದೆ ಎಂದು ತಿಳಿಸಿರುತ್ತಾರೆ.

ವಾಸ್ತವಿಕವಾಗಿ ಪೆರಿಫರಲ್ ರಸ್ತೆಗೆ ಸಂಬಂಧಿಸಿದಂತೆ 554 ಎಕರೆ ಹೆಚ್ಚುವರಿ ಜಮೀನನ್ನು ಹೊರತುಪಡಿಸಿ 25.15 ಎಕರೆ ಅರಣ್ಯ ಜಮೀನನ್ನು ನೀಡಲಾಗಿದೆ. ಇದಲ್ಲದೆ, ನೀಸಲ್ ಸಂಸ್ಥೆ ಅನಧಿಕೃತವಾಗಿ 28(1)ರ ವ್ಯಾಪ್ತಿಯಲ್ಲಿರುವ 22.28 ಎಕರೆಗಳ ಜಮೀನನ್ನು ರಸ್ತೆ ನಿರ್ಮಾಣಕ್ಕೆ ಬಳಸಿದೆ. ಅಂದರೆ ಕ್ರೋಢೀಕೃತವಾಗಿ ನೀಡಿರುವ ಹೆಚ್ಚುವರಿ 602 ಎಕರೆಗಳಾಗಿರುತ್ತದೆ. ಈ 602 ಎಕರೆಗಳ ಪೈಕಿ 518 ಎಕರೆ ಜಮೀನು ಬಳಕೆಯಾಗದೇ ಇರುವುದು ಸ್ಪಷ್ಟವಾಗಿದೆ. ಉಳಿದ 84 ಎಕರೆ ಜಮೀನಿನ ಸ್ಥಿತಿಗತಿಗಳನ್ನು ಲೋಕೋಪಯೋಗಿ ಇಲಾಖೆ ಈವರೆವಿಗೂ ಇತ್ಯರ್ಥಗೊಳಿಸಿರುವುದಿಲ್ಲ. ಕೆ.ಐ.ಎ.ಡಿ.ಬಿ. ಸ್ಪಷ್ಟೀಕರಣದ ಅನುಗುಣವಾಗಿ ಈ ಪೈಕಿ 28(1) ವ್ಯಾಪ್ತಿಯ 22.28 ಎಕರೆ ಜಮೀನು ರಸ್ತೆಗೆ ಬಳಕೆಯಾಗಿದ್ದಾಗ್ಯೂ ಸಹ ಲೋಕೋಪಯೋಗಿ ಇಲಾಖೆ ಈ ಅಂಶವನ್ನು ದೃಢೀಕರಿಸಿರುವುದಿಲ್ಲ. ಮೋಜಣಿ ಕಾರ್ಯವನ್ನು ಜಂಟಿಯಾಗಿ ಲೋಕೋಪಯೋಗಿ ಇಲಾಖೆ ಹಾಗೂ ಕೆ.ಐ.ಎ.ಡಿ.ಬಿ. ನಡೆಸಿರುವ ಹಿನ್ನೆಲೆಯಲ್ಲಿ ಈ ವಿವಾದಾತ್ಮಕ ನಿಲುವು ಖಂಡನೀಯವಾಗಿರುತ್ತದೆ. ಪ್ರಾಥಮಿಕವಾಗಿ ಕಲಂ 28(1)ರ ಅಡಿಯಲ್ಲಿ ಘೋಷಿತವಾದ ಜಮೀನನ್ನು ಕೆ.ಐ.ಎ.ಡಿ.ಬಿ. ಅಧಿನಿಯಮದ 28(4)ರ ವಿಧಿವಿಧಾನ ಸಂಪೂರ್ಣವಾಗುವವರೆಗೂ ಹಸ್ತಾಂತರವಾಗಿದೆ ಎಂದು ಪರಗಣಿಸಲಾಗುವುದಿಲ್ಲ.28(4) ಘೋಷಣೆಯಾದ ನಂತರ ಜಮೀನನ್ನು ಸರ್ಕಾರದ ಸುಪರ್ದಿಯಲ್ಲಿದೆ ಎಂದು ಪರಿಗಣಿಸಬಹುದಾಗಿದೆ. 2ನೇ ಸ್ತರದಲ್ಲಿ ಪ್ರಸ್ತಾವಿತ ಜಮೀನು ನೈಸೆಲ್ ಸಂಸ್ಥೆಗೆ ಹಸ್ತಾಂತರವಾಗಬೇಕಾಗುವುದು. ಈ ವಿಧಿವಿಧಾನಗಳನ್ನು ಪಾಲಿಸದೇ 28(1)ರ ವ್ಯಾಪ್ತಿಯ 22.28 ಎಕರೆ ಜಮೀನನ್ನು ನೈಸೆಲ್/ನೀಸಲ್ ಸಂಸ್ಥೆ ಪೆರಿಫರಲ್ ರಸ್ತೆಗೆ ಬಳಸಿರುವುದು ಕಾನೂನು ಬಾಹಿರ ಹಾಗೂ ಅನಧಿಕೃತವಾಗಿರುತ್ತದೆ. ಈ ಜಮೀನಿಗೆ ಅನ್ವಯಿಸುವಂತೆ ಪರಿಹಾರವನ್ನೂ ಸಹ ಪಾವತಿಸಿರುವುದಿಲ್ಲ. ಈ ಎಲ್ಲಾ ಅಂಶಗಳನ್ನು ಪರಿಗಣಿಸಿದಾಗ ನೀಸಲ್ ಸಂಸ್ಥೆ ಕೆ.ಐ.ಎ.ಡಿ.ಬಿ. ಅಧಿನಿಯಮದಲ್ಲಿ ನಿರೂಪಿಸಲಾಗಿರುವ ವಿಧಿವಿಧಾನಗಳನ್ನು ಉಪೇಕ್ಷಿಸಿ ರಸ್ತೆ ನಿರ್ಮಾಣಕ್ಕೆ ಅವಶ್ಯವಿರುವ ಜಮೀನನ್ನು ಸ್ವಯಂ ಪ್ರೇರಿತವಾಗಿ ಬಳಸಿರುವುದು ಸ್ಪಷ್ಟವಾಗಿರುತ್ತದೆ. ಕೆ.ಐ.ಎ.ಡಿ.ಬಿ. ಹಾಗೂ ಲೋಕೋಪಯೋಗಿ ಇಲಾಖೆ ಈ ಉಲ್ಲಂಘನೆಯ ಬಗ್ಗೆ ಪ್ರತಿಕ್ರಿಯಿಸಿರುವುದಿಲ್ಲ. ಏಕೆಂದರೆ, ಯೋಜನಾ ಅನುಷ್ಠಾನ ಜಾರಿಗೊಂಡ 19 ವರ್ಷಗಳ ನಂತರ ಸದನ ಸಮಿತಿಯ ಒತ್ತಾಯದ ಮೇರೆಗೆ ಜಂಟಿ ಮೋಜಣಿಯನ್ನು ಅನುಷ್ಠಾನಗೊಳಿಸಿ ವಾಸ್ತವಿಕ ಬಳಕೆ ನಿರ್ಧರಿಸಲು ಕ್ರಮ ಕೈಗೊಳ್ಳಲಾಗಿದೆ. ಈ ಪ್ರವೃತ್ತಿಯನ್ನು ಗಮನಿಸಿದರೆ ಎಕ್ಸ್‌ಪ್ರೆಸ್ ವೇ, ಸೆಕ್ಷನ್ 'ಬಿ' ಮತ್ತು 'ಸಿ' ಘಟಕಗಳಲ್ಲೂ ನೈಸೆಲ್ ಸಂಸ್ಥೆ ಸ್ವೇಚ್ಛಾ ವಿಹಾರಿಯಾಗಿ ಜಮೀನನ್ನು ಬಳಸುವ ಸಾಧ್ಯತೆಗಳಿವೆ. ಆದುದರಿಂದ ಸೇವಾ ಒಪ್ಪಂದದ ಅನುಚ್ಛೇಧ 4 ರಡಿಯಲ್ಲಿ ನೀಡಿರುವ ಸ್ಥಳ ಪರಿವೀಕ್ಷಣೆಸೌಲಭ್ಯವನ್ನುಅಧಿಕಾರದತ್ತ ಸಮಿತಿಯ ಮುಖಾಂತರ ಸಕ್ರಿಯಗೊಳಿಸಲು ಸರ್ಕಾರವು ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಸಮಿತಿಯ ನಿರ್ದೇಶನಗಳ ಅನುಗುಣವಾಗಿ ರೆವಿನ್ಯೂ ನಕ್ಷೆಗಳನ್ನು ಗೂಗಲ್ ನಕ್ಷೆಗಳ ಮೇಲೆ ಅಳವಡಿಸಿ ಜಮೀನಿನ ಬಳಕೆಯ ವಸ್ತು ಸ್ಥಿತಿಯ ಬಗ್ಗೆ ಮಾಹಿತಿಯನ್ನು ವಿಶ್ಲೇಷಿಸಲಾಗಿದೆ. ಇದೇ ರೀತಿ ಯೋಜನಾ ಅನುಷ್ಠಾನದ ವೇಗದ ಹೆದ್ದಾರಿ ಹಾಗೂ ಸೆಕ್ಷನ್ 'ಬಿ' ಮತ್ತು 'ಸಿ' ಗೆ ಚಾಲ್ತಿಯಲ್ಲಿರುವ ಪಂಕ್ತೀಕರಣ ಹಾಗೂ ವಿನ್ಯಾಸದ ಅನುಗುಣವಾಗಿ ಸರ್ಕಾರಿ/ಖಾಸಗಿ

ಜಮೀನಿನ ಬಳಕೆಯ ಪ್ರವೃತ್ತಿಗಳನ್ನು ಇತ್ಯರ್ಥಗೊಳಿಸಲು ಲೋಕೋಪಯೋಗಿ ಇಲಾಖೆ [illegible] ಮತ್ತು ಕೈಗಾರಿಕಾ ಇಲಾಖೆ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು [illegible] ಇದಲ್ಲದೆ, ಹೆಚ್ಚುವರಿಯಾಗಿ ನೀಡಿರುವ 602 ಎಕರೆ ಜಮೀನಿನ ಪೈಕಿ 84 ಎಕರೆ [illegible] ಅನ್ವಯಿಸುವಂತೆ ಜಂಟಿ ಮೋಜಣಿಯ ವರದಿ ಇತ್ಯರ್ಥವಾಗಿರುವುದಿಲ್ಲ. ಈ [illegible] ಅಪರಾಧವೆಂದು ಸಮಿತಿ ತೀರ್ಮಾನಿಸುತ್ತದೆ. ಸಮಿತಿಯ ವಿಶ್ಲೇಷಣೆ ಅನಿವಾರ್ಯವಾಗಿ [illegible] ಸೀಮಿತವಾಗಿದೆ. ಪ್ರಸಕ್ತ ವಿದ್ಯಾಮಾನಗಳ ಅನುಗುಣವಾಗಿ 518 ಎಕರೆಗಳು ಪೆರಿಫರಲ್ ರಸ್ತೆ [illegible] ಬಳಕೆಯಾಗದೇ ಇರುವುದು ಸ್ಪಷ್ಟವಾಗಿದೆ. ಇದಲ್ಲದೆ, ಈ ಹೆಚ್ಚುವರಿಯು ಕ್ರಿಯಾ [illegible] ಸೋಮಶೇಖರ ರೆಡ್ಡಿ ತೀರ್ಪಿನ ಸ್ಪಷ್ಟ ಹಾಗೂ ನೇರ ಉಲ್ಲಂಘನೆಯಾಗಿರುತ್ತದೆ. [illegible] ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನ ಕಂಡಿಕೆ 51 ರ ಪ್ರತಿಪಾದನೆಗಳ ಉಲ್ಲಂಘನೆ [illegible] ಪ್ರಸ್ತಾವಿತ ಜಮೀನನ್ನು ಕೆ.ಐ.ಎ.ಡಿ.ಬಿ. ಅಧಿನಿಯಮದ ನಿಯಮ 4 ರಡಿಯಲ್ಲಿ ಸ್ವಾಧೀನ ಪ್ರಕ್ರಿಯೆಯಿಂದ ಸಂಪೂರ್ಣವಾಗಿ ಹೊರತುಪಡಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಈ ಕ್ರಮವನ್ನು ಜಾರಿಗೊಳಿಸುವ ಪೂರ್ವದಲ್ಲಿ ಸರ್ವೋಚ್ಛ ನ್ಯಾಯಾಲಯದಲ್ಲಿ ಬಾಕಿ ಇರುವ ಸಿಸಿ-[illegible]/2007 ಮತ್ತು ಸಿಸಿ-144/2006 ಪ್ರಕರಣಗಳಲ್ಲಿ ಸರ್ವೇಕ್ಷಣಾ ವರದಿಯ ಪ್ರತಿಗಳನ್ನು ಸಲ್ಲಿಸಿ ಕ್ರಿಯಾ [illegible] ಸ್ಪಷ್ಟ ಹಾಗೂ ನೇರ ಉಲ್ಲಂಘನೆಯ ಆಧಾರದ ಮೇಲೆ ಪರಿಹಾರವನ್ನು ಕೋರಬೇಕೆಂದು ಸಮಿತಿ ಶಿಫಾರಸ್ಸು ಮಾಡುತ್ತದೆ.

ಉಚ್ಛ ಹಾಗೂ ಸರ್ವೋಚ್ಛ ನ್ಯಾಯಾಲಯಗಳ ತೀರ್ಪಿನ ಅನುಗುಣವಾಗಿ ಲಿಂಕ್ ರಸ್ತೆಗೆ 278 ಎಕರೆ ಖಾಸಗಿ ಜಮೀನನ್ನು ನೀಡಬೇಕಾಗುವುದು. ಆದರೆ ಇದರ ಬದಲು 329 ಎಕರೆ ಜಮೀನನ್ನು ಹಸ್ತಾಂತರಿಸಲಾಗಿದೆ. ಅಂದರೆ 51 ಎಕರೆ ಜಮೀನನ್ನು ಹೆಚ್ಚುವರಿಯಾಗಿ ಹಸ್ತಾಂತರಿಸಲಾಗಿದೆ. ಸಮಿತಿಯ ನಿರ್ದೇಶನದ ಅನುಗುಣವಾಗಿ ಕೈಗೊಂಡ ಜಂಟಿ ಪರಿವೀಕ್ಷಣೆಯ ವರದಿಯ ಪ್ರಕಾರ ಅರಣ್ಯ ಇಲಾಖೆಯೂ ಸಹ ಈ ಘಟಕದಲ್ಲಿ 7.1 ಎಕರೆ ಜಮೀನು ನೀಡಿದ್ದು, ನಿಯಮ 28(1) ರ ವ್ಯಾಪ್ತಿಯಲ್ಲಿರುವ [illegible] ಎಕರೆ ಜಮೀನನ್ನು ಲಿಂಕ್ ರಸ್ತೆಗೆ ಅನಧಿಕೃತವಾಗಿ ಬಳಸಿಕೊಳ್ಳಲಾಗಿದೆ. ಈ ಹಿನ್ನಲೆಯಲ್ಲಿ [illegible] ಹೆಚ್ಚುವರಿ 84 ಎಕರೆಗಳಾಗುತ್ತದೆ. ಲೋಕೋಪಯೋಗಿ ಇಲಾಖೆಯ ಸಹಯೋಗದೊಂದಿಗೆ [illegible] ಜಂಟಿ ಸರ್ವೆ ಅನುಗುಣವಾಗಿ ಪ್ರಥಮ ಸ್ತರದಲ್ಲಿ ಗುರುತಿಸಿದ 51 ಎಕರೆ ಹೆಚ್ಚುವರಿ ಜಮೀನಿನ ಪೈಕಿ [illegible] ಎಕರೆ ವಾಸ್ತವಿಕವಾಗಿ ರಸ್ತೆಗೆ ಬಳಕೆಯಾಗಿರುವುದಿಲ್ಲ. ಇಂಜಿನೀಯರಿಂಗ್ ಇಲಾಖೆ [illegible] ಅನುಗುಣವಾಗಿ ಬಳಕೆಯಾಗದೇ ಇರುವ 50.3 ಎಕರೆ ಜಮೀನನ್ನು ಕೆ.ಐ.ಎ.ಡಿ.ಬಿ. ಕಲಂ 4 ರ ಅಡಿಯಲ್ಲಿ ಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡಲು ಕಾನೂನು ಪ್ರಕಾರ ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

## XXXVII. ಕೆ.ಐ.ಎ.ಡಿ.ಬಿ. ಅಧಿನಿಯಮಗಳ ಅನುಗುಣವಾಗಿ ಭೂಸ್ವಾಧೀನ [illegible] ವಿವಿಧ ಸ್ತರಗಳಲ್ಲಿ ಅಂತಿಮ ತೀರ್ಪಿಗೆ ಬಾಕಿ ಇರುವ ಖಾಸಗಿ ಜಮೀನಿನ [illegible] ಸಮಿತಿಯ ವಿಶ್ಲೇಷಣೆ ಹಾಗೂ ಶಿಫಾರಸ್ಸುಗಳು:

ಸಮಿತಿಯು ಕೆ.ಐ.ಎ.ಡಿ.ಬಿ. ಅಧಿನಿಯಮದ ಕಲಂ 1(3), 3(1), 28(1) ಹಾಗೂ 28(4) [illegible] ಸ್ವಾಧೀನ ಪ್ರಕ್ರಿಯೆ ಜಾರಿಗೊಳಿಸಿರುವ ಖಾಸಗಿ ಜಮೀನಿನ ಸಮಗ್ರ ವಿವರಗಳನ್ನು [illegible] ಪ್ರಾರಂಭಿಕ ಅಧಿಸೂಚನೆಯನ್ನು ಕಲಂ 28(1) ರಡಿಯಲ್ಲಿ 1998-2004 ಮತ್ತು 2006-[illegible] ಸ್ತರಗಳಲ್ಲಿ ಜಾರಿಗೊಳಿಸಲಾಗಿದೆ. ಇದರ ಪೂರ್ವದಲ್ಲಿ ಕಲಂ 1(3) ಮತ್ತು 3(1)ರ [illegible] ಅಧಿಸೂಚನೆಯನ್ನು ಜಾರಿಗೊಳಿಸಲಾಗಿದೆ. ಪ್ರತಿ ಸ್ತರದಲ್ಲೂ ಜಮೀನಿನ [illegible]

ಖಚಿತಮುಖಗೊಳಿಸಲಾಗಿದೆ. ಆದಾಗ್ಯೂ, ಹೆಚ್ಚುವರಿಯಾಗಿ ಪ್ರಾಥಮಿಕ ಸ್ತರದಲ್ಲಿ ಗುರುತಿಸಲಾದ ಜಮೀನನ್ನು ರದ್ದುಪಡಿಸಲು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯಾಗಲೀ ಅಥವಾ ಲೋಕೋಪಯೋಗಿ ಇಲಾಖೆಯಾಗಲೀ ಈವರೆವಿಗೂ ಕ್ರಮ ಕೈಗೊಂಡಿರುವುದಿಲ್ಲ. ಈ ವರದಿಯ ವಿವಿಧ ಭಾಗಗಳಲ್ಲಿ ಈಗಾಗಲೇ ಪ್ರತಿಪಾದಿಸಿರುವಂತೆ ಜಮೀನಿನ ಅವಶ್ಯಕತೆಯನ್ನು ಕ್ರಿಯಾ ಒಪ್ಪಂದ ಹಾಗೂ ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನ ನಿರೂಪಣೆಗಳಿಗೆ ನಿರ್ಬಂಧಿಸುವುದು ಅವಶ್ಯಕವಾಗಿರುತ್ತದೆ. ಆದುದರಿಂದ ಕ್ರಿಯಾ ಒಪ್ಪಂದದ ಶೆಡ್ಯೂಲ್-1 ಹಾಗೂ ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನಲ್ಲಿ ಯೋಜನಾ ಅನುಷ್ಠಾನಕ್ಕೆ ಅವಶ್ಯಕ ಎಂದು ನಿರ್ಧರಿಸಲಾದ ಜಮೀನಿನ ವಿಸ್ತೀರ್ಣಕ್ಕಿಂತ ಹೆಚ್ಚುವರಿ ಜಮೀನನ್ನು ಸ್ವಾಧೀನ ಪ್ರಕ್ರಿಯೆಯ ಯಾವುದೇ ಹಂತದಲ್ಲಿ ಅನಿಯತವಾಗಿ ಮುಂದುವರಿಸುವುದು ನ್ಯಾಯ ಸಮ್ಮತವಾಗಿರುವುದಿಲ್ಲ. ಇದರಿಂದಾಗಿ ಸ್ವಾಧೀನ ಪ್ರಕ್ರಿಯೆಯ ಪ್ರಾಥಮಿಕ ಹಂತದ ವ್ಯಾಪ್ತಿಗೆ ಒಳಪಡುವ ಜಮೀನನ್ನು ಪರಿಣಾಮಕಾರಿಯಾಗಿ ಬಳಸುವಲ್ಲಿ ಭೂಮಾಲೀಕರು ನಿಸ್ಸಹಾಯಕರಾಗಿರುವುದನ್ನು ಸಮಿತಿಯು ಖೇದದಿಂದ ಗಮನಿಸಿದೆ. ಈ ಅತಂತ್ರ ಸ್ಥಿತಿಯಿಂದಾಗಿ ಯೋಜನಾ ಅನುಷ್ಠಾನದ ವ್ಯಾಪ್ತಿಯ ರೈತರು ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಸಂಕಷ್ಟದಲ್ಲಿರುವುದು ಸ್ವೀಕೃತಿಯಾದ ಹಲವಾರು ಮನವಿಯಿಂದಾಗಿ ಸಮಿತಿಗೆ ಮನದಟ್ಟಾಗಿದೆ. ಈ ಹಿನ್ನೆಲೆಯಲ್ಲಿ ಸಮಿತಿಯು ಕೆ.ಐ.ಎ.ಡಿ.ಬಿ. ಮತ್ತು ಲೋಕೋಪಯೋಗಿ ಇಲಾಖೆ ಜಂಟಿಯಾಗಿ ಸರ್ವೇಕ್ಷಣೆಯನ್ನು ಕೈಗೊಂಡು ಭೂಸ್ವಾಧೀನ ಪ್ರಕ್ರಿಯೆಯ ವಿವಿಧ ಸ್ತರಗಳಲ್ಲಿ ಮುಂದುವರೆಸಲಾದ ಜಮೀನಿನ ವಿಸ್ತೀರ್ಣದ ಉಪಯುಕ್ತತೆ ಹಾಗೂ ಬಳಕೆಯ ಬಗ್ಗೆ ವರದಿಯನ್ನು ನೀಡಲು ಸೂಚಿಸಿತು. ಈ ವರದಿಯನ್ನಾಧರಿಸಿ ಸಮಿತಿಯು ಈ ಕೆಳಕಂಡಂತೆ ವಿಶ್ಲೇಷಣೆ ಹಾಗೂ ಶಿಫಾರಸ್ಸುಗಳನ್ನು ಮಾಡುತ್ತದೆ:

ಕೆ.ಐ.ಎ.ಡಿ.ಬಿ. ಕಲಂ 3(1) ರ ಅಡಿಯಲ್ಲಿ 1(3) ರ ಅಧಿಸೂಚನೆಗೆ ಮುಂದುವರಿಯದೇ ಉಳಿದುಕೊಂಡಿರುವ 2097 ಎಕರೆ ಖಾಸಗಿ ಜಮೀನುಗಳ ಪಟ್ಟಿಯನ್ನು ಲೋಕೋಪಯೋಗಿ ಇಲಾಖೆಗೆ ಪರಿಶೀಲನೆ ಹಾಗೂ ಅಭಿಪ್ರಾಯಕ್ಕಾಗಿ ಕಳುಹಿಸಲಾಗಿದೆ. ವಾಸ್ತವಿಕವಾಗಿ ಈ 2097 ಎಕರೆಗಳ ಪೈಕಿ 810 ಎಕರೆ ಸೆಕ್ಷನ್ 'ಎ' ಭಾಗಕ್ಕೆ ಅನ್ವಯಿಸುತ್ತದೆ. ಸೆಕ್ಷನ್ 'ಬಿ' ಮತ್ತು 'ಸಿ' ಭಾಗಕ್ಕೆ ಅನ್ವಯಿಸುವಂತೆ 1287 ಎಕರೆ ವ್ಯಾಪ್ತಿ ವಿಸ್ತೀರ್ಣದಲ್ಲಿ ಲೋಕೋಪಯೋಗಿ ಇಲಾಖೆ ಜಂಟಿ ಸರ್ವೇಕ್ಷಣೆಯನ್ನು ಕೈಗೊಂಡಿರುವುದಿಲ್ಲ. ಇದೊಂದು ಗುರುತರ ವೈಫಲ್ಯತೆಯಾಗಿರುತ್ತದೆ. ಈ ವೈಫಲ್ಯತೆಯಿಂದಾಗಿ ಅನಾವಶ್ಯಕವಾಗಿ ಭೂ ಮಾಲೀಕರು ಅತಂತ್ರ ಸ್ಥಿತಿಯಲ್ಲಿರುವುದು ಮುಂದುವರೆದಿದೆ. ಯೋಜನಾ ಅನುಷ್ಠಾನ ಪ್ರಾರಂಭವಾದ 18 ವರ್ಷಗಳ ನಂತರ ಸಮಿತಿಯ ನಿರ್ದೇಶನಗಳ ಅನುಸಾರವಾಗಿ ಪ್ರಥಮ ಬಾರಿಗೆ ಜಂಟಿ ಸರ್ವೇಕ್ಷಣೆಯನ್ನು ಜಾರಿಗೊಳಿಸಿದೆ. ಇಷ್ಟು ವಿಳಂಬದ ನಂತರವೂ ಲೋಕೋಪಯೋಗಿ ಇಲಾಖೆ ಸರ್ವೇಕ್ಷಣೆಯನ್ನು ಉಪೇಕ್ಷಿಸಿರುವುದು ಖಂಡನೀಯವಾಗಿರುತ್ತದೆ. ಈ ವರದಿ ಸಲ್ಲಿಸಿದ ಮೂರು ತಿಂಗಳೊಳಗಾಗಿ ಸೆಕ್ಷನ್ 'ಬಿ' ಮತ್ತು 'ಸಿ' ಭಾಗಗಳಿಗೆ ಅನ್ವಯಿಸುವಂತೆ ಜಂಟಿ ಸರ್ವೇಕ್ಷಣೆಯನ್ನು ಜಾರಿಗೊಳಿಸಿ ಸರ್ಕಾರಕ್ಕೆ ಅನುಸರಣಾ ಕ್ರಮದ ಬಗ್ಗೆ ವರದಿಯನ್ನು ತಪ್ಪದೇ ನೀಡಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

ಲೋಕೋಪಯೋಗಿ ಇಲಾಖೆ ಸೆಕ್ಷನ್ 'ಬಿ' ಮತ್ತು 'ಸಿ' ಅಡಿಯಲ್ಲಿ ಸರ್ವೇಕ್ಷಣೆಯನ್ನು ಕೈಗೊಂಡಿರುವುದಿಲ್ಲ. ಸೆಕ್ಷನ್ 'ಎ' ಗೆ ಅನ್ವಯಿಸುವಂತೆ ಕಲಂ 3(1) ರ ಅಡಿಯಲ್ಲಿ ಬೆಂಗಳೂರು ಉತ್ತರ ಮತ್ತು ದಕ್ಷಿಣ ತಾಲ್ಲೂಕಿನಲ್ಲಿ 749.27 ಎಕರೆ ವಿಸ್ತೀರ್ಣದ ಜಮೀನುಗಳು ರಸ್ತೆ ನಿರ್ಮಾಣದಲ್ಲಿ ಸೇರಿರುವುದಿಲ್ಲ ಎಂಬ ಅರ್ಥ ಮೂಡಿಬರುವ ಟಿಪ್ಪಣಿಯನ್ನು ನೀಡಿರುತ್ತಾರೆ. ಈ ಹಿನ್ನೆಲೆಯಲ್ಲಿ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಯವರು 749.27 ಎಕರೆ ವಿಸ್ತೀರ್ಣದ ಜಮೀನನ್ನು ಕಲಂ 4 ರ ಅಡಿಯಲ್ಲಿ ಸ್ವಾಧೀನ ಪ್ರಕ್ರಿಯೆಯಿಂದ ಹೊರತುಪಡಿಸಬಹುದು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಈ ವಿಸ್ತೀರ್ಣದ ಜಮೀನನ್ನು ಕೆ.ಐ.ಎ.ಡಿ.ಬಿ. ಕಲಂ 4 ಅಡಿಯಲ್ಲಿ ಸ್ವಾಧೀನ ಪ್ರಕ್ರಿಯೆಯಿಂದ ಹೊರತುಪಡಿಸಲು ಸರ್ಕಾರವು ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

ಎರಡನೇ ಸ್ತರದಲ್ಲಿ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯು ಅಧಿಸೂಚನೆ 1(3) ರ ಅಡಿಯಲ್ಲಿ ಒಳಗೊಂಡು 28(1) ರ ಅಧಿಸೂಚನೆಗೆ ಮುಂದುವರಿಯದೇ ಉಳಿದಿರುವ 1190 ಎಕರೆ ಖಾಸಗಿ ಜಮೀನಿನ ಪಟ್ಟಿಗಳನ್ನು ಲೋಕೋಪಯೋಗಿ ಇಲಾಖೆಗೆ ಸಲ್ಲಿಸಿದೆ. ಈ ಪೈಕಿ 260 ಎಕರೆ ಸೆಕ್ಷನ್'ಎ' ಹಾಗೂ 930 ಎಕರೆ ಸೆಕ್ಷನ್ 'ಬಿ' ಮತ್ತು 'ಸಿ' ಭಾಗದಲ್ಲಿ ಬರುತ್ತದೆ. ಲೋಕೋಪಯೋಗಿ ಇಲಾಖೆಯ ವರದಿಯ ಅನುಗುಣವಾಗಿ ಸೆಕ್ಷನ್ 'ಎ' ಗೆ ಅನ್ವಯಿಸುವಂತೆ 260 ಎಕರೆಗಳ ಪೈಕಿ 145.16 ಎಕರೆ ರಸ್ತೆ ನಿರ್ಮಾಣದ ವಿಸ್ತೀರ್ಣದಲ್ಲಿ ಸೇರಿರುವುದಿಲ್ಲ. ಆದುದರಿಂದ ಈ 145.16 ಎಕರೆಗಳ ವಿಸ್ತೀರ್ಣದ ಜಮೀನನ್ನು ಕೆ.ಐ.ಎ.ಡಿ.ಬಿ. ಕಲಂ 4 ರ ಅಡಿಯಲ್ಲಿ ಸ್ವಾಧೀನ ಪ್ರಕ್ರಿಯೆಯಿಂದ ಹೊರತುಪಡಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

*ಪೆರಿಫರಲ್ ರಸ್ತೆ ಹಾಗೂ ಲಿಂಕ್ ರಸ್ತೆ ನಿರ್ಮಾಣಕ್ಕೆ 28(1) ಅಡಿಯಲ್ಲಿ ಅಧಿಸೂಚನೆಗೊಂಡಿದ್ದು, 28(4) ಕ್ಕೆ ಮುಂದುವರಿಯದೇ ಇರುವ ಜಮೀನಿನ ವಿಸ್ತೀರ್ಣ 1484 ಎಕರೆಗಳಾಗಿರುತ್ತದೆ. <u>ಇದಲ್ಲದೆ, ಪೆರಿಫರಲ್ ಮತ್ತು ಲಿಂಕ್ ರಸ್ತೆಯ ನಿರ್ಮಾಣಕ್ಕಾಗಿ ನೈಸೆಲ್ ಸಂಸ್ಥೆ ಅನಧಿಕೃತವಾಗಿ 28(1) ವ್ಯಾಪ್ತಿಗೆ ಒಳಪಟ್ಟ 49.10 ಎಕರೆ ವಿಸ್ತೀರ್ಣದ ಜಮೀನನ್ನು ಬಳಸಿದೆ.</u> ಕಲಂ 28(4) ರ ಅಡಿಯಲ್ಲಿ ಅಂತಿಮ ಅಧಿಸೂಚನೆ ಜಾರಿಗೊಳ್ಳದೇ ಇರುವ ಹಿನ್ನೆಲೆಯಲ್ಲಿ ವಾಸ್ತವಿಕ ವ್ಯತ್ಯಾಸವಾದ 1434 ಎಕರೆ ವಿಸ್ತೀರ್ಣದ ಜಮೀನನ್ನು ಕೆ.ಐ.ಎ.ಡಿ.ಬಿ. ಕಾಯಿದೆ ಕಲಂ 4 ಅಡಿಯಲ್ಲಿ ಹೊರತುಪಡಿಸಲು ಕಾನೂನು ರೀತ್ಯಾ ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಆಗ್ರಹಿಸುತ್ತದೆ.*

(ಎಕರೆಗಳಲ್ಲಿ)

| | | |
|---|---|---|
| 1. | ಸೆಕ್ಷನ್ 'ಎ' ಭಾಗದ 3(1) ರಡಿಯಲ್ಲಿದ್ದು 1(3) ರಡಿಯಲ್ಲಿ ಮುಂದುವರಿಯದೇಯೋಜನೆಗೆ ಬಳಕೆಯಾಗದಿರುವ ಜಮೀನುಗಳು | 749.27 |
| 2. | 1(3) ರಲ್ಲಿ ಅಧಿಸೂಚನೆಗೊಂಡು 28(1) ರಡಿಯಲ್ಲಿ ಮುಂದುವರಿಯದೇ ಯೋಜನೆಗೆ ಬಳಕೆಯಾಗದಿರುವ ಜಮೀನುಗಳು | 145.16 |
| 2. | ಸೆಕ್ಷನ್ 'ಎ' ಭಾಗದ ಪೆರಿಫರಲ್ ಮತ್ತು ಲಿಂಕ್ ರಸ್ತೆಯಲ್ಲಿ 28(1) ರಡಿಯಲ್ಲಿ 28(4)ಕ್ಕೆ ಮುಂದುವರೆಯದೆ ಯೋಜನೆಗೆ ಬಳಕೆಯಾಗದಿರುವ ಜಮೀನುಗಳು | 1434.00 |
| 3. | ಪೆರಿಫರಲ್ ರಸ್ತೆಗೆ ಸಂಬಂಧಿಸಿದಂತೆ ಹೆಚ್ಚುವರಿ ಜಮೀನುಗಳು | 518.35 |
| 4. | ಲಿಂಕ್ ರಸ್ತೆಗೆ ಸಂಬಂಧಿಸಿದಂತೆ ಹೆಚ್ಚುವರಿ ಜಮೀನುಗಳು | 50.38 |
| | ಒಟ್ಟು | 2898.36 |

*ಸೆಕ್ಷನ್ 'ಬಿ' ಮತ್ತು 'ಸಿ' ಭಾಗದ ವೇಗದ ಹೆದ್ದಾರಿಗೆ ಸಂಬಂಧಿಸಿದಂತೆ ಒಟ್ಟಾರೆ 4528 ಎಕರೆ ವಿರುದ್ಧ 1436.17 ಎಕರೆ ಸರ್ಕಾರಿ ಜಮೀನನ್ನು ಒದಗಿಸಲಾಗಿದೆ. ಅಂದರೆ ಕ್ರಿಯಾ ಒಪ್ಪಂದದ ಅನುಗುಣವಾಗಿ ಬಾಕಿ 3092 ಎಕರೆಗಳು ಖಾಸಗಿ ಜಮೀನಿನ ಪ್ರವರ್ಗದಡಿಯಲ್ಲಿ ಬರುತ್ತದೆ. ಆದರೆ ಕೆ.ಐ.ಎ.ಡಿ.ಬಿ. ಸಂಸ್ಥೆಯು ಈ 3092 ಎಕರೆಗಳ ವಿರುದ್ಧ 4337 ಎಕರೆ ಖಾಸಗಿ ಜಮೀನಿಗೆ ಅಧಿಸೂಚನೆ ಹೊರಡಿಸಿರುವುದರಿಂದ ಈ ಪೈಕಿ 1342 ಎಕರೆಗಳ ಹೆಚ್ಚುವರಿ ಖಾಸಗಿ ಜಮೀನನ್ನು ಯೋಜನೆಯ ಬಿ ಅಂಡ್ ಸಿ. ವ್ಯಾಪ್ತಿಯ ವೇಗದ ಹೆದ್ದಾರಿ ಘಟಕದಿಂದ ಹಿಂಪಡೆಯಲು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.*

## ನಗರ ಸಮುಚ್ಚಯಗಳು-ಖಾಸಗಿ ಜಮೀನು

ನಗರ ಸಮುಚ್ಚಯಗಳಿಗೆ ಅನ್ವಯಿಸುವಂತೆ ಸೋಮಶೇಖರ ರೆಡ್ಡಿ ಪ್ರಕರಣದಲ್ಲಿ ದೃಢೀಕರಿಸಲಾದ ಖಾಸಗಿ ಜಮೀನಿನ ವಿಸ್ತೀರ್ಣ ಹಾಗೂ ಕೆ.ಐ.ಎ.ಡಿ.ಬಿ. ನಿಯಮಾವಳಿಗಳ 28(1) ಮತ್ತು 28(4) ರಲ್ಲಿ ಅಧಿಸೂಚನೆ ಜಾರಿಗೊಳಿಸಲಾದ ಜಮೀನಿನ ವಿಸ್ತೀರ್ಣಗಳು ಕೆಳಕಂಡಂತಿದೆ:

| ಕ್ರ. ಸಂ. | ನಗರ ಸಮುಚ್ಚಯ (ಕ್ರಿಯಾ ಒಪ್ಪಂದದ ಅನುಗುಣವಾಗಿ) | ಕ್ರಿಯಾ ಒಪ್ಪಂದದ ಅನುಗುಣವಾಗಿ ಖಾಸಗಿ ಜಮೀನಿನ ಅವಶ್ಯಕತೆ | 28(1) ರ ಅಡಿಯಲ್ಲಿನ ವಿಸ್ತೀರ್ಣ | ವ್ಯತ್ಯಾಸ (ಕ್ರಿಯಾ ಒಪ್ಪಂದ ಹಾಗೂ 28(1)) | 28(4) ರಲ್ಲಿನ ವಿಸ್ತೀರ್ಣ | 28(1) ಹಾಗೂ 28(4) ರ ವ್ಯತ್ಯಾಸ |
|---|---|---|---|---|---|---|
| 1 | ನಗರ ಸಮುಚ್ಚಯ-1 ಬೆಂಗಳೂರು ದಕ್ಷಿಣ ಹಾಗೂ ರಾಮನಗರ ತಾಲ್ಲೂಕು | 2447 | 2420 | (-)27 | 1916 | (-)504 |
| 2 | ನಗರ ಸಮುಚ್ಚಯ-2 ಬೆಂಗಳೂರು ದಕ್ಷಿಣ ಹಾಗೂ ರಾಮನಗರ ತಾಲ್ಲೂಕು | 1222 | 1699 | (+)477 | - | |
| 3 | ನಗರ ಸಮುಚ್ಚಯ-4 ರಾಮನಗರ ಹಾಗೂ ಚನ್ನಪಟ್ಟಣ ತಾಲ್ಲೂಕು | 931 | 1529 | (+)598 | - | |
| 4 | ನಗರ ಸಮುಚ್ಚಯ-5 ಚನ್ನಪಟ್ಟಣ ತಾಲ್ಲೂಕು | 90 | 1335 | (+)1245 | - | |
| 5 | ನಗರ ಸಮುಚ್ಚಯ-7 ಶ್ರೀರಂಗಪಟ್ಟಣ ತಾಲ್ಲೂಕು | 3047 | 2664 | (-)423 | - | |
| | ನಿವ್ವಳ ಕ್ರೋಢೀಕೃತ ಒಟ್ಟುಗಳು | 7737 | 9647 | (+)1890 | 1916 | (-)504 |

ನಗರ ಸಮುಚ್ಚಯಗಳ ನಿರ್ಮಾಣಕ್ಕೆ ಕ್ರಿಯಾ ಒಪ್ಪಂದದ ಹಾಗೂ ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನ ಅನುಗುಣವಾಗಿ 5457 ಎಕರೆ ಸರ್ಕಾರಿ ಜಮೀನು ಹಾಗೂ 7737 ಎಕರೆ ಖಾಸಗಿ ಜಮೀನು ಒದಗಿಸಬೇಕಾಗುವುದು. 9647 ಎಕರೆ ಖಾಸಗಿ ಜಮೀನನ್ನು ಕಲಂ 28(1) ರ ಅಡಿಯಲ್ಲಿ ಅಧಿಸೂಚನೆಯ ವ್ಯಾಪ್ತಿಗೆ ಒಳಪಡಿಸಲಾಗಿದೆ. ಘಟಕವಾರು ಹೆಚ್ಚುವರಿ ಅಥವಾ ಕುಂಠಿತ ಜಮೀನು ಸ್ವಾಧೀನ ಪ್ರಕ್ರಿಯೆಯನ್ನು ಗಮನಿಸಿದಲ್ಲಿ ಕ್ರೋಢೀಕೃತವಾಗಿ ಅಥವಾ ನಿವ್ವಳವಾಗಿ 1890 ಎಕರೆ ಹೆಚ್ಚುವರಿ ಖಾಸಗಿ ಜಮೀನನ್ನು ಹೆಚ್ಚುವರಿಯಾಗಿ ಪ್ರಾಥಮಿಕ ಅಧಿಸೂಚನೆಯ ವ್ಯಾಪ್ತಿಗೆ ಒಳಪಡಿಸಿರುವುದನ್ನು ಕೆ.ಐ.ಎ.ಡಿ.ಬಿ. ಸಲ್ಲಿಸಿರುವ ದಾಖಲಾತಿಗಳಿಂದ ಸಮಿತಿಗೆ ಸ್ಪಷ್ಟವಾಗಿದೆ.

ಕ್ರಿಯಾ ಒಪ್ಪಂದಕ್ಕೆ ಹೋಲಿಸಿದಲ್ಲಿ ಈವರೆವಿಗೂ ನೈಸೆಲ್/ನೀಸೆಲ್ ಸಂಸ್ಥೆಗೆ ನಗರ ಸಮುಚ್ಚಯಗಳ ನಿರ್ಮಾಣಕ್ಕಾಗಿ ವಾಸ್ತವಿಕವಾಗಿ ಹಸ್ತಾಂತರಿಸಿದ ಸರ್ಕಾರಿ ಜಮೀನಿನ ವಿವರಗಳು ಕೆಳಕಂಡಂತಿದೆ:

| ನಗರ ಸಮುಚ್ಛಯ ಸಂಖ್ಯೆ | ಕ್ರಿಯಾ ಒಪ್ಪಂದ/ಸೋಮಶೇಖರ ರೆಡ್ಡಿ ಪ್ರಕರಣದ ಅನುಗುಣವಾಗಿ ವಿಸ್ತೀರ್ಣ | ಹಸ್ತಾಂತರಿಸಲಾದ ವಿಸ್ತೀರ್ಣ | ವ್ಯತ್ಯಾಸ - ಹೆಚ್ಚುವರಿ (+),ಕೊರತೆ (-) |
|---|---|---|---|
| ನಗರ ಸಮುಚ್ಛಯ-1 ಬೆಂಗಳೂರು ದಕ್ಷಿಣ ಹಾಗೂ ರಾಮನಗರ ತಾಲ್ಲೂಕು | 328 | 481 | + 153 |
| ನಗರ ಸಮುಚ್ಛಯ-2 ಬೆಂಗಳೂರು ದಕ್ಷಿಣ ಹಾಗೂ ರಾಮನಗರ ತಾಲ್ಲೂಕು | 614 | 320 | - 494 |
| ನಗರ ಸಮುಚ್ಛಯ-4 ರಾಮನಗರ ಹಾಗೂ ಚನ್ನಪಟ್ಟಣ ತಾಲ್ಲೂಕು | 684 | 474 | - 210 |
| ನಗರ ಸಮುಚ್ಛಯ-5 ಚನ್ನಪಟ್ಟಣ ತಾಲ್ಲೂಕು | 2592 | 901 | - 1691 |
| ನಗರ ಸಮುಚ್ಛಯ-7 ಶ್ರೀರಂಗಪಟ್ಟಣ ತಾಲ್ಲೂಕು | 1239 | 195 | - 1044 |
| ಒಟ್ಟು | 5457 | 2371 | - 3086 |

ದಿನಾಂಕ 22.04.2015 ರಂದು ಸಮಿತಿಯ ಸಭೆಗೆ ಸಲ್ಲಿಸಲಾದ ಮಾಹಿತಿಯ ಅನುಗುಣವಾಗಿ 9647 ಎಕರೆಗಳ ಪೈಕಿ 28(1) ರ ವ್ಯಾಪ್ತಿಯಲ್ಲಿ ಒಳಪಟ್ಟು ಕಲಂ 28(4) ಅಡಿಯಲ್ಲಿ ಅಧಿಸೂಚನೆಯಾಗದೇ ಉಳಿದಿರುವ ಜಮೀನಿನ ವಿಸ್ತೀರ್ಣ 7731 ಎಕರೆಗಳಾಗಿರುತ್ತದೆ. ಈ ಪೈಕಿ ನಗರ ಸಮುಚ್ಛಯ-1 ಕ್ಕೆ ಅನ್ವಯಿಸುವ 1916 ಎಕರೆಗಳಿಗೆ ಮಾತ್ರ 28(4) ಜಾರಿಗೊಳಿಸಲಾಗಿದೆ. ಉಳಿದ 4 ನಗರ ಸಮುಚ್ಛಯಗಳಿಗೆ ಸಂಬಂಧಿಸಿದಂತೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಸಮಗ್ರ ಚಿತ್ರಣವನ್ನು ನೋಡಿದಾಗ ನಗರ ಸಮುಚ್ಛಯಗಳಿಗೆ 5457 ಎಕರೆ ಸರ್ಕಾರಿ ಜಮೀನಿನ ಬದಲಾಗಿ 2371 ಎಕರೆ ಮಾತ್ರ ಒದಗಿಸಲಾಗಿದೆ. ಇದರಿಂದಾಗಿ ನಗರ ಸಮುಚ್ಛಯಗಳಿಗೆ ಅನ್ವಯಿಸುವಂತೆ ಸರ್ಕಾರಿ ಜಮೀನಿನ ಕೊರತೆ 3086 ಎಕರೆ ಎಂಬ ಅಭಿಪ್ರಾಯವನ್ನು ಲೋಕೋಪಯೋಗಿ ಇಲಾಖೆ ವ್ಯಕ್ತಪಡಿಸಿದೆ. ಈ ಹಿನ್ನೆಲೆಯಲ್ಲಿ 28(1) ವ್ಯಾಪ್ತಿಗೆ ಒಳಪಟ್ಟಿರುವ 9647 ಎಕರೆಗಳಿಗೆ ಸಂಪೂರ್ಣವಾಗಿ 28(4) ಜಾರಿಗೊಳಿಸಿದರೂ ಸಹ ಕ್ರೋಢೀಕೃತ ಕೊರತೆ 1176 ಎಕರೆಗಳಾಗುವ ಸಾಧ್ಯತೆ ಇದೆ. ಲೋಕೋಪಯೋಗಿ ಇಲಾಖೆಯ ಈ ಪ್ರತಿಪಾದನೆಯು ಕ್ರಿಯಾ ಒಪ್ಪಂದದ ಶೆಡ್ಯೂಲ್-1 ಗೆ ವ್ಯತಿರಿಕ್ತವಾಗಿರುತ್ತದೆ. ವೈಜ್ಞಾನಿಕವಾಗಿ ಗುರುತಿಸಲಾದ ಆಧಾರದ ಮೇಲೆ ವಾಸ್ತವಿಕ ಜಮೀನಿನ ಅವಶ್ಯಕತೆಯನ್ನು ನಿರ್ಧರಿಸಿರುವ ಹಿನ್ನೆಲೆಯಲ್ಲಿ ಹಾಗೂ ಕ್ರಿಯಾ ಒಪ್ಪಂದವನ್ನು ಯಥಾವತ್ತಾಗಿ ಪಾಲಿಸುವ ಅವಶ್ಯಕತೆಯ ಹಿನ್ನೆಲೆಯಲ್ಲಿ ಲೋಕೋಪಯೋಗಿ ಇಲಾಖೆಯು ಭಾರತ್ ಫೋರ್ಜ್ ಲಿಮಿಟೆಡ್ ನೀಡಿದ ವಿವರಗಳ ಅನುಗುಣವಾಗಿ ಹಾಗೂ ಕ್ರಿಯಾ ಒಪ್ಪಂದ ಮತ್ತು ಸೋಮಶೇಖರ ರೆಡ್ಡಿ ತೀರ್ಪಿನ ಅನುಗುಣವಾಗಿ ಸರ್ಕಾರಿ ಜಮೀನನ್ನು ನಿಯಂತ್ರಿಸಬೇಕೆಂದು ಸಮಿತಿಯು ಆಗ್ರಹಿಸುತ್ತದೆ.ಈಗಾಗಲೇ ಯೋಜನೆಯ ಸಮಗ್ರ ಸರ್ವೇಕ್ಷಣೆಯಲ್ಲಿ ಲೋಕೋಪಯೋಗಿ ಹಾಗೂ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ 2 ದಶಕಗಳಿಗೂ ಮೀರಿ ಕ್ರಮ ಜಾರಿಗೊಳಿಸದೇ ಇರುವುದನ್ನು ಸಮಿತಿಯು ದಿಗ್ಭ್ರಮೆಯಿಂದ ಗಮನಿಸಿದೆ. ಈ ವೈಫಲ್ಯತೆಯಿಂದಾಗಿ ಹಸ್ತಾಂತರಿಸಲಾದ ಅಥವಾ

ಸ್ವಾಧೀನಪಡಿಸಿಕೊಂಡ ಭೂಮಿ ಹಾಗೂ ವಾಸ್ತವಿಕವಾಗಿ ಬಳಕೆಯಾಗದ ಭೂಮಿಯ ವಿಸ್ತೀರ್ಣ ಹಾಗೂ ಸರ್ವೆ ನಂಬರುಗಳನ್ನು ಕ್ರೋಢೀಕರಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ಇದರಿಂದಾಗಿ ನೈಸೆಲ್/ನೀಸೆಲ್ ಸಂಸ್ಥೆಗೆ ಲೆಕ್ಕಪತ್ರಗಳ ಅನುಗುಣವಾಗಿ ಅಥವಾ ಕ್ರಿಯಾ ಒಪ್ಪಂದಕ್ಕೆ ವ್ಯತಿರಿಕ್ತವಾಗಿ ಹಸ್ತಾಂತರಿಸಿರುವ ಹೆಚ್ಚುವರಿ ಭೂಮಿಯ ಬಗ್ಗೆ ಸರ್ಕಾರಕ್ಕೆ ನಿರ್ಧಿಷ್ಟ ಅಥವಾ ಸ್ಪಷ್ಟ ಚಿತ್ರಣ ಮೂಡಿರುವುದಿಲ್ಲ. ಇದಲ್ಲದೆ, ಈ ವೈಫಲ್ಯತೆಯಿಂದಾಗಿ ನೀಸೆಲ್ ಸಂಸ್ಥೆ 28(1) ವ್ಯಾಪ್ತಿಯ ಜಮೀನನ್ನೂ ಸಹ ರಸ್ತೆಯ ನಿರ್ಮಾಣಕ್ಕೆ ಬಳಸಿರುವುದು ಇತ್ತೀಚೆಗೆ ಬೆಳಕಿಗೆ ಬಂದಿದೆ. ನಗರ ಸಮುಚ್ಛಯಗಳಿಗೆ ಸಂಬಂಧಿಸಿದಂತೆ ಯಾವುದೇ ಪ್ರಗತಿಯನ್ನು ಸಾಧಿಸದೇ ಇರುವ ಹಿನ್ನೆಲೆಯಲ್ಲಿ ಈ ಕೂಡಲೇ ಸೆಕ್ಷನ್ 'ಬಿ' ಮತ್ತು 'ಸಿ' ಗೆ ಸರ್ವೇಕ್ಷಣಾ ಕ್ರಮವನ್ನು ಜಾರಿಗೊಳಿಸಿ, ಈ ವರದಿಯನ್ನು ಮಂಡಿಸಿದ ಒಂದು ತಿಂಗಳೊಳಗಾಗಿ ಸರ್ವೇಕ್ಷಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಬೇಕೆಂದು ಸಮಿತಿಯು ಆಗ್ರಹಿಸುತ್ತದೆ.

ಕ್ರಿಯಾ ಒಪ್ಪಂದದ ಅನುಗುಣವಾಗಿ 5 ನಗರ ಸಮುಚ್ಛಯಗಳಿಗೆ 7737 ಎಕರೆ ವಿಸ್ತೀರ್ಣದ ಜಮೀನಿನ ಅವಶ್ಯಕತೆ ಇದ್ದು, ಇದರ ವಿರುದ್ಧ ಕೆ.ಐ.ಎ.ಡಿ.ಬಿ. ಸಂಸ್ಥೆಯ 9647 ಎಕರೆ ಜಮೀನಿಗೆ ಕಲಂ 28(1) ರ ಅಡಿಯಲ್ಲಿ ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸಿರುತ್ತದೆ. ಈ 9647 ಎಕರೆಗಳ ಪೈಕಿ ನಗರ ಸಮುಚ್ಛಯ-1 ಕ್ಕೆ ಅನ್ವಯಿಸುವಂತೆ 1916 ಎಕರೆಗಳಿಗೆ ಕಲಂ 28(4) ರ ಅಡಿಯಲ್ಲಿ ಅಂತಿಮ ಅಧಿಸೂಚನೆಯನ್ನು ಜಾರಿಗೊಳಿಸಿದೆ. ಕ್ರಿಯಾ ಒಪ್ಪಂದದಲ್ಲಿ ಪ್ರತಿಪಾದಿಸಿದ ಖಾಸಗಿ ಜಮೀನಿನ ಅವಶ್ಯಕತೆಗೆ ಹೋಲಿಸಿದಲ್ಲಿ 1890 ಎಕರೆ ಜಮೀನನ್ನು ಹೆಚ್ಚುವರಿಯಾಗಿ ಪ್ರಾಥಮಿಕ ಅಧಿಸೂಚನೆಯ ವ್ಯಾಪ್ತಿಯಲ್ಲಿ ಈವರೆವಿಗೂ ಉಳಿಸಿಕೊಂಡಿರುವುದನ್ನು ಸಮಿತಿಯು ಗಮನಿಸಿದೆ. ಈ ವರದಿಯಲ್ಲಿ ಪ್ರತಿಪಾದಿಸಿರುವಂತೆ ನಗರ ಸಮುಚ್ಛಯಗಳಿಗೆ ಅನ್ವಯಿಸುವಂತೆ ಖಾಸಗಿ ಪಾಲುದಾರರು ಯಾವುದೇ ಪ್ರಗತಿಯನ್ನು ಸಾಧಿಸಿರುವುದಿಲ್ಲ. ಇದಲ್ಲದೆ, ನಗರ ಸಮುಚ್ಛಯಗಳ ಅನುಷ್ಠಾನವನ್ನು ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನ ಕಂಡಿಕೆ 15 ರ ಅನುಗುಣವಾಗಿ ವೇಗದ ಹೆದ್ದಾರಿ ಸಂಪೂರ್ಣಗೊಂಡ ನಂತರ ಜಾರಿಗೊಳಿಸಬೇಕಾಗುವುದು. ಸಮಿತಿಗೆ ಲಭ್ಯವಿರುವ ಮಾಹಿತಿಗಳ ಅನುಗುಣವಾಗಿ 28(1) ರ ಅಡಿಯಲ್ಲಿ ಅಧಿಸೂಚನೆಯನ್ನು 1998 ರಿಂದ 2004 ರ ಅವಧಿಯಲ್ಲಿ ಜಾರಿಗೊಳಿಸಿರುವುದರಿಂದ 12 ವರ್ಷಗಳಿಗೂ ಮೀರಿ 1890 ಎಕರೆ ಜಮೀನು ಪ್ರಾಥಮಿಕ ಅಧಿಸೂಚನೆಯ ವ್ಯಾಪ್ತಿಗೆ ಒಳಪಟ್ಟಿರುವುದರಿಂದ ಭೂ ಮಾಲೀಕರು ಅತಂತ್ರ ಸ್ಥಿತಿಯಲ್ಲಿರುವುದು ಸ್ಪಷ್ಟವಾಗಿದೆ. ಖಾಸಗಿ ಪಾಲುದಾರರು ಈವರೆವಿಗೂ ವಾಸ್ತವಿಕ ಅವಶ್ಯಕತೆಯನ್ನು ದೃಢೀಕರಿಸಲು ಕ್ಲಿಡಸ್ಟಲ್ ಮ್ಯಾಪುಗಳನ್ನೂ ಸಹ ಸಲ್ಲಿಸಿರುವುದಿಲ್ಲ. ಇದರಿಂದ ಸಮಗ್ರ ಯೋಜನೆಯ ಭೂಮಿಯ ಅವಶ್ಯಕತೆಯ ಹಾಗೂ ಬಳಕೆಯ ಸ್ಪಷ್ಟ ಚಿತ್ರಣ ಮೂಡದೇ ಈ ವೈಫಲ್ಯತೆಯಿಂದಾಗಿ ಯೋಜನಾ ವ್ಯಾಪ್ತಿಯ ಪ್ರದೇಶದ ರೈತರು ಒಂದು ದಶಕಕ್ಕೂ ಮೀರಿ ಸಂಕಷ್ಟದಲ್ಲಿರುವುದು ಖಂಡನೀಯ ಬೆಳವಣಿಗೆಯಾಗಿದೆ.

ಸಮಗ್ರ ಚಿತ್ರಣವನ್ನು ನೋಡಿದಾಗ ಎಕ್ಸ್‌ಪ್ರೆಸ್ ವೇ, ಸೆಕ್ಷನ್ 'ಬಿ' ಮತ್ತು 'ಸಿ' ವ್ಯಾಪ್ತಿಯಲ್ಲಿ ಹಂಚಿಕೆ ಮಾಡಲಾದ 1087 ಎಕರೆ ಸರ್ಕಾರಿ ಜಮೀನು ಹಾಗೂ 5 ನಗರ ಸಮುಚ್ಛಯಗಳಿಗೆ ಹಸ್ತಾಂತರಿಸಲಾದ 2371 ಎಕರೆ ಸರ್ಕಾರಿ ಜಮೀನಿನಲ್ಲಿ (ಕ್ರೋಢೀಕೃತವಾಗಿ 3458 ಎಕರೆ) ನೈಸೆಲ್ ಸಂಸ್ಥೆ ಯಾವುದೇ ಅಭಿವೃದ್ಧಿ ಕ್ರಮಗಳನ್ನು ಕೈಗೊಂಡಿರುವುದಿಲ್ಲ. ಅಂದರೆ ಈ ವ್ಯಾಪ್ತಿಯ ಸರ್ಕಾರಿ ಜಮೀನನ್ನು ಅನಾವಶ್ಯಕವಾಗಿ ತರಾತುರಿಯಲ್ಲಿ ಕೇವಲ ಖಾಸಗಿ ಪಾಲುದಾರರಿಗೆ ಫೈನಾನ್ಷಿಯಲ್ ಕ್ಲೋಷರ್ ಸಾಧಿಸಲು ಅನುಕೂಲ ಮಾಡಿಕೊಡಲು ಹಸ್ತಾಂತರಿಸಿರುವುದು ಸ್ಪಷ್ಟವಾಗುತ್ತದೆ. ಅಂತಿಮವಾಗಿ ಇತ್ಯರ್ಥವಾದ 5688 ಎಕರೆಗಳ ಸರ್ಕಾರಿ ಜಮೀನಿನ ಪೈಕಿ 3458 ಎಕರೆ ಬಳಕೆಯಾಗದೇ 10 ವರ್ಷಗಳಿಗೂ ಮೀರಿ ಇರುವುದು ನೈಸೆಲ್/ನೀಸೆಲ್ ಸಂಸ್ಥೆಯ ಕಾರ್ಯವೈಖರಿಗೆ ಕೈಗನ್ನಡಿಯಾಗಿದೆ. ಖಾಸಗಿ ಪಾಲುದಾರರು ಪಾವತಿಸಬೇಕಾಗಿರುವ ವಿಸ್ತೀರ್ಣ ಹಾಗೂ ಅವರಿಗೆ ಗುತ್ತಿಗೆ ಆಧಾರದ ಮೇಲೆ ನೀಡಬೇಕಾಗಿರುವ ಜಮೀನಿನ ವಿಸ್ತೀರ್ಣದ ವಿವರಗಳು ಈವರೆವಿಗೂ ಇತ್ಯರ್ಥವಾಗಿರುವುದಿಲ್ಲ.

ಸೆಕ್ಷನ್ 'ಬಿ' ಮತ್ತು 'ಸಿ' ಭಾಗದಲ್ಲಿ ಕಲಂ 3(1) ಮತ್ತು 1(3) ರಿಂದ ಮುಂದುವರಿಯದೇ ಬಾಕಿ ಇರುವ ಜಮೀನಿನ ವಿಸ್ತೀರ್ಣ 2217 ಎಕರೆಗಳಾಗಿರುತ್ತದೆ. ಪ್ರಸಕ್ತ ಸಂದರ್ಭದಲ್ಲಿ ದಿನಾಂಕ 03.06.1997ರ ಲೋಕೋಪಯೋಗಿ ಇಲಾಖೆಯ ಪಟ್ಟಿಯ ಅನುಸಾರ ವಾಸ್ತವಿಕ ಅವಶ್ಯಕತೆಯನ್ನು ಸರ್ವೆ ನಂಬರುಗಳ ಆಧಾರದ ಮೇಲೆ ತಾಳೆ ಮಾಡಿ ಹೆಚ್ಚುವರಿ ಅಥವಾ ಬಳಕೆಯಾಗದ ಜಮೀನನ್ನು ಸ್ವಾಧೀನ ಪ್ರಕ್ರಿಯೆಯಿಂದ ಹೊರತುಪಡಿಸಲು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

ಸೆಕ್ಷನ್ 'ಬಿ' ಮತ್ತು 'ಸಿ' ಭಾಗದ ವೇಗದ ಹೆದ್ದಾರಿಗೆ ಸಂಬಂಧಿಸಿದಂತೆ ಕ್ರಿಯಾ ಒಪ್ಪಂದದ ಅನುಗುಣವಾಗಿ ಅವಶ್ಯಕವಿರುವ 4528 ಎಕರೆ ಜಮೀನಿನ ವಿರುದ್ಧ ಈಗಾಗಲೇ 1436 ಎಕರೆ ಸರ್ಕಾರಿ ಜಮೀನನ್ನು ಒದಗಿಸಲಾಗಿದೆ. ಅಂದರೆ ಒದಗಿಸಬಹುದಾದ ಖಾಸಗಿ ಜಮೀನಿನ ವಿಸ್ತೀರ್ಣ 3092 ಎಕರೆಗಳಾಗಿದ್ದು, ಇದರ ವಿರುದ್ಧ 4337 ಎಕರೆ ಖಾಸಗಿ ಜಮೀನಿಗೆ 28(1) ರಡಿಯಲ್ಲಿ ಅಧಿಸೂಚನೆ ಹೊರಡಿಸಿರುವುದರಿಂದ, 1342 ಎಕರೆ ಖಾಸಗಿ ಜಮೀನು ಹೆಚ್ಚುವರಿಯಾಗಿದ್ದು, ಈ ವಿಸ್ತೀರ್ಣವನ್ನು ಕೈಬಿಡಲು ಕಾನೂನು ರೀತ್ಯಾ ಕ್ರಮ ಕೈಗೊಳ್ಳಬಹುದಾಗಿದೆ.

ಪಟ್ಟಣ-1 ಕ್ಕೆ ಅನ್ವಯಿಸುವಂತೆ 2420 ಎಕರೆಗಳಿಗೆ 28(1) ರ ಅಡಿಯಲ್ಲಿ ಅಧಿಸೂಚನೆಯಾಗಿದ್ದು, ಈ ಪೈಕಿ 1916 ಎಕರೆ ಜಮೀನಿಗೆ 28(4) ರ ಅಡಿಯಲ್ಲಿ ಅಂತಿಮ ಅಧಿಸೂಚನೆಯಾಗಿದೆ. ಅಂದರೆ, 504 ಎಕರೆಗಳು ಅಂತಿಮ ಅಧಿಸೂಚನೆಯಾಗದೇ 28(1) ರ ಅಡಿಯಲ್ಲಿ ಬಾಕಿ ಉಳಿದಿದೆ. ಈ ವಿಸ್ತೀರ್ಣಕ್ಕೆ ಅನ್ವಯಿಸುವಂತೆ ಸ್ಪಷ್ಟನೆಯ ಷರತ್ತಿಗೆ ಒಳಪಟ್ಟಂತೆ ಕಾನೂನು ರೀತ್ಯಾ ಕ್ರಮ ಕೈಗೊಂಡು ಕೆ.ಐ.ಎ.ಡಿ.ಬಿ. ಅಧಿನಿಯಮ ಕಲಂ 4 ರ ಅಡಿಯಲ್ಲಿ ಸ್ವಾಧೀನ ಪ್ರಕ್ರಿಯೆಯಿಂದ ಹೊರತುಪಡಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

ಪಟ್ಟಣ 2 ಮತ್ತು 3 ಕ್ಕೆ ಹೆಚ್ಚುವರಿಯಾಗಿ 28(1) ರಲ್ಲಿ ಅಧಿಸೂಚಿಸಲಾದ 571 ಎಕರೆ ಜಮೀನನ್ನು ಕಲಂ 4 ರ ಅಡಿಯಲ್ಲಿ ಕೈಬಿಡುವ ಬಗ್ಗೆ ಕಾನೂನು ರೀತ್ಯಾ ಕ್ರಮ ಜರುಗಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

*ಕ್ರೋಢೀಕೃತವಾಗಿ ಸೆಕ್ಷನ್ 'ಎ' ಭಾಗದ 2898 ಎಕರೆಗಳು ಹಾಗೂ ಸೆಕ್ಷನ್ 'ಬಿ' ಹಾಗೂ 'ಸಿ' ಭಾಗದ 4634 ಎಕರೆ ವಿಸ್ತೀರ್ಣದ ಖಾಸಗಿ ಜಮೀನು, ಅಂದರೆ ಒಟ್ಟಾಗಿ 7532 ಎಕರೆ ಖಾಸಗಿ ಜಮೀನನ್ನು ಭೂಸ್ವಾಧೀನ ಪ್ರಕ್ರಿಯೆಯಿಂದ ಹೊರತುಪಡಿಸಲು ಸರ್ಕಾರವು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಈ ಪೈಕಿ ಸೆಕ್ಷನ್ 'ಎ' ಭಾಗಕ್ಕೆ ಅನ್ವಯಿಸುವಂತೆ 2898 ಎಕರೆಗಳನ್ನು ಕೆ.ಐ.ಎ.ಡಿ.ಬಿ. ಅಧಿನಿಯಮದ ನಿಯಮ 4 ರ ಅಡಿಯಲ್ಲಿ ಸ್ವಾಧೀನದಿಂದ ಹೊರತುಪಡಿಸಬಹುದಾಗಿದೆ. ಸೆಕ್ಷನ್ 'ಬಿ' ಮತ್ತು 'ಸಿ' ವ್ಯಾಪ್ತಿಯ ಜಮೀನಿಗೆ ಅನ್ವಯಿಸುವಂತೆ ಹಾಗೂ ಈ ಭಾಗದ ವೇಗದ ಹೆದ್ದಾರಿಗೆ ಅನ್ವಯಿಸುವಂತೆ ಲೋಕೋಪಯೋಗಿ ಇಲಾಖೆಯು ಸದನ ಸಮಿತಿಯ ನಿರ್ದೇಶನಗಳನ್ನು ಉಪೇಕ್ಷಿಸಿ ಸರ್ವೆ ಕಾರ್ಯವನ್ನು ಈವರೆವಿಗೂ ಸಂಪೂರ್ಣಗೊಳಿಸದೇ ಇರುವುದು ಖಂಡನೀಯವಾಗಿದೆ. ಸರ್ವೆ ಕಾಮಗಾರಿಗಳು ಅಪೂರ್ಣವಾಗಿರುವ ಹಿನ್ನೆಲೆಯಲ್ಲಿ ಸೆಕ್ಷನ್ 'ಬಿ' ಮತ್ತು 'ಸಿ' ವ್ಯಾಪ್ತಿಯ 4634 ಎಕರೆಗಳಿಗೆ ಅನ್ವಯಿಸುವಂತೆ ಕ್ರಿಯಾ ಒಪ್ಪಂದ, 03.06.1997ರ ಲೋಕೋಪಯೋಗಿ ಇಲಾಖೆಯ ಸರ್ವೆ ನಂಬರುಗಳನ್ನೊಳಗೊಂಡ ಪಟ್ಟಿ ಹಾಗೂ ಸರ್ವೆ ವರದಿಯ ಅನುಗುಣವಾಗಿ ವಾಸ್ತವಿಕವಾಗಿ ಹೆಚ್ಚುವರಿ ಅಥವಾ ಬಳಕೆಯಾಗದೇ ಇರುವ ವಿಸ್ತೀರ್ಣ ಈ ಮೂರೂ ಅಂಶಗಳನ್ನು ಪರಿಗಣಿಸಿ ಈ ವರದಿಯನ್ನು ಸಲ್ಲಿಸಿದ ಒಂದು ತಿಂಗಳೊಳಗಾಗಿ ಸೆಕ್ಷನ್ 'ಬಿ' ಮತ್ತು 'ಸಿ' ವಿಭಾಗದ ಜಮೀನನ್ನು ಹಿಂಪಡೆಯಲು ಸರ್ಕಾರವು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.*

ಯೋಜನಾ ಅನುಷ್ಠಾನದ ಸೆಕ್ಷನ್ 'ಬಿ' ಮತ್ತು 'ಸಿ' ಗೆ ಅನ್ವಯಿಸುವಂತೆ ಸ್ವಾಧೀನ ಪ್ರಕ್ರಿಯೆಯಿಂದ ಹೊರತುಪಡಿಸಬಹುದಾದ ಜಮೀನಿನ ವಿವರಗಳು ಕೆಳಕಂಡಂತಿದೆ:

| | | |
|---|---|---|
| 1. | ಸೆಕ್ಷನ್ 'ಬಿ' ಮತ್ತು 'ಸಿ' ಭಾಗದಲ್ಲಿ 3(1) ಮತ್ತು 1(3) ರಡಿ ಬಾಕಿ ಇರುವ ಜಮೀನುಗಳು (ದಿನಾಂಕ 03.06.1997 ರ ಪಟ್ಟಿಯ ಅನುಸಾರ ಪರಿಶೀಲನೆಯ ಷರತ್ತಿಗೊಳಪಟ್ಟು) | 2217.00 |
| 2. | ಪಟ್ಟಣ-1 (ಸ್ಪಷ್ಟನೆ ಷರತ್ತಿಗೆ ಒಳಪಟ್ಟು) | 504.00 |
| 3. | ಪಟ್ಟಣ-2 ಮತ್ತು 3 | 571.00 |
| 4. | ಸೆಕ್ಷನ್ ಬಿ ಮತ್ತು ಸಿ ಭಾಗದ ವೇಗದ ಹೆದ್ದಾರಿ 28(1) (ಸ್ಪಷ್ಟನೆ ಷರತ್ತಿಗೆ ಒಳಪಟ್ಟು) | 1342.00 |
| | ಒಟ್ಟು | 4634.00 |

ಸೆಕ್ಷನ್ 'ಎ' ವ್ಯಾಪ್ತಿಯಲ್ಲಿ 2898.28 ಎಕರೆಗಳು ಸೆಕ್ಷನ್ 'ಬಿ' ಮತ್ತು 'ಸಿ' ವ್ಯಾಪ್ತಿಯಲ್ಲಿ 4634 ಎಕರೆ ವಿಸ್ತೀರ್ಣದ ಜಮೀನನ್ನು ಅಂದರೆ ಕ್ರೋಢೀಕೃತವಾಗಿ 7532.28 ಎಕರೆ ಜಮೀನನ್ನು ಸ್ವಾಧೀನ ಪ್ರಕ್ರಿಯೆಯಿಂದ ಹೊರತುಪಡಿಸಬಹುದಾಗಿದೆ. ಈ ಸ್ತರದಲ್ಲಿ ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನ ಕಂಡಿಕೆ 15 ಅನ್ನು ಉಲ್ಲೇಖಿಸುವುದು ಅವಶ್ಯಕವಾಗಿರುತ್ತದೆ. ತೀರ್ಪಿನ ಈ ಕಂಡಿಕೆಯ ನಿರ್ದೇಶನದ ಅನುಗುಣವಾಗಿ ಖಾಸಗಿ ಪಾಲುದಾರರು ವೇಗದ ಹೆದ್ದಾರಿಯನ್ನು ಸಂಪೂರ್ಣಗೊಳಿಸಿದ ನಂತರ ನಗರ ಸಮುಚ್ಛಯಗಳನ್ನು ಅನುಷ್ಠಾನಗೊಳಿಸಬೇಕೆಂದು ನಿರ್ದೇಶಿಸಲಾಗಿದೆ. ಈ ವರದಿಯಲ್ಲಿ ಪ್ರತಿಪಾದಿಸಿದಂತೆ ವೇಗದ ಹೆದ್ದಾರಿಗೆ ಅನ್ವಯಿಸುವಂತೆ ಸೆಕ್ಷನ್ 'ಬಿ' ಮತ್ತು 'ಸಿ' ಅಡಿಯಲ್ಲಿ ಯಾವುದೇ ಪ್ರಗತಿಯನ್ನು ಸಾಧಿಸಿರುವುದಿಲ್ಲ. ವಾಸ್ತವಿಕವಾಗಿ 111 ಕಿ.ಮೀ. ವೇಗದ ಹೆದ್ದಾರಿಯನ್ನು 28.03.2014 ರೊಳಗಾಗಿ ಸಂಪೂರ್ಣಗೊಳಿಸಬೇಕಾಗಿದ್ದು, ಈವರೆವಿಗೂ 9.8 ಕಿ.ಮೀ. ವೇಗದ ಹೆದ್ದಾರಿಯನ್ನು ಸಂಪೂರ್ಣಗೊಳಿಸಲಾಗಿದೆ. ಆದುದರಿಂದ ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನ ಕಂಡಿಕೆ 15 ರ ನಿರ್ದೇಶನಗಳು ಉಲ್ಲಂಘನೆಯಾಗಿದೆ. ಇದಲ್ಲದೆ, ನೋಂದಣಿ ಮತ್ತು ಮುದ್ರಾಂಕ ಶುಲ್ಕ ರಿಯಾಯಿತಿ ಆದೇಶದಲ್ಲಿ ಸರ್ಕಾರವು ವೇಗದ ಹೆದ್ದಾರಿಯನ್ನು ಬೆಂಗಳೂರು ಮತ್ತು ಮೈಸೂರು ಕಡೆಯಿಂದ ಒಂದೇ ಸ್ತರದಲ್ಲಿ ಪ್ರಾರಂಭಿಸಬೇಕೆಂದು ಸೂಚಿಸಿದೆ. ಈ ನಿರ್ದೇಶನಗಳನ್ನೂ ಸಹ ಖಾಸಗಿ ಪಾಲುದಾರರು ಉಲ್ಲಂಘಿಸಿರುತ್ತಾರೆ. ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನ ಉಲ್ಲಂಘನೆಯ ಆಧಾರದ ಮೇಲೆ ಸೆಕ್ಷನ್ 'ಬಿ' ಮತ್ತು 'ಸಿ' ವ್ಯಾಪ್ತಿಯಲ್ಲಿನ ಪ್ರಸ್ತಾವಿತ ಜಮೀನುಗಳನ್ನು ಸ್ವಾಧೀನ ಪ್ರಕ್ರಿಯೆಯಿಂದ ಹೊರತುಪಡಿಸಲು ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

ಲೋಕೋಪಯೋಗಿ ಇಲಾಖೆ ಮತ್ತು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಸಮಿತಿಯ ನಿರ್ದೇಶನಗಳ ಅನುಸಾರವಾಗಿ ಜಾರಿಗೊಳಿಸಿದ ಜಂಟಿ ಸರ್ವೇಕ್ಷಣೆ ಅಥವಾ ಮೋಜಣಿಯಲ್ಲಿ ಹಲವಾರು ಆತಂಕಕಾರಿ ಬೆಳವಣಿಗೆಗಳು ವ್ಯಕ್ತವಾಗಿದೆ. ಅಪರ ಮುಖ್ಯ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇವರು ಇಲಾಖೆ ಸಲ್ಲಿಸಿರುವ ವರದಿಯನ್ನು ಕೂಲಂಕುಷವಾಗಿ ವಿಶ್ಲೇಷಿಸಿದಾಗ ಈ ಕೆಳಕಂಡ ಉಲ್ಲಂಘನೆಗಳನ್ನು ಖಾಸಗಿ ಪಾಲುದಾರರು ಎಸಗಿದ್ದಾರೆ ಎಂಬ ಅಭಿಪ್ರಾಯ ಸ್ಪಷ್ಟವಾಗುತ್ತದೆ:

1. ಕಲಂ 3(1) ಮತ್ತು 1(3) ರ ಅಧಿಸೂಚನೆಗಳ ನಡುವಿನ ವ್ಯತ್ಯಾಸ 810 ಎಕರೆಗಳಾಗಿದ್ದು, ಈ ಪೈಕಿ 749.27 ಎಕರೆಗಳನ್ನು ಸ್ವಾಧೀನ ಪ್ರಕ್ರಿಯೆಯಿಂದ ಹೊರತುಪಡಿಸಬಹುದು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇದರಿಂದ ಮೋಜಣಿಯ ಸಮಯದಲ್ಲಿ ಸುಮಾರು 61 ಎಕರೆಗಳ ವಿಸ್ತೀರ್ಣದ ಜಮೀನಿನ ವಾಸ್ತವಿಕ ಸ್ಥಿತಿಗತಿಗಳು, ಬಳಕೆಯ ಸ್ವರೂಪ ಇತ್ಯಾದಿಗಳನ್ನು ನಿರ್ದಿಷ್ಟವಾಗಿ

ಇತ್ಯರ್ಥಗೊಳಿಸಿ ಈ ವರದಿ ಸಲ್ಲಿಸಿದ ಒಂದು ತಿಂಗಳೊಳಗಾಗಿ ಅನುಸರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

2. ಪ್ರಮುಖವಾಗಿ ಕಲಂ 28(1) ಮತ್ತು 28(4) ರ ನಡುವಿನ ವ್ಯತ್ಯಾಸ 1484 ಎಕರೆಗಳಾಗಿದ್ದು, ಕೆ.ಐ.ಎ.ಡಿ.ಬಿ. ಸಂಸ್ಥೆಯು ಗುರುತಿಸಿರುವ ಈ ವಿಸ್ತೀರ್ಣದ ಜಮೀನಿನ ವಿವರಗಳ ಅನುಗುಣವಾಗಿ ಕೆ.ಐ.ಎ.ಡಿ.ಬಿ. ಹಾಗೂ ಲೋಕೋಪಯೋಗಿ ಇಲಾಖೆಯ ಸರ್ವೇಯರುಗಳು ಜಂಟಿ ಪರಿವೀಕ್ಷಣೆಯನ್ನು ಕೈಗೊಂಡಿರುತ್ತಾರೆ. ಈ 1484 ಎಕರೆಗಳ ಪೈಕಿ 49 ಎಕರೆಗಳು ರಸ್ತೆ ಮತ್ತು ಅದರ ಭಾಗಗಳಿಗೆ ಖಾಸಗಿ ಪಾಲುದಾರರು ಉಪಯೋಗಿಸಿರುವುದು ಪರಿವೀಕ್ಷಣೆಯಿಂದ ಸ್ಪಷ್ಟವಾಗಿದೆ. ಕೆ.ಐ.ಎ.ಡಿ.ಬಿ. ಅಧಿನಿಯಮದ ಅನುಗುಣವಾಗಿ 28(4) ರ ನಂತರ ಜಮೀನು ಅಧಿಕೃತವಾಗಿ ಕೆ.ಐ.ಎ.ಡಿ.ಬಿ. ಸುಪರ್ದಿಗೆ ಬರುತ್ತದೆ. ತದನಂತರ ಖಾಸಗಿ ಪಾಲುದಾರರಿಗೆ ಹಸ್ತಾಂತರವಾಗಬೇಕಾಗುವುದು. ಈ ವಿಧಿವಿಧಾನಗಳನ್ನು ಉಲ್ಲಂಘಿಸಿ ಖಾಸಗಿ ಪಾಲುದಾರರು ನಿಯಮಬಾಹಿರವಾಗಿ ಹಾಗೂ ಕಾನೂನು ಬಾಹಿರವಾಗಿ 28(1) ರಡಿಯಲ್ಲಿ ಸೂಚಿಸಿರುವ 49 ಎಕರೆ ಜಮೀನನ್ನು ರಸ್ತೆ ಮತ್ತು ಅದರ ಭಾಗಗಳಿಗೆ ಉಪಯೋಗಿಸಿರುತ್ತಾರೆ. ಇದೊಂದು ಸ್ಪಷ್ಟ ಹಾಗೂ ನೇರ ಅತಿಕ್ರಮಣದ ಪ್ರಕರಣವಾಗಿರುತ್ತದೆ. ಆದುದರಿಂದ ಸರ್ಕಾರವು ಈ ಅನಧಿಕೃತ ಚಟುವಟಿಕೆಗಳ ಆಧಾರದ ಮೇಲೆ ಖಾಸಗಿ ಪಾಲುದಾರರ ವಿರುದ್ಧ ಕಾನೂನು ರೀತ್ಯಾ ಕ್ರಮ ಜರುಗಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಅನುಚ್ಛೇಧ 4 ರ ಅಡಿಯಲ್ಲಿ ನೀಡಲಾಗಿರುವ ಸ್ಥಳ ಪರಿವೀಕ್ಷಣೆಯ ಸೌಲಭ್ಯ, ಖಾಸಗಿ ಪಾಲುದಾರರು ಕ್ಲಡಸ್ಟಲ್ ಮ್ಯಾಪುಗಳನ್ನು ಎಸಗಿರುವಲ್ಲಿನ ವೈಫಲ್ಯತೆ ಹಾಗೂ ಯೋಜನೆ ಪ್ರಾರಂಭವಾದ 19 ವರ್ಷಗಳ ನಂತರವೂ ವಾಸ್ತವಿಕವಾಗಿ ಅವಶ್ಯಕವಿರುವ ಹಾಗೂ ಬಳಸಲಾಗಿರುವ ಭೂಮಿಯ ವಿವರಗಳ ಅನುಪಸ್ಥಿತಿ, ಈ ನ್ಯೂನ್ಯತೆಗಳು ಈ ಸ್ವರೂಪದ ಬೆಳವಣಿಗೆಗೆ ಕಾರಣವಾಗಿರುವುದು ಸಮಿತಿಗೆ ಸ್ಪಷ್ಟವಾಗಿದೆ. ಈ ಪ್ರಕರಣದಲ್ಲಿ ಭೂ ಮಾಲೀಕರ ಶೋಷಣೆಯ ಆಯಾಮವೂ ಒಳಗೊಂಡಿದೆ. ಈ ಎಲ್ಲಾ ಪ್ರವೃತ್ತಿಗಳನ್ನು ಗಮನಿಸಿದರೆ ಖಾಸಗಿ ಪಾಲುದಾರರು ಹಲವಾರು ಪ್ರಕರಣಗಳಲ್ಲಿ ಹೆಚ್ಚುವರಿಯಾಗಿ ಅನುಪಯುಕ್ತ ಹಾಗೂ ಅನಾವಶ್ಯಕ ಜಮೀನನ್ನು ಸುಪರ್ದಿಯಲ್ಲಿಟ್ಟುಕೊಂಡಿರುವುದು ಸ್ಪಷ್ಟವಾಗುತ್ತದೆ. ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಕೂಡಲೇ ಸೆಕ್ಷನ್ 'ಎ' ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸಲಾದ ಪಂಕ್ತೀಕರಣದ ಅನುಗುಣವಾಗಿ ಬಳಕೆಯ ಪ್ರವೃತ್ತಿಯನ್ನು ಇತ್ಯರ್ಥಗೊಳಿಸಲು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

ಸರ್ಕಾರಿ ಜಮೀನಿಗೆ ಅನ್ವಯಿಸುವಂತೆ ಸೆಕ್ಷನ್ 'ಬಿ' ಮತ್ತು 'ಸಿ' ಹಾಗೂ ನಗರ ಸಮುಚ್ಛಯಗಳಲ್ಲಿ ಖಾಸಗಿ ಪಾಲುದಾರರು ಈವರೆವಿಗೂ ಯೋಜನಾ ಅನುಷ್ಠಾನದ ಅವಧಿ ಸಂಪೂರ್ಣಗೊಂಡಿದ್ದರೂ ಯಾವುದೇ ಪ್ರಗತಿಯನ್ನು ಸಾಧಿಸಿರುವುದಿಲ್ಲ. ನಗರ ಸಮುಚ್ಛಯಗಳಲ್ಲಿ ಖರೀದಿಸಬಹುದಾದ ಹಾಗೂ ಹಸ್ತಾಂತರಿಸಬಹುದಾದ ಟ್ರಾನ್ಸ್‌ಫರಬಲ್ ಟೌನ್‌ಶಿಪ್ ಅಸೆಟ್ಸ್ ಬಗ್ಗೆ ಚಿತ್ರಣವೇ ಮೂಡಿಲ್. ಆದಾಗ್ಯೂ, ಫೈನಾನ್ಷಿಯಲ್ ಕ್ಲೋಷರ್ ಅನ್ನು ಸಾಧಿಸಲು ಖಾಸಗಿ ಪಾಲುದಾರರಿಗೆ ಸಹಾಯ ಮಾಡುವ ಉದ್ದೇಶದಿಂದ ಈಗಾಗಲೇ 40 ವರ್ಷಗಳ ಗುತ್ತಿಗೆ ಆಧಾರದ ಮೇಲೆ ಹಸ್ತಾಂತರಿಸಲಾಗಿದೆ. ಈ ಪೈಕಿ ಯಾವುದೇ ಪ್ರಗತಿ ಸಾಧಿಸದೇ ಇರುವ ವೇಗದ ಹೆದ್ದಾರಿಯ ಸೆಕ್ಷನ್ 'ಬಿ' ಮತ್ತು 'ಸಿ' (1087 ಎಕರೆಗಳು) ಮತ್ತು ನಗರ ಸಮುಚ್ಛಯಗಳು (2371 ಎಕರೆಗಳು) ಎಕರೆಗಳು ಬಳಕೆಯಾಗದೆ ಉಳಿದಿದೆ. *ಆದುದರಿಂದ ಸೆಕ್ಷನ್ 'ಬಿ' ಮತ್ತು 'ಸಿ' ಮತ್ತು ನಗರ ಸಮುಚ್ಛಯಗಳಿಗೆ ಅನ್ವಯಿಸುವಂತೆ ಸರ್ಕಾರಿ ಜಮೀನಿನ ಗುತ್ತಿಗೆಯನ್ನು ಪ್ರಥಮ ಸ್ತರದಲ್ಲಿ ರದ್ದುಗೊಳಿಸಲು ಸರ್ಕಾರವು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಖಾಸಗಿ ಹಾಗೂ ಸರ್ಕಾರಿ ಜಮೀನಿಗೆ ಒಳಪಟ್ಟಂತೆ ಪೋಡೀಕೃತವಾಗಿ 11,650(7532 ಖಾಸಗಿ + 3528ಎ*

<u>*ಸರ್ಕಾರಿ) ಇತರೆ ಜಮೀನನ್ನು ಖಾಸಗಿ ಪಾಲುದಾರರಿಂದ ಈ ಕೂಡಲೇ ಹಿಂಪಡೆಯಲು ಸರ್ಕಾರವು ಕ್ರಮವನ್ನು ಶೀಘ್ರವೇ ಜರುಗಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.*</u>

### XXXIX. <u>*ಕ್ರಿಯಾ ಒಪ್ಪಂದದಲ್ಲಿ ನಮೂದಿಸಿರುವ ಪಂಕ್ತೀಕರಣಕ್ಕೆ ವಿಭಿನ್ನವಾದ ಓ.ಡಿ.ಪಿ. ಪಂಕ್ತೀಕರಣವನ್ನು ಜಾರಿಗೊಳಿಸಿರುವ ಬಗ್ಗೆ.*</u>

I. ಬಿ.ಎಂ.ಐ.ಸಿ. ಯೋಜನೆಯ ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಕ್ರಿಯಾ ಒಪ್ಪಂದದ ಷೆಡ್ಯೂಲ್ -1 ಹಾಗೂ ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನ ಪ್ರಮುಖ ನಿರ್ದೇಶನಗಳನ್ನು ಸಾರ್ವತ್ರಿಕವಾಗಿ ಉಲ್ಲಂಘಿಸಿರುವುದು ಸ್ಪಷ್ಟವಾಗಿದೆ. ದಿನಾಂಕ 22.05.2004ರಂದು ವಿಶೇಷ ಜಿಲ್ಲಾಧಿಕಾರಿ, ಕೆ.ಐ.ಎ.ಡಿ.ಬಿ. ಇವರು ಯೋಜನಾ ನಿರ್ದೇಶಕರು, ಬಿ.ಎಂ.ಐ.ಸಿ. ಇವರಿಗೆ ಬರೆದಿರುವ ಪತ್ರ ಈ ಉಲ್ಲಂಘನೆಗೆ ಕೈಗನ್ನಡಿಯಾಗಿದೆ. ಪ್ರಸ್ತಾವಿತ ಪತ್ರದ ಉಲ್ಲೇಖಗಳ ಅನುಗುಣವಾಗಿ ಕೆ.ಐ.ಎ.ಡಿ.ಬಿ. ಸಂಸ್ಥೆಯು ಕೆ.ಐ.ಎ.ಡಿ.ಬಿ. ನಿಯಮ 3(1)ರ ಅಡಿಯಲ್ಲಿ ದಿನಾಂಕ 30.10.1998ರಿಂದ 30.03.2004ರ ಅವಧಿಯಲ್ಲಿ 26,488 ಎಕರೆಗಳಿಗೆ ಅಧಿಸೂಚನೆ ಜಾರಿಗೊಳಿಸಿದೆ. ಈ ಅಧಿಸೂಚನೆ ಖಾಸಗಿ ಜಮೀನಿಗೆ ಅನ್ವಯಿಸುತ್ತದೆ. ಕ್ರಿಯಾ ಒಪ್ಪಂದದ ಅನುಗುಣವಾಗಿ ಯೋಜನಾ ಅನುಷ್ಠಾನಕ್ಕೆ ಸಮಗ್ರವಾಗಿ 20,193 ಎಕರೆಗಳ ಅವಶ್ಯಕತೆ ಇರುತ್ತದೆ. ಈ ವಿಸ್ತೀರ್ಣ ಖಾಸಗಿ ಹಾಗೂ ಸರ್ಕಾರಿ ಜಮೀನನ್ನು ಒಳಗೊಂಡಿರುತ್ತದೆ. ಇದರ ವಿರುದ್ಧ 29,258 ಎಕರೆಗಳ ಜಮೀನಿನ ಸ್ವಾಧೀನಕ್ಕೆ ಪ್ರಕ್ರಿಯೆ ಜಾರಿಗೊಳಿಸಿರುವುದು ಖಂಡನೀಯ ಎಂದು ಸಮಿತಿ ತೀರ್ಮಾನಿಸಿರುತ್ತದೆ. ಈ ಬೆಳವಣಿಗೆಗಳನ್ನು ಗಮನಿಸಿದಾಗ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯು ಯೋಜನೆಯ ಸಮಗ್ರ ನಿರ್ವಹಣೆಯ ಜವಾಬ್ದಾರಿಯನ್ನು ಹೊತ್ತಿರುವ ಲೋಕೋಪಯೋಗಿ ಇಲಾಖೆಯ ಸಹಮತಿ ಪಡೆಯದೇ ಕ್ರಿಯಾ ಒಪ್ಪಂದ ಹಾಗೂ ಜಾರಿಯಲ್ಲಿದ್ದ ನ್ಯಾಯಾಲಯದ ತೀರ್ಪುಗಳನ್ನು ಉಪೇಕ್ಷಿಸಿ ಸ್ವಾಧೀನ ಪ್ರಕ್ರಿಯೆಯನ್ನು ಜಾರಿಗೊಳಿಸಿರುವುದು ಸ್ಪಷ್ಟವಾಗಿದೆ. ಪ್ರಸ್ತಾವಿತ ಪತ್ರದಲ್ಲಿ ವಿಶೇಷ ಜಿಲ್ಲಾಧಿಕಾರಿ, ಕೆ.ಐ.ಎ.ಡಿ.ಬಿ. ಇವರು ಭೂಸ್ವಾಧೀನವನ್ನು ಖಾಸಗಿ ಪಾಲುದಾರರು ಸಲ್ಲಿಸಿರುವ ಪ್ರಸ್ತಾವನೆ ಅಥವಾ ಅವಶ್ಯಕತೆಗಳ ಆಧಾರದ ಮೇಲೆ ಜಾರಿಗೊಳಿಸಲಾಗಿದೆ ಎಂದು ಸ್ಪಷ್ಟೀಕರಿಸಿರುತ್ತಾರೆ. ಇದಲ್ಲದೆ, ಭೂ ಸ್ವಾಧೀನವನ್ನು ತಾಂತ್ರಿಕ ನಕಾಶೆ, ವಿನ್ಯಾಸ, ಸರ್ಕಾರದಿಂದ ಅನುಮೋದಿತ ಯೋಜನಾ ವರದಿ, ಇತ್ಯಾದಿಗಳನ್ನು ಪರಿಗಣಿಸದೇ ಜಾರಿಗೊಳಿಸಲಾಗಿದೆ ಎಂದು ಸ್ಪಷ್ಟವಾಗಿ ಉಲ್ಲೇಖಿಸಿರುತ್ತಾರೆ. ಈ ವ್ಯಾಖ್ಯಾನವು ನಿರ್ಲಕ್ಷ್ಯತಾ ಧೋರಣೆಯ ಅಂತಿಮ ಹಂತ ಎಂದು ಸಮಿತಿಯು ತೀರ್ಮಾನಿಸಿರುತ್ತದೆ. ಕ್ರಿಯಾ ಒಪ್ಪಂದ, ಯೋಜನಾ ತಾಂತ್ರಿಕ ವರದಿ ಹಾಗೂ ನ್ಯಾಯಾಲಯದ ತೀರ್ಪುಗಳನ್ನು ಉಪೇಕ್ಷಿಸಿರುವ ಆಧಾರದ ಮೇಲೆ ಶ್ರೀ ಅನೀಸ್ ಸಿರಾಜ್, ವಿಶೇಷ ಜಿಲ್ಲಾಧಿಕಾರಿ, ಕೆ.ಐ.ಎ.ಡಿ.ಬಿ. ಇವರ ವಿರುದ್ಧ ಕ್ರಿಮಿನಲ್ ಪ್ರಕರಣವನ್ನು ದಾಖಲಿಸಬೇಕೆಂದು ಸಮಿತಿಯ ಶಿಫಾರಸ್ಸು ಮಾಡುತ್ತದೆ.

### II. <u>*ಬಿ.ಎಂ.ಐ.ಸಿ. ಯೋಜನೆಯಲ್ಲಿ Outline Development Plan ಬಗ್ಗೆ ಸಮಿತಿಯ ವಿಶ್ಲೇಷಣೆಗಳು ಹಾಗೂ ಶಿಫಾರಸ್ಸುಗಳು:*</u>

1. ಮೂಲಭೂತವಾಗಿ ದಿನಾಂಕ 02.07.1996ರಂದು ಭಾರತ್ ಫೋರ್ಜ್ ಲಿಮಿಟೆಡ್ ಸಂಸ್ಥೆಯವರು ಯೋಜನಾ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಘಟಕಗಳಿಗೆ ಅವಶ್ಯಕವಿರುವ ಜಮೀನಿನ ವಿವರಗಳನ್ನು ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ, ಇವರಿಗೆ ಸಲ್ಲಿಸಿರುತ್ತಾರೆ:

a. ವೇಗದ ಹೆದ್ದಾರಿ (ಬೆಂಗಳೂರು ದಕ್ಷಿಣ)
b. ಲಿಂಕ್ ರಸ್ತೆ ಹಾಗೂ ಸಂಬಂಧಿತ ಇಂಟರ್‌ಚೇಂಜ್
c. ಪೆರಿಫೆರಲ್ ರಸ್ತೆ
d. ಪೆರಿಫೆರಲ್ ರಸ್ತೆ ಇಂಟರ್‌ಚೇಂಜ್ – 1/7, 2/7, 3/7, 4/7, 5/7, 6/7 ಮತ್ತು 7/7.
e. ವೇಗದ ಹೆದ್ದಾರಿ ಇಂಟರ್‌ಚೇಂಜ್ 1/8.
f. ಪೆರಿಫೆರಲ್ ರಸ್ತೆ ಸೇವಾ ಕ್ಷೇತ್ರ– 1/2 ಮತ್ತು 2/2.
g. ಪೆರಿಫೆರಲ್ ರಸ್ತೆ ನಿರ್ವಹಣಾ ಕ್ಷೇತ್ರ
h. ನಗರ ಸಮುಚ್ಛಯ– 1.
i. ನಗರ ಸಮುಚ್ಛಯ– 2.

ಪ್ರಸ್ತಾವಿತ ಘಟಕಗಳ ಪೈಕಿ ಸೆಕ್ಷನ್ –'ಎ' ಅಡಿಯಲ್ಲಿ ಅನುಷ್ಠಾನಗೊಳಿಸಲಾದ ಕಾಮಗಾರಿಗಳಿಗೆ ಅನ್ವಯಿಸುವಂತೆ ಅವಶ್ಯಕವಿರುವ ಜಮೀನಿನ ವಿವರಗಳು ಕೆಳಕಂಡಂತಿದೆ:

| ಘಟಕ | ಸರ್ಕಾರಿ ಜಮೀನು | ಖಾಸಗಿ ಜಮೀನು | (ಎಕರೆಗಳಲ್ಲಿ) ಒಟ್ಟು |
|---|---|---|---|
| ಪೆರಿಫೆರಲ್ ರಸ್ತೆ | 162.19 | 558.21 | 721.00 |
| ಪೆರಿಫೆರಲ್ ರಸ್ತೆ ಇಂಟರ್‌ಚೇಂಜ್ | 207.13 | 868.27 | 1076.00 |
| ಪೆರಿಫೆರಲ್ ರಸ್ತೆ ಸೇವಾ ಕ್ಷೇತ್ರ | 23.27 | 155.24 | 179.11 |
| ಪೆರಿಫೆರಲ್ ರಸ್ತೆ ನಿರ್ವಹಣಾ ಕ್ಷೇತ್ರ | 78.00 | 138.29 | 216.29 |
| ಒಟ್ಟು | 471.19 | 1721.21 | 2193 |

ಪ್ರಸ್ತಾವಿತ ಅಂಕಿ–ಅಂಶಗಳನ್ನು ಬಿ.ಎಫ್.ಎಲ್ ಸಂಸ್ಥೆಯು ದಿನಾಂಕ 02.07.1996ರಂದು ಪ್ರತಿಪಾದಿಸಿದ್ದು, ಲೋಕೋಪಯೋಗಿ ಇಲಾಖೆಯು ದಿನಾಂಕ03.06.1997ರಂದು ಈ ವಿವರಗಳನ್ನು ದೃಢೀಕರಿಸಿದೆ. ನೈಸಲ್ ಸಂಸ್ಥೆಯು ದಿನಾಂಕ 11.06.1997ರಂದು ಈ ದೃಢೀಕರಣಕ್ಕೆ ಸಹಮತಿ ವ್ಯಕ್ತಪಡಿಸಿದೆ. ಮುಂದುವರೆದಂತೆ, ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನ ಕಂಡಿಕೆ 51ರ ಅಡಿಯಲ್ಲಿ ಈ ಅಂಕಿ–ಅಂಶಗಳನ್ನು ಪುನರುಚ್ಛಿಸಲಾಗಿದೆ. ಪ್ರಸ್ತಾವಿತ ತೀರ್ಪು ದಿನಾಂಕ 21.09.1998ರಿಂದ ಜಾರಿಯಲ್ಲಿದೆ.

XL. ***ಖಾಸಗಿ ಪಾಲುದಾರರು ಸೋಮಶೇಖರ ರೆಡ್ಡಿ ತೀರ್ಪಿಗೆ ವ್ಯತಿರಿಕ್ತವಾಗಿ ಕೆ.ಐ.ಎ.ಡಿ.ಬಿ. ಮುಖಾಂತರ ವಿವಿಧ ಸ್ತರಗಳಲ್ಲಿ ಸ್ವಾಧೀನಪಡಿಸಿಕೊಂಡಿರುವ ಭೂಮಿಯ ವಿವರಗಳು ಕೆಳಕಂಡಂತಿದೆ:***

1. ಹೊಸೂರು ರಸ್ತೆ ಮತ್ತು ಬನ್ನೇರುಘಟ್ಟ ರಸ್ತೆಯ ಮಧ್ಯ ಭಾಗದಲ್ಲಿ ಕ್ರಿಯಾ ಒಪ್ಪಂದದ ಅನುಗುಣವಾಗಿ ಒಂಭತ್ತು ಗ್ರಾಮಗಳ ವ್ಯಾಪ್ತಿಯಲ್ಲಿ 28 ಸರ್ವೆ ನಂಬರ್‌ಗಳಿಗೆ ಅನ್ವಯಿಸುವ ಸರ್ಕಾರಿ ಜಮೀನಿನ ಬದಲಾಗಿ 3 ಸರ್ವೆ ನಂಬರ್ ವ್ಯಾಪ್ತಿಯ ಎರಡು ಕೆರೆಗಳನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಖಾಸಗಿ ಜಮೀನಿಗೆ ಅನ್ವಯಿಸುವಂತೆ 125 ಸರ್ವೆನಂಬರ್ ವ್ಯಾಪ್ತಿಯ ಜಮೀನಿನ ಬದಲಾಗಿ 75 ಸರ್ವೆ ನಂಬರ್‌ಗಳ ವ್ಯಾಪ್ತಿಯ ಜಮೀನನ್ನು

ಸ್ವಾಧೀನಪಡಿಸಿಕೊಳ್ಳಲಾಗಿದೆ. ಕ್ರೋಢೀಕೃತವಾಗಿ ಕ್ರಿಯಾ ಒಪ್ಪಂದದ ಅನುಗುಣವಾಗಿ 150 ಸರ್ವೆ ನಂಬರ್ ಗಳ 681.16 ಎಕರೆಗಳನ್ನು ಸ್ವಾಧೀನಪಡಿಸಿಕೊಳ್ಳಬೇಕಾಗಿದ್ದು ಇದರ ಬದಲಾಗಿ 72 ಸರ್ವೆ ನಂಬರ್ ಗಳ 300.13 ಎಕರೆಗಳನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. 

2. ಭೂಸ್ವಾಧೀನ ಪ್ರಕ್ರಿಯೆಯಲ್ಲಿ ದಿನಾಂಕ 12.02.2004ರಂದು ಅನುಮೋದಿಸಲಾದ ಓ.ಡಿ.ಪಿ. ಪಥಕ್ಕೆ ಆದ್ಯತೆ ನೀಡಿರುವುದು ಈ ವ್ಯತ್ಯಾಸಗಳಿಗೆ ಕಾರಣವಾಗಿರುವುದನ್ನು ಸಮಿತಿಯು ಗಮನಿಸಿದೆ. ಇದಲ್ಲದೆ ಹೊಸೂರು ರಸ್ತೆ ಮತ್ತು ಬನ್ನೇರುಘಟ್ಟ ರಸ್ತೆ ಮಧ್ಯಂತರದಲ್ಲಿ ಕ್ರಿಯಾ ಒಪ್ಪಂದದಲ್ಲಿ ಪ್ರತಿಪಾದಿಸದೇ ಇರುವ 6 ಗ್ರಾಮಗಳಿಗೆ ಅನ್ವಯಿಸುವಂತೆ 128 ಸರ್ವೆ ನಂಬರ್ ವ್ಯಾಪ್ತಿಯಲ್ಲಿ 277.23 ಎಕರೆಗಳನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ.

3. ಅನುಮೋದಿತ ಓ.ಡಿ.ಪಿ. ಅನುಗುಣವಾಗಿ ಯೋಜನೆಯನ್ನು ಅನುಷ್ಠಾನಗೊಳಿಸುವುದು ಕ್ರಮಬದ್ಧ ಎಂದು ನ್ಯಾಯಾಲಯಗಳು ನಿರ್ಧರಿಸಿರುವುದು ಸಮಿತಿಯ ಗಮನಕ್ಕೆ ಬಂದಿದೆ. ಆದಾಗ್ಯೂ, ನ್ಯಾಯಾಂಗ ನಿಂದನೆ ಪ್ರಕರಣ 96/2007ರಲ್ಲಿ ನೈಸಲ್ ಸಂಸ್ಥೆಯು ಕ್ರಿಯಾಒಪ್ಪಂದಕ್ಕಿಂತ ಹೆಚ್ಚುವರಿಯಾಗಿ ಅಥವಾ ವಿಭಿನ್ನವಾಗಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವುದಿಲ್ಲವೆಂದು ದೃಢೀಕರಿಸಿರುವುದನ್ನು ಸಮಿತಿಯು ಗಮನಿಸಿದೆ. ಈ ಹಿನ್ನೆಲೆಯಲ್ಲಿ, ಪ್ರಸ್ತಾವಿತ ವ್ಯತ್ಯಾಸಗಳು ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿಗೆ ವ್ಯತಿರಿಕ್ತವಾಗಿರುವುದು ಸ್ಪಷ್ಟವಾಗಿದೆ. ವಾಸ್ತವಿಕವಾಗಿ ದಿನಾಂಕ 03.02.2003ರಂದು ನೈಸಲ್ ಸಂಸ್ಥೆಯು ನ್ಯಾಯಾಲಯದ ಆದೇಶಗಳು, ಯೋಜನಾ ಕ್ಷೇತ್ರದ ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿಗತಿಗಳು ಇತ್ಯಾದಿಗಳ ಹಿನ್ನೆಲೆಯಲ್ಲಿ ರಸ್ತೆ ಪಥ ಹಾಗೂ ಇಂಟರ್‌ಚೇಂಜ್‌ಗಳ ಅನುಷ್ಠಾನ ಪ್ರದೇಶಗಳ ಬದಲಾವಣೆ ಅನಿವಾರ್ಯವೆಂದು ವ್ಯಕ್ತಪಡಿಸಿರುತ್ತಾರೆ. ತದನಂತರ ದಿನಾಂಕ 06.08.2003ರಂದು ನಡೆಸಲಾದ ಬಿ.ಎಂ.ಐ.ಸಿ.ಎ.ಪಿ.ಎ. 7ನೇ ಸಭೆಯಲ್ಲಿ ಓ.ಡಿ.ಪಿ. ನಕ್ಷೆಯನ್ನು ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಲು ನಿರ್ಧಾರ ಕೈಗೊಳ್ಳಲಾಗಿದೆ, ತತ್ಸಂಬಂಧವಾಗಿ ದಿನಾಂಕ 12.02.2004ರ ಆದೇಶದ ಮುಖಾಂತರ ಓ.ಡಿ.ಪಿ. ನಕ್ಷೆಗೆ ಅನುಮೋದನೆ ನೀಡಲಾಗಿದೆ. ಅಂದರೆ ಓ.ಡಿ.ಪಿ. ಅನುಮೋದನೆಯ ಪೂರ್ವದಲ್ಲಿ ಬದಲಾವಣೆಗಳ ಬಗ್ಗೆ ದಿನಾಂಕ 03.02.2003ರಂದು ನೈಸಲ್ ಸಂಸ್ಥೆ ಪ್ರತಿಪಾದಿಸಿದೆ. ಈ ಹಿನ್ನೆಲೆಯಲ್ಲಿ, ಅನುಮೋದಿತ ಓ.ಡಿ.ಪಿ.ಗೆ ಅನುಗುಣವಾಗಿ ಯೋಜನಾ ಅನುಷ್ಠಾನದ ವ್ಯಾಪ್ತಿ ಹಾಗೂ ಕ್ಷೇತ್ರ ಬದಲಾಗಿದೆ.

4. ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪು ಹಾಗೂ ಸಂಬಂಧಿತ ಮೇಲ್ಮನವಿಗಳಲ್ಲಿ ಕ್ರಿಯಾ ಒಪ್ಪಂದವನ್ನು ವಾಸ್ತವಿಕವಾಗಿ ಹಾಗೂ ತಾತ್ವಿಕವಾಗಿ ಪಾಲಿಸಬೇಕೆಂದು ನಿರ್ದೇಶಿಸಲಾಗಿದೆ. ಇತರೆ ಸಂಬಂಧಿತ ಪ್ರಕರಣಗಳಲ್ಲಿ ಬಿ.ಎಂ.ಐ.ಸಿ. ಯೋಜನಾ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಭೂಮಿಯ ವಿವಾದ ಇತ್ಯರ್ಥವಾದಂತೆ ಹಾಗೂ ಅಂತಿಮಗೊಂಡಂತೆ ಎಂದು ತೀರ್ಪನ್ನು ನೀಡಿರುವುದು ಸಮಿತಿಯ ಗಮನಕ್ಕೆ ಬಂದಿರುತ್ತದೆ. ಈ ಹಿನ್ನೆಲೆಯಲ್ಲಿ, ಪ್ರಸ್ತಾವಿತ ತೀರ್ಪಿನ ಉಲ್ಲಂಘನೆ ನ್ಯಾಯಾಂಗದ ನಿಂದನೆಯಾಗುತ್ತದೆ. ಸಮಿತಿಯ ಲಭ್ಯವಿರುವ ದಾಖಲಾತಿಗಳ ಅನುಗುಣವಾಗಿ ದಿನಾಂಕ 31.03.2010ರಂದು ನೈಸಲ್ ಸಂಸ್ಥೆಯವರು ಸದಸ್ಯ ಕಾರ್ಯದರ್ಶಿ, ಬಿ.ಎಂ.ಐ.ಸಿ.ಎ.ಪಿ.ಎ. ಇವರಿಗೆ ವಿಧಿಸಬಹುದಾದ ಕರ ಹಾಗೂ ಉಪಕರಗಳಿಂದ ವಿನಾಯಿತಿ ನೀಡುವಂತೆ ಕೋರಿ ಪತ್ರವನ್ನು ಬರೆದಿರುತ್ತಾರೆ. ಈ ಪತ್ರದಲ್ಲಿ ಅವಶ್ಯಕವಿರುವ 20.193 ಎಕರೆ ವಿಸ್ತೀರ್ಣದ ಜಮೀನಿನ ವಿವರಗಳನ್ನು

ಅಡಕಗೊಳಿಸಿರುತ್ತಾರೆ. ಪ್ರಾಸಂಗಿಕವಾಗಿ ಈ ವಿಸ್ತೀರ್ಣವು ಕ್ರಿಯಾ ಒಪ್ಪಂದ ಹಾಗೂ ಮಾನ್ಯ ಉಚ್ಛ ನ್ಯಾಯಾಲಯದ ವಿಭಾಗೀಯ ಪೀಠದ ಹಾಗೂ ಸರ್ವೋಚ್ಛ ನ್ಯಾಯಾಲಯದ ನಿರ್ದೇಶನಗಳಿಗೆ ಅನುಗುಣವಾಗಿದೆ ಎಂದು ಉಲ್ಲೇಖಿಸಿರುತ್ತಾರೆ. ಆದರೆ, ವಾಸ್ತವಿಕವಾಗಿ ಸಲ್ಲಿಸಲಾದ ವಿವರಗಳು ವಿಭಿನ್ನವಾಗಿರುತ್ತದೆ.

ಇದೇ ಪತ್ರದ ಕಂಡಿಕೆ 2ರಲ್ಲಿ ಕರ್ನಾಟಕ ಸರ್ಕಾರವು ಅನುಮೋದಿಸಿರುವ ಓ.ಡಿ.ಪಿ. ಪ್ರತಿಯನ್ನು ಲಗತ್ತಿಸಿರುವುದಾಗಿ ಉಲ್ಲೇಖಿಸಲಾಗಿದೆ. ಮುಂದುವರೆದಂತೆ, ಅಡಕ–1 ರಲ್ಲಿ ಓ.ಡಿ.ಪಿ. ಅನುಗುಣವಾಗಿ ಅವಶ್ಯಕವಿರುವ ಜಮೀನಿನ ಸರ್ವೆ ನಂಬರ್‌ಗಳನ್ನು ನಮೂದಿಸಿರುವುದಾಗಿ ತಿಳಿಸಲಾಗಿದೆ. ಈ ಎರಡೂ ಅಂಶಗಳನ್ನು ಗಮನಿಸಿದಾಗ ನೈಸಲ್ ಸಂಸ್ಥೆಯ ಪ್ರತಿಪಾದನೆಗಳಲ್ಲಿ ವಾಸ್ತವಿಕ ಲೋಪದೋಷಗಳಿರುವುದು ಸ್ಪಷ್ಟವಾಗಿದೆ. ಏಕೆಂದರೆ, ಈಗಾಗಲೇ ಈ ವರದಿಯಲ್ಲಿ ಉಲ್ಲೇಖಿಸಿರುವಂತೆ ಕ್ರಿಯಾ ಒಪ್ಪಂದ ಹಾಗೂ ಓ.ಡಿ.ಪಿ. ಅನುಷ್ಠಾನ ಪ್ರದೇಶಗಳಲ್ಲಿ ಹಾಗೂ ವಿಸ್ತೀರ್ಣಗಳಲ್ಲಿ ವ್ಯಾಪಕ ವ್ಯತ್ಯಾಸವಿದೆ. ಈ ಹಿನ್ನೆಲೆಯಲ್ಲಿ, ನೈಸಲ್ ಸಂಸ್ಥೆಯು ಕ್ರಿಯಾ ಒಪ್ಪಂದ ಹಾಗೂ ನ್ಯಾಯಾಲಯದ ತೀರ್ಪುಗಳನ್ನು ಪ್ರತಿಪಾದಿಸಿರುವುದು ಅಸಮರ್ಪಕವಾಗಿರುತ್ತದೆ. *ಇದಲ್ಲದೆ ಈ ಉಲ್ಲೇಖಗಳ ಹಿನ್ನೆಲೆಯಲ್ಲಿ ಪ್ರಸ್ತಾವನೆಯನ್ನು ದೃಢೀಕರಿಸಲು ನೈಸಲ್ ಸಂಸ್ಥೆ ಪ್ರಯತ್ನಿಸಿದೆ ಎಂಬುದು ವ್ಯಕ್ತವಾಗುತ್ತದೆ. ಏಕೆಂದರೆ, ಈ ಪತ್ರದ ಅಡಕ–1 ಹಾಗೂ 2 ವಾಸ್ತವಿಕವಾಗಿ ಕ್ರಿಯಾ ಒಪ್ಪಂದದ ಅನುಗುಣವಾಗಿರುವುದಿಲ್ಲ. ಈ ಅಂಶಗಳಿಂದ ನೈಸಲ್ ಸಂಸ್ಥೆಯು ಪ್ರಯತ್ನ ಪೂರ್ವಕವಾಗಿ ನ್ಯಾಯಾಲಯದ ತೀರ್ಪುಗಳನ್ನು ಅಸಂಬದ್ಧವಾಗಿ ಉಲ್ಲೇಖಿಸಿರುವುದು ಸ್ಪಷ್ಟವಾಗುತ್ತದೆ. ಆದುದರಿಂದ ಪ್ರಸ್ತಾವಿತ ಉಲ್ಲೇಖದ ಆಧಾರದ ಮೇಲೆ ನೈಸಲ್ ಸಂಸ್ಥೆಯ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕರಣವನ್ನು ದಾಖಲಿಸುವ ಪ್ರಸ್ತಾವನೆಯನ್ನು ಪರಿಗಣಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.* ಮುಂದುವರೆದಂತೆ, ಕಾನೂನು ಇಲಾಖೆಯ ಅಭಿಪ್ರಾಯದ ಅನುಗುಣವಾಗಿ ಕ್ರಿಯಾ ಒಪ್ಪಂದವನ್ನು ಮೂಲಭೂತವಾಗಿ ಸಚಿವ ಸಂಪುಟವು ಅನುಮೋದಿಸಿರುವ ಹಿನ್ನೆಲೆಯಲ್ಲಿ ಕ್ರಿಯಾ ಒಪ್ಪಂದದ ಉಲ್ಲೇಖಗಳು, ಷರತ್ತುಗಳು ಹಾಗೂ ಸಂಬಂಧಿತ ಅನುಚ್ಛೇದಗಳಲ್ಲಿ ಮಾರ್ಪಾಡು, ತಿದ್ದುಪಡಿ ಅಥವಾ ಪರಿಷ್ಕರಣೆಯನ್ನು ಜಾರಿಗೊಳಿಸಲು ಸಚಿವ ಸಂಪುಟದ ಅನುಮೋದನೆಯ ಅವಶ್ಯಕತೆಯಿರುತ್ತದೆ. ಈ ಹಿನ್ನೆಲೆಯಲ್ಲಿ, ಓ.ಡಿ.ಪಿ. ಮುಖಾಂತರ ಇತ್ಯರ್ಥಗೊಳಿಸಲಾದ ರಸ್ತೆಯ ಪಥದ ಬದಲಾವಣೆ ಹಾಗೂ ತತ್ಸಂಬಂಧವಾಗಿ ಅವಶ್ಯಕವಿರುವ ಜಮೀನಿನ ವಿಸ್ತೀರ್ಣ ಹಾಗೂ ಸ್ಥಳದ ಬದಲಾವಣೆಯು ಸಹ ಸಚಿವ ಸಂಪುಟದ ಸಹಮತಿ ಅಥವಾ ಅನುಮೋದನೆಯ ನಿರ್ಬಂದನೆಗೆ ಒಳಪಟ್ಟಿರುತ್ತದೆ. ಏಕೆಂದರೆ, ಕ್ರಿಯಾ ಒಪ್ಪಂದ ಹಾಗೂ ಅದಕ್ಕನುಗುಣವಾಗಿ ಭಾರತ್ ಫೋರ್ಜ್ ಲಿಮಿಟೆಡ್ ಸಲ್ಲಿಸಿರುವ ಜಮೀನಿನ ಸರ್ವೆ ನಂಬರುಗಳು, ಸಂಬಂಧಿತ ಗ್ರಾಮಗಳು ಹಾಗೂ ವಿಸ್ತೀರ್ಣಗಳಲ್ಲಿ ಓ.ಡಿ.ಪಿ. ಅನುಷ್ಠಾನದಿಂದಾಗಿ ವ್ಯಾಪಕ ಬದಲಾವಣೆಗಳಾಗಿದೆ. *ಮಾನ್ಯ ಉಚ್ಛ ನ್ಯಾಯಾಲಯ ಓ.ಡಿ.ಪಿ. ಅನುಗುಣವಾಗಿ ಯೋಜನಾ ಅನುಷ್ಠಾನವನ್ನು ಜಾರಿಗೊಳಿಸುವಂತೆ ತೀರ್ಪು ನೀಡಿರುವುದನ್ನು ಸಮಿತಿಯ ಗಮನಿಸಿದೆ. ಆದಾಗ್ಯೂ ಖಾಸಗಿ ಸಹಭಾಗಿತ್ವದಲ್ಲಿ ನಿರ್ದಿಷ್ಟ ಕ್ರಿಯಾ ಒಪ್ಪಂದದ ವ್ಯಾಪ್ತಿಯಲ್ಲಿ ಬಿ.ಎಂ.ಐ.ಸಿ. ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಲೋಕೋಪಯೋಗಿ ಇಲಾಖೆಗೆ ಸಮಗ್ರ ಸಮನ್ವಯತೆಯ ಜವಾಬ್ದಾರಿಯನ್ನು ವಹಿಸಲಾಗಿದೆ. ಈ ಹಿನ್ನೆಲೆಯಲ್ಲಿ, ಬಿ.ಎಂ.ಐ.ಸಿ.ಪಿ. ಪ್ರಾಧಿಕಾರವು ಓ.ಡಿ.ಪಿ. ಪ್ರಸ್ತಾವನೆಯನ್ನು ಪರಿಗಣನೆಗೆ ಸಲ್ಲಿಸುವ ಪೂರ್ವದಲ್ಲಿ ಅಥವಾ ಕೆ.ಟಿ.ಸಿ.ಪಿ. ಅಧಿನಿಯಮದಡಿ ಸಂಸ್ಕರಿಸುವ ಪೂರ್ವದಲ್ಲಿ ಲೋಕೋಪಯೋಗಿ ಇಲಾಖೆಯ ಸಹಮತಿಯನ್ನು ಪಡೆಯುವುದು ಅತ್ಯವಶ್ಯಕವಾಗಿತ್ತು.*

ಇದಲ್ಲದೆ, ಪ್ರಸ್ತಾವಿತ ಅನುಮೋದಿತ ಓ.ಡಿ.ಪಿ.ಯ ಅಧ್ಯಾಯ-6 ಅನ್ನು ಅವಲೋಕಿಸಿದಾಗ ಯೋಜನೆಯಡಿಯಲ್ಲಿ ಅಭಿವೃದ್ಧಿಪಡಿಸಬೇಕಾದ 5 ನಗರ ಸಮುಚ್ಚಯಗಳ ಅಭಿವೃದ್ಧಿಗೆ ಅವಶ್ಯಕವಿರುವ ಜಮೀನಿನಲ್ಲಿ ವ್ಯತ್ಯಾಸಗಳಿರುವುದು ಸ್ಪಷ್ಟವಾಗಿದೆ. ವಿವರಗಳು ಕೆಳಕಂಡಂತಿವೆ:

| ನಗರ ಸಮುಚ್ಚಯ | ಓ.ಡಿ.ಪಿ. | ಷೆಡ್ಯೂಲ್ -1 ಕ್ರಿಯಾ ಒಪ್ಪಂದ | ಓ.ಡಿ.ಪಿ. ಹಾಗೂ ಕ್ರಿಯಾ ಒಪ್ಪಂದದ ನಡುವಿನ ವ್ಯತ್ಯಾಸ |
|---|---|---|---|
| 1 | 3014.62 | 2775 | + 239.62 |
| 2 | 2026.22 | 1836 | + 190.22 |
| 4 | 1729.70 | 1615 | + 114.70 |
| 5 | 1482.60 | 2682 | -1199.40 |
| 7 | 2471,00 | 4286 | -1815,00 |
| ಒಟ್ಟು | 10724.14 | 13194 | -2469.86 |

ಈ ಅಂಕಿ-ಅಂಶಗಳನ್ನು ಗಮನಿಸಿದಾಗ ಕ್ರಿಯಾ ಒಪ್ಪಂದದ ಅನುಗುಣವಾಗಿ ನಗರ ಸಮುಚ್ಚಯಗಳ ಅಭಿವೃದ್ಧಿಗೆ ಕ್ರಿಯಾ ಒಪ್ಪಂದದಲ್ಲಿ ನಮೂದಿಸಿರುವ 13.194 ಎಕರೆಗಳ ಬದಲಾಗಿ 10,724 ಎಕರೆಗಳ ಅವಶ್ಯಕತೆಯ ಬಗ್ಗೆ ಓ.ಡಿ.ಪಿ. ಮುಖಾಂತರ ಪ್ರತಿಪಾದಿಸಲಾಗಿದೆ. ಅಂದರೆ, ನಗರ ಸಮುಚ್ಚಯಗಳ ಅಭಿವೃದ್ಧಿಗೆ 2,469 ಎಕರೆಗಳನ್ನು ಕಡಿತಗೊಳಿಸಲಾಗಿದೆ. ಕ್ರಿಯಾ ಒಪ್ಪಂದದ ಅನುಗುಣವಾಗಿ ಸಮಗ್ರ ಯೋಜನಾ ಅನುಷ್ಠಾನಕ್ಕೆ 20.193 ಎಕರೆಗಳ ಅವಶ್ಯಕತೆ ಇದ್ದು ಸರ್ಕಾರ ಹಾಗೂ ಖಾಸಗಿ ಪಾಲುದಾರರು ಇದಕ್ಕೆ ಬದ್ಧರಾಗಿರುತ್ತಾರೆ. *ಆದರೆ, ಓ.ಡಿ.ಪಿ. ಮುಖಾಂತರ ಜಾರಿಗೊಳಿಸಲಾದ ಬದಲಾವಣೆಯಿಂದಾಗಿ ಖಾಸಗಿ ಪಾಲುದಾರರು ನಗರ ಸಮುಚ್ಚಯಗಳಲ್ಲಿ ಕಡಿತಗೊಳಿಸಿರುವ ಅವಶ್ಯಕತೆಯನ್ನು ಎಕ್ಸ್ ಪ್ರೆಸ್ ವೇ ನಿರ್ಮಾಣ ಅಥವಾ ಸೆಕ್ಷನ್-ಎ ವ್ಯಾಪ್ತಿಯಲ್ಲಿ ಬರುವ ಪೆರಿಫೆರಲ್ ರಸ್ತೆ, ಲಿಂಕ್ ರಸ್ತೆ ಹಾಗೂ ಪ್ರಥಮ ಸ್ತರದ ವೇಗದ ಹೆದ್ದಾರಿ ಅಡಿಯಲ್ಲಿ ಹೆಚ್ಚುವರಿಯಾಗಿ ಪಡೆಯುವ ಸಾಧ್ಯತೆ ಇರುತ್ತದೆ. ಸಮಗ್ರವಾಗಿ 20,193 ಎಕರೆಗಳ ಮಿತಿಗೆ ಅವಶ್ಯಕತೆಯನ್ನು ಸೀಮಿತಗೊಳಿಸಿ ಘಟಕಾವಾರು ಅನುಷ್ಠಾನದ ಅವಶ್ಯಕತೆಯನ್ನು ಕ್ರಿಯಾ ಒಪ್ಪಂದ ಹಾಗೂ ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನ ಕಂಡಿಕೆ 7ಕ್ಕೆ ವ್ಯತಿರಿಕ್ತವಾಗಿ ಬದಲಾಯಿಸಿರುವುದು ಸ್ಪಷ್ಟವಾಗಿದೆ. ಇದರಿಂದಾಗಿ ಖಾಸಗಿ ಪಾಲುದಾರರು ವಾಸ್ತವಿಕ ಅವಶ್ಯಕತೆಗಿಂತ ಭೂಮಿಯ ಮೌಲ್ಯದ ಆಧಾರದ ಮೇಲೆ ಮುಂಬರುವ ದಿನಗಳಲ್ಲಿ ಸ್ವಾಧೀನ ಪ್ರಕ್ರಿಯೆಯನ್ನು ಜಾರಿಗೊಳಿಸುವ ಸಾಧ್ಯತೆ ಇರುತ್ತದೆ. ಈಗಾಗಲೇ ಸೆಕ್ಷನ್-ಎ ವ್ಯಾಪ್ತಿಯಲ್ಲಿ ಕ್ರಿಯಾ ಒಪ್ಪಂದವನ್ನು ಉಪೇಕ್ಷಿಸಿ ಅನಧಿಕೃತವಾಗಿ ಜಂಟಿ ಅಭಿವೃದ್ಧಿ ಒಡಂಬಡಿಕೆ, ಮಾರಾಟ ಒಡಂಬಡಿಕೆ, ಅಡಮಾನ, ಇತ್ಯಾದಿ ವಹಿವಾಟುಗಳ ಮೂಲಕ ಖಾಸಗಿ ಪಾಲುದಾರರು ಜಾರಿಗೊಳಿಸಿರುವ ವಹಿವಾಟಿನ ಮೌಲ್ಯದ ಬಗ್ಗೆ ಈ ವರದಿಯಲ್ಲಿ ಪ್ರತಿಪಾದಿಸಲಾಗಿದೆ. ಈ ಪ್ರವೃತ್ತಿಯನ್ನು ಗಮನಿಸಿದರೆ ನೈಸ್ ಸಂಸ್ಥೆಯು ಉದ್ದೇಶಪೂರ್ವಕವಾಗಿ ಟೌನ್ ಶಿಪ್ ಜಮೀನಿನ ಅವಶ್ಯಕತೆಯನ್ನು ಕಡಿತಗೊಳಿಸಿ ಅದೇ ಪ್ರಮಾಣದಲ್ಲಿ ಬೆಂಗಳೂರಿನ ಆಸುಪಾಸಿನ ಸೆಕ್ಷನ್ 'ಎ' ವ್ಯಾಪ್ತಿಯಲ್ಲಿ ಹೆಚ್ಚುವರಿ ಜಮೀನನ್ನು ಪಡೆಯಲು ಸಿದ್ಧತೆಯನ್ನು ಮಾಡಿದ್ದಾರೆಂಬ ಅಭಿಪ್ರಾಯವು ವ್ಯಕ್ತವಾಗುತ್ತದೆ. ಆದುದರಿಂದ ಸರ್ಕಾರವು ಈ ಪ್ರವೃತ್ತಿಯನ್ನು ನಿಯಂತ್ರಿಸಲು ಸರ್ಕಾರವು ಯೋಜನಾ ಅನುಷ್ಠಾನದ ಇತರೆ ಸ್ತರಗಳ ವಾಸ್ತವಿಕ ಅವಶ್ಯಕತೆಗಳ ಆಧಾರದ ಮೇಲೆ ಜಮೀನನ್ನು ನೀಡಲು ಕ್ರಮ ಕೈಗೊಳ್ಳಲು ನಿಗಾವಹಿಸುವ ಶಿಫಾರಸ್ಸು ಮಾಡುತ್ತದೆ.*

ಕಾನೂನು ಇಲಾಖೆಯ ದಿನಾಂಕ 23.04.1999ರ ಅನಧಿಕೃತ ಟಿಪ್ಪಣಿಯ ಅನುಗುಣವಾಗಿ ಆಡಳಿತಾತ್ಮಕ ಇಲಾಖೆಗಳು ಕ್ರಿಯಾ ಒಪ್ಪಂದಕ್ಕೆ ಯಾವುದೇ ಬದಲಾವಣೆ ಅಥವಾ ತಿದ್ದುಪಡಿಗಳನ್ನು ಜಾರಿಗೊಳಿಸುವ ಪೂರ್ವದಲ್ಲಿ ಈ ಕೆಳಕಂಡ ಅಂಶಗಳನ್ನು ಪರಿಗಣಿಸಬೇಕಾಗುವುದು.

a. ಮೂಲ ಒಪ್ಪಂದದ ಮೇಲಾಗುವ ಪರಿಣಾಮ.

b. ಯೋಜನೆಯ ಮೇಲಾಗುವ ಪರಿಣಾಮ.

c. ಇತರೆ ಆರ್ಥಿಕ ಪರಿಣಾಮಗಳು.

ಪ್ರಸ್ತಾವಿತ ಅಂಶಗಳನ್ನು ವಿಶ್ಲೇಷಿಸಿ ಮಾರ್ಪಾಡು, ತಿದ್ದುಪಡಿ ಅಥವಾ ಪರಿಷ್ಕರಣೆಯ ಪ್ರಸ್ತಾವನೆಯನ್ನು ಸಚಿವ ಸಂಪುಟಕ್ಕೆ ಸಲ್ಲಿಸಬೇಕಾಗುವುದು. ಕಾನೂನು ಇಲಾಖೆಯು ಸಚಿವ ಸಂಪುಟ ಅನುಮೋದನೆ ಇಲ್ಲದೇ ಮಾರ್ಪಾಡುಗಳನ್ನು ಅನುಷ್ಠಾನಗೊಳಿಸುವುದನ್ನು ನಿರ್ಬಂಧಿಸಿದೆ. ಈ ನಿರ್ದೇಶನಗಳನ್ನು ಪರಿಗಣಿಸದೆ ಓ.ಡಿ.ಪಿ. ಅನುಮೋದನೆಯನ್ನು ನೀಡಲಾಗಿದೆ. ದಿನಾಂಕ06.08.2003ರಂದು ನಡೆಸಲಾದ ಬಿ.ಎಂ.ಐ.ಸಿ.ಎ.ಪಿ.ಎ ಸಭೆಯಲ್ಲಿ ವಿಶೇಷ ಆಹ್ವಾನಿತರಾಗಿ ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, ಇವರು ಉಪಸ್ಥಿತರಿದ್ದು, ಪ್ರಸ್ತಾವಿತ ಸಭೆಯಲ್ಲಿ ಓ.ಡಿ.ಪಿ. ನಕ್ಷೆಯನ್ನು ಸೂಚಿತ ಮಾರ್ಪಾಡುಗಳೊಂದಿಗೆ ಸರ್ಕಾರಕ್ಕೆ ಅನುಮೋದನೆಗಾಗಿ ಸಲ್ಲಿಸಲು ನಿರ್ಧರಿಸಲಾಗಿದೆ. ಪ್ರಸ್ತಾವಿತ ಸಭೆ ನಡಾವಳಿಗಳನ್ನು ಆಕ್ಷೇಪಿಸಿದಾಗ ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, ಇವರು ಓ.ಡಿ.ಪಿ. ಅನುಮೋದನೆ ಬಗ್ಗೆ ಕ್ರಿಯಾ ಒಪ್ಪಂದದ ಹಿನ್ನೆಲೆಯಲ್ಲಿ ಸ್ಪಷ್ಟೀಕರಣ ನೀಡಿರುವ ಬಗ್ಗೆಯಾಗಲೀ ಅಥವಾ ಆಕ್ಷೇಪಿಸಿರುವ ಬಗ್ಗೆ ಯಾವುದೇ ಉಲ್ಲೇಖವಿರುವುದಿಲ್ಲ. ಈ ಹಿನ್ನೆಲೆಯಲ್ಲಿ, ಓ.ಡಿ.ಪಿ. ಅನುಮೋದನೆಯಲ್ಲಿ ಲೋಕೋಪಯೋಗಿ ಇಲಾಖೆ ನಿರ್ಲಕ್ಷ್ಯತಾ ಧೋರಣೆಯನ್ನು ತಳೆದಿರುವುದು ಸ್ಪಷ್ಟವಾಗಿರುತ್ತದೆ. ***ಆದುದರಿಂದ, ಕರ್ತವ್ಯಲೋಪದ ಆಧಾರದ ಮೇಲೆ ಓ.ಡಿ.ಪಿ. ಸಂಸ್ಕರಣೆಗೆ ಸಂಬಂಧಿಸಿದ ಸಭೆಗಳಲ್ಲಿ ಪಾಲ್ಗೊಂಡ ಲೋಕೋಪಯೋಗಿ ಇಲಾಖೆಯ ಅಧಿಕಾರಿ ವರ್ಗದವರನ್ನು ಗುರುತಿಸಿ ಕರ್ತವ್ಯಲೋಪದ ಆಧಾರದ ಮೇಲೆ ಕಠಿಣ ಶಿಸ್ತಿನ ಕ್ರಮಕೈಗೊಳ್ಳಬೇಕೆಂದು ಸಮಿತಿಯ ಶಿಫಾರಸ್ಸು ಮಾಡುತ್ತದೆ.***

ಓ.ಡಿ.ಪಿ. ಅನುಮೋದನೆ ಹಾಗೂ ರಸ್ತೆ ಪಥದ ಬದಲಾವಣೆಯಲ್ಲಿ ಅಧಿಕಾರದತ್ತ ಸಮಿತಿಯ ಪಾತ್ರವನ್ನು ಸಮಿತಿ ವಿಶ್ಲೇಷಿಸಿದೆ. ದಿನಾಂಕ10.02.1999ರಂದು ನಡೆದ 3ನೇ ಅಧಿಕಾರದತ್ತ ಸಮಿತಿಯ ಸಭೆಯಲ್ಲಿ ಮುಖ್ಯ ಕಾರ್ಯದರ್ಶಿಗಳು ಲಿಂಕ್ ರಸ್ತೆ ಮತ್ತು ಪೆರಿಫೆರಲ್ ರಸ್ತೆಯ ಪಥಗಳನ್ನು ಬಿ.ಡಿ.ಎ. ಸಿ.ಡಿ.ಪಿಯಲ್ಲಿ ಸೇರ್ಪಡೆ ಮಾಡುವಂತೆ ನಿರ್ದೇಶಿಸಿರುತ್ತಾರೆ. ಇದನ್ನು ಹೊರತುಪಡಿಸಿ ಪೆರಿಫೆರಲ್ ರಸ್ತೆ ಮತ್ತು ಲಿಂಕ್ ರಸ್ತೆ ಪಂಕ್ತೀಕರಣವನ್ನು ಬದಲಾಯಿಸಿ ಓ.ಡಿ.ಪಿ. ತಯಾರಿಸುವ ಬಗ್ಗೆ ಅಧಿಕಾರದತ್ತ ಸಮಿತಿ ಶಿಫಾರಸ್ಸು ಮಾಡಿರುವ ಬಗ್ಗೆ ಉಲ್ಲೇಖಗಳಿರುವುದಿಲ್ಲ. ಅಂದರೆ, ಓ.ಡಿ.ಪಿ. ಸಂಸ್ಕರಣೆ ಹಾಗೂ ಅನುಮೋದನೆ ಬಗ್ಗೆ ಅಧಿಕಾರದತ್ತ ಸಮಿತಿ ಯಾವುದೇ ಚರ್ಚೆ ಅಥವಾ ನಿರ್ಧಾರ ಕೈಗೊಂಡಿರುವ ಬಗ್ಗೆ ನಿರ್ದಿಷ್ಟ ಮಾಹಿತಿ ಇರುವುದಿಲ್ಲ. ಅಧಿಕಾರದತ್ತ ಸಮಿತಿಯ ಪರಿಗಣನೆಗೆ ಪ್ರಸ್ತಾವನೆಯನ್ನು ಸಲ್ಲಿಸಿರುವುದಿಲ್ಲ. ಇದೊಂದು ಗುರುತರ ವೈಫಲ್ಯವಾಗಿರುತ್ತದೆ. ಏಕೆಂದರೆ, ಕ್ರಿಯಾ ಒಪ್ಪಂದದ ಅನುಚ್ಛೇದ-4ರಡಿಯಲ್ಲಿ ಅಧಿಕಾರದತ್ತ ಸಮಿತಿಯನ್ನು ಸೃಜಿಸಲಾಗಿದ್ದು ಕ್ರಿಯಾ ಒಪ್ಪಂದದ ಷೆಡ್ಯೂಲ್ -6ನಲ್ಲಿ ಇರುವ ಉಲ್ಲೇಖಗಳ ಅನುಗುಣವಾಗಿ ಅಧಿಕಾರದತ್ತ ಸಮಿತಿ ಕಾರ್ಯವನ್ನು ನಿರ್ವಹಿಸಬೇಕಾಗುವುದು. ಇದಲ್ಲದೆ ಕ್ರಿಯಾ ಒಪ್ಪಂದದ ಅನುಚ್ಛೇದ-4.1.2.1ರ ಅನುಗುಣವಾಗಿ ಅಧಿಕಾರದತ್ತ ಸಮಿತಿಯನ್ನು ಸಮಗ್ರ ತೀರುವಳಿ ಹಾಗೂ ಅನುಮೋದನೆಗಳನ್ನು ಪಡೆಯಲು ಸೃಜಿಸಿರುವ "ಏಕಗವಾಕ್ಷಿ ಸಮನ್ವಯ ಕೇಂದ್ರ" ಎಂದು ಪರಿಗಣಿಸಲಾಗಿದೆ. ಇದಲ್ಲದೆ ಪ್ರಮುಖವಾಗಿ ಅನುಚ್ಛೇದ-4.1.2.2ರ ಅನುಗುಣವಾಗಿ ಅಧಿಕಾರದತ್ತ ಸಮಿತಿಯು ಕ್ರಿಯಾ ಒಪ್ಪಂದದ ನಿಖರ ಪಾಲನೆಯ ಜವಾಬ್ದಾರಿಯನ್ನು ನಿರ್ವಹಿಸಬೇಕಾಗುವುದು. ಈ ಹಿನ್ನೆಲೆಯಲ್ಲಿ, ಅಧಿಕಾರದತ್ತ ಸಮಿತಿಯು ಕ್ರಿಯಾ ಒಪ್ಪಂದದಿಂದ ಪ್ರಮುಖ ಬದಲಾವಣೆ ಸ್ವರೂಪದಲ್ಲಿರುವ ಓ.ಡಿ.ಪಿ. ಅನುಮೋದನೆಯಲ್ಲಿ ಪಾಲ್ಗೊಳ್ಳದೆ ಇರುವುದು ಪ್ರಮುಖ ವೈಫಲ್ಯತೆಯಾಗಿದೆ. ಅಧಿಕಾರದತ್ತ

ಸಮಿತಿಯಲ್ಲಿ ಯೋಜನಾ ಅನುಷ್ಠಾನದ ಭಾಗಿಗಳಾಗಿರುವ ಎಲ್ಲಾ ಇಲಾಖೆಗಳ/ಸಂಸ್ಥೆಗಳು ಮುಖ್ಯಸ್ಥರು/ಪ್ರಧಾನ ಕಾರ್ಯದರ್ಶಿಗಳು/ಅಧ್ಯಕ್ಷರು ಸದಸ್ಯರಾಗಿರುತ್ತಾರೆ. ಅಂದರೆ, ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿಗಳು ಸಹ ಈ ಸಮಿತಿಯ ಸದಸ್ಯರಾಗಿರುತ್ತಾರೆ. ಇದೇ ಸಾಮರ್ಥ್ಯದಲ್ಲಿ ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿ ಅಥವಾ ಅವರ ಪ್ರತಿನಿಧಿತ್ವ ಹೊಂದಿರುವ ಅಧಿಕಾರಿ ಬಿ.ಎಂ.ಐ.ಎ.ಪಿ.ಎ ಸಭೆಯಲ್ಲಿ ಸಹ ಭಾಗವಹಿಸುತ್ತಾರೆ. ಆದಾಗ್ಯೂ, ಅಧಿಕಾರದತ್ತ ಸಮತಿಯ ಗಮನಕ್ಕೆ ತರದೇ ಅಥವಾ ಗಮನಕ್ಕೆ ಬಾರದೇ ಓ.ಡಿ,ಪಿ. ಅನುಮೋದನೆಯಾಗಿರುವುದು ಗುರುತರ ಅಕ್ರಮವಾಗಿದೆ. ಅಧಿಕಾರದತ್ತ ಸಮಿತಿ ಕಾರ್ಯದರ್ಶಿ ಮಟ್ಟದ ನಗರಾಭಿವೃದ್ಧಿ ಇಲಾಖೆಯ ಪ್ರತಿನಿಧಿಗಳನ್ನೂ ಸಹ ಒಳಗೊಂಡಿರುತ್ತದೆ. ಇವರೂ ಸಹ ಓ.ಡಿ.ಪಿ. ಅನುಮೋದನೆಯ ಪ್ರಸ್ತಾವನೆಯನ್ನು ಅಧಿಕಾರದತ್ತ ಸಮಿತಿಗೆ ಕನಿಷ್ಟಪಕ್ಷ ಸಾಂಕೇತಿಕವಾಗಿಯೂ ಸಲ್ಲಿಸಿರುವುದಿಲ್ಲ. ಸಮಗ್ರ ಬೆಳವಣಿಗೆಗಳನ್ನು ಅವಲೋಕಿಸಿದಾಗ ಲೋಕೋಪಯೋಗಿ ಇಲಾಖೆ, ನಗರಾಭಿವೃದ್ಧಿ ಇಲಾಖೆ, ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆಯ ನಡುವೆ ಸಮನ್ವಯತೆಯ ಕೊರತೆಯಿರುವುದು ಸ್ಪಷ್ಟವಾಗಿದೆ. ***ಈ ಲೋಪವನ್ನು ಸರಿದೂಗಿಸಲು ಅಧಿಕಾರದತ್ತ ಸಮಿತಿ ಸಮರ್ಪಕ ಮಾಧ್ಯಮವಾಗಿರುತ್ತದೆ. ಆದರೆ, ಅಧಿಕಾರದತ್ತ ಸಮಿತಿಗೂ ಸಹ ಓ.ಡಿ.ಪಿ. ಅಂತಹ ಸಂದಿಗ್ಧ ಹಾಗೂ ಸೂಕ್ಷ್ಮಕರ ಬೆಳವಣಿಗೆಗಳನ್ನು ತಿಳಿಸುವಲ್ಲಿ ಎಲ್ಲಾ ಇಲಾಖೆಗಳು ವಿಫಲವಾಗಿರುವುದು ಸ್ಪಷ್ಟವಾಗಿದೆ. ಆದುದರಿಂದ 2003-04 ಹಾಗೂ 2004-05ನೇ ಸಾಲಿನಲ್ಲಿ ಅಧಿಕಾರದತ್ತ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ ಲೋಕೋಪಯೋಗಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಗಳ ಹಾಗೂನಗರಾಭಿವೃದ್ಧಿ ಇಲಾಖೆಯ ಪ್ರತಿನಿಧಿಗಳ ವಿರುದ್ಧ ಶಿಸ್ತಿನ ಕ್ರಮ ಜರುಗಿಸಬೇಕೆಂದು ಸಮಿತಿಯು ಆಗ್ರಹಿಸುತ್ತದೆ,***

## XLI. ಓ.ಡಿ.ಪಿ. ಪಂಕ್ತೀಕರಣದಲ್ಲಿ ಖಾಸಗಿ ಪಾಲುದಾರರ ಪಾತ್ರ

ರಾಜ್ಯ ಸರ್ಕಾರವು 03.06.1997ರ ಕಾರ್ಯದರ್ಶಿ, ಲೋಕೋಪಯೋಗಿ ಇವರ ಪತ್ರದಲ್ಲಿ ಅನುಮೋದಿಸಲಾದ ಪಂಕ್ತೀಕರಣದ ಅನುಗುಣವಾಗಿ ಜಮೀನನ್ನು ಗುರುತಿಸುವಂತೆ ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ, ಮಂಡ್ಯ ಹಾಗೂ ಮೈಸೂರು ಜಿಲ್ಲೆಗಳಿಗೆ ತಿಳಿಸಿದೆ. ಈ ವಿವರಗಳು ಕ್ರಿಯಾ ಒಪ್ಪಂದದ ಅನುಚ್ಛೇಧ-1 ಹಾಗೂ ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನ ಕಂಡಿಕೆ 51 ರ ಅನುಗುಣವಾಗಿದೆ. ಈ ಜಮೀನಿನ ವಿವರಗಳನ್ನು ಖಾಸಗಿ ಪಾಲುದಾರರು 02.07.1996 ಹಾಗೂ 14.11.1996 ರಂದು ನೀಡಿದ ವಿವರಗಳ ಅನುಗುಣವಾಗಿ ಇತ್ಯರ್ಥ ಮಾಡಲಾಗಿದೆ. 27.03.1997 ರಂದು ಸಚಿವ ಸಂಪುಟವು ಕ್ರಿಯಾ ಒಪ್ಪಂದದ ಅನುಚ್ಛೇಧ-1 ಅನುಗುಣವಾಗಿ ಈ ಪ್ರಸ್ತಾವನೆಯನ್ನು ಅನುಮೋದಿಸಿದೆ. ಆದರೆ 12.02.2004 ರಂದು ಅನುಮೋದಿತವಾದ ಓ.ಡಿ.ಪಿ. ಮುಖಾಂತರ ಪಂಕ್ತೀಕರಣವನ್ನು ಬದಲಾವಣೆ ಮಾಡಲಾಗಿದೆ. ವಾಸ್ತವಿಕವಾಗಿ ಓ.ಡಿ.ಪಿ. ಮುಖಾಂತರ 1,73,223 ಎಕರೆಗಳ ವ್ಯಾಪ್ತಿಯ ಪ್ರದೇಶಕ್ಕೆ ಭೂಮಿ ಬಳಕೆಯನ್ನು ಇತ್ಯರ್ಥಗೊಳಿಸಲಾಗಿದೆ. ಕೆ.ಟಿ.ಸಿ.ಪಿ. ಕಾಯಿದೆಯ ಅನುಚ್ಛೇಧ 25 ರ ಅನುಗುಣವಾಗಿ ಹಾಗೂ ನಿರ್ಧಿಷ್ಟವಾಗಿ 5ನೇ ಅಧ್ಯಾಯದ ಅನುಗುಣವಾಗಿ ಓ.ಡಿ.ಪಿ. ಯನ್ನು ಅನುಷ್ಠಾನಗೊಳಿಸಲು ನಿರ್ಧಿಷ್ಟ ಯೋಜನೆಯನ್ನು ರೂಪುಗೊಳಿಸಿದಾಗ ಮಾತ್ರ ಇದನ್ನು ಮಾಸ್ಟರ್ ಪ್ಲಾನ್ ಎಂದು ಪರಿಗಣಿಸಬಹುದಾಗಿದೆ. ಆದರೆ ಪ್ರಸ್ತಾವಿತ ಓ.ಡಿ.ಪಿ.ಯಲ್ಲಿ ಯೋಜನೆಯ ವಿವಿಧ ಘಟಕಗಳ ಪಂಕ್ತೀಕರಣವನ್ನು ನಿಗದಿಪಡಿಸಿರುವುದಿಲ್ಲ. ಇದಲ್ಲದೆ, ಈಗಾಗಲೇ ಅನುಷ್ಠಾನಗೊಳಿಸಲಾಗಿರುವ ಪಂಕ್ತೀಕರಣ ಓ.ಡಿ.ಪಿ. ಅನುಗುಣವಾಗಿದ್ದು, ಇದು ಕ್ರಿಯಾ ಒಪ್ಪಂದ ಹಾಗೂ ಸೋಮಶೇಖರ ರೆಡ್ಡಿ ಪ್ರಕರಣಕ್ಕೆ ವ್ಯತಿರಿಕ್ತವಾಗಿರುತ್ತದೆ. ಓ.ಡಿ.ಪಿ. ಪಂಕ್ತೀಕರಣದ

ಅನುಗುಣವಾಗಿ ಓ.ಡಿ.ಪಿ. ವರದಿಯ ಅಧ್ಯಾಯ 6 ರಲ್ಲಿ ಖಾಸಗಿ ಪಾಲುದಾರರು ಟೋಲ್ ರಸ್ತೆಗೆ ಕ್ರಿಯಾ ಒಪ್ಪಂದದಲ್ಲಿ ನಮೂದಿಸಿರುವ 6999 ಎಕರೆಗಳ ಬದಲಾಗಿ 9468 ಎಕರೆಗಳ ಅವಶ್ಯಕತೆಯನ್ನು ಬಿಂಬಿಸಿರುತ್ತಾರೆ. ಆದರೆ, ಈ ಬದಲಾವಣೆಯನ್ನು ಕ್ರಿಯಾ ಒಪ್ಪಂದದ ಪರಿಷ್ಕರಣೆ ಮಾಡಿ ಜಾರಿಗೊಳಿಸುವಲ್ಲಿ ವಿಫಲರಾಗಿರುತ್ತಾರೆ. ಪ್ರವೃತ್ತಿಗಳನ್ನು ನೋಡಿದಾಗ ಬೆಂಗಳೂರು ನಗರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚುವರಿ ಜಮೀನನ್ನು ಬಿಂಬಿಸಿದ್ದು, ಇದೇ ಅನುಪಾತದಲ್ಲಿ ನಗರ ಸಮುಚ್ಛಯಗಳ ಅವಶ್ಯಕತೆಯನ್ನು ಕಡಿತಗೊಳಿಸಲಾಗಿದೆ. ಈ ಪ್ರಕರಣದಲ್ಲಿ ಖಾಸಗಿ ಪಾಲುದಾರರು ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನ ಕಂಡಿಕೆ 51 ಅನ್ನು ಉಲ್ಲಂಘಿಸಿರುತ್ತಾರೆ. ಈ ಬದಲಾವಣೆಯನ್ನು ಖಾಸಗಿ ಪಾಲುದಾರರು ಕೆ.ಐ.ಎ.ಡಿ.ಬಿ. ಸಂಸ್ಥೆಗೆ ಬರೆದಿರುವ 05.02.2003 ರ ಪತ್ರದಲ್ಲಿ ದೃಢೀಕರಿಸಿರುತ್ತಾರೆ. ರಿಟ್ ಪಿಟಿಷನ್ ಸಂಖ್ಯೆ.17823/1999 ಪ್ರಕರಣದಲ್ಲಿ 17.03.2005 ರಂದು ಖಾಸಗಿ ಪಾಲುದಾರರು ಸಲ್ಲಿಸಿರುವ ಹೆಚ್ಚುವರಿ ಪ್ರಮಾಣ ಪತ್ರದಲ್ಲಿ 28.07.2002 ರಂದು ಮುಖ್ಯ ಇಂಜಿನೀಯರ್, ಲೋಕೋಪಯೋಗಿ ಇಲಾಖೆ ಇವರು ನೀಡಿದ ಕೀಮ್ ಅಪ್ರೂವಲ್ (ಕ್ರಿಯಾ ಒಪ್ಪಂದದ ಅನುಗುಣವಾಗಿ) ಹಾಗೂ 12.02.2004 ರ ಓ.ಡಿ.ಪಿ. ಪಂಕ್ತೀಕರಣ ಇವೆರಡನ್ನೂ ಸಲ್ಲಿಸಿರುತ್ತಾರೆ. ಇದಲ್ಲದೆ, ಖಾಸಗಿ ಪಾಲುದಾರರು 12.03.2014 ರಂದು ಮುಖ್ಯ ಕಾರ್ಯದರ್ಶಿಗಳಿಗೆ ಬರೆದಿರುವ ಪತ್ರದಲ್ಲಿ ಕೋರಿರುವ ಜಮೀನಿನ ವಿಸ್ತೀರ್ಣಗಳು ಕ್ರಿಯಾ ಒಪ್ಪಂದ ಹಾಗೂ ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿಗೆ ತದ್ವಿರುದ್ಧವಾಗಿರುತ್ತದೆ. ಈ ಪ್ರಸ್ತಾವನೆಯಡಿಯಲ್ಲಿ ಸೆಕ್ಷನ್ 'ಎ' ವ್ಯಾಪ್ತಿಯಲ್ಲಿ ಕ್ರಿಯಾ ಒಪ್ಪಂದದಲ್ಲಿ ನಮೂದಿಸಲಾಗಿರುವ 3367 ಎಕರೆಗಳ ಬದಲಾಗಿ 4515 ಎಕರೆಗಳ ಅವಶ್ಯಕತೆಯನ್ನು ನಮೂದಿಸಿರುತ್ತಾರೆ. ಸೆಕ್ಷನ್ 'ಬಿ' ಮತ್ತು 'ಸಿ' ಗೆ ಅನ್ವಯಿಸುವಂತೆ 3632 ಎಕರೆಗಳ ಬದಲಾಗಿ 2484 ಎಕರೆಗಳನ್ನು ಕೋರಿರುತ್ತಾರೆ. ಇದನ್ನು ಗಮನಿಸಿದರೆ ಬೆಂಗಳೂರಿನ ಆಸುಪಾಸಿನಲ್ಲಿ ಹೆಚ್ಚುವರಿ ಜಮೀನನ್ನು ಹೊಂದುವುದು ಖಾಸಗಿ ಪಾಲುದಾರರ ಉದ್ದೇಶವಾಗಿರುತ್ತದೆ. ಓ.ಡಿ.ಪಿ. ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ನಿರ್ಧಾರ ಕೈಗೊಂಡಿರುವ ಸಭೆಯಲ್ಲಿ ಖಾಸಗಿ ಪಾಲುದಾರರ ಪ್ರತಿನಿಧಿಗಳು ಉಪಸ್ಥಿತರಿರುವುದಿಲ್ಲ. ಆದಾಗ್ಯೂ, ಬಿ.ಎಂ.ಐ.ಸಿ.ಎ.ಪಿ.ಎ. ಪ್ರಾಧಿಕಾರದ ಇತರೆ ಸಭೆಗಳಲ್ಲಿ ಖಾಸಗಿ ಪಾಲುದಾರರ ಪ್ರತಿನಿಧಿಗಳು ಉಪಸ್ಥಿತರಿರುವುದು ಸ್ಪಷ್ಟವಾಗಿದೆ. ವೈಯಕ್ತಿಕ ಹಿತಾಸಕ್ತಿಯನ್ನು ಹೊಂದಿರುವ ಖಾಸಗಿ ಪಾಲುದಾರರು ಪ್ರಾಧಿಕಾರದ ಸಭೆಗಳಲ್ಲಿ ಪಾಲ್ಗೊಳ್ಳುವುದು ಕೆ.ಟಿ.ಸಿ.ಪಿ. ಅಧಿನಿಯಮ 1961 ರ ಉಲ್ಲಂಘನೆಯಾಗಿರುತ್ತದೆ.

ಮಾನ್ಯ ಕರ್ನಾಟಕದ ಉಚ್ಛ ನ್ಯಾಯಾಲಯವು ದಿನಾಂಕ 03.05.2005 ರ ಆದೇಶದ ಕಂಡಿಕೆ 29 ರಲ್ಲಿ ಈ ರೀತಿ ಹೇಳಿದೆ:

"Once it is held that FWA is valid and proper the extent of land required for the project forms part thereof in terms of schedule-1 and findings in this regard having become final and conclusive, it is not open to the state government nor to J.C. Madhuswamy and others and not even this court to reopen those issues once over again".

ಓ.ಡಿ.ಪಿ. ಯನ್ನು 12.02.2004 ರಂದು ಅನುಮೋದಿಸಲಾಗಿದ್ದು, ಪ್ರಸ್ತಾವಿತ ತೀರ್ಪನ್ನು ಆದಾದ ನಂತರ 03.05.2005 ರಂದು ಘೋಷಿಸಲಾಗಿದೆ. ಆದುದರಿಂದ ಓ.ಡಿ.ಪಿ. ಯಲ್ಲಿ ನಮೂದಿಸಲಾದ ಜಮೀನಿನ ವಿಸ್ತೀರ್ಣವು ಸಿಂಧುವಾಗುವುದಿಲ್ಲ. ಈ ವಿಸ್ತೀರ್ಣವನ್ನು ಪರಿಗಣಿಸಿದಲ್ಲಿ, 03.05.2005

ರ ಮಾನ್ಯ ಉಚ್ಚ ನ್ಯಾಯಾಲಯದ ಹಾಗೂ 20.04.2006 ರ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳನ್ನು ಉಲ್ಲಂಘಿಸಿದಂತಾಗುತ್ತದೆ. ***ಈ ಹಿನ್ನೆಲೆಯಲ್ಲಿ ಓ.ಡಿ.ಪಿ. ಪಂಕ್ತೀಕರಣದ ಹಾಗೂ ಇದರ ಅನುಗುಣವಾಗಿ ನಮೂದಿಸಲಾದ ಜಮೀನಿನ ವಿಸ್ತೀರ್ಣವನ್ನು ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನ ಅನುಗುಣವಾಗಿ ನಿರ್ಬಂಧಿಸಲು ಸರ್ಕಾರವು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.***

ಓ.ಡಿ.ಪಿ. ಗೆ ಸಂಬಂಧಿಸಿದಂತೆ ಖಾಸಗಿ ಪಾಲುದಾರರು ಈ ಕೆಳಕಂಡ ಪ್ರಕರಣಗಳಲ್ಲಿ ವಿವಾದಾತ್ಮಕ ಕೋರಿಕೆಯನ್ನು ಸಲ್ಲಿಸಿರುವುದನ್ನು ಸಮಿತಿ ಗಮನಿಸಿದೆ:

1. ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ಇವರು 03.06.1997 ರಂದು ಸವಿವರವಾದ ಸರ್ವೆ ನಂಬರು ಹಾಗೂ ಗ್ರಾಮಗಳ ವಿವರಗಳನ್ನೊಳಗೊಂಡ ಹಾಗೂ ಸರ್ಕಾರದಿಂದ ಅನುಮೋದಿತ ಪಂಕ್ತೀಕರಣದ ಅನುಗುಣವಾಗಿ ಅವಶ್ಯಕವಿರುವ ಜಮೀನಿನ ವಿವರಗಳನ್ನು ಸುತ್ತೋಲೆಯ ಮುಖಾಂತರ ಜಾರಿಗೊಳಿಸಿರುತ್ತಾರೆ. ಈ ವಿವರಗಳನ್ನು ನೈಸೆಲ್ ಸಂಸ್ಥೆ 11.06.1997 ಹಾಗೂ 16.06.1997 ರ ಪತ್ರಗಳ ಮುಖಾಂತರ ದೃಢೀಕರಿಸಿರುತ್ತದೆ. ಆದಾಗ್ಯೂ, ಖಾಸಗಿ ಪಾಲುದಾರರು 31.07.1997 ರಂದು ಅಂದಿನ ಮುಖ್ಯ ಕಾರ್ಯದರ್ಶಿಯವರಿಗೆ ವಿಭಿನ್ನವಾದ ಸರ್ವೆ ನಂಬರುಗಳು ಹಾಗೂ ಗ್ರಾಮಗಳನ್ನೊಳಗೊಂಡ ಜಮೀನಿನ ಅವಶ್ಯಕತೆಯ ಬಗ್ಗೆ ವಿವರಗಳನ್ನು ಸಲ್ಲಿಸಿರುತ್ತಾರೆ. ಇದು ಪ್ರಥಮ ಸ್ತರದಲ್ಲಿ ಖಾಸಗಿ ಪಾಲುದಾರರು ಕ್ರಿಯಾ ಒಪ್ಪಂದ ಹಾಗೂ ಯೋಜನಾ ತಾಂತ್ರಿಕ ವರದಿಯನ್ನು ಉಲ್ಲಂಘಿಸಿ ನೀಡಿರುವ ವಿವರಗಳಾಗಿರುತ್ತವೆ.

2. 2ನೇ ಸ್ತರದಲ್ಲಿ ದಿನಾಂಕ 19.09.1998 ರ ಪತ್ರದ ಮುಖಾಂತರ ವಿಭಿನ್ನ ಪಂಕ್ತೀಕರಣ ಹಾಗೂ ಪರ್ಯಾಯ ಸರ್ವೆ ನಂಬರು ಹಾಗೂ ಗ್ರಾಮಗಳನ್ನೊಳಗೊಂಡ ವಿವರಗಳನ್ನು ಸಮಗ್ರ ಯೋಜನಾ ಪ್ರಾಧಿಕಾರಕ್ಕೆ ಅಂದರೆ ಬಿ.ಎಂ.ಐ.ಸಿ.ಎ.ಪಿ.ಎ. ಗೆ ಸಲ್ಲಿಸಿರುತ್ತಾರೆ. ಈ ವಿವರಗಳು 20.11.1995 ರ ಸರ್ಕಾರಿ ಆದೇಶ, ಯೋಜನಾ ತಾಂತ್ರಿಕ ವರದಿ ಹಾಗೂ ಕ್ರಿಯಾ ಒಪ್ಪಂದಕ್ಕೆ ವ್ಯತಿರಿಕ್ತವಾಗಿರುತ್ತದೆ.

3. 27.03.1997 ರ ಸರ್ಕಾರಿ ಆದೇಶದ ಮುಖಾಂತರ ಖಾಸಗಿ ಪಾಲುದಾರರಿಗೆ ಹಸ್ತಾಂತರಿಸಬಹುದಾದ ಸರ್ಕಾರಿ ಜಮೀನಿನ ವಿವರಗಳನ್ನು ಜಾರಿಗೊಳಿಸಲಾಗಿದೆ. 07.10.1999 ರ ಆದೇಶದ ಮುಖಾಂತರ ಸರ್ಕಾರಿ ಜಮೀನನ್ನು 40 ವರ್ಷಗಳ ಅವಧಿಗೆ ಪ್ರತಿ ಎಕರೆಗೆ ವಾರ್ಷಿಕವಾಗಿ 10 ರೂ ದರದಲ್ಲಿ ಗುತ್ತಿಗೆ ಆಧಾರದ ಮೇಲೆ ನೀಡಲು ಅನುಮೋದಿಸಿದ್ದು, ಈ ಆದೇಶಕ್ಕೆ ಅಡಕಗೊಳಿಸಿರುವ ಪರ್ಯಾಯ ಸರ್ಕಾರಿ ಜಮೀನುಗಳು 27.03.1997ರ ಸರ್ಕಾರಿ ಆದೇಶದ ಅನುಗುಣವಾಗಿ ಇರುವುದಿಲ್ಲ.

4. 20.07.2002 ರಂದು ಮುಖ್ಯ ಅಭಿಯಂತರರು, ಲೋಕೋಪಯೋಗಿ ಇಲಾಖೆ ಇವರು ಪೆರಿಫರಲ್ ರಸ್ತೆ, ಲಿಂಕ್ ರಸ್ತೆ ಹಾಗೂ ವೇಗದ ಹೆದ್ದಾರಿಯ ಒಂದು ಭಾಗಕ್ಕೆ ಥೀಮ್ ಅಪ್ರೂವಲ್ ಅನ್ನು ನೀಡಿರುತ್ತಾರೆ. ಈ ಥೀಮ್ ಅಪ್ರೂವಲ್‌ಗೆ ನೀಡಲಾದ ಪಂಕ್ತೀಕರಣ, ಯೋಜನಾ ತಾಂತ್ರಿಕ ವರದಿಯ ವಿವರಗಳಿಗಿಂತ ವಿಭಿನ್ನವಾಗಿರುತ್ತದೆ.

5. ನಗರಾಭಿವೃದ್ಧಿ ಇಲಾಖೆಗೆ ಓ.ಡಿ.ಪಿ. ಅನುಮೋದನೆಗಾಗಿ ಅವಶ್ಯಕವಿರುವ ಜಮೀನಿನ ಘಟಕವಾರು ವಿವರಗಳನ್ನು ಕ್ರಿಯಾ ಒಪ್ಪಂದದ ಶೆಡ್ಯೂಲ್-1 ಅನುಗುಣವಾಗಿ ಸಲ್ಲಿಸಿರುವುದಿಲ್ಲ.

6. ಕ್ರಿಯಾ ಒಪ್ಪಂದದ ಅನುಚ್ಛೇಧ 6.6.2 ರ ಅನುಗುಣವಾಗಿ ಯೋಜನಾ ಅನುಷ್ಠಾನವನ್ನು 6 ಸ್ತರಗಳಲ್ಲಿ ಸಂಪೂರ್ಣಗೊಳಿಸಬೇಕಾಗಿರುವುದು. ಮೊದಲನೇ ಹಾಗೂ 2ನೇ ಸ್ತರಗಳನ್ನು ಫೈನಾನ್ಷಿಯಲ್ ಕ್ಲೋಷರ್ ಸಾಧಿಸಿದ 5 ವರ್ಷಗಳ ಒಳಗೆ ಅಂದರೆ 28.03.2009 ರೊಳಗಾಗಿ ಸಂಪೂರ್ಣಗೊಳಿಸಬೇಕಾಗುವುದು. ಉಳಿದ ಸ್ತರಗಳನ್ನು ಮೊದಲನೇ ಸ್ತರ ಸಂಪೂರ್ಣಗೊಳಿಸಿದ 3 ವರ್ಷಗಳೊಳಗಾಗಿ ಸಂಪೂರ್ಣಗೊಳಿಸಬೇಕಾಗುವುದು. ಅಂದರೆ 27.03.2012 ರೊಳಗಾಗಿ ಉಳಿದ ಸ್ತರಗಳನ್ನು ಸಂಪೂರ್ಣಗೊಳಿಸಬೇಕಾಗುವುದು. **(ಚೆಕ್)** 21.09.1998 ರಂದು ನೀಡಲಾದ ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನ ಕಂಡಿಕೆ 15 ರ ಅನುಗುಣವಾಗಿ ಖಾಸಗಿ ಪಾಲುದಾರರು ನಗರ ಸಮುಚ್ಛಯಗಳನ್ನು ವೇಗದ ಹೆದ್ದಾರಿ ಸಂಪೂರ್ಣಗೊಳಿಸಿದ ನಂತರ ಅನುಷ್ಠಾನ ಮಾಡಬೇಕಾಗುವುದು. ಈ ತೀರ್ಮಾನವನ್ನು ಸಡಿಲಗೊಳಿಸುವ ಉದ್ದೇಶದಿಂದ ನೈಸೆಲ್ ಸಂಸ್ಥೆಯು ಕ್ರಿಯಾ ಒಪ್ಪಂದದ ಅನುಚ್ಛೇಧ-6.6.3 ಅನ್ನು 1999ರ ಪೂರಕ ಒಪ್ಪಂದದ ಮುಖಾಂತರ ಪರಿಷ್ಕರಿಸಿರುವುದು ಸಮಿತಿಗೆ ಸ್ಪಷ್ಟವಾಗಿದೆ. ಪೂರಕ ಒಪ್ಪಂದದಲ್ಲಿ ಒಂದನೇ ಸ್ತರದಿಂದ 4ನೇ ಸ್ತರದ ಕಾಮಗಾರಿಯನ್ನು ಸೆಕ್ಷನ್ 'ಎ' ಯಿಂದ ಸೆಕ್ಷನ್ 'ಸಿ' ಎಂದು ಮರು ವರ್ಗೀಕರಣ ಮಾಡಲಾಗಿದೆ. ಈ ಪರಿಷ್ಕರಣೆ ಆಧಾರದ ಮೇಲೆ 02/2002 ರ ಅಸೈನ್‌ಮೆಂಟ್ ಒಪ್ಪಂದದ ಮುಖಾಂತರ ಯೋಜನಾ ಅನುಷ್ಠಾನದ ವಿವಿಧ ಸ್ತರಗಳನ್ನು ಮರು ವಿಂಗಡಣೆ ಮಾಡಲಾಗಿದೆ. ಪ್ರಮುಖವಾಗಿ ಸೆಕ್ಷನ್ 'ಎ' ಮತ್ತು ನಗರ ಸಮುಚ್ಛಯ-1 ಅನ್ನು ಮೊದಲನೇ ಸ್ತರ ಹಾಗೂ ಸೆಕ್ಷನ್ 'ಬಿ', ಸೆಕ್ಷನ್ 'ಸಿ' ಮತ್ತು ಉಳಿದ ನಗರ ಸಮುಚ್ಛಯಗಳನ್ನು 2ನೇ ಸ್ತರದಲ್ಲಿ ಅನುಷ್ಠಾನ ಮಾಡಲು ಪ್ರಸ್ತಾವಿತ ಅಸೈನ್‌ಮೆಂಟ್ ಹಾಗೂ ಡೆವಲಪ್‌ಮೆಂಟ್ ಒಪ್ಪಂದಗಳಲ್ಲಿ ಅವಕಾಶವನ್ನು ಕಲ್ಪಿಸಲಾಗಿದೆ. ಮೊದಲನೇ ಸ್ತರದ ಕಾಮಗಾರಿಗಳನ್ನು ನೀಸೆಲ್ ಸಂಸ್ಥೆಗೆ ಹಸ್ತಾಂತರಿಸಲಾಗಿದೆ. ಇದರಿಂದಾಗಿ, ಸೆಕ್ಷನ್ 'ಎ' ಹಾಗೂ ನಗರ ಸಮುಚ್ಛಯ-1 ಅನ್ನು ನೀಸೆಲ್ ಸಂಸ್ಥೆ ಅನುಷ್ಠಾನಗೊಳಿಸಲು ಅವಕಾಶ ನೀಡಲಾಗಿದೆ. ***ಇದನ್ನು ಗಮನಿಸಿದಾಗ ವೇಗದ ಹೆದ್ದಾರಿಯನ್ನು ಸಮಗ್ರವಾಗಿ ಸಂಪೂರ್ಣಗೊಳಿಸಿದ ನಂತರವೇ ನಗರ ಸಮುಚ್ಛಯವನ್ನು ಅಭಿವೃದ್ಧಿಪಡಿಸಬೇಕು ಎಂಬ ನ್ಯಾಯಾಲಯದ ತೀರ್ಪನ್ನು ಖಾಸಗಿ ಪಾಲುದಾರರು ಪ್ರಯತ್ನಪೂರ್ವಕವಾಗಿ ಹಾದಿ ತಪ್ಪಿಸಲು ಈ ಪರಿಷ್ಕರಣೆ ಹಾಗೂ ತಿದ್ದುಪಡಿಗಳನ್ನು ಜಾರಿಗೊಳಿಸಿರುವುದು ಸ್ಪಷ್ಟವಾಗುತ್ತದೆ. ಅಂದರೆ, ವೇಗದ ಹೆದ್ದಾರಿಯನ್ನು ಸಂಪೂರ್ಣಗೊಳಿಸದೇ, ನಗರ ಸಮುಚ್ಛಯದ ಅಭಿವೃದ್ಧಿಯನ್ನು ವಿಶಿಷ್ಟವಾಗಿ ಬೆಂಗಳೂರಿನ ಆಸುಪಾಸಿನಲ್ಲಿ ಜಾರಿಗೊಳಿಸುವ ಉದ್ದೇಶದಿಂದ ಈ ವಿಧಿವಿಧಾನವನ್ನು ಪಾಲಿಸಿರುವುದು ಸ್ಪಷ್ಟವಾಗಿರುತ್ತದೆ. ಪೂರಕ ಒಪ್ಪಂದದ ಅನುಷ್ಠಾನ, ಕ್ರಿಯಾ ಒಪ್ಪಂದದ ಉಲ್ಲೇಖಗಳ ಅನುಗುಣವಾಗಿ ಕ್ರಮಬದ್ಧವಾಗಿದ್ದಾಗ್ಯೂ ಸಹ ಧ್ಯೇಯೋದ್ದೇಶಗಳು ಸಂಶಯಾಸ್ಪದವಾಗಿದೆ. ಆದುದರಿಂದ ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನ ಕಂಡಿಕೆ 15 ರ ಉಲ್ಲಂಘನೆ ಆಧಾರದ ಮೇಲೆ ನೈಸೆಲ್ ಸಂಸ್ಥೆಯ ವಿರುದ್ಧ ಕಾನೂನು ರೀತ್ಯಾ ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಆಗ್ರಹಿಸುತ್ತದೆ.***

## *XLII. ಕೆರೆಗಳನ್ನು ಹಸ್ತಾಂತರಿಸಿರುವ ಬಗ್ಗೆ:*

| ಕ್ರ. ಸಂ. | ಸ.ವೆ.ಸಂ./ಗ್ರಾಮ | ವಿಸ್ತೀರ್ಣ | ಹಸ್ತಾಂತರಿಸಿದ ವಿಸ್ತೀರ್ಣ | ಷರಾ |
|---|---|---|---|---|
| 1. | 43/ಮಂಗನಹಳ್ಳಿ | 6.22 | 6.22 | ರಸ್ತೆ – 30 ಗುಂಟೆ |
| 2. | 46/ಬೇಗೂರು | 6.05 | 6.05 | 10 – ಗುಂಟೆ |
| 3. | 38/ಕಮ್ಮನಹಳ್ಳಿ | 18.37 | 2.30 | 1ಎ-30ಜಿ ರಸ್ತ ಮುಚ್ಚಿದ ರಸ್ತೆ |

| | | | | |
|---|---|---|---|---|
| 4. | 13/ದೊಡ್ಡತೂಗರು | 44-31 | 44-31 | 5ಎ-35ಜ ಮುಚ್ಚಿದ ರಸ್ತೆ |
| 5. | 38/ಗೊಲ್ಲಹಳ್ಳಿ | 19-13 | 5.02 | 4ಎ-15ಜ ಬಳಕೆಗೊಂಡ ರಸ್ತೆ |
| 6. | 71/ಗೊಲ್ಲಹಳ್ಳಿ | 37-13 | 5-00 | 2ಎಕರೆ ರೋಡ್ ಗಾಗಿ ರಸ್ತೆ |
| 7. | 6/ರಾಮಸಂದ್ರ | 7-00 | 3-00 | 1ಎ 30ಜ ರಸ್ತೆಗಾಗಿ ಬಳಕೆಗೊಂಡಿದೆ |
| 8. | 46/ರಾಮಸಂದ್ರ | 28-01 | 1-00 | 30ಜ ರಸ್ತೆಗಾಗಿ ಬಳಕೆಗೊಂಡಿದೆ |
| 9. | 48/ಮಾದವರ | 43-38 | 1-01 | ಈಗ ರಸ್ತೆಗಾಗಿ ಬಳಕೆಗೊಂಡಿದೆ |
| 10. | 24/ವರಹಸಂದ್ರ | 13-00 | 13-00 | ರಸ್ತೆಗಾಗಿ ಬಳಕೆಯಾಗದಿರುವುದು |
| 11. | 4/ಹೆಮ್ಮಿಗೆಪುರ | 4-11 | 4-11 | -"- |
| 12. | 25/ಹೆಮ್ಮಿಗೆಪುರ | 8-25 | 7-25 | -"- |
| 13. | 113/ದೊಡ್ಡತೂಗರು | 12-39 | 12-39 | -"- |
| 14. | 43/ಬೇರಟೆನ ಅಗ್ರಹಾರ | 29-10 | 28-10 | -"- |
| 15. | 51/ಕೋನಪ್ಪನ ಅಗ್ರಹಾರ | 28-10 | 28-10 | -"- |
| 16. | 48/ಮಂಗನಹಳ್ಳಿ | 4-00 | 4-00 | -"- |
| 17. | 43/ಮಂಗನಹಳ್ಳಿ | 6-22 | 6-22 | -"- |
| 18. | 25/ಗೋಣಿಪುರ | 8-26 | 8-26 | -"- |
| 19. | 45/ಗೋಣಿಪುರ | 17-28 | 17-28 | -"- |
| 20. | 30/ಗೋಣಿಪುರ | 12-14 | 12-14 | -"- |
| | ಒಟ್ಟು | 422.35 | 213.0 | |

ಇದಲ್ಲದೆ, ದಿನಾಂಕ24.03.2006ರಂದು ಬೆಂಗಳೂರು ಜಿಲ್ಲೆಯಲ್ಲಿ ಭೂಮಿಯ ಅತಿಕ್ರಮಣವನ್ನು ವಿಶ್ಲೇಷಿಸಲು ಸೃಜಿಸಲಾದ ಜಂಟಿ ಸದನ ಸಮಿತಿಯ ಸಲಹೆಗಾರರು, ಲೋಕೋಪಯೋಗಿ ಇಲಾಖೆ, ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಕೆರೆ ಅಂಗಳವನ್ನು ನೈಸ್ ಸಂಸ್ಥೆಗೆ ಸರ್ಕಾರಿ ಜಮೀನಿನ ಸ್ವರೂಪದಲ್ಲಿ ಹಸ್ತಾಂತರಿಸುವ ಬಗ್ಗೆ ಪ್ರತಿಪಾದಿಸಿರುತ್ತಾರೆ. ವಿವರಗಳು ಕೆಳಕಂಡಂತಿವೆ:

ಕರ್ನಾಟಕದ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ:32343/95 (ಸಾರ್ವಜನಿಕ ಹಿತಾಸಕ್ತಿ) ತೀರ್ಪಿನಲ್ಲಿ ಈ ಕೆಳಕಂಡಂತೆ ಆದೇಶಿಸಿರುವುದನ್ನು ಸಮಿತಿ ಗಮನಿಸಿದೆ.

"ಏತನ್ಮಧ್ಯೆ ಮಧ್ಯಂತರ ವ್ಯವಸ್ಥೆಯ ಸ್ವರೂಪದಲ್ಲಿ ಪ್ರತಿವಾದಿಗಳು ಬೆಂಗಳೂರು ನಗರ ಸಮುಚ್ಛಯ ಪ್ರದೇಶದಲ್ಲಿ ಯಾವುದೇ ಜಮೀನನ್ನು ಹಂಚಿಕೆ ಮಾಡುವುದನ್ನಾಗಲೀ ಅಥವಾ ಗ್ರಾಂಟ್ ಸ್ವರೂಪದಲ್ಲಿ ನೀಡುವುದನ್ನಾಗಲೀ ನಿರ್ಬಂಧಿಸಿಸಲಾಗಿದೆ." ಈ ಆದೇಶವನ್ನು ಉಪೇಕ್ಷಿಸಿ ಸುಮಾರು----- ವಿಸ್ತೀರ್ಣದ 23 ಕೆರೆಗಳ ವ್ಯಾಪ್ತಿಯ ಜಮೀನನ್ನು ನೈಸಲ್ ಸಂಸ್ಥೆಗೆ ಹಸ್ತಾಂತರಿಸಲಾಗಿದೆ. ಈ ಪ್ರಕರಣವನ್ನು ಗಮನಿಸಿದಾಗ ಮೋಜಣಿ ಕಾರ್ಯದ ಹಂತದಿಂದ ನೈಸಲ್ ಸಂಸ್ಥೆಗೆ ಹಸ್ತಾಂತರಿಸಬಹುದಾದ ಜಮೀನಿನ ಬಗ್ಗೆ ವ್ಯಾಪಕ ವೈಪಲ್ಯತೆ ಆಗಿರುವುದು ಸಮಿತಿಗೆ ಸ್ಪಷ್ಟವಾಗಿದೆ. ಸರ್ಕಾರದ ಯಾವುದೇ ಅಧಿನಿಯಮ ಅಥವಾ ನಿಯಮಾವಳಿಗಳಲ್ಲಿ ಕೆರೆ ಅಂಗಳವನ್ನು ಪರಭಾರೆ ಮಾಡುವ ಸೌಲಭ್ಯವನ್ನು ಕಲ್ಪಿಸಲಾಗಿರುವುದಿಲ್ಲ. *ಈ ಬೆಳವಣಿಗೆಯನ್ನು ಗಮನಿಸಿದಲ್ಲಿ ಕಂದಾಯ ಇಲಾಖೆ ಹಾಗೂ ಬಿ.ಎಂ.ಐ.ಸಿ.ಪಿ. ಸಂಸ್ಥೆಯು ಯಾವುದೇ ಪೂರ್ವಭಾವಿ ಸಮೀಕ್ಷೆಯನ್ನು ಕೈಗೊಳ್ಳದೇ ನಿರಂಕುಶವಾಗಿ ನೈಸಲ್ ಸಂಸ್ಥೆಗೆ ಕೆರೆಗಳನ್ನು ಒಳಗೊಂಡಂತೆ ಸರ್ಕಾರಿ ಜಮೀನನ್ನು ಹಸ್ತಾಂತರಿಸಿರುವುದು ಸ್ಪಷ್ಟವಾಗಿದೆ. ಈ ಹಿನ್ನಲೆಯಲ್ಲಿ, ಕೋಷ್ಟಕದಲ್ಲಿ ನೀಡಿರುವ ಸರ್ವೆ ನಂಬರ್‌ಗಳಿಗೆ*

*ಅನ್ವಯಿಸುವಂತೆ ಜಮೀನಿನ ಹಸ್ತಾಂತರ ಆದೇಶದ ಸಂಸ್ಕರಣೆಯಲ್ಲಿ ಭಾಗಿಯಾಗಿರುವ ಅಧಿಕಾರಿ/ಸಿಬ್ಬಂದಿವರ್ಗದವರನ್ನು ಸಂಬಂಧಿತ ಕಡತಗಳ ಟಿಪ್ಪಣಿಯ ಹಾಗೂ ನಿರ್ಧಾರಗಳ ಮೇಲೆ ಗುರುತಿಸಿ ಶಿಸ್ತಿನ ಕ್ರಮ ಜರುಗಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.*

ರಸ್ತೆಯ ಪಂಕ್ತೀಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದ ತೀರ್ಪುಗಳ ಹಿನ್ನೆಲೆಯಲ್ಲಿ ಸಮಿತಿಯ ವಿಶ್ಲೇಷಣೆ ಹಾಗೂ ಶಿಫಾರಸ್ಸು ಕೆಳಕಂಡಂತಿರುತ್ತದೆ.

1. ಯೋಜನಾ ತಾಂತ್ರಿಕ ವರದಿಯ ನಕ್ಷೆ 3.1 ಹಾಗೂ 3.2ರಲ್ಲಿ ಸಮಗ್ರ ವಿವರಗಳನ್ನು ನೀಡಲಾಗಿದೆ.
2. ಕಂಡಿಕೆ 4.11.1ರಲ್ಲಿ ಪೆರಿಫೆರಲ್ ರಸ್ತೆ ಹಾದು ಹೋಗುವ ಪ್ರದೇಶಗಳನ್ನು ನೀಡಲಾಗಿದೆ.
3. ಕಂಡಿಕೆ 6.1.1ರ ತಾಂತ್ರಿಕ ವಿನ್ಯಾಸದಲ್ಲಿ ಚಿತ್ರ 3.2ರಲ್ಲಿ ನೀಡಿರುವ ಪಥದ ಅನುಗುಣವಾಗಿ 40.08 ಕಿ.ಮೀ. ರಸ್ತೆ ಅವಶ್ಯಕವಿದೆ ಎಂದು ದೃಢೀಕರಿಸಿದೆ.
4. ಯೋಜನಾ ತಾಂತ್ರಿಕ ವರದಿಯ 6.9ರ ಅನುಗುಣವಾಗಿ Non-instrument survey ಜಾರಿಗೊಳಿಸಿದ್ದು, ರೆವಿನ್ಯೂ ಇಲಾಖೆಯ ಮುಖಾಂತರ ಮಾಲಿಕತ್ವ ಹಾಗೂ ಸರ್ವೆ ನಂಬರ್‌ಗಳ ವಿವರಗಳನ್ನು ಸಲ್ಲಿಸುವುದಾಗಿ ತಿಳಿಸಲಾಗಿದೆ.

ಈ ಹಿನ್ನೆಲೆಯಲ್ಲಿ,ದಿನಾಂಕ 08.02.1996ರಂದು ಸರ್ಕಾರವು ಸರ್ವೆ ನಂಬರ್ ವಿವರಗಳನ್ನು ನೀಡುವಂತೆ ನೈಸಲ್ ಸಂಸ್ಥೆಯನ್ನು ಕೋರಿದೆ. ಕಡತ ಸಂಖ್ಯೆ: ಪಿಡಬ್ಲ್ಯೂಡಿ 78 ಸಿಎಸ್‌ಆರ್ 96 ಹಾಗೂ ಪಿಡಬ್ಲ್ಯೂಡಿ 32 ಸಿಎಸ್‌ಆರ್ 95 ಅನುಗುಣವಾಗಿ ದಿನಾಂಕ27.02.1996, 29.03.1996, 14.11.1996(ಒಟ್ಟು ಜಮೀನು) ಮತ್ತು 26.11.1996 (ಸರ್ಕಾರಿ ಜಮೀನಿನ ಅವಶ್ಯಕತೆ) ರ ಮಧ್ಯಂತರದಲ್ಲಿ ಭಾರತ್ ಫೋರ್ಜ್ ಸಂಸ್ಥೆಯು ಸರ್ವೆ ನಂಬರ್ ವಿವರಗಳನ್ನು ಘಟಕಾವಾರು ಸಲ್ಲಿಸಿದೆ. ಈ ದಾಖಲಾತಿಗಳ ಮೂಲ ಪ್ರತಿಗಳನ್ನು ದಿ:16.03.1996 ರಂದು ಮುಖ್ಯ ಅಭಿಯಂತರರು (ದಕ್ಷಿಣ) ಇವರಿಗೆ ಸಲ್ಲಿಸಲಾಗಿದೆ. ಸಮಾನಾಂತರವಾಗಿ ದಿನಾಂಕ02.07.1996ರಂದು ಭಾರತ್ ಫೋರ್ಜ್ ಸಂಸ್ಥೆಯು ಜಿಲ್ಲಾಧಿಕಾರಿ, ಬೆಂಗಳೂರು ನಗರ, ಇವರಿಗೆ ಟೌನ್ ಶಿಪ್ -1 ಮತ್ತು 2 ಒಳಗೊಂಡಂತೆ ಪೆರಿಫೆರಿಲ್ ರಸ್ತೆ, ಲಿಂಕ್ ರಸ್ತೆ ಹಾಗೂ ಬೆಂಗಳೂರು ನಗರ ವ್ಯಾಪ್ತಿಗೆ ಬರುವ ವೇಗದ ಹೆದ್ದಾರಿಯ ಅವಶ್ಯಕವಿರುವ ಜಮೀನಿನ ಬಗ್ಗೆ ತಿಳಿಸಿರುತ್ತಾರೆ. ಪೆರಿಫೆರಲ್ ರಸ್ತೆ, ಲಿಂಕ್ ರಸ್ತೆ, ಇಂಟರ್ ಛೇಂಜ್ ಗಳು, ನಿರ್ವಹಣಾ ಪ್ರದೇಶ ಹಾಗೂ ಸರ್ವೀಸ್ ಪ್ರದೇಶಗಳಿಗೆ ಈ ಪ್ರಸ್ತಾವನೆಯಲ್ಲಿ ನಿಖರವಾಗಿ 2,193 ಎಕರೆಗಳ ಅವಶ್ಯಕತೆಗಳನ್ನು ಬಿಂಬಿಸಲಾಗಿದೆ. ತದನಂತರ ದಿನಾಂಕ 03.06.1997ರಂದು ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, ಇವರು ಬೆಂಗಳೂರು ನಗರ ಹಾಗೂ ಗ್ರಾಮೀಣ ಜಿಲ್ಲೆಗಳಲ್ಲಿ ಅವಶ್ಯಕವಿರುವ ಜಮೀನಿನ ವಿವರಗಳನ್ನು ಜಿಲ್ಲಾಧಿಕಾರಿಯವರಿಗೆ ತಿಳಿಸಲಾಗಿದೆ. ಈ ಎಲ್ಲಾ ವಿವರಗಳು ಸಹ ಕ್ರಿಯಾ ಒಪ್ಪಂದದ ಪೂರ್ವದಲ್ಲಿ ಆಗಿರುವ ಪತ್ರವ್ಯವಹಾರ ಹಾಗೂ ಅನುಷ್ಠಾನದ ನಂತರ ದಿನಾಂಕ03.07.1996ರಂದು ಕಾರ್ಯದರ್ಶಿ, ಲೋಕೋಪಯೋಗಿ, ಇವರು ನೀಡಿರುವ ವಿವರಗಳಿಗೆ ತಾಳೆಯಾಗುತ್ತದೆ.

ದಿನಾಂಕ29.07.1997ರಂದು ನಡೆಸಲಾದ ಅಧಿಕಾರದತ್ತ ಸಮಿತಿಯ ಸಭೆಯಲ್ಲಿ ವೇಗದ ಹೆದ್ದಾರಿಯ ಎರಡೂ ಕಡೆ 15 ಮೀಟರ್‌ಗಳ ವ್ಯಾಪ್ತಿಯಲ್ಲಿ ಯಾವುದೇ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳದೆ ಇರಲು ನೋಟೀಸ್ ಜಾರಿ ಮಾಡಲು ನಿರ್ಧರಿಸಲಾಗಿದೆ. ಇದಕ್ಕೆ ಪೂರಕವಾಗಿ ಅವಶ್ಯಕವಿರುವ ಜಮೀನಿನ ವಿವರಗಳನ್ನು ಎಲ್ಲಾ ಸರ್ಕಾರಿ ಏಜೆನ್ಸಿಗಳಿಗೆ ಕಳುಹಿಸಲು

ನಿರ್ಧರಿಸಲಾಗಿದೆ. ದಿನಾಂಕ31.07.1997ರಂದು ಅಂದಿನ ಮುಖ್ಯ ಕಾರ್ಯದರ್ಶಿಗಳ ಸಹಿಯೊಂದಿಗೆ ವಿವರಗಳನ್ನು ರವಾನಿಸಲಾಗಿದೆ. ವಾಸ್ತವಿಕವಾಗಿ ದಿನಾಂಕ03.06.1997 ಹಾಗೂ 31.07.1997ಗಳಲ್ಲಿ ನೀಡಿರುವ ಜಮೀನುಗಳ ವಿವರಗಳಲ್ಲಿ ವ್ಯತ್ಯಾಸವಿದೆ. ರಾಜ್ಯ ಸರ್ಕಾರವು ನ್ಯಾಯಾಂಗ ನಿಂದನೆ ಪ್ರಕರಣ 265/2007ರಲ್ಲಿ ಕ್ರಿಯಾ ಯೋಜನೆ ಅನುಷ್ಠಾನದ ನಂತರ ಹಲವಾರು ಬದಲಾವಣೆಗಳಾಗಿದ್ದು ಈ ಬದಲಾವಣೆಗಳು ಮೂಲ ಯೋಜನಾ ವರದಿಗೆ ಹೋಲಿಸಿದರೆ ವಿಭಿನ್ನವಾಗಿದೆ ಹಾಗೂ ಈ ಬದಲಾವಣೆಗಳು ಅನಧಿಕೃತವೆಂದು ಹೇಳಿಕೆಯನ್ನು ದಾಖಲಿಸಿರುವುದನ್ನು ಸಮಿತಿಯು ಗಮನಿಸಿದೆ. ನ್ಯಾಯಾಂಗ ನಿಂದನೆ ಪ್ರಕರಣ 96/2007 ಹಾಗೂ 144/2006ಕ್ಕೆ ಅನ್ವಯಿಸುವಂತೆ ರಾಜ್ಯ ಸರ್ಕಾರವು ಈ ಕೆಳಕಂಡ ಅಂಶಗಳನ್ನು ಪುನರುಚ್ಚಿಸಿದೆ:

1. ಕರ್ನಾಟಕದ ಮಾನ್ಯ ಉಚ್ಛ ನ್ಯಾಯಾಲಯವು ಸೋಮಶೇಖರ ರೆಡ್ಡಿ ಪ್ರಕರಣದಲ್ಲಿ ದಿ:03.05.2005ರಂದು ಕ್ರಿಯಾ ಒಪ್ಪಂದವನ್ನು ತಾತ್ವಿಕವಾಗಿ ಹಾಗೂ ಅಕ್ಷರಶ: ಪಾಲಿಸುವಂತೆ ನಿರ್ದೇಶಿಸಿದೆ. ಆದರೆ, ಮಾನ್ಯ ಸರ್ವೋಚ್ಛ ನ್ಯಾಯಾಲಯವು ಪ್ರಕರಣ 144/2006ರಲ್ಲಿ ದಿನಾಂಕ 03.11.2009ರಂದು ಯೋಜನೆಯನ್ನು ದಿನಾಂಕ 12.02.2004ರಂದು ಅನುಮೋದಿಸಿದ ಓ.ಡಿ.ಪಿ. ಅನುಗುಣವಾಗಿ ಜಾರಿಗೊಳಿಸಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ. ಇದೇ ಸಂದರ್ಭದಲ್ಲಿ ನೈಸಲ್ ವಕೀಲರು ***"ಖಾಸಗಿ ಪಾಲುದಾರರು ಕ್ರಿಯಾ ಒಪ್ಪಂದದಲ್ಲಿ ಯಾವುದೇ ಬದಲಾವಣೆಯನ್ನು ಇಚ್ಛಿಸುವುದಿಲ್ಲ. ಅಂದರೆ, ಕ್ರಿಯಾ ಒಪ್ಪಂದದಲ್ಲಿ ನಮೂದಿಸಿರುವ ಮಾನದಂಡಗಳಿಗಿಂತ ವಿಭಿನ್ನ ಹಾಗೂ ಹೆಚ್ಚುವರಿಯಾಗಿ ಜಮೀನನ್ನು ಕೋರುವುದಿಲ್ಲ"*** ಎಂದು ತಿಳಿಸಿರುತ್ತಾರೆ. ***ಈ ಹಿನ್ನೆಲೆಯಲ್ಲಿ ರಸ್ತೆ ಪಂಕ್ತೀಕರಣಕ್ಕೆ ಸಂಬಂಧಿಸಿದಂತೆ ಸರ್ಕಾರ ಹಾಗೂ ಯೋಜನಾ ಸಂಸ್ಥೆಯ ನಡುವೆ ಸ್ಪಷ್ಟತೆ ಇಲ್ಲದೇ ಇರುವುದು ಸಮಿತಿಗೆ ಮನದಟ್ಟಾಗಿದೆ.***

2. ವಾಸ್ತವಿಕವಾಗಿ ನೈಸಲ್ ಹಾಗೂ ನೀಸಲ್ ಸಂಸ್ಥೆಯು ಪೆರಿಫೆರಲ್ ರಸ್ತೆ, ಲಿಂಕ್ ರಸ್ತೆ ಹಾಗೂ ಬೆಂಗಳೂರು ಪ್ರದೇಶದ 5 ಕಿ.ಮೀ. ವ್ಯಾಪ್ತಿಯ ವೇಗದ ಹೆದ್ದಾರಿಯನ್ನು ಓ.ಡಿ.ಪಿ. ಪಂಕ್ತೀಕರಣದ ಅನುಗುಣವಾಗಿ ನಿರ್ಮಿಸಿದೆ. ಈ ಸ್ತರದಲ್ಲಿ ಪುನ: ಕ್ರಿಯಾ ಒಪ್ಪಂದದ ಪಂಕ್ತೀಕರಣದ ಅನುಗುಣವಾಗಿ ಪುನರ್ ನಿರ್ಮಾಣ ಮಾಡುವುದು ದುರ್ಲಭ ಹಾಗೂ ನಿರರ್ಥಕವಾಗುತ್ತದೆ. ***ಈ ಹಿನ್ನೆಲೆಯಲ್ಲಿ, ಪಂಕ್ತೀಕರಣದ ವಿಷಯವನ್ನು ನ್ಯಾಯಾಲಯದ ತೀರ್ಪಿನ ಅನುಗುಣವಾಗಿ ಇತ್ಯರ್ಥವಾದಂತೆ ಎಂದು ಪರಿಗಣಿಸಬೇಕಾಗುವುದು. ಆದರೆ, ಓ.ಡಿ.ಪಿ. ವ್ಯಾಪ್ತಿಯಲ್ಲಿ ನಿರ್ಮಿಸಲಾದ ರಸ್ತೆಗಳ ಉದ್ದ ಹಾಗೂ ಕ್ರಿಯಾ ಒಪ್ಪಂದದಲ್ಲಿ ನಿರ್ಮಿಸಿರುವ ರಸ್ತೆಗಳ ಉದ್ದ ಒಂದೇ ಆಗಿರುವ ಹಿನ್ನೆಲೆಯಲ್ಲಿ ಯೋಜನೆಯ ಸೆಕ್ಷನ್ 'ಎ' ವ್ಯಾಪ್ತಿಯ ಜಮೀನಿನ ಅವಶ್ಯಕತೆಯನ್ನು ಕಟ್ಟುನಿಟ್ಟಾಗಿ ಸೋಮಶೇಖರ ರೆಡ್ಡಿ ಪ್ರಕರಣದ ಕಂಡಿಕೆ 51ರ ಅನುಗುಣವಾಗಿ ನಿಯಂತ್ರಿಸಬೇಕೆಂದು ಸಮಿತಿ ಶಿಫಾರಸ್ಸು ಮಾಡುತ್ತದೆ. ಇದಕ್ಕೆ ಪೂರಕವಾಗಿ ರಾಜ್ಯ ಸರ್ಕಾರವು ಪೂರಕ ಮೂಲಭೂತ ಸೌಕರ್ಯಗಳನ್ನು ಷೆಡ್ಯೂಲ್-4 ಅನುಗುಣವಾಗಿ ಸೃಜಿಸಲು ಕಟ್ಟುನಿಟ್ಟಾದ ಕ್ರಮ ಕೈಗೊಳ್ಳಬೇಕೆಂದು ಸಮಿತಿ ಶಿಫಾರಸ್ಸು ಮಾಡುತ್ತದೆ.***

2ನೇ ಸ್ತರದಲ್ಲಿ ನೈಸಲ್ ಹಾಗೂ ನೀಸಲ್ ಸಂಸ್ಥೆಯು ದಿನಾಂಕ29.09.1999 ಹಾಗೂ 25.03.2001ರಂದು ನಡೆಸಲಾದ ಸಚಿವ ಸಂಪುಟದ ಅನುಮೋದನೆಗೆ ಅನುಗುಣವಾಗಿ ದಿನಾಂಕ06.10.1999 ಹಾಗೂ 31.03.2000ರ ಪೂರಕ ಒಪ್ಪಂದಗಳನ್ನು ಜಾರಿಗೊಳಿಸಿದೆ. ಈ ಒಪ್ಪಂದಗಳನ್ನು ಕ್ರಿಯಾ ಒಪ್ಪಂದದ ಅನುಚ್ಛೇದ-22.2ರ ಅನುಗುಣವಾಗಿ ಜಾರಿಗೊಳಿಸಲಾಗಿದೆ. ಆದರೆ, ವಿಸ್ಮಯಕಾರಿಯಾಗಿ ರಸ್ತೆ ಪಂಕ್ತೀಕರಣದ ಬದಲಾವಣೆಗೆ ಸಂಬಂಧಿಸಿದಂತೆ ಯಾವುದೇ

ಪೂರಕ ಒಪ್ಪಂದವನ್ನು ಜಾರಿಗೊಳಿಸಿರುವುದಿಲ್ಲ. ಕಾನೂನು ಇಲಾಖೆಯು ದಿನಾಂಕ23.04.1999ರ ಅನಧಿಕೃತ ಟಿಪ್ಪಣಿಯ ಮುಖಾಂತರ ಕ್ರಿಯಾ ಒಪ್ಪಂದದಲ್ಲಿ ಜಾರಿಗೊಳಿಸಬಹುದಾದ ತಿದ್ದುಪಡಿ, ಬದಲಾವಣೆ ಹಾಗೂ ಪರಿಷ್ಕರಣೆಗಳನ್ನು ಸಚಿವ ಸಂಪುಟದ ಅನುಮೋದನೆಯೊಂದಿಗೆ ಜಾರಿಗೊಳಿಸಬೇಕೆಂದು ಸ್ಪಷ್ಟೀಕರಿಸಲಾಗಿದೆ. *ಆದುದರಿಂದ, ಯೋಜನಾ ತಾಂತ್ರಿಕ ವರದಿಯ ಪಂಕ್ತೀಕರಣವನ್ನು ಒಳಗೊಂಡ ಕ್ರಿಯಾ ಒಪ್ಪಂದವನ್ನು ಸಚಿವ ಸಂಪುಟ ಅನುಮೋದಿಸಿರುವ ಹಿನ್ನೆಲೆಯಲ್ಲಿ ಪ್ರಸ್ತುತವಾಗಿ ಜಾರಿಗೊಳಿಸಲಾದ ಓ.ಡಿ.ಪಿ. ಪಂಕ್ತೀಕರಣವನ್ನು ಸಹ ಕನಿಷ್ಠ ಪಕ್ಷ ಘಟನೋತ್ತರವಾಗಿ ಸಚಿವ ಸಂಪುಟದ ಅನುಮೋದನೆಗೆ ಸಲ್ಲಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.*

### *XLIII. ನಗರ ಸಮುಚ್ಚಯವನ್ನು ಸ್ಥಳಾಂತರಿಸಿರುವ ಬಗ್ಗೆ:*

ದಿನಾಂಕ 06.04.1998 ರಂದು ನಡೆದ ಅಧಿಕಾರದತ್ತ ಸಮಿತಿಯ 2ನೇ ಸಭೆಯಲ್ಲಿ "The representative of the Town Planning Authority intimated that there would be no objection for the Express Way to pass through Green Belt and also for creation of parks. But he mentioned that no Townships come in the Green Belt. It was suggested to shift Township location beyond the already identified Green Belt Zone". Nice Explained that the have already made a study of this and would be shifting the townships accordingly" ಎಂದು ಉಲ್ಲೇಖಿಸಲಾಗಿದೆ. *ಈ ಪ್ರತಿಪಾದನೆಗೆ ಅನುಗುಣವಾಗಿ ನಗರ ಸಮುಚ್ಚಯ-1 ಅನ್ನು ಕೆಂಗೇರಿ ಆಸುಪಾಸಿನ ಪ್ರದೇಶದಿಂದ ಬಿಡದಿಗೆ ಹಸ್ತಾಂತರಿಸಲಾಗಿದೆ. ಈ ರೀತಿ ತೆಗೆದುಕೊಂಡ ತೀರ್ಮಾನದ ಅನುಸಾರ ಕ್ರಿಯಾ ಒಪ್ಪಂದಕ್ಕಾಗಲೀ ಅಥವಾ ತಾಂತ್ರಿಕ ವರದಿಗಾಗಲೀ ಯಾವುದೇ ತಿದ್ದುಪಡಿ ಸೇರ್ಪಡೆ ಮಾಡಿ ಪೂರಕ ಒಪ್ಪಂದವನ್ನು ಮಾಡಿಕೊಂಡಿರುವುದಿಲ್ಲ.ಇದೇ ಸಮಯದಲ್ಲಿ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ಸೋಮಶೇಖರ ರೆಡ್ಡಿ ಪ್ರಕರಣದ ವಿಚಾರಣೆ ನಡೆಯುತ್ತಿದ್ದು, ನೈಸೆಲ್ ಸಂಸ್ಥೆಯು ಈ ಬದಲಾವಣೆಯ ಬಗ್ಗೆ ಯಾವುದೇ ಹೇಳಿಕೆಯಲ್ಲಿ ಪ್ರತಿಪಾದಿಸಿರುವುದಿಲ್ಲ. ವಾಸ್ತವಿಕವಾಗಿ ತಾಂತ್ರಿಕ ವರದಿಯಲ್ಲಿ ಪಟ್ಟಣ 1 ರ ಭಾಗ 1 ರಲ್ಲಿ ಹಸಿರು ವಲಯ ಪ್ರದೇಶ ಇರುವುದನ್ನು ಪರಿಗಣಿಸಿ ಇದಕ್ಕನುಗುಣವಾಗಿ ಪಟ್ಟಣ ಅಭಿವೃದ್ಧಿ ಪಡಿಸಲು ಪ್ರಸ್ತಾಪಿಸಲಾಗಿದೆ. ಈ ಹಿನ್ನೆಲೆಯಲ್ಲಿ ಪಟ್ಟಣ 1 ಅನ್ನು ಸ್ಥಳಾಂತರಿಸುವ ನಿರ್ಧಾರ ಕ್ರಿಯಾ ಒಪ್ಪಂದದ ಅನುಚ್ಛೇಧ 7.1 ರ ಉಲ್ಲಂಘನೆಯಾಗಿರುತ್ತದೆ. ಆದುದರಿಂದ ಈ ನಿರ್ಧಾರವನ್ನು ಜಾರಿಗೊಳಿಸಲು ಜವಾಬ್ದಾರಯುತವಾದ 2ನೇ ಅಧಿಕಾರದತ್ತ ಸಮಿತಿಯ ಅಧ್ಯಕ್ಷರು, ಸದಸ್ಯರು ಹಾಗೂ ನೈಸೆಲ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರ ವಿರುದ್ಧ ಕಾನೂನು ರೀತ್ಯಾ ಕ್ರಮ ಜರುಗಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.*

ದಿನಾಂಕ 16.01.1999ರ ಅರೆ ಸರ್ಕಾರಿ ಪತ್ರದಲ್ಲಿ ಸರ್ಕಾರದ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ಇವರು ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಇವರಿಗೆ ಈ ಕೆಳಕಂಡಂತೆ ತಿಳಿಸಿರುತ್ತಾರೆ:

"The alignment of the Peripheral Road and the location of the Township-1 was modified in pursuant to the directions given by the Chief Secretary in one of the review meetings so as to have the location of the Township-1 outside the Green Belt Area. Consequently, Township-1 was shifted so also the Peripheral Road. As a result requirement of government land underwent certain changes". *ಈ ಪ್ರತಿಪಾದನೆಯನ್ನು ಅವಲೋಕಿಸಿದಾಗ ಪೆರಿಫರಲ್ ರಸ್ತೆ ಮತ್ತು ನಗರ ಸಮುಚ್ಚಯಗಳ ಸ್ಥಳಾಂತರವನ್ನು ಮುಖ್ಯ ಕಾರ್ಯದರ್ಶಿಯವರು ರಿವ್ಯೂ ಸಭೆಯಲ್ಲಿ ನೀಡಿರುವ ಸೂಚನೆಯ ಅನುಸಾರ ಮಾಡಲಾಗಿದೆ ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. ಕ್ರಿಯಾ ಒಪ್ಪಂದದ ಅನುಚ್ಛೇಧ-22.2 ರ ಅನುಗುಣವಾಗಿ ಪ್ರಸ್ತಾವಿತ ತಿದ್ದುಪಡಿ, ಸೇರ್ಪಡೆ ಅಥವಾ ಪರಿಷ್ಕರಣೆಯನ್ನು ಪೂರಕ ಒಪ್ಪಂದದ ಮುಖಾಂತರ ಅಧಿಕೃತವಾಗಿ ಜಾರಿಗೊಳಿಸಲು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಮೇಲ್ನೋಟಕ್ಕೆ ಮುಖ್ಯ ಕಾರ್ಯದರ್ಶಿಗಳು ನಿರ್ದೇಶನದ ಅನುಸಾರವಾಗಿ ಕ್ರಮ ಕೈಗೊಂಡಿರುವುದರಿಂದ ಕ್ರಿಯಾ ಒಪ್ಪಂದದ ಉಲ್ಲಂಘನೆಯಲ್ಲಿ ಇವರು ಪರೋಕ್ಷವಾಗಿ ಭಾಗಿಯಾಗಿರುವುದು ಸ್ಪಷ್ಟವಾಗಿರುತ್ತದ. ಏಕೆಂದರೆ, ಅಧಿಕಾರದತ್ತ ಸಮಿತಿಗೂ ಸಹ ಮುಖ್ಯ ಕಾರ್ಯದರ್ಶಿಗಳೇ ಅಧ್ಯಕ್ಷರಾಗಿರುತ್ತಾರೆ. ಇದಲ್ಲದೆ, ಈ ಸ್ಥಳಾಂತರ ಕ್ರಿಯಾ ಒಪ್ಪಂದದ ಅನುಚ್ಛೇಧ 22.2, 6.6.1 ಮತ್ತು 7.1 ರ ಸ್ಪಷ್ಟ ಹಾಗೂ ನೇರ ಉಲ್ಲಂಘನೆಯಾಗಿರುತ್ತದೆ. ಆದುದರಿಂದ ಪ್ರಸ್ತಾವಿತ ಜಾರಿಗೊಳಿಸಲು ಕಾರಣಕರ್ತರಾದ ಮುಖ್ಯ ಕಾರ್ಯದರ್ಶಿಗಳ ವಿರುದ್ಧ ಕಾನೂನು ರೀತ್ಯಾ ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.*

ಸರ್ವೆ ನಂ.6/1 ಕೆಂಗೇರಿ-ಗೊಲ್ಲಹಳ್ಳಿ, ಕೆಂಗೇರಿ ಹೋಬಳಿ, ಬೆಂಗಳೂರು ದಕ್ಷಿಣ- 5 ಎಕರೆ 30 ಗುಂಟೆ. ವಾಸ್ತವಿಕವಾಗಿ ಕುಂಬಳಗೋಡು ಗೊಲ್ಲಹಳ್ಳಿಯಲ್ಲಿ ಸರ್ವೆ ನಂ.6 ರಲ್ಲಿ 6 ಎಕರೆ 29 ಗುಂಟೆ ಜಮೀನು 28(1) ರ ಸ್ವಾಧೀನ ಪ್ರಕ್ರಿಯೆಗೆ ಒಳಪಟ್ಟಿದೆ. ಸ್ವಾಧೀನ ಪ್ರಕ್ರಿಯೆ ಆದೇಶ ಕುಂಬಳಗೋಡು-ಗೊಲ್ಲಹಳ್ಳಿಗೆ ಅನ್ವಯಿಸಿದ್ದು, ಇದಕ್ಕೆ ವ್ಯತಿರಿಕ್ತವಾಗಿ ಜೆ.ಎಂ.ಸಿ.ಯನ್ನು ಕೆಂಗೇರಿ-ಗೊಲ್ಲಹಳ್ಳಿ ಸರ್ವೆ ನಂ.6/1 ರಲ್ಲಿ ಜಾರಿಗೊಳಿಸಿದೆ. ಸರ್ವೆ ನಂ. 6/1 ಮತ್ತು 6/2 ಸಂಪೂರ್ಣ ಜಮೀನಿಗೆ ಜೆ.ಎಂ.ಸಿ. ತಯಾರಿಸಲು ಆದೇಶಿಸಿರುವ ಬಗ್ಗೆ ಕೆ.ಐ.ಎ.ಡಿ.ಬಿ ಬಳಿಯಲ್ಲಿ ಲಭ್ಯವಿರುವುದಿಲ್ಲ. ಭೂದಾಖಲೆಗಳ ಸಹಾಯಕ ನಿರ್ದೇಶಕರು, ಬೆಂಗಳುರು ಉಪ ವಿಭಾಗ, ಬೆಂಗಳೂರು ಇವರು ನೀಡಿರುವ ಸ್ಕೆಚ್ ತಃಖ್ತೆಗಳ ಹಿಂಬರಹದ ಅನುಗುಣವಾಗಿ ಪ್ರಸ್ತಾವಿತ ಪ್ರದೇಶವು "ಅಂತರ್ ಬದಲಾವಣೆ ಭೂಸ್ವಾಧೀನವಾಗಲಿರುವ ಪ್ರದೇಶವಾಗಿರುತ್ತದೆ". ಪ್ರಸ್ತಾವಿತ ಬದಲಾವಣೆಯ ಅವಶ್ಯಕತೆಯನ್ನು ಯೋಜನೆಯ ಅನುಮೋದಿತ ಪಂಕ್ತೀಕರಣ ಅಥವಾ ವಿನ್ಯಾಸದ ಅನುಗುಣವಾಗಿ ದೃಢೀಕರಿಸಿರುವುದಿಲ್ಲ. ಅಂದರೆ ದಿನಾಂಕ 12.06.2014 ರಂದು ನೈಸೆಲ್ ಸಂಸ್ಥೆಯು ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಕೆ.ಐ.ಎ.ಡಿ.ಬಿ. ಇವರಿಗೆ ಬರೆದಿರುವ ಉಲ್ಲೇಖದಲ್ಲಿ ಕೆಂಗೇರಿ-ಗೊಲ್ಲಹಳ್ಳಿಯ ಪ್ರಸ್ತಾವಿತ ಸರ್ವೆ ನಂಬರಿನ ಜಮೀನಿನ ವಾಸ್ತವಿಕ ಅವಶ್ಯಕತೆಯ ಬಗ್ಗೆ ನಿರ್ದಿಷ್ಟ ಅಭಿಪ್ರಾಯವನ್ನು ಹೇಳಿರುವುದಿಲ್ಲ. ಪ್ರಾಸಂಗಿಕವಾಗಿ 28(1) ಅಧಿಸೂಚನೆಯಲ್ಲಿ ಭೂ ಮಾಲೀಕರ ಹೆಸರನ್ನು ನಮೂದಿಸುವಲ್ಲಿ ಗೊಂದಲವುಂಟಾಗಿದ್ದು, ತಿದ್ದುಪಡಿಯ ಆದೇಶದ ಮುಖಾಂತರ ಈ ತಪ್ಪನ್ನು ಸರಿಪಡಿಸುವ ಅವಶ್ಯಕತೆಯಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅಂತಿಮವಾಗಿ ವಿಶೇಷ ಭೂಸ್ವಾಧೀನಾಧಿಕಾರಿ, ಕೆ.ಐ.ಎ.ಡಿ.ಬಿ. ಇವರಿಗೆ ಪ್ರಸ್ತಾವಿತ ಜಮೀನಿಗೆ ಅನ್ವಯಿಸುವಂತೆ 15.05.2014 ರ ಹಿಂಬರಹವನ್ನು ರದ್ದುಪಡಿಸಿ ತಿದ್ದುಪಡಿಯ ಆದೇಶವನ್ನು ಜಾರಿಗೊಳಿಸುವ ಮುಖಾಂತರ ಕೆಂಗೇರಿ ಗೊಲ್ಲಹಳ್ಳಿಯ ಸರ್ವೆ ನಂ.6/1 ರ ಭೂಸ್ವಾಧೀನ ಅಧಿಸೂಚನೆಯಲ್ಲಾಗಿರುವ ಗೊಂದಲವನ್ನು ನಿವಾರಿಸುವ ಬಗ್ಗೆ ಪ್ರತಿಪಾದಿಸಿರುತ್ತಾರೆ. ದಿನಾಂಕ 04.12.2008ಕ್ಕೆ ಅನ್ವಯಿಸುವಂತೆ ಅಂತಿಮ ಅಧಿಸೂಚನೆಯನ್ನು ಜಾರಿಗೊಳಿಸಿರುವುದಿಲ್ಲ.

F15(*)

ದಿನಾಂಕ 28.05.2009 ರ ಕೆ.ಐ.ಎ.ಡಿ.ಬಿ. ವಿಶೇಷ ಭೂಸ್ವಾಧೀನಾಧಿಕಾರಿಗಳ ಹಿಂಬರಹದ ಅನುಗುಣವಾಗಿ ಪ್ರಾಥಮಿಕ ಅಧಿಸೂಚನೆಯಲ್ಲಿ ಸರ್ವೆ ನಂ.6/1 ಅನ್ನು ನಮೂದಿಸಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಪ್ರಸ್ತಾವಿತ ಜಮೀನು ನಮೂದಿಸಿರುವ ಚೆಕ್ಕುಬಂದಿಯ ಹೊರಗಿದ್ದಲ್ಲಿ, ಯೋಜನೆಗೆ ಭೂಸ್ವಾಧೀನಗೊಂಡಿಲ್ಲ ಎಂದು ಪರಿಗಣಿಸುವುದು ಎಂದು ಸ್ಪಷ್ಟೀಕರಿಸಲಾಗಿದೆ. ಈ ಹಿನ್ನೆಲೆಯಲ್ಲಿ ಭೂದಾಖಲೆಗಳ ಸಹಾಯಕ ನಿರ್ದೇಶಕರು ನೀಡಿರುವ ಸ್ಕೆಚ್ಚುಗಳನ್ನು ಪರಿಶೀಲಿಸಿದಾಗ ಪ್ರಸ್ತಾವಿತ ಜಮೀನು ಉಲ್ಲೇಖಿತ ಚೆಕ್ಕುಬಂದಿಯ ವ್ಯಾಪ್ತಿಯ ಹೊರಗಡೆ ಇರುವುದು ಸ್ಪಷ್ಟವಾಗಿದೆ. ವಾಸ್ತವಿಕವಾಗಿ ಸರ್ವೆ ನಂ.6 ಕ್ಕೆ ಅನ್ವಯಿಸುವಂತೆ ಪೋಡಿ ಅಥವಾ ವಿಭಜನೆಯನ್ನು 1945 ರಲ್ಲಿ ಇತ್ಯರ್ಥಗೊಳಿಸಲಾಗಿದೆ. ಆದಾಗ್ಯೂ, ದಿನಾಂಕ 16.01.2014 ರಂದು 69 ವರ್ಷಗಳ ನಂತರ ಯೋಜನಾ ಸಮನ್ವಯಾಧಿಕಾರಿ, ಬಿ.ಎಂ.ಐ.ಸಿ.ಪಿ.ಎ. ಇವರು ಸಂಪೂರ್ಣ ಯೋಜನೆಯ ಅಲೈನ್‌ಮೆಂಟ್ ಲಭ್ಯವಿಲ್ಲದೇ ಇರುವುದರಿಂದ ಸರ್ವೆ ನಂಬರ್ 6/1 ಮತ್ತು 6/2 ರಲ್ಲಿರುವ ಜಮೀನುಗಳು ಬೇರೆ ಬೇರೆಯೇ ಎಂಬ ಬಗ್ಗೆ ಕಂದಾಯ ಇಲಾಖೆಯಿಂದ ಸ್ಪಷ್ಟನೆ ಪಡೆದುಕೊಂಡು ಕ್ರಮ ಕೈಗೊಳ್ಳುವಂತೆ ತಿಳಿಸಿರುತ್ತಾರೆ. ಇದರಿಂದ ಜೆ.ಎಂ.ಸಿ. ಪೂರ್ವದಲ್ಲಿ ಭೂದಾಖಲಾತಿಗಳನ್ನು ಪರಿಶೀಲಿಸುವಲ್ಲಿ ಕೆ.ಐ.ಎ.ಡಿ.ಬಿ. ವಿಫಲವಾಗಿರುವುದು ಸ್ಪಷ್ಟವಾಗಿದೆ. ಇದಲ್ಲದೆ, 05.12.2013 ರ ಕೆ.ಐ.ಎ.ಡಿ.ಬಿ. ಹಿಂಬರಹದ ಅನುಗುಣವಾಗಿ ಮಂಡಳಿಯ ಕಡತಗಳಲ್ಲಿ ಜೆ.ಎಂ.ಸಿ. ನಕ್ಷೆಯ ಮೂಲ ಪ್ರತಿ ಇರುವುದಿಲ್ಲ. ಅಧಿಸೂಚಿತವಾಗಿರುವ 6 ಎಕರೆ 29 ಗುಂಟೆ ಜಮೀನನ್ನು ನಕ್ಷೆಯಲ್ಲಿ ಗುರುತಿಸುವಲ್ಲಿ ಕೆ.ಐ.ಎ.ಡಿ.ಬಿ. ನಿಸ್ಸಹಾಯಕವಾಗಿರುವುದು 22.01.2013 ರ ಹಿಂಬರಹದಲ್ಲಿ ಸ್ಪಷ್ಟವಾಗಿದೆ. ಕ್ಲಡಸ್ಟರ್ ಮ್ಯಾಪುಗಳ ಅನುಪಸ್ಥಿತಿಯಲ್ಲಿ ಈ ಗೊಂದಲವಾಗಿರುವುದು ಸ್ಪಷ್ಟವಾಗಿರುವುದರಿಂದ ಈ ರೀತಿಯ ಎಲ್ಲಾ ಪ್ರಕರಣಗಳನ್ನು ಕೆ.ಐ.ಎ.ಡಿ.ಬಿ. ಪರಿವೀಕ್ಷಿಸಿ, ತಿದ್ದುಪಡಿ ಜಾರಿಗೊಳಿಸಿ ಕ್ರಮ ಕೈಗೊಳ್ಳಲು ಸಮಿತಿಯು ಶಿಫಾರಸ್ಸು ಮಾಡುತ್ತದೆ.

## XLIV. ಬಿ.ಎಂ.ಐ.ಸಿ. ಯೋಜನಾ ಪ್ರದೇಶವನ್ನು ರಚಿಸಿರುವ ಬಗ್ಗೆ

ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆ ದಿನಾಂಕ 13.07.1999ರ ಅನುಗುಣವಾಗಿ ಬಿ.ಎಂ.ಐ.ಸಿ.ಪಿ.ಎ. ಪ್ರಾಧಿಕಾರವನ್ನು ರಚಿಸಲಾಗಿದೆ. ಈ ಅಧಿಸೂಚನೆಯ ಅನುಬಂಧ-2 ರಲ್ಲಿ ಯೋಜನಾ ವ್ಯಾಪ್ತಿ ಪ್ರದೇಶವನ್ನು ವಿವರಿಸಲಾಗಿದೆ. ಆದರೆ ಈ ವಿವರಗಳು ಸರ್ಕಾರವು ಅನುಮೋದಿಸಿದೆ ಎಂದು ಪರಿಚಯಿಸಲಾದ 03.06.1997 ರ ಆದೇಶದೊಂದಿಗೆ ಲಗತ್ತಿಸಲಾದ ಜಮೀನುಗಳು ಹಾಗೂ ಯೋಜನಾ ತಾಂತ್ರಿಕ ವರದಿಯಲ್ಲಿ ನಮೂದಿಸಲಾದ ವಿವರಗಳಿಗಿಂತ ವಿಭಿನ್ನವಾಗಿದೆ. ಇದರ ಆಧಾರದ ಮೇಲೆ ಪ್ರಾಧಿಕಾರವು ಓ.ಡಿ.ಪಿ. ಅಲೈನ್‌ಮೆಂಟ್ ಅನ್ನು ಇತ್ಯರ್ಥಗೊಳಿಸಿದ್ದು, ನಗರಾಭಿವೃದ್ಧಿ ಇಲಾಖೆಯು 12.02.2004 ರಂದು ಓ.ಡಿ.ಪಿ.ಯನ್ನು ಅನುಮೋದಿಸಿದೆ. ಈ ಸ್ತರದಲ್ಲಿ ಈಗಾಗಲೇ ಮಾನ್ಯ ಉಚ್ಚ ಹಾಗೂ ಸರ್ವೋಚ್ಚ ನ್ಯಾಯಾಲಯ ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನಲ್ಲಿ ದೃಢೀಕರಿಸಿದ ಪಂಕ್ತೀಕರಣವನ್ನು ಪರಿಗಣಿಸುವುದು ನ್ಯಾಯಬದ್ಧ ಹಾಗೂ ಅತ್ಯವಶ್ಯಕವಾಗಿರುತ್ತದೆ. ಆದರೆ ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪನ್ನು ಉಪೇಕ್ಷಿಸಿ ಬದಲಾಯಿಸಿದ ಪಂಕ್ತೀಕರಣವನ್ನು ಅಳವಡಿಸಿಕೊಳ್ಳಲಾಗಿದೆ. ಈ ಸಂದರ್ಭದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ನೈಸೆಲ್ ಸಂಸ್ಥೆ ಪ್ರಾಧಿಕಾರದ ಒಬ್ಬ ಸದಸ್ಯರಾಗಿರುವ ಹಿನ್ನೆಲೆಯಲ್ಲಿ ಪಂಕ್ತೀಕರಣದ ಬದಲಾವಣೆಗೆ ಪ್ರತಿಕ್ರಿಯಿಸದೇ ಕ್ರಿಯಾ ಒಪ್ಪಂದದ ಉಲ್ಲಂಘನೆಯಲ್ಲಿ ಭಾಗಿಯಾಗಿದ್ದಾರೆಂದು ಸಮಿತಿಯು ತೀರ್ಮಾನಿಸುತ್ತದೆ. ವಿಪರ್ಯಾಸವೆಂದರೆ ಪ್ರಸ್ತಾವಿತ ಓ.ಡಿ.ಪಿ. ಯಲ್ಲಿ ದಿನಾಂಕ 20.02.1995 ರ ಒಡಂಬಡಿಕೆ, 26.08.1995 ರಂದು ವಿದೇಶಿ ಸಮುಚ್ಚಯ ಸಂಸ್ಥೆ ನಲ್ಲಿಸಿದ್ದ ಯೋಜನಾ ತಾಂತ್ರಿಕ ವರದಿ ಹಾಗೂ 20.11.1995 ರ ಲೋಕೋಪಯೋಗಿ ಇಲಾಖೆಯ ಆದೇಶವನ್ನು ಉಲ್ಲೇಖಿಸಲಾಗಿದೆ. ಇದಲ್ಲದೆ, ಯೋಜನಾ ತಾಂತ್ರಿಕ ವರದಿಯ ಅಧ್ಯಾಯ-6 ರಲ್ಲಿ ಯೋಜನೆಯ ವಿವಿಧ ಘಟಕಗಳಿಗೆ ಅವಶ್ಯಕವಿರುವ ಜಮೀನಿನ ವಿಸ್ತೀರ್ಣದ ವಿವರಗಳನ್ನು ನೀಡಿದ್ದು,

ಈ ವಿವರಗಳು ಕ್ರಿಯಾ ಒಪ್ಪಂದದ ಅನುಚ್ಛೇದ-1 ಕ್ಕೆ ತದ್ವಿರುದ್ಧವಾಗಿರುತ್ತದೆ. ಸಂಕ್ಷಿಪ್ತವಾಗಿ ನಗರ ಸಮುಚ್ಚಯಗಳಲ್ಲಿ ಜಮೀನಿನ ಅವಶ್ಯಕತೆಯನ್ನು ಕಡಿತಗೊಳಿಸಿದ್ದು, ಇದೇ ಅನುಪಾತದಲ್ಲಿ ಬೆಂಗಳೂರು ಆಸುಪಾಸಿನ ಪೆರಿಫೆರಲ್ ರಸ್ತೆಯ ವ್ಯಾಪ್ತಿಯಲ್ಲಿ ಹೆಚ್ಚುವರಿ ಜಮೀನಿನ ಅವಶ್ಯಕತೆಯನ್ನು ಬಿಂಬಿಸಲಾಗಿದೆ. *ಈಗಾಗಲೇ ಈ ವರದಿಯಲ್ಲಿ ಚರ್ಚಿಸಿರುವಂತೆ ಯೋಜನಾ ಅನುಷ್ಠಾನದ ಸೆಕ್ಷನ್ 'ಎ' ವ್ಯಾಪ್ತಿಯಲ್ಲಿ ನೈಸೆಲ್/ನೀಸೆಲ್ ಸಂಸ್ಥೆಯು ಜಂಟಿ ಅಭಿವೃದ್ಧಿ ಒಡಂಬಡಿಕೆ, ಮಾರ್ಟ್‌ಗೇಜ್ ಇತ್ಯಾದಿ ವಹಿವಾಟುಗಳನ್ನು ಅನಧಿಕೃತವಾಗಿ ಜಾರಿಗೊಳಿಸಿದ್ದು, ಈ ವಹಿವಾಟುಗಳ ಮೌಲ್ಯ ಸುಮಾರು 7000 ಕೋಟಿ ರೂ.ಗಳಾಗಿರುತ್ತದೆ. ಈ ಬೆಳವಣಿಗೆಯನ್ನು ಗಮನಿಸಿದಾಗ ನೈಸೆಲ್/ನೀಸೆಲ್ ಸಂಸ್ಥೆ ಜಮೀನಿನ ವಹಿವಾಟನ್ನು ಆದ್ಯತೆಯನ್ನು ನೀಡುವ ಉದ್ದೇಶದಿಂದ ಅವಶ್ಯಕತೆಯನ್ನು ಓ.ಡಿ.ಪಿ. ಮುಖಾಂತರ ಪರಿಷ್ಕರಿಸುವಲ್ಲಿ ಪೂರಕ ಪಾತ್ರ ವಹಿಸಿರುವುದು ಸ್ಪಷ್ಟವಾಗಿದೆ. ವಾಸ್ತವಿಕವಾಗಿ ಪೆರಿಫೆರಲ್ ರಸ್ತೆಯ ವ್ಯಾಪ್ತಿಯಲ್ಲಿ 554 ಎಕರೆಗಳನ್ನು ಹೆಚ್ಚುವರಿಯಾಗಿ ಈಗಾಗಲೇ ನೀಡಿದ್ದು, ಉನ್ನತ ಮಟ್ಟದ ಸಮಿತಿಯು 776 ಎಕರೆಗಳ ಹಸ್ತಾಂತರವನ್ನು ಈ ಹಿನ್ನೆಲೆಯಲ್ಲಿ ಸ್ಥಗಿತಗೊಳಿಸಿದೆ. ಇದಲ್ಲದೆ, ಓ.ಡಿ.ಪಿ. ಮುಖಾಂತರ ಪ್ರತಿಪಾದಿಸಿರುವ ವಿಸ್ತೀರ್ಣಗಳು ಕ್ರಿಯಾ ಒಪ್ಪಂದದ ಹಾಗೂ ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನ ಉಲ್ಲಂಘನೆಯಾಗಿರುತ್ತದೆ. ಪ್ರಮುಖವಾಗಿ ಕ್ರಿಯಾ ಒಪ್ಪಂದದ ಅನುಚ್ಛೇದ 2.1, 3.2, 5, 22.1, 22.2, 22.4.2 ಹಾಗೂ ಅನುಚ್ಛೇದ-1 ರ ಸ್ಪಷ್ಟ ಹಾಗೂ ನೇರ ಉಲ್ಲಂಘನೆಯಾಗಿದೆ. ಓ.ಡಿ.ಪಿ. ಪಂಕ್ತೀಕರಣವನ್ನು ನ್ಯಾಯಾಲಯವು ಎತ್ತಿ ಹಿಡಿದಿರುವುದನ್ನು ಸಮಿತಿಯು ಗಮನಿಸಿದೆ. ಆದರೆ ಪಂಕ್ತೀಕರಣದ ಹಿನ್ನೆಲೆಯಲ್ಲಿ ವಿಭಿನ್ನ ವಿಸ್ತೀರ್ಣದ ಜಮೀನನ್ನು ಯೋಜನಾ ಅನುಷ್ಠಾನದ ವಿವಿಧ ಘಟಕಗಳಿಗೆ ಪ್ರತಿಪಾದಿಸಿರುವುದು ಯೋಜನೆಯ ಧ್ಯೇಯೋದ್ದೇಶಗಳಿಗೆ ತದ್ವಿರುದ್ಧವಾಗಿರುವುದು ನೈಸೆಲ್ ಸಂಸ್ಥೆ ಈವರೆವಿಗೂ ಮಾಡಿರುವ ವಹಿವಾಟುಗಳಿಂದ ಸಮಿತಿಗೆ ಸ್ಪಷ್ಟವಾಗಿದೆ. ಈ ಹಿನ್ನೆಲೆಯಲ್ಲಿ ಕ್ರಿಯಾ ಒಪ್ಪಂದದ ಉಲ್ಲಂಘನೆಯ ಆಧಾರದ ಮೇಲೆ ನೈಸೆಲ್/ನೀಸೆಲ್ ಸಂಸ್ಥೆಯ ಮೇಲೆ ಕಾನೂನು ಕ್ರಮ ಜರುಗಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.*

## XIV. <u>ಸಮಿತಿಯ ಸ್ಥಳ ಪರಿವೀಕ್ಷಣೆ</u>

ದಿನಾಂಕ 02.03.2015 ರಂದು ನೈಸ್ ಸದನ ಸಮಿತಿಯು ಬೆಳಗ್ಗೆ 11.00 ಗಂಟೆಗೆ ಕೊಠಡಿ ಸಂಖ್ಯೆ106, ಮೊದಲನೇ ಮಹಡಿ, ವಿಧಾನಸೌಧ ಇಲ್ಲಿ ಸಭೆ ಸೇರಿ, ತದನಂತರ ಯೋಜನಾ ಅನುಷ್ಠಾನ ಪ್ರದೇಶದ ಸೆಕ್ಷನ್ 'ಎ' ವ್ಯಾಪ್ತಿಯ ಪ್ರದೇಶದಲ್ಲಿ ಸ್ಥಳ ಪರಿವೀಕ್ಷಣೆ ಕೈಗೊಂಡಿತು. ಸಮಿತಿಯು ಮಾದಾವರ ಗ್ರಾಮ ವ್ಯಾಪ್ತಿಯಿಂದ ಸ್ಥಳ ಪರಿವೀಕ್ಷಣೆಯನ್ನು ಕೈಗೊಂಡು, ಪೆರಿಫೆರಲ್ ರಸ್ತೆಯ ಮಾದಾವರ ಗ್ರಾಮದಿಂದ ಎಲೆಕ್ಟ್ರಾನಿಕ್ ಸಿಟಿ ವ್ಯಾಪ್ತಿಯ ಚಿಕ್ಕ ತೋಗೂರುವರೆಗೆ ತೆರಳಿ, ನಾಯಂಡಹಳ್ಳಿ ಇಂಟರ್ ಛೇಂಜ್ ಬಳಿ ಸ್ಥಳ ಪರಿವೀಕ್ಷಣೆಯನ್ನು ಅಂತ್ಯಗೊಳಿಸಿತು.

ಭಾಗವಹಿಸಿದ ಮಾನ್ಯ ಸದಸ್ಯರುಗಳು:

1. ಶ್ರೀ ಟಿ.ಬಿ. ಜಯಚಂದ್ರ, ಸಮಿತಿಯ ಅಧ್ಯಕ್ಷರು ಹಾಗೂ ಸನ್ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಮಾನವ ಹಕ್ಕು, ಪಶುಸಂಗೋಪನೆ ಮತ್ತು ಮುಜರಾಯಿ ಸಚಿವರು.
2. ಶ್ರೀ ಎಸ್.ಟಿ. ಸೋಮಶೇಖರ್, ಸಮಿತಿಯ ಸದಸ್ಯರು ಹಾಗೂ ಮಾನ್ಯ ವಿಧಾನಸಭಾ ಸದಸ್ಯರು
3. ಶ್ರೀ ಕೆ.ಎಂ. ಶಿವಲಿಂಗೇಗೌಡ, ಸಮಿತಿಯ ಸದಸ್ಯರು ಹಾಗೂ ಮಾನ್ಯ ವಿಧಾನಸಭಾ ಸದಸ್ಯರು

4. ಶ್ರೀ ಪಿ.ಆರ್. ಸುಧಾಕರ್ ಲಾಲ್, ಸಮಿತಿಯ ಸದಸ್ಯರು ಹಾಗೂ ಮಾನ್ಯ ವಿಧಾನಸಭಾ ಸದಸ್ಯರು
5. ಶ್ರೀ ಎಂ. ಸತೀಶ್ ರೆಡ್ಡಿ, ಸಮಿತಿಯ ಸದಸ್ಯರು ಹಾಗೂ ಮಾನ್ಯ ವಿಧಾನಸಭಾ ಸದಸ್ಯರು
6. ಶ್ರೀ ಎಸ್.ಆರ್. ವಿಶ್ವನಾಥ್, ಸಮಿತಿಯ ಸದಸ್ಯರು ಹಾಗೂ ಮಾನ್ಯ ವಿಧಾನಸಭಾ ಸದಸ್ಯರು
7. ಶ್ರೀ ಬಿ.ಆರ್. ಪಾಟೀಲ್, ಸಮಿತಿಯ ಸದಸ್ಯರು ಹಾಗೂ ಮಾನ್ಯ ವಿಧಾನಸಭಾ ಸದಸ್ಯರು
8. ಶ್ರೀ ಪ್ರಿಯಾಂಕ್ ಎಂ. ಖರ್ಗೆ, ಸಮಿತಿಯ ಸದಸ್ಯರು ಹಾಗೂ ಮಾನ್ಯ ವಿಧಾನಸಭಾ ಸದಸ್ಯರು

ಸುಮಾರು 9 ಯೋಜನಾ ಬಾಧಿತ ಪ್ರದೇಶಗಳಲ್ಲಿ ಸಮಿತಿಯು ಸಂತ್ರಸ್ತರು/ಭೂಮಾಲೀಕರೊಂದಿಗೆ ವಿಚಾರ ವಿನಿಮಯ ನಡೆಸಿತು. ಭೂಮಾಲೀಕರು ಸಲ್ಲಿಸಿರುವ ಮನವಿಗಳು, ಸಾಕ್ಷ್ಯಗಳು ಹಾಗೂ ಹೇಳಿಕೆಗಳ ಪರಾಮರ್ಶೆಯಿಂದ ಈ ಕೆಳಗೆ ವಿವರಿಸಿರುವ ಕುಂದು ಕೊರತೆಗಳು/ಅಹವಾಲುಗಳ ಬಗ್ಗೆ ಆದ್ಯತೆಯ ಮೇರೆಗೆ ತೀರ್ಮಾನಗಳನ್ನು ಜಾರಿಗೊಳಿಸುವುದು ಅವಶ್ಯಕವೆಂದು ಸಮಿತಿಯು ತೀರ್ಮಾನಿಸಿತು:

1. ಪೆರಿಫೆರಲ್ ರಸ್ತೆ, ಲಿಂಕ್ ರಸ್ತೆ ಹಾಗೂ ಇಂಟರ್ ಛೇಂಜ್‌ಗಳಿಗೆ ಅನ್ವಯಿಸುವಂತೆ ಮೂಲ ಅಲೈನ್‌ಮೆಂಟ್ ಹಾಗೂ ಪರಿಷ್ಕೃತ ಅಲೈನ್‌ಮೆಂಟ್ ಅನುಗುಣವಾಗಿ ಜಾರಿಗೊಳಿಸಲಾದ ಭೂಸ್ವಾಧೀನ ಪ್ರಕ್ರಿಯೆಯ ಸಮಗ್ರ ವಿಶ್ಲೇಷಣೆ. ಖಾಸಗಿ ಪಾಲುದಾರರು ಹಲವಾರು ಪ್ರಕರಣಗಳಲ್ಲಿ ಮೂಲ ಅಲೈನ್‌ಮೆಂಟ್ ಹಾಗೂ ಪರಿಷ್ಕೃತ ಅಲೈನ್‌ಮೆಂಟ್ ಈ ಎರಡೂ ಪಥಗಳಲ್ಲಿ ವ್ಯಾಪಕವಾಗಿ ಜಮೀನನ್ನು ಸ್ವಾಧೀನ ಪ್ರಕ್ರಿಯೆಗೆ ಒಳಪಡಿಸಿ ಅನಾವಶ್ಯಕ ಅಥವಾ ಹೆಚ್ಚುವರಿಯಾಗಿ ಸೆಕ್ಷನ್ 'ಎ' ವ್ಯಾಪ್ತಿಯಲ್ಲಿ ಜಮೀನು ಹೊಂದಿದೆ ಎಂಬ ಅಭಿಪ್ರಾಯ ಮೇಲ್ನೋಟಕ್ಕೆ ವ್ಯಕ್ತವಾಯಿತು. ಈ ಹಿನ್ನೆಲೆಯಲ್ಲಿ ಯೋಜನಾ ಅನುಷ್ಠಾನಕ್ಕೆ ಅವಶ್ಯವಿರುವ ಜಮೀನಿನ ಸ್ಥಳ ಹಾಗೂ ವಿಸ್ತೀರ್ಣವನ್ನು ಪರಿಷ್ಕೃತ ಅಲೈನ್‌ಮೆಂಟ್ ಆಧಾರದ ಮೇಲೆ ಸೀಮಿತಗೊಳಿಸುವಂತೆ ಶಿಫಾರಸ್ಸು ಮಾಡಲು ಸಮಿತಿಯು ತೀರ್ಮಾನಿಸಿತು. ಇದಕ್ಕೆ ಪೂರಕವಾಗಿ ಮೂಲ ಅಲೈನ್‌ಮೆಂಟ್ ವ್ಯಾಪ್ತಿಯಲ್ಲಿ ನೀಡಲಾಗಿರುವ ಹೆಚ್ಚುವರಿ ಜಮೀನಿಗೆ ಹಿಂಪಡೆಯುವ ಸಾಧ್ಯತೆಗಳ ಬಗ್ಗೆ ಸಮಿತಿ ವಿಶ್ಲೇಷಿಸಿತು.

2. ಸಮಿತಿಯು ಭೇಟಿ ನೀಡಿದ ಬಹುತೇಕ ಗ್ರಾಮಗಳಲ್ಲಿ ಪುನರ್ ವಸತಿ ಹಾಗೂ ಪುನರ್ ನಿರ್ಮಾಣ ಸೌಲಭ್ಯಗಳನ್ನು ಸಂಪೂರ್ಣವಾಗಿ ಒದಗಿಸದೇ ಇರುವ ಬಗ್ಗೆ ಅಸಮಾಧಾನ ವ್ಯಕ್ತವಾಯಿತು. ಇದಲ್ಲದೆ, ವರಾಹಸಂದ್ರ, ಗೊಲ್ಲಹಳ್ಳಿ ಮತ್ತು ಸೋಮಪುರ ಗ್ರಾಮಗಳ ವ್ಯಾಪ್ತಿಯಲ್ಲಿ ಖಾಸಗಿ ಪಾಲುದಾರರು 60-40 ಅನುಪಾತದಲ್ಲಿ ಸ್ವಾಧೀನಪಡಿಸಿಕೊಂಡ ಭೂಮಿಯನ್ನು ಭೂಮಾಲೀಕರಿಗೆ ನೀಡುವುದಾಗಿ ಆಶ್ವಾಸನೆ ಅಥವಾ ಅನೌಪಚಾರಿಕ ಒಪ್ಪಂದ ಮಾಡಿರುವ ಬಗ್ಗೆ ಪ್ರತಿಪಾದಿಸಲಾಯಿತು. ಈ ಒಪ್ಪಂದವನ್ನು ಉಪೇಕ್ಷಿಸಿರುವ ಬಗ್ಗೆ ಭೂಮಾಲೀಕರು ತೀವ್ರ ಅಸಮಾಧಾನವನ್ನು ವ್ಯಕ್ತಪಡಿಸಿದರು. ಇದಕ್ಕೆ ಪೂರಕವಾಗಿ ಭೂಮಾಲೀಕರು ಯೋಜನೆಗೆ ಪರಭಾರೆ ಮಾಡಿದ ಪ್ರತಿ ಎಕರೆಗೆ 60x40 ವಿಸ್ತೀರ್ಣದ ನಿವೇಶನವನ್ನು ನೀಡುವ ಬಗ್ಗೆ ಆರ್ ಅಂಡ್ ಆರ್ ಪಾಲಿಸಿಯಲ್ಲಿ ಪ್ರಸ್ತಾಪಿಸಲಾಗಿದ್ದು, ಸಮಿತಿ ಭೇಟಿ ನೀಡಿದ ಯೋಜನಾ ಪ್ರದೇಶದಲ್ಲಿ ಈ ಷರತ್ತನ್ನು ಖಾಸಗಿ ಪಾಲುದಾರರು ಸಂಪೂರ್ಣವಾಗಿ ನಿರ್ಲಕ್ಷಿಸಿರುವುದನ್ನು ಸಮಿತಿಯು ಗಮನಿಸಿತು. ಈ ಹಿನ್ನೆಲೆಯಲ್ಲಿ ಈಗಾಗಲೇ ಖಾಸಗಿ ಪಾಲುದಾರರಿಗೆ ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನ ಮಾನದಂಡಗಳಿಗಿಂತ ಹೆಚ್ಚುವರಿಯಾಗಿ ಹಸ್ತಾಂತರಿಸಿರುವ 7754 ಎಕರೆ ವಿಸ್ತೀರ್ಣದ ಜಮೀನಿನಲ್ಲಿ, ಸಮರ್ಪಕ ಸ್ಥಳಗಳಲ್ಲಿ ಪುನರ್ ವಸತಿ ಪ್ಯಾಕೇಜ್ ಅಡಿಯಲ್ಲಿ ನೀಡಬೇಕಾದ

ನಿವೇಶನಗಳನ್ನು ಅಭಿವೃದ್ಧಿಪಡಿಸಿ ಸಂತ್ರಸ್ತರಿಗೆ ವಿತರಿಸುವ ಬಗ್ಗೆ ಸರ್ಕಾರದ ಮಟ್ಟದಲ್ಲಿ ಕ್ರಮ ಕೈಗೊಳ್ಳುವಂತೆ ಸೂಚಿಸಲು ಸಮಿತಿ ನಿರ್ಧರಿಸಿತು. 60–40 ಅನುಪಾತದಲ್ಲಿ ಶೇಕಡ 40 ರಷ್ಟು ಜಮೀನನ್ನು ಭೂಮಾಲೀಕರಿಗೆ ನೀಡುವ ಪ್ರಸ್ತಾವನೆಗೆ ಸಂಬಂಧಿಸಿದಂತೆ ಅಧಿಕೃತ ಅಥವಾ ದೃಢೀಕೃತ ದಾಖಲಾತಿಗಳು ಒಪ್ಪಂದಗಳು ಒಡಂಬಡಿಕೆಯ ಆಧಾರದ ಮೇಲೆ ವೈಫಲ್ಯತೆಯನ್ನು ಸರಿಪಡಿಸಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ವಿಚಾರ ವಿನಿಮಯ ನಡೆಸಿತು. ಕ್ರಿಯಾ ಒಪ್ಪಂದದಲ್ಲಿ ಹಾಗೂ ತಾಂತ್ರಿಕ ವರದಿಯಲ್ಲಿ ಪುನರ್ ವಸತಿ ಹಾಗೂ ಪುನರ್ ನಿರ್ಮಾಣದ ಬಗ್ಗೆ ನಿರ್ದಿಷ್ಟ ಉಲ್ಲೇಖ ಇರುವ ಹಿನ್ನೆಲೆಯಲ್ಲಿ ಒಪ್ಪಂದದ ಉಲ್ಲಂಘನೆಯ ಆಧಾರದ ಮೇಲೆ ಖಾಸಗಿ ಪಾಲುದಾರರ ವಿರುದ್ಧ ಜರುಗಿಸಬಹುದಾದ ಕ್ರಮಗಳ ಬಗ್ಗೆ ಸಮಿತಿ ಚರ್ಚಿಸಿತು

3. ಯೋಜನೆಗೆ ಭೂಮಿಯನ್ನು ಸ್ವಾಧೀನ ಪ್ರಕ್ರಿಯೆ ಮುಖಾಂತರ ಪರಭಾರೆ ಮಾಡಿರುವ ಭೂಮಾಲೀಕರು ಹಲವಾರು ಸಂಕಷ್ಟಗಳಿಗೆ ಒಳಪಟ್ಟಿರುವುದನ್ನು ಸಮಿತಿಯು ಗಮನಿಸಿತು. ತಾತ್ವಿಕವಾಗಿ ಭೂಸ್ವಾಧೀನ ಪ್ರಕ್ರಿಯೆ ಅನುಗುಣವಾಗಿ ಘೋಷಿತ ಜಮೀನನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವುದು ಖಾಸಗಿ ಪಾಲುದಾರರ ಸಹಜ ಹಕ್ಕಾಗಿರುತ್ತದೆ. ಆದಾಗ್ಯೂ ಸಹ ಹಲವಾರು ಪ್ರಕರಣಗಳಲ್ಲಿ ಮೂಲಭೂತ ಮಾನವ ಹಕ್ಕುಗಳ ಉಲ್ಲಂಘನೆ ಮಾಡಿ ಅಕ್ರಮವಾಗಿ ಕಾನೂನು ಬಾಹಿರವಾಗಿ ಮಾನವೀಯವಲ್ಲದ ಕ್ರಮಗಳನ್ನು ಖಾಸಗಿ ಪಾಲುದಾರರು ಕೈಗೊಂಡಿರುವ ಬಗ್ಗೆ ಭೂಮಾಲೀಕರು ತಮ್ಮ ಅಳಲನ್ನು ಸಮಿತಿಯ ಮುಂದೆ ನಿವೇದಿಸಿದರು. ಮೂಲಭೂತ ಮಾನವ ಹಕ್ಕುಗಳ ಉಲ್ಲಂಘನೆಗೆ ಸಂಬಂಧಿಸಿದಂತೆ ಸಮರ್ಪಕ ಸಾಕ್ಷ್ಯಾಧಾರಗಳು ಲಭ್ಯವಿರುವ ಪ್ರಕರಣಗಳಲ್ಲಿ ಮಾನವ ಹಕ್ಕುಗಳ ಆಯೋಗದ ಮುಖಾಂತರ ಕ್ರಮ ಜಾರಿಗೊಳಿಸುವ ಪ್ರಸ್ತಾವನೆಯನ್ನು ಪರಿಶೀಲಿಸಲು ಸಮಿತಿ ತೀರ್ಮಾನಿಸಿತು. ನಿರ್ದಿಷ್ಟವಾಗಿ ಸೋಮಪುರ ಹಾಗೂ ಎಲೆಕ್ಟ್ರಾನಿಕ್ ಸಿಟಿ ಸಮೀಪದಲ್ಲಿ ನಿರ್ಮಿಸಲಾಗಿರುವ "ವೈಟ್ ಫೆದರ್" ಸಮುದಾಯ ಭವನದ ಆಸುಪಾಸಿನಲ್ಲಿ ಜಮೀನು ಉದ್ದೇಶಪೂರ್ವಕವಾಗಿ ಜಲಾವೃತವಾಗಿರುವಂತಹ ಪರಿಸ್ಥಿತಿಯನ್ನು ನಿರ್ಮಿಸಿರುವ ಬಗ್ಗೆ ಸಮಿತಿ ಪರಿವೀಕ್ಷಣೆ ಕೈಗೊಂಡಿತು. ಈ ಪ್ರದೇಶದಲ್ಲಿ ನಿವಾಸಿ ಮನೆಗಳನ್ನು ಧ್ವಂಸಗೊಳಿಸಿ ಈ ಪ್ರದೇಶ ರಾತ್ರಿ ಸಮಯದಲ್ಲಿ ಜಲಾವೃತವಾಗಿರುವಂತೆ ಮಾಡಿರುವ ಬಗ್ಗೆ ಭೂಮಾಲೀಕರು ಅಹವಾಲುಗಳನ್ನು ಸಲ್ಲಿಸಿದರು. ಈ ಎಲ್ಲಾ ಅಂಶಗಳನ್ನು ಮಾನವ ಹಕ್ಕುಗಳ ಉಲ್ಲಂಘನೆಯ ಹಿನ್ನೆಲೆಯಲ್ಲಿ ವಿಶ್ಲೇಷಿಸಲು ಸಮಿತಿ ಶಿಫಾರಸ್ಸು ಮಾಡಿತು.

4. ಸಮಿತಿಯು ಭೇಟಿ ನೀಡಿದ ಬಹುತೇಕ ಗ್ರಾಮಗಳಲ್ಲಿನ ಭೂಮಾಲೀಕರು/ಸಂತ್ರಸ್ತರು ಭೂಸ್ವಾಧೀನ ಪ್ರಕ್ರಿಯೆಗೆ ಸಂಬಂಧಿಸಿದಂತೆ ಈ ಕೆಳಗೆ ವಿವರಿಸಿರುವ ಅಂಶಗಳ ಬಗ್ಗೆ ಸಮಿತಿಗೆ ಮನವಿ/ಅಹವಾಲುಗಳನ್ನು ಸಲ್ಲಿಸಿದರು:

ಅ. ಪ್ರಾರಂಭಿಕ ಅಧಿಸೂಚನೆ, ಪರಿಹಾರ ವಿತರಣೆ ಹಾಗೂ ಅಂತಿಮ ಅಧಿಸೂಚನೆ ಈ ಸ್ತರಗಳ ನಡುವೆ ಅತೀವ ಹಾಗೂ ಅನಿಯತ ವಿಳಂಬ. ಇದರಿಂದಾಗಿ ಘೋಷಿಸಲಾದ ಹಾಗೂ ವಿತರಿಸಲಾದ ಭೂ ಪರಿಹಾರದ ಅಸಮರ್ಪಕತೆ. ಉದಾಹರಣೆಗೆ ಹೆಮ್ಮಿಗೆ ಪುರದ ಆಸುಪಾಸಿನಲ್ಲಿ ಘೋಷಿಸಲಾದ ಪರಿಹಾರ ಸುಮಾರು ಪ್ರತಿ ಎಕರೆಗೆ 6.5 ರಿಂದ 7 ಲಕ್ಷ ರೂ.ಗಳಿದ್ದು, ಪ್ರಸಕ್ತ ಮುಕ್ತ ಮಾರುಕಟ್ಟೆ ದರ ಪ್ರತಿ ಎಕರೆಗೆ ಒಂದು ಕೋಟಿ ರೂ.ಗಳಾಗಿರುವುದು. ಈ ಹಿನ್ನೆಲೆಯಲ್ಲಿ ಭೂ ಮಾಲೀಕರು ಭೂ ಪರಿಹಾರದ ಸ್ವೀಕೃತಿಯಲ್ಲಿ ವಿಳಂಬವನ್ನು ಸಹಿಸುವುದಲ್ಲದೆ, ಚಾಲ್ತಿಯಲ್ಲಿರುವ ಮಾನದಂಡಗಳ ಅನುಗುಣವಾಗಿ

ಪರಿಹಾರದಿಂದ ವಂಚಿತರಾಗಿರುವುದು ಅಹವಾಲುಗಳಿಂದ ಸಮಿತಿಗೆ ಸ್ಪಷ್ಟವಾಯಿತು. ಯೋಜನಾ ಅನುಷ್ಠಾನದ ಅಭಿವೃದ್ಧಿಯು ಅಪೇಕ್ಷೆಗಿಂತ ಬಹಳಷ್ಟು ಕಡಿಮೆಯಾಗಿರುವ ಹಿನ್ನೆಲೆಯಲ್ಲಿ ಈ ದರಗಳ ಏರಿಕೆಯ ಪ್ರವೃತ್ತಿಯು ಖಾಸಗಿ ಪಾಲುದಾರರಿಗೆ ಅನಪೇಕ್ಷಿತ ಲಾಭದ ಮೂಲವಾಗಿದೆ ಎಂದು ಭೂಮಾಲೀಕರು ಪ್ರತಿಪಾದಿಸಿದರು. ಈ ಪ್ರತಿಪಾದನೆಗೆ ಪೂರಕವಾಗಿ ಮಾದಾವರ ಗ್ರಾಮದ ವ್ಯಾಪ್ತಿಯಲ್ಲಿ ಖಾಸಗಿ ಪಾಲುದಾರರು ಪ್ರಮುಖ ಹಾಗೂ ಮುಂಚೂಣಿಯಲ್ಲಿರುವ ಹಲವಾರು ಅಭಿವೃದ್ಧಿದಾರರೊಡನೆ ಜಾರಿಗೊಳಿಸಿರುವ ಒಡಂಬಡಿಕೆಗಳ ಪ್ರತಿಗಳನ್ನು ಸಮಿತಿಗೆ ಸಲ್ಲಿಸಿದರು. ಪ್ರಮುಖವಾಗಿ ಅಜ್ಮೀರ ಡೆವಲಪರ್ಸ್ ಸಂಸ್ಥೆಯೊಂದಿಗೆ ಖಾಸಗಿ ಪಾಲುದಾರರು ಒಡಂಬಡಿಕೆಗಳನ್ನು ಜಾರಿಗೊಳಿಸಿರುವುದನ್ನು ಸಮಿತಿ ಗಮನಿಸಿತು. ಈ ಹಿನ್ನೆಲೆಯಲ್ಲಿ ಬಹುತೇಕ ಭೂ ಮಾಲೀಕರು ವಾಸ್ತವಿಕವಾಗಿ ಪೆರಿಫರಲ್ ರಸ್ತೆ, ಲಿಂಕ್ ರಸ್ತೆ ಹಾಗೂ ಇಂಟರ್ ಛೇಂಜ್‌ಗಳ ನಿರ್ಮಾಣಕ್ಕೆ ಅವಶ್ಯವಿರುವ ಅಥವಾ ಈಗಾಗಲೇ ಬಳಸಲಾಗಿರುವ ವಿಸ್ತೀರ್ಣವನ್ನು ಹೊರತುಪಡಿಸಿ ಖಾಸಗಿ ಪಾಲುದಾರರು ಸ್ವಾಧೀನಪಡಿಸಿಕೊಂಡಿರುವ ಹೆಚ್ಚುವರಿ ಜಮೀನನ್ನು ಅವರ ಸುಪರ್ದಿಗೆ ಬಿಟ್ಟುಕೊಡುವ ಬಗ್ಗೆ ತೀವ್ರ ಆಕ್ರೋಶ ಹಾಗೂ ಪ್ರತಿಭಟನೆಯನ್ನು ವ್ಯಕ್ತಪಡಿಸಿದರು. ಬಹುತೇಕ ಪ್ರಕರಣಗಳಲ್ಲಿ ನಿರ್ಮಿಸಲಾದ ಮೂಲಭೂತ ಸೌಕರ್ಯ ಅಂದರೆ ರಸ್ತೆಗಳಿಂದ ಸುಮಾರು 2 ಕಿ.ಮೀ. ವ್ಯಾಪ್ತಿಯವರೆಗೂ ಖಾಸಗಿ ಪಾಲುದಾರರು ಭೂಮಿಯನ್ನು ಸ್ವಾಧೀನಪಡಿಸಿಕೊಂಡಿರುವುದು ಸಮಿತಿಗೆ ಮನದಟ್ಟಾಯಿತು. ಸೆಕ್ಷನ್ 'ಎ' ವ್ಯಾಪ್ತಿಯಲ್ಲಿ ಕ್ರಿಯಾ ಒಪ್ಪಂದದ ಅನುಗುಣವಾಗಿ ಹಸ್ತಾಂತರಿಸಬಹುದಾದ ಜಮೀನಿನ ವಿಸ್ತೀರ್ಣ ಹಾಗೂ ವಾಸ್ತವಿಕ ಸ್ಥಿತಿಗತಿಗಳ ತುಲನಾತ್ಮಕ ವಿಶ್ಲೇಷಣೆಯನ್ನು ಕೈಗೊಳ್ಳುವಂತೆ ಸಮಿತಿ ಈ ಸ್ತರದಲ್ಲಿ ಉಪಕಾರ್ಯದರ್ಶಿಗಳಿಗೆ ನಿರ್ದೇಶಿಸಿತು.

ಆ. ಸೆಕ್ಷನ್ 'ಎ' ರಸ್ತೆ ಮಾರ್ಗದಲ್ಲಿ ಸ್ವಾಧೀನಪಡಿಸಿಕೊಳ್ಳಲಾದ ನಿವಾಸಿ ಕಟ್ಟಡಗಳು ಹಾಗೂ ಇತರ ವಸತಿ ಸೌಲಭ್ಯಗಳ ಬದಲಾಗಿ ಖಾಸಗಿ ಪಾಲುದಾರರು ಪರ್ಯಾಯ ವ್ಯವಸ್ಥೆಯನ್ನು ಕೇವಲ ಸಾಂಕೇತಿಕವಾಗಿ ಒದಗಿಸಿರುವುದನ್ನು ಸಮಿತಿಯು ಗಮನಿಸಿತು. ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿರುವುದನ್ನು ಸಮಿತಿಯು ಗಮನಿಸಿತು. ಇದಲ್ಲದೆ, ಸೃಜಿಸಲಾದ ಆಸ್ತಿಗಳನ್ನು ಸಂತ್ರಸ್ತರ ಪರವಾಗಿ ಹಸ್ತಾಂತರಿಸದೇ ಇರುವುದನ್ನು ಸಮಿತಿಯು ಗಮನಿಸಿತು. ಗೊಲ್ಲಹಳ್ಳಿ ಗ್ರಾಮವು ಬದಲಾಯಿತ ಪಥದ ಅನುಗುಣವಾಗಿ ಯೋಜನಾ ವ್ಯಾಪ್ತಿ ಪ್ರದೇಶಕ್ಕೆ ಒಳಪಟ್ಟಿದೆ. ಆದಾಗ್ಯೂ, ಈ ಗ್ರಾಮದ ವ್ಯಾಪ್ತಿಯ ಜಮೀನುಗಳು ಫಲವತ್ತಾದ ಪ್ರದೇಶಗಳಲ್ಲಿದ್ದು, ಬಹುತೇಕವಾಗಿ ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಿರುವುದರಿಂದ ರೈತರು ರಸ್ತೆ ಅನುಷ್ಠಾನ ಪ್ರದೇಶವನ್ನು ಹೊರತುಪಡಿಸಿ ಯಾವುದೇ ಹೆಚ್ಚುವರಿ ಜಮೀನನ್ನು ಯೋಜನೆಗೆ ಹಸ್ತಾಂತರಿಸುವ ಬಗ್ಗೆ ಪ್ರತಿರೋಧವನ್ನು ವ್ಯಕ್ತಪಡಿಸಿದರು. ಸಮಿತಿಯು ಪ್ರಾಥಮಿಕ ಅಧಿಸೂಚನೆಯ ನಂತರ ಸ್ವಾಧೀನ ಪ್ರಕ್ರಿಯೆ ಸ್ಥಗಿತಗೊಂಡು ಅನಿಯತವಾಗಿ ವಿಳಂಬಗೊಂಡ ಪ್ರಕರಣಗಳನ್ನು ಹಿಂಪಡೆಯುವ ಬಗ್ಗೆ ಪರಿಶೀಲಿಸಲು ತೀರ್ಮಾನಿಸಿತು. ಈಗಾಗಲೇ ಸರ್ಕಾರದ ಮಟ್ಟದಲ್ಲಿ ಹೆಚ್ಚುವರಿ ಜಮೀನು ನೀಡಿರುವ ಬಗ್ಗೆ ಇರುವ ದೃಢೀಕರಣ ಹಾಗೂ ಸೆಕ್ಷನ್ 'ಎ' ವ್ಯಾಪ್ತಿಗೆ ಅನ್ವಯಿಸುವಂತೆ ಸ್ವಾಧೀನ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲು ಕೈಗೊಂಡಿರುವ ನಿರ್ಧಾರ. ಈ ಹಿನ್ನೆಲೆಯಲ್ಲಿ ಪ್ರಗತಿಯಲ್ಲಿರುವ ಸ್ವಾಧೀನ ಪ್ರಕ್ರಿಯೆಯನ್ನು ಪರಿವೀಕ್ಷಿಸಲು ಸಮಿತಿ ತೀರ್ಮಾನಿಸಿತು.

ಇ. ಎಲೆಕ್ಟ್ರಾನಿಕ್ ಸಿಟಿ ಅಂತ್ಯಗೊಳ್ಳುವ ಟೋಲ್ ರಸ್ತೆ ಪ್ರದೇಶದಲ್ಲಿ ದೊಡ್ಡ ತೋಗೂರು ಹಾಗೂ ಚಿಕ್ಕ ತೋಗೂರು ಗ್ರಾಮಗಳ ಜೀವಂತ ಕೆರೆಯನ್ನು ವ್ಯಾಪ್ತಿ ಪ್ರದೇಶಕ್ಕೆ

ಒಳಪಡಿಸಿರುವುದನ್ನು ಸಮಿತಿ ಗಮನಿಸಿತು. ಸಮಿತಿಯ ಸ್ಥಳ ಪರಿವೀಕ್ಷಣೆಯಲ್ಲಿ ಮೇಲ್ನೋಟಕ್ಕೆ ಯೋಜನಾ ವ್ಯಾಪ್ತಿಯ ಪ್ರದೇಶದಲ್ಲಿ ಸುಮಾರು 6 ಜೀವಂತ ಕೆರೆಗಳು ಸ್ವಾಧೀನವಾಗಿರುವುದನ್ನು ಸಮಿತಿ ಗಮನಿಸಿತು. ಈ ಬಗ್ಗೆ ಚಾಲ್ತಿಯಲ್ಲಿರುವ ನಿಯಮಾವಳಿಗಳ ಹಿನ್ನೆಲೆಯಲ್ಲಿ ಕ್ರಮ ಕೈಗೊಳ್ಳಲು ನಿರ್ಧರಿಸಲಾಯಿತು.

5. ಯೋಜನಾ ವ್ಯಾಪ್ತಿ ಪ್ರದೇಶದ ಅಭಿವೃದ್ಧಿ ಹಾಗೂ ಬೆಳವಣಿಗೆಯನ್ನು ನಿಯಂತ್ರಿಸಲು ಬಿ.ಎಂ.ಐ.ಸಿ.ಎ.ಪಿ.ಎ. ಎಂಬ ಒಂದು ಪ್ರಾಧಿಕಾರವನ್ನು ಸೃಜಿಸಲಾಗಿದೆ. ಯೋಜನಾ ವ್ಯಾಪ್ತಿ ಪ್ರದೇಶದಲ್ಲಾಗುವ ನಿರ್ಮಾಣಗಳು, ಮೂಲಭೂತ ಸೌಕರ್ಯ ಕಾಮಗಾರಿಗಳು ಹಾಗೂ ಇತರೆ ಎಲ್ಲಾ ಅಭಿವೃದ್ಧಿ ಕಾಮಗಾರಿಗಳು ಕೆ.ಟಿ.ಸಿ.ಪಿ. ಅಧಿನಿಯಮದ ಅನುಗುಣವಾಗಿ ಬಿ.ಎಂ.ಐ.ಸಿ.ಎ.ಪಿ.ಎ. ವತಿಯಿಂದ ಅನುಮೋದಿತವಾಗುವುದು ಅವಶ್ಯಕವಾಗುತ್ತದೆ. ಸಮಿತಿಯು ಕೈಗೊಂಡ ಸ್ಥಳ ಪರಿವೀಕ್ಷಣೆಯಲ್ಲಿ ಎರಡು ಸ್ತರಗಳಲ್ಲಿ (ಮಾದಾವರ ಹಾಗೂ ಚಿಕ್ಕ ತೋಗೂರು) ಖಾಸಗಿ ಪಾಲುದಾರರು ಬಹುದೊಡ್ಡ ಹಾಗೂ ಸುಸಜ್ಜಿತ ಸಮುದಾಯ ಭವನಗಳನ್ನು ನಿರ್ಮಿಸಿ ಬಾಡಿಗೆ ಆಧಾರದ ಮೇಲೆ ಸಾರ್ವಜನಿಕರಿಗೆ ನೀಡುತ್ತಿರುವುದು ಸಮಿತಿಯ ಗಮನಕ್ಕೆ ಬಂದಿತು. ಈ ಎರಡೂ ಸಮುದಾಯ ಭವನಗಳು ಹಾಗೂ ಸಮಿತಿಯು ಪರಿವೀಕ್ಷಿಸಿದ ಸಮಗ್ರ ಅಭಿವೃದ್ಧಿ ಕಾಮಗಾರಿಗಳಿಗೆ ಅನ್ವಯಿಸುವಂತೆ ಬಿ.ಎಂ.ಐ.ಸಿ.ಎ.ಪಿ.ಎ. ಯು ಯಾವುದೇ ಅನುಮೋದನೆಯನ್ನು ನೀಡದಿರುವುದು ಕಾರ್ಯದರ್ಶಿ, ಬಿ.ಎಂ.ಐ.ಸಿ.ಎ.ಪಿ.ಎ. ಇವರಿಂದ ಸ್ಪಷ್ಟವಾಯಿತು. ಮಾದಾವರ ಗ್ರಾಮದ ವ್ಯಾಪ್ತಿಯಲ್ಲಿ ಅಜ್ಮೀರ ಡೆವಲಪರ್ಸ್ ಸಂಸ್ಥೆಯು ಅಭಿವೃದ್ಧಿ ಪ್ರದೇಶಕ್ಕೆ ಸುಬದ್ಧವಾದ ತಗಡಿನ ಬೇಲಿಯನ್ನು ನಿರ್ಮಿಸಿ ಭದ್ರತಾ ಸಿಬ್ಬಂದಿಯನ್ನೂ ಸಹ ನಿಯೋಜಿಸಿರುವುದನ್ನು ಸಮಿತಿಯು ಗಮನಿಸಿತು. ಅಭಿವೃದ್ಧಿದಾರರ ಫಲಕಗಳನ್ನೂ ಸಹ ವ್ಯಾಪಕವಾಗಿ ಪ್ರದರ್ಶಿಸಲಾಗಿತ್ತು. ಈ ಬೆಳವಣಿಗೆಗಳ ಬಗ್ಗೆ ಬಿ.ಎಂ.ಐ.ಸಿ.ಎ.ಪಿ.ಎ. ಸದಸ್ಯ ಕಾರ್ಯದರ್ಶಿಯವರು ಅಸಹಾಯಕತೆಯನ್ನು ವ್ಯಕ್ತಪಡಿಸಿದರು. ಈ ಹಿನ್ನೆಲೆಯಲ್ಲಿ ಕ್ಷೇತ್ರೀಯ ಯೋಜನಾ ಪ್ರಾಧಿಕಾರ ಈ ಅನಧಿಕೃತ ಹಾಗೂ ನಿಯಮಬಾಹಿರವಾದ ದುರ್ಬಳಕೆಯ ಬಗ್ಗೆ ನಿರ್ಲಕ್ಷ್ಯತಾ ಧೋರಣೆಯನ್ನು ತಳೆದಿದೆ ಎಂದು ಸಮಿತಿಯು ಅಭಿಪ್ರಾಯ ಪಟ್ಟಿತು. ಕ್ರಿಯಾ ಒಪ್ಪಂದದ ಅನುಗುಣವಾಗಿ ನಿರೂಪಿತ ವ್ಯಾಪ್ತಿ ಪ್ರದೇಶಗಳಲ್ಲಿ ಅಭಿವೃದ್ಧಿ ಹಾಗೂ ಬಳಕೆಯನ್ನು ನಿಯಂತ್ರಿಸುವ ಉದ್ದೇಶದಿಂದ ಪ್ರತ್ಯೇಕ ಪ್ರಾಧಿಕಾರವನ್ನು ಘೋಷಿಸಿದ್ದಾಗ್ಯೂ ಸಹ ಈ ಪ್ರಾಧಿಕಾರ ನಿಷ್ಕ್ರಿಯವಾಗಿರುವ ಬಗ್ಗೆ ಭೂಮಾಲೀಕರು ಅಸಮಾಧಾನವನ್ನು ವ್ಯಕ್ತಪಡಿಸಿದರು. ಸಂಬಂಧಿತ ಕ್ಷೇತ್ರಗಳ ಭೂಮಾಲೀಕರು ನಿಯಮಾವಳಿಗಳ ಉಲ್ಲಂಘನೆಯ ಆಧಾರದ ಮೇಲೆ ಅನಧಿಕೃತ ಸ್ಟ್ರಕ್ಚರ್‌ಗಳು, ಸಮುದಾಯ ಭವನಗಳು ಹಾಗೂ ಕಟ್ಟಡಗಳನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು. ಈ ಹಿನ್ನೆಲೆಯಲ್ಲಿ ಇತ್ತೀಚೆಗೆ ನಗರಾಭಿವೃದ್ಧಿ ಪ್ರಾಧಿಕಾರವು ಅನಧಿಕೃತ ಕಟ್ಟಡಗಳನ್ನು ಹಾಗೂ ಬಡಾವಣೆಗಳನ್ನು ನೆಲಸಮಗೊಳಿಸಿರುವ ಬಗ್ಗೆ ರೈತರು ಪ್ರತಿಪಾದಿಸಿದರು. ಇದೇ ತೀಕ್ಷ್ಣತೆ ಅಥವಾ ಕರ್ತವ್ಯ ನಿಷ್ಠೆಯೊಂದಿಗೆ ಬಿ.ಎಂ.ಐ.ಸಿ.ಎ.ಪಿ.ಎ. ಯೋಜನಾ ಪ್ರದೇಶದ ಅನಧಿಕೃತ ಬೆಳವಣಿಗೆಗಳನ್ನು ನಿಯಂತ್ರಿಸುವಲ್ಲಿ ವೈಫಲ್ಯತೆಯಾಗಿರುವ ಬಗ್ಗೆ ತೀವ್ರ ಅಸಮಾಧಾನ ಹಾಗೂ ಪ್ರತಿಭಟನೆಯನ್ನು ವ್ಯಕ್ತಪಡಿಸಿದರು. ಹಲವಾರು ಸಂತ್ರಸ್ತರು ಖಾಸಗಿ ಪಾಲುದಾರರ ಪರವಾಗಿ ಶ್ರೀ ರುದ್ರೇಶ್ ಎಂದು ನಾಮಾಂಕಿತವಾದ ವ್ಯಕ್ತಿಯೊಬ್ಬರು ನೈಸ್‌ಲ್ ಯೋಜನಾ ಪ್ರದೇಶದಲ್ಲಿ ವ್ಯಾಪಕ ವಿಸ್ತೀರ್ಣದ ಜಮೀನನ್ನು ಬೇನಾಮಿಯಾಗಿ ಹೊಂದಿರುವ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದರು. ಈ ಹಿನ್ನೆಲೆಯಲ್ಲಿ ಪ್ರಥಮ ಸ್ತರದಲ್ಲಿ ಕೆ.ಐ.ಎ.ಡಿ.ಬಿ. ಜಾರಿಗೊಳಿಸಿದ 2723 ಹಾಗೂ ಎರಡನೇ ಸ್ತರದಲ್ಲಿ ನೀಡಿರುವ

ಷರತ್ತುಬದ್ಧ ನಿರಾಪೇಕ್ಷಣಾ ಪತ್ರಗಳ ನಂತರ ಜಾರಿಗೊಳಿಸಿರುವ ಜಮೀನಿನ ಪರಭಾರೆ ಪ್ರಕರಣಗಳನ್ನು ಸರ್ಕಾರವು ಸಮಗ್ರವಾಗಿ ತನಿಖೆಗೆ ಒಳಪಡಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

6. ನಾಯಂಡಹಳ್ಳಿ ಇಂಟರ್ ಛೇಂಜ್ ವ್ಯಾಪ್ತಿಯಲ್ಲಿ ಸಂಪೂರ್ಣವಾಗಿ ಅಭಿವೃದ್ಧಿ ಹೊಂದಿರುವ ನಿವಾಸಿ ಬಡಾವಣೆಯು ಯೋಜನಾ ಸ್ವಾಧೀನ ಪ್ರಕ್ರಿಯೆಗೆ ಒಳಪಟ್ಟಿರುವ ಬಗ್ಗೆ ಅಲ್ಲಿನ ನಿವಾಸಿಗಳು ಸಮಿತಿಗೆ ಮನವಿಯನ್ನು ಸಲ್ಲಿಸಿದರು. ಈ ಕ್ಷೇತ್ರ ವ್ಯಾಪ್ತಿಯಲ್ಲಿ ಪ್ರತಿಶತ 70 ರಷ್ಟು ಪ್ರದೇಶದಲ್ಲಿ ಮನೆಗಳನ್ನು ನಿರ್ಮಿಸಲಾಗಿದ್ದು, ಖಾಲಿ ಇರುವ ನಿವೇಶನಗಳ ಮೇಲೆ ಖಾಸಗಿ ಪಾಲುದಾರರು ಸ್ವಾಧೀನತೆಯನ್ನು ಪಡೆಯುವ ಉದ್ದೇಶದಿಂದ ಹಲವಾರು ನಿರ್ಬಂಧಗಳನ್ನು ಹೇರಿ ತಡೆಗೋಡೆಗಳನ್ನು ನಿರ್ಮಾಣ ಮಾಡುತ್ತಿರುವ ಬಗ್ಗೆ ನಿವಾಸಿಗಳು ಅಹವಾಲುಗಳನ್ನು ಸಲ್ಲಿಸಿದರು. ಈ ಹಿನ್ನೆಲೆಯಲ್ಲಿ ಕಂದಾಯ ದಾಖಲಾತಿ, ನಕ್ಷೆ ಮಂಜೂರಾತಿ ಹಾಗೂ ಇತರೆ ಅನುಮೋದನೆಗಳು/ಮಂಜೂರಾತಿಗಳ ಹಿನ್ನೆಲೆಯಲ್ಲಿ ಮನವಿಯನ್ನು ವಿಶ್ಲೇಷಿಸುವುದಾಗಿ ಸಮಿತಿ ಆಶ್ವಾಸನೆ ನೀಡಿತು.

7. ಸಮಿತಿಯು ಸ್ಥಳ ಪರಿವೀಕ್ಷಣೆ ಕೈಗೊಂಡ ಯೋಜನಾ ಪ್ರದೇಶದಲ್ಲಿ ಈಗಾಗಲೇ ಉಲ್ಲೇಖಿಸಿರುವಂತೆ ಎರಡು ಸಮುದಾಯ ಭವನಗಳು ಖಾಸಗಿ ಪಾಲುದಾರರಿಂದ ನಿರ್ಮಿತವಾಗಿದ್ದು, ವಾಣಿಜ್ಯ ಸೌಲಭ್ಯಗಳಾಗಿ ಕಾರ್ಯ ನಿರ್ವಹಿಸುತ್ತಿರುವುದನ್ನು ಸಮಿತಿಯು ಗಮನಿಸಿದೆ. ಈ ಕಟ್ಟಡಗಳಿಗೆ ಅಥವಾ ನಿರ್ಮಾಣಕ್ಕೆ ಕ್ಷೇತ್ರೀಯ ಪ್ರಾಧಿಕಾರದಿಂದ ನಕ್ಷೆ ಮಂಜೂರಾತಿ ಅಥವಾ ಅನುಮೋದನೆ ದೊರಕಿರುವ ಬಗ್ಗೆ ಬಿ.ಎಂ.ಐ.ಸಿ.ಎ.ಪಿ.ಎ. ಸದಸ್ಯ ಕಾರ್ಯದರ್ಶಿಯವರಿಂದ ನಿರ್ದಿಷ್ಟ ಸ್ಪಷ್ಟೀಕರಣ ಅಥವಾ ವಿವರಣೆ ದೊರಕಿರುವುದಿಲ್ಲ. ಇದರಿಂದ ಯೋಜನಾ ವ್ಯಾಪ್ತಿ ಪ್ರದೇಶದಲ್ಲಿ ಅಭಿವೃದ್ಧಿ ಅಥವಾ ನಿರ್ಮಾಣ ಚಟುವಟಿಕೆಗಳನ್ನು ಪರಿವೀಕ್ಷಿಸುವಲ್ಲಿ ಅಥವಾ ನಿಯಂತ್ರಿಸುವಲ್ಲಿ ಬಿ.ಎಂ.ಐ.ಸಿ.ಎ.ಪಿ.ಎ. ವಿಫಲವಾಗಿರುವುದು ಸಮಿತಿಗೆ ಸ್ಪಷ್ಟವಾಗಿದೆ. ಈ ಹಿನ್ನೆಲೆಯಲ್ಲಿ ಬಿ.ಎಂ.ಐ.ಸಿ.ಎ.ಪಿ.ಎ. ಪ್ರಾಧಿಕಾರವು ಸಂಪೂರ್ಣ ಯೋಜನಾ ಪ್ರದೇಶದ ಸರ್ವೇಕ್ಷಣೆ ಕೈಗೊಂಡು ಪ್ರಾಧಿಕಾರದ ಅಧಿನಿಯಮ ಅಥವಾ ಕೆ.ಟಿ.ಸಿ.ಪಿ ಕಾಯಿದೆಗಳ ನಿಯಮಗಳು/ನಿರ್ದೇಶನಗಳನ್ನು ಉಲ್ಲಂಘಿಸಿ ಜಾರಿಗೊಳಿಸಿರುವ ನಿರ್ಮಾಣ ಕಾಮಗಾರಿಗಳು ಹಾಗೂ ಅಭಿವೃದ್ಧಿ ಕಾಮಗಾರಿಗಳ ಸಂಪೂರ್ಣ ವಿವರಗಳನ್ನು ಕೂಡಲೇ ಪಡೆಯುವಂತೆ ಸಮಿತಿಯು ಉಪಕಾರ್ಯದರ್ಶಿಯವರಿಗೆ ನಿರ್ದೇಶಿಸಿತು.

8. ಕೆ.ಐ.ಎ.ಡಿ.ಬಿ. ಅಧಿನಿಯಮಗಳ ಅನುಗುಣವಾಗಿ ಭೂ ಸ್ವಾಧೀನ ಪ್ರಕ್ರಿಯೆಯನ್ನು ಜಾರಿಗೊಳಿಸಿ ಜಮೀನನ್ನು ಯೋಜನಾ ಪ್ರದೇಶದಲ್ಲಿ ಸ್ವಾಧೀನಕ್ಕೆ ಪಡೆದಿದೆ. ಪ್ರಸ್ತಾವಿತ ನಿಯಮಾವಳಿಗಳ ಅನುಸಾರವಾಗಿ ಯೋಜನಾ ಪ್ರಕ್ರಿಯೆ ಒಂದು ಸ್ತರ ಸಂಪೂರ್ಣವಾದ ನಂತರ, ಭೂಮಿಯ ಸಂಪೂರ್ಣ ಸ್ವಾಧೀನತೆ ಸ್ವಾಧೀನ ಪ್ರಾಧಿಕಾರದ ಬಳಿ ಇರುವುದು. ಹಲವಾರು ಪ್ರಕರಣಗಳಲ್ಲಿ ಭೂ ಮಾಲೀಕರ ಸ್ಪಷ್ಟ ಪ್ರತಿಭಟನೆ ಇದ್ದಾಗ್ಯೂ, ಜಮೀನನ್ನು ಸ್ವಾಧೀನಕ್ಕೆ ಪಡೆದಿರುವುದು ಸಮಿತಿಗೆ ಸ್ಪಷ್ಟವಾಗಿದೆ. ನಿಯಮಾವಳಿಗಳ ಹಿನ್ನೆಲೆಯಲ್ಲಿ ಈ ಕ್ರಮ ಸಮಂಜಸವಾಗಿದ್ದಾಗ್ಯೂ ಸಹ, ಭೂ ಮಾಲೀಕರು ಹಾಗೂ ಖಾಸಗಿ ಪಾಲುದಾರರ ನಡುವೆ ವೈಷಮ್ಯತೆ ಉಂಟಾಗಿ ಕಾನೂನು ಹಾಗೂ ಸುವ್ಯವಸ್ಥೆಯ ಉಲ್ಲಂಘನೆಯಾಗಿದೆ. ಈ ಪರಿಸ್ಥಿತಿಯನ್ನು ನಿಯಂತ್ರಿಸಲು ಹಾಗೂ ತಮ್ಮ ಹಕ್ಕನ್ನು ಜಾರಿಗೊಳಿಸಲು ಖಾಸಗಿ ಪಾಲುದಾರರು ಹಲವಾರು ಸಂತ್ರಸ್ತರು/ಭೂಮಾಲೀಕರ ವಿರುದ್ಧ ಕ್ರಿಮಿನಲ್ ಕೇಸುಗಳನ್ನು ದಾಖಲಿಸಿರುವ ಬಗ್ಗೆ ಸಮಿತಿ

ಅಹವಾಲು ಹಾಗೂ ಮನವಿಗಳನ್ನು ಸ್ವೀಕರಿಸಿತು. ಬಾಧಿತ ಸಂತ್ರಸ್ತರು ಬಹುತೇಕವಾಗಿ ಆರ್ಥಿಕ ಹಾಗೂ ಸಾಮಾಜಿಕವಾಗಿ ಹಿಂದುಳಿದ ರೈತ ಸಮುದಾಯದ ವ್ಯಕ್ತಿಗಳಾಗಿರುವ ಹಿನ್ನೆಲೆಯಲ್ಲಿ ಈ ಕ್ರಿಮಿನಲ್ ಕೇಸುಗಳನ್ನು ಪರಿಣಾಮಕಾರಿಯಾಗಿ ಇತ್ಯರ್ಥಗೊಳಿಸಲು ಸೌಲಭ್ಯ ಅಥವಾ ಸಾಮರ್ಥ್ಯಗಳಿಲ್ಲದೆ ನಿಸ್ಸಾಹಾಯಕವಾಗಿರುವುದನ್ನು ಸಮಿತಿ ಸ್ಥಳ ಪರಿವೀಕ್ಷಣೆಯ ಸಮಯದಲ್ಲಿ ಗಮನಿಸಿದೆ. ಪ್ರಸ್ತಾವಿತ ವಿಷಯವು ನಿಯಮಾವಳಿಗಳ ಹಿನ್ನೆಲೆಯಲ್ಲಿ ಜಾರಿಗೊಳಿಸಬಹುದಾದ ತಾಂತ್ರಿಕ ಕ್ರಮಗಳ ಆಧಾರದ ಮೇಲೆ ಗಂಭೀರ ಹಾಗೂ ಅನಪೇಕ್ಷಿತ ತಿರುವು ಪಡೆದಿರುವುದು ಆಕ್ಷೇಪಣೀಯ ಹಾಗೂ ಖೇದನೀಯವೆಂದು ಸಮಿತಿ ತೀರ್ಮಾನಿಸಿತು. ಈ ಹಿನ್ನೆಲೆಯಲ್ಲಿ ನಿಸ್ಸಾಹಾಯಕ ಯೋಜನಾ ಸಂತ್ರಸ್ತರ ಮೇಲೆ ಹೂಡಲಾಗಿರುವ ಕ್ರಿಮಿನಲ್ ಮೊಕದ್ದಮೆಗಳನ್ನು ಹಿಂಪಡೆಯುವ ಸಾಧಕ ಬಾಧಕಗಳನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸುವ ಬಗ್ಗೆ ಸಮಿತಿ ಚರ್ಚಿಸಿತು.

9. ಕನಕಪುರ ರಸ್ತೆ ಮತ್ತು ಎಲೆಕ್ಟ್ರಾನಿಕ್ ಸಿಟಿ ಸಂಪರ್ಕ ಕಲ್ಪಿಸುವ ಟೋಲ್ ರಸ್ತೆಯಲ್ಲಿ ಹಲವಾರು ಚಿರತೆಗಳು ರಸ್ತೆ ಅಪಘಾತದಲ್ಲಿ ಸಾವನ್ನಪ್ಪಿರುವ ಬಗ್ಗೆ ಸಮಿತಿಯ ಗಮನವನ್ನು ಸೆಳೆಯಲಾಯಿತು. ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ಸೂಕ್ಷ್ಮಕರ ಪರಿಸರ ವ್ಯಾಪ್ತಿಯ (Ecologically Sensitive Zone) ಪ್ರದೇಶದಲ್ಲಿ ಟೋಲ್ ರಸ್ತೆ ಹಾಗೂ ಸಂಬಂಧಿತ ಅಭಿವೃದ್ಧಿ ಕಾಮಗಾರಿಗಳನ್ನು ಜಾರಿಗೊಳಿಸಿರುವುದು ಈ ದುರಂತಕ್ಕೆ ಪ್ರಮುಖ ಕಾರಣ ಎಂದು ಪ್ರತಿಪಾದಿಸಲಾಯಿತು. ಈ ಘಟನೆಗಳ ಹಿನ್ನೆಲೆಯಲ್ಲಿ ಸಮಿತಿಯು ರಾಷ್ಟ್ರೀಯ ಉದ್ಯಾನವನ ಹಾಗೂ ವನ್ಯಜೀವಿ ಪ್ರದೇಶದ ಆಸುಪಾಸಿನ ಕ್ಷೇತ್ರದ ಅಭಿವೃದ್ಧಿಗೆ ನಿರೂಪಿಸಲಾದ ನಿರ್ಬಂಧನೆಗಳನ್ನು ವಿಶ್ಲೇಷಿಸಿ ಸೂಕ್ತ ಕ್ರಮ ಕೈಗೊಳ್ಳುವ ಬಗ್ಗೆ ಚರ್ಚೆ ಕೈಗೊಂಡಿತು.

10. ಬಿ.ಎಂ.ಐ.ಸಿ. ಯೋಜನೆಯ ಸೆಕ್ಷನ್ 'ಎ' ಕಾಮಗಾರಿಗಳ ಅಂಗವಾಗಿ ಅನುಷ್ಠಾನಗೊಳಿಸಲಾದ ಪೆರಿಫರೆಲ್ ರಸ್ತೆ, ಲಿಂಕ್ ರಸ್ತೆ ಹಾಗೂ ಇಂಟರ್ ಛೇಂಜ್‌ಗಳು ಸ್ಥಳೀಯರ ಸಂಪರ್ಕ ಸೌಲಭ್ಯಗಳನ್ನು ಸಂಪೂರ್ಣವಾಗಿ ಕಡಿತಗೊಳಿಸಿರುವುದು ಸ್ಥಳ ಪರಿವೀಕ್ಷಣೆಯಲ್ಲಿ ಸ್ಪಷ್ಟವಾಗಿದೆ. ಹಲವಾರು ಪ್ರಕರಣಗಳಲ್ಲಿ ಭೂಮಾಲೀಕರ ಜಮೀನು ಟೋಲ್ ರಸ್ತೆಯಿಂದ ವಿಭಜನೆಯಾಗಿದ್ದು, ತಮ್ಮ ಜಮೀನಿನ ಇನ್ನೊಂದು ಭಾಗಕ್ಕೆ ಸಂಪರ್ಕ ಪಡೆಯಲು ಟೋಲ್ ಫೀ ಕೊಡುವಂತಹ ಪರಿಸ್ಥಿತಿ ಉದ್ಭವವಾಗಿರುವ ಬಗ್ಗೆ ಭೂಮಾಲೀಕರು ಪ್ರತಿಪಾದಿಸಿದರು. ಟೋಲ್ ರಸ್ತೆಯ ವಿನ್ಯಾಸವನ್ನು ಗಮನಿಸಿದಲ್ಲಿ, ಕೇವಲ ಟೋಲ್ ಬೂತ್ ಹಾಗೂ ಇಂಟರ್ ಛೇಂಜ್‌ಗಳ ಪ್ರದೇಶದಲ್ಲಿ ಮಾತ್ರ ಬೇರೆ ಭಾಗಗಳಿಗೆ ಸಂಪರ್ಕವನ್ನು ಕಲ್ಪಿಸಲಾಗಿದೆ. ಬಹುತೇಕ ಟೋಲ್ ರಸ್ತೆ ಪ್ರದೇಶದಲ್ಲಿ ಟೋಲ್ ರಸ್ತೆಯ ಎರಡೂ ಬದಿಯಲ್ಲಿರುವ ಭೂ ಮಾಲೀಕರು ಈ ಸಂಪರ್ಕ ಸೌಲಭ್ಯದಿಂದ ಸಂಪೂರ್ಣವಾಗಿ ವಂಚಿತರಾಗಿರುತ್ತಾರೆ. ಇದರಿಂದಾಗಿ, ಸ್ಥಳೀಯ ಭೂ ಮಾಲೀಕರು ಈ ರಸ್ತೆ ಸೌಲಭ್ಯವನ್ನು ಪ್ರತಿ ಬಾರಿಯೂ ಟೋಲ್ ಫೀ ನೀಡಿ ಬಳಸುವಂತಹ ಪರಿಸ್ಥಿತಿ ಉದ್ಭವವಾಗಿರುವುದನ್ನು ಸಮಿತಿಯು ಗಮನಿಸಿತು. ಈ ಕ್ಲಿಷ್ಟತೆಯನ್ನು ಗಮನಿಸಿದಲ್ಲಿ ಯೋಜನಾ ಪ್ರದೇಶದ ರೈತರು ಅವರ ಮೂಲಭೂತ ಹಕ್ಕಾದ ಸಂಪರ್ಕ ಸೌಲಭ್ಯದಿಂದ ವಂಚಿತರಾಗಿದ್ದು, ಅಭಿವೃದ್ಧಿ ಕಾಮಗಾರಿಗಾಗಿ ತಾವೇ ಪರಭಾರೆ ಮಾಡಿರುವ ಜಮೀನಿನಲ್ಲಿ ಪ್ರಯಾಣಿಸಲು ತಾವೇ ಟೋಲ್ ಫೀ ಕೊಡುವಂತೆ ಪ್ರಸಂಗ ಉದ್ಭವವಾಗಿರುವುದನ್ನು ಸಮಿತಿ ಖೇದದಿಂದ ಗಮನಿಸಿತು. ಮೂಲಭೂತ ಸೌಕರ್ಯ ಅಥವಾ ಯಾವುದೇ ಇತರ ಸ್ವರೂಪದ ಸರ್ಕಾರಿ ಯೋಜನೆಗಳಲ್ಲಿ ಸ್ಥಳೀಯರ ದೈನಂದಿನ ಜೀವನಕ್ಕೆ ಪ್ರತಿಕೂಲ ವಾತಾವರಣ ನಿರ್ಮಿಸುವುದು ಯೋಜನೆಯ ಒಂದು ಅವಿಭಾಜ್ಯ ಧ್ಯೇಯೋದ್ದೇಶವಾಗಿರಬೇಕು ಎಂದು ಸಮಿತಿಯು ತೀರ್ಮಾನಿಸಿತು.

ಬಹುತೇಕವಾಗಿ ಬಡತನ ರೇಖೆಗಿಂತ ಕೆಳಮಟ್ಟದಲ್ಲಿರುವ ಹಾಗೂ ಮಧ್ಯಮ ಮತ್ತು ಸಣ್ಣ ಹಿಡುವಳಿದಾರರು ಈ ಸಂದಿಗ್ಧತೆಯಿಂದಾಗಿ ಆರ್ಥಿಕವಾಗಿ ಹಾಗೂ ಮಾನಸಿಕವಾಗಿ ಅತೀವ ಸಂಕಷ್ಟಕ್ಕೀಡಾಗಿರುವುದು ಸಂತ್ರಸ್ತರ ಹೇಳಿಕೆಯಿಂದ ಸಮಿತಿಗೆ ಮನವರಿಕೆಯಾಗಿದೆ. ಸಂತ್ರಸ್ತರ ಮನವಿಗಳನ್ನು ಪರಿಗಣಿಸಿ ಸಮಿತಿಯು ಯೋಜನಾ ಅನುಷ್ಠಾನ ಪ್ರದೇಶದ ವ್ಯಾಪ್ತಿಯಲ್ಲಿನ ಸ್ಥಳೀಯ ಭೂಮಾಲೀಕರು, ಸಂತ್ರಸ್ತರು ಹಾಗೂ ನಿವಾಸಿಗಳಿಗೆ ಟೋಲ್ ಶುಲ್ಕದಿಂದ ವಿನಾಯಿತಿ ನೀಡುವ ವ್ಯವಸ್ಥೆಯನ್ನು ಕಲ್ಪಿಸುವುದು ಅತ್ಯವಶ್ಯಕ ಎಂದು ತೀರ್ಮಾನಿಸಿತು. ಈ ಸೌಲಭ್ಯವನ್ನು ಯೋಜನಾ ಅನುಷ್ಠಾನದ ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಮಾನದಂಡಗಳ ಅವಿಭಾಜ್ಯ ಅಂಗವಾಗಿ ಸೇರ್ಪಡೆ ಮಾಡಲು ತ್ವರಿತವಾಗಿ ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಅಭಿಪ್ರಾಯ ವ್ಯಕ್ತಪಡಿಸಿತು.

11. ಬೆಂಗಳೂರು ದಕ್ಷಿಣ ತಾಲ್ಲೂಕಿನ ಬಿ.ಎಂ. ಕಾವಲ್ ಸರ್ವೆ ನಂ.26, ಹೊಸಪಾಳ್ಯ ಕಾಲೋನಿ ಗ್ರಾಮ, ಸರ್ವೆ ನಂ.4 ಹಾಗೂ ಕೆಂಗೇರಿಯ ಸರ್ವೆ ನಂ.18 ಈ ಪ್ರದೇಶಗಳು ಜನನಿಬಿಡವಾಗಿರುವುದನ್ನು ಸಮಿತಿಯು ಗಮನಿಸಿತು. ಸರ್ವೆ ನಂ.4 ರಲ್ಲಿ ಸುಮಾರು 900 ಮನೆಗಳು ಇರುವುದಾಗಿ ಯೋಜನಾ ಸಂತ್ರಸ್ತರು ತಿಳಿಸಿದರು. ಸರ್ವೆ ನಂ.26 ರಲ್ಲಿ 36 ಫಲಾನುಭವಿಗಳಿಗೆ ಹಕ್ಕುಪತ್ರ ನೀಡುವ ಪ್ರಸ್ತಾವನೆ ಕಂದಾಯ ಇಲಾಖೆಯಲ್ಲಿ ಬಾಕಿ ಇರುವುದಾಗಿ ತಿಳಿಸಿದರು. ಪ್ರಸ್ತಾವಿತ ಜಮೀನಿನ ವಾಸ್ತವಿಕ ಅವಶ್ಯಕತೆ ಹಾಗೂ ಬಳಕೆಯ ಆಧಾರದ ಮೇಲೆ ಕೆ.ಐ.ಎ.ಡಿ.ಬಿ. ಸಂಸ್ಥೆಯು ಪ್ರತಿಪಾದಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

12. ಈ ಸ್ತರದಲ್ಲಿ ಪ್ರಮೋದ್ ಲೇಔಟ್ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ ಸಂಸ್ಥೆಯ ಪದಾಧಿಕಾರಿಗಳು ಸಮಿತಿಗೆ ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಪಂತರ ಪಾಳ್ಯ ಗ್ರಾಮದ ಸರ್ವೆ ನಂ.51, 52, 53, 54/1, 54/2, 55/1, 55/2, 56, 57/1, 57/2, 58, 61, 62 ಹಾಗೂ ಹೊಸಕೆರೆಹಳ್ಳಿ ಗ್ರಾಮದ ಸರ್ವೆ ನಂ.72 ರಲ್ಲಿರುವ ಜಮೀನನ್ನು ಭೂಸ್ವಾಧೀನದಿಂದ ಹೊರತುಪಡಿಸುವಂತೆ ಕೋರಿ ಮನವಿಯನ್ನು ಸಲ್ಲಿಸಿದರು. ವಾಸ್ತವಿಕವಾಗಿ 13.03.2007ರಂದು ವಿಶೇಷ ಭೂಸ್ವಾಧೀನಾಧಿಕಾರಿಗಳು, ಕೆ.ಐ.ಎ.ಡಿ.ಬಿ. ಇವರು ಈ ಸರ್ವೆ ನಂಬರುಗಳ ಸ್ಥಳ ಪರಿವೀಕ್ಷಣೆಯನ್ನು ಕೈಗೊಂಡಿದ್ದು, ಈ ವರದಿಯ ಅನುಗುಣವಾಗಿ ಕೆಳಕಂಡ ಅಂಶಗಳು ಸಮಿತಿಗೆ ಸ್ಪಷ್ಟವಾಗಿದೆ:

ಪ್ರಸ್ತಾವಿತ ಸರ್ವೆ ನಂಬರುಗಳಲ್ಲಿ ವಿಂಗಡಿಸಿರುವ ನಿವೇಶನಗಳನ್ನು 1992-93 ರಲ್ಲಿ ಖರೀದಿಸಿದ್ದು, ಸಂಬಂಧಿತ ನಗರ ಸಭೆಗೆ ಅಭಿವೃದ್ಧಿ ಶುಲ್ಕವನ್ನು ಪಾವತಿಸಿ ನಕ್ಷೆಗಳಿಗೆ ಅನುಮೋದನೆ ಪಡೆದು ಬ್ಯಾಂಕುಗಳಿಂದ ಸಾಲ ಪಡೆದು ಸದರಿ ನಿವೇಶನಗಳಲ್ಲಿ ಮನೆಗಳನ್ನು ಕಟ್ಟಿಕೊಂಡು ಕಂದಾಯ ವಗೈರೆಯನ್ನು ಪಾವತಿಸಿ ವಾಸವಾಗಿರುತ್ತಾರೆ. ಪ್ರಸ್ತಾವಿತ ಪ್ರದೇಶಕ್ಕೆ ಮೂಲಭೂತ ಸೌಕರ್ಯವನ್ನು ಸರ್ಕಾರದ ವತಿಯಿಂದ ಒದಗಿಸಲಾಗಿದೆ. ವಿಶೇಷ ಜಿಲ್ಲಾಧಿಕಾರಿಗಳು, ಕೆ.ಐ.ಎ.ಡಿ.ಬಿ. ದಿನಾಂಕ 21.03.2015 ರಂದು ಸಲ್ಲಿಸಿರುವ ವಿವರಗಳ ಅನುಗುಣವಾಗಿ ಈ ಪೈಕಿ ಸರ್ವೆ ನಂ.51, 52, 53, 54/1, 54/2 ಹಾಗೂ ಹೊಸಕೆರೆಹಳ್ಳಿ ಗ್ರಾಮದ ಸರ್ವೆ ನಂ.72 ರ ಜಮೀನನ್ನು ನೈಸ್ ಸಂಸ್ಥೆಗೆ ಲಿಂಕ್ ರಸ್ತೆಯ ಸೃಜನೆಗಾಗಿ ಹಸ್ತಾಂತರಿಸಲಾಗಿದೆ. ಇದರ ಒಟ್ಟು ವಿಸ್ತೀರ್ಣ 17 ಎಕರೆ 11 ಗುಂಟೆ ಆಗಿರುತ್ತದೆ. ಈ ಪೈಕಿ 5 ಎಕರೆ 16 ಗುಂಟೆ ಜಮೀನನ್ನು 2005 ರಲ್ಲಿ ನೈಸ್ ಸಂಸ್ಥೆಗೆ ಹಸ್ತಾಂತರಿಸಿ ಕ್ರಯ ಪತ್ರ ಮಾಡಿಕೊಡಲಾಗಿದೆ. ಸಮಿತಿಯು ಸ್ಥಳ ಪರಿವೀಕ್ಷಣ ಕೈಗೊಂಡಾಗ ಪ್ರಸ್ತಾವಿತ ಸರ್ವೆ ನಂಬರುಗಳ ವ್ಯಾಪ್ತಿಯಲ್ಲಿ ಬಹುತೇಕವಾಗಿ ಮನೆಗಳನ್ನು ನಿರ್ಮಿಸಿರುವುದು ಸ್ಪಷ್ಟವಾಗಿದೆ. ಉಳಿದ ಪ್ರದೇಶದಲ್ಲಿ ಕ್ರಿಯಾ ಒಪ್ಪಂದದ ಪ್ರತಿಪಾದನೆಗಳ ಅನುಗುಣವಾಗಿ ಲಿಂಕ್

ರಸ್ತೆಯನ್ನಾಗಲೀ ಅಥವಾ ಪೂರಕ ಮೂಲಭೂತ ಸೌಕರ್ಯವನ್ನಾಗಲೀ ಅಭಿವೃದ್ಧಿಪಡಿಸಲು ಸಾಧ್ಯವಿರುವುದಿಲ್ಲ. ಇದಲ್ಲದೆ, ನೀಸೆಲ್ ಸಂಸ್ಥೆಯು 31.03.2011 ರಂದು ಪಂತರ ಪಾಳ್ಯದ ಸರ್ವೆ ನಂ.52, 53 ಮತ್ತು 54/2 ವ್ಯಾಪ್ತಿಯಲ್ಲಿನ 4 ಎಕರೆ 24 ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ಮೆ: ಉಮಾಂಗ್ ರಿಯಲ್‌ಟೆಕ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯೊಡನೆ ಜಂಟಿ ಅಭಿವೃದ್ಧಿ ಕರಾರನ್ನು ಜಾರಿಗೊಳಿಸಿದೆ. ಇದರಿಂದ ಈ ಪ್ರದೇಶ ವಾಸ್ತವಿಕವಾಗಿ ಯೋಜನಾ ಅನುಷ್ಠಾನಕ್ಕೆ ಅವಶ್ಯಕವಿಲ್ಲದಿರುವುದು ಸ್ಪಷ್ಟವಾಗುತ್ತದೆ. ಇದಲ್ಲದೆ, ದಿನಾಂಕ 15.02.2016 ರಂದು ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ ನೀಡಿರುವ ಮನವಿಯ ಅನುಗುಣವಾಗಿ ಪಂತರ ಪಾಳ್ಯ ಗ್ರಾಮದ ಸರ್ವೆ ನಂ.53, 54/1, 54/2 ಹಾಗೂ ಹೊಸಕೆರೆಹಳ್ಳಿ ಗ್ರಾಮದ ಸರ್ವೆ ನಂ.72 ವಿಸ್ತೀರ್ಣ 5.16 ಎಕರೆ ಜಮೀನಿನಲ್ಲಿ 60*40 ವಿಸ್ತೀರ್ಣದ 27 ನಿವೇಶನಗಳಿಗೆ ನೀಸ್ ಸಂಸ್ಥೆಯವರು ಬೇಲಿಗಳನ್ನು ಹಾಕಿ, ಸದರಿ ನಿವೇಶನಗಳು ನೀಸೆಲ್ ಸಂಸ್ಥೆಗೆ ಸೇರಿದವೆಂದು ಬೋರ್ಡ್‌ಗಳನ್ನು ಹಾಕಿರುತ್ತಾರೆ. ವಾಸ್ತವಿಕವಾಗಿ ಈ ಭಾಗದ ಲಿಂಕ್ ರಸ್ತೆ ಬಹುತೇಕವಾಗಿ ಸಂಪೂರ್ಣಗೊಂಡಿದ್ದು, ಸಮಿತಿಯು ಗಮನಿಸಿದಂತೆ ಈ ಪ್ರದೇಶವು ಮಾರ್ಗದ ಹಕ್ಕಿನ ವ್ಯಾಪ್ತಿಯಿಂದ ಹೊರಗಿರುತ್ತದೆ. ದಿನಾಂಕ 03.01.2000 ರಂದು ಪ್ರಸ್ತಾವಿತ ಸಂಘದವರು ಕೆ.ಐ.ಎ.ಡಿ.ಬಿ. ಅಧಿನಿಯಮ 28(2)ರ ಅಡಿಯಲ್ಲಿ ಆಕ್ಷೇಪಣೆಗಳನ್ನು ಸಲ್ಲಿಸಿರುವುದನ್ನು ಸಮಿತಿಯು ಗಮನಿಸಿದೆ. ಈ ಆಕ್ಷೇಪಣೆಗಳನ್ನು ತಿರಸ್ಕರಿಸಲಾಗಿದೆ. ಈ ಜಮೀನಿಗೆ ಅನ್ವಯಿಸುವಂತೆ ಅವಾರ್ಡ್‌ಗಳನ್ನು 2008ರ ಪೂರ್ವದಲ್ಲಿ ಮಾಡಲಾಗಿದೆ. ಆದಾಗ್ಯೂ, ನೈಸೆಲ್ ಸಂಸ್ಥೆ ಸ್ವಾಧೀನವನ್ನು ಪಡೆದಿರುವುದಿಲ್ಲ. ಈ ಹಿನ್ನೆಲೆಯಲ್ಲಿ, ಪ್ರಸ್ತಾವಿತ ಜಮೀನನ್ನು ಭೂ ಸ್ವಾಧೀನ ಪ್ರಕ್ರಿಯೆಯಿಂದ ಹೊರತುಪಡಿಸಲು ಭೂ ಸ್ವಾಧೀನ ಕಾಯ್ದೆ ಕಲಂ 11ರ ಅಡಿಯಲ್ಲಿ ಕ್ರಮ ಕೈಗೊಳ್ಳುವ ಪ್ರಸ್ತಾವನೆಯನ್ನು ಸರ್ಕಾರವು ಪರಿಗಣಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಸಮಿತಿಗೆ ಲಭ್ಯವಿರುವ ಮಾಹಿತಿಗಳ ಅನುಗುಣವಾಗಿ ಈ ಭೂಸ್ವಾಧೀನ ಪ್ರಕ್ರಿಯೆಯನ್ನು ಪ್ರಶ್ನಿಸಿ ಕರ್ನಾಟಕ ಉಚ್ಛ ನ್ಯಾಯಾಲಯದ ಮುಂದೆ ಪ್ರಮೋದ್ ಬಡಾವಣೆ ನಿವಾಸಿ ಅಭಿವೃದ್ಧಿ ಸಂಘವು CCC 796/2007 ಅನ್ನು ದಾಖಲಿಸಿದೆ. ***ಈ ಹಿನ್ನೆಲೆಯಲ್ಲಿ, ಸಮಿತಿಯ ವಿಶ್ಲೇಷಣೆ ಹಾಗೂ ಶಿಫಾರಸ್ಸು ಪ್ರಸ್ತಾವಿತ ರಿಟ್ ಅರ್ಜಿಯ ಅಂತಿಮ ತೀರ್ಪು ಅಥವಾ ಆದೇಶದ ನಿರ್ಬಂಧನೆಗಳಿಗೆ ಒಳಪಟ್ಟಿರುತ್ತದೆ.***

## ***XLVI. <u>ಕಡತಗಳು ನಾಪತ್ತೆಯಾಗಿರುವ ಬಗ್ಗೆ :</u>***

ದಿನಾಂಕ 19.11.2014ರಂದು ಸಮಿತಿಯ ನಿರ್ದೇಶನಗಳ ಅನುಸಾರವಾಗಿ ನೈಸಲ್ ಯೋಜನಾ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಲೋಕೋಪಯೋಗಿ ಇಲಾಖೆಯಲ್ಲಿ ನಿರ್ವಹಿಸಲಾದ 439 ಕಡತಗಳ ಬಗ್ಗೆ ಮಾಹಿತಿಯನ್ನು ಕೋರಲಾಯಿತು. ಪ್ರಮುಖವಾಗಿ ಕಡತಗಳ ಸಂಖ್ಯೆ, ಶೀರ್ಷಿಕೆ ಹಾಗೂ ವಿಷಯಗಳ ಬಗ್ಗೆ ಮಾಹಿತಿಯನ್ನು ಕೋರಲಾಯಿತು. ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿಯವರ ಹೇಳಿಕೆಯ ಅನುಗುಣವಾಗಿ 439 ಕಡತಗಳ ಪೈಕಿ 137 ಕಡತಗಳು ಲಭ್ಯವಿರುವುದಿಲ್ಲ. ಸಚಿವಾಲಯದ ಕಡತ ನಿರ್ವಹಣಾ ವ್ಯವಸ್ಥೆಯನ್ವಯ ಗಣಕಯಂತ್ರದಲ್ಲಿ **"ಮುಕ್ತಾಯಗೊಂಡ ಕಡತಗಳು"** ಪ್ರವರ್ಗದಲ್ಲಿ ಪ್ರಸ್ತಾವಿತ 137 ಕಡತಗಳ ಬಗ್ಗೆ ವಿವರಗಳು ಇಲ್ಲದೇ ಇರುವ ಹಿನ್ನೆಲೆಯಲ್ಲಿ ಅವುಗಳು **"ಕಾಣೆಯಾಗಿದೆ"** ಎಂದು ಪ್ರಥಮ ಸ್ತರದಲ್ಲಿ ನಿರ್ಧರಿಸಲಾಗಿದೆ. ಇಲಾಖಾ ಸ್ಪಷ್ಟೀಕರಣದ ಅನುಗುಣವಾಗಿ ದಿನಾಂಕ 26.07.1997ರಂದು ನಡೆದ ಅಧಿಕಾರದತ್ತ ಸಮಿತಿಯ ಸಭೆಯಲ್ಲಿ ಯೋಜನಾ ಸಮನ್ವಯಕರು ಬಿಎಂಐಸಿಪಿ ಹುದ್ದೆಯನ್ನು ಲೋಕೋಪಯೋಗಿ ಇಲಾಖೆಯ ಅಡಿಯಲ್ಲಿ ಸೃಜಿಸಲಾಗಿದೆ. ಪ್ರಥಮ ಸ್ತರದಲ್ಲಿ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ

ಜಂಟಿ ನಿರ್ದೇಶಕರನ್ನು ಈ ಸ್ಥಳಕ್ಕೆ ನಿಯೋಜಿಸಲಾಗಿದೆ. ಈ ಕಛೇರಿಗೆ ಪೂರಕ ಸಿಬ್ಬಂದಿಗಳ ಸೌಲಭ್ಯವನ್ನು ಒದಗಿಸದೇ ಇರುವುದರಿಂದ ಕಡತಗಳ ಚಲನ-ವಲನ ಪುಸ್ತಕ, ನಾಶಗೊಳಿಸಿದ ಪಟ್ಟಿಯ ರಿಜಿಸ್ಟರ್, ಇತ್ಯಾದಿಗಳನ್ನು ನಿರ್ವಹಿಸಿರುವುದಿಲ್ಲ. ಸಮಿತಿಗೆ ಲಭ್ಯವಿರುವ ಮಾಹಿತಿಯ ಅನುಗುಣವಾಗಿ ಒಂದೇ ಉಲ್ಲೇಖದಡಿ ಅಥವಾ ಸಂಖ್ಯೆಯಡಿ ಹಲವಾರು ಕಡತಗಳನ್ನು ತೆರೆಯಲಾಗಿದೆ. ಉದಾಹರಣೆಗೆ ಸಂಖ್ಯೆ, ಪಿಡಬ್ಲ್ಯೂಡಿ 155 ಸಿಆರ್‌ಎಂ 95 ಎಂಬ ಸಂಖ್ಯೆಯಡಿಯಲ್ಲಿ 75 ಕಡತಗಳನ್ನು ತೆರೆಯಲಾಗಿದೆ. ಈ ರೀತಿ ಸಮಗ್ರವಾಗಿ ಒಂದೇ ಉಲ್ಲೇಖವನ್ನು ನೀಡುವ ಪ್ರವೃತ್ತಿಯಿಂದ ವಿಷಯವಾರು ಕಡತ ನಿರ್ವಹಣೆಯ ಅವಶ್ಯಕತೆಯನ್ನು ನಿರ್ಲಕ್ಷಿಸಲಾಗಿದೆ. ದಿನಾಂಕ 01.01.2009ರಿಂದ ಶಾಖಾಧಿಕಾರಿಗಳನ್ನು ಒಳಗೊಂಡ ಪೂರ್ಣ ಪ್ರಮಾಣದ ಶಾಖೆಯು ಕರ್ತವ್ಯವನ್ನು ನಿರ್ವಹಿಸಿದೆ. ಇಲಾಖಾ ಸ್ಪಷ್ಟೀಕರಣದ ಅನುಗುಣವಾಗಿ 2009ರಲ್ಲಿ ಶಾಖೆ ರಚಿತವಾದಾಗ **ಯೋಜನಾ ಸಮನ್ವಯಕರ ಕೊಠಡಿಯ ಹೊರಗಡೆ ಲಭ್ಯವಿದ್ದ ಕಡತಗಳನ್ನು (ಮುಕ್ತಾಯಗೊಂಡ ಕಡತಗಳೂ ಸೇರಿದಂತೆ) 1995-2008ರ ಅವಧಿಗೆ ಚಲನ-ವಲನ ಪುಸ್ತಕದಲ್ಲಿ ನಮೂದಿಸಲಾಗಿದೆ ಎಂದು ಇಲಾಖೆ ತಿಳಿಸಿದೆ. ವಿಷಯ ನಿರ್ವಾಹಕರು ಹಾಗೂ ಪೂರಕ ಸಿಬ್ಬಂದಿಗಳ ಅನುಪಸ್ಥಿತಿಯಲ್ಲಿ ಕಡತಗಳನ್ನು "ಕೊಠಡಿಯ ಹೊರಗೆ ಇರುವ ಕಡತ" ಎಂದು ವರ್ಗೀಕರಣ ಮಾಡಿರುವುದು ಹಾಸ್ಯಾಸ್ಪದವಾಗಿದೆ. ಮುಂದುವರೆದಂತೆ, ಹಲವು ಕಡತಗಳು "ಗೌಪ್ಯ (ಕಾನ್ಫಿಡೆನ್ಷಿಯಲ್) ಎಂದು" ಯೋಜನಾ ಸಮನ್ವಯ ಅಧಿಕಾರಿ ಅವರ ಸುಪರ್ದಿಯಲ್ಲಿ ಇಟ್ಟುಕೊಂಡಿದ್ದರಿಂದ "ಅವರಲ್ಲಿ ಲಭ್ಯವಿದೆ ಎಂದು ಭಾವಿಸಲಾಗಿತ್ತು" ಎಂದು ತಿಳಿಸಲಾಗಿದೆ. ಈ ಸ್ಪಷ್ಟೀಕರಣವನ್ನು ಗಮನಿಸಿದಾಗ 2009ರ ಪೂರ್ವದಲ್ಲಿ ಸರ್ಕಾರವು ನಿಗದಿಪಡಿಸಿರುವ ಯಾವುದೇ ಮಾನದಂಡಗಳನ್ನು ನಿರ್ವಹಿಸದೇ ಇರುವುದು ಸ್ಪಷ್ಟವಾಗಿದೆ. ಪ್ರಸ್ತಾವಿತ ಗೌಪ್ಯ ಕಡತಗಳ ಬಗ್ಗೆ ಈವರೆವಿಗೂ ಸಮಿತಿಗೆ ಯಾವುದೇ ಮಾಹಿತಿ ಇರುವುದಿಲ್ಲ.**

**"ನಾಪತ್ತೆ ಆಗಿದೆ"** ಎಂದು ತಿಳಿಸಿರುವ ಒಟ್ಟು 137 ಕಡತಗಳ ಪೈಕಿ, 102 ಕಡತಗಳನ್ನು 'ಡಿ' ವರ್ಗದಲ್ಲಿ, 15 ಕಡಗಳನ್ನು 'ಸಿ' ವರ್ಗದಲ್ಲಿ, 2 ಕಡತಗಳನ್ನು 'ಬಿ' ವರ್ಗದಲ್ಲಿ ಹಾಗೂ 20 ಕಡತಗಳನ್ನು 'ಎ' ವರ್ಗದಲ್ಲಿ ಮುಕ್ತಾಯಗೊಳಲಾಗಿದೆಯೆಂದು ತಿಳಿಸಲಾಗಿದೆ. ಮುಕ್ತಾಯಗೊಳಿಸಲಾದ ಕಡತಗಳು ಭಾಗ ಕಡತಗಳಾಗಿದ್ದು, ಮೂಲ ಕಡತದೊಂದಿಗೆ ಸೇರ್ಪಡೆ ಮಾಡುವಾಗ **"ಸೂಕ್ತ ರೀತಿಯಲ್ಲಿ ನಮೂದಿಸಿರುವುದಿಲ್ಲ"** ಎಂದು ಇಲಾಖೆ ಸ್ಪಷ್ಟೀಕರಿಸಿದೆ. ಆದರೆ, ಸೇರ್ಪಡೆ ಮಾಡಿರುವ ಭಾಗಶ: ಕಡತಗಳ ಬಗ್ಗೆ ವಿವರಗಳನ್ನು ಸಮಿತಿಗೆ ಒದಗಿಸಿರುವುದಿಲ್ಲ. ಆದುದರಿಂದ, ಇಲಾಖೆಯ ಈ ಸ್ಪಷ್ಟೀಕರಣವನ್ನು ಸಮಿತಿಯು ತಿರಸ್ಕರಿಸುತ್ತದೆ. ಕಡತಗಳು ಕಾಣೆಯಾಗಿರುವ ಪ್ರಕರಣದ ಬಗ್ಗೆ 2013ರಲ್ಲಿ ಪ್ರಥಮ ಬಾರಿಗೆ ಪ್ರತಿಪಾದಿಸಲಾಗಿದೆ. ಮುಕ್ತಾಯಗೊಂಡು ಕಾಣೆಯಾಗಿರುವ 137 ಕಡತಗಳ ಬಗ್ಗೆ ವರದಿಯಾದ ನಂತರ ಈ ವೈಫಲ್ಯತೆಗೆ ಶಿಸ್ತಿನ ಕ್ರಮ ಜರುಗಿಸುವ ಬಗ್ಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗೆ ಅಭಿಪ್ರಾಯವನ್ನು ಕೋರಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಸಕ್ಷಮ ಪ್ರಾಧಿಕಾರ ತನ್ನ ವಿವೇಚನಾ ಅಧಿಕಾರವನ್ನು ಬಳಸಿ ಶಿಸ್ತಿನ ಕ್ರಮಕ್ಕೆ ತೀರ್ಮಾನ ಕೈಗೊಳ್ಳಬೇಕೆಂದು ತಿಳಿಸಿ ಕಡತವನ್ನು ಹಿಂದಿರುಗಿಸಿದೆ. ಆದರೆ, 'ಡಿ' ವರ್ಗದಲ್ಲಿ ಮುಕ್ತಾಯಗೊಂಡ 102 ಕಡತಗಳನ್ನು ನಾಶಗೊಳಿಸಿರುವುದಕ್ಕೆ ಯಾವುದೇ ದಾಖಲೆ ಲಭ್ಯವಿರುವುದಿಲ್ಲ. ತತ್ಸಂಬಂಧವಾಗಿ ಇಲಾಖಾ ವಿಚಾರಣೆಯನ್ನು ನಡೆಸಲು ಕ್ರಮ ಜಾರಿಗೊಳಿಸಲಾಗಿದೆ. ಇಬ್ಬರು ಅಧಿಕಾರಿ/ನೌಕರರು ಜಾರಿ ಮಾಡಿರುವ ನೋಟೀಸಿಗೆ ಉತ್ತರವನ್ನು ನೀಡಿರುತ್ತಾರೆ. ಈ ಪೈಕಿ, ಶ್ರೀ ಹೇಮಂತ್, ಕಿರಿಯ ಸಹಾಯಕ, ಇವರು 59 'ಡಿ' ವರ್ಗದ ಕಡತಗಳನ್ನು ಯೋಜನಾ ಸಮನ್ವಯ ಅಧಿಕಾರದ ನಿರ್ದೇಶನಗಳ ಅನುಗುಣವಾಗಿ ನಾಶಪಡಿಸಿರುವುದಾಗಿ ತಿಳಿಸಿರುತ್ತಾರೆ. ಈ ಸ್ಪಷ್ಟೀಕರಣದ ಆಧಾರದ ಮೇಲೆ ಇಲಾಖೆಯು ಕೈಗೊಂಡಿರುವ ಕ್ರಮಗಳ ಬಗ್ಗೆ ಸಮಿತಿಗೆ ಮಾಹಿತಿಯನ್ನು ಒದಗಿಸಿರುವುದಿಲ್ಲ.

ನಿಯಮಾವಳಿಗಳ ಅನುಸಾರವಾಗಿ ಪ್ರಥಮ ಸ್ತರದ ಉತ್ತರಗಳನ್ನು ಅವಲೋಕಿಸಿ ಸಮರ್ಪಕವಾಗಿದ್ದಲ್ಲಿ ಇಲಾಖಾ ವಿಚಾರಣೆಯನ್ನು ಕೈಬಿಡಬಹುದಾಗಿದೆ, ಇಲ್ಲವಿದ್ದಲ್ಲಿ, ಇಲಾಖಾ ವಿಚಾರಣೆಯನ್ನು ಜಾರಿಗೊಳಿಸಬೇಕಾಗುವುದು. ಲೋಕೋಪಯೋಗಿ ಇಲಾಖೆಯ ಸ್ಪಷ್ಟೀಕರಣದ ಆಧಾರದ ಮೇಲೆ ಕೈಗೊಂಡಿರುವ ಕ್ರಮದ ಬಗ್ಗೆ ಯಾವುದೇ ಮಾಹಿತಿ ನೀಡಿರುವುದಿಲ್ಲ.

ಇದಲ್ಲದೆ, ಆ ಸಮಯದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಜಂಟಿ ನಿರ್ದೇಶಕರು ಮತ್ತು ಅಪರ ನಿರ್ದೇಶಕರು 2007ರಲ್ಲಿಯೇ ನಿವೃತ್ತಿ ಹೊಂದಿದ್ದು, ಕೆಸಿಎಸ್ ಆರ್ ನಿರ್ಬಂಧನೆಯಡಿಯಲ್ಲಿ ಕ್ರಮ ಜಾರಿಗೊಳಿಸಲು ಅವಕಾಶವಿಲ್ಲವೆಂದು ಲೋಕೋಪಯೋಗಿ ಇಲಾಖೆಯು ಸ್ಪಷ್ಟೀಕರಿಸಿದೆ.

__*ಸಮಿತಿಯ ವಿಶ್ಲೇಷಣೆ ಹಾಗೂ ಶಿಫಾರಸ್ಸುಗಳು :*__

ಕರ್ನಾಟಕ ಸರ್ಕಾರವು ಪಾಲಿಸುತ್ತಿರುವ ಕಛೇರಿ ಕೈಪಿಡಿಯ ಅಧ್ಯಾಯ 12ರಲ್ಲಿ ದಾಖಲಾತಿಗಳ ವರ್ಗೀಕರಣದ ಬಗ್ಗೆ ವಿಧಿ ವಿಧಾನಗಳನ್ನು ನೀಡಲಾಗಿದೆ. ಈ ಕೈಪಿಡಿಯ ಕಂಡಿಕೆ 173ರ ಅನುಗುಣವಾಗಿ ಪ್ರತೀ ಕಡತಕ್ಕೂ ಆ ಕಡತದಲ್ಲಿ ನಿರ್ವಹಿಸಲಾದ ವಿಷಯಗಳ ಬಗ್ಗೆ ನಮೂದಿಸಲು ಐದು ಹಂತಗಳಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ವಿವರಿಸಲಾಗಿದೆ. ಶೀರ್ಷಿಕೆ, ಉಪ ಶೀರ್ಷಿಕೆ, ನಿರ್ದಿಷ್ಟ ವಿಷಯದ ಮಾಹಿತಿ, ಕಡತ ಸಂಖ್ಯೆ ಹಾಗೂ ದಿನಾಂಕ ಪ್ರಮುಖ ಅಂಶಗಳಾಗಿರುತ್ತದೆ. ಲೋಕೋಪಯೋಗಿ ಇಲಾಖೆ ಸಲ್ಲಿಸಿರುವ ಮಾಹಿತಿಯನ್ನು ಪರಿಶೀಲಿಸಿದಲ್ಲಿ ಮೇಲ್ನೋಟಕ್ಕೆ ಈ ವಿಧಿವಿಧಾನಗಳನ್ನು ಪಾಲಿಸಲಾಗಿದೆಯೆಂಬ ಅಭಿಪ್ರಾಯ ವ್ಯಕ್ತವಾಗಿದೆ. ಆದರೆ, ಇಲಾಖೆ ನೀಡಿದ ಸ್ಪಷ್ಟೀಕರಣದ ಅನುಗುಣವಾಗಿ ಎ,ಬಿ,ಸಿ ಹಾಗೂ ಡಿ ಪ್ರವರ್ಗದ 137 ಕಡತಗಳು ಲಭ್ಯವಿಲ್ಲದೇ ಇರುವುದು ಸ್ಪಷ್ಟವಾಗಿದೆ. ನಿಯಮಾವಳಿಗಳ ಅನುಸಾರ 'ಎ' ಪ್ರವರ್ಗದ ಕಡತಗಳನ್ನು ಯಾವುದೇ ಕಾಲಮಿತಿ ಇಲ್ಲದೆ ಸಂರಕ್ಷಿಸಬೇಕಾಗುವುದು. 'ಬಿ' ಪ್ರವರ್ಗದ ಕಡತಗಳನ್ನು ಗರಿಷ್ಠ 30 ವರ್ಷದವರೆಗೆ ಸಂರಕ್ಷಿಸಬೇಕಾಗುವುದು. 'ಸಿ' ಪ್ರವರ್ಗದ ಕಡತಗಳನ್ನು 5 ವರ್ಷಗಳವರೆಗೆ ಸಂರಕ್ಷಿಸಬೇಕಾಗುವುದು. ಈ ಪೈಕಿ, 'ಎ' ಹಾಗೂ 'ಬಿ' ಕಡತಗಳ ವರ್ಗೀಕರಣವು ಅಧೀನ ಕಾರ್ಯದರ್ಶಿ ಮಟ್ಟದಲ್ಲಿ ಅನುಮೋದಿಸಬೇಕಾಗುವುದು. 'ಸಿ' ಹಾಗೂ 'ಡಿ' ವರ್ಗೀಕರಣವನ್ನು ಶಾಖಾಧಿಕಾರಿಗಳು ಅನುಮೋದಿಸಬಹುದು. ಈ ಪ್ರವರ್ಗೀಕರಣಕ್ಕೆ ಆಡಳಿತಾತ್ಮಕ ಆದ್ಯತೆ ಹಾಗೂ ಸಂಸದೀಯ ಆದ್ಯತೆ ಇವೆರಡನ್ನೂ ಪರಿಗಣಿಸಬೇಕಾಗುವುದು. ಇಲಾಖಾ ಸ್ಪಷ್ಟೀಕರಣದ ಅನುಗುಣವಾಗಿ ಕಾಲಮಿತಿ ಇಲ್ಲದೆ ನಿರ್ವಹಿಸಬೇಕಾಗಿರುವ 20 ಕಡತಗಳು ಕಾಣೆಯಾಗಿವೆ. 'ಬಿ' ಪ್ರವರ್ಗದಲ್ಲಿ 2029ರವರೆಗೂ ಸಂರಕ್ಷಿಸಬೇಕಾಗಿರುವ 2 ಕಡತಗಳು ಕಾಣೆಯಾಗಿವೆ. 'ಸಿ' ಪ್ರವರ್ಗದಲ್ಲಿ 102 ಕಡತಗಳು ಲಭ್ಯವಿರುವುದಿಲ್ಲ. ಉಳಿದ 13 ಕಡತಗಳ ಬಗ್ಗೆ "ಸಚಿವಾಲಯ ವಾಹಿನಿಯಲ್ಲಿ ಚಾಲ್ತಿಯಲ್ಲಿರುವ ಕಡತಗಳು" ಎಂದು ನಮೂದಿಸಲಾಗಿದೆ. ಆದರೆ, ಈ 13 ಕಡತಗಳು ಶಾಖೆಯಲ್ಲಿ ಲಭ್ಯವಿರುವುದಿಲ್ಲ.

ಈ ವಿವರಣೆಯನ್ನು ಗಮನಿಸಿದಾಗ ಸಂರಕ್ಷಿಸಬೇಕಾದ ಎ,ಬಿ,ಸಿ ಪ್ರವರ್ಗದ ಕಡತಗಳು ಶಾಖೆಯಲ್ಲಿ ಲಭ್ಯವಿಲ್ಲದಿರುವುದು ಸಮಿತಿಗೆ ಸ್ಪಷ್ಟವಾಗಿದೆ. ಇದಲ್ಲದೆ, ಶಾಖೆಯ ಕಂಪ್ಯೂಟರ್‌ನಲ್ಲಿ ನಮೂದಿಸಲಾದ 10 ಕಡತಗಳು ಸಹ ಲಭ್ಯವಿರುವುದಿಲ್ಲ. ಮೇಲ್ನೋಟಕ್ಕೆ ಬಿಎಂಐಸಿ ಯೋಜನಾ ಶಾಖೆಯು ಕಡತಗಳ ನಿರ್ವಹಣೆಯಲ್ಲಿ ಸರ್ಕಾರವು ನಿರೂಪಿಸುವ ಮಾನದಂಡಗಳನ್ನು ಉಲ್ಲಂಘಿಸಿರುವುದು ಸ್ಪಷ್ಟವಾಗಿದೆ. ಇಲಾಖಾ ಸ್ಪಷ್ಟೀಕರಣದಲ್ಲಿ ಬಹುತೇಕವಾಗಿ ಈ ಕಡತಗಳು ಭಾಗಶಃ ಕಡತಗಳಾಗಿದ್ದು, ಮೂಲ ಕಡತದೊಂದಿಗೆ ವಿಲೀನಗೊಳಿಸಲಾಗಿದೆಯೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಲಾಗಿದೆ. ಆದರೆ, ಈ ಅಭಿಪ್ರಾಯವನ್ನು ಇಲಾಖಾ ವಿಚಾರಣೆಗೆ ಒಳಪಡಿಸಿದ ನೌಕರರು

ವ್ಯಕ್ತಪಡಿಸಿರುವ ಬಗ್ಗೆ ಸಮಿತಿಗೆ ಮಾಹಿತಿ ಇರುವುದಿಲ್ಲ. ಇದಲ್ಲದೆ, ಎ,ಬಿ,ಸಿ,ಡಿ, ವರ್ಗೀಕರಣದ ಅಡಿಯಲ್ಲಿ ಇದೆ ಎನ್ನಲಾದ ಭಾಗಶಃ ಕಡತಗಳನ್ನು ಸಂಬಂಧಿತ ಮೂಲ ಕಡತಗಳೊಂದಿಗೆ ವಿಲೀನಗೊಳಿಸಿರುವ ಬಗ್ಗೆ ಇಲಾಖೆ ನಿರ್ದಿಷ್ಟ ಅಂಕಿ-ಅಂಶಗಳನ್ನು ನೀಡಿರುವುದಿಲ್ಲ. ಅಂದರೆ ಎ, ಬಿ, ಸಿ ಹಾಗೂ ಡಿ, ಪ್ರವರ್ಗಗಳಲ್ಲಿ ಎಷ್ಟೆಷ್ಟು ಭಾಗಶಃ ಕಡತಗಳನ್ನು ಯಾವ್ಯಾವ ಮೂಲ ಕಡತಗಳಲ್ಲಿ ವಿಲೀನಗೊಳಿಸಲಾಗಿದೆ ಎಂಬ ನಿರ್ದಿಷ್ಟ ಮಾಹಿತಿಯನ್ನು ಇಲಾಖೆ ಸಲ್ಲಿಸಿರುವುದಿಲ್ಲ. **ಆದುದರಿಂದ, ಭಾಗಶಃ ಕಡತದ ಬಗ್ಗೆ ಇಲಾಖೆಯ ಸ್ಪಷ್ಟೀಕರಣವು "ಘಟನೋತ್ತರವಾಗಿ ವೈಫಲ್ಯತೆಯನ್ನು ನಿರ್ವಹಿಸಲು ನೀಡಿರುವ ಕಾರಣ" ಎಂದು ಸಮಿತಿ ತೀರ್ಮಾನಿಸುತ್ತದೆ.**ಪ್ರಮುಖವಾಗಿಕಂಪ್ಯೂಟರ್‌ನಲ್ಲಿ ನಮೂದಿಸಿದ್ದು ಶಾಖೆಯಲ್ಲಿ ಲಭ್ಯವಿಲ್ಲದೆ ಇರುವ ಕಡತಗಳ ವಿಷಯವನ್ನು ಗಮನಿಸಿದಾಗ ಗುರುತರ ಹಾಗೂ ಸೂಕ್ಷ್ಮಕರ ವಿಷಯಗಳ ಬಗ್ಗೆ ಪ್ರತಿಪಾದನೆ ಇರುವ ಹಲವಾರು ಕಡತಗಳು ಶಾಖೆಯಲ್ಲಿ ಲಭ್ಯವಿಲದೆ ಇರುವುದು ಸಮಿತಿಗೆ ಸ್ಪಷ್ಟವಾಗಿದೆ.

**ಪ್ರಮುಖ ಉದಾಹರಣೆಗಳು:**

1) ನೋಂದಣಿ ಹಾಗೂ ಮುದ್ರಾಂಕ ಶುಲ್ಕ.
2) ಮಾನ್ಯ ಸರ್ವೋಚ್ಛ ನ್ಯಾಯಾಲಯದ ದಿನಾಂಕ 11.01.2010ರ ಆದೇಶದಂತೆ ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಭೆಯನ್ನು ಕರೆಯುವ ಬಗ್ಗೆ.
3) ಬಿಎಂಐಸಿಪಿ ಯೋಜನೆಯ ಸೆಕ್ಷನ್-ಎ ಅನುಷ್ಠಾನದ ಬಗ್ಗೆ.
4) ಮಾನ್ಯ ಸರ್ವೋಚ್ಛ ನ್ಯಾಯಾಲಯಕ್ಕೆ ಖಾಸಗೀ ಹಾಗೂ ಸರ್ಕಾರಿ ಸಹಭಾಗಿತ್ವದ ಯೋಜನೆಗಳ ಮಾಹಿತಿ ಸಲ್ಲಿಸುವ ಬಗ್ಗೆ.
5) ಮುಂದಗೆರೆ ಮತ್ತು ಹಂಗರಹಳ್ಳಿ, ಶ್ರೀರಂಗಪಟ್ಟಣ ತಾಲ್ಲೂಕು ವ್ಯಾಪ್ತಿಯಲ್ಲಿ ಅನಧಿಕೃತ ಗಣಿಗಾರಿಕೆ ಬಗ್ಗೆ.

**'ಎ' ಪ್ರವರ್ಗದಡಿ ಶಾಖೆಯಲ್ಲಿ ಲಭ್ಯವಿಲದೇ ಇರುವ ಪೈಕಿ, ಪ್ರಮುಖ ವಿಷಯಗಳು ಕೆಳಕಂಡಂತಿದೆ:**

1) High Power Committee formation to monitor toll system.
2) Monthly pendency review of BMICP Section.
3) Denotification/ deletion of land acquire in excess of requirement for BMIC Project.
4) Transfer of Title Deeds in respect of Private Lands acquired by KIADB to Nicel/Necel.
5) Transfer of Government of Land to Nicel.
6) Requesition of Document by General Public.
7) SLP filed in the Supreme Court.

'ಬಿ' ವರ್ಗದಲ್ಲಿ ಕಾಣೆಯಾಗಿರುವ ಪ್ರಮುಖ ಕಡತ:

ಬಿಎಂಐಸಿಪಿ ಪಂಕ್ತೀಕರಣದ ಎನ್ಆರ್ಎಸ್ಎ ಛಾಯಾಚಿತ್ರಗಳು.

'ಸಿ' ವರ್ಗದಲ್ಲಿ ಕಾಣೆಯಾಗಿರುವ ಪ್ರಮುಖ ಕಡತಗಳು:

1) ಮುದ್ರಾಂಕ ಹಾಗೂ ನೋಂದಣಿ ಶುಲ್ಕದ ರಿಯಾಯಿತಿ.
2) ಬಿಎಂಐಸಿ ಘೋಷಿತ ಪ್ರದೇಶದಲ್ಲಿ ಅನಧಿಕೃತ ಅಭಿವೃದ್ಧಿ ಚಟುವಟಿಕೆಗಳು.
3) ಖಾಸಗಿ ಜಮೀನಿಗೆ ದರ ನಿರ್ಧರಿಸಲು ಸೃಜಿಸಿರುವ ಸಲಹಾ ಸಮಿತಿಯ ಬಗ್ಗೆ.

ಹಲವಾರು ಪ್ರಕರಣಗಳಲ್ಲಿ ಯೋಜನಾ ಸಂತ್ರಸ್ತರು ಹಾಗೂ ಇತರೆ ಆಸಕ್ತಿಯುಳ್ಳ ವ್ಯಕ್ತಿಗಳು, ಸಂಸ್ಥೆಗಳು ಮಾಹಿತಿ ಹಕ್ಕು ನಿಯಮದಡಿ ಕೋರಿರುವ ಮಾಹಿತಿಯನ್ನು ಕಡತಗಳ/ಉಲ್ಲೇಖಗಳ ಅಥವಾ ಟಿಪ್ಪಣಿಗಳ ಅಲಭ್ಯತೆಯಿಂದಾಗಿ ಸಲ್ಲಿಸದೇ ಇರುವುದು ಅಥವಾ ಬೇರೆ ಇಲಾಖೆಗಳಿಗೆ ವರ್ಗಾವಣೆ ಮಾಡಿರುವುದು ಸಮಿತಿಯ ಗಮನಕ್ಕೆ ಬಂದಿದೆ.

ಸಮಿತಿಯು ಪರೀಕ್ಷಾರ್ಥವಾಗಿ ತಪಾಸಣೆ ಮಾಡಿದ ಕಡತಗಳ ಪೈಕಿ ಯೋಜನಾ ಅನುಷ್ಠಾನಕ್ಕೆ ಸಂಬಂಧಿಸಿದ ಅದರಲ್ಲೂ ಪ್ರಮುಖವಾಗಿ ಪ್ರಸಕ್ತ ಸಂದಿಗ್ಧತೆಗೆ ಕಾರಣವಾಗಿರುವ ಹಲವಾರು ಗುರುತರ ಕಡತಗಳ ವರ್ಗೀಕರಣ, ನಿರ್ವಹಣೆ ಹಾಗೂ ಸಂರಕ್ಷಣೆಯಲ್ಲಿ ವ್ಯಾಪಕವಾಗಿ ವೈಫಲ್ಯತೆಯಾಗಿರುವುದು ಸಮಿತಿಗೆ ಮನದಟ್ಟಾಗಿದೆ.

**ಕಡತಗಳ ನಾಪತ್ತೆಯ ಪ್ರಕರಣಕ್ಕೆ ಹಲವಾರು ಆಯಾಮಗಳಿದ್ದು ಇದರಿಂದಾಗಿ ಪ್ರಸಕ್ತ ಕಾನೂನು ಸಂದಿಗ್ಧತೆಯ ನಿರ್ವಹಣೆಯಲ್ಲೂ ವ್ಯತಿರಿಕ್ತ ಪರಿಣಾಮವಾಗುವ ಸಾಧ್ಯತೆ ಇದೆ. ಆದುದರಿಂದ, ಕಡತಗಳ ನಿರ್ವಹಣೆ ಹಾಗೂ ಸಂರಕ್ಷಣೆಯ ವೈಫಲ್ಯತೆ ಅಕ್ಷಮ್ಯ ಅಪರಾಧ ಎಂದು ಸಮಿತಿಯು ನಿರ್ಧರಿಸುತ್ತದೆ. ಈ ಹಿನ್ನೆಲೆಯಲ್ಲಿ, ಇಲಾಖೆಯು ನಾಪತ್ತೆಯಾದ ಕಡತಗಳ ಬಗ್ಗೆ ಅಮೂಲಾಗ್ರ ತನಿಖೆಯನ್ನು ನಡೆಸಿ ನಿರ್ದಿಷ್ಟವಾಗಿ ಜವಾಬ್ದಾರಿಯನ್ನು ನಿಗದಿಪಡಿಸಿ ಕಾನೂನು/ಶಿಸ್ತಿನ ಕ್ರಮ ಜರುಗಿಸಬೇಕೆಂದು ಸಮಿತಿ ಶಿಫಾರಸ್ಸು ಮಾಡುತ್ತದೆ.**

## XLVII. ಸಮಿತಿಯ ಕ್ರೋಢೀಕೃತ ಶಿಫಾರಸ್ಸುಗಳು

I. ಬಿ.ಎಂ.ಐ.ಸಿ. ಯೋಜನೆ ಅನುಷ್ಠಾನಕ್ಕೆ ವಿದೇಶಿ ಸಮೂಹ ಸಂಸ್ಥೆಗಳು ಯೋಜನಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಆದರೆ ವಿಸ್ಮಯಕಾರಿಯಾಗಿ ಇಲಾಖಾ ಸ್ಪಷ್ಟೀಕರಣದ ಅನುಗುಣವಾಗಿ ಕರಡು ಕ್ರಿಯಾ ಒಪ್ಪಂದ ರಾಜ್ಯ ಸರ್ಕಾರದ ಯಾವುದೇ ಸಂಬಂಧಿತ ಇಲಾಖೆಗಳಲ್ಲಿ ಲಭ್ಯವಿರುವುದಿಲ್ಲ. ಭಾರತ್ ಫೋರ್ಜ್ ಲಿಮಿಟೆಡ್ ಪ್ರಥಮ ಸ್ತರದಲ್ಲಿ ಜಾರಿಗೊಳಿಸಲಾದ ಹಾಗೂ ಸರ್ಕಾರಕ್ಕೆ ಸಲ್ಲಿಸಲಾದ ಸರ್ವೇಕ್ಷಣೆಯ ಅನುಗುಣವಾಗಿ ಟೋಲ್ ರಸ್ತೆಯ ನಿರ್ಮಾಣಕ್ಕೆ 6119 ಎಕರೆ

ಜಮೀನಿನ ಅವಶ್ಯಕತೆಯಿದ್ದು, ಕ್ರಿಯಾ ಒಪ್ಪಂದದ ಅನುಚ್ಛೇಧದಲ್ಲಿ6999 ಎಕರೆ ಎಂದು ನಮೂದಿಸಲಾಗಿದೆ. ಇದೊಂದು ಗುರುತರ ಹಾಗೂ ಗಂಭೀರ ವೈಫಲ್ಯತೆಯಾಗಿರುವ ಹಿನ್ನೆಲೆಯಲ್ಲಿ ಸರ್ಕಾರವು ಈ ಬಗ್ಗೆ ಅಮೂಲಾಗ್ರ ತನಿಖೆ ನಡೆಸಿ, ಸ್ವೀಕೃತಿ ಹಾಗೂ ಕರಡು ಒಪ್ಪಂದದ ಚಲನ-ವಲನಕ್ಕೆ ಸಂಬಂಧಿಸಿದ ದಾಖಲಾತಿ ಹಾಗೂ ಕಡತಗಳನ್ನು ಪರಿಶೀಲಿಸಿ ಈ ವೈಫಲ್ಯಕ್ಕೆ ಕಾರಣರಾದ ಅಧಿಕಾರಿ/ಸಿಬ್ಬಂದಿಯವರನ್ನು ಗುರುತಿಸಿ ಕರ್ತವ್ಯಲೋಪದ ಆಧಾರದ ಮೇಲೆ ಶಿಸ್ತಿನ ಕ್ರಮ ಜರುಗಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

2. ಕರಡು ಒಪ್ಪಂದದ ಸಾಧಕ-ಬಾಧಕವನ್ನು ವ್ಯತ್ತಿಪರವಾಗಿ ವಿಶ್ಲೇಷಿಸಲು Aurthur Anderson ಸಂಸ್ಥೆಯ ಸೇವೆಯನ್ನು ಸರ್ಕಾರವು ಪಡೆದಿದ್ದು, ಈ ಸಂಸ್ಥೆಯು ಯೋಜನಾ ಅನುಷ್ಠಾನಕ್ಕೆ ಅವಶ್ಯಕವಿರುವ ಜಮೀನಿನ ವಿಸ್ತೀರ್ಣದ ಬಗ್ಗೆ ಯಾವುದೇ ಪ್ರತಿಪಾದನೆಯನ್ನು ಮಾಡಿರುವುದಿಲ್ಲ. ಇದಲ್ಲದೆ ದಿನಾಂಕ 20.11.1995ರ ಆದೇಶದ ಹಿನ್ನೆಲೆಯಲ್ಲಿ ಜಮೀನಿನ ಅಗತ್ಯತೆ ಬಗ್ಗೆ ವಿಶ್ಲೇಷಿಸಿರುವುದಿಲ್ಲ. ಕ್ರಿಯಾ ಒಪ್ಪಂದವನ್ನು ಪರಿಶೀಲಿಸಲು ಸೃಜಿಸಲಾದ ಕೋರ್ ಅಧಿಕಾರಿಗಳ ಸಮೂಹವು ಈ ಮಾಹಿತಿಯ ಅನುಪಸ್ಥಿತಿಯಲ್ಲಿ ನಿರ್ಧಾರ ಕೈಗೊಂಡಿರುವುದನ್ನು ಸಮಿತಿಯ ಗಮನಿಸಿದೆ. ಆರ್ಥಿಕ ಇಲಾಖೆಯು ಸಹ ಪ್ರಥಮ ಸ್ತರದಲ್ಲಿ ದಿನಾಂಕ 07.11.1995ರಂದು ತನ್ನ ಅಭಿಪ್ರಾಯವನ್ನು ನೀಡಿದ್ದು ಈ ಅಭಿಪ್ರಾಯದಲ್ಲಿ ಅವಶ್ಯಕವಿರುವ ಜಮೀನಿನ ವಿಸ್ತೀರ್ಣದ ಬಗ್ಗೆ ಯಾವುದೇ ಪ್ರತಿಪಾದನೆ ಇರುವುದಿಲ್ಲ. ಮುಂದುವರೆದಂತೆ, ಕೋರ್ ಗ್ರೂಪ್ ಅಧಿಕಾರಿಗಳ ಸಮೂಹ 20,193 ಎಕರೆಗಳ ಬಗ್ಗೆ ಪ್ರತಿಪಾದಿಸಿರುವುದಿಲ್ಲ. ಮುಂದುವರೆದಂತೆ, ಸಚಿವ ಸಂಪುಟದ ಉಪ ಸಮಿತಿಯೂ ಸಹ ಯೋಜನಾ ಅನುಷ್ಠಾನದ ಟೋಲ್ ಭಾಗಕ್ಕೆ ಅನ್ವಯಿಸುವಂತೆ 6,999 ಎಕರೆಗಳ ಅವಶ್ಯಕತೆಯನ್ನು ಕ್ರಿಯಾ ಒಪ್ಪಂದದ ಷೆಡ್ಯೂಲ್-1ರಲ್ಲಿ ಸೇರ್ಪಡೆ ಮಾಡುವಂತೆ ನಿರ್ದೇಶಿಸಿರುವ ಬಗ್ಗೆ ಸಮಿತಿಗೆ ಮಾಹಿತಿ ಇರುವುದಿಲ್ಲ. ಮುಂದುವರೆದಂತೆ, ಲೋಕೋಪಯೋಗಿ ಇಲಾಖೆಯು ಸಚಿವ ಸಂಪುಟದ ಟಿಪ್ಪಣಿ ಸಂಖ್ಯೆ: ಪಿಡಬ್ಲ್ಯುಡಿ 32 ಸಿಎಸ್ಆರ್ 95 ಮುಖಾಂತರ ಅಂತಿಮ ಕರಡು ವರದಿಯನ್ನು ಅನುಮೋದನೆಗೆ ಸಲ್ಲಿಸಿದೆ. ಪ್ರಸ್ತಾವಿತ ಟಿಪ್ಪಣಿಯಲ್ಲಿ ಅಧಿಕಾರದತ್ತ ಸಮಿತಿಯ ಸೃಜನೆ ಹಾಗೂ ಕ್ರಿಯಾ ಒಪ್ಪಂದದ ಅನುಮೋದನೆಯ ಬಗ್ಗೆ ನಮೂದಿಸಲಾಗಿದೆ. ಸಚಿವ ಸಂಪುಟವು ದಿನಾಂಕ 17.03.1997 ರಂದು ಖಾಸಗಿ ಪಾಲುದಾರರೊಂದಿಗೆ ಒಡಂಬಡಿಕೆಯನ್ನು ಜಾರಿಗೊಳಿಸಲು ಅನುಮೋದನೆಯನ್ನು ನೀಡಿ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆಯವರಿಗೆ ಈ ಕಾರ್ಯಭಾರವನ್ನು ವಹಿಸಿದೆ. ಪ್ರಸ್ತಾವಿತ ಸಚಿವ ಸಂಪುಟದ ಟಿಪ್ಪಣಿಯಲ್ಲಿ ಟೋಲ್ ರಸ್ತೆ ನಿರ್ಮಾಣಕ್ಕೆ 6,999 ಎಕರೆಗಳ ಅವಶ್ಯಕತೆಯ ಬಗ್ಗೆ ಪ್ರಸ್ತಾವನೆ ಇರುವುದಿಲ್ಲ. ಆದರೆ, ಹಿಂದೆ ನಡೆದ ಸಚಿವ ಸಂಪುಟದಲ್ಲಿ ಟೋಲ್ ರಸ್ತೆಗೆ 6,119 ಎಕರೆಗಳ ಅವಶ್ಯಕತೆಯನ್ನು ಅನುಮೋದಿಸಿರುವುದನ್ನು ಸಮಿತಿಯು ಗಮನಿಸಿದೆ. ಸಚಿವ ಸಂಪುಟ ಅನುಮೋದಿಸಿದ ಕರಡು ಕ್ರಿಯಾ ಒಪ್ಪಂದ ಇಲಾಖಾ ಸ್ಪಷ್ಟೀಕರಣದ ಅನುಗುಣವಾಗಿ

ಲೋಕೋಪಯೋಗಿ ಇಲಾಖೆಯಲ್ಲಿ ಲಭ್ಯವಿರುವುದಿಲ್ಲ. ತದನಂತರ ಸಚಿವ ಸಂಪುಟದ ನಿರ್ದೇಶನಗಳ ಅನುಗುಣವಾಗಿ ಅಂದಿನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆಯವರು ದಿನಾಂಕ 27.03.1997ರಂದು ಸರ್ಕಾರಿ ಆದೇಶವನ್ನು ಜಾರಿಗೊಳಿಸಿರುತ್ತಾರೆ. ಪ್ರಸ್ತಾವಿತ ಆದೇಶಕ್ಕೆ ಸಚಿವ ಸಂಪುಟದ ಅನುಮೋದಿತ ಕರಡು ಕ್ರಿಯಾ ಒಪ್ಪಂದವನ್ನು ಲಗತ್ತಿಸಲಾಗಿದೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಆದರೆ, ಪ್ರಸ್ತಾವಿತ ಅಡಕ, ಇಲಾಖಾ ಸ್ಪಷ್ಟೀಕರಣದ ಅನುಗುಣವಾಗಿ ಲಭ್ಯವಿರುವುದಿಲ್ಲ. ತದನಂತರ ದಿನಾಂಕ 03.04.1997ರಂದು ಸರ್ಕಾರದ ಪರವಾಗಿ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆಯವರು ಕ್ರಿಯಾ ಒಪ್ಪಂದವನ್ನು ಜಾರಿಗೊಳಿಸಿರುತ್ತಾರೆ. ಈ ಕ್ರಮವನ್ನು ದಿನಾಂಕ 27.03.1997ರ ಸರ್ಕಾರಿ ಆದೇಶದ ಹಿನ್ನೆಲೆಯಲ್ಲಿ ಕೈಗೊಳ್ಳಲಾಗಿದೆ. ಆದರೆ, ಕ್ರಿಯಾ ಒಪ್ಪಂದದಲ್ಲಿ ಲೋಕೋಪಯೋಗಿ ಇಲಾಖೆಯು ದಿನಾಂಕ 20.11.1995ರಂದು ಜಾರಿಗೊಳಿಸಿದ ಆದೇಶದ ಬಗ್ಗೆ ಉಲ್ಲೇಖವಿದೆಯೇ ಹೊರತಾಗಿ ದಿನಾಂಕ 27.03.1997ರ ಆದೇಶದ ಬಗ್ಗೆ ಪ್ರತಿಪಾದಿಸಿರುವುದಿಲ್ಲ. ದಿನಾಂಕ 27.03.1997ರ ಆದೇಶವನ್ನುದಿನಾಂಕ 17.03.1997ರಂದು ನಡೆಸಲಾದ ಸಚಿವ ಸಂಪುಟದ ತೀರ್ಮಾನಗಳ ಹಿನ್ನೆಲೆಯಲ್ಲಿ ಜಾರಿಗೊಳಿಸಿರುವುದು ಸಮಿತಿಗೆ ಸ್ಪಷ್ಟವಾಗಿದೆ. ಆದರೆ ದಿನಾಂಕ 17.03.1997ರ ಸಚಿವ ಸಂಪುಟದ ಸಭೆಯಲ್ಲಿ 6,999 ಎಕರೆಗಳ ಜಮೀನಿನ ಅವಶ್ಯಕತೆಯ ಬಗ್ಗೆ ಪ್ರತಿಪಾದನೆ ಇರುವುದಿಲ್ಲ. ಈ ಹಿನ್ನೆಲೆಯಲ್ಲಿ ಕ್ರಿಯಾ ಒಪ್ಪಂದದ ಷೆಡ್ಯೂಲ್ -1 ನಲ್ಲಿ 6,999 ಎಕರೆಗಳನ್ನು ಟೋಲ್ ರೋಡ್ ನಿರ್ಮಾಣದ ಅವಶ್ಯಕತೆಯೆಂದು ಸೇರ್ಪಡೆ ಮಾಡಿರುವ ಪ್ರಕ್ರಿಯೆಗೆ ಯಾವುದೇ ಸಕ್ಷಮ ಪ್ರಾಧಿಕಾರ ನಿರ್ದಿಷ್ಟ ಅನುಮೋದನೆ ನೀಡದೇ ಇರುವುದು ಸ್ಪಷ್ಟವಾಗಿದೆ. ಆದುದರಿಂದ ಕ್ರಿಯಾ ಒಪ್ಪಂದದ ಅನುಷ್ಠಾನದ ಜವಾಬ್ದಾರಿಯನ್ನು ನಿರ್ವಹಿಸಿದ ಅಂದಿನ ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿಯವರ ಪಾತ್ರವನ್ನು ಈ ಗುರುತರ ವೈಫಲ್ಯತೆಯಲ್ಲಿ ವಿಶ್ಲೇಷಿಸುವುದು ಅತ್ಯಾವಶ್ಯಕವೆಂದು ಸಮಿತಿ ತೀರ್ಮಾನಿಸುತ್ತದೆ. ಕ್ರಿಯಾ ಒಪ್ಪಂದವನ್ನು ತಾತ್ವಿಕವಾಗಿ ಹಾಗೂ ವಾಸ್ತವಿಕವಾಗಿ ಅನುಷ್ಠಾನಗೊಳಿಸುವ ಬಗ್ಗೆ ಖಾಸಗಿ ಪಾಲುದಾರರು ಹಾಗೂ ಕರ್ನಾಟಕ ಸರ್ಕಾರ ನ್ಯಾಯಾಲಯದ ಮುಂದೆ ಸಹಮತಿ ಸೂಚಿಸಿರುವುದನ್ನು ಸಮಿತಿ ಗಮನಿಸಿದೆ. ಅಂದರೆ, ಯೋಜನಾ ಅನುಷ್ಠಾನಕ್ಕೆ ಅವಶ್ಯಕವಿರುವ ಜಮೀನಿನ ವ್ಯಾಜ್ಯ ಇತ್ಯರ್ಥವಾದಂತೆ ಎಂದು ಪರಿಗಣಿಸಬೇಕಾಗುವುದು. ಆದಾಗ್ಯೂ ಕ್ರಿಯಾ ಒಪ್ಪಂದದ ಅನುಷ್ಠಾನ ಪೂರ್ವದಲ್ಲಿ ಆಗಿರುವ ವೈಫಲ್ಯತೆಗಳನ್ನು ಗುರುತಿಸಿ ಜವಾಬ್ದಾರಿ ನಿಗದಿಪಡಿಸಿರುವುದು ಸಮಿತಿಯ ಕರ್ತವ್ಯವಾಗಿರುತ್ತದೆ. ಇದಲ್ಲದೆ, ಕ್ರಿಯಾ ಒಪ್ಪಂದದ ಪೂರ್ವದ ಬೆಳವಣಿಗೆಗಳ ಬಗ್ಗೆ ಯಾವುದೇ ನ್ಯಾಯಾಲಯದ ಪ್ರಕರಣಗಳನ್ನು ದಾಖಲಿಸಿರುವುದಿಲ್ಲ. ಪ್ರಸ್ತಾವಿತ ಬೆಳವಣಿಗೆಗಳು ಕ್ರಿಯಾ ಒಪ್ಪಂದದ ಪೂರ್ವದಲ್ಲಾಗಿರುವುದರಿಂದ ಹಾಗೂ ಭೂಮಿಯ ನಿರ್ವಹಣೆ ಈಗಲೂ ವಿವಾದಾತ್ಮಕವಾಗಿರುವ ಹಿನ್ನೆಲೆಯಲ್ಲಿ, ಒಪ್ಪಂದದ ಸೃಜನೆಯಲ್ಲಿ ಆಗಿರುವ ವೈಫಲ್ಯತೆಯನ್ನು ವಿಶ್ಲೇಷಿಸುವುದು ಅನಿವಾರ್ಯವಾಗುತ್ತದೆ. ಏಕೆಂದರೆ, ಆರ್ಥರ್ ಆಂಡರ್ ಸನ್ ಸಂಸ್ಥೆಯಾಗಲೀ, ಸಚಿವ

ಸಂಪುಟದ ಉಪ ಸಮಿತಿಯಾಗಲೀ ಅಥವಾ ಕೋರ್ ಗ್ರೂಪ್ ಅಧಿಕಾರಿಗಳ ಸಮೂಹವಾಗಲೀ ಈ ಜಮೀನಿನ ಅವಶ್ಯಕತೆಯನ್ನು ದೃಢೀಕರಿಸಿರುವ ಬಗ್ಗೆ ನಿರ್ದಿಷ್ಟ ಮಾಹಿತಿ ಇರುವುದಿಲ್ಲ. ಈ ವಿಷಯಗಳ ಅನುಪಸ್ಥಿತಿಯಲ್ಲಿ ಕ್ರಿಯಾ ಒಪ್ಪಂದದಲ್ಲಿ ಶೆಡ್ಯೂಲ್ 1 ಅಡಿಯಲ್ಲಿ 20,193 ಎಕರೆ ಜಮೀನನ್ನು ಸೇರ್ಪಡೆ ಮಾಡಿರುವುದು ಸಂಶಯಾಸ್ಪದವಾಗುತ್ತದೆ. ಇದಲ್ಲದೆ, ಆರ್‌ಬಿಟ್ರೇಶನ್ ಷರತ್ತು ಹಾಗೂ ಗೌಪ್ಯತೆಯನ್ನು ನಿರ್ವಹಿಸಬೇಕಾದ ಷರತ್ತುಗಳನ್ನು ಅಂತಿಮ ಸ್ತರದಲ್ಲಿ ಕ್ರಿಯಾ ಒಪ್ಪಂದದಲ್ಲಿ ಸೇರ್ಪಡೆ ಮಾಡಲಾಗಿದೆ. ಈ ಎಲ್ಲಾ ಅಂಶಗಳನ್ನು ಪರಿಗಣಿಸಿದಲ್ಲಿ, ಕರಡು ಕ್ರಿಯಾ ಒಪ್ಪಂದ ಲಭ್ಯವಿಲ್ಲದೇ ಇರುವುದು ಒಂದು ಪೂರ್ವ ನಿರ್ಧರಿತ ಷಡ್ಯಂತರ ಎಂದು ಸಮಿತಿ ತೀರ್ಮಾನಿಸುತ್ತದೆ. ಈ ಹಿನ್ನೆಲೆಯಲ್ಲಿ ಟೋಲ್ ರಸ್ತೆಯ ನಿರ್ಮಾಣಕ್ಕೆ 5,119 ಎಕರೆಗಳ ಬದಲಾಗಿ 6,999 ಎಕರೆಗಳನ್ನು ಸೇರ್ಪಡೆ ಮಾಡಲು ಮೇಲ್ನೋಟಕ್ಕೆ ಕಾರಣಕರ್ತರಾದ ಮೇಜರ್ ಸಿ.ಆರ್. ರಮೇಶ್, ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, ಇವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಆದುದರಿಂದ ಕರಡು ಕ್ರಿಯಾ ಒಪ್ಪಂದದ ಅಲಭ್ಯತೆ, ಹಾಗೂ ಅಂತಿಮವಾಗಿ ಅನುಷ್ಠಾನವಾದ ಕ್ರಿಯಾ ಒಪ್ಪಂದದ ಮುಖಾಂತರ ಜಾರಿಗೊಳಿಸಲಾಗಿರುವ ಅನಧಿಕೃತ ಬದಲಾವಣೆಗಳ ಬಗ್ಗೆ ಅಮೂಲಾಗ್ರ ತನಿಖೆಯನ್ನು ಜಾರಿಗೊಳಿಸಿ ಸಂಬಂಧಿತ ಅಧಿಕಾರಿ/ಸಿಬ್ಬಂದಿ ವರ್ಗದವರ ವಿರುದ್ಧ ಕಾನೂನು/ಶಿಸ್ತಿನ ಕ್ರಮ ಜರುಗಿಸಬೇಕೆಂದು ಸಮಿತಿ ಆಗ್ರಹಿಸುತ್ತದೆ.

3. ಕೆ.ಐ.ಎ.ಡಿ.ಬಿ. ಸಂಸ್ಥೆಯು ನೈಸೆಲ್ ಒಡನೆ ದಿನಾಂಕ 14.10.1998 ರಂದು 23,846 ಎಕರೆಗಳ ಖಾಸಗಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಒಡಂಬಡಿಕೆಯನ್ನು ಜಾರಿಗೊಳಿಸಿದೆ. ಕ್ರಿಯಾ ಒಪ್ಪಂದದ ನಿರೂಪಣೆಗಳ ಅನುಗುಣವಾಗಿ ಯೋಜನಾ ಅನುಷ್ಠಾನಕ್ಕೆ ಕ್ರೋಢೀಕೃತವಾಗಿ ಖಾಸಗಿ ಜಮೀನಿನ ಅವಶ್ಯಕತೆ 13,237 ಎಕರೆಗಳಾಗಿರುತ್ತದೆ. ವಾಸ್ತವಿಕವಾಗಿ ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನ ನಂತರ ಈ ಒಡಂಬಡಿಕೆಯನ್ನು ಜಾರಿಗೊಳಿಸಲಾಗಿದ್ದು, ಈ ಒಡಂಬಡಿಕೆಗೆ ಸಚಿವ ಸಂಪುಟದ ಅನುಮೋದನೆ ಇರುವುದಿಲ್ಲ. ಅಧಿಕಾರದತ್ತ ಸಮಿತಿಯು ಖಾಸಗಿ ಜಮೀನಿನ ಸ್ವಾಧೀನಕ್ಕೆ ನೈಸೆಲ್ ಸಂಸ್ಥೆ ಪಾವತಿಸಬೇಕಾಗಿದ್ದ 150 ಕೋಟಿ ರೂ.ಗಳನ್ನು ಇಡಿಗಂಟಾಗಿ ಪಾವತಿಸುವ ಪ್ರಕ್ರಿಯೆಯಿಂದ ವಿನಾಯಿತಿ ಪಡೆಯಲು ಪ್ರಧಾನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಗೆ ಪ್ರಥಮ ಸ್ತರದಲ್ಲಿ ಸಚಿವ ಸಂಪುಟದ ಅನುಮೋದನೆಯನ್ನು ಪಡೆದು, ತದನಂತರ ನೈಸೆಲ್ ಸಂಸ್ಥೆಯೊಡನೆ ಖಾಸಗಿ ಜಮೀನಿನ ಸ್ವಾಧೀನದ ಬಗ್ಗೆ ಒಡಂಬಡಿಕೆಯನ್ನು ಜಾರಿಗೊಳಿಸುವಂತೆ ನಿರ್ದೇಶಿಸಿರುತ್ತಾರೆ. ಈ ನಿರ್ದೇಶನವನ್ನು ಉಪೇಕ್ಷಿಸಿ ಕೆ.ಐ.ಎ.ಡಿ.ಬಿ. ಸಂಸ್ಥೆಯು 13,237 ಎಕರೆಗಳ ಬದಲಾಗಿ 23,846 ಎಕರೆಗಳ ಖಾಸಗಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಸ್ವಯಂ ಪ್ರೇರಿತವಾಗಿ ಒಡಂಬಡಿಕೆಯನ್ನು ಜಾರಿಗೊಳಿಸಿರುವುದು ಕ್ರಿಯಾ ಒಪ್ಪಂದದ ಉಲ್ಲಂಘನೆ ಹಾಗೂ ಸಂಸ್ಥೆಯ ಕಾರ್ಯವ್ಯಾಪ್ತಿಯ ದುರುಪಯೋಗ ಹಾಗೂ

ದುರ್ಬಳಕೆಯಾಗಿದೆ. ಈ ಸ್ಪಷ್ಟತೆಯಿಂದಾಗಿ ಪ್ರಸಕ್ತ ಸಂದರ್ಭದಲ್ಲಿ ಸಹ ಸುಮಾರು 4,931 ಎಕರೆಗಳು ಕೆ.ಐ.ಎ.ಡಿ.ಬಿ. ಅಧಿನಿಯಮದ ನಿಯಮ 1(3), 3(1) ಹಾಗೂ 28(1) ರ ಅಡಿಯಲ್ಲಿ ಅಧಿಸೂಚನೆ ವ್ಯಾಪ್ತಿಗೆ ಒಳಪಟ್ಟಿರುವುದನ್ನು ಸಮಿತಿ ಗಮನಿಸಿದೆ. ಇದರಿಂದಾಗಿ ಅವಶ್ಯಕತೆಯೂ ನಿರ್ಧಾರವಾಗದೇ, ಯೋಜನಾ ಅನುಷ್ಠಾನಕ್ಕೆ ಬಳಕೆಯ ಸ್ವರೂಪವೂ ನಿರ್ಧಾರವಾಗದೇ ಭೂ ಮಾಲೀಕರು ಅನಿಯತವಾಗಿ ಸಂಕಷ್ಟದಲ್ಲಿರುತ್ತಾರೆ. ಈ ವರದಿಯ ಸಂಬಂಧಿತ ಭಾಗದಲ್ಲಿ ವಿಶೇಷ ಜಿಲ್ಲಾಧಿಕಾರಿ, ಕೆ.ಐ.ಎ.ಡಿ.ಬಿ. ಅವರು ನೈಸೆಲ್ ಸಂಸ್ಥೆ ನೀಡಿರುವ ಬೇಡಿಕೆಯನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲಾತಿಗಳನ್ನು ಅಂದರೆ, ಯೋಜನಾ ತಾಂತ್ರಿಕ ವರದಿ, ಕ್ರಿಯಾ ಒಪ್ಪಂದ, ಬಿ.ಎಫ್.ಎಲ್. ಸರ್ವೇಕ್ಷಣೆಯನ್ನು ಪರಿಗಣಿಸಿರುವುದಿಲ್ಲ ಎಂದು ಲಿಖಿತ ರೂಪದಲ್ಲಿ ಸ್ಪಷ್ಟೀಕರಿಸಿರುವುದನ್ನು ಸಮಿತಿ ಗಮನಿಸಿದೆ. ಈ ಸ್ಪಷ್ಟೀಕರಣದಿಂದ ಕೆ.ಐ.ಎ.ಡಿ.ಬಿ. ಸಂಸ್ಥೆ ಯೋಜನೆ ಅನುಷ್ಠಾನಕ್ಕೆ ಜಾರಿಗೊಳಿಸಲಾದ ಒಪ್ಪಂದ ಹಾಗೂ ಪೂರಕ ದಾಖಲಾತಿಗಳನ್ನು ಸಂಪೂರ್ಣವಾಗಿ ನಿರ್ಲ್ಯಕ್ಷಿಸಿ ಭೂ ಸ್ವಾಧೀನ ಪ್ರಕ್ರಿಯೆಯನ್ನು ಜಾರಿಗೊಳಿಸಿರುವುದು ಸ್ಪಷ್ಟವಾಗಿದೆ. ಇದಲ್ಲದೆ, 2004 ರಲ್ಲಿ ಕೆ.ಐ.ಎ.ಡಿ.ಬಿ. ಸಂಸ್ಥೆಯಿಂದ ಜಾರಿಗೊಳಿಸಲಾಗಿರುವ ಡಿ-ನೋಟಿಫಿಕೇಷನ್ ಸಹಾ ಖಾಸಗಿ ಪಾಲುದಾರರ ಪ್ರಸ್ತಾವನೆಯ ಆಧಾರದ ಮೇಲಿದೆ. ಯೋಜನಾ ಅನುಷ್ಠಾನದಲ್ಲಿ ಭೂ ನಿರ್ವಹಣೆ ವಿವಾದಾತ್ಮಕವಾಗಲು ಕೆ.ಐ.ಎ.ಡಿ.ಬಿ. ಯ ಧೋರಣೆ ಹಾಗೂ ನಿರ್ಲ್ಯಕ್ಷ್ಯತಾ ಮನೋಭಾವ ಪ್ರಮುಖ ಕಾರಣವಾಗಿದೆ. ಇದೊಂದು ಅಧಿಕಾರ ದುರ್ಬಳಕೆಯ ನಿರ್ಧಿಷ್ಟ ಪ್ರಕರಣವಾಗಿರುವ ಹಿನ್ನೆಲೆಯಲ್ಲಿ ದಿನಾಂಕ 14.10.1998 ರಂದು ಜಾರಿಗೊಳಿಸಲಾದ ಖಾಸಗಿ ಜಮೀನಿನ ಭೂ ಸ್ವಾಧೀನ ಒಪ್ಪಂದದ ಅನುಷ್ಠಾನಕ್ಕೆ ಕಾರಣಕರ್ತರಾದ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಕೆ.ಐ.ಎ.ಡಿ.ಬಿ. ಹಾಗೂ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮ ಜರುಗಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

4. ಮುಂದುವರೆದಂತೆ, ಕೆ.ಐ.ಎ.ಡಿ.ಬಿ. ಸಂಸ್ಥೆಯು 20,946 ಎಕರೆಗಳಿಗೆ 28(1) ಅಧಿಸೂಚನೆ ಜಾರಿಗೊಳಿಸಿರುವುದನ್ನು ಸಮಿತಿಯು ಗಮನಿಸಿದೆ. ಪ್ರಧಾನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಇವರು ಅಧಿಕಾರದತ್ತ ಸಮಿತಿಯ ಸದಸ್ಯರಾಗಿರುತ್ತಾರೆ. ಆದಾಗ್ಯೂ ಸಹ ಸಮಗ್ರ ಸಮನ್ವಯತೆಯ ಜವಾಬ್ದಾರಿಯನ್ನು ಹೊಂದಿರುವ ಲೋಕೋಪಯೋಗಿ ಇಲಾಖೆಯನ್ನು ಸಂದರ್ಶಿಸದೇ ಅಥವಾ ಕ್ರಿಯಾ ಒಪ್ಪಂದದ ಅನುಚ್ಛೇಧ, ಶೆಡ್ಯೂಲ್‌ಗಳನ್ನು ಪರಿಗಣಿಸದೇ 7,709 ಎಕರೆಗಳಷ್ಟು ಜಮೀನಿಗೆ ಹೆಚ್ಚುವರಿಯಾಗಿ ಅಧಿಸೂಚನೆ ಜಾರಿಗೊಳಿಸಿದೆ. ಕೆ.ಐ.ಎ.ಡಿ.ಬಿ. ಅಧಿನಿಯಮಗಳಿಗೆ ವ್ಯತಿರಿಕ್ತವಾಗಿ ನೈಸೆಲ್/ನೀಸೆಲ್ ಸಂಸ್ಥೆಯಿಂದ ಪರಿಹಾರ ಮೊತ್ತದ ಠೇವಣಿಯನ್ನು ಪಡೆಯದೇ ಅಧಿಸೂಚನೆಯನ್ನು ಜಾರಿಗೊಳಿಸಲಾಗಿದೆ. ನೈಸೆಲ್ ಸಂಸ್ಥೆ ಸುಪ್ರೀಂಕೋರ್ಟಿನ ರಿಟ್ ಪ್ರಕರಣದ ತೀರ್ಪಿಗೆ ಬದ್ಧವಾಗಿದ್ದಲ್ಲಿ, ಈ ಹೆಚ್ಚುವರಿ ಜಮೀನನ್ನು ಅಧಿಸೂಚನೆಯಿಂದ ರದ್ದುಗೊಳಿಸಲು ಕ್ರಮ ಕೈಗೊಳ್ಳುವುದು ಅವಶ್ಯಕವಾಗಿತ್ತು. ಆದರೆ ಇದಕ್ಕೆ

ಾ/ನೈಸಲ್ ಸಂಸ್ಥೆಯು 7,709 ಎಕರೆಗಳ ಸ್ಥಿತಿ 2728 ಎಕರೆ ಖಾಸಗಿ ಬದಲಾಗಿ ಸೂಚನೆಯಿಂದ ಕೈಬಿಡುವಂತ ವಿವರಗಳನ್ನು ಸಲ್ಲಿಸಿದ್ದು, ಇದಕ್ಕನುಗುಣವಾಗಿ ಜಮೀನ 728 ಎಕರೆಗಳನ್ನು ಅಧಿಸೂಚನೆಯಿಂದ ರದ್ದುಪಡಿಸಲಾಗಿದೆ. ಈವರೆವಿಗೂ 20 ಂಸ್ಥೆ ಸ್ವಾಧೀನಕ್ಕೆ ಒಳಪಡಿಸಿರುವ 4981 ಎಕರೆ ಬಾಕಿ ಹೆಚ್ಚುವರಿ ಜಮೀನನ್ನು ಕೆ ಕೈಗೊಂಡಿರುವುದಿಲ್ಲ. ಕೆ.ಐ.ಎ.ಡಿ.ಬಿ. ಸಂಸ್ಥೆ ಹೆಚ್ಚುವರಿಯಾಗಿ ಪ್ರಾಥಮಿಕ ಳಪಡಿಸಿರುವ ಜಮೀನಿನ ಘಟಕವಾರು ವಿವರಗಳು ಕೆಳಕಂಡಂತಿದೆ:

| | | |
|---|---|---|
| ! | – | 3071 ಎಕರೆ |
| ಟ್ಟೆಯ | – | 1910 ಎಕರೆ |

ರಣದ್ನ ವಲ್ಲದೆ, ಈ ಜಮೀನಿನ ವರೆವಿಗೂ ಸರ್ಕಾರಿ ಕ್ಕೆ ಸಲು ನ್ನು ಸಿ

ಾ ಒಪ್ಪಂದದ ಅನುಗುಣವಾಗಿ ಯೋಜನೆಯ ಮೊದಲನೇ ಸ್ತರಕ್ಕೆ 600 ಎಕರೆಗಳ ನನ್ನು ಸ್ವಾಧೀನಕ್ಕೆ ಒಳಪಡಿಸಲಾಗಿದೆ. ಇದಲ್ಲದೆ, ಪೆರಿಫರಲ್ ಮತ್ತು ಲಿಂಕ್ ಯಲ್ಲಿ ಸುಮಾರು 554 ಎಕರೆ ಜಮೀನನ್ನು ಹೆಚ್ಚುವರಿಯಾಗಿ ನೀಡಲಾಗಿದೆ. ನಗರ 1 ರ ವ್ಯಾಪ್ತಿಯಲ್ಲಿ ಕ್ರಿಯಾ ಒಪ್ಪಂದದ ಅನುಗುಣವಾಗಿ 2447 ಎಕರೆ ಖಾಸಗಿ ನೀಡಬೇಕಾಗಿದ್ದು, ಇದರ ವಿರುದ್ಧ 1916 ಎಕರೆಗಳಿಗೆ ಸ್ವಾಧೀನ ಪ್ರಕ್ರಿಯೆಯನ್ನು ಸಲಾಗಿದೆ. ಉಳಿದ 531 ಎಕರೆ ಜಮೀನಿಗೆ ಅನ್ವಯಿಸುವಂತೆ ಕೆ.ಐ.ಎ.ಡಿ.ಬಿ. ನೈಸೆಲ್ ನೆಯ ಆಧಾರದ ಮೇಲೆ ನಿರಾಪೇಕ್ಷಣಾ ಪತ್ರಗಳನ್ನು ನೀಡಿದೆ. ಈ ನಿರಾಪೇಕ್ಷಣಾ ಪತ್ರಗಳ ರದ ಮೇಲೆ ಪ್ರಸ್ತಾವಿತ ಜಮೀನನ್ನು ಮಾರಾಟದ ಮುಖಾಂತರ ಪರಭಾರೆ ಮಾಡಲಾಗಿದೆ. ಈ ಲ್ಲಾ ಬೆಳವಣಿಗೆಗಳನ್ನು ಗಮನಿಸಿದಾಗ ಕೆ.ಐ.ಎ.ಡಿ.ಬಿ. ಸಂಸ್ಥೆಯು ವಿವೇಚನಾರಹಿತವಾಗಿ ಈ ಕೆಳಕಂಡ ಮಾನದಂಡಗಳನ್ನು ಉಪೇಕ್ಷಿಸಿ, ಉಲ್ಲಂಘಿಸಿರುವುದು ಸ್ಪಷ್ಟವಾಗಿರುತ್ತದೆ:

1. ಕ್ರಿಯಾ ಒಪ್ಪಂದದ ಶೆಡ್ಯೂಲ್–1 ಪ್ರತಿಪಾದನೆಗಳು
2. ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನ ಗುರುತರ ಹಾಗೂ ಪ್ರಮುಖ ನಿರ್ದೇಶನಗಳು
3. ಅಧಿಕಾರದತ್ತ ಸಮಿತಿಯ ಕಾರ್ಯವ್ಯಾಪ್ತಿ – ಕ್ರಿಯಾ ಒಪ್ಪಂದದ ಅನುಚ್ಛೇದ–4 ರಡಿಯಲ್ಲಿ

ಆದುದರಿಂದ ಪ್ರಸ್ತಾವಿತ ಬೆಳವಣಿಗೆ ಅಥವಾ ಪ್ರಕರಣಗಳಲ್ಲಿ ಪ್ರಸ್ತಾವನೆಯನ್ನು ಸಂಸ್ಕರಿಸುವ ಹಂತದಿಂದ ನಿರ್ಧಾರ ಹಾಗೂ ಆದೇಶಗಳನ್ನು ಜಾರಿಗೊಳಿಸುವ ಪ್ರಾಧಿಕಾರದ ಮಟ್ಟದವರೆಗೂ ಅಧಿಕಾರಿ/ಸಿಬ್ಬಂದಿ ವರ್ಗದವರನ್ನು ಗುರುತಿಸಿ ಶಿಸ್ತಿನ ಕ್ರಮ ಜರುಗಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

5. ಮುಂದುವರೆದಂತೆ ದಿನಾಂಕ 23.11.1999 ರಂದು ಸೋಮಶೇಖರ
ನಂತರ 5688 ಎಕರೆಗಳ ಸರ್ಕಾರಿ ಜಮೀನನ್ನು ಹಸ್ತಾಂತರಿಸಲು ಕೆ.ಐ.
ಒಡನೆ ಒಡಂಬಡಿಕೆಯನ್ನು ಜಾರಿಗೊಳಿಸಿದೆ. ವಾಸ್ತವಿಕವಾಗಿ ಕ್ರಿಯಾ ಒಪ್ಪಂ
ಯೋಜನಾ ಅನುಷ್ಠಾನಕ್ಕೆ 6956 ಎಕರೆಗಳ ಸರ್ಕಾರಿ ಜಮೀನಿನ
ಸರ್ಕಾರಿ ಆದೇಶ ದಿನಾಂಕ 07.10.1999 ರ ಮುಖಾಂತರ 5688 ಎಕರೆ
ಜಮೀನನ್ನು ಗುತ್ತಿಗೆ ಆಧಾರದ ಮೇಲೆ ನೈಸೆಲ್ ಸಂಸ್ಥೆಗೆ ಹಸ್ತಾಂತರಿಸಲು
ಸೂಚಿಸಿದೆ. ಈ ಪ್ರಕರಣದಲ್ಲಿ ಅಧಿಕಾರ ದತ್ತ ಸಮಿತಿಯು 6956 ಎಕರೆಗಳ
ಎಕರೆ ಜಮೀನನ್ನು ನೀಡುವ ಬಗ್ಗೆ ಯಾವುದೇ ನಿರ್ಧಾರವನ್ನು ಕೈಗೊಂಡಿರುವುದಿ
ಇಲಾಖೆಯ ಅಭಿಪ್ರಾಯಕ್ಕನುಗುಣವಾಗಿ ಕ್ರಿಯಾ ಒಪ್ಪಂದದ ಬದಲಾವಣೆಗಳನ್ನು ಸಚಿ
ಅನುಮೋದನೆ ಪೂರ್ವಾನುಮತಿಯಿಲ್ಲದೇ ಜಾರಿಗೊಳಿಸುವಂತಿಲ್ಲ. ಆದರೆ, ಈ ಪ್ರಕ
ಗುರುತರ ಬದಲಾವಣೆಯ ಬಗ್ಗೆ ಸಚಿವ ಸಂಪುಟದ ಅನುಮೋದನೆಯಿರುವುದಿಲ್ಲ. ಇ
ಒಡಂಬಡಿಕೆ ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನಲ್ಲಿ ಇತ್ಯರ್ಥಗೊಳಿಸಲಾದ
ಅವಶ್ಯಕತೆಗೆ ವ್ಯತಿರಿಕ್ತವಾಗಿದೆ. ಬಿ.ಎಂ.ಐ.ಸಿ. ಯೋಜನಾ ಅನುಷ್ಠಾನದಲ್ಲಿ ಈ
ಸಾಧಿಸಲಾದ ಪ್ರಗತಿಯನ್ನು ಪರಿಶೀಲಿಸಿದರೆ ಯೋಜನೆಗೆ ಅವಶ್ಯಕವಿರುವ ಸಮಗ್ರ
ಜಮೀನನ್ನು ಒಂದೇ ಸ್ತರದಲ್ಲಿ ಹಸ್ತಾಂತರಿಸಿರುವುದು ಅಸಮರ್ಪಕವಾಗಿರುತ್ತದೆ. ಮೇಲ್ನೋ
ಖಾಸಗಿ ಪಾಲುದಾರರಿಗೆ ಈ ಜಮೀನಿನ ಖಾತ್ರಿ ಆಧಾರದ ಮೇಲೆ ಹೂಡಿಕೆಯನ್ನು ಸೃಜಿ
ಆಧಾರಗಳನ್ನು ಸೃಷ್ಟಿಸುವ ಉದ್ದೇಶದಿಂದ ಒಂದೇ ಸ್ತರದಲ್ಲಿ 5688 ಎಕರೆ ಜಮೀನ
ಹಸ್ತಾಂತರಿಸಲಾಗಿದೆ ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. ಏಕೆಂದರೆ, ಸೆಕ್ಷನ್ 'ಎ' ಹೊರತುಪಡಿ
ವೇಗದ ಹೆದ್ದಾರಿ ಅಥವಾ ನಗರ ಸಮುಚ್ಛಯಗಳ ಅಭಿವೃದ್ಧಿಯಲ್ಲಿ 19 ವರ್ಷಗಳ ನಂತರವು
ಗುರುತರ ಪ್ರಗತಿಯನ್ನು ಸಾಧಿಸಿರುವುದಿಲ್ಲ. ಈ ಹಿನ್ನಲೆಯಲ್ಲಿ ಕೆ.ಐ.ಎ.ಡಿ.ಬಿ. ಅನುಷ್ಠಾನಗೊಳಿಸಿರುವ
ಒಡಂಬಡಿಕೆ ನಿಯಮಬಾಹಿರ ಹಾಗೂ ಅನಧಿಕೃತವಾಗಿರುತ್ತದೆ. ಆದುದರಿಂದ ಈ ಒಡಂಬಡಿಕೆ
ಅನುಷ್ಠಾನಕ್ಕೆ ಕಾರಣಕರ್ತರಾದ ಆಯುಕ್ತರು, ಕೆ.ಐ.ಎ.ಡಿ.ಬಿ. ಹಾಗೂ ಸಂಬಂಧಿತ ಅಧಿಕಾರಿಗಳ
ವಿರುದ್ಧ ಶಿಸ್ತಿನ ಕ್ರಮ ಜರುಗಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಕರ್ನಾಟಕ
ಸರ್ಕಾರ ವ್ಯವಹಾರಗಳ ನಿಯಮಗಳನ್ನು ಉಲ್ಲಂಘಿಸಿ ಸಚಿವ ಸಂಪುಟದ ನಿರ್ಧಾರಗಳನ್ನು
ನಿಯಮಬಾಹಿರವಾಗಿ ಅರ್ಥೈಸಿರುವ ಆಧಾರದ ಮೇಲೆ ಅಂದಿನ ಕಂದಾಯ ಇಲಾಖೆಯ
ಉಪಕಾರ್ಯದರ್ಶಿಗಳಾದ ಶ್ರೀ ಸಿದ್ಧರಾಮಯ್ಯ, ಇವರ ವಿರುದ್ಧ ಶಿಸ್ತಿನ ಕ್ರಮ/ಕಾನೂನು ರೀತ್ಯಾ
ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

6. ದಿನಾಂಕ 09.08.2002 ರಂದು ಅತ್ಯಂತ ವಿವಾದಾತ್ಮಕವಾದ ತ್ರಿಪಕ್ಷೀಯ ಒಪ್ಪಂದವನ್ನು ಜಾರಿಗೊಳಿಸಲಾಗಿದೆ. ಇದರ ಪೂರ್ವದಲ್ಲಿ ದಿನಾಂಕ 18.02.2002ರಂದು ನೈಸಲ್ ಹಾಗೂ

ನೀಸಲ್ ಸಂಸ್ಥೆಯ ನಡುವೆ ಅಸ್ಸೈನ್‌ಮೆಂಟ್ ಒಪ್ಪಂದವನ್ನು ಜಾರಿಗೊಳಿಸಲಾಗಿದೆ. ಈ ವರದಿಯಲ್ಲಿ ಈಗಾಗಲೇ ಪ್ರತಿಪಾದಿಸಿರುವಂತೆ ಅಸ್ಸೈನ್‌ಮೆಂಟ್ ಒಪ್ಪಂದದಲ್ಲಿ ಇಂಟರ್ ಛೇಂಜ್ ವ್ಯಾಪ್ತಿಯ ಜಮೀನನ್ನು ಅಭಿವೃದ್ಧಿಪಡಿಸಿ ಮಾರಾಟ ಮಾಡುವ ಸೌಲಭ್ಯವನ್ನು ಸೇರ್ಪಡೆ ಮಾಡಲಾಗಿದೆ. ಈ ತಿದ್ದುಪಡಿ ಕ್ರಿಯಾಒಪ್ಪಂದದ ಹಾಗೂ ಯೋಜನಾ ತಾಂತ್ರಿಕ ವರದಿಯ ಸ್ಪಷ್ಟ ಹಾಗೂ ನೇರ ಉಲ್ಲಂಘನೆಯಾಗಿರುತ್ತದೆ. ದಿನಾಂಕ 18.02.2002ರ ಅಸ್ಸೈನ್ ಮೆಂಟ್ ಒಪ್ಪಂದವನ್ನು ಸಕ್ರಮೀಕರಣಗೊಳಿಸುವ ಉದ್ದೇಶದಿಂದ ದಿನಾಂಕ 09.08.2002ರಂದು ಸರ್ಕಾರದ ಪ್ರತಿನಿಧಿಯನ್ನು ಒಳಗೊಂಡ ತ್ರಿಪಕ್ಷೀಯ ಒಪ್ಪಂದವನ್ನು ಜಾರಿಗೊಳಿಸಲಾಗಿದೆ. ಅಧಿಕಾರದತ್ತ ಸಮಿತಿಗೆ ಹಾದಿ ತಪ್ಪಿಸುವ ಉದ್ದೇಶದಿಂದ ನೀಸಲ್ ಸಂಸ್ಥೆಗೆ ಕೇಂದ್ರ ತೆರಿಗೆ ರಿಯಾಯಿತಿ ಸೌಲಭ್ಯಗಳನ್ನು ವಿಸ್ತರಿಸುವ ಉದ್ದೇಶದಿಂದ ತ್ರಿಪಕ್ಷೀಯ ಒಪ್ಪಂದ ಅವಶ್ಯಕ ಎಂದು ಖಾಸಗಿ ಪಾಲುದಾರರು ಕೋರಿರುತ್ತಾರೆ. ಈ ಹಿನ್ನೆಲೆಯಲ್ಲಿ ಅಧಿಕಾರದತ್ತ ಸಮಿತಿ ಈ ಕೋರಿಕೆಗೆ ಸೀಮಿತವಾದಂತೆ ತ್ರಿಪಕ್ಷೀಯ ಒಪ್ಪಂದ ಜಾರಿಗೊಳಿಸಲು ಸಹಮತಿ ಸೂಚಿಸಿದೆ. ಕಾನೂನು ಇಲಾಖೆಯ ಅಭಿಪ್ರಾಯವೂ ಸಹ ಅಸ್ಸೈನ್ ಮೆಂಟ್ ಒಪ್ಪಂದವನ್ನು ಜಾರಿಗೊಳಿಸುವ ಸಮರ್ಪಕತೆಗೆ ಸೀಮಿತವಾಗಿದೆ. ಏಕೆಂದರೆ, ಲೋಕೋಪಯೋಗಿ ಇಲಾಖೆ ಅಸ್ಸೈನ್‌ಮೆಂಟ್ ಒಪ್ಪಂದದಲ್ಲಿ ಅನಧಿಕೃತವಾಗಿ ಸೇರ್ಪಡೆ ಮಾಡಲಾದ ಮಾರಾಟ ಸೌಲಭ್ಯದ ಬಗ್ಗೆ ನಿರ್ದಿಷ್ಟವಾಗಿ ಅಭಿಪ್ರಾಯ ಕೋರಿರುವ ಬಗ್ಗೆ ಸಮಿತಿಗೆ ಮಾಹಿತಿ ಇರುವುದಿಲ್ಲ. ಈ ಗುರುತರ ಹಾಗೂ ಭಾರೀ ಪ್ರಮಾಣದ ಆರ್ಥಿಕ ಪರಿಣಾಮ ಬೀರುವ ಅನಧಿಕೃತ ಸೇರ್ಪಡೆಯನ್ನು ಇದರ ಪರಿಣಾಮವನ್ನು ಪರಿಗಣಿಸದೆ ಈ ಒಪ್ಪಂದವನ್ನು ಜಾರಿಗೊಳಿಸಲಾಗಿದೆ. ಇದರಿಂದಾಗಿ ಖಾಸಗಿ ಪಾಲುದಾರರು ಸೆಕ್ಷನ್ 'ಎ' ವ್ಯಾಪ್ತಿಯಲ್ಲಿ 4,956 ಕೋಟಿ ರೂ.ಗಳ ವಹಿವಾಟುಗಳನ್ನು ಜಂಟಿ ಅಭಿವೃದ್ಧಿ, ಅಡಮಾನ ಹಾಗೂ ಮಾರಾಟದ ಮುಖಾಂತರ ನಡೆಸಿರುವುದು ಐಸೆಕ್ ಸಂಸ್ಥೆ ಕೈಗೊಂಡಿರುವ ಋಣಭಾರ ಪತ್ರಗಳ ತನಿಖೆಯಿಂದ ವ್ಯಕ್ತವಾಗಿದೆ. ಈ ವೈಫಲ್ಯತೆಯಿಂದ ಅನುದ್ದೇಶಿತ ಹಾಗೂ ಅನಧಿಕೃತ ಆದಾಯದ ಮೂಲವನ್ನು ಖಾಸಗಿ ಪಾಲುದಾರರಿಗೆ ಸೃಷ್ಟಿಸಲಾಗಿದೆ. ದಿನಾಂಕ 30.08.2007ರ ಸಚಿವ ಸಂಪುಟದಲ್ಲಿ ಈ ಅನಧಿಕೃತ ಸೇರ್ಪಡೆಗಳನ್ನು ರದ್ದುಗೊಳಿಸುವ ಬಗ್ಗೆ ನಿರ್ಧಾರವನ್ನು ಕೈಗೊಳ್ಳಲಾಗಿದೆ. ಆದರೆ ಈ ನಿರ್ದಿಷ್ಟ ನಿರ್ಧಾರವನ್ನು ಪರಿಗಣಿಸದೆ 2008ರಲ್ಲಿ ಕ್ರಿಯಾ ಒಪ್ಪಂದದ ಅನುಗುಣವಾಗಿ ಯೋಜನೆಯನ್ನು ಅನುಷ್ಠಾನಗೊಳಿಸಬೇಕೆಂದು ಸರ್ಕಾರವು ಆದೇಶವನ್ನು ಹೊರಡಿಸಿರುವುದನ್ನು ಸಮಿತಿಯು ಗಮನಿಸಿದೆ. ಇದರಿಂದಾಗಿ ಸಚಿವ ಸಂಪುಟದ ನಿರ್ಧಾರ ಅನುಷ್ಠಾನವಾಗದೇ ನೆನಗುದಿಯಲ್ಲಿರುವುದನ್ನು ಸಮಿತಿಯು ಗಮನಿಸಿದೆ. ಈ ಹಿನ್ನೆಲೆಯಲ್ಲಿ ಸರ್ಕಾರವು ಈ ಅನುದ್ದೇಶಿತ ಸೌಲಭ್ಯಗಳ ವೃತ್ತಿಪರ ಮೌಲ್ಯಮಾಪನಗಳನ್ನು ಕೈಗೊಂಡು ಯೋಜನಾ ತಾಂತ್ರಿಕ ವರದಿಯಲ್ಲಿ ನಮೂದಿಸಿರುವ IRR ಹಾಗೂ NPV ಗಳನ್ನು ಪರಿಷ್ಕರಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಇದಕ್ಕೆ ಪೂರಕವಾಗಿ ದಿನಾಂಕ

೩೦.೦೩.೨೦೦೭ರ ಸಚಿವ ಸಂಪುಟದ ನಿರ್ಧಾರವನ್ನು ಜಾರಿಗೊಳಿಸಲು ಸರ್ಕಾರವು ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

7. ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ಇವರು ಕ್ರಿಯಾ ಒಪ್ಪಂದ, ದಿನಾಂಕ 06.10.1999 ರ ಪೂರಕ ಒಪ್ಪಂದ ಹಾಗೂ ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪನ್ನು ನಿರ್ಲಕ್ಷಿಸಿ ತ್ರಿಪಕ್ಷೀಯ ಒಪ್ಪಂದದ ಅನುಷ್ಠಾನದಲ್ಲಿ ಗುರುತರ ಪಾತ್ರವನ್ನು ನಿರ್ವಹಿಸಿರುತ್ತಾರೆ. ತ್ರಿಪಕ್ಷೀಯ ಒಪ್ಪಂದವು ಕ್ರಿಯಾ ಒಪ್ಪಂದದ ನಿರೂಪಣೆಗಳ ಹಿನ್ನಲೆಯಲ್ಲಿ ನಿಯಮಬಾಹಿರ ಹಾಗೂ ಕಾನೂನು ಬಾಹಿರವಾಗಿರುತ್ತದೆ. ಆದುದರಿಂದ ತ್ರಿಪಕ್ಷೀಯ ಒಪ್ಪಂದಕ್ಕೆ ಸಹಮತಿ ಸೂಚಿಸಿ ಅನುಷ್ಠಾನಗೊಳಿಸಿರುವ ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿಯವರ ವಿರುದ್ಧ ಕರ್ತವ್ಯ ಲೋಪ, ಅಪ್ರಾಮಾಣಿಕತೆ ಹಾಗೂ ಸರ್ಕಾರಿ ನೌಕರರಿಗೆ ಸಲ್ಲದ ನಡವಳಿಕೆಯ ಆಧಾರದ ಮೇಲೆ ಶಿಸ್ತಿನ ಕ್ರಮ ಜರುಗಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಕರ್ನಾಟಕ ಸರ್ಕಾರಿ ಸೇವಾ ನಿಯಮಾವಳಿಗಳ ಪ್ರಕಾರ ಇತಿಮಿತಿಗಳ ಹಿನ್ನೆಲೆಯಲ್ಲಿ ಪರ್ಯಾಯವಾಗಿ ಪ್ರಸ್ತಾವಿತ ಅಧಿಕಾರಿಯವರ ವಿರುದ್ಧ ಕ್ರಿಮಿನಲ್ ಮೊಕದ್ದಮೆಗಳನ್ನು ದಾಖಲಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

8. ಅಧಿಕಾರದತ್ತ ಸಮಿತಿಯು ತನ್ನ ಮೊದಲನೇ ಸಭೆಯಲ್ಲಿ ಒಂದು ಪ್ರತ್ಯೇಕ ಯೋಜನಾ ಪ್ರಾಧಿಕಾರವನ್ನು ಸೃಜಿಸಲು ನಿರ್ಧರಿಸಿದೆ. ತತ್ಸಂಬಂಧವಾಗಿ, ದಿನಾಂಕ 07.10.1999 ರಂದು ಬಿ.ಎಂ.ಐ.ಸಿ.ಎ.ಪಿ.ಎ. ಪ್ರಾಧಿಕಾರವನ್ನು ಸೃಜಿಸಿದೆ. ಕ್ರಿಯಾ ಒಪ್ಪಂದದ ಅನುಗುಣವಾಗಿ ನಿರ್ದಿಷ್ಟವಾಗಿ ಕ್ರಿಯಾ ಒಪ್ಪಂದದ ಅನುಚ್ಛೇಧದ 2 ರ ಅನುಗುಣವಾಗಿ ನೈಸೆಲ್ ಹಾಗೂ ಕರ್ನಾಟಕ ಸರ್ಕಾರ ಸೆಕ್ಷನ್ 'ಎ' ಸ್ತರದ ಯೋಜನೆಯ ನಕ್ಷೆಯನ್ನು ಬಿ.ಎಂ.ಐ.ಸಿ.ಎ.ಪಿ.ಎ. ಮುಖಾಂತರ ಸಲ್ಲಿಸಿ ಅನುಮೋದನೆ ಪಡೆಯುವುದು ಕಡ್ಡಾಯವಾಗಿರುತ್ತದೆ. ಆದರೆ ಇದಕ್ಕೆ ವ್ಯತಿರಿಕ್ತವಾಗಿ ನೈಸೆಲ್ ಸಂಸ್ಥೆಯು ಮುಖ್ಯ ಇಂಜಿನೀಯರ್, ಲೋಕೋಪಯೋಗಿ ಇಲಾಖೆ ಇವರಿಗೆ 16.07.2002 ರಂದು ಫೇಸ್–1 ಮತ್ತು ಫೇಸ್–2 ಒಳಗೊಂಡ ಸೆಕ್ಷನ್ 'ಎ' ಭಾಗದ ನಕ್ಷೆಯನ್ನು "ಥೀಮ್ ಪ್ಲಾನ್" ಪ್ರವರ್ಗದಡಿಯಲ್ಲಿ ಸಲ್ಲಿಸಿರುತ್ತಾರೆ. ವಾಸ್ತವಿಕವಾಗಿ ಪ್ರಸ್ತಾವಿತ ಥೀಮ್ ಪ್ಲಾನ್ ನಕ್ಷೆಯಲ್ಲಿ ಅವಶ್ಯಕವಿರುವ ಜಮೀನಿನ ವಿವರಗಳನ್ನು ನಮೂದಿಸಿರುವುದಿಲ್ಲ. ಮುಖ್ಯ ಇಂಜಿನೀಯರ್, ಲೋಕೋಪಯೋಗಿ ಇಲಾಖೆ ಇವರು ಈ ಪ್ರಸ್ತಾವನೆಯನ್ನು ತಿರಸ್ಕರಿಸುವಲ್ಲಿ ವಿಫಲರಾಗಿರುತ್ತಾರೆ. ಇದಲ್ಲದೆ, ಪ್ರಸ್ತಾವಿತ ನಕ್ಷೆಯನ್ನು ಬಿ.ಎಂ.ಐ.ಸಿ.ಎ.ಪಿ.ಎ. ಸಂಸ್ಥೆಯ ಪರಿಗಣನೆಗೂ ಸಹ ಸಲ್ಲಿಸಿರುವುದಿಲ್ಲ. ಸ್ಥಳ ಪರಿವೀಕ್ಷಣೆ ಕೈಗೊಂಡಿರುವ ಬಗ್ಗೆ ಸಮಿತಿಗೆ ಮಾಹಿತಿ ಇರುವುದಿಲ್ಲ. ಈ ಹಿನ್ನೆಲೆಯಲ್ಲಿ ಮುಖ್ಯ ಅಭಿಯಂತರರು, ಲೋಕೋಪಯೋಗಿ ಇಲಾಖೆ ಇವರು ಬಿ.ಎಂ.ಐ.ಸಿ.ಎ.ಪಿ.ಎ. ಪ್ರಾಧಿಕಾರದ ನಿರ್ದಿಷ್ಟ ಕಾರ್ಯವ್ಯಾಪ್ತಿಯನ್ನು ನಿರ್ಲಕ್ಷಿಸಿ ಅಪೂರ್ಣ ಅಥವಾ ಅಸಮರ್ಪಕ

ಯೋಜನಾ ನಕ್ಷೆಗೆ ಅನುಮೋದನೆ ನೀಡಿರುವುದು ಸ್ಪಷ್ಟವಾಗಿದೆ. ನೈಸೆಲ್ ಅಥವಾ ನೀಸೆಲ್ ಸಂಸ್ಥೆಯು ಪ್ರಸ್ತಾವಿತ ಅಪೂರ್ಣ ಯೋಜನಾ ನಕ್ಷೆಯ ಆಧಾರದ ಮೇಲೆ ಸೆಕ್ಷನ್ 'ಎ' ಅಡಿಯಲ್ಲಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿದೆ. ಇದರಿಂದಾಗಿ ಈವರೆವಿಗೂ ವಾಸ್ತವಿಕವಾಗಿ ಬಳಕೆಯಾಗಿರುವ ಭೂಮಿಯ ವಿಸ್ತೀರ್ಣದ ವಿವರಗಳು ಲೋಕೋಪಯೋಗಿ ಇಲಾಖೆಯ ಬಳಿ ಲಭ್ಯವಿರುವುದಿಲ್ಲ ಅಥವಾ ಅಧಿಕೃತವಾಗಿ ಸ್ವೀಕೃತವಾಗಿರುವುದಿಲ್ಲ. ನೈಸೆಲ್/ನೀಸೆಲ್ ಸಂಸ್ಥೆಯು ಕಂದಾಯ ನಕ್ಷೆಗಳ ಮೇಲೆ ಅಳವಡಿಸಲಾದ ಪಂಕ್ತೀಕರಣದ ನಕ್ಷೆಯನ್ನು ಈವರೆವಿಗೂ ಸಲ್ಲಿಸಿರುವುದಿಲ್ಲ. ಇದರಿಂದಾಗಿ ವಿಭಿನ್ನ ಅಥವಾ ಹೆಚ್ಚುವರಿ ಜಮೀನಿನ ಬಗ್ಗೆ ನಿರ್ದಿಷ್ಟ ನಿಲುವನ್ನು ತಳೆಯುವಲ್ಲಿ ಸರ್ಕಾರ ನಿಸ್ಸಹಾಯಕವಾಗಿದೆ. ಪ್ರಥಮ ಸ್ತರದಲ್ಲಿ ಕ್ರಿಯಾ ಒಪ್ಪಂದದ ಅನುಗುಣವಾಗಿ ಅಥವಾ ಮಾನದಂಡಗಳ ಅನುಗುಣವಾಗಿ ಕ್ಲಡಸ್ಟಲ್ ಮ್ಯಾಪುಗಳನ್ನು ಸಲ್ಲಿಸಿದ್ದಲ್ಲಿ, ಈ ಕ್ಲಿಷ್ಟತೆ ಉದ್ಭವಿಸುತ್ತಿರಲಿಲ್ಲ. ದಿನಾಂಕ 20.07.2002 ರಂದು ಥೀಮ್ ಪ್ಲಾನಿಗೆ ಅನುಮೋದನೆ ನೀಡುವ ಸಂದರ್ಭದಲ್ಲಿ ಮುಖ್ಯ ಅಭಿಯಂತರರು ಈ ಪ್ರಮುಖ ಅಂಶಗಳನ್ನು ಕಡೆಗಣಿಸಿದ್ದರಿಂದ ಈ ಸಂದಿಗ್ಧತೆ ಉಂಟಾಗಿದೆ. ಆದುದರಿಂದ ಅನುಮೋದಿತ ಥೀಮ್ ಪ್ಲಾನ್ ಅನಧಿಕೃತ ಹಾಗೂ ನಿಯಮಬಾಹಿರವಾಗಿರುತ್ತದೆ. ಥೀಮ್ ಪ್ಲಾನ್ ಅನುಮೋದನೆ ನೀಡಿದ ಮುಖ್ಯ ಅಭಿಯಂತರರು, ಲೋಕೋಪಯೋಗಿ ಇಲಾಖೆ ಇವರ ವಿರುದ್ಧ ದುರ್ನಡತೆಯ ಆಧಾರದ ಮೇಲೆ ಶಿಸ್ತಿನ ಕ್ರಮ/ಕಾನೂನು ಕ್ರಮ ಜರುಗಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

9. ದಿನಾಂಕ 16.12.2002 ರಂದು ಬಿ.ಎಂ.ಐ.ಸಿ.ಎ.ಪಿ.ಎ. ಸಂಸ್ಥೆಯು ಪ್ರಾಧಿಕಾರದ ಸಭೆಯನ್ನು ನಡೆಸಿದ್ದು, ಕರಡು ಓ.ಡಿ.ಪಿ. ನಕ್ಷೆಯನ್ನು ಅನುಮೋದಿಸಿ ಸರ್ಕಾರಕ್ಕೆ ಸಲ್ಲಿಸಲು ನಿರ್ಧರಿಸಿತ್ತು. ದಿನಾಂಕ 25.04.2003 ರಂದು ಈ ಕರಡನ್ನು ನಗರಾಭಿವೃದ್ಧಿ ಇಲಾಖೆಯ ಮಾನ್ಯ ಸಚಿವರು ಅನುಮೋದಿಸಿದರು. ತತ್ಸಂಬಂಧವಾಗಿ ಸರ್ಕಾರಿ ಆದೇಶವನ್ನು ದಿನಾಂಕ 08.05.2003 ರಂದು ಜಾರಿಗೊಳಿಸಲಾಯಿತು. ತದನಂತರ ದಿನಾಂಕ 17.06.2003 ರಂದು ಬಿ.ಎಂ.ಐ.ಸಿ.ಎ.ಪಿ.ಎ. ಸಂಸ್ಥೆಯು ಸರ್ಕಾರಕ್ಕೆ ಖಾಸಗಿ ಸಲಹೆಗಾರರ ಮೂಲಕ ಓ.ಡಿ.ಪಿ. ವಿನ್ಯಾಸವನ್ನು ಇತ್ಯರ್ಥಗೊಳಿಸಲು ಮಂಜೂರಾತಿಯನ್ನು ಕೋರಿದರು. ತಾಂತ್ರಿಕ ಸಿಬ್ಬಂದಿಯ ಕೊರತೆಯಿಂದಾಗಿ ಈ ಕ್ರಮ ಕೈಗೊಂಡಿರುವುದಾಗಿ ಸಮಿತಿಯ ಸಭೆಯಲ್ಲಿ ಸ್ಪಷ್ಟೀಕರಿಸಲಾಗಿದೆ. ಈ ಪ್ರಸ್ತಾವನೆಗೆ ಮಾನ್ಯ ನಗರಾಭಿವೃದ್ಧಿ ಸಚಿವರು ದಿನಾಂಕ 09.09.2003 ರಂದು ಅನುಮೋದನೆ ನೀಡಿರುತ್ತಾರೆ. ದಿನಾಂಕ 16.10.2003 ರಂದು ಖಾಸಗಿ ಸಲಹೆಗಾರರಿಂದ ಓ.ಡಿ.ಪಿ. ಇತ್ಯರ್ಥಗೊಳಿಸಲು ಆದೇಶವಾಗಿರುತ್ತದೆ. ಆದರೆ ವಾಸ್ತವಿಕವಾಗಿ ಬಿ.ಎಂ.ಐ.ಸಿ.ಎ.ಪಿ.ಎ. ಸಂಸ್ಥೆ ಯಾವುದೇ ಖಾಸಗಿ ಸಲಹೆಗಾರರನ್ನು ನೇಮಿಸಿರುವುದಿಲ್ಲ. ನಗರ ಯೋಜನೆ ಅಪರ ನಿರ್ದೇಶಕರು, ಬಿ.ಎಂ.ಐ.ಸಿ.ಎ.ಪಿ.ಎ. ಕಾರ್ಯದರ್ಶಿಯಾಗಿರುವುದರಿಂದ ನಿರ್ದೇಶನಾಲಯದ ಸಿಬ್ಬಂದಿಯ ಸಹಕಾರದೊಂದಿಗೆ ಅಂತಿಮ ಓ.ಡಿ.ಪಿ. ಯನ್ನು ತಯಾರು ಮಾಡಲಾಗಿದೆ. ಹಾಗೂ ಈ ಅಂತಿಮ ಓ.ಡಿ.ಪಿ. ಯನ್ನು ದಿನಾಂಕ

09.02.2004 ರಂದು ಅನುಮೋದಿಸಿದ್ದು, ಸರ್ಕಾರಿ ಆದೇಶವನ್ನು ದಿನಾಂಕ 12.02.2004 ರಂದು ಜಾರಿಗೊಳಿಸಲಾಗಿರುತ್ತದೆ. ಈ ಓ.ಡಿ.ಪಿ. ಪಂಕ್ತೀಕರಣವನ್ನು ದಿನಾಂಕ 12.02.2004ರ ಆದೇಶದಲ್ಲಿ ಸೇರ್ಪಡೆ ಮಾಡಲಾಗಿದೆ. ದಿನಾಂಕ 12.11.2003 ರಂದು ನಡೆಸಲಾದ ಬಿ.ಎಂ.ಐ.ಸಿ.ಎ.ಪಿ.ಎ. ಸಭೆಯಲ್ಲಿ ಮಾನ್ಯ ಕೈಗಾರಿಕಾ ಸಚಿವರು ಲೋಕೋಪಯೋಗಿ ಇಲಾಖೆ ಅನುಮೋದಿಸಿರುವ ಪಂಕ್ತೀಕರಣದ ವಿವರಗಳನ್ನು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಗೆ ಸಲ್ಲಿಸುವಂತೆ ನಿರ್ದೇಶಿಸಿರುತ್ತಾರೆ. ಅಂದರೆ, ದಿನಾಂಕ 08.05.2003 ರಂದು ಅನುಮೋದಿತವಾದ ಕರಡು ಓ.ಡಿ.ಪಿ. ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಗೆ ಲಭ್ಯವಿರುವುದಿಲ್ಲ. ಕೆ.ಐ.ಎ.ಡಿ.ಬಿ. ಸಂಸ್ಥೆಯು ದಿನಾಂಕ 29.11.2003 ರಂದು ಪಂಕ್ತೀಕರಣದ ನಕ್ಷೆಯನ್ನು ಒದಗಿಸುವಂತೆ ನೈಸೆಲ್ ಸಂಸ್ಥೆಗೆ ಕೋರಿರುತ್ತಾರೆ. ಈ ಓ.ಡಿ.ಪಿ. ಪಂಕ್ತೀಕರಣವು ಲೋಕೋಪಯೋಗಿ ಇಲಾಖೆಯಿಂದ ದೃಢೀಕರಿಸಲ್ಪಟ್ಟ ನಕ್ಷೆಯಂತೆ ಸೇರಿಸಲಾಗಿದೆ. ಕ್ರಿಯಾ ಒಪ್ಪಂದದಲ್ಲಿ ನಮೂದಿಸಲಾದ 20,193 ಎಕರೆಗಳ ಬದಲಾಗಿ 1,75,250 ಎಕರೆ ವಿಸ್ತೀರ್ಣದ ಪ್ರದೇಶವನ್ನು ಬಿ.ಎಂ.ಐ.ಸಿ.ಎ.ಪಿ.ಎ. ಕಾರ್ಯವ್ಯಾಪ್ತಿಗೆ ಸೇರ್ಪಡೆ ಮಾಡಿರುವುದನ್ನು ಸಮಿತಿಯು ಖಂಡಿಸುತ್ತದೆ.

ಏಕೆಂದರೆ, ಈ ಪ್ರಾಧಿಕಾರವನ್ನು ಬಿ.ಎಂ.ಐ.ಸಿ. ಯೋಜನಾ ಪ್ರದೇಶದಲ್ಲಿ ಮಾನದಂಡಗಳನ್ನು ಪರಿವೀಕ್ಷಿಸಲು ಸೃಜಿಸಿದ್ದು, ಇದರ ಕಾರ್ಯವ್ಯಾಪ್ತಿ ಯೋಜನಾ ಪ್ರದೇಶಕ್ಕೆ ಸೀಮಿತವಾಗಿರಬೇಕಾಗುತ್ತದೆ. ವಾಸ್ತವಿಕವಾಗಿ ಈ ಯೋಜನೆಯ ಅನುಷ್ಠಾನಕ್ಕೆ ಕ್ರೋಢೀಕೃತವಾಗಿ 20,193 ಎಕರೆಗಳ ವಿಸ್ತೀರ್ಣದ ಜಮೀನಿನ ಅವಶ್ಯಕತೆಯನ್ನು [illegible] ಸಲಾಗಿದೆ. ಈ ವಿಸ್ತೀರ್ಣ ಮೂಲಭೂತ ಸೌಕರ್ಯ ಅಭಿವೃದ್ಧಿ ಯೋಜನೆಯಡಿಯಲ್ಲಿ ಸೃಜಿಸಲಾದ ಪೂರಕ ಸವಲತ್ತುಗಳು, ಮಾರ್ಗದ ಹಕ್ಕು ಈ ರೀತಿಯ ಎಲ್ಲಾ ಅಂಶಗಳನ್ನು ಒಳಗೊಂಡಿರುತ್ತದೆ. ಬಿ.ಎಂ.ಐ.ಸಿ.ಎ.ಪಿ.ಎ. ಘೋಷಿಸಿರುವ ಕ್ಷೇತ್ರ ವ್ಯಾಪ್ತಿಯನ್ನು ಗಮನಿಸಿದರೆ ಇದು ಯೋಜನಾ ಅನುಷ್ಠಾನಕ್ಕೆ ಬೇಕಾದ ವಿಸ್ತೀರ್ಣಕ್ಕೆ ಸುಮಾರು 8 ಪಟ್ಟು ಹೆಚ್ಚಾಗಿದೆ. ಇದರಿಂದಾಗಿ ಯೋಜನೆಗೆ ವಾಸ್ತವಿಕವಾಗಿ ಅವಶ್ಯಕವಿಲ್ಲದೇ ಇರುವ ಭೂಮಿಯೂ ಸಹ ಭಾರೀ ಪ್ರಮಾಣದಲ್ಲಿ ಪ್ರಾಧಿಕಾರದ ವ್ಯಾಪ್ತಿಗೆ ಒಳಪಡುತ್ತದೆ. 20,193 ಎಕರೆಗಳನ್ನು ಹೊರತುಪಡಿಸಿ ಸುಮಾರು 1,55,000 ಎಕರೆ ವ್ಯಾಪ್ತಿ ಪ್ರದೇಶದಲ್ಲಿ ಅಭಿವೃದ್ಧಿಗಳನ್ನು ನಿಯಂತ್ರಿಸುವ ಅನಾವಶ್ಯಕ ಅಧಿಕಾರವನ್ನು ಪ್ರಾಧಿಕಾರ ಪಡೆದಂತಾಗಿದೆ. ಇದರಿಂದಾಗಿ ಟೋಲ್ ರಸ್ತೆ ಹಾಗೂ ನಗರ ಸಮುಚ್ಛಯಗಳನ್ನು ಹೊರತುಪಡಿಸಿ ಇತರೆ ಪ್ರದೇಶಗಳಲ್ಲೂ ಸಹ ಭೂಮಾಲೀಕರು ಈ ಪ್ರಾಧಿಕಾರದ ಮುಖಾಂತರವೇ ಎಲ್ಲಾ ಕ್ರಮಗಳನ್ನು ಕೈಗೊಳ್ಳುವುದು ಅನಿವಾರ್ಯವಾಗುತ್ತದೆ. ಅಂದರೆ, ಬಿ.ಎಂ.ಐ.ಸಿ.ಎ.ಪಿ.ಎ. ಬೆಂಗಳೂರಿನಿಂದ ಮೈಸೂರಿನವರೆಗೂ ಕ್ಷೇತ್ರ ವ್ಯಾಪ್ತಿಯನ್ನು ಹೊಂದಿದ್ದು, ಇದರಿಂದಾಗಿ ಈ ಪ್ರದೇಶದ ನಿರ್ವಹಣೆ, ಕ್ಲಿಷ್ಟತೆ ಹಾಗೂ ಸಂದಿಗ್ಧತೆಗೆ ಒಳಗಾಗಿರುವುದು ಸ್ಪಷ್ಟವಾಗಿದೆ. ವೇಗದ

ಹೆದ್ದಾರಿಯ ಪಥದಲ್ಲಿ ವಿವಿಧ ನಗರ ಪಟ್ಟಣ ಪ್ರದೇಶಗಳಿದ್ದು, ಅಲ್ಲಿನ ಸ್ಥಳೀಯ ಪ್ರಾಧಿಕಾರಗಳಿಗೆ ಆ ಪ್ರದೇಶದ ನಿರ್ವಹಣೆಯನ್ನು ವಹಿಸುವುದು ಸೂಕ್ತವಾಗುತ್ತದೆ ಎಂದು ಅಭಿಪ್ರಾಯ ಪಡುತ್ತದೆ. ಪ್ರಸ್ತಾವಿತ ಪ್ರಾಧಿಕಾರಗಳೂ ಸಹ ಕೆ.ಟಿ.ಸಿ.ಪಿ. ಅಧಿನಿಯಮ 1961ರ ವ್ಯಾಪ್ತಿಯಡಿಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಈ ಹಿನ್ನೆಲೆಯಲ್ಲಿ ಬಿ.ಎಂ.ಐ.ಸಿ.ಎ.ಪಿ.ಎ. ಪ್ರಾಧಿಕಾರದ ವ್ಯಾಪ್ತಿಯನ್ನು ವೇಗದ ಹೆದ್ದಾರಿ, ನಗರ ಸಮುಚ್ಛಯ ಹಾಗೂ ಈ ವ್ಯಾಪ್ತಿಯಲ್ಲಿ ರಿಬ್ಬನ್ ಡೆವಲಪ್‌ಮೆಂಟ್ ನಿಯಂತ್ರಣಕ್ಕೆ ಸೀಮಿತಗೊಳಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

ಓ.ಡಿ.ಪಿ. ಪಂಕ್ತೀಕರಣವನ್ನು ಬಿ.ಎಂ.ಐ.ಸಿ.ಎ.ಪಿ.ಎ. ಕ್ಷೇತ್ರವ್ಯಾಪ್ತಿಯಲ್ಲಿ ಅಭಿವೃದ್ಧಿಯ ಒಂದು ಪ್ರಸ್ತಾವನೆ ಎಂದು ಪರಿಗಣಿಸಬೇಕಾಗುವುದು. ಕೆ.ಟಿ.ಸಿ.ಪಿ. ಅಧಿನಿಯಮ 1961 ರ 3 ನೇ ಅಧ್ಯಾಯದ ಅನುಗುಣವಾಗಿ ಬಿ.ಎಂ.ಐ.ಸಿ.ಎ.ಪಿ.ಎ. ಪ್ರಾಧಿಕಾರವು ಈ ಯೋಜನೆಯನ್ನು ಸೃಜಿಸಿ ನಮೂದಿಸಿದೆ ಎಂದು ಅರ್ಥೈಸಬಹುದಾಗಿದೆ. ಆದರೆ, ಓ.ಡಿ.ಪಿ. ಯನ್ನು ಸ್ವತಂತ್ರವಾಗಿ ಅನುಷ್ಠಾನಗೊಳಿಸಬಹುದಾದ ಪ್ರದೇಶದ ಯೋಜನೆ ಎಂದು ಪರಿಗಣಿಸಲಾಗುವುದಿಲ್ಲ. ಇದು ಕೇವಲ ಭೂಮಿಯ ಬಳಕೆಯ ಪ್ರಸ್ತಾವನೆಯ ಅನುಮೋದನೆಯಾಗಿರುತ್ತದೆ. ಈ ಹಿನ್ನೆಲೆಯಲ್ಲಿ ನಿರ್ದಿಷ್ಟವಾಗಿ ಓ.ಡಿ.ಪಿ. ಪಂಕ್ತೀಕರಣವನ್ನು ಯೋಜನಾ ವ್ಯಾಪ್ತಿ ಪ್ರದೇಶದಲ್ಲಿ ನಮೂದಿಸಿ, ಗಡಿಗಳನ್ನು ಗುರುತಿಸಿ, ದೃಢೀಕರಿಸುವುದು ಅವಶ್ಯಕವಾಗಿರುತ್ತದೆ. ಆದರೆ ಈ ಪ್ರಕ್ರಿಯೆಯನ್ನು ಕೇವಲ ಟೋಲ್ ರಸ್ತೆಗೆ ಅನ್ವಯಿಸುವಂತೆ ಕೈಗೊಳ್ಳಲಾಗಿದೆ. ಇತರ ಘಟಕಗಳಿಗೆ ಪಂಕ್ತೀಕರಣ ಅಥವಾ ಗಡಿ ಗುರುತಿಸುವಿಕೆಯನ್ನು ಮಾಡಿರುವುದಿಲ್ಲ. 12 ವರ್ಷಗಳು ಕಳೆದರೂ ಈ ಗುರುತರ ವೈಫಲ್ಯತೆಯ ಬಗ್ಗೆ ಬಿ.ಎಂ.ಐ.ಸಿ.ಎ.ಪಿ.ಎ. ಪರಿಹಾರ ಕ್ರಮ ಕೈಗೊಂಡಿರುವ ಬಗ್ಗೆ ಸಮಿತಿಗೆ ಮಾಹಿತಿ ಇರುವುದಿಲ್ಲ. ಈ ಸೂಕ್ಷ್ಮಕರ ಅಂಶಕ್ಕೆ ಅನ್ವಯಿಸುವಂತೆ ಯಥಾಸ್ಥಿತಿಯನ್ನು ನಿರ್ವಹಿಸುವುದು ಗುರುತರ ವೈಫಲ್ಯತೆಯಾಗಿರುತ್ತದೆ. ಆದುದರಿಂದ ಬಿ.ಎಂ.ಐ.ಸಿ.ಪಿ.ಎ. ಪ್ರಾಧಿಕಾರ ಈ ಕೂಡಲೇ ತನ್ನ ಕ್ಷೇತ್ರ ವ್ಯಾಪ್ತಿಯಲ್ಲಿ ಓ.ಡಿ.ಪಿ. ಪಂಕ್ತೀಕರಣ ಹಾಗೂ ಗಡಿಗಳ ಗುರುತಿಸುವಿಕೆಯನ್ನು ಜಾರಿಗೊಳಿಸಬೇಕೆಂದು ಸಮಿತಿಯು ಆಗ್ರಹಿಸುತ್ತದೆ.

ಓ.ಡಿ.ಪಿ. ಆಧಾರದ ಮೇಲೆ ಓ.ಡಿ.ಪಿ. ವರದಿಯ ಅಧ್ಯಾಯ-6ರಲ್ಲಿ ಖಾಸಗಿ ಪಾಲುದಾರರು ಯೋಜನಾ ಅನುಷ್ಠಾನದ ವಿವಿಧ ಸ್ತರಗಳಿಗೆ ಅವಶ್ಯಕವಿರುವ ಜಮೀನನ್ನು ಬದಲಿಕೆ ಮಾಡಿ ನಗರ ಸಮುಚ್ಛಯಗಳಲ್ಲಿ ಜಮೀನಿನ ಅವಶ್ಯಕತೆಯನ್ನು ಕಡಿಮೆಯಾಗಿ ತೋರಿಸಿ ಇದೇ ಪ್ರಮಾಣದ ಜಮೀನನ್ನು ಟೋಲ್ ರಸ್ತೆಯ ಘಟಕದಲ್ಲಿ ಹೆಚ್ಚಿಸಿರುವುದನ್ನು ಸಮಿತಿಯು ಗಮನಿಸಿದೆ. ಈ ಪ್ರತಿಪಾದನೆಗಳು ಕ್ರಿಯಾಒಪ್ಪಂದದ ಷೆಡ್ಯೂಲ್-1, ಸೋಮಶೇಖರರೆಡ್ಡಿ ಪ್ರಕರಣದ ತೀರ್ಪಿನ ಕಂಡಿಕೆ 51 ಹಾಗೂ ಸರ್ವೋಚ್ಛ ನ್ಯಾಯಾಲಯದ ನಿರ್ಧಾರಗಳ ಸ್ಪಷ್ಟ ಹಾಗೂ ನೇರ ಉಲ್ಲಂಘನೆಯಾಗಿರುತ್ತದೆ. ಇದಲ್ಲದೆ, 2014ರಲ್ಲಿ ಖಾಸಗಿ ಪಾಲುದಾರರು ಭೂಮಿ ಅವಶ್ಯಕತೆಯನ್ನು

ಪುನಃ ಪರಿಷ್ಕರಿಸಿ ಟೋಲ್ ರಸ್ತೆಗೆ 6,999 ಎಕರೆಗಳ ಬದಲಾಗಿ [illegible] ಎಕರೆಗಳನ್ನು ಕೋರಿರುವುದನ್ನು ಸಮಿತಿ ಗಮನಿಸಿದೆ. ಈ ಬದಲಾವಣೆಗಳನ್ನು ಘಟಕಾವಾರು ವಿಶ್ಲೇಷಿಸಿದಾಗ ಖಾಸಗಿ ಪಾಲುದಾರರು ಬೆಂಗಳೂರು ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚುವರಿಯಾಗಿ ಜಮೀನಿನ ಅವಶ್ಯಕತೆಯನ್ನು ಬಿಂಬಿಸಿರುವುದು ಸ್ಪಷ್ಟವಾಗಿದೆ. ಯೋಜನೆಯ ಸೆಕ್ಷನ್ 'ಎ' ಅನುಷ್ಠಾನಕ್ಕೆ ಕ್ರಿಯಾ ಒಪ್ಪಂದದ ಅನುಗುಣವಾಗಿ 3,367 ಎಕರೆಗಳ ಅವಶ್ಯಕತೆಯಿದ್ದು, ಇದರ ವಿರುದ್ಧ ನೈಸಲ್ ಸಂಸ್ಥೆ 4,515 ಎಕರೆಗಳಿಗೆ 2014ರಲ್ಲಿ ಕೋರಿಕೆ ಸಲ್ಲಿಸಿದೆ. ಇದೇ ಸ್ತರದಲ್ಲಿ ಸೆಕ್ಷನ್ 'ಬಿ' ಮತ್ತು 'ಸಿ' ಟೋಲ್ ರಸ್ತೆಗೆ 3,632 ಎಕರೆಗಳ ಅವಶ್ಯಕತೆಯನ್ನು (ಕ್ರಿಯಾ ಒಪ್ಪಂದದ ಅನುಗುಣವಾಗಿ) 2,484 ಎಕರೆಗಳಿಗೆ ಇಳಿಮುಖಗೊಳಿಸಿ ಕೋರಿಕೆ ಸಲ್ಲಿಸಲಾಗಿದೆ. ಅಂದರೆ, ಬೆಂಗಳೂರಿನ ಆಸು-ಪಾಸಿನ ಟೋಲ್ ರಸ್ತೆಯಲ್ಲಿ 1,148 ಎಕರೆಗಳ ಹೆಚ್ಚುವರಿ ಕೋರಿಕೆಯನ್ನು ಸಲ್ಲಿಸಿದ್ದು, ಇದೇ 1,148 ಎಕರೆಗಳನ್ನು ಟೋಲ್ ರಸ್ತೆಯ ಸೆಕ್ಷನ್ 'ಬಿ' ಮತ್ತು 'ಸಿ' ಭಾಗದಲ್ಲಿ ಕಡಿತಗೊಳಿಸಲಾಗಿದೆ. ಈ ಬೆಳವಣಿಗೆಗಳನ್ನು ಗಮನಿಸಿದಾಗ ಖಾಸಗಿ ಪಾಲುದಾರರು ಹೆಚ್ಚಿನ ಮೌಲ್ಯದ ಬೆಂಗಳೂರಿನ ಆಸು-ಪಾಸಿನ ಜಮೀನಿನ ಸ್ವಾಧೀನಕ್ಕೆ ಆದ್ಯತೆ ನೀಡಿರುವುದು ಸ್ಪಷ್ಟವಾಗುತ್ತದೆ. ಈ ಪ್ರತಿಪಾದನೆ ತ್ರಿಪಕ್ಷೀಯ ಒಪ್ಪಂದದ ಹಾಗೂ ಸರ್ವೋಚ್ಛ ನ್ಯಾಯಾಲಯದ ತೀರ್ಪಿನ ಸ್ಪಷ್ಟ ಹಾಗೂ ನೇರ ಉಲ್ಲಂಘನೆಯಾಗುತ್ತದೆ. ಈ ಬೆಳವಣಿಗೆಯನ್ನು ಖಾಸಗಿ ಪಾಲುದಾರರು ತ್ರಿಪಕ್ಷೀಯ ಒಪ್ಪಂದದ ಸೌಲಭ್ಯದ ಅಡಿಯಲ್ಲಿ ನಡೆಸಿರುವ 4,956 ಕೋಟಿ ರೂ.ಗಳ ಮೌಲ್ಯದ ವಹಿವಾಟುಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಿದಾಗ ಮೂಲಭೂತ ಸೌಕರ್ಯದ ಅಭಿವೃದ್ಧಿಗಿಂತ ಜಮೀನಿನ ಪರಭಾರೆ, ಮಾರಾಟ ಹಾಗೂ ಜಂಟಿ ಅಭಿವೃದ್ಧಿ ಒಪ್ಪಂದಗಳಿಗೆ ಈ ಯೋಜನೆಯಲ್ಲಿ ಆದ್ಯತೆ ನೀಡುತ್ತಿರುವುದು ಸ್ಪಷ್ಟವಾಗಿದೆ. ಈ ಎಲ್ಲಾ ಕೋರಿಕೆಗಳಲ್ಲೂ ಯೋಜನೆಗೆ ಸಮಗ್ರವಾಗಿ ಅವಶ್ಯಕತೆ ಇರುವ 20,193 ಎಕರೆಗಳ ವಿಸ್ತೀರ್ಣದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಆದರೆ, ಘಟಕಾವಾರು ಅನುಷ್ಠಾನದ ಅವಶ್ಯಕತೆಯನ್ನು ಕ್ರಿಯಾ ಒಪ್ಪಂದಕ್ಕೆ ವ್ಯತಿರಿಕ್ತವಾಗಿ ಪರಿಷ್ಕರಿಸಲಾಗಿರುತ್ತದೆ. ಈ ಎಲ್ಲಾ ಪ್ರಕರಣಗಳಲ್ಲಿ ಖಾಸಗಿ ಪಾಲುಗಾರರು ಸೋಮಶೇಖರರೆಡ್ಡಿ ಪ್ರಕರಣದ ಕಂಡಿಕೆ 51ರ ಪ್ರತಿಪಾದನೆಗಳನ್ನು ಉಲ್ಲಂಘಿಸಿರುವುದು ಸ್ಪಷ್ಟವಾಗಿದೆ. ರಾಜ್ಯ ಸರ್ಕಾರವು ನಿಯತಕಾಲಿಕವಾಗಿ ಖಾಸಗಿ ಪಾಲುಗಾರರು ಜಾರಿಗೊಳಿಸುತ್ತಿರುವ ತಿದ್ದುಪಡಿ, ಪರಿಷ್ಕರಣೆ ಹಾಗೂ ಸೇರ್ಪಡೆಗಳ ಹಿನ್ನೆಲೆಯಲ್ಲಿ ಸಮಯೋಚಿತವಾಗಿ ಕಾನೂನು ರೀತಿಯ ಕ್ರಮ ಕೈಗೊಳ್ಳುವಲ್ಲಿ ವಿಫಲವಾಗಿರುವುದು ಸ್ಪಷ್ಟವಾಗಿರುತ್ತದೆ. ಹಲವಾರು ಪ್ರಕರಣಗಳಲ್ಲಿ ಮನವಿಗಳಿಗೆ ಸೀಮಿತವಾದಂತೆ ವ್ಯತಿರಿಕ್ತ ಆದೇಶಗಳನ್ನು ಅಥವಾ ನಿರ್ದೇಶನಗಳನ್ನು ಪಾಲಿಸುವ ಅನಿವಾರ್ಯ ಪರಿಸ್ಥಿತಿ ಉಂಟಾಗಿದೆ. ಉದಾಹರಣೆಗೆ ಓ.ಡಿ.ಪಿ. ಪಂಕ್ತೀಕರಣದ ಅನುಷ್ಠಾನ ಕ್ರಮ ಬದ್ಧ ಎಂದು ನ್ಯಾಯಾಲಯ ತೀರ್ಮಾನಿಸಿರುವುದನ್ನು ಸಮಿತಿಯು ಗಮನಿಸಿದೆ. ಜೊತೆ, ಇದೇ ಸ್ವರೂಪದ ಹಲವಾರು ತೀರ್ಪುಗಳಿಗೆ ಅನ್ವಯಿಸುವಂತೆ ಮರುಪರಿಶೀಲನಾ ಅರ್ಜಿಗಳನ್ನು ಕ್ರಿಯಾ ಒಪ್ಪಂದದ ಪಾಲನೆ ಹಿತಾಸಕ್ತಿಯಿಂದ ರಾಜ್ಯ ಸರ್ಕಾರವು ದಾಖಲಿಸಿರುವ ಬಗ್ಗೆ ಸಮಿತಿಗೆ ಮಾಹಿತಿ

ಲಭ್ಯವಿರುವುದಿಲ್ಲ. ನ್ಯಾಯಾಲಯದ ತೀರ್ಪುಗಳ ಹಿನ್ನಲೆಯಲ್ಲಿ ಯೋಜನೆಯ ಸಮಯೋಚಿತ ಅನುಷ್ಠಾನ ಕಷ್ಟಸಾಧ್ಯವಾಗಿದೆ. ಕ್ರಿಯಾ ಒಪ್ಪಂದದ ತಾತ್ವಿಕ ಹಾಗೂ ಅಕ್ಷರಶಃ ಅನುಷ್ಠಾನವೂ ಸಹ ವಿವಾದಾತ್ಮಕವಾಗಿರುವುದನ್ನೂ ಸಹ ಸಮಿತಿಯು ಗಮನಿಸಿದೆ. ಸರ್ವೋಚ್ಚ ನ್ಯಾಯಾಲಯದಲ್ಲಿ ಎರಡು ನ್ಯಾಯಾಂಗ ನಿಂದನೆ ಪ್ರಕರಣಗಳು ಇತ್ಯರ್ಥವಾಗಬೇಕಾಗಿದೆ. ಈ ಎಲ್ಲಾ ಬೆಳವಣಿಗೆಗಳ ಹಿನ್ನಲೆಯಲ್ಲಿ ಸರ್ಕಾರವು ಕ್ರಿಯಾ ಒಪ್ಪಂದ, ಸೋಮಶೇಖರರೆಡ್ಡಿ ಪ್ರಕರಣದ ತೀರ್ಪು ಹಾಗೂ ಕ್ರಿಯಾ ಒಪ್ಪಂದದ ಪಾಲನೆಗೆ ಅನ್ವಯಿಸುವಂತೆ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನಗಳ ಅನುಗುಣವಾಗಿ ಮರುಪರಿಶೀಲನಾ ಅರ್ಜಿಗಳನ್ನು ಸಲ್ಲಿಸಲು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

10. ಖಾಸಗಿ ಪಾಲುಗಾರರು ಈವರೆವಿಗೂ ರೆವಿನ್ಯೂ ನಕ್ಷೆಗಳ ಮೇಲೆ ಅಳವಡಿಸಲಾದ ಪಂಕ್ತೀಕರಣದ ನಕ್ಷೆಗಳನ್ನು ಲೋಕೋಪಯೋಗಿ ಇಲಾಖೆಗೆ ಸಲ್ಲಿಸಿರುವುದಿಲ್ಲ. ಇದರಿಂದಾಗಿ ಗಡಿಗಳ ಗುರುತಿಸುವಿಕೆ, ಸೇವಾ ಪ್ರದೇಶ, ನಿರ್ವಹಣಾ ಪ್ರದೇಶ, ಇಂಟರ್ ಛೇಂಜ್‌ಗಳು, ಟೋಲ್ ರಸ್ತೆ ಹಾಗೂ ನಗರ ಸಮುಚ್ಛಯಗಳ ವ್ಯಾಪ್ತಿಯನ್ನು ಯೋಜನೆ ಪ್ರಾರಂಭವಾದ 19 ವರ್ಷಗಳ ನಂತರವೂ ಇತ್ಯರ್ಥ ಪಡಿಸಿರುವುದಿಲ್ಲ. ಇದರಿಂದಾಗಿ ವೈಜ್ಞಾನಿಕವಾಗಿ ಹಾಗೂ ಕ್ರಿಯಾ ಒಪ್ಪಂದದ ಅನುಗುಣವಾಗಿ ಭೂಸ್ವಾಧೀನವನ್ನು ನಿಯಂತ್ರಿಸಲು ಆಗಿರುವುದಿಲ್ಲ. 2002ರಲ್ಲಿ ನೀಡಲಾದ ಥೀಮ್ ಅಪ್ರೂವಲ್ ಕೇವಲ ಸಾಂಕೇತಿಕವಾಗಿದ್ದು, ಇದರ ಆಧಾರದ ಮೇಲೆ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವುದು ಖಂಡನೀಯವಾಗಿದೆ. ಇದರಿಂದಾಗಿ ಕ್ರಿಯಾ ಒಪ್ಪಂದದ ನಿರೂಪಣೆಗಳನ್ನು ಅನುಷ್ಠಾನಗೊಳಿಸುವುದು ಕಷ್ಟಸಾಧ್ಯವಾಗಿದೆ. ಈ ಪರಿಸ್ಥಿತಿಯ ಹಿನ್ನಲೆಯಲ್ಲಿ ಖಾಸಗಿ ಪಾಲುಗಾರರು ವಿವಿಧ ಸಂದರ್ಭಗಳಲ್ಲಿ ಭೂಮಿಯ ಅವಶ್ಯಕತೆಯ ಬಗ್ಗೆ ವಿಭಿನ್ನ ಕೋರಿಕೆಗಳನ್ನು ಸಲ್ಲಿಸಿರುವುದನ್ನು ಸಮಿತಿಯು ಗಮನಿಸಿದೆ. ಆದುದರಿಂದ ಪ್ರಸ್ತಾವಿತ ಪಂಕ್ತೀಕರಣ ನಕಾಶೆಗಳನ್ನು ಸಲ್ಲಿಸುವವರೆಗೂ ಭೂಸ್ವಾಧೀನ ಪ್ರಕ್ರಿಯೆಯನ್ನು ಸರ್ಕಾರವು ಸ್ಥಗಿತಗೊಳಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

11. ಖಾಸಗಿ ಪಾಲುಗಾರರು ಯೋಜನಾ ಅನುಷ್ಠಾನಕ್ಕೆ ಅವಶ್ಯಕವಿರುವ ಘಟಕವಾರು ಜಮೀನಿನ ವಿಸ್ತೀರ್ಣವನ್ನು ಅಥವಾ ಬಳಕೆಯನ್ನು ನೀಡಿರುವುದಿಲ್ಲ. ಈ ಸ್ವರೂಪದ ಮಾಹಿತಿಯನ್ನು ನೀಡಲು ಬದ್ಧರಾಗಿರುವುದಿಲ್ಲವೆಂಬ ಅಭಿಪ್ರಾಯವನ್ನು ಸರ್ವೋಚ್ಚ ನ್ಯಾಯಾಲಯದ ಮುಂದೆ ವ್ಯಕ್ತಪಡಿಸಿರುತ್ತಾರೆ. ಆದರೆ, ಕ್ರಿಯಾ ಒಪ್ಪಂದದ ಅನುಗುಣವಾಗಿ ಅದರಲ್ಲೂ ನಿರ್ದಿಷ್ಟವಾಗಿ ಶೆಡ್ಯೂಲ್-1 ಮತ್ತು ಸೋಮಶೇಖರರೆಡ್ಡಿ ಪ್ರಕರಣದ ತೀರ್ಪಿನ ಕಂಡಿಕೆ-51ರಲ್ಲಿ ಘಟಕವಾರು ಅವಶ್ಯಕತೆಯನ್ನು ನಮೂದಿಸಲಾಗಿದೆ. ಇದಲ್ಲದೇ, Transferrable Toll Road Assets, Tranferrable Township Assets ವ್ಯಾಪ್ತಿಯಲ್ಲಿ ಬರುವ ಜಮೀನನ್ನು

ಕ್ರಿಯಾ ಒಪ್ಪಂದದ ಅನುಗುಣವಾಗಿ ಸರ್ಕಾರಕ್ಕೆ ಹಿಂದಿರುಗಿಸಬೇಕಾಗುವುದು. ಈ ಸ್ವರೂಪದ ಜಮೀನಿಗೆ ಅನ್ವಯಿಸುವಂತೆ ಹಸ್ತಾಂತರದಲ್ಲಿ ವಿವಿಧ ಮಾನದಂಡಗಳನ್ನು ಅಳವಡಿಸಲಾಗಿದೆ. ಅಂದರೆ ಹಸ್ತಾಂತರವಾಗಬೇಕಾದ ಖಾಸಗಿ ಜಮೀನಿಗೆ ಅನ್ವಯಿಸುವಂತೆ **Lease cum Sale** ವಿಧಾನ ಹಾಗೂ ಹಸ್ತಾಂತರವಾಗಬೇಕಾದ ಸರ್ಕಾರಿ ಜಮೀನಿಗೆ ಅನ್ವಯಿಸುವಂತೆ 40 ವರ್ಷಗಳ ಅವಧಿಯನ್ನು ನಿಗದಿಪಡಿಸಲಾಗಿದೆ. ವಾಸ್ತವಿಕವಾಗಿ ಹಾಗೂ ನಿರ್ದಿಷ್ಟವಾಗಿ ಈ ಜಮೀನುಗಳನ್ನು ಯಾವುದೇ ಸಮರ್ಪಕ ಶೀರ್ಷಿಕೆಯಡಿಯಲ್ಲಿ ಹಸ್ತಾಂತರ ಪ್ರಕ್ರಿಯೆಯನ್ನು ಜಾರಿಗೊಳಿಸಲು ಘಟಕವಾರು ಜಮೀನಿನ ಬಳಕೆಯ ವಿವರ ಹಾಗೂ ಕ್ಲಡಸ್ಟಲ್ ಮ್ಯಾಪ್‌ಗಳನ್ನು ಸಲ್ಲಿಸುವುದು ಅತ್ಯವಶ್ಯಕವಾಗಿರುತ್ತವೆ. ಈ ಹಿನ್ನಲೆಯಲ್ಲಿ ಖಾಸಗಿ ಪಾಲುಗಾರರ ದೋರಣೆ ಕ್ರಿಯಾ ಒಪ್ಪಂದದ ಸ್ಪಷ್ಟ ಹಾಗೂ ನೇರ ಉಲ್ಲಂಘನೆ ಎಂದು ಸಮಿತಿಯು ತೀರ್ಮಾನಿಸಿರುತ್ತದೆ. ಘಟನೋತ್ತರವಾಗಿ ನಿರ್ಧರಿಸುವುದಾದರೆ ಖಾಸಗಿ ಪಾಲುಗಾರರು ನಡೆಸಿರುವ ವಹಿವಾಟುಗಳು ಹಾಗೂ ಸರ್ಕಾರದ ಅನುಗುಣವಾಗಿ ಈಗಾಗಲೇ ಫೆರಿಫೆರಲ್ ಮತ್ತು ಲಿಂಕ್ ರಸ್ತೆಗಳಿಗೆ ಅನ್ವಯಿಸುವಂತೆ ನೀಡಿರುವ ಹೆಚ್ಚುವರಿ ಜಮೀನು ಈ ಎರಡು ಅಂಶಗಳು ಖಾಸಗಿ ಪಾಲುಗಾರರ ಈ ದೋರಣೆಗೆ ಕಾರಣವಾಗಿದೆ ಎಂದು ಸಮಿತಿಯು ತೀರ್ಮಾನಿಸುತ್ತದೆ. ಸೆಕ್ಷನ್ 'ಎ' ವ್ಯಾಪ್ತಿಯಲ್ಲಿ ಪೆರಿಫೆರಲ್ ರಸ್ತೆ, ಲಿಂಕ್ ರಸ್ತೆ, [illegible] ವೇಗದ ಹೆದ್ದಾರಿಗೆ ಕ್ರಿಯಾ ಒಪ್ಪಂದದ ಅನುಗುಣವಾಗಿ ಅವಶ್ಯಕವಿರುವ ಜಮೀನಿಗಿಂತ ಹೆಚ್ಚುವರಿಯಾಗಿ ನೀಡಿರುವ ಜಮೀನಿನ ಬಗ್ಗೆ ಈ ವರದಿಯಲ್ಲಿ ಪ್ರತಿಪಾದಿಸಲಾಗಿದೆ. ಈ ಹೆಚ್ಚುವರಿ ಜಮೀನಿನ ಅವಶ್ಯಕತೆ ಮತ್ತು ಬಳಕೆಯನ್ನು ಸಮರ್ಥನೆ ಮಾಡಿಕೊಳ್ಳುವುದು ಖಾಸಗಿ ಪಾಲುದಾರರಿಗೆ ಕಷ್ಟಸಾಧ್ಯವಾಗಿರುವುದರಿಂದ ಘಟಕವಾರು ಜಮೀನಿನ ಬಳಕೆಯ ವಿವರಗಳನ್ನು ಸಲ್ಲಿಸಲು ನಿರಾಕರಿಸುತ್ತಿರುವುದು ಸ್ಪಷ್ಟವಾಗಿದೆ. ಕ್ರಿಯಾ ಒಪ್ಪಂದವನ್ನು ತಾತ್ವಿಕವಾಗಿ ಹಾಗೂ ಅಕ್ಷರಶಃ ಪಾಲಿಸುವ ಹಿತದೃಷ್ಟಿಯಿಂದ ಸರ್ಕಾರವು ವಾಸ್ತವಿಕ ಬಳಕೆಯನ್ನು ಜಂಟಿ ಸರ್ವೇಕ್ಷಣೆಯ ಮುಖಾಂತರ ಇತ್ಯರ್ಥಗೊಳಿಸಿ ಕ್ರಿಯಾ ಒಪ್ಪಂದ ಹಾಗೂ ಯೋಜನಾ ತಾಂತ್ರಿಕ ವರದಿಯಲ್ಲಿ ಪ್ರತಿಪಾದಿಸಿರುವ ಕಾಮಗಾರಿಗಳು ಹಾಗೂ ಪೂರಕ ಸೌಲಭ್ಯಗಳಿಗೆ ಅವಶ್ಯಕವಿರುವ ಜಮೀನಿನ ವಿಸ್ತೀರ್ಣ ಹಾಗೂ ಹೆಚ್ಚುವರಿಯಾಗಿ ಖಾಸಗಿ ಪಾಲುಗಾರರ ಸುಪರ್ದಿಯಲ್ಲಿರುವ ಜಮೀನಿನ ವಿಸ್ತೀರ್ಣವನ್ನು ಸೆಕ್ಷನ್ 'ಎ' ವ್ಯಾಪ್ತಿಯಲ್ಲಿ ಕೂಡಲೇ ಇತ್ಯರ್ಥಗೊಳಿಸಲು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

12. ಕ್ರಿಯಾ ಒಪ್ಪಂದದ ಅನುಚ್ಛೇಧ 1 ರಡಿಯಲ್ಲಿ ಆಗಿರುವ ಪ್ರಮುಖ ವೈಫಲ್ಯತೆಗಳು ಈ ಕೆಳಕಂಡಂತಿದೆ: (ಕ್ರಮ ಸಂಖ್ಯೆ 1 ರಿಂದ 2)

   1. ಸೋಮಶೇಖರರೆಡ್ಡಿ ಅವರ ಪ್ರಕರಣದ ತೀರ್ಪು ಹಾಗೂ ಸಂಬಂಧಿತ ಮೇಲ್ಮನವಿಗಳ ತೀರ್ಪಿನ ಅನುಗುಣವಾಗಿ ಕ್ರಿಯಾಒಪ್ಪಂದವನ್ನು ಯತಾವತ್ತಾಗಿ ಪಾಲಿಸಬೇಕಾಗುವುದು. ಅದಾಗ್ಯೂ 03.10.1999ರ ಪೂರಕ ಒಪ್ಪಂದದ ಮುಖಾಂತರ ಯೋಜನಾ ಅನುಷ್ಠಾನದ

ಸ್ತರಗಳನ್ನು ಸೆಕ್ಷನ್ 'ಎ' ಸೆಕ್ಷನ್ 'ಬಿ' ಮತ್ತು ಸೆಕ್ಷನ್ 'ಸಿ' ಆಗಿ ಮರುವಿಂಗಡಿಸಲಾಗಿದೆ. ಇದರಿಂದಾಗಿ ಪ್ರಸ್ತಾವಿತ ಯೋಜನೆಯನ್ನು (Intigrated infrastructure corridor project) ಎಂದು ಖಾಸಗಿ ಪಾಲುದಾರರು ವರ್ಗೀಕರಿಸಿರುವುದು ಅಸಮರ್ಪಕ ಎಂದು ಸಮಿತಿಯು ತೀರ್ಮಾನಿಸುತ್ತದೆ. ಏಕೆಂದರೆ ಯೋಜನೆಯ ಸ್ಟೇಜ್-1 ಕಾಮಗಾರಿಗಳನ್ನು ನೀಸಲ್‌ಗೆ ಹಸ್ತಾಂತರಿಸುವಾಗ, ಸ್ಟೇಜ್-1 ಕಾಮಗಾರಿಗಳನ್ನು ಯೋಜನಾ ಅನುಷ್ಠಾನದ ಬೇರೆ ಸ್ಟೇಜ್‌ಗಳಿಂದ ಪ್ರತ್ಯೇಕಿಸಲಾಗಿದೆ.

b. ಕ್ರಿಯಾ ಒಪ್ಪಂದ ಅನುಚ್ಛೇದ 1 ರಡಿಯಲ್ಲಿ ಸೆಕ್ಷನ್ 'ಎ' ವ್ಯಾಪ್ತಿಯಲ್ಲಿ ಜಮೀನಿನ ಅಭಿವೃದ್ಧಿ ಹಾಗೂ ಮಾರಾಟದ ಬಗ್ಗೆ ಪ್ರತಿಪಾದನೆ ಇರುವುದಿಲ್ಲ. ಆದುದರಿಂದ 09.08.2002ರ ತ್ರಿಪಕ್ಷೀಯ ಒಪ್ಪಂದ, ಕ್ರಿಯಾ ಒಪ್ಪಂದದ ಸ್ಪಷ್ಟ ಹಾಗೂ ನೇರ ಉಲ್ಲಂಘನೆಯಾಗಿರುತ್ತದೆ.

c. ಅನುಚ್ಛೇಧ 1ರಡಿಯಲ್ಲಿ ಕೆಲವು ವ್ಯಾಖ್ಯಾನಗಳು ಸ್ವಯಂವ್ಯತಿರಿಕ್ತವಾಗಿದೆ.

ಉದಾ:- **The words include, including and among other things shall be deemed to be followed by "without limitation" or "but not limited to" whether or not they are followed by such phrases or words of like import.**

ಕ್ರಿಯಾ ಒಪ್ಪಂದದ (e) ಉಪ ಅನುಚ್ಛೇಧವು ಸ್ವಯಂ ವ್ಯತಿರಿಕ್ತವಾಗಿದೆ ಎಂದು ಸಮಿತಿ ತೀರ್ಮಾನಿಸುತ್ತದೆ. ಸಾಮಾನ್ಯವಾಗಿ include ಅಥವಾ including ಎಂಬ ಪದ ಬಳಕೆಯಾದ ತಕ್ಷಣವೇ ಯಾವ ಯಾವ ಅಂಶಗಳು ಸೇರ್ಪಡೆಯಾಗಿದೆ ಎಂದು ಉಲ್ಲೇಖಿಸಬೇಕಾಗುತ್ತದೆ. ಆದರೆ, ಈ ಪದಗಳ ಅರ್ಥವನ್ನು ವಿಸ್ತರಿಸಿ ಯಾವುದೇ ಇತಿಮಿತಿಗಳಿಲ್ಲದೆ ಅಥವಾ include ಕ್ವಾಲಿಫೈ ಮಾಡುವ ಅಂಶಗಳಿಗೂ ಸಹ ಸೀಮಿತವಾಗಿರದೆ, ಅಂದರೆ "but not limited to" ಎಂದು ವ್ಯಾಖ್ಯಾನಿಸಲಾಗಿದೆ. ಇದರಿಂದಾಗಿ include ಎಂಬ ಪದವು ಅರ್ಥಹೀನವಾಗುತ್ತದೆ. ರೀತಿಯ Interpretation ಗಳಿಂದಾಗಿ ಖಾಸಗಿ ಪಾಲುದಾರರು ಕ್ರಿಯಾ ಒಪ್ಪಂದದ ಯಾವುದೇ ಭಾಗದಲ್ಲಿ ಈ ಪದ ಬಳಕೆಯಾದಾಗ ಇದು ಸಾರ್ವತ್ರಿಕವಾಗಿ ಅಳವಡಿಕೆಯಾಗುತ್ತದೆ ಎಂದು ಅರ್ಥೈಸಿ ಹಕ್ಕುಗಳನ್ನು ಚಾಲಿಗೊಳಿಸಬಹುದಾಗಿದೆ. ಆದುದರಿಂದ ಕ್ರಿಯಾ ಒಪ್ಪಂದದಲ್ಲಿ ಈ ರೀತಿ ಸಾರ್ವತ್ರಿಕವಾಗಿ ಅಥವಾ ಇತಿಮಿತಿಯಿಲ್ಲದೇ ಸೌಲಭ್ಯಗಳನ್ನು ವಿಸ್ತರಿಸುವ ಪದಗಳನ್ನು ನಿರ್ಬಂಧಿಸಲು (ಉದಾಹರಣೆಗೆ ಇತ್ಯಾದಿ) ಸರ್ಕಾರವು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. "but not limited

10" ಎಂಬ ಪದವನ್ನು ರದ್ದುಗೊಳಿಸಲು ಸರ್ಕಾರವು ಕ್ರಮ ಕೈಗೊಳ್ಳಬೇಕೆಂದು ಸಮಿತಿ ಆಗ್ರಹಿಸುತ್ತದೆ.

ಅನುಚ್ಛೇದ 1ರ 4ನೇ ಷರತ್ತನ್ನು ಸಮಿತಿಯು ಅವಲೋಕಿಸಿದೆ. ವಿವರಗಳು ಕೆಳಕಂಡಂತಿದೆ:

**(4th whereas clause)**

**Whereas, in the light of ever increasing urbanization problems and in an effort to achieve the orderly development of Bangalore as a major industrial, commercial and residential city, GOK has proposed to promote an integrated infrastructure corridor situated between Bangalore and Mysore, Karnataka, consisting of residential, industrial and commercial facilities including power plants, industrial plants, water treatement plants and other infrastructural developments, as more specifically described in the Infrastructure Corridor Project Technical Report, dated August 1995, as amended (collectively, the infrastructure Corridor)**

ಈ ಷರತ್ತನ್ನು ವಿಶ್ಲೇಷಿಸಿ ವ್ಯಾಖ್ಯಾನಿಸುವುದು ಅತ್ಯವಶ್ಯಕವೆಂದು ಸಮಿತಿ ತೀರ್ಮಾನಿಸುತ್ತದೆ. ಏಕೆಂದರೆ, ಈ ವರದಿಯ ಒಂದು ಭಾಗದಲ್ಲಿ ಟೋಲ್ ರಸ್ತೆ ನಿರ್ಮಾಣದಲ್ಲಿ ಅದರಲ್ಲೂ ನಿರ್ದಿಷ್ಟವಾಗಿ ಪೆರಿಫೆರಲ್ ರಸ್ತೆ ಮತ್ತು ಲಿಂಕ್ ರಸ್ತೆ ನಿರ್ಮಾಣದಲ್ಲಿ ಕಾಂಕ್ರೀಟ್ ಪಥದ ಬದಲಾಗಿ ಡಾಂಬರು ರಸ್ತೆಯನ್ನು ನಿರ್ಮಾಣ ಮಾಡಲಾಗಿದೆ ಎಂದು ಪ್ರತಿಪಾದಿಸಲಾಗಿದೆ. ಕಾಂಕ್ರೀಟ್ ರಸ್ತೆ ನಿರ್ಮಾಣಕ್ಕೆ ಸಂಬಂಧಿಸಿದಂತೆ ತಾಂತ್ರಿಕ ವರದಿಯ ಕಂಡಿಕೆ 6.4.1.1ರಲ್ಲಿ ಉಲ್ಲೇಖಿಸಿರುವ ವಿನ್ಯಾಸವನ್ನು ಪಾಲಿಸುವುದು ನೈಸಲ್/ನೀಸಲ್ ಸಂಸ್ಥೆಯ ಅಧಿಕೃತ ಕರ್ತವ್ಯವಾಗಿರುತ್ತದೆ. ಎಂದು ಪ್ರಸ್ತಾಪಿಸಲಾಗಿರುತ್ತದೆ. ಈ ವಿಶ್ಲೇಷಣೆಯು ತಾಂತ್ರಿಕ ವರದಿಯ ಮಾನದಂಡಗಳ ಆಧಾರದ ಮೇಲೆ ಅವಲಂಬಿತವಾಗಿರುವುದರಿಂದ ತಾಂತ್ರಿಕ ವರದಿ ಕ್ರಿಯಾ ಒಪ್ಪಂದದ ಒಂದು ಅವಿಭಾಜ್ಯ ಅಂಗವೇ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಪ್ರಸ್ತಾವಿತ ಷರತ್ತನ್ನು ಉಲ್ಲೇಖಿಸಿದಾಗ ಬಿ.ಎಂ.ಐ.ಸಿ. ಯೋಜನಾ ವ್ಯಾಪ್ತಿಯ ಸಮಗ್ರ ಮೂಲಭೂತ ಸೌಕರ್ಯಗಳು ಸಮರ್ಪಕವಾಗಿ ಅಭಿವೃದ್ಧಿಯಾಗಬೇಕಾದರೆ ಅಥವಾ ಕೈಗಾರಿಕೆ ಹಾಗೂ ವಾಣಿಜ್ಯ ಬಳಕೆಗೆ ಸದುಪಯೋಗವಾಗಲು ಆದ್ದರಿಂದ ತಾಂತ್ರಿಕ ವರದಿಯಲ್ಲಿ ಪ್ರತಿಪಾದಿಸಿರುವ ಮಾನದಂಡಗಳನ್ನು ಪಾಲಿಸುವುದು ಅತ್ಯಾವಶ್ಯಕ ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ ಈ ಷರತ್ತನ್ನು ಕ್ರಿಯಾ ಒಪ್ಪಂದದ 7ನೇ ಷರತ್ತಿನ ಉಲ್ಲೇಖದೊಂದಿಗೆ ಪರಿಶೀಲಿಸುವುದು ಅವಶ್ಯಕವಾಗುತ್ತದೆ. 7 ನೇ ಷರತ್ತಿನಡಿಯಲ್ಲಿ ರಾಜ್ಯ ಸರ್ಕಾರವು ಆದೇಶ ಸಂಖ್ಯೆ:

ಪಿ.ಡಬ್ಲ್ಯು.ಡಿ. 32/ಸಿ.ಎಸ್.ಆರ್/95 ದಿನಾಂಕ: 20.11.1995 ಮುಖಾಂತರ ಖಾಸಗಿ ಪಾಲುದಾರರಿಗೆ ಬಿ.ಎಂ.ಐ.ಸಿ. ಕಾರಿಡಾರ್ ಯೋಜನೆಯನ್ನು ನಿರೂಪಿತ ಸಮೂಹವು ಯೋಜನಾ ತಾಂತ್ರಿಕ ವರದಿಯ ಅನುಗುಣವಾಗಿ ಜಾರಿಗೊಳಿಸುವಂತೆ ನಿರ್ದೇಶಿಸಿದೆ. ಈ ಎರಡೂ ಅಂಶಗಳನ್ನು ಪರಿಗಣಿಸಿದಾಗ ಯೋಜನಾ ತಾಂತ್ರಿಕ ವರದಿಯು ಕ್ರಿಯಾ ಒಪ್ಪಂದದ ಅನುಗುಣವಾಗಿ ಹಾಗೂ ಸರ್ಕಾರದ ಉಲ್ಲೇಖಿತ ಆದೇಶದ ಅನುಗುಣವಾಗಿ ಕ್ರಿಯಾ ಒಪ್ಪಂದದ ಒಂದು ಅವಿಭಾಜ್ಯ ಅಂಗವಾಗಿದೆ ಎಂದು ಸಮಿತಿ ತೀರ್ಮಾನಿಸುತ್ತದೆ. ಈ ಹಿನ್ನೆಲೆಯಲ್ಲಿ 03.04.1997ರ ಕ್ರಿಯಾ ಒಪ್ಪಂದವನ್ನು ಆಗಸ್ಟ್ 1995ರಲ್ಲಿ ಸಲ್ಲಿಸಲಾದ ಯೋಜನಾ ತಾಂತ್ರಿಕ ವರದಿಯೊಂದಿಗೆ ಓದಿಕೊಂಡು ಅನುಷ್ಠಾನ ಮಾಡುವುದು ಖಾಸಗಿ ಪಾಲುದಾರರ ಕರ್ತವ್ಯ ಎಂದು ಸಮಿತಿ ತೀರ್ಮಾನಿಸುತ್ತದೆ. ಇದಕ್ಕೆ ಪೂರಕವಾಗಿ ಯೋಜನಾ ತಾಂತ್ರಿಕ ವರದಿಯು ಕ್ರಿಯಾ ಒಪ್ಪಂದದ ಒಂದು ಅವಿಭಾಜ್ಯ ಅಂಗವೆಂದು ಸಮಿತಿ ತೀರ್ಮಾನಿಸುತ್ತದೆ. ಈ ಹಿನ್ನೆಲೆಯಲ್ಲಿ ಈ ವರದಿಯಲ್ಲಿ ಯೋಜನಾ ತಾಂತ್ರಿಕ ವರದಿಗೆ ಕ್ರಿಯಾ ಒಪ್ಪಂದಕ್ಕೆ ಸಮಾನವಾದ ಆದ್ಯತೆ ಹಾಗೂ ಪರಿಗಣನೆ ನೀಡಲಾಗಿದೆ. ಆದರೆ ಈಗಾಗಲೇ ಅನುಷ್ಠಾನಗೊಳಿಸಲಾಗಿರುವ ಪೆರಿಫೆರಲ್ ರಸ್ತೆ ಮತ್ತು ಲಿಂಕ್ ರಸ್ತೆ ಯೋಜನಾ ತಾಂತ್ರಿಕ ವರದಿಯ ಮಾನದಂಡಗಳ ಅನುಗುಣವಾಗಿ ಇರುವುದಿಲ್ಲ. 4 ಪಥದ ಕಾಂಕ್ರೀಟ್ ರಸ್ತೆಯ ಬದಲಾಗಿ 2 ಪಥದ ಡಾಂಬರೀಕೃತ ರಸ್ತೆಯನ್ನು ನಿರ್ಮಾಣ ಮಾಡಿ ಟೋಲ್ ಸಂಗ್ರಹಣೆಯನ್ನು ಮಾಡಲಾಗುತ್ತಿದೆ. ಸರ್ಕಾರವು ಸಚಿವ ಸಂಪುಟದ ಅನುಮೋದನೆಯೊಂದಿಗೆ 2 ಪಥದ ಡಾಂಬರೀಕೃತ ರಸ್ತೆಯನ್ನು 2 ಪಥದಲ್ಲಿ ಅನುಷ್ಠಾನಗೊಳಿಸಿ 2012 ರೊಳಗಾಗಿ ಈ ರಸ್ತೆಯನ್ನು 4 ಪಥದ ರಸ್ತೆಯನ್ನಾಗಿ ಪರಿವರ್ತಿಸಲು ಸಹಮತಿ ಸೂಚಿಸಿದ್ದು, ಈ ಸೌಲಭ್ಯವನ್ನು ಖಾಸಗಿ ಪಾಲುದಾರರು ದುರ್ಬಳಕೆ ಮಾಡಿರುವುದು ಸಮಿತಿಗೆ ಸ್ಪಷ್ಟವಾಗಿದೆ. ಇದು ಯೋಜನಾ ತಾಂತ್ರಿಕ ವರದಿಯ ಸ್ಪಷ್ಟ ಹಾಗೂ ನೇರ ಉಲ್ಲಂಘನೆಯಾಗಿದೆ.

ಈ ಹಿನ್ನೆಲೆಯಲ್ಲಿ ಸಮಿತಿಯ ನಿರ್ದೇಶನಗಳ ಅನುಗುಣವಾಗಿ ಲೋಕೋಪಯೋಗಿ ಇಲಾಖೆಯು ಖಾಸಗಿ ಪಾಲುದಾರರ ವಿರುದ್ಧ ನೋಟೀಸನ್ನು ಜಾರಿಗೊಳಿಸಿದ್ದು, ತಾಂತ್ರಿಕ ಕಾರಣಗಳಿಂದಾಗಿ ಈ ಪ್ರಕರಣವು ನ್ಯಾಯಾಲಯದ ಮಧ್ಯಂತರ ಆದೇಶ ಅಥವಾ ತಡೆಯಾಜ್ಞೆಗೆ ಒಳಪಟ್ಟಿದೆ. ಸರ್ಕಾರವು ಈ ಕೂಡಲೇ ಆದ್ಯತೆಯ ಮೇರೆಗೆ ತಡೆಯಾಜ್ಞೆಯನ್ನು ತೆರವುಗೊಳಿಸಿ, ಟೋಲ್ ಸಂಗ್ರಹಣೆಯನ್ನು ಸ್ಥಗಿತಗೊಳಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಇದಲ್ಲದೆ, ಖಾಸಗಿ ಪಾಲುದಾರರು ಈವರೆವಿಗೂ ಅನಧಿಕೃತವಾಗಿ ಸಂಗ್ರಹಿಸಿರುವ ಟೋಲ್ ಶುಲ್ಕವನ್ನು ಕೂಡಲೇ ವಸೂಲಾತಿ ಮಾಡಲು ಸರ್ಕಾರವು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

13. ಕ್ರಿಯಾ ಒಪ್ಪಂದ ಅನುಚ್ಛೇದ 2 ರಡಿಯಲ್ಲಿ ಬಹುತೇಕವಾಗಿ ಪೂರ್ವಭಾವಿ ಷರತ್ತುಗಳ ಬಗ್ಗೆ ಚರ್ಚಿಸಲಾಗಿದೆ. ಕ್ರಿಯಾ ಒಪ್ಪಂದದ ಈ ಅನುಚ್ಛೇದಕ್ಕೆ ಅನ್ವಯಿಸುವಂತೆ ಪ್ರಮುಖ ವ್ಯತ್ಯಾಸಗಳು ಕೆಳಕಂಡಂತಿವೆ:- (ಪುಟ ಸಂಖ್ಯೆ: 2 ರಿಂದ 15)

(1) ಸಮಿತಿಗೆ ಲಭ್ಯವಿರುವ ದಾಖಲಾತಿಗಳನ್ನು ಪರಿಶೀಲಿಸಿದಾಗ, ಲೋಕೋಪಯೋಗಿ ಇಲಾಖೆ ಹಾಗೂ ನೈಸ್ ಯೋಜನೆಯ ಮೊದಲನೆಯ ಹಂತದ ಅನುಷ್ಠಾನಕ್ಕೆ ಅನುಮೋದನೆಗಾಗಿ

ಪ್ರಸ್ತಾವನೆಯನ್ನು ಬಿ.ಎಂ.ಐ.ಸಿ.ಎ.ಪಿ.ಎ.ಗೆ ಸಲ್ಲಿಸಿರುವುದಿಲ್ಲ. ಬಿ.ಎಂ.ಐ.ಸಿ. ಯೋಜನಾ ಕ್ಷೇತ್ರವ್ಯಾಪ್ತಿಯಲ್ಲಿ ಭೂಬಳಕೆಯನ್ನು ಹಾಗೂ ವಲಯೀಕರಣವನ್ನು ನಿಯಂತ್ರಿಸಲು ನಿರ್ದಿಷ್ಟವಾಗಿ ಬಿ.ಎಂ.ಐ.ಸಿ.ಎ.ಪಿ.ಎ. ಪ್ರಾಧಿಕಾರವನ್ನು ಸೃಜಿಸಿದ್ದಾಗ್ಯೂ ಸಹ ಯೋಜನೆಯ ಸೆಕ್ಷನ್ ಎ ವ್ಯಾಪ್ತಿಯ ನಕ್ಷೆಯನ್ನು ಅನುಮೋದನೆಗಾಗಿ ಮುಖ್ಯಇಂಜಿನಿಯರ್, ಲೋಕೋಪಯೋಗಿ ಇಲಾಖೆಗೆ ಸಲ್ಲಿಸಿರುವುದಾಗಿ ಸಮಿತಿಯು ಗಮನಿಸಿದೆ. ಲೋಕೋಪಯೋಗಿ ಇಲಾಖೆ ಸ್ಥಳೀಯ ಯೋಜನಾ ಪ್ರಾಧಿಕಾರವನ್ನು ಪರಿಗಣಿಸದೇ ಥೀಮ್ ಅಪ್ರೂವಲ್ ನೀಡಿರುವುದು ಅನಧಿಕೃತ ಎಂದು ಸಮಿತಿಯು ತೀರ್ಮಾನಿಸುತ್ತದೆ. ಏಕೆಂದರೆ ಲೋಕೋಪಯೋಗಿ ಇಲಾಖೆಗೆ ಬಿ.ಎಂ.ಐ.ಸಿ.ಎ.ಪಿ.ಎ ವ್ಯಾಪ್ತಿಗೆ ಅನ್ವಯಿಸುವಂತೆ ನಕ್ಷೆಗೆ ಮಂಜೂರಾತಿ ನೀಡುವ ಅಧಿಕಾರವಿರುವುದಿಲ್ಲ. ಬಿ.ಎಂ.ಐ.ಸಿ.ಎ.ಪಿ.ಎ ಪ್ರಾಧಿಕಾರಕ್ಕೆ ಕೆ.ಟಿ.ಸಿ.ಪಿ. ಅಧಿನಿಯಮ ಹಾಗೂ ಬಿ.ಎಂ.ಐ.ಸಿ.ಎ.ಪಿ.ಎ. ಅಧಿನಿಯಮದಡಿಯಲ್ಲಿ ಮಾನದಂಡಗಳಿಗನುಸಾರವಾಗಿ ನಕ್ಷೆ ಅನುಮೋದನೆಗೆ ಪ್ರಸ್ತಾವನೆಗಳನ್ನು ಸಲ್ಲಿಸುವಲ್ಲಿ ಖಾಸಗಿ ಪಾಲುದಾರರು ನಿರ್ಲಕ್ಷತಾ ದೋರಣೆಯನ್ನು ತಳೆದಿರುವುದು ಸಮಿತಿಗೆ ಸ್ಪಷ್ಟವಾಗಿದೆ. ಈವರೆವಿಗೂ ಪಂಕ್ತೀಕರಣ, ಭೂಬಳಕೆ, ಹಿಂದಿರುಗಿಸಬೇಕಾದ ಟೋಲ್ ರಸ್ತೆ ಆಸ್ತಿಗಳು, ಹಿಂದಿರುಗಿಸಬೇಕಾದ ನಗರ ಸಮುಚ್ಛಯ ಪ್ರದೇಶಗಳಿಗೆ ಅನ್ವಯಿಸುವಂತೆ ಯಾವುದೇ ಸಮಗ್ರ ಮಾಹಿತಿಯನ್ನು ಒದಗಿಸದೇ 20.07.2002ರ ಥೀಮ್ ಅಪ್ರೂವಲ್ ಆಧಾರದ ಮೇಲೆ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವುದು ಖಾಸಗಿ ಪಾಲುದಾರರ ನಿರ್ಲಕ್ಷತಾ ದೋರಣೆಗೆ ಸಾಕ್ಷಿಯಾಗಿದೆ. ನ್ಯಾಯಾಲಯಗಳ ನಿರ್ದೇಶನಗಳ ನಂತರವೂ ಖಾಸಗಿ ಪಾಲುದಾರರು ನಿರ್ದಿಷ್ಟ ವಿವರಗಳನ್ನು ಸಲ್ಲಿಸುವಲ್ಲಿ ವಿಫಲರಾಗಿತ್ತಾರೆ. ಈ ಬೆಳವಣಿಗೆಗಳನ್ನು ಗಮನಿಸಿದಾಗ ಉದ್ದೇಶಪೂರ್ವಕವಾಗಿಯೇ ನಕ್ಷೆಯ ಮಂಜೂರಾತಿಯನ್ನು ಖಾಸಗಿ ಪಾಲುದಾರರು ನಿರ್ಲಕ್ಷಿಸಿರುವುದು ಸ್ಪಷ್ಟವಾಗುತ್ತದೆ. ಇದಲ್ಲದೇ ಟೋಲ್ ರಸ್ತೆಯಲ್ಲಿ ಪೂರಕ ಮೂಲಭೂತ ಸೌಕರ್ಯಗಳನ್ನು ಈವರೆವಿಗೂ ಸೃಜಿಸದೇ ಸುಮಾರು 700 ಎಕರೆಗಳನ್ನು ವಿವಿಧ ಪ್ರವರ್ಗಗಳಡಿಯಲ್ಲಿ ಪರಬಾರೆ ಮಾಡಿರುತ್ತಾರೆ. ಸರ್ಕಾರಕ್ಕೆ ಹೆಚ್ಚುವರಿಯಾಗಿ 776 ಎಕರೆಗಳನ್ನು ಪೂರಕ ಸೌಲಭ್ಯಗಳ ನಿರ್ಮಾಣಕ್ಕಾಗಿ ಕೋರಿರುತ್ತಾರೆ. ಇದರಿಂದ ಖಾಸಗಿ ಪಾಲುದಾರರ ಆದ್ಯತೆ ಕ್ರಿಯಾ ಒಪ್ಪಂದದ ಧ್ಯೇಯೋದ್ಧೇಶಗಳಿಗೆ ವಿರುದ್ಧವಾಗಿರುವುದು ಸ್ಪಷ್ಟವಾಗಿರುತ್ತದೆ. ಆದುದರಿಂದ ಸರ್ಕಾರವು ಕೂಡಲೇ ಥೀಮ್ ಅಪ್ರೂವಲ್‌ನ್ನು ರದ್ದುಗೊಳಿಸಿ ಬಿ.ಎಂ.ಐ.ಸಿ.ಎ.ಪಿ.ಎ ಮೂಲಕ ವಾಸ್ತವಿಕ ಯೋಜನಾ ನಕ್ಷೆ ಅನುಮೋದನೆಯಾಗುವವರೆಗೂ ಟೋಲ್ ಸ್ವೀಕೃತಿಯನ್ನು ಸ್ಥಗಿತಗೊಳಿಸಲು ಕಾನೂನು ರೀತಿಯ ಕ್ರಮ ಜರುಗಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

14. ಕ್ರಿಯಾ ಒಪ್ಪಂದದ ಅನುಚ್ಛೇಧ 2.1.1.9ರ ಅನುಗುಣವಾಗಿ ಯೋಜನೆಯ ಫೇಸ್–1 ಮತ್ತು ಫೇಸ್–2ಗೆ ಸೀಮಿತವಾದಂತೆ ಫೈನಾನ್ಷಿಯಲ್ ಕ್ಲೋಷರ್ ಅನ್ನು 29.03.2004ರಂದು ಸಾಧಿಸಲಾಗಿದೆ. ವಾಸ್ತವಿಕವಾಗಿ ಸಂಪೂರ್ಣ ಯೋಜನೆಗೆ ಫೈನಾನ್ಷಿಯಲ್ ಕ್ಲೋಷರ್ ಸಾಧಿಸುವುದು ಈ ಅನುಚ್ಛೇಧದಡಿಯಲ್ಲಿ ಪೂರ್ವಭಾವಿ ಅವಶ್ಯಕತೆ ಆಗಿರುತ್ತದೆ. ಈ ವೈಫಲ್ಯತೆಯ ಹಿನ್ನಲೆಯಲ್ಲಿ ಕ್ರಿಯಾ ಒಪ್ಪಂದದ ಅನುಚ್ಛೇಧ 2.1.1.9 ಉಲ್ಲಂಘನೆ ಆಗಿರುವುದು ಸಮಿತಿಗೆ ಸ್ಪಷ್ಟವಾಗಿದೆ. ಇದಲ್ಲದೇ ಫೈನಾನ್ಷಿಯಲ್ ಕ್ಲೋಷರ್ ದಾಖಲಾತಿಗಳನ್ನು ಅಧಿಕೃತವಾಗಿ ಸರ್ಕಾರಕ್ಕೆ ಖಾಸಗಿ ಪಾಲುದಾರರು ಸಲ್ಲಿಸಿರುವುದಿಲ್ಲ. ಈ ಪರಿಸ್ಥಿತಿಯಲ್ಲಿ ಖಾಸಗಿ ಪಾಲುದಾರರು ಸರ್ಕಾರದ ಆಸ್ತಿಯ ಮೇಲೆ ಸೃಜಿಸಿರುವ ಬಾಧ್ಯತೆಗಳ ಬಗ್ಗೆ ಲೋಕೋಪಯೋಗಿ ಇಲಾಖೆಗೆ ನಿರ್ಧಿಷ್ಟ ಮಾಹಿತಿ 12 ವರ್ಷಗಳ ನಂತರವೂ ಲಭ್ಯವಿರುವುದಿಲ್ಲ. ಆದರೆ ಕರ್ನಾಟಕ ಸರ್ಕಾರವು ಖಾಸಗಿ ಪಾಲುದಾರರು ಕೋರಿರುವ ನಮೂನೆಯಲ್ಲಿ ಸಾಲಗಳನ್ನು ಮಾಡಲು ಕಂಫರ್ಟ್ ಲೆಟರ್‌ಗಳನ್ನು ನಿಯತಕಾಲಿಕವಾಗಿ ನೀಡಿದೆ. ಈ ಹಿನ್ನೆಲೆಯಲ್ಲಿ ಖಾಸಗಿ ಪಾಲುದಾರರು ಕ್ರಿಯಾ ಒಪ್ಪಂದದ ಅನುಚ್ಛೇಧ 22.5ರಡಿಯಲ್ಲಿ ಅರ್ಥೈಸಿರುವ ವೈಖರಿ ಅವರ ಅಸಹಕಾರದ ಧೋರಣೆಗೆ ಸಾಕ್ಷಿಯಾಗಿದೆ. ಹಲವಾರು ಸ್ತರಗಳಲ್ಲಿ ನೈಸೆಲ್/ನೀಸೆಲ್ ಸಮುಚ್ಛಯ ಸಂಸ್ಥೆಗಳು 2004ರಿಂದ ವಿಭಿನ್ನ ಬ್ಯಾಂಕ್‌ಗಳಿಗೆ ಸಾಲವನ್ನು ವರ್ಗಾವಣೆ ಮಾಡಿರುವುದು ಸಮಿತಿಯ ಗಮನಕ್ಕೆ ಬಂದಿದೆ. ಈ ಎಲ್ಲಾ ವಹಿವಾಟುಗಳು ಹಾಗೂ ಬೆಳವಣಿಗೆಗಳ ಬಗ್ಗೆ ಸರ್ಕಾರಕ್ಕೆ ಯಾವುದೇ ವಿವರಗಳನ್ನು ಸಲ್ಲಿರುವುದಿಲ್ಲ. ವಾಸ್ತವಿಕವಾಗಿ ಅನುಚ್ಛೇಧ 22.5ರಡಿಯಲ್ಲಿ ಖಾಸಗಿ ಪಾಲುದಾರರು ಹಾಗೂ ಸರ್ಕಾರ ಪರಸ್ಪರ ವಿನಿಮಯ ಮಾಡಿಕೊಳ್ಳಬೇಕಾದ ಮಾಹಿತಿಗೆ ಸಂಬಂಧಿಸಿದಂತೆ ಗೌಪ್ಯತೆಯನ್ನು ಕಾಪಾಡುವ ಬಗ್ಗೆ ಪ್ರತಿಪಾದಿಸಲಾಗಿದೆ. ನಿರ್ಧಿಷ್ಟವಾಗಿ ಖಾಸಗಿ ಪಾಲುದಾರರಿಗೆ ಈ ಅನುಷ್ಠಾನದಡಿ ಮಾಹಿತಿಯನ್ನು ಸರ್ಕಾರಕ್ಕೆ ಸಲ್ಲಿಸುವುದನ್ನು ನಿರ್ಬಂಧಿಸಿರುವುದಿಲ್ಲ. ಇದಲ್ಲದೆ ಕಂಪನಿಗಳ ಅಧಿನಿಯಮ 1956ರಡಿಯಲ್ಲಿ ಖಾಸಗಿ ಪಾಲುದಾರರು ಈ ವಿವರವನ್ನು ಸಲ್ಲಿಸಲು ಬದ್ಧರಾಗಿರುತ್ತಾರೆ. ಈ ವಿಶ್ಲೇಷಣೆಯ ಹಿನ್ನಲೆಯಲ್ಲಿ ಖಾಸಗಿ ಪಾಲುದಾರರು ಫೈನಾನ್ಷಿಯಲ್ ಕ್ಲೋಷರ್ ಸಾಧಿಸುವಲ್ಲಿ ಹಾಗೂ ಸಂಬಂಧಿತ ದಾಖಲಾತಿಗಳನ್ನು ಸರ್ಕಾರಕ್ಕೆ ಸಲ್ಲಿಸುವಲ್ಲಿ ಕ್ರಿಯಾ ಒಪ್ಪಂದವನ್ನು ಉಲ್ಲಂಘಿಸಿರುವುದು ಸ್ಪಷ್ಟವಾಗುತ್ತದೆ. ಸರ್ಕಾರವು ಹಸ್ತಾಂತರಿಸುವ ಸರ್ಕಾರಿ ಜಮೀನಿನ ಆಧಾರದ ಮೇಲೆ ಮೊದಲನೆಯ ಫೈನಾನ್ಷಿಯಲ್ ಕ್ಲೋಷರ್ ಅನ್ನು ಸಾಧಿಸಲಾಗಿದ್ದು, ಖಾಸಗಿ ಪಾಲುದಾರರು ಸಾಲವನ್ನು ಮರುಪಾವತಿ ಮಾಡುವಲ್ಲಿ ವಿಫಲವಾದಲ್ಲಿ ಆರ್ಥಿಕ ಸಂಸ್ಥೆಗಳು ಸರ್ಕಾರಿ ಜಮೀನನ್ನು ವಶಕ್ಕೆ ಪಡೆದುಕೊಳ್ಳಬಹುದಾಗಿದೆ. ಈ ಸ್ವರೂಪದ ವ್ಯವಸ್ಥೆಯಡಿಯಲ್ಲಿ ಖಾಸಗಿ ಪಾಲುದಾರರು ಸಂಬಂಧಿತ ದಾಖಲಾತಿಗಳನ್ನು ಸರ್ಕಾರಕ್ಕೆ ಸಲ್ಲಿಸದೇ ಇರುವುದು ಅಕ್ರಮ ಹಾಗೂ ಕಾನೂನು ಬಾಹಿರ ಎಂದು ಸಮಿತಿ ನಿರ್ಧರಿಸುತ್ತದೆ. ಈ ಹಿನ್ನೆಲೆಯಲ್ಲಿ ಫೈನಾನ್ಷಿಯಲ್ ಕ್ಲೋಷರ್ ದಾಖಲಾತಿಗಳು ಹಾಗೂ ಹಲವಾರು ಹಣಕಾಸು ಸಂಸ್ಥೆಗಳೊಡನೆ ನೈಸೆಲ್ ಸಂಸ್ಥೆ ಜಾರಿಗೊಳಿಸಿರುವ ಒಪ್ಪಂದಗಳ ವಿವರಗಳನ್ನು ಕೂಡಲೇ ಪಡೆಯಲು ಸರ್ಕಾರವು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು

ಮೊಹಟ್ಟಿಟ್, ರಿಜಿಸ್ಟ್ರರ್ ಆಫ್ ಕಂಪನೀಸ್ ಅವರಿಂದ ಲೆಕ್ಕ ತಪಾಸಣೆ ಮಾಡಲಾದ ಬ್ಯಾಲೆನ್ಸ್ ಶೀಟ್ ಪಡೆದು ಬಾಧ್ಯತೆಗಳು ಹಾಗೂ ಪಡೆದಿರುವ ಸಾಲಗಳ ಕ್ರಮ ಬದ್ಧತೆಯ ಬಗ್ಗೆ ಪರಿವೀಕ್ಷಣೆಯನ್ನು ಕೂಡಲೇ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

15. ಕ್ರಿಯಾ ಒಪ್ಪಂದದ ಅನುಚ್ಛೇಧ 3 ರಡಿಯಲ್ಲಿ ಸರ್ಕಾರವು ಯೋಜನಾ ಅನುಷ್ಠಾನವನ್ನು ಸಮರ್ಪಕವಾಗಿ ನಿರ್ವಹಿಸಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಪ್ರತಿಪಾದಿಸಲಾಗಿದೆ. ಈ ಅನುಚ್ಛೇಧದಡಿ 8 ಭಾಗಗಳಿದೆ ಹಾಗೂ 36 ಉಪ ಕಂಡಿಕೆಗಳಿದೆ. ಈ ಅನುಚ್ಛೇಧದಲ್ಲಿರುವ ವಿವರಣೆಗಳ ಅನುಗುಣವಾಗಿ ಕ್ರಮ ಕೈಗೊಳ್ಳಲು ಸರ್ಕಾರವು ಬದ್ಧವಾಗಿರುತ್ತದೆ. ಎಲ್ಲಾ ಪ್ರಕರಣಗಳಲ್ಲಿಯೂ GOK shall ಅಥವಾ GOK will ಎಂಬ ಉಚ್ಛಾರಣೆಯಿಂದ ಷರತ್ತುಗಳನ್ನು ಪ್ರಾರಂಭಿಸಲಾಗಿದೆ. ಆದರೆ, ಅನುಚ್ಛೇಧ 6ನ್ನು ಹೊರತುಪಡಿಸಿ ಕ್ರಿಯಾ ಒಪ್ಪಂದದ ಯಾವುದೇ ಭಾಗದಲ್ಲಿಯೂ ಖಾಸಗಿ ಪಾಲುದಾರರಿಗೆ ಅನ್ವಯಿಸುವಂತೆ ಈ ಪದಗಳನ್ನು ಬಳಸಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಆರ್ಥರ್ ಆಂಡರ್‌ಸನ್ ಸಂಸ್ಥೆಯು ಪ್ರಥಮ ಸ್ತರದಲ್ಲಿ ಕ್ರಿಯಾ ಒಪ್ಪಂದವು ಏಕ ಪಕ್ಷೀಯವಾಗಿದೆ ಎಂದು ನೀಡಿರುವ ಅಭಿಪ್ರಾಯ ಸಮರ್ಥನೀಯ ಎಂದು ಸಮಿತಿಯು ನಿರ್ಧರಿಸುತ್ತದೆ. ಆದಾಗ್ಯೂ ಈ ಅನುಚ್ಛೇಧದಡಿಯಲ್ಲಿ ಸರ್ಕಾರವು ಕೈಗೊಂಡಿರುವ ಕ್ರಮಗಳು ಕೆಳಕಂಡಂತಿದೆ.

1. ಪರಿಸರ ತೀರುವಳಿಯನ್ನು 08.08.2001ರಲ್ಲಿ ನೀಡಲಾಗಿದೆ. ಈ ತೀರುವಳಿ ಷರತ್ತುಬದ್ಧವಾಗಿದ್ದು, ಈ ತೀರುವಳಿಯ ಸೌಲಭ್ಯವನ್ನು ಬಳಸಲು ಖಾಸಗಿ ಪಾಲುದಾರರು ವಿನ್ಯಾಸವನ್ನು ಲೋಕೋಪಯೋಗಿ ಇಲಾಖೆಗೆ ಸಲ್ಲಿಸಿ ಅನುಮೋದನೆಯನ್ನು ಪಡೆಯಬೇಕಾಗುವುದು. ಆದರೆ, ಈವರೆವಿಗೂ 16.07.2002ರ ಥೀಮ್ ಅಪ್ರೂವಲ್ ಆಧಾರದ ಮೇಲೆ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ. ಇದಲ್ಲದೆ, ಯೋಜನಾ ತಾಂತ್ರಿಕ ವರದಿಯ ಕಂಡಿಕೆ 4.1.1 ಹಾಗೂ 4.1.2ರಲ್ಲಿ ನಮೂದಿಸಿರುವ ಅಲೈನ್‌ಮೆಂಟ್ ಹಾಗೂ ವಾಸ್ತವಿಕವಾಗಿ ಅನುಷ್ಠಾನಗೊಳಿಸಲಾದ ಅಲೈನ್‌ಮೆಂಟ್‌ಗಳಲ್ಲೂ ವ್ಯತ್ಯಾಸವಿದೆ. 13.04.2007ರಂದು ನಡೆದ ಸಭೆಯಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಖಾಸಗಿ ಪಾಲುದಾರರಿಂದ ಈ ಅಲೈನ್‌ಮೆಂಟ್‌ನ್ನು ಪಡೆಯುವ ಬಗ್ಗೆ ಪ್ರತಿಪಾದಿಸಿರುತ್ತಾರೆ. 02.05.2007ರಂದು ಸಮಗ್ರ ವಿನ್ಯಾಸಗಳನ್ನು ಸಲ್ಲಿಸುವಂತೆ ಕೋರಿದ್ದು, ಇದಕ್ಕೆ ಪ್ರತಿಕ್ರಿಯಿಸಿ ಖಾಸಗಿ ಪಾಲುದಾರರು 03.05.2007ರಂದು ಪೆರಿಫೆರಲ್ ರಸ್ತೆ ಮತ್ತು ಲಿಂಕ್ ರಸ್ತೆಗಳಿಗೆ ಅನ್ವಯಿಸುವಂತೆ ರೇಖಾ ನಕ್ಷೆಗಳನ್ನು ಸಲ್ಲಿಸಿರುತ್ತಾರೆ. ಆದರೆ, ಈ ನಕ್ಷೆಗಳಲ್ಲಿ ಸರ್ವೆ ನಂಬರು ವಿವರಗಳು ಲಭ್ಯವಿರುವುದಿಲ್ಲ. 06/2008, 07/2008 ಹಾಗೂ 12/2008ರಂದು ವಿವರವಾದ ನಕ್ಷೆಗಳನ್ನು ಸಲ್ಲಿಸುವಂತೆ ಲೋಕೋಪಯೋಗಿ ಇಲಾಖೆ ಕೋರಿದೆ.

ಮುಂದುವರೆದಂತೆ 09.11.2009ರಂದು 12.02.2004ರಂದು ಅನುಮೋದಿತವಾದ ಸಿ.ಡಿ.ಪಿ. ಪಂಕ್ತೀಕರಣದ ಅನುಗುಣವಾಗಿ ಜಮೀನು ಬಳಕೆಯ ವಿವರಗಳು ಸರ್ವೆ ನಂಬರುಗಳು ಹಾಗೂ ಪಂಕ್ತೀಕರಣದ ವಿವರಗಳನ್ನು ಸಲ್ಲಿಸುವಂತೆ ಕೋರಲಾಗಿದೆ. ಈ ಕೋರಿಕೆಗೆ ಖಾಸಗಿ ಪಾಲುದಾರರು ಸಕಾರಾತ್ಮಕವಾಗಿ ಸ್ಪಂದಿಸದೇ ಖಾಸಗಿ ಪಾಲುದಾರರು ಮಾನ್ಯ ಸರ್ವೋಚ್ಛ ನ್ಯಾಯಾಲಯದಲ್ಲಿ ಇರುವ ನ್ಯಾಯಾಂಗ ನಿಂಧನಾ ಪ್ರಕರಣದ ಹಿನ್ನಲೆಯಲ್ಲಿ ಈ ಮಾಹಿತಿಯನ್ನು ಕೋರಿರುವುದು ಸಮರ್ಪಕವಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಆದರೆ, ಕರ್ನಾಟಕ ಉಚ್ಛ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 3438/2010ರಲ್ಲಿ ಕ್ರಿಯಾ ಒಪ್ಪಂದದ ಷೆಡ್ಯೂಲ್ 4ರ ಅನುಗುಣವಾಗಿ ಘಟಕವಾರು ಜಮೀನಿನ ಅವಶ್ಯಕತೆಯನ್ನು ನಿರ್ಧಿಷ್ಟ ಪಡಿಸುವುದು ಅಥವಾ ಗುರುತಿಸುವುದು ಅತ್ಯಾವಶ್ಯಕ ಎಂಬುದನ್ನು ವ್ಯಕ್ತಪಡಿಸಲಾಗಿದೆ. ಈ ಹಿನ್ನಲೆಯಲ್ಲಿ ವಾಸ್ತವಿಕವಾಗಿ ನಿರ್ಮಿಸಿರುವ ಟೋಲ್ ರಸ್ತೆಗಳ ಡಿಸೈನ್ ಹಾಗೂ ಇತರೆ ತಾಂತ್ರಿಕ ಮಾನದಂಡಗಳಿಗೆ ಪರಿಪೂರ್ಣ ಅನುಮೋದನೆಯನ್ನು ಈವರೆವಿಗೂ ನೀಡಿರುವುದಿಲ್ಲ. ಥೀಮ್ ಅಪ್ರೂವಲ್ ಅನುಮೋದನೆಯನ್ನೂ ಸಹ ೮ ವರ್ಷದ ವಿಳಂಬದ ನಂತರ ಪಡೆಯಲಾಗಿದೆ. ಈ ಬೆಳವಣಿಗೆಗಳನ್ನು ಗಮನಿಸಿದಾಗ ಖಾಸಗಿ ಪಾಲುದಾರರು ಕ್ರಿಯಾ ಒಪ್ಪಂದದ ಅನುಗುಣವಾಗಿ ಅನುಮೋದನೆಯನ್ನು ಪಡೆಯುವಲ್ಲಿ ಸಂದಿಗ್ದತೆಯನ್ನು ಸೃಷ್ಟಿ ಮಾಡಿರುವುದು ಸಮಿತಿಗೆ ಸ್ಪಷ್ಟವಾಗಿದೆ. ಈ ಹಿನ್ನಲೆಯಲ್ಲಿ ಪಂಕ್ತೀಕರಣವನ್ನು ಸರ್ವೆ ಮ್ಯಾಪ್‌ಗಳ ಮೇಲೆ ಅಳವಡಿಸಿರುವ ಸವಿವರವಾದ ನಕ್ಷೆಗಳನ್ನು ಕೂಡಲೇ ಪಡೆಯಲು ಸರ್ಕಾರವು ಕಾನೂನು ರೀತಿಯ ಕ್ರಮ ಜರುಗಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

2. ಕರ್ನಾಟಕ ಹೆದ್ದಾರಿ ಕಾಯ್ದೆ 1964ಕ್ಕೆ ದಿನಾಂಕ: 23.12.1998ರಂದು ತಿದ್ದುಪಡಿ ಜಾರಿಗೊಳಿಸಿ ಸೆಕ್ಷನ್ 19ಎ ನ್ನು ಸೇರ್ಪಡೆ ಮಾಡಲಾಗಿದೆ. ಇದರಡಿಯಲ್ಲಿ ಖಾಸಗಿ ಪಾಲುದಾರರು ಟೋಲ್ ದರಗಳನ್ನು ಸ್ವೀಕರಿಸುವ ಅವಕಾಶವನ್ನು ಕಲ್ಪಸಲಾಗಿದೆ. ಇದಕ್ಕನುಗುಣವಾಗಿ ನೈಸೆಲ್ ಸಂಸ್ಥೆಯೊಂದಿಗೆ ದಿನಾಂಕ:04.09.2000ರಂದು ಟೋಲ್ ರಿಯಾಯಿತಿ ಒಪ್ಪಂದ ಜಾರಿಗೊಳಿಸಿದೆ.

3. ಈ ವರದಿಯ ವಿವಿಧ ಭಾಗಗಳಲ್ಲಿ ಪ್ರತಿಪಾದಿಸಿದಂತೆ ಸೆಕ್ಷನ್ 'ಎ' ಅಡಿಯಲ್ಲಿ ಅವಶ್ಯಕವಿರುವ ಜಮೀನಿನ ಸ್ವಾಧೀನಕ್ಕೆ ಕೆ.ಐ.ಎ.ಡಿ.ಬಿ. ಈಗಾಗಲೇ ಕ್ರಮ ಕೈಗೊಂಡಿದೆ. ಸರ್ಕಾರಿ ಜಮೀನನ್ನು ಸಮಗ್ರವಾಗಿ ಹಸ್ತಾಂತರಿಸಲಾಗಿದೆ. ಇದಲ್ಲದೆ, ಕೆ.ಐ.ಎ.ಡಿ.ಬಿ. ನೀಡಿರುವ ಸ್ಪಷ್ಟೀಕರಣದ ಅನುಗುಣವಾಗಿ ಖಾಸಗಿ ಪಾಲುದಾರರ ಕೋರಿಕೆಯ ಮೇಲೆ ಸ್ವಾಧೀನ ಪಡಿಸಿಕೊಳ್ಳಲಾಗಿದೆ.

4. ನೈಸೆಲ್ ಸಂಸ್ಥೆಯು 29.03.2004ರಂದು ಫೈನಾನ್ಷಿಯಲ್ ಕ್ಲೋಷರ್ ಸಾಧಿಸಿದೆ. ಈ ಫೈನಾನ್ಷಿಯಲ್ ಕ್ಲೋಷರ್ ದಾಖಲಾತಿಗಳನ್ನು ಪರಿಶೀಲಿಸಿದಾಗ ಕ್ರಿಯಾ ಒಪ್ಪಂದ 03.06.1997ರ ಅರೇ ಸರ್ಕಾರಿ ಪತ್ರದೊಂದಿಗೆ ಲಗತ್ತಿಸಲಾದ ಜಮೀನಿನ ವಿವರಗಳು, ಭಾರತ್ ಫೋರ್ಜ್ ಲಿಮಿಟೆಡ್ ಪ್ರತಿಪಾದಿಸುವ ಜಮೀನುಗಳು ಇತ್ಯಾದಿಗಳನ್ನು ಪರಿಗಣಿಸದೇ ಕೆ.ಐ.ಎ.ಡಿ.ಬಿ.ಯೊಂದಿಗೆ ಜಾರಿಗೊಳಿಸಲಾದ ಒಡಂಬಡಿಕೆಯಲ್ಲಿ ನಮೂದಿಸಲಾದ ವಿಸ್ತೀರ್ಣದ ಆಧಾರದ ಮೇಲೆ ಫೈನಾನ್ಷಿಯಲ್ ಕ್ಲೋಷರ್ ಸಾಧಿಸಲಾಗಿದೆ. ಯೋಜನೆಗೆ ಸಮಗ್ರವಾಗಿ 20,193 ಎಕರೆಗಳ ಜಮೀನಿನ ಅವಶ್ಯಕತೆ ಇದ್ದಾಗ್ಯೂ ಸಹ ಕೆ.ಐ.ಎ.ಡಿ.ಬಿ. ಒಪ್ಪಂದದಲ್ಲಿ 23,846 ಎಕರೆ ಖಾಸಗಿ ಜಮೀನು ಹಾಗೂ ಸುಮಾರು 5,873 ಎಕರೆ ಸರ್ಕಾರಿ ಜಮೀನಿನ ಬಗ್ಗೆ ಉಲ್ಲೇಖಿಸಲಾಗಿದೆ. ಇದನ್ನು ಗಮನಿಸಿದಾಗ ಖಾಸಗಿ ಪಾಲುದಾರರು ಕ್ರಿಯಾ ಒಪ್ಪಂದವನ್ನು ನಿರ್ಲಕ್ಷಿಸಿರುವುದು ಸ್ಪಷ್ಟವಾಗುತ್ತದೆ.

5. ಯೋಜನಾ ಸಂಸ್ಥೆಗೆ ಕೆ.ಐ.ಎ.ಡಿ.ಬಿ. ಮೂಲಕ ಜಮೀನನ್ನು ಹಸ್ತಾಂತರಿಸಲು ಸೌಲಭ್ಯ ಕಲ್ಪಿಸುವ ದೃಷ್ಟಿಯಿಂದ ಗೌರವಾನ್ವಿತ ರಾಷ್ಟ್ರಪತಿಗಳ ಅನುಮೋದನೆಯೊಂದಿಗೆ ಕೆ.ಐ.ಎ.ಡಿ.ಬಿ. ಅಧಿನಿಯಮಕ್ಕೆ ತಿದ್ದುಪಡಿಯನ್ನು 18.08.1997ರಂದು ಜಾರಿಗೊಳಿಸಲಾಗಿದೆ. ಈ ತಿದ್ದುಪಡಿಯ ಅನುಗುಣವಾಗಿ ವೇಗದ ಹೆದ್ದಾರಿ ಹಾಗೂ ಪಟ್ಟಣಗಳ ಅಭಿವೃದ್ಧಿಯನ್ನು ಸೇರ್ಪಡೆ ಮಾಡಲಾಗಿದೆ. ಸಮಗ್ರವಾಗಿ Industrial Infrastructure facilities ಅಭಿವೃದ್ಧಿಪಡಿಸಲು ಈ ತಿದ್ದುಪಡಿ ಮೂಲಕ ಅವಕಾಶ ಕಲ್ಪಿಸಲಾಗಿದೆ.

6. ಟೋಲ್ ರಸ್ತೆಯ ಡಿಸೈನ್ ಇತ್ಯಾದಿಗಳು ಓ.ಡಿ.ಪಿ. ಅಲೈನ್‌ಮೆಂಟ್‌ನ ಅನುಗುಣವಾಗಿ ನಿರ್ಮಿಸಿದ್ದು, ಯೋಜನಾ ತಾಂತ್ರಿಕ ವರದಿ ಅಥವಾ ಕ್ರಿಯಾ ಒಪ್ಪಂದದ ಅನುಗುಣವಾಗಿ ಇರುವುದಿಲ್ಲ. ಆದಾಗ್ಯೂ 18.12.2008ರಿಂದ ಟೋಲ್ ದರ ವಸೂಲಿ ಮಾಡಲು ಅಧಿಸೂಚನೆ ಜಾರಿಗೊಳಿಸಲಾಗಿದೆ. ಇದಕ್ಕೆ ಪೂರಕವಾಗಿ 04.09.2000ರಂದು ಟೋಲ್ ರಿಯಾಯಿತಿ ಒಪ್ಪಂದವನ್ನು ಜಾರಿಗೊಳಿಸಲಾಗಿದೆ.

7. ಅನುಚ್ಛೇಧ 4ರ ಅನುಗುಣವಾಗಿ ಕ್ರಿಯಾ ಒಪ್ಪಂದದ ಷೆಡ್ಯೂಲ್ 6ರಲ್ಲಿ ನಮೂದಿಸಲಾದ ಸದಸ್ಯರನ್ನೊಳಗೊಂಡ ಅಧಿಕಾರದತ್ತ ಸಮಿತಿಯನ್ನು ದಿನಾಂಕ: 01.07.1997ರಂದು ರಚಿಸಲಾಗಿದೆ. ಈ ಸಮಿತಿಗೆ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಅಧ್ಯಕ್ಷರಾಗಿರುತ್ತಾರೆ. ಯೋಜನಾ ಸಮನ್ವಯತೆಯನ್ನು ನಿರ್ವಹಿಸುವ ಎಲ್ಲಾ ಇಲಾಖೆಗಳ ಕಾರ್ಯದರ್ಶಿಗಳು ಸಮಿತಿಯ ಸದಸ್ಯರಾಗಿರುತ್ತಾರೆ.

8. ನೈಸ್ ಸಂಸ್ಥೆಯು ದಿನಾಂಕ: 04.06.2002ರಂದು ಸಲ್ಲಿಸಿರುವ ಕೋರಿಕೆಯನ್ನು ಪರಿಗಣಿಸಿ ಸಚಿವ ಸಂಪುಟದ ಮುಖಾಂತರ 04.11.2002ರಂದು ಕಾಂಕ್ರೀಟ್ ರಸ್ತೆಯ ಬದಲಾಗಿ ಎರಡು ಪಥದ ಟಾರ್ ರಸ್ತೆಯನ್ನು ನಿರ್ಮಿಸಲು ಅನುಮತಿಯನ್ನು ನೀಡಲಾಗಿದೆ ಈ ಆದೇಶದ ಅನುಗುಣವಾಗಿ 29.03.2012ರೊಳಗಾಗಿ ಸೆಕ್ಷನ್ 'ಎ' ಭಾಗದ ಪೆರಿಫೆರಲ್ ರಸ್ತೆ, ಲಿಂಕ್ ರಸ್ತೆ ಹಾಗೂ ಎಕ್ಸ್‌ಪ್ರೆಸ್ ವೇಗಳನ್ನು ಕಾಂಕ್ರೀಟ್ ರಸ್ತೆಗಳನ್ನಾಗಿ ನಿರ್ಮಿಸಬೇಕಾಗುವುದು. ಆದರೆ, ಈವರೆವಿಗೂ ನೈಸೆಲ್ ಸಂಸ್ಥೆ ಈ ಷರತ್ತನ್ನು ಪಾಲಿಸಿರುವುದಿಲ್ಲ. ಇದರಿಂದಾಗಿ ಕ್ರಿಯಾ ಒಪ್ಪಂದದ ಅನುಚ್ಛೇಧ 6.3.1ನ್ನು ಉಲ್ಲಂಘಿಸಲಾಗಿದೆ. ಅಂದರೆ ಕಂಡಿಕೆ 6.3.1ರಲ್ಲಿ ನಮೂದಿಸಲಾದ ತಾಂತ್ರಿಕ ಮಾನದಂಡಗಳನ್ನು ನಿರ್ವಹಿಸುವಲ್ಲಿ ಖಾಸಗಿ ಪಾಲುದಾರರಿಗೆ ರಿಯಾಯಿತಿಯನ್ನು ನೀಡಿ ಟೋಲ್ ಸಂಗ್ರಹಣಾ ವ್ಯವಸ್ಥೆಯನ್ನೂ ಸಹ ಜಾರಿಗೊಳಿಸಲಾಗಿದೆ.

9. ಸ್ಥಳಾಂತರಿಸಲಾದ ನಗರ ಸಮುಚ್ಛಯ ಒಂದಕ್ಕೆ ಅನ್ವಯಿಸುವಂತೆ ಭೂಸ್ವಾಧೀನ ಪ್ರಕ್ರಿಯೆಯನ್ನು ಸಂಪೂರ್ಣಗೊಳಿಸಲಾಗಿದೆ. ಆದರೆ, ಖಾಸಗಿ ಪಾಲುದಾರರು ಈವರೆವಿಗೂ ಪರಿಹಾರ ಮೊತ್ತವನ್ನು ಪಾವತಿಸಿರುವುದಿಲ್ಲ.

10. ದಿನಾಂಕ: 24.01.2001ರ ಆದೇಶದ ಮುಖಾಂತರ 14,337 ಎಕರೆ ಜಮೀನುಗಳ ಮಾರಾಟ ಮತ್ತು ಗುತ್ತಿಗೆ ಕರಾರು ಪತ್ರಗಳ ನೋಂದಣಿಗೆ ತಗಲುವ ಮುದ್ರಾಂಕ ಶುಲ್ಕದಲ್ಲಿ ವಿನಾಯಿತಿಯನ್ನು ನೀಡಲಾಗಿದೆ. ಈ ವಿನಾಯಿತಿ ಮೈಸೂರು ಹಾಗೂ ಬೆಂಗಳೂರು ಕಡೆಯಿಂದ ಏಕ ಕಾಲದಲ್ಲಿ ವೇಗದ ಹೆದ್ದಾರಿಯನ್ನು ನಿರ್ಮಿಸುವ ಷರತ್ತಿಗೆ ಒಳಪಟ್ಟಿರುತ್ತದೆ. ಈ ವಿನಾಯಿತಿ ಸೌಲಭ್ಯವನ್ನು ಖಾಸಗಿ ಪಾಲುದಾರರು ಬಳಸಿದ್ದಾಗ್ಯೂ ಸಹ ಈ ಷರತ್ತನ್ನು ಪಾಲಿಸಿರುವುದಿಲ್ಲ.

11. ಕೆ.ಐ.ಎ.ಡಿ.ಬಿ. ಸಂಸ್ಥೆಯು ಮಾನದಂಡಗಳನ್ನು ಸಡಿಲಗೊಳಿಸಿ ನೈಸೆಲ್ ಸಂಸ್ಥೆ ಪಾವತಿಸಬೇಕಾದ ಸೇವಾ ಶುಲ್ಕವನ್ನು ರೂ. 7.00 ಕೋಟಿಗಳಿಗೆ ಇಳಿಮುಖಗೊಳಿಸಿದೆ.

12. ಭೂ ಪರಿಹಾರ ಪಾವತಿಗೆ ಸಂಬಂಧಿಸಿದಂತೆ ಕೆ.ಐ.ಎ.ಡಿ.ಬಿ. ಅಧಿನಿಯಮದಲ್ಲಿ ನಮೂದಿಸಿರುವ ಸ್ತರಗಳಲ್ಲಿ ಹಾಗೂ ಅವಧಿಯಲ್ಲಿ ಖಾಸಗಿ ಪಾಲುದಾರರು ಪರಿಹಾರದ ಮೊತ್ತವನ್ನು ಕೆ.ಐ.ಎ.ಡಿ.ಬಿ .ಗೆ ಪಾವತಿಸಿರುವುದಿಲ್ಲ. ಆದಾಗ್ಯೂ, ಸೆಕ್ಷನ್ 'ಎ' (ನಗರ ಸಮುಚ್ಛಯ-1ನ್ನು ಒಳಗೊಂಡಂತೆ) ಭೂಸ್ವಾಧೀನ ಪ್ರಕ್ರಿಯೆಯನ್ನು ಬಹುತೇಕವಾಗಿ ಸಂಪೂರ್ಣಗೊಳಿಸಲಾಗಿದೆ.

13. ನೈಸೆಲ್ ಸಂಸ್ಥೆಯೊಡನೆ ಲೋಕೋಪಯೋಗಿ ಇಲಾಖೆಯು 1999 ಹಾಗೂ 2000ರಲ್ಲಿ ಅವರ ಕೋರಿಕೆಗೆ ಅನುಗುಣವಾಗಿ ಪೂರಕ ಒಪ್ಪಂದವನ್ನು ಜಾರಿಗೊಳಿಸಿದೆ. ಆಗಸ್ಟ್-2002ರಲ್ಲಿ

ತ್ರಿಪಕ್ಷೀಯ ಒಪ್ಪಂದವನ್ನೂ ಸಹ ಜಾರಿಗೊಳಿಸಲಾಗಿದೆ. ಈ ಒಪ್ಪಂದಗಳ ಮುಖಾಂತರ ಯೋಜನಾ ಅನುಷ್ಠಾನದ ಸ್ತರಗಳನ್ನು ಪರಿಷ್ಕರಿಸಿ ಅಸ್ಸೈನ್ ಮೆಂಟ್ ಮುಖಾಂತರ ಮೆ॥ ನೀಸಲ್ ಸಂಸ್ಥೆಗೆ ಯೋಜನಾ ಅನುಷ್ಠಾನದ ಸೆಕ್ಷನ್ 'ಎ' ಹಸ್ತಾಂತರಿಸಲು ಅನುಕೂಲ ಮಾಡಿಕೊಡಲಾಗಿದೆ.

14. ಕೆ.ಐ.ಎ.ಡಿ.ಬಿ. ಸಂಸ್ಥೆಯು ೧೬೯೯ ಎಕರೆಗಳಿಗೆ ಅನ್ವಯಿಸುವಂತೆ ಶುದ್ಧ ಕ್ರಯಪತ್ರಗಳನ್ನು ಜಾರಿಗೊಳಿಸಿದೆ. ೨೦೦೯ ರಲ್ಲಿ ಮಾನ್ಯ ಅಡ್ವೊಕೇಟ್ ಜನರಲ್ ಅವರು ಸೂಚಿಸಿರುವ ಪ್ರಪತ್ರದಲ್ಲಿ ಶುದ್ಧ ಕ್ರಯ ಪತ್ರಗಳನ್ನು ಜಾರಿಗೊಳಿಸಿದ್ದು, ಈ ಪ್ರಪತ್ರದಲ್ಲಿ ಟ್ರಾನ್ಸ್‌ಫರಬಲ್ ಟೋಲ್ ರಸ್ತೆ ಅಸೆಟ್ಸ್ ವ್ಯಾಪ್ತಿಗೆ ಒಳಪಡುವ ಜಮೀನನ್ನು ಹಿಂದಿರುಗಿಸುವ ನಿರ್ಬಂಧನೆಗೆ ಒಳಪಟ್ಟಂತೆ ಕ್ರಯ ಪತ್ರಗಳನ್ನು ಜಾರಿಗೊಳಿಸಲಾಗಿದೆ ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. ಆದಾಗ್ಯೂ, ವಾಸ್ತವಿಕವಾಗಿ ಖಾಸಗಿ ಪಾಲುದಾರರು ಹಿಂದಿರುಗಿಸಬೇಕಾದ ಜಮೀನನ್ನು ನಿರ್ದಿಷ್ಟವಾಗಿ ಗುರುತಿಸಿ ಲೀಸ್ ಕಂ ಸೇಲ್ ಡೀಡ್ ಸ್ವರೂಪದಲ್ಲಿ ಕ್ರಯ ಪತ್ರಗಳನ್ನು ಪರಿಷ್ಕರಿಸಿ ಜಾರಿಗೊಳಿಸಲು ಕೆ.ಐ.ಎ.ಡಿ.ಬಿ. ಸಂಸ್ಥೆಯು ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಸರ್ಕಾರಕ್ಕೆ ಕ್ರಿಯಾ ಒಪ್ಪಂದದ ಅನುಗುಣವಾಗಿ ೩೦ ವರ್ಷಗಳ ನಂತರ ಹಿಂದಿರುಗಿಸಬೇಕಾದ ಜಮೀನಿನ ವಿವರಗಳು ಲಭ್ಯವಿಲ್ಲದಿದ್ದಾಗ್ಯೂ ಸಹ ಯೋಜನೆಯ ಅನುಷ್ಠಾನದ ಹಿತಾಸಕ್ತಿಯಿಂದ ಈ ಕ್ರಮ ಕೈಗೊಳ್ಳಲಾಗಿದೆ.

ಮೇಲೆ ನಿರೂಪಿಸಿರುವ ಸೌಲಭ್ಯಗಳನ್ನು ಯೋಜನೆಯ ಸಮರ್ಪಕ ಹಾಗೂ ಆಲೋಚಿತ ಅನುಷ್ಠಾನವನ್ನು ದೃಢೀಕರಿಸಿಕೊಳ್ಳಲು ಸರ್ಕಾರವು ಜಾರಿಗೊಳಿಸಿದೆ. ಆದಾಗ್ಯೂ ನೈಸೆಲ್/ನೀಸಲ್ ಸಂಸ್ಥೆ ಭೂಮಿ ನಿರ್ವಹಣೆಗೆ ಸಂಬಂಧಿಸಿದಂತೆ ಕ್ರಿಯಾ ಒಪ್ಪಂದವನ್ನು ಚಾರಿತ್ರಿಕವಾಗಿ ಉಲ್ಲಂಘಿಸಿರುತ್ತಿರುವುದು ಸಮಿತಿಯ ಗಮನಕ್ಕೆ ಬಂದಿದೆ. ಇದಲ್ಲದೆ ಖಾಸಗಿ ಪಾಲುದಾರರು ಕ್ರಿಯಾ ಒಪ್ಪಂದದಲ್ಲಿ ಪ್ರತಿಪಾದಿಸಲಾಗಿರುವ ಪರಸ್ಪರ ಚರ್ಚೆಯ ಮುಖಾಂತರ ಭಿನ್ನಾಭಿಪ್ರಾಯವನ್ನು ಇತ್ಯರ್ಥಗೊಳಿಸುವಲ್ಲಿ ಯಾವುದೇ ಕ್ರಮ ಕೈಗೊಳ್ಳದೇ ನ್ಯಾಯಾಲಯದ ಮೊರೆ ಹೋಗಿ ಯೋಜನಾ ಅನುಷ್ಠಾನದಲ್ಲಿ ಕಾನೂನು ಸಂದಿಗ್ಧತೆಯನ್ನು ಸೃಷ್ಟಿಸಿರುತ್ತಾರೆ. ಇದಲ್ಲದೇ, ಮೇಲ್ನೋಟಕ್ಕೆ ಯೋಜನಾ ಅನುಷ್ಠಾನದ ಪ್ರಗತಿ, ಬೆಂಗಳೂರು ನಗರ ಸಮುಚ್ಛಯದ ವ್ಯಾಪ್ತಿಗೆ ಸೀಮಿತವಾಗಿರುವುದು ಸ್ಪಷ್ಟವಾಗಿದೆ. ಕ್ರಿಯಾ ಒಪ್ಪಂದವನ್ನು ಜಾರಿಗೊಳಿಸಿದ ೧೯ ವರ್ಷಗಳ ನಂತರವೂ ಮೈಸೂರಿಗೆ ಸಂಪರ್ಕ ಕಲ್ಪಿಸುವ ವೇಗದ ಹೆದ್ದಾರಿಯ ನಿರ್ಮಾಣದಲ್ಲಿ ಯಾವುದೇ ಪ್ರಗತಿಯನ್ನು ಸಾಧಿಸಿರುವುದಿಲ್ಲ. ೦೯.೦೩.೨೦೦೨ರಲ್ಲಿ ಅನುಷ್ಠಾನಗೊಳಿಸಲಾದ ತ್ರಿಪಕ್ಷೀಯ ಒಪ್ಪಂದದ ಮುಖಾಂತರ ಜಮೀನಿನ ಮಾರಾಟದ ಸೌಲಭ್ಯವನ್ನು ಅನಧಿಕೃತವಾಗಿ ಸೃಷ್ಟಿಸಿರುತ್ತಾರೆ. ಈ ಅನಧಿಕೃತ ಸೌಲಭ್ಯದ ಆಧಾರದ ಮೇಲೆ ವ್ಯಾಪಕವಾಗಿ ಜಮೀನಿನ ಮಾರಾಟ, ಅಡಮಾನ ಹಾಗೂ ಜಂಟಿ ಅಭಿವೃದ್ಧಿಗಾಗಿ ಒಪ್ಪಂದಗಳನ್ನು ಜಾರಿಗೊಳಿಸಿರುತ್ತಾರೆ. ಜಮೀನಿನ ವಿಸ್ತೀರ್ಣ, ಸ್ಥಳ ಹಾಗೂ ಸ್ವರೂಪವನ್ನು

ನಿಯತಕಾಲಿಕವಾಗಿ ಬದಲಾವಣೆ ಮಾಡಲಾಗಿದೆ. ಕೆಲವು ಪ್ರಕರಣಗಳಲ್ಲಿ ಖಾಸಗಿ ಪಾಲುದಾರರು ಕ್ರಿಯಾ ಒಪ್ಪಂದದಲ್ಲಿ ಪ್ರತಿಪಾದಿಸದೇ ಇರುವ ಜಮೀನಿಗೆ ಅನ್ವಯಿಸುವಂತೆ 2014ರವರೆಗೂ ಕೋರಿಕೆಯನ್ನು ಸಲ್ಲಿಸುತ್ತಿರುವುದನ್ನು ಸಮಿತಿಯು ಗಮನಿಸಿದೆ. ಭೂಮಿ ನಿರ್ವಹಣೆಗೆ ಸಂಬಂಧಿಸಿದಂತೆ ಆಗುತ್ತಿರುವ ಬದಲಾವಣೆಯ ಪ್ರವೃತ್ತಿಯನ್ನು ವಿಶ್ಲೇಷಿಸಿದಾಗ ಈ ಯೋಜನೆ ಮೂಲಭೂತ ಸೌಕರ್ಯ ಅಭಿವೃದ್ಧಿಯ ಸ್ವರೂಪವನ್ನು ಕಳೆದುಕೊಂಡಿದೆ ಎಂಬುದು ಸ್ಪಷ್ಟವಾಗುತ್ತದೆ. ತಾಂತ್ರಿಕ ಮಾನದಂಡಗಳ ಉಲ್ಲಂಘನೆ ಕ್ರಿಯಾ ಒಪ್ಪಂದದ ಅನುಗುಣವಾಗಿ ಜಮೀನಿನ ಅವಶ್ಯಕತೆಯನ್ನು ಸೀಮಿತಗೊಳಿಸುವಲ್ಲಿ ಖಾಸಗಿ ಪಾಲುದಾರರು ಗುರುತರ ಪಾತ್ರವನ್ನು ನಿರ್ವಹಿಸಿರುತ್ತಾರೆ. ಕ್ರಿಯಾ ಒಪ್ಪಂದದ ಅನುಚ್ಛೇಧ 22.2-Confidentality Clause ಅಡಿಯಲ್ಲಿ ಖಾಸಗಿ ಪಾಲುದಾರರು ಲೆಕ್ಕ ಪರಿಶೋಧನೆಗೊಂಡ ಬ್ಯಾಲೆನ್ಸ್ ಶೀಟ್‌ಗಳು, ಫೈನಾನ್ಷಿಯಲ್ ಕ್ಲೋಷರ್ ದಾಖಲಾತಿಗಳು, ವಿನ್ಯಾಸಗಳನ್ನು ಸಲ್ಲಿಸದೇ ಇರುವುದನ್ನು ಸಮಿತಿಯು ಗಮನಿಸಿದೆ. ಇದರಿಂದಾಗಿ ಕ್ರಿಯಾ ಒಪ್ಪಂದದ ಗುರುತರ ಹಾಗೂ ಸೂಕ್ಷ್ಮಕರ ಕರ್ತವ್ಯಗಳ ನಿರ್ವಹಣೆಯನ್ನು ದೃಢೀಕರಿಸಿಕೊಳ್ಳುವಲ್ಲಿ ವ್ಯಾಪಕ ವೈಫಲ್ಯತೆ ಉಂಟಾಗಿದೆ. ಯೋಜನಾ ತಾಂತ್ರಿಕ ವರದಿಯಲ್ಲಿ ಪ್ರತಿಪಾದಿಸಿರುವ ಐ.ಆರ್.ಆರ್. ಮತ್ತು ಎನ್.ಪಿ.ವಿ. ಸಮರ್ಪಕತೆಯ ಬಗ್ಗೆ ಈ ದಾಖಲಾತಿಗಳ ಅನುಪಸ್ಥಿತಿಯಲ್ಲಿ ಯಾವುದೇ ವಿಶ್ಲೇಷಣೆಯನ್ನು ಕೈಗೊಳ್ಳಲು ಸರ್ಕಾರಕ್ಕೆ ಆಗಿರುವುದಿಲ್ಲ. ಬಂಡವಾಳ ಹೂಡಿಕೆ, ಅಭಿವೃದ್ಧಿ ವೆಚ್ಚ ಹಾಗೂ ಸ್ವೀಕೃತಿಗಳ ಬಗ್ಗೆ ಸರ್ಕಾರಕ್ಕೆ ಯಾವುದೇ ಮಾಹಿತಿ ಇರದೇ ಇರುವಂತ ಪರಿಸ್ಥಿತಿಯನ್ನು ಸೃಷ್ಟಿಸಲಾಗಿದೆ. ಚಾರಿತ್ರಿಕ ಬೆಳವಣಿಗೆಗಳು, ತಿದ್ದುಪಡಿಗಳು, ಪರಿಷ್ಕರಣೆಗಳು ಇತ್ಯಾದಿಗಳನ್ನು ಘಟನೋತ್ತರವಾಗಿ ವಿಶ್ಲೇಷಿಸಿದಾಗ ಖಾಸಗಿ ಪಾಲುದಾರರು ಪೂರ್ವಯೋಜಿತ ರೀತಿಯಲ್ಲಿ ಕ್ರಿಯಾ ಒಪ್ಪಂದದ ಅನುಚ್ಛೇಧಗಳನ್ನು ಶೋಷಿಸುತ್ತಿರುವುದು ಸ್ಪಷ್ಟವಾಗಿದೆ. ಮೇಲ್ನೋಟಕ್ಕೆ ಈ ಯೋಜನೆ ಅಡಿಯಲ್ಲಿ ರಿಯಲ್ ಎಸ್ಟೇಟ್ ವಹಿವಾಟುಗಳಿಗೆ ಆದ್ಯತೆ ನೀಡಿ ಮೂಲಭೂತ ಸೌಕರ್ಯ ಅಭಿವೃದ್ಧಿಯನ್ನು ನಿರ್ಲಕ್ಷಿಸಿದೆ ಎಂದು ಸಮಿತಿ ನಿರ್ಧರಿಸುತ್ತದೆ.

ಈ ವರದಿಯ ವಿವಿಧ ಭಾಗಗಳಲ್ಲಿ ಖಾಸಗಿ ಪಾಲುದಾರರಿಗೆ ಕ್ರಿಯಾ ಒಪ್ಪಂದಕ್ಕೆ ವ್ಯತಿರಿಕ್ತವಾಗಿ ಆಗಿರುವ ಅನುದ್ದೇಶಿತ ಆದಾಯಗಳ ಬಗ್ಗೆ ಚರ್ಚಿಸಲಾಗಿದೆ. ಖಾಸಗಿ ಪಾಲುದಾರರಿಗೆ ಈ ಯೋಜನೆಯಲ್ಲಿ ನೀಡಿರುವ ಅನುದ್ದೇಶಿತ ಆದಾಯದ ಮೂಲಗಳು, ರಿಯಾಯಿತಿಗಳು ಹಾಗೂ ಸೌಲಭ್ಯಗಳನ್ನು ಮೌಲ್ಯಮಾಪನ ಮಾಡಿ ಯೋಜನಾ ತಾಂತ್ರಿಕ ವರದಿಯ ಐ.ಆರ್.ಆರ್. ಹಾಗೂ ಎನ್.ಪಿ.ವಿ.ಗಳನ್ನು ಪ್ರಸಕ್ತ ಸಂದರ್ಭಕ್ಕೆ ಅನುಗುಣವಾಗಿ ಪರಿಷ್ಕರಿಸಲು ಸರ್ಕಾರವು ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. (ಪುಟ ಸಂಖ್ಯೆ: 16 ರಿಂದ 44)

16. ಕ್ರಿಯಾ ಒಪ್ಪಂದದ ಅನುಚ್ಛೇಧ 4 ರಡಿಯಲ್ಲಿ ಅಧಿಕಾರದತ್ತ ಸಮಿತಿಯ ಕಾರ್ಯವ್ಯಾಪ್ತಿ, ನಿರ್ದೇಶನಗಳು ಹಾಗೂ ಇತಿಮಿತಿಗಳ ಬಗ್ಗೆ ಚರ್ಚಿಸಲಾಗಿದೆ. ಅಧಿಕಾರದತ್ತ ಸಮಿತಿಯನ್ನು 01.04.1997ರ ಸರ್ಕಾರಿ ಆದೇಶದ ಅನುಗುಣವಾಗಿ ಸೃಜಿಸಲಾಗಿದೆ. ಅಧಿಕಾರದತ್ತ ಸಮಿತಿಯು ಕ್ರಿಯಾ ಒಪ್ಪಂದದ ಪಾಲನೆ ಹಾಗೂ ಅನುಷ್ಠಾನದ ಗುರುತರ ಜವಾಬ್ದಾರಿಯನ್ನು

ನಿರ್ವಹಿಸಬೇಕಾಗಿದ್ದಾಗಿಯೂ ಸಹ ಈ ಕೆಳಗೆ ಉಲ್ಲೇಖಿಸಿರುವ ಯೋಜನಾ ಅನುಷ್ಠಾನದ ಪ್ರಮುಖ ನ್ಯೂನ್ಯತೆಗಳು, ವೈಫಲ್ಯತೆಗಳು ಹಾಗೂ ಬದಲಾವಣೆಗಳ ಬಗ್ಗೆ ಕೂಲಂಕುಷವಾಗಿ ವಿಶ್ಲೇಷಿಸದೇ ಇರುವುದು ನಡಾವಳಿಗಳಿಂದ ಸ್ಪಷ್ಟವಾಗಿದೆ:-

1. ಯೋಜನಾ ಅನುಷ್ಠಾನಕ್ಕೆ ಅವಶ್ಯಕವಿರುವ ಜಮೀನಿನ ವಿಸ್ತೀರ್ಣ ಘಟಕವಾರು ಅವಶ್ಯಕತೆ, ಸ್ಥಳ, ಗ್ರಾಮವಾರು ಹಾಗೂ ಸರ್ವೆ ನಂಬರುವಾರು ವಿವರಗಳನ್ನು ಯೋಜನಾ ತಾಂತ್ರಿಕ ವರದಿ, ಭಾರತ್ ಫೋರ್ಜ್ ಲಿಮಿಟೆಡ್ ಸಂಸ್ಥೆಯ ವರದಿಗಳ ಹಿನ್ನಲೆಯಲ್ಲಿ ಇತ್ಯರ್ಥಗೊಳಿಸದೇ ಇರುವುದು.
2. ಬಿ.ಎಂ.ಐ.ಸಿ. ಯೋಜನಾ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಪ್ರಥಮವಾಗಿ ದಾಖಲಿಸಲಾದ ಸಾರ್ವಜನಿಕ ಹಿತಾಸಕ್ತಿ ಪ್ರಕರಣ ಸಂಖ್ಯೆ: 29221/97 ಅನ್ವಯಿಸುವಂತೆ ಕ್ರಿಯಾ ಒಪ್ಪಂದದ ಹಿನ್ನಲೆಯಲ್ಲಿ ಪ್ರತಿವಾದವನ್ನು ಮಂಡಿಸುವಲ್ಲಿ ಸಕ್ರಿಯವಾಗಿ ಭಾಗವಹಿಸದೇ ಇರುವುದು. ಈ ಪ್ರಕರಣದಲ್ಲಿ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆಯವರು ನ್ಯಾಯವಾದಿಗಳನ್ನು ನೇಮಿಸಿ ಪ್ರತಿವಾದವನ್ನು ಮಂಡಿಸಿರುತ್ತಾರೆ.ಈ ವರದಿಯಲ್ಲಿ ಟೋಲ್ ರಸ್ತೆಗೆ ಪ್ರಥಮ ಸ್ಥರದಲ್ಲಿ ಅವಶ್ಯಕವೆಂದು ತಿಳಿಸಲಾದ 5119 ಎಕರೆಗಳ ಬದಲಾಗಿ 6999 ಎಕರೆಗಳನ್ನು ಕ್ರಿಯಾ ಒಪ್ಪಂದದಲ್ಲಿ ಸೇರ್ಪಡೆ ಮಾಡಿರುವ ಬಗ್ಗೆ ಉಲ್ಲೇಖಿಸಲಾಗಿದೆ. ಈ 6999 ಎಕರೆಗಳಿಗೆ ಅನ್ವಯಿಸುವಂತೆ ವಿವರಗಳನ್ನು ಅಧಿಕಾರದತ್ತ ಸಮಿತಿಯ ಅನುಮೋದನೆ ಇಲ್ಲದೇ ಮಾನ್ಯ ಉಚ್ಛ ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ.
3. ಈ ಎಲ್ಲಾ ಬೆಳವಣಿಗೆಗಳ ಹಿನ್ನಲೆಯಲ್ಲೂ ಪ್ರಸ್ತಾವಿತ ಸೋಮಶೇಖರರೆಡ್ಡಿಯವರ ಪ್ರಕರಣವು ಅಧಿಕಾರದತ್ತ ಸಮಿತಿಯ ಕಾರ್ಯಸೂಚಿಯಲ್ಲಿ ಉಲ್ಲೇಖವಾಗಿರುವುದಿಲ್ಲ.
4. ನಗರ ಸಮುಚ್ಛಯ 1ನ್ನು ಸ್ಥಳಾಂತರಿಸುವ ಬಗ್ಗೆ ಅಧಿಕಾರದತ್ತ ಸಮಿತಿಗೆ ಮಾಹಿತಿ ಇದ್ದಾಗ್ಯೂ ಈ ಪ್ರಸ್ತಾವನೆಯನ್ನು ಸಚಿವ ಸಂಪುಟಕ್ಕೆ ಸಲ್ಲಿಸಲು ಕ್ರಮ ಕೈಗೊಂಡಿರುವುದಿಲ್ಲ. ಲೋಕೋಪಯೋಗಿ ಇಲಾಖೆಯು ದಿನಾಂಕ: 17.07.1997ರಂದು ಜಾರಿಗೊಳಿಸಿದ ಸರ್ಕಾರಿ ಆದೇಶದಲ್ಲಿ ನಗರ ಸಮುಚ್ಛಯ 1ನ್ನು ಕೆಂಗೇರಿ ಬದಲಾಗಿ ಬಿಡದಿ ಎಂದು ನಮೂದಿಸಲಾಗಿದೆ. 06.04.1998ರಂದು ಅಧಿಕಾರದತ್ತ ಸಮಿತಿಯು ಈ ಬಗ್ಗೆ ಚರ್ಚಿಸಿದೆ. ಅಂದರೆ, ಚರ್ಚೆಯ ಪೂರ್ವದಲ್ಲೇ ಹಸ್ತಾಂತರದ ಆದೇಶ ಜಾರಿಗೊಂಡಿದ್ದಾಗ್ಯೂ ಸಹ ಈ ಗುರುತರ ವೈಫಲ್ಯದ ಬಗ್ಗೆ ಅಧಿಕಾರದತ್ತ ಸಮಿತಿಯು ಪ್ರತಿಕ್ರಿಯಿಸಿರುವುದಿಲ್ಲ.
5. ಅಧಿಕಾರದತ್ತ ಸಮಿತಿಯು ದಿನಾಂಕ 07.05.2008 ರ ನಂತರ ಯಾವುದೇ ಸಭೆಗಳನ್ನು ನಡೆಸಿರುವುದಿಲ್ಲ. ನಡೆಸಲಾದ ಸಭೆಗಳಲ್ಲಿ ನ್ಯಾಯಾಲಯದ ತೀರ್ಪುಗಳ ಹಿನ್ನಲೆಯಲ್ಲಿ ಕ್ರಿಯಾ ಒಪ್ಪಂದದ ಪಾಲನೆಯನ್ನು ಪರಿವೀಕ್ಷಣೆಗಾಗಿ ಸಂಪೂರ್ಣವಾಗಿ ವಿಫಲವಾಗಿದೆ.
6. ಹಲವಾರು ಪ್ರಕರಣಗಳಲ್ಲಿ ಕಿಂಗ್ ಅಂಡ್ ಪ್ಯಾಟ್ರಿಡ್ಜ್ ಸಂಸ್ಥೆಯು ಕೆ.ಐ.ಎ.ಡಿ.ಬಿ.ಯನ್ನು ಪ್ರತಿನಿಧಿಸಿದ್ದು, ಆಕ್ಷೇಪಣೆಯನ್ನು ದಾಖಲಿಸಿದೆ. ವಾಸ್ತವಿಕವಾಗಿ ಈ ಸಂಸ್ಥೆ ನೈಸೆಲ್

ಪರವಾಗಿಯೂ ಪ್ರಕರಣವನ್ನು ನಿರ್ವಹಿಸಿದೆ. ಈ ಬಗ್ಗೆಯೂ ಅಧಿಕಾರದತ್ತ ಸಮಿತಿ ಗಮನ ಹರಿಸಿರುವುದಿಲ್ಲ.

7. **A.I.M.O.** ಹಾಗೂ ಶ್ರೀ ಜೆ.ಸಿ. ಮಾಧುಸ್ವಾಮಿ, ಶ್ರೀ ಬಿ.ವಿ. ಶ್ರೀರಾಮುಲ್ಲು ಪ್ರಕರಣದಲ್ಲಿ ಮಾನ್ಯ ಉಚ್ಛ ನ್ಯಾಯಾಲಯವು ಎಲ್ಲಾ ಮೇಲ್ಮನವಿಗಳನ್ನು ಕ್ರೋಢೀಕರಿಸಿ, ಸಾರ್ವಜನಿಕ ಹಿತಾಸಕ್ತಿ ಪ್ರಕರಣಗಳೂ ಸೇರಿದಂತೆ ಒಂದೇ ಸ್ತರದಲ್ಲಿ ಇತ್ಯರ್ಥಗೊಳಿಸಿರುತ್ತದೆ. ಸಾರ್ವಜನಿಕ ಹಿತಾಸಕ್ತಿ ಪ್ರಕರಣಕ್ಕೆ ಅನ್ವಯಿಸುವಂತೆ ಅಧಿಕಾರದತ್ತ ಸಮಿತಿ ಯಾವುದೇ ಆಸಕ್ತಿ ವಹಿಸಿರುವುದಿಲ್ಲ.

8. ಸಚಿವ ಸಂಪುಟವು 30.08.2007ರಂದು ತ್ರಿಪಕ್ಷೀಯ ಒಪ್ಪಂದದ ಕಂಡಿಕೆ 1.1.ಅನ್ನು ರದ್ದುಗೊಳಿಸುವ ಬಗ್ಗೆ ನಿರ್ಧಾರವನ್ನು ಕೈಗೊಂಡಿದ್ದಾಗ್ಯೂ ಸಹ ಅಧಿಕಾರದತ್ತ ಸಮಿತಿ ಈ ನಿರ್ಧಾರವನ್ನು ಚರ್ಚಿಸಿರುವುದಿಲ್ಲ. ವಾಸ್ತವಿಕವಾಗಿ ದಿನಾಂಕ: 27.08.2008ರಂದು ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆಯ ಮಟ್ಟದಲ್ಲಿ ಅನುಮೋದನೆ ನೀಡಲಾಗಿದೆ. ಆದರೆ ಅಧಿಕಾರದತ್ತ ಸಮಿತಿಯ ಕಾರ್ಯಸೂಚಿಯಲ್ಲಿ ಈ ವಿಷಯವನ್ನು ಸೇರ್ಪಡೆ ಮಾಡಲಾಗಿದೆ. ಆದರೆ ನಡಾವಳಿಯನ್ನು ಗಮನಿಸಿದರೆ ಈ ಬಗ್ಗೆ ಅಧಿಕಾರದತ್ತ ಸಮಿತಿಯು ಚರ್ಚೆ ಕೈಗೊಳ್ಳದೇ ಇರುವುದು ಸ್ಪಷ್ಟವಾಗಿದೆ. ರಾಜ್ಯ ಸರ್ಕಾರವು 18.10.2008 ಆದೇಶದ ಮುಖಾಂತರ ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ.ಸಿ. ಪಟೇಲ್ ತನಿಖಾ ಆಯೋಗವನ್ನು ಹಿಂಪಡೆದಿದೆ. ದಿನಾಂಕ: 23.10.2008ರ ಆದೇಶದ ಮುಖಾಂತರ ಗ್ಲೋಬಲ್ ಟೆಂಡರ್ ಪ್ರಸ್ತಾವನೆಯನ್ನು ಹಿಂಪಡೆದಿದೆ. ಈ ಹಿನ್ನಲೆಯಲ್ಲಿ ರಿಟ್ ಅರ್ಜಿ ಸಂಖ್ಯೆ: 327/2006 ಹಾಗೂ 545/2007ರನ್ನು ಮಾನ್ಯ ಸರ್ವೋಚ್ಛ ನ್ಯಾಯಾಲಯವು ರದ್ದು ಮಾಡಿದೆ. ಆದರೆ ಪ್ರಸ್ತಾವಿತ ರಿಟ್ ಅರ್ಜಿಗಳಲ್ಲಿ 09.08.2002ರ ತ್ರಿಪಕ್ಷೀಯ ಒಪ್ಪಂದದ ಅಡಿಯಲ್ಲಿ ಅನಧಿಕೃತವಾಗಿ ಸೃಜಿಸಲಾದ ಜಮೀನಿನ ಮಾರಾಟದ ಸೌಲಭ್ಯದ ಬಗ್ಗೆ ಪ್ರತಿಪಾದನೆ ಇರುವುದಿಲ್ಲ. ಈ ಹಿನ್ನಲೆಯಲ್ಲಿ ತ್ರಿಪಕ್ಷೀಯ ಒಪ್ಪಂದದ ಕಂಡಿಕೆ 1.1.ಅನ್ನು 30.08.2007ರ ಸಚಿವ ಸಂಪುಟದ ನಿರ್ಧಾರಕ್ಕೆ ಅನುಗುಣವಾಗಿ ರದ್ದುಗೊಳಿಸಲು ಸರ್ಕಾರವು ಕಾನೂನು ರೀತಿಯ ಕ್ರಮ ಜರುಗಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. (ಪುಟ ಸಂಖ್ಯೆ: 44 ರಿಂದ 53)

*17. ಅನುಚ್ಛೇದ-8ಕ್ಕೆ ಸಂಬಂಧಿಸಿದಂತೆ ಸಮಿತಿಯ ವಿಶ್ಲೇಷಣೆ ಹಾಗೂ ಶಿಫಾರಸ್ಸುಗಳು ಕೆಳಕಂಡಂತಿವೆ:*

*1. ಈ ವರದಿಯಲ್ಲಿ ಪ್ರತಿಪಾದಿಸಿರುವಂತೆ ಯೋಜನಾ ಅನುಷ್ಠಾನದ ಸೆಕ್ಷನ್ 3 ರ ಅಡಿಯಲ್ಲಿ ಭೂಸ್ವಾಧೀನ ಪ್ರಕ್ರಿಯೆ ವಿವಿಧ ಸ್ತರಗಳಲ್ಲಿ ಮುಂದುವರಿಯದೇ ಉಳಿದಿರುವ ಜಮೀನಿನ ವಿಸ್ತೀರ್ಣ 2898.28 ಎಕರೆಗಳಾಗಿರುತ್ತದೆ. ಕೆ.ಐ.ಎ.ಡಿ.ಬಿ. ಅಧಿನಿಯಮದಡಿ ಕಲಂ 28(1) ರಡಿಯಲ್ಲಿ ಅಂತಿಮ ಅಧಿಸೂಚನೆಯಾಗದೆ ಉಳಿದಿರುವ ಈ ಜಮೀನನ್ನು ಕೆ.ಐ.ಎ.ಡಿ.ಬಿ. ಅಧಿನಿಯಮದ ಕಲಂ 4 ರ ಅಡಿಯಲ್ಲಿ ಸ್ವಾಧೀನ ಪ್ರಕ್ರಿಯೆಯಿಂದ ಹೊರತುಪಡಿಸಲು ಸರ್ಕಾರವು ಕ್ರಮ ಕೈಗೊಳ್ಳಬೇಕೆಂದು*

ಸಮಿತಿಯು ಶಿಫಾರಸ್ಸು ಮಾಡುತ್ತದೆ. ಇದೇ ರೀತಿಯಲ್ಲಿ ಸೆಕ್ಷನ್ 'ಬಿ' ಮತ್ತು 'ಸಿ' ಗೆ ಅನ್ವಯಿಸುವಂತೆ 4634 ಎಕರೆಗಳ ವಿಸ್ತೀರ್ಣದ ಖಾಸಗಿ ಜಮೀನನ್ನು ಸ್ವಾಧೀನ ಪ್ರಕ್ರಿಯೆಯಿಂದ ಹೊರತುಪಡಿಸಲು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಯೋಜನಾ ಅನುಷ್ಠಾನದ ಸ್ತರವಾರು ಹಾಗೂ ಪ್ರವರ್ಗವಾರು ವಿವರಗಳು ಕೆಳಕಂಡಂತಿದೆ:

(ಎಕರೆಗಳಲ್ಲಿ)

| | | |
|---|---|---|
| 1. | ಸೆಕ್ಷನ್ 'ಎ' ಭಾಗದ 3(1) ರಡಿಯಲ್ಲಿದ್ದು 1(3) ರಡಿಯಲ್ಲಿ ಮುಂದುವರಿಯದೇ ಯೋಜನೆಗೆ ಬಳಕೆಯಾಗದಿರುವ ಜಮೀನುಗಳು | 749.27 |
| 2. | 1(3) ರಲ್ಲಿ ಅಧಿಸೂಚನೆಗೊಂಡು 28(1) ರಡಿಯಲ್ಲಿ ಮುಂದುವರಿಯದೇ ಯೋಜನೆಗೆ ಬಳಕೆಯಾಗದಿರುವ ಜಮೀನುಗಳು | 145.16 |
| 2. | ಸೆಕ್ಷನ್ 'ಎ' ಭಾಗದ ಪೆರಿಫೆರಲ್ ಮತ್ತು ಲಿಂಕ್ ರಸ್ತೆಯಲ್ಲಿ 28(1) ರಡಿಯಲ್ಲಿ 28(4)ಕ್ಕೆ ಮುಂದುವರೆಯದೆ ಯೋಜನೆಗೆ ಬಳಕೆಯಾಗದಿರುವ ಜಮೀನುಗಳು | 1434.00 |
| 3. | ಪೆರಿಫೆರಲ್ ರಸ್ತೆಗೆ ಸಂಬಂಧಿಸಿದಂತೆ ಹೆಚ್ಚುವರಿ ಜಮೀನುಗಳು | 518.35 |
| 4. | ಲಿಂಕ್ ರಸ್ತೆಗೆ ಸಂಬಂಧಿಸಿದಂತೆ ಹೆಚ್ಚುವರಿ ಜಮೀನುಗಳು | 50.38 |
| | ಒಟ್ಟು | 2898.36 |

(ಎಕರೆಗಳಲ್ಲಿ)

| | | |
|---|---|---|
| 1. | ಸೆಕ್ಷನ್ 'ಬಿ' ಮತ್ತು 'ಸಿ' ಭಾಗದಲ್ಲಿ 3(1) ಮತ್ತು 1(3) ರಡಿ ಬಾಕಿ ಇರುವ ಜಮೀನುಗಳು (ದಿನಾಂಕ 03.06.1997 ರ ಪಟ್ಟಿಯ ಅನುಸಾರ ಪರಿಶೀಲನೆಯ ಷರತ್ತಿಗೊಳಪಟ್ಟು) | 2217.00 |
| 2. | ಪಟ್ಟಣ-1 (ಸ್ಪಷ್ಟನೆ ಷರತ್ತಿಗೆ ಒಳಪಟ್ಟು) | 504.00 |
| 3. | ಪಟ್ಟಣ-2 ಮತ್ತು 3 | 571.00 |
| 4. | ಸೆಕ್ಷನ್ ಬಿ ಮತ್ತು ಸಿ ಭಾಗದ ವೇಗದ ಹೆದ್ದಾರಿ 28(1) (ಸ್ಪಷ್ಟನೆ ಷರತ್ತಿಗೆ ಒಳಪಟ್ಟು) | 1342.00 |
| | ಒಟ್ಟು | 4634.00 |

<u>ಸೆಕ್ಷನ್ 'ಬಿ' ಮತ್ತು 'ಸಿ' ಮತ್ತು ನಗರ ಸಮುಚ್ಚಯಗಳಿಗೆ ಅನ್ವಯಿಸುವಂತೆ ಸರ್ಕಾರಿ ಜಮೀನಿನ ಗುತ್ತಿಗೆಯನ್ನು ಪ್ರಥಮ ಸ್ತರದಲ್ಲಿ ರದ್ದುಗೊಳಿಸಲು ಸರ್ಕಾರವು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಖಾಸಗಿ ಹಾಗೂ ಸರ್ಕಾರಿ ಜಮೀನಿಗೆ ಒಳಪಟ್ಟಂತೆ ಕ್ರೋಢೀಕೃತವಾಗಿ 11,660(7532 ಖಾಸಗಿ + 3528 ಸರ್ಕಾರಿ) ಎಕರೆ ಜಮೀನನ್ನು ಖಾಸಗಿ ಪಾಲುದಾರರಿಂದ ಈ ಕೂಡಲೇ ಹಿಂಪಡೆಯಲು ಸರ್ಕಾರವು ಕಾನೂನು ರೀತ್ಯಾ ಕ್ರಮ ಜರುಗಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.</u>

ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನ ಕಂಡಿಕೆ 51 ರ ಹಿನ್ನೆಲೆಯಲ್ಲಿ ಪೆರಿಫೆರಲ್ ರಸ್ತೆ ಮತ್ತು ಲಿಂಕ್ ರಸ್ತೆಗೆ ಹೆಚ್ಚುವರಿಯಾಗಿ ನೀಡಿರುವ 605.25 ಎಕರೆ ವಿಸ್ತೀರ್ಣದ ಜಮೀನನ್ನು ಹಿಂಪಡೆಯಲು ಸರ್ಕಾರವು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಈಗಾಗಲೇ ನೀಡಿರುವ ಖಾಸಗಿ ಜಮೀನಿನ ಮೌಲ್ಯಮಾಪನ ಮಾಡಿ ಟಿ.ಡಿ.ಆರ್. ಹಾಗೂ ಎನ್.ಪಿ.ವಿ.ಗಳನ್ನು ಪರಿಷ್ಕರಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಈ ಕ್ರಮಗಳನ್ನು ಜಾರಿಗೊಳಿಸುವ ಪೂರ್ವದಲ್ಲಿ ಲೆಕ್ಕಾಚಾರಗಳ ಅನುಗುಣವಾಗಿ ನಮೂದಿಸಿರುವ 605.25 ಎಕರೆ

ವಿಸ್ತೀರ್ಣ ಪ್ರದೇಶದ ಸರ್ವೇಕ್ಷಣೆಯನ್ನು ಕೈಗೊಂಡು ವಾಸ್ತವಿಕವಾಗಿ ಬಳಕೆಯಾಗಿರುವ ವಿಸ್ತೀರ್ಣವನ್ನು ಲೋಕೋಪಯೋಗಿ ಇಲಾಖೆಯು ದೃಢೀಕರಿಸಿಕೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

ಕೆ.ಐ.ಎ.ಡಿ.ಬಿ. ಸಂಸ್ಥೆ ಹಾಗೂ ಲೋಕೋಪಯೋಗಿ ಇಲಾಖೆ ಸಲ್ಲಿಸಿರುವ ಅಂಕಿ ಅಂಶಗಳ ಮೇಲೆ ಈ ಹೆಚ್ಚುವರಿಯನ್ನು ಲೆಕ್ಕಾಚಾರದ ಅನುಗುಣವಾಗಿ ಇತ್ಯರ್ಥಗೊಳಿಸಿ ನಮೂದಿಸಲಾಗಿದೆ. ಜಂಟಿ ಸರ್ವೇಕ್ಷಣೆಯ ಅನುಗುಣವಾಗಿ ಖಾಸಗಿ ಪಾಲುದಾರರು ಪ್ರಾಥಮಿಕ ಅಧಿಸೂಚನೆ ಅಂದರೆ 28(I) ವ್ಯಾಪ್ತಿಯ ಸುಮಾರು 49 ಎಕರೆ ವಿಸ್ತೀರ್ಣದ ಜಮೀನನ್ನು ಅನಧಿಕೃತವಾಗಿ ಬಳಸಿರುವುದು ಸ್ಪಷ್ಟವಾಗಿದೆ.ರಸ್ತೆಯ ವಾಸ್ತವಿಕ ಪಂಕ್ತೀಕರಣದ ಅವಲಭ್ಯತೆ, ಕ್ಷೇಡಸ್ಟಲ್ ಮ್ಯಾಪುಗಳ ಅನುಪಸ್ಥಿತಿ ಹಾಗೂ ಸ್ಥಳ ಪರಿವೀಕ್ಷಣೆ ಕೈಗೊಳ್ಳುವಲ್ಲಿ ಅನುಚ್ಛೇಧ 4 ರಲ್ಲಾಗಿರುವ ಲೋಪದೋಷಗಳು ಇತ್ಯಾದಿಗಳಿಂದಾಗಿ ಸಮಿತಿಯ ನಿರ್ದೇಶನಗಳನುಸಾರವಾಗಿ ಸರ್ವೇಕ್ಷಣೆ ಕೈಗೊಂಡ ಸ್ತರದವರೆಗೂ ಈ ವೈಫಲ್ಯತೆ ವ್ಯಕ್ತವಾಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಲೋಕೋಪಯೋಗಿ ಇಲಾಖೆಯು ಈ ವರದಿ ಸಲ್ಲಿಸಿದ ತಕ್ಷಣ ಸೆಕ್ಷನ್ 'ಬಿ' ಮತ್ತು 'ಸಿ' ಭಾಗದಲ್ಲಿ ಹಾಗೂ ವೇಗದ ಹೆದ್ದಾರಿಯ ಉಳಿದ ಭಾಗದಲ್ಲಿ ಅಧಿಕೃತ ಮಾನದಂಡಗಳ ಆಧಾರದ ಮೇಲೆ ಜಮೀನಿನ ಬಳಕೆ, ಅವಶ್ಯಕತೆಯ ಬಗ್ಗೆ ನಿರ್ದಿಷ್ಟ ಅಂಕಿ ಅಂಶಗಳನ್ನು ಇತ್ಯರ್ಥಗೊಳಿಸಬೇಕೆಂದು ಸಮಿತಿಯು ಒತ್ತಾಯಪೂರ್ವಕವಾಗಿ ಆಗ್ರಹಿಸುತ್ತದೆ. ಅನಧಿಕೃತವಾಗಿ ಖಾಸಗಿ ಪಾಲುದಾರರು ಬಳಸಿರುವ 28(1) ರ ವ್ಯಾಪ್ತಿಯ ಜಮೀನಿಗೆ ಸಂಬಂಧಿಸಿದಂತೆ ಕಾನೂನು ರೀತ್ಯಾ ಕ್ರಮ ಜರುಗಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಯೋಜನಾ ಅನುಷ್ಠಾನದ 19 ವರ್ಷಗಳ ನಂತರ ಈ ಗುರುತರ ವೈಫಲ್ಯತೆ ಸ್ಪಷ್ಟವಾಗಿರುವುದು ಇಲಾಖಾ ಕಾರ್ಯವೈಖರಿಗೆ ಕೈಗನ್ನಡಿಯಾಗಿದೆ. ಆದುದರಿಂದ ಈ ಲೋಪಕ್ಕೆ ಕಾರಣರಾದ ಅಧಿಕಾರಿ/ಸಿಬ್ಬಂದಿ ವರ್ಗದವರನ್ನು ಗುರುತಿಸಿ ಅವರ ವಿರುದ್ಧ ಶಿಸ್ತಿನ ಕ್ರಮ ಜರುಗಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

ಸೋಮಶೇಖರ ರೆಡ್ಡಿ ಪ್ರಕರಣದ ಕಂಡಿಕೆ ತೀರ್ಪಿನ ಅನುಗುಣವಾಗಿ ಖಾಸಗಿ ಪಾಲುದಾರರು ನಗರ ಸಮುಚ್ಛಯಗಳ ಅಭಿವೃದ್ಧಿಯನ್ನು ವೇಗದ ಹೆದ್ದಾರಿ ಸಂಪೂರ್ಣಗೊಳಿಸಿದ ನಂತರ ಜಾರಿಗೊಳಿಸಬೇಕಾಗುವುದು. ಸರ್ವೋಚ್ಛ ನ್ಯಾಯಾಲಯ ಸೋಮಶೇಖರ ರೆಡ್ಡಿ ತೀರ್ಪನ್ನು ಪುನರುಚ್ಚರಿಸಿದೆ. ಖಾಸಗಿ ಪಾಲುದಾರರು ಹಾಗೂ ಸರ್ಕಾರವು ಈ ಪ್ರಕರಣದ ತೀರ್ಪಿನ ಪಾಲನೆಗೆ ಬದ್ಧವಾಗಿರುವುದಾಗಿ ಪ್ರಮಾಣೀಕರಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಖಾಸಗಿ ಪಾಲುದಾರರು ನಗರ ಸಮುಚ್ಛಯಗಳ ಅಭಿವೃದ್ಧಿಗಾಗಿ ಈವರೆವಿಗೂ ಯಾವುದೇ ಅಭಿವೃದ್ಧಿಯನ್ನು ಕೈಗೊಂಡಿರುವುದಿಲ್ಲ. ಆದಾಗ್ಯೂ, ಈ ವರದಿಯಲ್ಲಿ ಪ್ರತಿಪಾದಿಸಿರುವಂತೆ ನಗರ ಸಮುಚ್ಛಯ-1 ಕ್ಕೆ ಖಾಸಗಿ ಜಮೀನು ಹಾಗೂ ಉಳಿದ ನಗರ ಸಮುಚ್ಛಯಗಳಿಗೆ ಅನ್ವಯಿಸುವಂತೆ ಸರ್ಕಾರಿ ಜಮೀನನ್ನು ಹಸ್ತಾಂತರಿಸಲಾಗಿದೆ. ಪ್ರಸ್ತಾವಿತ ತೀರ್ಪಿನ ಹಿನ್ನಲೆಯಲ್ಲಿ ನಗರ ಸಮುಚ್ಛಯಗಳಿಗೆ ನೀಡಲಾಗಿರುವ ಖಾಸಗಿ ಹಾಗೂ ಸರ್ಕಾರಿ ಜಮೀನನ್ನು ಪ್ರಸಕ್ತ ಸ್ಥಿತಿಯಲ್ಲಿ ಹಿಂಪಡೆಯಬೇಕೆಂದು ಸಮಿತಿಯು ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತದೆ.

1. [illegible] ವ್ಯಾಪ್ತಿಯಲ್ಲಿ 20 ಹಳ್ಳಿಗಳ ಅನುಪಾತಿನ 422.35 ಎಕರೆ ವಿಸ್ತೀರ್ಣದ 20 [illegible] ನೈಸೆಲ್ ಸಂಸ್ಥೆಯ ಪರವಾಗಿ ಸ್ವಾಧೀನ ಪ್ರಕ್ರಿಯೆಗೆ ಒಳಪಡಿಸಲಾಗಿದೆ. ಈ ಪೈಕಿ [illegible] ಎಕರೆ ವಿಸ್ತೀರ್ಣದ ಪ್ರದೇಶವನ್ನು ಈಗಾಗಲೇ ಹಸ್ತಾಂತರಿಸಲಾಗಿದೆ. ನಿಯಮಾವಳಿಗಳ [illegible] ಕೆರೆಗಳನ್ನು ದರಖಾಸ್ತು ಮಾಡಲು ಅವಕಾಶವಿರುವುದಿಲ್ಲ. ಇದಲ್ಲದೆ, ಕರ್ನಾಟಕದ [illegible] ನ್ಯಾಯಾಲಯವು 32343/1995 ಸಾರ್ವಜನಿಕ ಹಿತಾಸಕ್ತಿ ಪ್ರಕರಣದಲ್ಲಿ ಕೆರೆಗಳ [illegible] ನಿಯಂತ್ರಿಸಲು ಯಾವುದೇ ಜಮೀನನ್ನು ಹಂಚಿಕೆ ಮಾಡುವುದಾಗಲೀ ಅಥವಾ [illegible] ಸ್ವರೂಪದಲ್ಲಿ ನೀಡುವುದಾಗಲೀ ನಿರ್ಬಂಧಿಸಲಾಗಿದೆ ಎಂಬ ಆದೇಶವನ್ನು [illegible] ಸಮಿತಿಯು ಗಮನಿಸಿದೆ. ಇದಲ್ಲದೆ, ನ್ಯಾಷನಲ್ ಗ್ರೀನ್ ಟ್ರಿಬ್ಯೂನಲ್ ಸಹ [illegible] ಹಸ್ತಾಂತರವನ್ನು ನಿರ್ಬಂಧಿಸಿರುವ ಹಿನ್ನಲೆಯಲ್ಲಿ ಈ ಪ್ರದೇಶವನ್ನು ಹಿಂಪಡೆಯಲು [illegible] ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ವಿವರಗಳು ಕೆಳಕಂಡಂತಿವೆ:

| ಕ್ರ. ಸಂ. | ಸ.ನಂ./ಗ್ರಾಮ | ವಿಸ್ತೀರ್ಣ | ಹಸ್ತಾಂತರಿಸಿದ ವಿಸ್ತೀರ್ಣ | ಷರಾ |
|---|---|---|---|---|
| 1. | 40/ಮುಂಗನಹಳ್ಳಿ | 6.22 | 6.22 | ರಸ್ತೆ – 30 ಗುಂಟೆ |
| 2. | 46/ಬೇಗೂರು | 6.05 | 6.05 | 10 – ಗುಂಟೆ |
| 3. | 33/ಕಮ್ಮನಹಳ್ಳಿ | 18.37 | 2.30 | 1ಎ-30ಜಿ ರಸ್ತೆ ಮುಚ್ಚಿದ ರಸ್ತೆ |
| 4. | 13/ದೊಡ್ಡತೊಗೂರು | 44-31 | 44-31 | 5ಎ-35ಜಿ ಮುಚ್ಚಿದ ರಸ್ತೆ |
| 5. | 33/ಗೊಲ್ಲಹಳ್ಳಿ | 19-13 | 5.02 | 4ಎ-15ಜಿ ಬಳಕೆಗೊಂಡ ರಸ್ತೆ |
| 6. | 71/ಗೊಲ್ಲಹಳ್ಳಿ | 37-13 | 5-00 | 2ಎಕರೆ ರೋಡ್ ಗಾಗಿ ರಸ್ತೆ |
| 7. | 9/ರಾಮಸಂದ್ರ | 7-00 | 3-00 | 1ಎ 30ಜಿ ರಸ್ತೆಗಾಗಿ ಬಳಕೆಗೊಂಡಿದೆ |
| 8. | 46/ರಾಮಸಂದ್ರ | 28-01 | 1-00 | 30ಜಿ ರಸ್ತೆಗಾಗಿ ಬಳಕೆಗೊಂಡಿದೆ |
| 9. | 48/ಮಾದಾವರ | 43-38 | 1-01 | ಈಗ ರಸ್ತೆಗಾಗಿ ಬಳಕೆಗೊಂಡಿದೆ |
| 10. | 24/ವರಾಹಸಂದ್ರ | 13-00 | 13-00 | ರಸ್ತೆಗಾಗಿ ಬಳಕೆಯಾಗದಿರುವುದು |
| 11. | 4/ಹಮ್ಮಿಗೆಪುರ | 4-11 | 4-11 | –"– |
| 12. | 25/ಹಮ್ಮಿಗೆಪುರ | 8-25 | 7-25 | –"– |
| 13. | 113/ದೊಡ್ಡತೊಗೂರು | 12-39 | 12-39 | –"– |
| 14. | 43/ಬಿರಬೇನ ಅಗ್ರಹಾರ | 29-10 | 28-10 | –"– |
| 15. | 31/ಕೂನಪ್ಪನ ಅಗ್ರಹಾರ | 28-10 | 28-10 | –"– |
| 16. | 18/ಮುಂಗನಹಳ್ಳಿ | 4-00 | 4-00 | –"– |
| 17. | 43/ಮುಂಗನಹಳ್ಳಿ | 6-22 | 6-22 | –"– |
| 18. | 25/ಗೋಣಿಪುರ | 8-26 | 8-26 | –"– |
| 19. | 45/ಗೋಣಿಪುರ | 17-28 | 17-28 | –"– |
| 20 | 50/ಗೋಣಿಪುರ | 12-14 | 12-14 | –"– |
| | ಒಟ್ಟು | 422.35 | 213.06 | |

2. ಈ [illegible] ಪ್ರತಿಪಾದಿಸಿರುವಂತೆ 12.02.2004 ರಂದು ಅನುಮೋದಿತವಾದ ಓ.ಡಿ.ಪಿ. [illegible] ಪಂಕ್ತೀಕರಣವನ್ನು ಇತ್ಯರ್ಥಗೊಳಿಸಲಾಗಿದೆ. ಈ ಪಂಕ್ತೀಕರಣ ಮೂಲ ಕ್ರಿಯಾ [illegible] ಪಂಕ್ತೀಕರಣಕ್ಕಿಂತ ವಿಭಿನ್ನವಾಗಿದ್ದಾಗ್ಯೂ ಸಹ ಓ.ಡಿ.ಪಿ. ಪಂಕ್ತೀಕರಣದ ಅನುಗುಣವಾಗಿ [illegible] ಸಮಗ್ರ ಜಮೀನು ಹಲವಾರು ಪ್ರಕರಣಗಳಲ್ಲಿ ಕ್ರಿಯಾ ಒಪ್ಪಂದದಲ್ಲಿ ನಮೂದಿಸಿರುವ

ಜಮೀನಾಗಿರುತ್ತದೆ. ಅಂದರೆ, ಓ.ಡಿ.ಪಿ. ಸಂಸ್ತೀಕರಣಕ್ಕೆ ಅವಶ್ಯಕವಿರುವ ಸಮಗ್ರ ಜಮೀನನ್ನು **FWA** ಮತ್ತು **Non FWA** ಎಂದು ವರ್ಗೀಕರಿಸಬಹುದಾಗಿದೆ. ಇದರಿಂದಾಗಿ ಹಲವಾರು ಪ್ರಕರಣಗಳಲ್ಲಿ ಮೂಲ ಕ್ರಿಯಾ ಒಪ್ಪಂದದಲ್ಲಿ ನಮೂದಿಸಲಾದ ಜಮೀನುಗಳನ್ನೂ ಸಹ ಪರಿಷ್ಕೃತ ಅಲೈನ್‌ಮೆಂಟ್ ಅನುಗುಣವಾಗಿ ಅವಶ್ಯಕತೆ ಇಲ್ಲದಿದ್ದರೂ ಸ್ವಾಧೀನ ಪ್ರಕ್ರಿಯೆಗೆ ಒಳಪಡಿಸಿರುವ ಬಗ್ಗೆ ಸಮಿತಿಗೆ ಮಾಹಿತಿ ಇದೆ. ಸಮಿತಿಯ ಸ್ಥಳ ಪರಿವೀಕ್ಷಣೆಯ ಸಂದರ್ಭದಲ್ಲಿ ಅನಾವಶ್ಯಕವಾಗಿ ಚಿಕ್ಕತೋಗೂರು, ದೊಡ್ಡ ತೋಗೂರು, ಕೋನಪ್ಪನ ಅಗ್ರಹಾರ, ಬೆರಟೇನ ಅಗ್ರಹಾರ, ಗೋವಿಂದ ಶೆಟ್ಟಿ ಪಾಳ್ಯ ಮತ್ತು ತೋಟದ ಗುಡದ ಹಳ್ಳಿ ಗ್ರಾಮಗಳ ವ್ಯಾಪ್ತಿಯ ಜಮೀನನ್ನು ಭೂ ಸ್ವಾಧೀನಕ್ಕೆ ಒಳಪಡಿಸಿರುವುದಾಗಿ ಸಂತ್ರಸ್ತರು ಸಮಿತಿಗೆ ಮೌಖಿಕವಾಗಿ ತಿಳಿಸಿರುತ್ತಾರೆ. ವಾಸ್ತವಿಕವಾಗಿ ಈ ಜಮೀನುಗಳು ಪರಿಷ್ಕೃತ ಅಲೈನ್‌ಮೆಂಟ್ ಅನುಗುಣವಾಗಿ ಯೋಜನಾ ಅನುಷ್ಠಾನಕ್ಕೆ ಅವಶ್ಯವಿಲ್ಲದೇ ಇರುವುದರಿಂದ ಸ್ವಾಧೀನ ಪ್ರಕ್ರಿಯೆಯಿಂದ ಹೊರತು ಪಡಿಸಬೇಕೆಂದು ಕೋರಿರುತ್ತಾರೆ. ಈ ಪ್ರವೃತ್ತಿಗಳನ್ನು ಗಮನಿಸಿದಲ್ಲಿ, ಪರಿಷ್ಕೃತ ಹಾಗೂ ಮೂಲ ಅಲೈನ್‌ಮೆಂಟ್ ಈ ಎರಡೂ ವ್ಯಾಪ್ತಿಯಲ್ಲಿ ಜಮೀನಿನ ಅವಶ್ಯಕತೆ ಮರುಕಳಿಸಿರುವ ಸಾಧ್ಯತೆಯಿದೆ ಎಂದು ಸಮಿತಿ ತೀರ್ಮಾನಿಸುತ್ತದೆ. ಈ ಹಿನ್ನೆಲೆಯಲ್ಲಿ ಎರಡೂ ಅಲೈನ್‌ಮೆಂಟ್‌ಗಳಿಗೂ ಅವಶ್ಯಕತೆ ಇಲ್ಲದೆ ಸ್ವಾಧೀನ ಪ್ರಕ್ರಿಯೆಗೆ ಒಳಪಡಿಸಲಾಗಿರುವ ಜಮೀನಿನ ಬಗ್ಗೆ ಆಮೂಲಾಗ್ರ ಮಾಹಿತಿಯನ್ನು ಸಂಗ್ರಹಿಸಿ, ಸರ್ವೇಕ್ಷಣೆಯ ಆಧಾರದ ಮೇಲೆ ಅವಶ್ಯಕವಿಲ್ಲದೇ ಇರುವ ಜಮೀನನ್ನು ಭೂ ಸ್ವಾಧೀನದಿಂದ ಹೊರತುಪಡಿಸಲುಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತದೆ.

4. ಬಿ.ಎಂ.ಐ.ಸಿ. ಯೋಜನಾ ಅನುಷ್ಠಾನದಲ್ಲಿ ಜಮೀನಿನ ವಿಸ್ತೀರ್ಣ, ಸ್ಥಳ ಹಾಗೂ ಪ್ರವರ್ಗಗಳು ಹಲವಾರು ಬಾರಿ ಪರಿಷ್ಕೃತವಾಗಿರುವುದನ್ನು ಸಮಿತಿಯು ಗಮನಿಸಿದೆ. ಇದಲ್ಲದೆ, ಓ.ಡಿ.ಪಿ. ಸಂಸ್ತೀಕರಣ ಅನುಮೋದನೆಯಾದ ಮೇಲೆ ಖಾಸಗಿ ಪಾಲುದಾರರು ಬೆಂಗಳೂರಿನ ಆಸುಪಾಸಿನ ಸೆಕ್ಷನ್ 'ಎ' ಆಸುಪಾಸಿನಲ್ಲಿ ಹೆಚ್ಚುವರಿ ಜಮೀನಿನ ಅವಶ್ಯಕತೆಯನ್ನು ಬಿಂಬಿಸಿರುವುದು ಓ.ಡಿ.ಪಿ. ಅಧ್ಯಾಯ 6 ರಲ್ಲಿ ವ್ಯಕ್ತವಾಗಿದೆ. ಮುಂದುವರಿದಂತೆ 2014 ರಲ್ಲಿ ಖಾಸಗಿ ಪಾಲುದಾರರು ಸಂಪೂರ್ಣವಾಗಿ ವಿಭಿನ್ನವಾದ ಜಮೀನಿನ ಅವಶ್ಯಕತೆಯ ಬಗ್ಗೆ ಪ್ರತಿಪಾದಿಸಿರುತ್ತಾರೆ. ಈ ಎಲ್ಲಾ ಪ್ರತಿಪಾದನೆಗಳು ಕ್ರಿಯಾ ಒಪ್ಪಂದದೊಡನೆ ಸಲ್ಲಿಸಲಾದ ಭಾರತ್ ಫೋರ್ಜ್ ಲಿಮಿಟೆಡ್ ನಮೂದಿಸಿದ ಅವಶ್ಯಕತೆಗಿಂತ ವಿಭಿನ್ನವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಖಾಸಗಿ ಪಾಲುದಾರರು ಕ್ರಿಯಾ ಒಪ್ಪಂದವನ್ನು ಅಕ್ಷರಶಃ ಅಥವಾ ತಾತ್ವಿಕವಾಗಿ ಪಾಲಿಸುವಲ್ಲಿ ವಿಫಲವಾಗಿರುವುದು ಸ್ಪಷ್ಟವಾಗಿದೆ. ಇದಲ್ಲದೆ, ಅನುಚ್ಛೇಧ 5 ರಡಿಯಲ್ಲಿ ಅವರು ಪಾವತಿಸಲು ಬದ್ಧರಾಗಿರುವ ಪರಿಹಾರ ಮೊತ್ತದ ಬಗ್ಗೆ ನಗರ ಸಮುಚ್ಛಯ 1 ಕ್ಕೆ ಅನ್ವಯಿಸುವಂತೆ ನ್ಯಾಯಾಲಯದಲ್ಲಿ ರಿಟ್ ಅರ್ಜಿ ದಾಖಲಿಸಿ ಹಿಂಪಡೆದಿರುತ್ತಾರೆ. ಸರ್ಕಾರಿ ಜಮೀನಿಗೆ ಅನ್ವಯಿಸುವಂತೆ ಕ್ರಿಯಾ ಒಪ್ಪಂದದ ಷರತ್ತುಗಳನ್ನು ಸಡಿಲಿಸಿ 40 ವರ್ಷಗಳ ಗುತ್ತಿಗೆ ಆಧಾರದ ಮೇಲೆ ಪ್ರತಿ ಎಕರೆಗೆ 10 ರೂ.ಗಳಂತೆ ಜಮೀನನ್ನು ನೀಡಿ ಸರ್ಕಾರವು ಯೋಜನಾ ಅನುಷ್ಠಾನಕ್ಕೆ ಸಹಾಯ ಹಸ್ತವನ್ನು ನೀಡಿದೆ. ನಗರ

*ಸಮುಚ್ಛಯಗಳಲ್ಲಿ ವಾಣಿಜ್ಯ ಬಳಕೆಗಾಗಿ ಉಪಯೋಗಿಸುವ ಜಮೀನಿಗೆ ಅನ್ವಯಿಸುವಂತೆ 1999-2000 ದ ಮಾರ್ಗಸೂಚಿ ದರಗಳಲ್ಲಿ ಖರೀದಿಸುವ ಅವಕಾಶವನ್ನು ಕಲ್ಪಿಸಿಕೊಡಲಾಗಿದೆ. ಈ ಎಲ್ಲಾ ಸೌಲಭ್ಯಗಳನ್ನು ವಿಸ್ತರಿಸಿದ್ದಾಗ್ಯೂ ಸಹ ಖಾಸಗಿ ಪಾಲುದಾರರು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ನ್ಯಾಯಾಂಗ ನಿಂದನಾ ಅರ್ಜಿಗಳನ್ನು ದಾಖಲಿಸಿರುತ್ತಾರೆ. ಇದಲ್ಲದೆ, ಜಮೀನಿನ ವಾಸ್ತವಿಕ ಅಗತ್ಯತೆಯನ್ನು ಸರ್ಕಾರಕ್ಕೆ ಸಂಪೂರ್ಣ ವಿವರಗಳೊಂದಿಗೆ ಸಲ್ಲಿಸಿರುವುದಿಲ್ಲ. ಯೋಜನೆಗೆ ಅವಶ್ಯಕವಿರುವ ಸರ್ಕಾರಿ ಜಮೀನಿನ ಸಂಪೂರ್ಣ ವಿಸ್ತೀರ್ಣವನ್ನು ಅಂದರೆ ಸೆಕ್ಷನ್ 'ಎ', 'ಬಿ' ಮತ್ತು 'ಸಿ' ಗೆ ಸಮಗ್ರವಾಗಿ ಅವಶ್ಯಕವಿರುವ ಜಮೀನನ್ನು 1999 ರಲ್ಲಿಯೇ ಹಸ್ತಾಂತರಿಸಲಾಗಿದೆ. ಈ ಎಲ್ಲಾ ಬೆಳವಣಿಗೆಗಳನ್ನು ಗಮನಿಸಿದಾಗ ಅನುಚ್ಛೇದ ೫ ರಡಿಯಲ್ಲಿ ಸರ್ಕಾರವು ಸಮಗ್ರವಾಗಿ ಕ್ರಮಗಳನ್ನು ಕೈಗೊಂಡಿರುವುದು ಸ್ಪಷ್ಟವಾಗುತ್ತದೆ. ಖಾಸಗಿ ಪಾಲುದಾರರಿಗೆ ಫೈನಾನ್ಷಿಯಲ್ ಕ್ಲೋಷರ್ ಸಾಧಿಸಲು ಸಹಾಯ ಮಾಡುವ ಉದ್ದೇಶದಿಂದ ಅವರ ಕೋರಿಕೆಗೆ ಅನುಗುಣವಾಗಿ ಭೂ ಸ್ವಾಧೀನ ಪ್ರಕ್ರಿಯೆಯನ್ನು ತ್ವರಿತಗೊಳಿಸಲಾಗಿದೆ. ಅಂದರೆ ಖಾಸಗಿ ಪಾಲುದಾರರು ಫೈನಾನ್ಷಿಯಲ್ ಕ್ಲೋಷರ್ ಆದ ನಂತರ ದಾಖಲಿಸಿರುವ ಭೌತಿಕ ಪ್ರಗತಿ ಕ್ರಿಯಾ ಒಪ್ಪಂದದ ಅನುಚ್ಛೇದ 6 ರಲ್ಲಿ ನಿಗದಿಪಡಿಸಿದ ಗುರಿಗಳಿಗೆ ಅನುಗುಣವಾಗಿ ಇರುವುದಿಲ್ಲ.*

ಖಾಸಗಿ ಪಾಲುದಾರರು **Transferrable Toll Road Assets** ಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ಕ್ರಿಯಾ ಒಪ್ಪಂದದ ಷರತ್ತುಗಳ ಅನುಗುಣವಾಗಿ ಈ ಸೌಲಭ್ಯವನ್ನು 30 ವರ್ಷಗಳ ನಂತರ ಹಿಂದಿರುಗಿಸುವ ಬಗ್ಗೆ ಸೂಕ್ತ ಷರತ್ತುಗಳನ್ನು ಸೇರ್ಪಡೆ ಮಾಡುವಂತೆ 03.0೫.2009 ಹಾಗೂ 22.08.2009 ರಂದು ಮಾನ್ಯ ಅಡ್ವೊಕೇಟ್ ಜನರಲ್‌ರವರು ಕೆ.ಐ.ಎ.ಡಿ.ಬಿ. ಗೆ ಸೂಚಿಸಿರುತ್ತಾರೆ. ಹಾಗೂ ಕರಡನ್ನೂ ಸಹ ಸಲ್ಲಿಸಿರುತ್ತಾರೆ. ಆದಾಗ್ಯೂ, ಖಾಸಗಿ ಪಾಲುದಾರರು ಬಿ.ಎಂ.ಐ.ಸಿ.ಎ.ಪಿ.ಎ. ಸಂಸ್ಥೆಗೆ ಭೂ ಬಳಕೆಯ ಬದಲಾವಣೆ, ವಸತಿ ಸಮುಚ್ಛಯ ಕಟ್ಟಲು ನಕ್ಷೆಗಳ ಅನುಮೋದನೆ ಹಾಗೂ ನಿವಾಸಿ ಬಡಾವಣೆಗಳನ್ನು ಅಭಿವೃದ್ಧಿಪಡಿಸಲು ಅರ್ಜಿಯನ್ನು ಸಲ್ಲಿಸಿರುವುದನ್ನು ಸಮಿತಿಯು ಗಮನಿಸಿದೆ. ವಾಸ್ತವಿಕವಾಗಿ ಸೆಕ್ಷನ್ 'ಎ' ವ್ಯಾಪ್ತಿಯಲ್ಲಿ ಟೋಲ್ ರಸ್ತೆ ಅನುಷ್ಠಾನವಾದ ನಂತರ ಉಳಿದ ಜಮೀನನ್ನು ಟ್ರಕ್ ಟರ್ಮಿನಲ್, ಸೇವಾ ಕ್ಷೇತ್ರ ಇತ್ಯಾದಿ ಪೂರಕ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು ಯೋಜನಾ ತಾಂತ್ರಿಕ ವರದಿಯ ಅನುಗುಣವಾಗಿ ಬಳಸಬೇಕಾಗುವುದು. ಭೂಮಿಯನ್ನು ಕಳೆದುಕೊಂಡಿರುವ ಯೋಜನಾ ಸಂತ್ರಸ್ತರಿಗೆ ನಿವೇಶನಗಳನ್ನು ನೀಡುವ ಸಲುವಾಗಿ ಭೂ ಬಳಕೆಯ ಬದಲಾವಣೆಯನ್ನು ಖಾಸಗಿ ಪಾಲುದಾರರು ಕೋರಿದ್ದಾರೆ ಎಂಬ ಅಭಿಪ್ರಾಯ ಮೇಲ್ನೋಟಕ್ಕೆ ವ್ಯಕ್ತವಾಗುತ್ತದೆ. ಇದರ ವಸತಿ ಸಮುಚ್ಛಯಗಳನ್ನು ನಿರ್ಮಿಸಲು ಕೋರಿರುವ ಮಂಜೂರಾತಿ ಈ ಪ್ರತಿಪಾದನೆಗೆ ವ್ಯತಿರಿಕ್ತವಾಗಿದೆ. ಇದಕ್ಕೆ ಪೂರಕವಾಗಿ ಯೋಜನಾ ತಾಂತ್ರಿಕ ವರದಿಯಲ್ಲಿ ಪ್ರತಿಪಾದಿಸದೇ ಇರುವ ಅಭಿವೃದ್ಧಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಮಂಜೂರಾತಿ ಪ್ರಸ್ತಾವನೆಗಳನ್ನು ತಿರಸ್ಕರಿಸಬೇಕೆಂದು ಸಮಿತಿಯು ಅಭಿಪ್ರಾಯಿಸುತ್ತದೆ. ವಾಸ್ತವಿಕವಾಗಿ ಕ್ರಿಯಾ ಒಪ್ಪಂದದ ಅನುಚ್ಛೇದ 3.6.2 ರ ಅನುಗುಣವಾಗಿ ನಗರ ಸಮುಚ್ಛಯಗಳಲ್ಲಿ ಕೈಗೊಳ್ಳಬಹುದಾದ ಇತರೆ ಅಭಿವೃದ್ಧಿ ಕಾಮಗಾರಿಗಳನ್ನು

ಅನುಚ್ಛೇದ-4 ರ ಅನುಗುಣವಾಗಿ ನಿರ್ವಹಿಸಬೇಕಾಗುವುದು. ಅನುಚ್ಛೇದ-4 ರ ಅನುಗುಣವಾಗಿ ವಸತಿ, ವಾಣಿಜ್ಯ ಅಭಿವೃದ್ಧಿ ಹಾಗೂ ಸಂಬಂಧಿತ ಪೂರಕ ಸೌಲಭ್ಯಗಳನ್ನು ನಗರ ಸಮುಚ್ಛಯಗಳಲ್ಲಿ ಮಾತ್ರ ಒದಗಿಸಲು ಅವಕಾಶ ಕಲ್ಪಿಸಲಾಗಿದೆ. ಪೆರಿಫೆರಲ್ ಮತ್ತು ಲಿಂಕ್ ರಸ್ತೆಯ ಆಸುಪಾಸಿನಲ್ಲಿ ವಸತಿ ನಿರ್ಮಾಣದ ಅಭಿವೃದ್ಧಿಗೆ ಸಂಬಂಧಿಸಿದಂತೆ ಯಾವುದೇ ಸೌಲಭ್ಯವನ್ನು ಕ್ರಿಯಾ ಒಪ್ಪಂದದಲ್ಲಿ ಪ್ರತಿಪಾದಿಸಿರುವುದಿಲ್ಲ. ಆದಾಗ್ಯೂ, ನೈಸೆಲ್/ನೀಸೆಲ್ ಸಂಸ್ಥೆ ಸೆಕ್ಷನ್ 'ಎ' ಭಾಗದ 756.33 ಎಕರೆ ಜಮೀನಿಗೆ ಅನ್ವಯಿಸುವಂತೆ ಮಾರಾಟ, ಜಂಟಿ ಅಭಿವೃದ್ಧಿ ಹಾಗೂ ಪರಭಾರೆ ಮಾಡುವ ಒಪ್ಪಂದಗಳನ್ನು ಜಾರಿಗೊಳಿಸಿದ್ದು, ಐನೆಕ್ ಸಂಸ್ಥೆಯು ಕೈಗೊಂಡಿರುವ ಋಣಭಾರ ಪತ್ರಗಳ ವಿಶ್ಲೇಷಣೆಯ ಅನುಗುಣವಾಗಿ ವಿವರಗಳು ಕೆಳಕಂಡಂತಿದೆ:

| ಕ್ರಮ ಸಂಖ್ಯೆ | ಗ್ರಾಮದ ಹೆಸರು | ಖಾಸಗಿ ಜಮೀನು (ಎಕರೆ) | ಮಾರ್ಗಸೂಚಿ ಬೆಲೆ (ರೂ.ಗಳಲ್ಲಿ) | ಮಾರುಕಟ್ಟೆ ಬೆಲೆ (ರೂ.ಗಳಲ್ಲಿ) | ಒಡಂಬಡಿಕೆ/ ಕರಾರಿನ ಸ್ವರೂಪ | ಅಭಿವೃದ್ಧಿದಾರರ ಹೆಸರು |
|---|---|---|---|---|---|---|
| 1. | ಕೆಂಗೇರಿ | 7.45 | 811305000 | 1947132000 | JDA | DDPL |
| | | 125.58 | 13675662000 | 32821588800 | Mortgage | TWIT & ECL |
| 2. | ಕೊಮ್ಮಘಟ್ಟ | 43.13 | 2818114200 | 2818114200 | JDA | UMR P ltd |
| | | 11.1 | 725274000 | 725274000 | Mortgage | TWIT & ECL |
| 3. | ರಾಮಸಂದ್ರ | 6.03 | 91933380 | 315200160 | Mortgage | TWIR & ECL |
| 4. | ಗೋಣಿಪುರ | 225 | 13231350000 | 13231350000 | Mortgage | TWIR & ECL |
| 5. | ಮಾದಾವರ | 13.35 | 267000000 | 267000000 | Sale | DGM |
| | | 5.8 | 116000000 | 116000000 | Sale | IMTMA |
| | | 3.82 | 76400000 | 76400000 | Sale | UMRPLTD |
| | | 10.23 | 802113840 | 802113840 | JDA | UMRPLTD |
| 6. | ಪಂತರ ಪಾಳ್ಯ | 24.93 | 3257852400 | 3257852400 | Mortgage | TWIR & ECL |
| 7. | ಪಿಲ್ಲಗಾನಹಳ್ಳಿ | 0.68 | 12240000 | 12240000 | Sale | Indrajith Lankesh |
| 8. | ಸೀಗೆಹಳ್ಳಿ | 38.78 | 1689256800 | 2027108160 | Mortgage | TWIR & ECL |
| 9. | ಶ್ರೀಕಂಠಪುರ ಎ | 3.8 | 57000000 | 66500000 | Sale | DGM |
| 10. | ಶ್ರೀಕಂಠಪುರ ಕೆ.ಜಿ. | 1.11 | 16650000 | 19425000 | Sale | DGM |
| 11. | ತಿಪ್ಪೂರು | 125.08 | 5993333280 | 5993333280 | Mortgage | TWIR & ECL |
| 12. | ವರಾಹಸಂದ್ರ | 15.43 | 403278480 | 806556960 | Mortgage | TWIR & ECL |
| 13. | ಹೆಮ್ಮಿಗೆಪುರ | 4.28 | 335586240 | 335586240 | Mortgage | TWIR & ECL |
| 14. | ಬಿ.ಎಂ. ಕಾವಲ್ | 9075 | 5138991000 | 5138991000 | Mortgage | TWIR & ECL |
| | ಒಟ್ಟು | 756.33 | 49519340620 | 70777766040 | | |

ಈ ಸಂದರ್ಭದಲ್ಲಿ ಸೋಮಶೇಖರ ರೆಡ್ಡಿ ಪ್ರಕರಣದ ಪ್ರತಿಪಾದನೆಗಳನ್ನು ಗಮನಿಸಿದರೆ ಖಾಸಗಿ ಪಾಲುದಾರರು ಟೋಲ್ ರಸ್ತೆಗೆ ೭೧೧೧ ಎಕರೆಗಳ ವಿಸ್ತೀರ್ಣವನ್ನು ಸಮರ್ಥಿಸಿಕೊಳ್ಳಲು ಪ್ರಮಾಣ ಪತ್ರ ಹಾಗೂ ತಕರಾರು ಅರ್ಜಿಗಳಲ್ಲಿ ಈ ಜಮೀನನ್ನು ರಸ್ತೆಯ ಹೊರತಾಗಿ ಬೇರೆ ಯಾವುದೇ ವಾಣಿಜ್ಯ ಅಭಿವೃದ್ಧಿಗಾಗಿ ಅಥವಾ ರಿಯಲ್ ಎಸ್ಟೇಟ್ ಅಭಿವೃದ್ಧಿಗಾಗಿ ಬಳಸುವುದಿಲ್ಲವೆಂದು ಪ್ರತಿಪಾದಿಸಿರುವುದನ್ನು ಸಮಿತಿ ಗಮನಿಸಿದೆ. ಈ ಪ್ರಮಾಣ ಪತ್ರಕ್ಕೆ ವ್ಯತಿರಿಕ್ತವಾಗಿ ನ್ಯಾಯಾಲಯಕ್ಕೆ

ಕೊಟ್ಟ ಭರವಸೆಗಳನ್ನು ಉಲ್ಲಂಘಿಸಿ ಹಾಗೂ ಕ್ರಿಯಾ ಒಪ್ಪಂದವನ್ನು ಉಲ್ಲಂಘಿಸಿ ಖಾಸಗಿ ಪಾಲುದಾರರು ಸೆಕ್ಷನ್ 'ಎ' ವ್ಯಾಪ್ತಿಯಲ್ಲಿ, ಅನಧಿಕೃತ ತ್ರಿಪಕ್ಷೀಯ ಒಪ್ಪಂದದ ನೆಪದಲ್ಲಿ ಜಂಟಿ ಅಭಿವೃದ್ಧಿ ಕರಾರುಗಳನ್ನು ಜಾರಿಗೊಳಿಸಿರುವುದು ಅಕ್ರಮ ಹಾಗೂ ಕಾನೂನು ಬಾಹಿರ ಎಂದು ಸಮಿತಿ ತೀರ್ಮಾನಿಸುತ್ತದೆ. ಈ ರೀತಿ ಖಾಸಗಿ ಪಾಲುದಾರರು 753 ಎಕರೆಗಳ ಜಮೀನನ್ನು ಮೂಲಭೂತ ಸೌಕರ್ಯದ ಬದಲು ರಿಯಲ್ ಎಸ್ಟೇಟ್ ವಹಿವಾಟಿಗಾಗಿ ಬಳಸಿರುತ್ತಾರೆ. ಇದೇ ಸ್ತರದಲ್ಲಿ ಕ್ರಿಯಾ ಒಪ್ಪಂದದ ಅನುಚ್ಛೇಧ 4 ರ ಅನುಗುಣವಾಗಿ ನಿರ್ಮಿಸಬೇಕಾದ ಪೂರಕ ಸೌಲಭ್ಯಗಳನ್ನು ಸಂಪೂರ್ಣವಾಗಿ ನಿರ್ಲ್ಯಕ್ಷಿಸಿರುತ್ತಾರೆ. ಅನುಚ್ಛೇಧ 4 ಅನುಗುಣವಾಗಿ ಎಕ್ಸ್‌ಪ್ರೆಸ್ ವೇ ಟೋಲ್ ಸೌಲಭ್ಯಗಳು, ರೆಸ್ಟೋರೆಂಟ್‌ಗಳು, ಪೆಟ್ರೋಲ್ ಬಂಕುಗಳು, ಇಂಟರ್ ಛೇಂಜ್ ವ್ಯಾಪ್ತಿಯ ಪ್ಲಾಜಾಗಳು, ಆಸ್ಪತ್ರೆಗಳು, ಶಾಲೆಗಳನ್ನು ನಿರ್ಮಾಣ ಮಾಡಬೇಕಾಗುವುದು. ಈ ಸಮಗ್ರ ಪೂರಕ ಸೌಲಭ್ಯಗಳ ಬಗ್ಗೆ ಖಾಸಗಿ ಪಾಲುದಾರರು ಸೆಕ್ಷನ್ 'ಎ' ವ್ಯಾಪ್ತಿಯಲ್ಲಿ ಸಂಪೂರ್ಣವಾಗಿ ನಿರ್ಲಕ್ಷಿಸಿ ಯಾವುದೇ ಪೂರಕ ಸೌಲಭ್ಯಗಳನ್ನು ಕಲ್ಪಿಸದೇ 8 ವರ್ಷಗಳಿಗೂ ಮೀರಿ ಅಕ್ರಮವಾಗಿ ಟೋಲ್ ಸಂಗ್ರಹಣೆ ಮಾಡುತ್ತಿರುವುದು ಖಾಸಗಿ ಪಾಲುದಾರರು ಮೂಲ ಧ್ಯೇಯೋದ್ದೇಶಗಳಿಗೆ ಸ್ಪಷ್ಟ ನಿದರ್ಶನವಾಗಿದೆ ಎಂದು ಸಮಿತಿ ತೀರ್ಮಾನಿಸುತ್ತದೆ. ಈ ಹಿನ್ನೆಲೆಯಲ್ಲಿ ಕ್ರಿಯಾ ಒಪ್ಪಂದದ ಅವಿಭಾಜ್ಯ ಅಂಗವಾಗಿರುವ ಅನುಚ್ಛೇಧ 4 ಅನ್ನು ಉಲ್ಲಂಘಿಸಿರುವ ಆಧಾರದ ಮೇಲೆ ಟೋಲ್ ಸಂಗ್ರಹಣೆಯನ್ನು ಸ್ಥಗಿತಗೊಳಿಸಲು ಮತ್ತೊಮ್ಮೆ ಸಮಿತಿಯು ಶಿಫಾರಸ್ಸು ಮಾಡುತ್ತದೆ.

ಟೋಲ್ ರಸ್ತೆ ಹಾಗೂ ಸಂಬಂಧಿತ ಪೂರಕ ಸೌಲಭ್ಯಗಳನ್ನು 30 ವರ್ಷಗಳ ನಂತರ ಸರ್ಕಾರಕ್ಕೆ ಹಿಂತಿರುಗಿಸಬೇಕಾಗುವುದು. ಈ ಹಿನ್ನೆಲೆಯಲ್ಲಿ ಸೆಕ್ಷನ್ 'ಎ' ವ್ಯಾಪ್ತಿಯಲ್ಲಿ ಭೂಮಿಯನ್ನು ಕಳೆದುಕೊಂಡ ಸಂತ್ರಸ್ತರಿಗೆ ಪುನರ್ ವಸತಿ ಸ್ವರೂಪದಲ್ಲಿ ನಿವೇಶನಗಳನ್ನು ಹಂಚಿದರೆ ಸರ್ಕಾರಕ್ಕೆ ರಿಯಾಯಿತಿ ಅವಧಿಯ ನಂತರ ಈ ಪ್ರದೇಶವನ್ನು ಹಿಂದಿರುಗಿಸುವಲ್ಲಿ ಸಂದಿಗ್ಧತೆ ಉಂಟಾಗುವುದು. ಭೂ ಬಳಕೆಯ ಬದಲಾವಣೆಗೆ ಸಂಬಂಧಿಸಿದಂತೆ ಕರ್ನಾಟಕದ ಮಾನ್ಯ ಉಚ್ಛ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ.37298-99/2013 ರ ತೀರ್ಪಿನಲ್ಲಿ ಭೂ ಬಳಕೆಯ ಪರಿವರ್ತನೆಯನ್ನು ಕೆ.ಟಿ.ಸಿ.ಪಿ. ಅಧಿನಿಯಮದ ಕಲಂ 14(ಎ) ಅಡಿಯಲ್ಲಿ ನಿಯಂತ್ರಿಸುವಂತೆ ಸೂಚಿಸಿದೆ. ಈ ಕಲಂ ಅಡಿಯಲ್ಲಿ ಭೂ ಬದಲಾವಣೆಯು ಸ್ಥಳೀಯ ಯೋಜನಾ ಪ್ರದೇಶದ ನಿರ್ವಹಣೆಗೆ ನಿರೂಪಿಸಲಾದ ಯಾವುದೇ ಮಾನದಂಡಗಳಿಗೆ ವ್ಯತಿರಿಕ್ತವಾಗಿರಬಾರದು ಎಂದು ಹೇಳಲಾಗಿದೆ. ಬಿ.ಎಂ.ಐ.ಸಿ. ಯೋಜನೆಗೆ ಅನ್ವಯಿಸುವಂತೆ 20.11.1995 ರ ಸರ್ಕಾರದ ಆದೇಶ, ಕ್ರಿಯಾ ಒಪ್ಪಂದ ಹಾಗೂ ಯೋಜನಾ ತಾಂತ್ರಿಕ ವರದಿಯಲ್ಲಿ ನಿರೂಪಿಸಿರುವ ಭೂ ಬಳಕೆಗೆ ಖಾಸಗಿ ಪಾಲುದಾರರು ಬದ್ಧವಾಗಬೇಕಾಗಿರುವುದು. ಇದಲ್ಲದೆ, ಕ್ರಿಯಾ ಒಪ್ಪಂದದ ಅನುಚ್ಛೇಧದ 3.5.1 ರ ಅನುಗುಣವಾಗಿ ಕೆ.ಟಿ.ಸಿ.ಪಿ. ಕಾಯಿದೆ 1961 ನಲ್ಲಿ ಉಲ್ಲೇಖಿಸಿರುವ ನಿರ್ಬಂಧನೆಗೆ ಒಳಪಟ್ಟಂತೆ ನಗರ ಸಮುಚ್ಛಯಗಳನ್ನು ಅಭಿವೃದ್ಧಿಪಡಿಸಬೇಕಾಗುವುದು ಎಂದು ತಿಳಿಸಲಾಗಿದೆ. ಈ ಪ್ರತಿಪಾದನೆ

ಸೆಕ್ಷನ್ 'ಎ' ಭಾಗದ ಟೋಲ್ ರಸ್ತೆಗಳಿಗೆ ಅನ್ವಯಿಸುವುದಿಲ್ಲ. ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಬಿ.ಎಂ.ಐ.ಸಿ.ಎ.ಪಿ.ಎ. ಕಟ್ಟುನಿಟ್ಟಾಗಿ ಕ್ರಿಯಾ ಒಪ್ಪಂದ ಹಾಗೂ ಯೋಜನಾ ತಾಂತ್ರಿಕ ವರದಿಯ ಮಾನದಂಡಗಳನ್ನು ಭೂ ಬಳಕೆ ಬದಲಾವಣೆಯ ಪ್ರಸ್ತಾವನೆಗಳನ್ನು ಇತ್ಯರ್ಥಗೊಳಿಸಲು ಪಾಲಿಸಬೇಕೆಂದು ಸಮಿತಿಯು ಆಗ್ರಹಿಸುತ್ತದೆ.

ಸೋಮಶೇಖರ ರೆಡ್ಡಿ ಪ್ರಕರಣದಲ್ಲಿ ನೈಸೆಲ್ ಸಂಸ್ಥೆ ದಾಖಲಿಸಿರುವ ಉತ್ತರದಲ್ಲಿ ನಗರ ಸಮುಚ್ಛಯಗಳಿಗೆ ಅನ್ವಯಿಸುವಂತೆ ಲಭ್ಯವಿರುವ ಭೂಮಿಯ ಪ್ರತಿಶತ 45 ಅನ್ನು ವಾಣಿಜ್ಯ ಬಳಕೆಗಾಗಿ ಮೀಸಲಾಗಿಡುವುದು ಎಂದು ನಿರ್ದಿಷ್ಟವಾಗಿ ಉಲ್ಲೇಖಿಸಿರುತ್ತಾರೆ. ಆದರೆ 12.02.2004 ರಂದು ಓ.ಡಿ.ಪಿ. ಯನ್ನು ಅನುಮೋದಿಸುವ ಸ್ತರದಲ್ಲಿ ವಾಣಿಜ್ಯ ಬಳಕೆಗೆ ಬಳಸಬಹುದಾದ ಜಮೀನಿನ ಗರಿಷ್ಠ ಮಿತಿಯನ್ನು ಪ್ರತಿಶತ 55 ಎಂದು ನಿರ್ಧರಿಸಲಾಗಿದೆ. ಇದರಿಂದಾಗಿ ನಗರ ಸಮುಚ್ಛಯಗಳ ಅಭಿವೃದ್ಧಿಗೆ ಕ್ರಿಯಾ ಒಪ್ಪಂದದ ಅನುಗುಣವಾಗಿ 13.194 ಎಕರೆಗಳನ್ನು ನಿಗದಿಪಡಿಸಿದ್ದು, ಈ ಪರಿಷ್ಕರಣೆಯಿಂದಾಗಿ 1319 ಎಕರೆಗಳನ್ನು ವಾಣಿಜ್ಯ ಬಳಕೆಗಾಗಿ ಹೆಚ್ಚುವರಿಯಾಗಿ ಒದಗಿಸಲಾಗಿದೆ ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. ಈ ಹಿನ್ನೆಲೆಯಲ್ಲಿ ಯೋಜನೆಯ ಹೂಡಿಕೆಯ ಮೇಲಿನ ಪ್ರತಿಫಲವೂ ಸಹ ಬದಲಾಗುವುದರಿಂದ ಪರಿಷ್ಕೃತ ಮಾನದಂಡಗಳನ್ನು ಅಳವಡಿಸಿ ಯೋಜನೆಯ ಐ.ಆರ್.ಆರ್. ಹಾಗೂ ಎನ್.ಪಿ.ವಿ. ಗಳನ್ನು ಪರಿಷ್ಕರಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

ಪ್ರಸಕ್ತವಾಗಿ ಖಾಸಗಿ ಪಾಲುದಾರರು ಸೆಕ್ಷನ್ 'ಎ', 'ಬಿ' ಮತ್ತು 'ಸಿ' ವ್ಯಾಪ್ತಿಯ ಟೋಲ್ ರಸ್ತೆ, **Transferrable Toll Road Assets** ಗಳನ್ನು ಟೋಲ್ ರಿಯಾಯಿತಿ ಅವಧಿಯ ನಂತರ ಹಿಂತಿರುಗಿಸಬೇಕಾಗುವುದು. 5 ನಗರ ಸಮುಚ್ಛಯ ವ್ಯಾಪ್ತಿಯಲ್ಲಿ ಇರುವ **Transferrable Townships Assets** ಗಳನ್ನು ಕ್ರಿಯಾ ಒಪ್ಪಂದದ ಅನುಗುಣವಾಗಿ ನಗರ ಸಮುಚ್ಛಯ ಸಂಪೂರ್ಣಗೊಂಡ ಒಂದು ವರ್ಷದ ನಂತರ ಸರ್ಕಾರಕ್ಕೆ ಹಿಂತಿರುಗಿಸಬೇಕಾಗುವುದು. ಕ್ರಿಯಾ ಒಪ್ಪಂದದ ಈ ಷರತ್ತನ್ನು ಪಾಲಿಸಲು ವಾಣಿಜ್ಯ ಉದ್ದೇಶಕ್ಕಾಗಿ ನೈಸೆಲ್/ನೀಸೆಲ್ ಸಂಸ್ಥೆ ಬಳಸಲು ಉದ್ದೇಶಿಸಿರುವ ಜಮೀನಿನ ಗ್ರಾಮವಾರು ಹಾಗೂ ಸರ್ವೆ ನಂಬರುವಾರು ವಿವರಗಳು ಅತ್ಯಾವಶ್ಯಕವಾಗಿರುತ್ತದೆ. ಲೋಕೋಪಯೋಗಿ ಇಲಾಖೆಯು ದಿನಾಂಕ 09.11.2009, 03.02.2010, 26.05.2010 ಹಾಗೂ 09.08.2011 ರಂದು ಸರ್ಕಾರಕ್ಕೆ ಹಿಂತಿರುಗಿಸಬೇಕಾದ ಜಮೀನಿಗೆ ಅನ್ವಯಿಸುವಂತೆ ವಿವರಗಳನ್ನು ಖಾಸಗಿ ಪಾಲುದಾರರಿಂದ ಕೋರಿರುವುದನ್ನು ಸಮಿತಿಯು ಗಮನಿಸಿದೆ. ಮಾನ್ಯ ಉಚ್ಛ ನ್ಯಾಯಾಲಯವು ಪ್ರಕರಣ ಸಂಖ್ಯೆ.3438/2010 ರಲ್ಲಿ ಈ ವಿವರಗಳ ಅವಶ್ಯಕತೆಯ ಬಗ್ಗೆ ಪ್ರತಿಪಾದಿಸಿದೆ. ಈ ಹಿನ್ನೆಲೆಯಲ್ಲಿ ಸರ್ಕಾರವು ಕಾನೂನು ರೀತ್ಯಾ ಕ್ರಮ ಜರುಗಿಸಿ ಅವಶ್ಯಕ ವಿವರಗಳನ್ನು ಕೂಡಲೇ ಪಡೆಯಲು

ಕ್ರಮ ಜರುಗಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಪ್ರಥಮ ಸ್ತರದಲ್ಲಿ ಸೆಕ್ಷನ್ 'ಎ' ವ್ಯಾಪ್ತಿಯಲ್ಲಿ Transferrable Toll Road Assets ವಿವರಗಳನ್ನು ಆದ್ಯತೆಯ ಮೇರೆಗೆ ಪಡೆಯಬೇಕೆಂದು ಸಮಿತಿಯು ಆಗ್ರಹಿಸುತ್ತದೆ. (ಪುಟ ಸಂಖ್ಯೆ: 53 ರಿಂದ 59)

18. ಕ್ರಿಯಾ ಒಪ್ಪಂದದ ಅನುಚ್ಛೇದ-6 ರ ಅಡಿಯಲ್ಲಿ ಟೋಲ್ ರಸ್ತೆಯ ಬಗ್ಗೆ ಪ್ರತಿಪಾದಿಸಲಾಗಿದೆ. ಅನುಚ್ಛೇಧ-6.3.1 ರ ಅನುಗುಣವಾಗಿ ಖಾಸಗಿ ಪಾಲುದಾರರು ಕ್ರಿಯಾ ಒಪ್ಪಂದದ ತಾಂತ್ರಿಕ ಮಾನದಂಡಗಳ ಅನುಗುಣವಾಗಿ ವಿನ್ಯಾಸಗೊಳಿಸಬೇಕಾಗುವುದು. ಟೋಲ್ ರಸ್ತೆಯ ಅನುಷ್ಠಾನವನ್ನು ಅನುಚ್ಛೇಧ-6.6.1.1 ರಿಂದ 6.6.1.6ರ ವರೆಗೆ 6 ಸ್ತರಗಳಲ್ಲಿ ಅನುಷ್ಠಾನಗೊಳಿಸುವ ಬಗ್ಗೆ ಪ್ರತಿಪಾದಿಸಲಾಗಿದೆ. ಈ ಪೈಕಿ, ಫೇಸ್-1 ಮತ್ತು ಫೇಸ್-2 ರಸ್ತೆಯನ್ನು ದಿನಾಂಕ 06.10.1999ರ ಪೂರಕ ಒಪ್ಪಂದದ ಮುಖಾಂತರ ಸೆಕ್ಷನ್ 'ಎ' ಎಂದು ನಮೂದಿಸಲಾಗಿದೆ. ಈ ಭಾಗದ ಯೋಜನೆಗೆ ಅನ್ವಯಿಸುವಂತೆ ಖಾಸಗಿ ಪಾಲುದಾರರು 64 ಕಿ.ಮೀ. ಫೇಸ್-1 ಹಾಗೂ ಫೇಸ್-2 ರಸ್ತೆಯ ನಕ್ಷೆಯನ್ನು ಲೋಕೋಪಯೋಗಿ ಇಲಾಖೆಗೆ ಸಲ್ಲಿಸಿರುತ್ತಾರೆ. ಈ ನಕ್ಷೆಯಲ್ಲಿ ಆಗಮನ ಹಾಗೂ ನಿರ್ಗಮನ ಪ್ರದೇಶ, ಸರ್ವೀಸ್ ರಸ್ತೆ, ಇಂಟರ್ ಛೇಂಜ್‌ಗಳು ಹಾಗೂ ಹಸಿರು ವಲಯಗಳನ್ನು ಗುರುತಿಸಿರುವುದಿಲ್ಲ. ಈ ನಕ್ಷೆಯನ್ನು ಲೋಕೋಪಯೋಗಿ ಇಲಾಖೆಗೆ ಸಲ್ಲಿಸಿರುತ್ತಾರೆ. ವಾಸ್ತವಿಕವಾಗಿ ಬಿ.ಎಂ.ಐ.ಸಿ.ಎ.ಪಿ.ಎ. ಪ್ರಾಧಿಕಾರಕ್ಕೆ ಬಿ.ಎಂ.ಐ.ಸಿ. ಯೋಜನೆಯ ನಕ್ಷೆಗಳ ಅನುಮೋದನೆ ನಿರ್ದಿಷ್ಟ ಅಧಿಕಾರವನ್ನು ನೀಡಿರುವ ಹಿನ್ನೆಲೆಯಲ್ಲಿ ಖಾಸಗಿ ಪಾಲುದಾರರು ಕೈಗೊಂಡಿರುವ ಕ್ರಮ ಕಾನೂನು ಬಾಹಿರವಾಗಿರುತ್ತದೆ. ಆದಾಗ್ಯೂ, ದಿನಾಂಕ 16.07.2002ರಂದು ಸ್ವೀಕೃತವಾದ ನಕ್ಷೆಗೆ ದಿನಾಂಕ 20.07.2007ರಂದು ಮುಖ್ಯ ಇಂಜಿನೀಯರ್, ಲೋಕೋಪಯೋಗಿ ಇಲಾಖೆಯವರು ಥೀಮ್ ಅಪ್ರೂವಲ್ ನೀಡಿರುತ್ತಾರೆ. ಈ ನಕ್ಷೆಯಲ್ಲಿ ಯೋಜನೆಗೆ ಈ ಸ್ತರದ ಅನುಷ್ಠಾನಕ್ಕೆ ಅವಶ್ಯಕವಿರುವ 3001 ಎಕರೆಗಳ ಜಮೀನಿನ ವಿವರಗಳು ಇರುವುದಿಲ್ಲ. ಇದೇ ಸಂದರ್ಭದಲ್ಲಿ ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿಯವರಾಗಿದ್ದ ಶ್ರೀ ಸಿ.ಆರ್. ರಮೇಶ್ ರವರು ನೈಸಲ್ ಸಂಸ್ಥೆಯ ನಿರ್ದೇಶಕರಾಗಿ ನಿವೃತ್ತಿಯ ನಂತರ ಕಾರ್ಯನಿರ್ವಹಿಸಿರುತ್ತಾರೆ. ಈ ಸಮಗ್ರ ಪ್ರಕ್ರಿಯೆಯು ಕ್ರಿಯಾ ಒಪ್ಪಂದದ ಉಲ್ಲಂಘನೆಯಾಗಿರುತ್ತದೆ.

ನೈಸಲ್/ನೀಸಲ್ ಸಂಸ್ಥೆಯು ಈ 64 ಕಿ.ಮೀ. ರಸ್ತೆಯನ್ನು ಕ್ರಿಯಾ ಒಪ್ಪಂದದ ಅನುಚ್ಛೇಧ-6.6.3ರ ಅನುಗುಣವಾಗಿ ದಿನಾಂಕ 29.06.2012ರೊಳಗಾಗಿ ಸಂಪೂರ್ಣಗೊಳಿಸಬೇಕಾಗಿತ್ತು. ಇದಲ್ಲದೆ, 142 ಕಿ.ಮೀ. ಉದ್ದದ ಟೋಲ್ ರಸ್ತೆಯನ್ನು ದಿನಾಂಕ 29.03.2014ರ ಒಳಗಾಗಿ ಸಂಪೂರ್ಣಗೊಳಿಸಬೇಕಾಗಿತ್ತು. ಆದರೆ, ಈವರೆವಿಗೂ ಪುಸ್ತಿತಿಯಲ್ಲಿರುವ 49 ಕಿ.ಮೀ. ರಸ್ತೆಯ ಕಾಮಗಾರಿಗಳನ್ನು ಖಾಸಗಿ ಪಾಲುದಾರರು ಸಂಪೂರ್ಣಗೊಳಿಸಿರುತ್ತಾರೆ. ಆದರೆ,

ಲೋಕೋಪಯೋಗಿ ಇಲಾಖೆಯು ಈ ವೈಫಲ್ಯತೆಯ ಬಗ್ಗೆ Default Notice ಅನ್ನು ಜಾರಿಗೊಳಿಸಿರುವುದಿಲ್ಲ. ವಾಸ್ತವಿಕವಾಗಿ ಸಚಿವ ಸಂಪುಟವು ಪ್ರಥಮ ಸ್ತರದಲ್ಲಿ ಎರಡು ಪಥದ ಟಾರ್ ರಸ್ತೆಯನ್ನು ಜಾರಿಗೊಳಿಸಿ (2 ವರ್ಷಗಳಿಗೆ) ನಾಲ್ಕು ಪಥಗಳನ್ನು ಕಾಂಕ್ರೀಟ್ ರಸ್ತೆಯಾಗಿ Financial Closure ಸಾಧಿಸಿದ 6 ವರ್ಷಗಳ ಅವಧಿಯಲ್ಲಿ ಸಂಪೂರ್ಣಗೊಳಿಸಬೇಕಾಗಿರುತ್ತದೆ. ಅಂದರೆ, ದಿನಾಂಕ 29.03.2012ರ ಒಳಗಾಗಿ 64 ಕಿ.ಮೀ. ಟೋಲ್ ರಸ್ತೆಯನ್ನು ಕಾಂಕ್ರೀಟ್‌ನಿಂದ ಸಂಪೂರ್ಣಗೊಳಿಸಬೇಕಾಗಿರುವುದು. ರಾಜ್ಯ ಸರ್ಕಾರವು ಖಾಸಗಿ ಪಾಲುದಾರರಿಗೆ ಬಂಡವಾಳ ಸೃಜನೆಯಲ್ಲಿ ಸಹಾಯ ಮಾಡಲು ತಾಂತ್ರಿಕ ಮಾನದಂಡಗಳನ್ನು ತಾತ್ಕಾಲಿಕವಾಗಿ ಸಡಿಲಗೊಳಿಸಿರುತ್ತಾರೆ. ಈ ಸೌಲಭ್ಯವನ್ನು ಖಾಸಗಿ ಪಾಲುದಾರರು ದುರುಪಯೋಗ ಮಾಡಿಕೊಂಡಿರುವುದು ಪ್ರಸಕ್ತ ಸ್ಥಿತಿಗತಿಗಳಿಂದ ಸಮಿತಿಗೆ ಸ್ಪಷ್ಟವಾಗಿದೆ. ಈವರೆವಿಗೂ ಕೇವಲ 49 ಕಿ.ಮೀ.ಗಳ ಮೋಟಾರಬಲ್ ರಸ್ತೆಯನ್ನು ಸಂಪೂರ್ಣಗೊಳಿಸಿರುತ್ತಾರೆ. 9.8 ಕಿ.ಮೀ. ವ್ಯಾಪ್ತಿಯ ಲಿಂಕ್ ರಸ್ತೆಯಲ್ಲಿ ಸುಮಾರು 8 ಕಿ.ಮೀ. ವ್ಯಾಪ್ತಿಗೆ ಕಾಂಕ್ರೀಟ್ ಅಳವಡಿಸಿರುತ್ತಾರೆ. ಅಂದರೆ, ಸರ್ಕಾರವು ನಿಗಧಿಪಡಿಸಿದ ಕಾಲಮಿತಿಯಲ್ಲಿ 41 ಕಿ.ಮೀ. ಪೆರಿಫೆರಲ್ ರಸ್ತೆ ಹಾಗೂ 13 ಕಿ.ಮೀ. ವೇಗದ ಹೆದ್ದಾರಿಯಲ್ಲಿ ಕಾಂಕ್ರೀಟ್ ರಸ್ತೆಯನ್ನು ನಿರ್ಮಿಸಿರುವುದಿಲ್ಲ. ಈ ಡಾಂಬರೀಕೃತ ರಸ್ತೆಗೆ ಟೋಲ್ ಸಂಗ್ರಹಣೆಯೂ ಸಹ 2008ರಿಂದ ಜಾರಿಯಲ್ಲಿದೆ. ಯೋಜನಾ ತಾಂತ್ರಿಕ ವರದಿಯ ಅನುಗುಣವಾಗಿ 2008-2009 ರಲ್ಲಿ ಟೋಲ್ ವಾರ್ಷಿಕ ಆದಾಯವು 28.39 ಕೋಟಿರೂ.ಗಳೆಂದು ಅಂದಾಜಿಸಲಾಗಿದೆ. ಟೋಲ್‌ನ ವಾರ್ಷಿಕ ಪ್ರಗತಿಯನ್ನು ಪ್ರತಿಶತ 17 ಎಂದು ನಿರ್ಧರಿಸಲಾಗಿದೆ. ಈ ಪೈಕಿ ಪ್ರತಿಶತ 10 ಟೋಲ್ ದರಗಳ ಪರಿಷ್ಕರಣೆ ಸೌಲಭ್ಯಗಳಿಂದಾಗಿರುತ್ತದೆ. ಹಾಗೂ ಪ್ರತಿಶತ 7 ವಾಹನದ ಸಂಚಾರದ ಪ್ರಗತಿಯಿಂದಾಗಿರುತ್ತದೆ. ಈ ಪ್ರಗತಿಯ ದರಗಳನ್ನು ಅಳವಡಿಸಿದಲ್ಲಿ 2015-16 ಕ್ಕೆ ವಾರ್ಷಿಕ ಟೋಲ್ ಸ್ವೀಕೃತಿ 88.84 ಕೋಟಿ ರೂ.ಗಳಾಗುವುದು. ಆದರೆ 2014-15 ನೇ ಸಾಲಿನ ನೈಸೆಲ್ ಸಂಸ್ಥೆಯ ಬ್ಯಾಲೆನ್ಸ್ ಶೀಟಿನ ಆದಾಯ 196 ಕೋಟಿ ರೂ.ಗಳಾಗಿರುತ್ತದೆ. ಇದನ್ನು ಗಮನಿಸಿದಾಗ ಯೋಜನಾ ತಾಂತ್ರಿಕ ವರದಿಯಲ್ಲಿ ಪ್ರಗತಿಯ ದರಗಳನ್ನು ಉದ್ದೇಶಪೂರ್ವಕವಾಗಿಯೇ ಕಡಿತಗೊಳಿಸಲಾಗಿದೆ ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. ಈ ಎಲ್ಲಾ ಅಂಶಗಳನ್ನು ಪರಿಗಣಿಸಿ ಸಮಿತಿಯು ಲೋಕೋಪಯೋಗಿ ಇಲಾಖೆಗೆ ಸ್ವತಂತ್ರವಾಗಿ ವಾಹನ ಸಂಚಾರ ಗಣತಿಯನ್ನು ಜಾರಿಗೊಳಿಸುವಂತೆ ಸೂಚಿಸಿದ್ದು, ದಿನಾಂಕ 27.02.2015 ರಿಂದ 02.03.2015 ರ ಅವಧಿಯಲ್ಲಿ ಲೋಕೋಪಯೋಗಿ ಇಲಾಖೆ ವಾಹನ ಗಣತಿಯನ್ನು ಕೈಗೊಂಡಿದೆ. ಈ ಗಣತಿಯ ಅನುಗುಣವಾಗಿ ದೈನಂದಿನ ಸರಾಸರಿ ಟೋಲ್ ಸಂಗ್ರಹಣೆ 88.40 ಲಕ್ಷ ರೂ.ಗಳಾಗಿದ್ದು, ವಾರ್ಷಿಕ ಸರಾಸರಿ ಆದಾಯ 322.66 ಕೋಟಿ ರೂ.ಗಳಾಗಿರುತ್ತದೆ. ಈ ಎಲ್ಲಾ ಅಂಶಗಳನ್ನು ಪರಿಗಣಿಸಿದರೆ ಸಮಗ್ರ ಚಿತ್ರಣ ಈ ರೀತಿ ಇದೆ:

(ಕೋಟಿ ರೂ.ಗಳಲ್ಲಿ)

| ಪಿ.ಟಿ.ಆರ್. ಆಧಾರಿತ ಅಂದಾಜು | ಬ್ಯಾಲೆನ್ಸ್ ಶೀಟ್ ಪ್ರಕಾರ ಟೋಲ್ ಸಂಗ್ರಹಣೆ (ನೀಸೆಲ್) | ಲೋಕೋಪಯೋಗಿ ಇಲಾಖೆ ಸಮೀಕ್ಷೆಯ ಪ್ರಕಾರ ಆದಾಯ | ಸರಾಸರಿ |
|---|---|---|---|
| 75 | 196 | 322.65 | 198 |

ಯೋಜನಾ ತಾಂತ್ರಿಕ ವರದಿಯ ಮಾನದಂಡಗಳನುಸಾರವಾಗಿ ಟೋಲ್ ಸ್ವೀಕೃತಿಯ ಪ್ರಗತಿಯ ದರವನ್ನು 17% ಎಂದು ನಿರ್ಧರಿಸಲಾಗಿದೆ. ಆದರೆ ವಾಸ್ತವಿಕವಾಗಿ ವಾಹನ ದಟ್ಟಣೆ ಹಾಗೂ ಟೋಲ್ ದರಗಳ ಪರಿಷ್ಕರಣೆ ಇವೆರಡನ್ನೂ ಪರಿಗಣಿಸಿದರೆ ಪ್ರಗತಿ 28.64% ಆಗುತ್ತದೆ. ಇದಲ್ಲದೆ, ಯೋಜನಾ ತಾಂತ್ರಿಕ ವರದಿಯ ಲೆಕ್ಕಾಚಾರಗಳಲ್ಲಿ ಲಿಂಕ್ ರಸ್ತೆಯ ಟೋಲ್ ಸಂಗ್ರಹಣೆಯ ಅಂಶ ಸೇರ್ಪಡೆಯಾಗಿರುವುದಿಲ್ಲ. ಯೋಜನಾ ತಾಂತ್ರಿಕ ವರದಿಯಲ್ಲಿ ಕೇವಲ 4 ಪ್ರವರ್ಗದ ವಾಹನಗಳನ್ನು ಪರಿಗಣಿಸಲಾಗಿದೆ. ಈ ಎಲ್ಲಾ ಅಂಶಗಳನ್ನು ಪರಿಗಣಿಸಿದರೆ ಟೋಲ್ ಸಂಗ್ರಹದ ಪ್ರವೃತ್ತಿಗಳನ್ನು ನ್ಯಾಯಬದ್ಧವಾಗಿ ಯೋಜನಾ ತಾಂತ್ರಿಕ ವರದಿಯಲ್ಲಿ ಪ್ರತಿಪಾದಿಸದೇ ಇರುವುದು ಸಮಿತಿಗೆ ಸ್ಪಷ್ಟವಾಗಿದೆ. ಅನುಚ್ಛೇಧ 22.5 ರ ಅಡಿಯಲ್ಲಿ ಖಾಸಗಿ ಪಾಲುದಾರರು ಬ್ಯಾಲೆನ್ಸ್ ಶೀಟ್‌ಗಳನ್ನೂ ಸಹ ಕೊಡದೇ, 2008 ರಿಂದ ಟೋಲ್ ಸಂಗ್ರಹಣೆಯ ನಿರ್ದಿಷ್ಟ ಅಂಕಿ ಅಂಶಗಳನ್ನು ಕೊಡಲೂ ಸಹ ನಿರಾಕರಿಸಿರುತ್ತಾರೆ. ಆದುದರಿಂದ ಸಮಿತಿಯ ನಿರ್ದೇಶನಗಳ ಅನುಗುಣವಾಗಿ ಲೋಕೋಪಯೋಗಿ ಇಲಾಖೆಯು ಜಾರಿಗೊಳಿಸಿದ ಗಣತಿಯ ಆಧಾರದ ಮೇಲೆ ಟೋಲ್ ದರಗಳ ಸ್ವೀಕೃತಿಯ ಅಂಕಿ ಅಂಶಗಳನ್ನು ನಿರ್ಧರಿಸಲಾಗಿದೆ. 2014-15 ನೇ ಸಾಲಿನ ವಾರ್ಷಿಕ ಆದಾಯವನ್ನು 322 ಕೋಟಿ ರೂ.ಗಳೆಂದು ಅಂದಾಜಿಸಲಾಗಿದೆ. ಯೋಜನಾ ತಾಂತ್ರಿಕ ವರದಿಯ ಅನುಗುಣವಾಗಿ ವಾಹನದ ಪ್ರಗತಿಯ ದರ 7% ಎಂದು ನಿರ್ಧರಿಸಲಾಗಿದೆ. 2000 ದಲ್ಲಿ ಅನುಷ್ಠಾನಗೊಳಿಸಲಾದ ಟೋಲ್ ರಿಯಾಯಿತಿ ಒಪ್ಪಂದದ ಅನುಗುಣವಾಗಿ ವಾರ್ಷಿಕವಾಗಿ ಟೋಲ್ ದರದ ಹೆಚ್ಚಳವನ್ನು 10% ಎಂದು ನಿರ್ಧರಿಸಲಾಗಿದೆ. ಅಂದರೆ ಕ್ರೋಢೀಕೃತವಾಗಿ ಟೋಲ್ ದರದ ಸ್ವೀಕೃತಿಯಲ್ಲಿ 17% ಪ್ರಗತಿಯನ್ನು ಪರಿಗಣಿಸಬೇಕಾಗುವುದು. ಈ ಮಾನದಂಡಗಳನ್ನು ಅಳವಡಿಸಿದಾಗ*2011-12 ರಿಂದ 2015-16 ರ ಅವಧಿಯವರೆಗೆ ಕ್ರೋಢೀಕೃತ ಟೋಲ್ ಸ್ವೀಕೃತಿಯು 1375 ಕೋಟಿ ರೂ.ಗಳಾಗುವುದು. ಕ್ರಿಯಾ ಒಪ್ಪಂದದ ಅನುಚ್ಛೇಧ 6 ಅನ್ನು ಈಗಾಗಲೇ ಪ್ರತಿಪಾದಿಸಿರುವಂತೆ ಖಾಸಗಿ ಪಾಲುದಾರರು ಉಲ್ಲಂಘಿಸಿರುವ ಹಿನ್ನೆಲೆಯಲ್ಲಿ ಈ ಮೊತ್ತವನ್ನು ವಸೂಲಾತಿ ಮಾಡಲು ಸರ್ಕಾರವು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.*

ಈ ಬೆಳವಣಿಗೆಗಳ ಹಿನ್ನೆಲೆಯಲ್ಲಿ, ಟೋಲ್ ಫೀ ಸಂಗ್ರಹಣೆಯನ್ನು ಅನಧಿಕೃತ ಎಂದು ಘೋಷಿಸಿ ಸರ್ಕಾರ ಈ ಟೋಲ್ ಸಂಗ್ರಹಣೆಯನ್ನು ಹಿಂಪಡೆಯಲು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತದೆ. ಇದಲ್ಲದೆ, ಕ್ರಿಯಾ ಒಪ್ಪಂದದ ಅನುಚ್ಛೇಧ-5.6.3 ಹಾಗೂ 5.6.1 ರ ಉಲ್ಲಂಘನೆಯ ಆಧಾರದ ಮೇಲೆ ಟೋಲ್ ಸಂಗ್ರಹಣೆಯನ್ನು ಸ್ಥಗಿತಗೊಳಿಸಲು

ಸರ್ಕಾರವು ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಸರ್ಕಾರವು ಶಿಫಾರಸ್ಸು ಮಾಡುತ್ತದೆ. ಈ ವರದಿಯಲ್ಲಿ ವ್ಯಾಪಕವಾಗಿ ಚರ್ಚಿಸಿರುವಂತೆ, ಖಾಸಗಿ ಪಾಲುದಾರರು ನ್ಯಾಯಾಲಯದ ತೀರ್ಪುಗಳ ಅನುಗುಣವಾಗಿ ಕ್ರಿಯಾ ಒಪ್ಪಂದವನ್ನು ಅಕ್ಷರಶಃ ಹಾಗೂ ತಾತ್ವಿಕವಾಗಿ ಪಾಲಿಸಲು ಬದ್ಧರಾಗಿರುತ್ತಾರೆ.

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕ್ರಿಯಾ ಒಪ್ಪಂದದ ಉಲ್ಲಂಘನೆಯ ಆಧಾರದ ಮೇಲೆ ನ್ಯಾಯಾಂಗ ನಿಂದನಾ ಪ್ರಕರಣವನ್ನು ದಾಖಲಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. (ಪುಟ ಸಂಖ್ಯೆ: 69 ರಿಂದ 78)

19. ಕ್ರಿಯಾ ಒಪ್ಪಂದ ಅನುಚ್ಛೇಧ 7 ರ ಅನುಗುಣವಾಗಿ ಖಾಸಗಿ ಪಾಲುದಾರರಿಗೆ ನಗರ ಸಮುಚ್ಛಯದ ಪ್ರದೇಶಗಳನ್ನು ವಾಣಿಜ್ಯ ಹಾಗೂ ಕೈಗಾರಿಕೆಗಳ ಅಭಿವೃದ್ಧಿಗಾಗಿ ಬಳಸಲು ಅವಕಾಶ ನೀಡಿದೆ ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. ಈ ನಗರ ಸಮುಚ್ಛಯಗಳನ್ನು ಯೋಜನಾ ತಾಂತ್ರಿಕ ಅನುಗುಣವಾಗಿ ಅಭಿವೃದ್ಧಿ ಪಡಿಸುವುದು. ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನದಲ್ಲಿ ಆಗುವ ಬದಲಾವಣೆಯನ್ನು ಕರ್ನಾಟಕ ಸರ್ಕಾರದ ಅನುಮತಿಯೊಂದಿಗೆ ಜಾರಿಗೊಳಿಸಬಹುದಾಗಿದೆ.

ಕ್ರಿಯಾ ಒಪ್ಪಂದದ ಅನುಗುಣವಾಗಿ ನಗರ ಸಮುಚ್ಛಯ 1ಕ್ಕೆ 2446 ಎಕರೆ ಖಾಸಗಿ ಜಮೀನು ಹಾಗೂ 328 ಎಕರೆ ಸರ್ಕಾರಿ ಜಮೀನು ಅವಶ್ಯಕತೆ ಇರುತ್ತದೆ. ನಗರ ಸಮುಚ್ಛಯ 1, 4ನೇ ಇಂಟರ್ ಛೇಂಜ್ ಆಸುಪಾಸಿನಲ್ಲಿ ಉತ್ತರಹಳ್ಳಿ ಹೋಬಳಿಯ ಕೆಂಗೇರಿಯ ಬಳಿ ಇರಬೇಕಾಗುವುದು. ಆದರೆ, ಈ ನಗರ ಸಮುಚ್ಛಯವನ್ನು ಬಿಡದಿಗೆ ಸ್ಥಳಾಂತರಿಸಲಾಗಿದೆ. ಆದಾಗ್ಯೂ, ಹಲವಾರು ಪ್ರಕರಣಗಳಲ್ಲಿ ಕೆಂಗೇರಿ ಹಾಗೂ ಬಿಡದಿ ಎರಡು ಪ್ರದೇಶದ ವ್ಯಾಪ್ತಿಯಲ್ಲೂ ಖಾಸಗಿ ಪಾಲುದಾರರು ಜಮೀನನ್ನು ಹೊಂದಿರುವುದನ್ನು ಸಮಿತಿಯು ಗಮನಿಸಿದೆ. ಸಮಿತಿಗೆ ನಿರ್ದಿಷ್ಟವಾಗಿ ತುಂಬಳಗೋಡು ಗೊಲ್ಲಹಳ್ಳಿ ಹಾಗೂ ಕೆಂಗೇರಿ ಗೊಲ್ಲಹಳ್ಳಿ ಈ ಎರಡೂ ಗ್ರಾಮಗಳ ವ್ಯಾಪ್ತಿಯಲ್ಲಿ ಅನಾವಶ್ಯಕವಾಗಿ ಖಾಸಗಿ ಪಾಲುದಾರರು ಜಮೀನನ್ನು ಸ್ವಾಧೀನ ಪ್ರಕ್ರಿಯೆಗೆ ಒಳಪಡಿಸಿರುವ ಬಗ್ಗೆ ಭೂ ಮಾಲೀಕರು ಮನವಿಗಳನ್ನು ಸಲ್ಲಿಸಿರುತ್ತಾರೆ. ಈ ಪ್ರಕರಣದಲ್ಲಿ ಸುಮಾರು 45 ವರ್ಷಗಳ ಹಿಂದ ಪೋಡಿ ಹಿಸ್ಸೆಯಾಗಿ, ಭೂ ಪರಿವರ್ತನೆಯಾಗಿ ಬಡಾವಣೆ ನಕ್ಷೆಯ ಅನುಮೋದನೆಯನ್ನು ಸಂಬಂಧಿತ ಪ್ರಾಧಿಕಾರದಿಂದ ಪಡೆದಿರುವ ಜಮೀನನ್ನು ನಗರ ಸಮುಚ್ಛಯ –1 ಕ್ಕೆ ಅಧಿಸೂಚಿಸಲಾಗಿದೆ. ಪ್ರಸ್ತುತವಾಗಿ ಕೆ. ಗೊಲ್ಲಹಳ್ಳಿ ವ್ಯಾಪ್ತಿಯ ಜಮೀನು ಕಲಂ 28(1) ರಲ್ಲಿ ಅಧಿಸೂಚನೆಯಾಗಿದ್ದು, ಕೆ.ಐ.ಎ.ಡಿ.ಬಿ. ಹಾಗೂ ಖಾಸಗಿ ಪಾಲುದಾರರು ಈ ಜಮೀನಿನ ಅವಶ್ಯಕತೆಯ ಬಗ್ಗೆ ನಿರ್ದಿಷ್ಟ ನಿಲುವನ್ನು ತಳೆದಿರುವುದಿಲ್ಲ. ಇದೇ ಸ್ವರೂಪದ ಹಲವಾರು ಪ್ರಕರಣಗಳು ಇರುವ ಸಾಧ್ಯತೆ ಇರುವುದರಿಂದ ಕೆ.ಐ.ಎ.ಡಿ.ಬಿ. ಸಂಸ್ಥೆಯು ಕೆಂಗೇರಿ ವ್ಯಾಪ್ತಿಯಲ್ಲಿ ಅನಾವಶ್ಯಕವಾಗಿ ಅಧಿಸೂಚಿಸಿರುವ ಜಮೀನನ್ನು ಗುರುತಿಸಿ ಸ್ವಾಧೀನ ಪ್ರಕ್ರಿಯೆಯಿಂದ

ಹೊರಡಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಇದಲ್ಲದೆ, ನಗರ ಸಮುಚ್ಛಯ-Iಕ್ಕೆ ಜಮೀನಿನ ಅವಶ್ಯಕತೆಯನ್ನು 2477 ಎಕರೆಯಿಂದ 1915 ಎಕರೆಗೆ ಇಳಿಮುಖಗೊಳಿಸಲಾಗಿದೆ. ಸರ್ಕಾರಿ ಜಮೀನಿನ ಅವಶ್ಯಕತೆಯನ್ನು 328 ಎಕರೆಗಳಿಂದ 831 ಎಕರೆಗಳು ಎಂದು ನಿರ್ಧರಿಸಿದ್ದು, ಈ ವಿಸ್ತೀರ್ಣದ ಸರ್ಕಾರಿ ಜಮೀನನ್ನು ಹಸ್ತಾಂತರಿಸಲಾಗಿದೆ. ಈ ಪ್ರಕರಣದಲ್ಲಿ ಖಾಸಗಿ ಜಮೀನಿಗೆ ಅನ್ವಯಿಸುವಂತೆ ಪ್ರತಿ ಎಕರೆಗೆ 41.00 ಲಕ್ಷ ರೂ.ಗಳೆಂದು ನಿಗದಿಪಡಿಸಿರುವ ಪರಿಹಾರದ ಮೊತ್ತವನ್ನು ಪ್ರಥಮ ಸ್ತರದಲ್ಲಿ ಖಾಸಗಿ ಪಾಲುದಾರರು ನ್ಯಾಯಾಲಯದಲ್ಲಿ ಪ್ರಶ್ನಿಸಿ ನಂತರ ಪ್ರಕರಣವನ್ನು ಹಿಂಪಡೆದಿರುತ್ತಾರೆ. ಈ ಎಲ್ಲಾ ಪ್ರಕರಣಗಳಲ್ಲಿಯೂ ಸೋಮಶೇಖರ ರೆಡ್ಡಿ ಪ್ರಕರಣದ ಆದೇಶ ಹಾಗೂ ತೀರ್ಪನ್ನು ಉಲ್ಲಂಘಿಸಲಾಗಿದೆ. ಇದಲ್ಲದೆ, ನ್ಯಾಯಾಂಗ ನಿಂದನೆ ಅರ್ಜಿ ಸಂಖ್ಯೆ. 96/2007ರಲ್ಲಿ ಕ್ರಿಯಾ ಒಪ್ಪಂದಕ್ಕಿಂತ ವಿಭಿನ್ನ ಅಥವಾ ಹೆಚ್ಚುವರಿಯಾಗಿ ಜಮೀನಿಗೆ ಕ್ಲೇಮ್ ಸಲ್ಲಿಸುವುದಿಲ್ಲವೆಂದು ದೃಢೀಕರಿಸಿರುತ್ತಾರೆ. ನಗರ ಸಮುಚ್ಛಯ-Iಕ್ಕೆ ಅನ್ವಯಿಸುವಂತೆ ಈ ಪ್ರತಿಪಾದನೆಗಳನ್ನು ಉಲ್ಲಂಘಿಸಲಾಗಿದೆ. ಈ ಹಿನ್ನೆಲೆಯಲ್ಲಿ, ಸರ್ಕಾರವು ಮರುಪರಿಶೀಲನಾ ಅರ್ಜಿಯನ್ನು ಸಲ್ಲಿಸುವುದರ ಮೂಲಕ ಕ್ರಿಯಾ ಒಪ್ಪಂದದ ಪಾಲನೆಯನ್ನು ಜಾರಿಗೊಳಿಸಬೇಕೆಂದು ಸಮಿತಿಯ ಶಿಫಾರಸ್ಸು ಮಾಡುತ್ತದೆ. (ಪುಟ ಸಂಖ್ಯೆ: 79 ರಿಂದ 81)

20. ಕ್ರಿಯಾ ಒಪ್ಪಂದದ ಅನುಚ್ಛೇದ 8 ಹಾಗೂ 9 ರ ಅನುಗುಣವಾಗಿ ವಿದ್ಯುಚ್ಛಕ್ತಿ ಉತ್ಪಾದನಾ ಘಟಕಗಳು ಹಾಗೂ ದೂರ ಸಂಪರ್ಕ ಸೌಲಭ್ಯಗಳನ್ನು ಕಲ್ಪಿಸುವಲ್ಲಿ ಖಾಸಗಿ ಪಾಲುದಾರರು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.

21. ಕ್ರಿಯಾ ಒಪ್ಪಂದ ಅನುಚ್ಛೇದ 11 ರ ಅನುಗುಣವಾಗಿ ಸಮುಚ್ಛಯ ಕಂಪನಿಗಳ ಪಾಲುದಾರರು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ನೈಸೆಲ್/ನೀಸೆಲ್ ಕಂಪನಿಯಲ್ಲಿ ಕ್ರೂಢೀಕೃತವಾಗಿ 15% ಬಂಡವಾಳ ಹೂಡಿಕೆಯನ್ನು ನಿರ್ವಹಿಸಬೇಕಾಗುವುದು. ಪ್ರಥಮ ಸ್ಥರದಲ್ಲಿ ಈ ಸಮುಚ್ಛಯ ಸಂಸ್ಥೆಗಳು ಯೋಜನಾ ವೆಚ್ಚದ 33%ನ್ನು ನಿರ್ವಹಿಸುವ ಬಗ್ಗೆ ಪ್ರತಿಪಾದಿಸಿದ್ದು, ತದನಂತರ ಇದನ್ನು 15%ಗೆ ಇಳಿಮುಖಗೊಳಿಸಲಾಗಿದೆ. ಅಂದರೆ, 237.00 ಕೋಟಿ ರೂ.ಗಳ ಬಂಡವಾಳವನ್ನು ನಿರ್ವಹಿಸಬೇಕಾಗಬಹುದು. ಸೋಮಶೇಖರರೆಡ್ಡಿ ಪ್ರಕರಣದಲ್ಲಿ ಟೋಲ್ ರಸ್ತೆ ಸಂಪೂರ್ಣಗೊಂಡ ನಂತರ ನಗರ ಸಮುಚ್ಛಯಗಳನ್ನು ಅಭಿವೃದ್ಧಿಪಡಿಸಲು ನಿರ್ದೇಶಿಸಲಾಗಿದೆ. ಇದರಿಂದಾಗಿ ಖಾಸಗಿ ಪಾಲುದಾರರು ಸಂಪೂರ್ಣ ಬಂಡವಾಳ ಹೂಡಿಕೆ ಮಾಡುವ ಅನಿವಾರ್ಯ ಪರಿಸ್ಥಿತಿ ಉದ್ಭವವಾಗಿದೆ. ಈ ಪ್ರಸ್ತಾವನೆಯನ್ನು ಹಾನಿ ತಪ್ಪಿಸಲು ಖಾಸಗಿ ಪಾಲುದಾರರು ಟೋಲ್ ರಸ್ತೆಯನ್ನು ಸೆಕ್ಷನ್ ಎ, ಬಿ ಮತ್ತು ಸಿ ಎಂದು ವಿಂಗಡಿಸಿದ್ದಾರೆಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. ಇದರಿಂದಾಗಿ ಬಂಡವಾಳ ಹೂಡಿಕೆಯೂ ಸಹ ಪ್ರಸ್ತಾವಿತ ಸೆಕ್ಷನ್‌ಗಳ ಅನುಷ್ಠಾನಕ್ಕೆ ಅವಶ್ಯಕವಿರುವ ವೆಚ್ಚಕ್ಕೆ ಇಳಿಮುಖವಾಗುತ್ತದೆ. 03.10.1999ರ ಮೂರಕ ಒಪ್ಪಂದದ ಮುಖಾಂತರ ಈ ಬದಲಾವಣೆಗಳನ್ನು

ಜಾರಿಗೊಳಿಸಿದ್ದು, ಹೂಡಿಕೆಯ ಮೇಲಿನ ಪರಿಣಾಮವನ್ನು ಸರ್ಕಾರ ವಿಶ್ಲೇಷಿಸಿರುವ ಬಗ್ಗೆ ಸಮಿತಿಗೆ ಮಾಹಿತಿ ಇರುವುದಿಲ್ಲ. ನೈಸೆಲ್/ನೀಸೆಲ್ ಸಂಸ್ಥೆಯು ಯೋಜನೆಯ ಸ್ಟೇಜ್-1 ಅನುಷ್ಠಾನಕ್ಕೆ 330.00 ಕೋಟಿ ರೂ.ಗಳ ಅವಶ್ಯಕತೆಯನ್ನು ಬಿಂಬಿಸಿದೆ. ಇದರ ಆಧಾರದ ಮೇಲೆ 125.00 ಕೋಟಿ ರೂ.ಗಳ ಇಕ್ವಿಟಿ ಹೂಡಿಕೆಯನ್ನು ನಿರ್ವಹಿಸಬೇಕಾಗುವುದು. 31.03.2005ರ ಬ್ಯಾಲೆನ್ಸ್ ಸೀಟ್ ಅನುಗುಣವಾಗಿ ಕಲ್ಯಾಣಿ ಸಂಸ್ಥೆ 85.00 ಕೋಟಿ ರೂ.ಗಳನ್ನು ಹೂಡಿಕೆ ಮಾಡಿದೆ. ನೈಸೆಲ್/ನೀಸೆಲ್ ಸಂಸ್ಥೆಯ ಪರವಾಗಿ 25.00 ಕೋಟಿ ರೂ.ಗಳ ವಿದೇಶಿ ಬಂಡವಾಳ ಹೂಡಿಕೆ ಆಗಿದೆ ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. ಈ ಎಲ್ಲಾ ಬೆಳವಣಿಗೆಗಳನ್ನು ಗಮನಿಸಿದಾಗ ನೈಸಲ್/ನಿಸಲ್ ಸಂಸ್ಥೆಯು ಅನುಚ್ಛೇಧ 11ರಡಿಯಲ್ಲಿ ಮಾನದಂಡಗಳ ಅನುಸಾರವಾಗಿ ಬಂಡವಾಳವನ್ನು ಹೂಡಿಕೆ ಮಾಡುವ ಸಾಧ್ಯತೆಯನ್ನು ತಪ್ಪಿಸಲು ಯೋಜನೆಯ ಸ್ಥರಗಳನ್ನು ವಿಭಜಿಸಿ, ಅನುಚ್ಛೇಧ 20ರಡಿಯಲ್ಲಿ ಸಹೋದರ ಸಂಸ್ಥೆಯಾದ ನೀಸೆಲ್‌ಗೆ ವಹಿಸಿರುವುದು ಸ್ಪಷ್ಟವಾಗಿರುತ್ತದೆ. ಇದಲ್ಲದೇ, ಫೈನಾನ್ಸಿಯಲ್ ಕ್ಲೋಜರ್ ದಾಖಲಾತಿಗಳನ್ನೂ ಸಹ ಸಲ್ಲಿಸಿರುವುದಿಲ್ಲ. ಐ.ಸಿ.ಐ.ಸಿ.ಐ ಬ್ಯಾಂಕ್ ಈ ದಾಖಲಾತಿಗಳನ್ನು ಸರ್ಕಾರಕ್ಕೆ ಸಲ್ಲಿಸುವ ಸಾಧ್ಯತೆಯನ್ನು ತಪ್ಪಿಸಲು ಖಾಸಗಿ ಪಾಲುದಾರರು ಕಾನೂನು ರೀತಿಯ ನಿಬಂಧನೆಯನ್ನು ವಿಧಿಸಿರುತ್ತಾರೆ. ಸೋಮಶೇಖರರೆಡ್ಡಿ ಪ್ರಕರಣದಲ್ಲಿ ಖಾಸಗಿ ಪಾಲುದಾರರು 522.00 ಕೋಟಿ ರೂ. ಗಳ ಹೂಡಿಕೆ ಮಾಡುವುದಾಗಿ ಸ್ಪಷ್ಟೀಕರಿಸಿದ್ದಾರೆ. ಆದರೆ, 29.03.2004ರಂದು ಐ.ಸಿ.ಐ.ಸಿ.ಐ ಬ್ಯಾಂಕ್ ಮುಖಾಂತರ ಈ ಮೊತ್ತದ 150.00 ಕೋಟಿ ರೂ.ಗಳ ಸಾಲವನ್ನು ಪಡೆದಿರುತ್ತಾರೆ. ಈ ಬೆಳವಣಿಗೆಯನ್ನು ಗಮನಿಸಿದಾಗ ಖಾಸಗಿ ಪಾಲುದಾರರ ಆರ್ಥಿಕ ಸಾಮರ್ಥ್ಯದ ಮೌಲ್ಯಮಾಪನ ದೋಷಪೂರಿತವಾಗಿರುವುದು ಸ್ಪಷ್ಟವಾಗುತ್ತದೆ. ಈ ಕೂಡಲೇ ಫೈನಾನ್ಷಿಯಲ್ ಕ್ಲೋಷರ್ ದಾಖಲಾತಿಯನ್ನು ಪಡೆದು ಅದರಲ್ಲಿ ವಿಧಿಸಲಾಗಿರುವ ಷರತ್ತುಗಳು ಕ್ರಿಯಾ ಒಪ್ಪಂದದ ಅನುಗುಣವಾಗಿದೆಯೇ ಎಂದು ಪರಿಶೀಲಿಸಲು ಸರ್ಕಾರವು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. (ಪುಟ ಸಂಖ್ಯೆ: 85 ರಿಂದ 89)

22. ಕ್ರಿಯಾ ಒಪ್ಪಂದದ ಅನುಚ್ಛೇಧ 12 ರ ಅಡಿಯಲ್ಲಿ ಖಾಸಗಿ ಪಾಲುದಾರರಿಗೆ ಸ್ಥಳೀಯ ತೆರಿಗೆಗಳು, ನೋಂದಣಿ ಹಾಗೂ ಮುದ್ರಾಂಕ ಶುಲ್ಕ ಹಾಗೂ ಭೂಪರಿವರ್ತನಾ ಶುಲ್ಕ ಕರನಿರ್ಧರಣೆಗಳಿಂದ ರಿಯಾಯಿತಿಯನ್ನು ನೀಡುವ ಬಗ್ಗೆ ಪ್ರತಿಪಾದಿಸಲಾಗಿದೆ. ಹಲವಾರು ಪ್ರಕರಣಗಳಲ್ಲಿ ಕರನಿರ್ಧರಣ ವ್ಯಾಪ್ತಿಗೆ ಒಳಪಡದ ಈ ಕೆಳಕಂಡ ಸೌಲಭ್ಯಗಳನ್ನು ಖಾಸಗಿ ಪಾಲುದಾರರಿಗೆ ವಿಸ್ತರಿಸಲಾಗಿದೆ:

1. ಭೂ ಸ್ವಾಧೀನಕ್ಕೆ ವಿಧಿಸಬಹುದಾದ ಸೇವಾ ಶುಲ್ಕಗಳನ್ನು ಕೆ.ಐ.ಎ.ಡಿ.ಬಿ. ಸಂಸ್ಥೆಯು ಸುಮಾರು 20 ಕೋಟಿ ರೂ.ಗಳಿಂದ 7.5 ಕೋಟಿ ರೂ.ಗಳಿಗೆ ಇಳಿಮುಖಗೊಳಿಸಲಾಗಿದೆ.

2. ಖಾಸಗಿ ಪಾಲುದಾರರು ಶಾಸನ ಬದ್ಧ ಹಾಗೂ ಸಂಬಂಧಿತ ಶುಲ್ಕಗಳನ್ನು ಭೂಸ್ವಾಧೀನಕ್ಕಾಗಿ ಕೆ.ಐ.ಎ.ಡಿ.ಬಿ. ಸಂಸ್ಥೆಗೆ ಪಾವತಿಸಬೇಕಾಗುವುದು. ಕೆ.ಐ.ಎ.ಡಿ.ಬಿ. ಅಧಿನಿಯಮದ ಅನುಗುಣವಾಗಿ ಭೂ ಪರಿಹಾರದ 40% ಮೊತ್ತವನ್ನು 28(1) ಘೋಷಣೆಯೊಡನೆ ಪಾವತಿಸಬೇಕಾಗಿದ್ದು, ಉಳಿದ ಮೊತ್ತವನ್ನು 28(4) ಘೋಷಣೆಯಾಗುವ ಪೂರ್ವದಲ್ಲಿ ಪಾವತಿಸಬೇಕಾಗುವುದು. ಈ ಷರತ್ತನ್ನು ಸಡಿಲಗೊಳಿಸಿ ಕೆ.ಐ.ಎ.ಡಿ.ಬಿ. ಸಂಸ್ಥೆಯು ಖಾಸಗಿ ಪಾಲುದಾರರಿಂದ ಯಾವುದೇ ಮೊತ್ತವನ್ನು ಸ್ವೀಕರಿಸದೆ 28(1) ಜಾರಿಗೊಳಿಸಿರುವ ಪ್ರಕರಣಗಳನ್ನು ಸಮಿತಿ ಗಮನಿಸಿದೆ.

3. ನೈಸೆಲ್ ಸಂಸ್ಥೆಯು ತನ್ನ ಸುಪರ್ದಿಯಲ್ಲಿರುವ ಜಮೀನಿನ ವ್ಯಾಪ್ತಿಯಲ್ಲಿ ನಡೆದ ಅನಧಿಕೃತ ಗಣಿಗಾರಿಕೆಗೆ ಸಂಬಂಧಿಸಿದಂತೆ ನಿಯಂತ್ರಣ ಕ್ರಮಗಳನ್ನು ಸಮಯೋಚಿತವಾಗಿ ಜಾರಿಗೊಳಿಸಿರುವುದಿಲ್ಲ. ಈ ವರದಿಯಲ್ಲಿ ಪ್ರತಿಪಾದಿಸಿರುವಂತೆ ಪ್ರಸ್ತಾವಿತ ಜಮೀನು ಖಾಸಗಿ ಪಾಲುದಾರರ ಸುಪರ್ದಿಯಲ್ಲಿದ್ದುದರಿಂದ ಆ ಜಮೀನಿನಲ್ಲಿ ನಡೆಯುವ ಎಲ್ಲಾ ಚಟುವಟಿಕೆಗಳಿಗೂ ಅವರೇ ಜವಾಬ್ದಾರರಾಗಿರುತ್ತಾರೆ. ಇದಲ್ಲದೆ, ನೈಸೆಲ್ ಸಂಸ್ಥೆಯು ಕಟ್ಟಿಂಗ್ ವ್ಯಾಪ್ತಿಯಡಿಯಲ್ಲಿ ರಸ್ತೆಗಳನ್ನು ನಿರ್ಮಿಸಿದ್ದು, ತತ್ಸಂಬಂಧವಾಗಿ ಉತ್ಪಾದನೆಯಾಗುವ ಮೈನರ್ ಮಿನರಲ್ಸ್‌ಗೆ ಸಂಬಂಧಿಸಿದಂತೆ ರಾಜಧನವನ್ನು ಪಾವತಿಸಿರಲಿಲ್ಲ. ವಾಸ್ತವಿಕವಾಗಿ 2009 ರಿಂದ ಅನಧಿಕೃತ ಗಣಿಗಾರಿಕೆ ನಡೆದಿದ್ದು, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಮೌಲ್ಯಮಾಪನದ ಅನುಗುಣವಾಗಿ 7 ವರ್ಷಗಳ ಅವಧಿಯಲ್ಲಿ 1.72 ಕೋಟಿ ಮೆಟ್ರಿಕ್ ಟನ್ ಪ್ರಮಾಣದ ಅಕ್ರಮ ಗಣಿಗಾರಿಕೆಯ ಕಾರ್ಯಕಲಾಪಗಳನ್ನು ನೈಸೆಲ್ ಸಂಸ್ಥೆ ಗಮನಿಸದೇ ಇರುವುದು ವಿವಾದಾತ್ಮಕವಾಗಿದೆ. ಪರವಾನಗಿ ರದ್ದಾದ 25 ಗಣಿಗಳಲ್ಲಿ ಗಣಿಗಾರಿಕೆ, ಬಿ.ಎಂ.ಐ.ಸಿ ಮತ್ತು ನೈಸ್ ವರ್ತುಲ ರಸ್ತೆ ನಿರ್ಮಾಣಕ್ಕೆ ಬಳಸಿರುವ ಉಪಖನಿಜ ಮತ್ತು ಈ ವಿಧದಲ್ಲಿ ಗುಡ್ಡಗಳನ್ನು ಸಮತಟ್ಟುಗೊಳಿಸಿದ್ದುದರಿಂದ ಲಭ್ಯವಾಗಿರುವ ಉಪ ಖನಿಜದ ಪ್ರಮಾಣಕ್ಕೆ ಅನ್ವಯಿಸುವಂತೆ ನೈಸೆಲ್ ಸಂಸ್ಥೆ ರಾಜಧನವನ್ನು ಪಾವತಿಸಿರುವುದಿಲ್ಲ. ರಾಜಧನವು ಕ್ರಿಯಾ ಒಪ್ಪಂದದ ಅನುಚ್ಛೇಧ 12 ರಲ್ಲಿ ಪ್ರತಿಪಾದಿಸಿರುವ ರಿಯಾಯಿತಿಗಳಿಗೆ ಒಳಪಟ್ಟಿರುವುದಿಲ್ಲ. ಇದರಿಂದಾಗಿ ನೈಸೆಲ್ ಸಂಸ್ಥೆ 242.45 ಕೋಟಿ ರೂ.ಗಳ ರಾಜಧನ ಹಾಗೂ ದಂಡವನ್ನು ಪಾವತಿಸಬೇಕಾಗುವುದು. ಈ ಪ್ರಕರಣದಲ್ಲಿ ಎಂ.ಎಂ.ಡಿ.ಆರ್. ಅಧಿನಿಯಮ 1957 ರ ಅನುಚ್ಛೇಧ 4(1)(ಎ) ಉಲ್ಲಂಘನೆಯಾಗಿರುವುದು ಸ್ಪಷ್ಟವಾಗಿದೆ. ಇದಲ್ಲದೆ, ಮಾನ್ಯ ಸರ್ವೋಚ್ಛ ನ್ಯಾಯಾಲಯವು ಪ್ರಕರಣ ಸಂಖ್ಯೆ.1532-33/1993 ರಲ್ಲಿ ದಿನಾಂಕ 15.01.2000 ರಂದು ನೀಡಿದ ತೀರ್ಪಿನಲ್ಲಿ ರಾಜಧನವನ್ನು ತೆರಿಗೆ ಎಂದು ವ್ಯಾಖ್ಯಾನಿಸುವುದು ಸಮರ್ಪಕವಲ್ಲ ಎಂದು ತೀರ್ಪು ನೀಡಿದೆ. ಈ ಹಿನ್ನೆಲೆಯಲ್ಲಿ ಕ್ರಿಯಾ ಒಪ್ಪಂದದ ಅನುಚ್ಛೇಧ 12 ರಲ್ಲಿ ಪ್ರತಿಪಾದಿಸದೇ ಇರುವ ರಿಯಾಯಿತಿಯನ್ನು ಅನಧಿಕೃತವಾಗಿ ಖಾಸಗಿ ಪಾಲುದಾರರು ಬಳಸಿರುವುದು ಸ್ಪಷ್ಟವಾಗುತ್ತದೆ. ಮೈನಿಂಗ್ ಹಾಗೂ ಕ್ವಾರಿಯಿಂಗ್ ಚಟುವಟಿಕೆಗಳನ್ನು ಕೈಗೊಳ್ಳಲು ಕ್ರಿಯಾ ಒಪ್ಪಂದ ಹಾಗೂ ಸಂಬಂಧಿತ ಅನುಚ್ಛೇಧಗಳಲ್ಲಿ ಯಾವುದೇ ಅವಕಾಶವನ್ನು ಕಲ್ಪಿಸಿರುವುದಿಲ್ಲ. ಈ ಅಂಶಗಳ ಹಿನ್ನೆಲೆಯಲ್ಲಿ

ಸರ್ಕಾರವು ಈ ವರದಿಯಲ್ಲಿ ಪ್ರತಿಪಾದಿಸಿರುವ ರಾಜಧನವನ್ನು ನಮೂದಾಗಿ ಗೊಂಡು ಕಾನೂನು ರೀತ್ಯಾ ಕ್ರಮ ಜರುಗಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

4. ಕ್ರಿಯಾ ಒಪ್ಪಂದದ ಅನುಚ್ಛೇಧ 12 ರ ಅನುಗುಣವಾಗಿ ಯೋಜನಾ ಅನುಷ್ಠಾನ ಮಾಡುತ್ತಿರುವ ಮೂಲ ಸಂಸ್ಥೆ ಹಾಗೂ ಸಹ ಸಂಸ್ಥೆಗಳು ರಾಜ್ಯ ಹಾಗೂ ಸ್ಥಳೀಯ ತೆರಿಗೆಯ ನಿರ್ಧಾರಣೆಯಿಂದ ವಿನಾಯಿತಿ ಪಡೆಯಬಹುದಾಗಿದೆ. ಈ ಸೌಲಭ್ಯವನ್ನು ಈ ಸಂಸ್ಥೆಗಳ ಉಪ ಗುತ್ತಿಗೆದಾರರು ಹಾಗೂ ನೋಂದಿಕೃತ ವಹಿವಾಟುದಾರರು ಪಡೆಯಲು ಅವಕಾಶವನ್ನು ಕಲ್ಪಿಸಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಖಾಸಗಿ ಪಾಲುದಾರರು ಉಪ ಗುತ್ತಿಗೆ ಅನ್ವಯಿಸುವಂತೆ ಸಲ್ಲಿಸಿರುವ 13.63 ಕೋಟಿ ರೂ.ಗಳ ಮರುಪಾವತಿಗೆ ಅರ್ಹರಿರುವುದಿಲ್ಲ. ಕ್ರಿಯಾ ಒಪ್ಪಂದದ ಅನುಚ್ಛೇಧ 12 ರ ಆಧಾರದ ಮೇಲೆ ಆರ್ಥಿಕ ಇಲಾಖೆಯು 19.07.2011 ರಂದು ನೀಡಬಹುದಾದ ವಿನಾಯಿತಿಗಳ ಬಗ್ಗೆ ದೃಢೀಕರಿಸಿದೆ. ಈ ದೃಢೀಕರಣದ ಅನುಗುಣವಾಗಿ ಖಾಸಗಿ ಪಾಲುದಾರರು ಡೀಸೆಲ್ ಮಾರಾಟ ತೆರಿಗೆ ವಿನಾಯಿತಿಗೆ ಅರ್ಹರಿರುವುದಿಲ್ಲ. ಖಾಸಗಿ ಪಾಲುದಾರರು ಡೀಸೆಲ್ ಮಾರಾಟ ತೆರಿಗೆ ವಿನಾಯಿತಿ ಹಾಗೂ ಕರಗಳ ಮರುನಿರ್ಧರಣೆಗೆ ಸಂಬಂಧಿಸಿದಂತೆ ವಿವಿಧ ನ್ಯಾಯಾಲಯಗಳಲ್ಲಿ ರಿಟ್ ಅರ್ಜಿಗಳನ್ನು ದಾಖಲಿಸಿರುವುದನ್ನು ಸಮಿತಿಯು ಗಮನಿಸಿದೆ. ಈ ರಿಟ್ ಅರ್ಜಿಗಳನ್ನು ತ್ವರಿತವಾಗಿ ಇತ್ಯರ್ಥಗೊಳಿಸಲು ಸರ್ಕಾರವು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. 26.12.1997 ರ ಸರ್ಕಾರದ ನೀತಿ ನಿರ್ಧಾರದ ಅನುಗುಣವಾಗಿ ಮೂಲಭೂತ ಸೌಕರ್ಯ ಯೋಜನೆಗೆ ಘೋಷಿಸಿರುವ ರಿಯಾಯಿತಿ ಹಾಗೂ ವಿನಾಯಿತಿಯನ್ನು ಬಿ.ಎಂ.ಐ.ಸಿ. ಯೋಜನೆಗೆ ಕಟ್ಟುನಿಟ್ಟಾಗಿ ಅಳವಡಿಸಬೇಕೆಂದು ಸಮಿತಿಯು ಆಗ್ರಹಿಸುತ್ತದೆ.

5. ನೋಂದಣಿ ಹಾಗೂ ಮುದ್ರಾಂಕ ಶುಲ್ಕಕ್ಕೆ ಅನ್ವಯಿಸುವಂತೆ 5850 ಎಕರೆಗಳ ಬದಲಾಗಿ 14,137 ಎಕರೆಗಳಿಗೆ ರಿಯಾಯಿತಿಯನ್ನು ನೀಡಲಾಗಿದೆ. ಈ ಸೌಲಭ್ಯವನ್ನು ಬಳಸಿ ಖಾಸಗಿ ಪಾಲುದಾರರು ಶುದ್ಧ ಕ್ರಯಪತ್ರದ ಮೇಲೆ ಹಸ್ತಾಂತರಿಸಲಾದ ಜಮೀನು, ತ್ರಿಪಕ್ಷೀಯ ಒಪ್ಪಂದದ ಅನುಗುಣವಾಗಿ ಪರಭಾರೆ ಹಾಗೂ ಮಾರಾಟ ಮಾಡಿದ ಜಮೀನಿಗೂ ಸಹ ರಿಯಾಯಿತಿ ಪಡೆದಿರುವುದನ್ನು ಸಮಿತಿಯು ಗಮನಿಸಿದೆ. ವಾಸ್ತವಿಕವಾಗಿ ನೋಂದಣಿ ಹಾಗೂ ಮುದ್ರಾಂಕ ಶುಲ್ಕದ ವಿನಾಯಿತಿ ಅಥವಾ ರಿಯಾಯಿತಿಯು ಯೋಜನಾ ಅನುಷ್ಠಾನಕ್ಕೆ ಬಳಸುವ ಜಮೀನಿಗೆ ಸೀಮಿತವಾಗಬೇಕಾಗಿರುತ್ತದೆ. ಆದುದರಿಂದ, ಖಾಸಗಿ ಪಾಲುದಾರರು ಕ್ರಿಯಾ ಒಪ್ಪಂದ ಅನುಚ್ಛೇಧ-12ನ್ನು ಉಲ್ಲಂಘಿಸಿ ಜಂಟಿ ಅಭಿವೃದ್ಧಿ ಕರಾರುಗಳು, ಮಾರಾಟ, ಪರಭಾರೆ, ಇತ್ಯಾದಿ ವಹಿವಾಟುಗಳಿಗೆ ಈ ರಿಯಾಯಿತಿಯನ್ನು ಬಳಸುವುದನ್ನು ಸ್ಥಗಿತಗೊಳಿಸಬೇಕೆಂದು ಸಮಿತಿಯು ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತದೆ. ಈ ವಹಿವಾಟುಗಳಿಗೆ ಸಂಬಂಧಿಸಿದಂತೆ ಈವರೆಗೆ ಬಳಸಿರುವ ರಿಯಾಯಿತಿಯನ್ನು ಮೌಲ್ಯಮಾಪನ ಮಾಡಿ ಇದನ್ನು ಅನಪೇಕ್ಷಿತ ಆದಾಯವೆಂದು ಪರಿಗಣಿಸಿ ಇದರ ಆಧಾರದ ಮೇಲೆ ಯೋಜನೆಯ IRR ಹಾಗೂ NPV ಪರಿಷ್ಕರಿಸಬೇಕೆಂದು ಸಮಿತಿಯ ಶಿಫಾರಸ್ಸು ಮಾಡುತ್ತದೆ. (ಪುಟ ಸಂಖ್ಯೆ: 89 ರಿಂದ 117)

22. ಕ್ರಿಯಾ ಒಪ್ಪಂದದ ಅನುಚ್ಛೇಧ-13ರಡಿಯಲ್ಲಿ ಪ್ರಮುಖವಾಗಿ ಟೋಲ್ ರಸ್ತೆಗೆ ಸಂಬಂಧಿಸಿದಂತೆ ಕ್ರಿಯಾ ಒಪ್ಪಂದದ ಅನುಷ್ಠಾನದ ಪೂರ್ವದಲ್ಲಿಯೇ ಬದಲಾವಣೆಗಳಾಗಿರುವುದನ್ನು ಸಮಿತಿಯು ಗಮನಿಸಿದೆ. ವಾಸ್ತವಿಕವಾಗಿ ಟೋಲ್ ರಸ್ತೆ 5119 ಎಕರೆಗಳ ವಿಸ್ತೀರ್ಣದ ಜಮೀನಿನ ಅವಶ್ಯಕತೆಯನ್ನು ಭಾರತ್ ಫೋರ್ಜ್ ಲಿಮಿಟೆಡ್ ಪ್ರತಿಪಾದಿಸಿದ್ದು, ಸಚಿವ ಸಂಪುಟವು ದಿನಾಂಕ 08.11.1995 ಹಾಗೂ 17.03.1997ರಂದು ಈ ಅವಶ್ಯಕತೆಯನ್ನು ದೃಢೀಕರಿಸಿದೆ. ಸಚಿವ ಸಂಪುಟದ ಉಪ ಸಮಿತಿ ಅಥವಾ ಕೋರ್ ಅಧಿಕಾರಿಗಳ ಸಮುಚ್ಛಯ ಅಥವಾ ಸಚಿವ ಸಂಪುಟ 5119 ಎಕರೆಗಳ ಬದಲಾಗಿ 6999 ಎಕರೆಗಳ ಅವಶ್ಯಕತೆಯನ್ನು ಟೋಲ್ ರಸ್ತೆಗೆ ದೃಢೀಕರಿಸುವ ಬಗ್ಗೆ ದಾಖಲಾತಿಗಳಲ್ಲಿ ಮಾಹಿತಿ ಲಭ್ಯವಿರುವುದಿಲ್ಲ. ಇದಲ್ಲದೆ, ಕ್ರಿಯಾ ಒಪ್ಪಂದದ ಕರಡು ಪ್ರತಿ ಕಡತಗಳಲ್ಲಿ ಲಭ್ಯವಿರುವುದಿಲ್ಲ. ಆದಾಗ್ಯೂ, ಶ್ರೀ ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪಿನ ಹಿನ್ನೆಲೆಯಲ್ಲಿ, ಟೋಲ್ ರಸ್ತೆ 6999 ಎಕರೆಗಳ ಅವಶ್ಯಕತೆಯನ್ನು ದೃಢೀಕರಿಸಲಾಗಿದೆ. ಈ ಹಿನ್ನೆಲೆಯಲ್ಲಿ, ಕ್ರಿಯಾ ಒಪ್ಪಂದದ ಉಲ್ಲೇಖಗಳ ಹಾಗೂ ಪ್ರತಿಪಾದನೆಗಳ ಅನುಗುಣವಾಗಿ ವರದಿಯಲ್ಲಿ ನಿರ್ವಹಣೆಯ ಬಗ್ಗೆ ಚರ್ಚಿಸಲಾಗಿದೆ. ಈ ಗುರುತರ ವ್ಯತ್ಯಾಸಗಳ ಬಗ್ಗೆ ಸರ್ಕಾರವು ಆಮೂಲಾಗ್ರ ತನಿಖೆಯನ್ನು ನಡೆಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. (ಪುಟ ಸಂಖ್ಯೆ: 117 ರಿಂದ 118)

23. ಕ್ರಿಯಾ ಒಪ್ಪಂದದ ಅನುಚ್ಛೇಧ 14 ರ ಅಡಿಯಲ್ಲಿ ಯೋಜನೆಯ ಅನುಷ್ಠಾನದಲ್ಲಿ ಭಾಗಿಯಾಗಿರುವ 3ನೇ ವ್ಯಕ್ತಿ ಅಥವಾ ಸಂಸ್ಥೆಯ ಬಾಧ್ಯತೆಗಳು ಹಾಗೂ ಖಾತ್ರಿಗಳ ಬಗ್ಗೆ ಚರ್ಚಿಸಲಾಗಿದೆ. ಇದರಡಿಯಲ್ಲಿ ರಾಜ್ಯ ಸರ್ಕಾರವು ಕ್ರಿಯಾ ಒಪ್ಪಂದದ ಪಾಲನೆಯಲ್ಲಿ ಆಗಿರುವ ವೈಫಲ್ಯತೆಗಳಿಗೆ ಸಂಬಂಧಿಸಿದಂತೆ ಖಾಸಗಿ ಪಾಲುದಾರರು, ಅವರ ಗುತ್ತಿಗೆದಾರರು, ನಿರ್ದೇಶಕರು, ಅಧಿಕಾರಿಗಳು ಹಾಗೂ ಏಜೆಂಟುಗಳಿಗೆ ಆಗುವ ನಷ್ಟದ ವಿರುದ್ಧ ರಾಜ್ಯ ಸರ್ಕಾರ ಖಾತ್ರಿಯನ್ನು ನೀಡಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಲಾಗಿದೆ. ಆದರೆ ಈ ಷರತ್ತು ಕ್ರಿಯಾ ಒಪ್ಪಂದದ ಅನುಗುಣವಾಗಿ ನಿರ್ವಹಿಸಬೇಕಾದ ಕರ್ತವ್ಯಕ್ಕೆ ಮಾತ್ರ ಸೀಮಿತವಾಗಬೇಕಾಗುತ್ತದೆ. ಈ ವರದಿಯ ಹಲವು ಭಾಗಗಳಲ್ಲಿ ಖಾಸಗಿ ಪಾಲುದಾರರು ಕ್ರಿಯಾ ಒಪ್ಪಂದವನ್ನು ಸ್ಪಷ್ಟವಾಗಿ ಹಾಗೂ ನೇರವಾಗಿ ಉಲ್ಲಂಘಿಸಿರುವುದು ಸ್ಪಷ್ಟವಾಗಿದೆ. ವಿಶಿಷ್ಟವಾಗಿ ಯೋಜನೆಗೆ ಅವಶ್ಯಕವಿರುವ ಭೂಮಿಯ ನಿರ್ವಹಣೆಗೆ ಸಂಬಂಧಿಸಿದಂತೆ ಕ್ರಿಯಾ ಒಪ್ಪಂದವನ್ನು ಉಪೇಕ್ಷಿಸಿ ಈ 19 ವರ್ಷಗಳ ಅವಧಿಯಲ್ಲಿ ಖಾಸಗಿ ಪಾಲುದಾರರು ವಿಭಿನ್ನ ಸ್ವರೂಪದ ಬೇಡಿಕೆಗಳನ್ನು ಸಲ್ಲಿಸಿರುವುದನ್ನು ಸಮಿತಿಯು ಗಮನಿಸಿದೆ. ಪ್ರಾಥಮಿಕವಾಗಿ ಕೆ.ಐ.ಎ.ಡಿ.ಬಿ. ಯೊಡನೆ ಅನುಷ್ಠಾನಗೊಳಿಸಿರುವ ಖಾಸಗಿ ಹಾಗೂ ಸರ್ಕಾರಿ ಜಮೀನಿನ ಒಡಂಬಡಿಕೆಗಳು ಕ್ರಿಯಾ ಒಪ್ಪಂದದ ಅನುಗುಣವಾಗಿರುವುದಿಲ್ಲ. ಪ್ರಮುಖವಾಗಿ ಜುಲೈ 1997 ರಂದು ಹೊರಡಿಸಿದ ಜಮೀನಿನ ಅವಶ್ಯಕತೆ, ಓ.ಡಿ.ಪಿ. ಪರಿಷ್ಕರಣದ ಅನುಗುಣವಾಗಿ ಜಮೀನಿನ ಅವಶ್ಯಕತೆ (2004) ಹಾಗೂ 2014 ರಲ್ಲಿ ಖಾಸಗಿ ಪಾಲುದಾರರು

ಸಲ್ಲಿಸಿರುವ ಬೇಡಿಕೆಯ ಅನುಗುಣವಾಗಿ ಜಮೀನಿನ ಅವಶ್ಯಕತೆ ಈ ಎಲ್ಲಾ ಸ್ತರಗಳಲ್ಲೂ ವ್ಯಾಪಕ ವ್ಯತ್ಯಾಸವಿದ್ದು, ಮೂಲ ಕ್ರಿಯಾ ಒಪ್ಪಂದವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ. ಇದಲ್ಲದೆ, 02/2002 ರಂದು ಜಾರಿಗೊಳಿಸಿದ ಅಸೈನ್ ಮೆಂಟ್ ಒಪ್ಪಂದ ಹಾಗೂ 08/2002 ರಂದು ಜಾರಿಗೊಳಿಸಲಾದ ತ್ರಿಪಕ್ಷೀಯ ಒಪ್ಪಂದ ಕ್ರಿಯಾಒಪ್ಪಂದದ ಸ್ಪಷ್ಟ ಹಾಗೂ ನೇರ ಉಲ್ಲಂಘನೆಯಾಗಿರುತ್ತದೆ. ಈ ಒಪ್ಪಂದಗಳ ಆಧಾರದ ಮೇಲೆ ಖಾಸಗಿ ಪಾಲುದಾರರು ಹಲವಾರು ಸ್ವರೂಪದ ಬಾಧ್ಯತೆಗಳನ್ನು ಸೃಜಿಸಿರುವುದು ಸಮಿತಿಯ ಗಮನಕ್ಕೆ ಬಂದಿದೆ. ಮೂಲಭೂತವಾಗಿ ಕ್ರಿಯಾ ಒಪ್ಪಂದಕ್ಕೆ ವ್ಯತಿರಿಕ್ತವಾಗಿ ಖಾಸಗಿ ಪಾಲುದಾರರು ಹಣಕಾಸು ಸಂಸ್ಥೆಗಳೊಡನೆ ಒಪ್ಪಂದಗಳನ್ನು ಜಾರಿಗೊಳಿಸಿರುವ ಸಾಧ್ಯತೆಗಳಿರುತ್ತದೆ. ಆರ್ಥಿಕ ಸಂಸ್ಥೆಗಳೊಡನೆ ನೈಸೆಲ್/ನೀಸೆಲ್ ಸಂಸ್ಥೆ ಸಾಲದ ಸೃಜನೆಗಾಗಿ ಜಾರಿಗೊಳಿಸಿರುವ ಒಪ್ಪಂದಗಳ ಪ್ರತಿಗಳನ್ನು ಅನುಚ್ಛೇಧ 22 ರ ಅಡಿಯಲ್ಲಿ ಸರ್ಕಾರಕ್ಕೆ ಸಲ್ಲಿಸಲು ಖಾಸಗಿ ಪಾಲುದಾರರು ನಿರಾಕರಿಸಿರುತ್ತಾರೆ. ಈ ಪರಿಸ್ಥಿತಿಯಲ್ಲಿ ಅನುಚ್ಛೇಧ 14 ರ ಅಡಿಯಲ್ಲಿ ರಾಜ್ಯ ಸರ್ಕಾರವು ಖಾಸಗಿ ಪಾಲುದಾರರು ಹಾಗೂ ಸಂಬಂಧಿತ ಗುತ್ತಿಗೆದಾರರ ಬಾಧ್ಯತೆಗಳನ್ನು ನಿರ್ವಹಿಸಿ ಕ್ರಿಯಾ ಒಪ್ಪಂದದ ವೈಫಲ್ಯತೆಗೆ ಖಾತ್ರಿಯನ್ನು ಒದಗಿಸುವ ಪ್ರತಿಪಾದನೆ ದುರುದ್ದೇಶಪೂರ್ವಕ ಎಂದು ಸಮಿತಿ ನಿರ್ಧರಿಸುತ್ತದೆ. ಆದುದರಿಂದ ರಾಜ್ಯ ಸರ್ಕಾರವು ಕ್ರಿಯಾ ಒಪ್ಪಂದದ ಅನುಗುಣವಾಗಿ ಇರುವ ಬಾಧ್ಯತೆಗಳಿಗೆ ಮಾತ್ರ ಈ ಅನುಚ್ಛೇಧದಡಿ ಖಾತ್ರಿಯನ್ನು ಸೀಮಿತಗೊಳಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಸರ್ಕಾರವು ಈ ಯೋಜನೆಯ ಅನುಷ್ಠಾನದಲ್ಲಿ ಆರ್ಥಿಕ ಬೆಂಬಲವನ್ನು ಖಾಸಗಿ ಪಾಲುದಾರರಿಗೆ ವಿಸ್ತರಿಸಿರುವ ಹಣಕಾಸು ಸಂಸ್ಥೆಗಳೊಡನೆ ನೇರವಾಗಿ ಪತ್ರ ವ್ಯವಹಾರ ನಡೆಸಿ ಕ್ರಿಯಾ ಒಪ್ಪಂದದ ಉಲ್ಲಂಘನೆಗಳ ಬಗ್ಗೆ ಸ್ಪಷ್ಟೀಕರಣವನ್ನು ಹಣಕಾಸು ಸಂಸ್ಥೆಗಳಿಗೆ ಒದಗಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. *ಕ್ರಿಯಾ ಒಪ್ಪಂದದ ಉಲ್ಲಂಘನೆಯ ಬಗ್ಗೆ ಯೋಜನಾ ಅನುಷ್ಠಾನದ ಪ್ರದೇಶಗಳಲ್ಲಿ ಜಾಹೀರಾತು ಫಲಕಗಳನ್ನು ಸರ್ಕಾರವು ಅಳವಡಿಸಬೇಕೆಂದು ಸಮಿತಿಯು ಒತ್ತಾಯಿಸುತ್ತದೆ.* ಈ ವರದಿಯಲ್ಲಿ ಪ್ರತಿಪಾದಿಸಿರುವ ಕ್ರಿಯಾ ಒಪ್ಪಂದದ ಉಲ್ಲಂಘನೆಗಳ ಆಧಾರದ ಮೇಲೆ ಅನುಚ್ಛೇಧ 14 ರ ಅಡಿಯಲ್ಲಿ ಸರ್ಕಾರದ ಬಾಧ್ಯತೆ ಹಾಗೂ ಖಾತ್ರಿಯ ವ್ಯಾಪ್ತಿಯನ್ನು ನಿರ್ದಿಷ್ಟವಾಗಿ ಮಿತಿಗೊಳಿಸಿ ಖಾಸಗಿ ಪಾಲುದಾರರಿಗೆ ನೋಟೀಸನ್ನು ಜಾರಿ ಮಾಡಬೇಕೆಂದು ಸಮಿತಿಯು ಆಗ್ರಹಿಸುತ್ತದೆ.ಈ ವರದಿಯನ್ನು ಸಲ್ಲಿಸಿದ ಒಂದು ತಿಂಗಳೊಳಗಾಗಿ ತ್ರಿಪಕ್ಷೀಯ ಒಪ್ಪಂದದ ಹಿನ್ನೆಲೆಯಲ್ಲಿ ಸೃಜಿಸಲಾದ ಬಾಧ್ಯತೆಗಳಿಗೆ ಸರ್ಕಾರವು ಬದ್ಧವಾಗಿರುವುದಿಲ್ಲ ಎಂಬ ಅಂಶವನ್ನು ಹಣಕಾಸು ಸಂಸ್ಥೆಗಳಿಗೆ ಸ್ಪಷ್ಟೀಕರಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

೨೫. ೨೧ ಅಧ್ಯಾಯ ೫ಕ್ಕೆ ಅನ್ವಯಿಸುವಂತೆ ಸಮಿತಿಯ ವಿಶ್ಲೇಷಣೆ ಹಾಗೂ ಶಿಫಾರಸ್ಸುಗಳು ಕೆಳಕಂಡಂತಿವೆ:

ಅನುಚ್ಛೇದದ ಅಡಿಯಲ್ಲಿ FORCE MAJEURE ಬಗ್ಗೆ ಚರ್ಚಿಸಲಾಗಿದೆ. ಇಲ್ಲಿ ಕಲ್ಪಿಸಲಾಗಿರುವ ಅವಕಾಶಗಳ ಅನುಗುಣವಾಗಿ ಸರ್ಕಾರ ಅಥವಾ ಖಾಸಗಿ ಪಾಲುದಾರರ ವತಿಯಿಂದ ಕ್ರಿಯಾ ಒಪ್ಪಂದದ ಅನುಗುಣವಾಗಿ ಯಾವುದೇ ಕರ್ತವ್ಯಗಳನ್ನು ಅಥವಾ ಭದ್ರತೆಗಳನ್ನು ನಿರ್ವಹಿಸುವಲ್ಲಿ ವೈಫಲ್ಯವುಂಟಾದಲ್ಲಿ ಯೋಜನಾ ಅನುಷ್ಠಾನ ಅಥವಾ ಟೋಲ್ ಕನ್ಸೆಷನ್ ಅವಧಿಯನ್ನು ವಿಸ್ತರಿಸುವ ಬಗ್ಗೆ ಪ್ರಸ್ತಾಪಿಸಲಾಗಿದೆ. ಪ್ರಮುಖವಾಗಿ ಪ್ರಥಮ ಫೈನಾನ್ಷಿಯಲ್ ಕ್ಲೋಷರ್ ಸಾಧಿಸುವ ಪೂರ್ವದಲ್ಲಿ ಅಥವಾ ನಂತರದಲ್ಲಿ ಈ ಸಂದರ್ಭ ಬಂದರೆ ರಾಜ್ಯ ಸರ್ಕಾರವು ನೀಡಬೇಕಾಗಿರುವ Carrying Cost ಬಗ್ಗೆ ವಿವರಣೆ ನೀಡಬೇಕಾಗುತ್ತದೆ. ಈ ಅನುಚ್ಛೇಧದಡಿ ಎರಡೂ ಪಾಲುದಾರರು ಪರಸ್ಪರ ಸಹಕಾರದೊಂದಿಗೆ ಪರ್ಯಾಯ ವ್ಯವಸ್ಥೆಗಳನ್ನು ನಿರ್ಧರಿಸುವ ಅವಕಾಶಗಳನ್ನು ಕಲ್ಪಿಸಲಾಗಿದೆ. ಅನುಚ್ಛೇಧದ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಖಾಸಗಿ ಪಾಲುದಾರರು ಯೋಜನಾ ಅನುಷ್ಠಾನದಲ್ಲಿ ಸೃಷ್ಟಿಸಿರುವ ಸಂದಿಗ್ಧತೆಗಳು ಕೆಳಕಂಡಂತಿದ್ದು, ಇದರ ಆಧಾರದ ಮೇಲೆ FORCE MAJEURE ಷರತ್ತನ್ನು ಸರ್ಕಾರವು ಜಾರಿಗೊಳಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ:

1. ೬೫ ಕಿ.ಮೀ. ಕಾಂಕ್ರೀಟ್ ರಸ್ತೆಯನ್ನು ೩ ವರ್ಷಗಳಲ್ಲಿ ಸಂಪೂರ್ಣಗೊಳಿಸಿರುವುದಿಲ್ಲ.
೨. ಸೆಕ್ಷನ್ 'ಎ' ವ್ಯಾಪ್ತಿಯಡಿಯಲ್ಲಿ ನಗರ ಸಮುಚ್ಛಯ -1ನ್ನು ಅನಧಿಕೃತವಾಗಿ ಸೇರ್ಪಡೆ ಮಾಡಿ, ಲಾಭವನ್ನು ಪಡೆದಿರುವುದು.
೩. ಕ್ರಿಯಾ ಒಪ್ಪಂದವನ್ನು ಉಲ್ಲಂಘಿಸಿ ಇಂಟರ್ ಛೇಂಜ್ ವ್ಯಾಪ್ತಿಯ ಜಮೀನಿನ ಮಾರಾಟದ ಸೌಲಭ್ಯವನ್ನು ಸೃಷ್ಟಿಸಿರುವುದು. ಈ ಸೌಲಭ್ಯದ ಆಧಾರದ ಮೇಲೆ ಸಾಲವನ್ನು ಪಡೆದಿರುವುದು ಹಾಗೂ ಅನಧಿಕೃತ ವಹಿವಾಟುಗಳನ್ನು ಜಾರಿಗೊಳಿಸಿರುವುದು.

ಈ ಅಂಶಗಳ ಹಿನ್ನಲೆಯಲ್ಲಿ, ಸರ್ಕಾರವು ಯಾವುದೇ ಮೂರನೆಯ ವ್ಯಕ್ತಿಗೆ ಸೆಕ್ಷನ್ 'ಎ' ವ್ಯಾಪ್ತಿಯಲ್ಲಿ ಕ್ರಿಯಾ ಒಪ್ಪಂದವನ್ನು ಉಲ್ಲಂಘಿಸಿ ಮಾಡಿರುವ ಸಾಲವನ್ನು ಮರುಪಾವತಿಸಲು ಬದ್ಧವಾಗಿರುವುದಿಲ್ಲವೆಂದು ಸಮಿತಿಯು ನಿರ್ಧರಿಸಿರುತ್ತದೆ. ಕ್ರಿಯಾ ಒಪ್ಪಂದದ ಅನುಚ್ಛೇಧ-12ರಡಿಯಲ್ಲಿ ಸರ್ಕಾರದ ಬಾಧ್ಯತೆಗಳ ನಿರ್ವಹಣೆ ಟೋಲ್ ರಸ್ತೆಯ ನಿರ್ಮಾಣಕ್ಕೆ ಹೂಡಿರುವ ಬಂಡವಾಳಕ್ಕೆ ಸೀಮಿತವಾಗಿರುವುದೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. (ಪುಟ ಸಂಖ್ಯೆ ೫೩ ರಿಂದ ೫೯)

25. ಕ್ರಿಯಾ ಒಪ್ಪಂದದ ಅನುಚ್ಛೇಧ 16.2ರಡಿಯಲ್ಲಿ ಖಾಸಗಿ ಪಾಲುದಾರರು ಯೋಜನಾ ಅನುಷ್ಠಾನದಲ್ಲಿ ವಿಫಲವಾದಲ್ಲಿ ಅಥವಾ ಕ್ರಿಯಾ ಒಪ್ಪಂದದ ಅನುಗುಣವಾಗಿ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಲೋಪವೆಸಗಿದಲ್ಲಿ ಕರ್ನಾಟಕ ಸರ್ಕಾರವು ನೋಟಿಸ್ ಜಾರಿ ಮಾಡುವ ಸೌಲಭ್ಯವನ್ನು ಕಲ್ಪಿಸಲಾಗಿದೆ. ಕ್ರಿಯಾ ಒಪ್ಪಂದದ ಅನುಗುಣವಾಗಿ ಹಾಗೂ ಪೂರಕ ಒಪ್ಪಂದಗಳ ಪರಿಷ್ಕೃತ ಭೌತಿಕ ಗುರಿಗಳ ಅನುಗುಣವಾಗಿ ಖಾಸಗಿ ಪಾಲುದಾರರು ಪ್ರಗತಿಯನ್ನು ಸಾಧಿಸಿರುವುದಿಲ್ಲ. ಇದಲ್ಲದೇ ಟೋಲ್ ರಸ್ತೆಯ ನಿರ್ಮಾಣಕ್ಕೆ ಅನ್ವಯಿಸುವಂತೆ ತಾಂತ್ರಿಕ ಮಾನದಂಡಗಳ ಪಾಲನೆ ಅಂದರೆ ಕಾಂಕ್ರೀಟ್ ರಸ್ತೆಯ ನಿರ್ಮಾಣವನ್ನು ಕೈಗೊಂಡಿರುವುದಿಲ್ಲ. ಕಾಂಕ್ರೀಟ್ ರಸ್ತೆ ನಿರ್ಮಾಣ ಮಾಡಲು ಸರ್ಕಾರವು ನೀಡಿರುವ ವಿಸ್ತರಿತ ಅವಧಿಯಲ್ಲಿಯೂ ಸಹ ಈ ಕಾಮಗಾರಿ ಸಂಪೂರ್ಣಗೊಂಡಿರುವುದಿಲ್ಲ. ಆದರೆ, ಕ್ರಿಯಾ ಒಪ್ಪಂದದ ಈ ಅನುಚ್ಛೇಧದಡಿ ಸರ್ಕಾರವು ನಿರ್ದಿಷ್ಟವಾಗಿ ಲೋಕೋಪಯೋಗಿ ಇಲಾಖೆ ನೋಟಿಸ್‌ಗಳನ್ನು ಜಾರಿ ಮಾಡಿರುವುದಿಲ್ಲ. ಈ ಹಿನ್ನಲೆಯಲ್ಲಿ ಕ್ರಿಯಾ ಒಪ್ಪಂದದ ಅನುಚ್ಛೇಧ 16.2ರಡಿಯಲ್ಲಿ ಖಾಸಗಿ ಪಾಲುದಾರರಿಗೆ ಈ ಕೂಡಲೇ ಕ್ರಿಯಾ ಒಪ್ಪಂದದ ಉಲ್ಲಂಘನೆ ಆಧಾರದ ಮೇಲೆ ನೋಟಿಸ್‌ನ್ನು ಜಾರಿ ಮಾಡಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

ಕ್ರಿಯಾ ಒಪ್ಪಂದದ ಅನುಚ್ಛೇಧ-16.6 ಹಾಗೂ 16.7ರ ಅಡಿಯಲ್ಲಿ ರಾಜ್ಯ ಸರ್ಕಾರವು ಯೋಜನೆಯನ್ನು ಸಂಪೂರ್ಣವಾಗಿ ಖರೀದಿಸುವ ಅವಕಾಶವನ್ನು ಕಲ್ಪಿಸಲಾಗಿದೆ. ಈ ಖರೀದಿಯನ್ನು ರಾಜ್ಯ ಸರ್ಕಾರ ವೃತ್ತಿಪರ **Appraisers**ನಿರ್ಧರಿಸಿರುವ **Termination Purchase Price** ನೀಡಿ ಖರೀದಿಸಬೇಕಾಗುವುದು. ಅನುಚ್ಛೇಧ-16.7ರಡಿಯಲ್ಲಿ ಖಾಸಗಿ ಪಾಲುದಾರರು ಯಥಾಸ್ಥಿತಿಯಲ್ಲಿ ರಾಜ್ಯ ಸರ್ಕಾರಕ್ಕೆ ಯೋಜನೆಯನ್ನು ಮಾರಾಟ ಮಾಡುವ ಅವಕಾಶವನ್ನು ಕಲ್ಪಿಸಲಾಗಿದೆ. ಎರಡೂ ಪ್ರಕರಣಗಳಲ್ಲಿಯೂ ಖಾಸಗಿ ಪಾಲುದಾರರ ಬಾಧ್ಯತೆಗಳನ್ನು ಸರ್ಕಾರ ನಿರ್ವಹಿಸಬೇಕಾಗುತ್ತದೆ. ಈ ದರವನ್ನು ನಿಗದಿಪಡಿಸುವ ವಿಧಿವಿಧಾನಗಳನ್ನು ಅನುಚ್ಛೇಧ-16.8.1 ರಲ್ಲಿ ಉಲ್ಲೇಖಿಸಲಾಗಿದೆ. ಖಾಸಗಿ ಪಾಲುದಾರರು ಹಾಗೂ ಸರ್ಕಾರವು ಸಹಮತಿ ಸೂಚಿಸುವ **Appraisers** ಈ ಮೌಲ್ಯವನ್ನು ನಿರ್ಧರಿಸಬಹುದಾಗಿದೆ. ಈ ನಿರ್ಧರಣೆಗೆ ಎರಡೂ ಪಕ್ಷಗಳೂ ಪರಸ್ಪರ ಒಪ್ಪದಿದ್ದಲ್ಲಿ **Institute of Chartered Accountants of India** ಸಂಸ್ಥೆಯ ಮೂಲಕ ಮೌಲ್ಯಮಾಪನ ಕೈಗೊಳ್ಳಬಹುದಾಗಿದೆ. ಈ ಮೌಲ್ಯವನ್ನು ಎರಡೂ ಪ್ರಸಂಗಗಳಲ್ಲಿ ನಿರ್ಧರಿಸಬೇಕಾಗುವುದು. ಆದರೆ, ಅನುಚ್ಛೇಧ-16.8.2.1 ರ ಉಪ ಕಂಡಿಕೆ (3)ರಡಿಯಲ್ಲಿ ಮೂಲಭೂತ ಸೌಕರ್ಯ ಯೋಜನೆಯ ಯಾವುದೇ ಸ್ತರದ ಮೌಲ್ಯವನ್ನು ಯಾವುದೇ ಸಂದರ್ಭದಲ್ಲೂ ಕಡಿತಗೊಳಿಸುವಂತಿಲ್ಲ ಎಂಬ ಷರತ್ತನ್ನು ವಿಧಿಸಲಾಗಿದೆ. ಅಂದರೆ ಯೋಜನಾ ಅನುಷ್ಠಾನದಲ್ಲಿ ಖಾಸಗಿ ಪಾಲುದಾರರ ವೈಫಲ್ಯತೆ ಅಥವಾ ಸರ್ಕಾರದ

ವೈಫಲ್ಯತೆಗಳನ್ನು ಈ ಸ್ತರದಲ್ಲಿ ಪರಿಗಣಿಸಲು ಅವಕಾಶವಿರುವುದಿಲ್ಲ. ಈ ಸೌಲಭ್ಯವು ನ್ಯಾಯಬಾಹಿರ ಎಂದು ಸಮಿತಿಯು ತೀರ್ಮಾನಿಸುತ್ತದೆ. ಈ ಷರತ್ತಿನಿಂದಾಗಿ ಎಲ್ಲಾ ವೈಫಲ್ಯತೆಗಳು, ಅನಪೇಕ್ಷಿತ ಬೆಳವಣಿಗೆಗಳು ಹಾಗೂ ಸಂದಿಗ್ಧತೆಗಳನ್ನು ನಿರ್ಲಕ್ಷಿಸಿ ಯೋಜನೆಯ ಮೌಲ್ಯಮಾಪನವನ್ನು ಮಾಡಬೇಕಾಗುವುದು. ಸಮಿತಿಯು ಈ ವರದಿಯ ವಿವಿಧ ಭಾಗಗಳಲ್ಲಿ ಖಾಸಗಿ ಪಾಲುದಾರರಿಗೆ ಆಗಿರುವ ಅನುದ್ದೇಶಿತ ಆದಾಯ ಅಥವಾ ಸ್ವೀಕೃತಿಗಳ ಬಗ್ಗೆ ಪ್ರತಿಪಾದಿಸಲಾಗಿದೆ. ಪ್ರಸಕ್ತ ಸ್ತರದಲ್ಲಿ ಯೋಜನೆಯ ಸೆಕ್ಷನ್ 'ಎ' ಗೆ ಪ್ರಗತಿ ಸೀಮಿತವಾಗಿರುವುದರಿಂದ ಈ ಮೌಲ್ಯವನ್ನು ಸಂಪೂರ್ಣಗೊಳಿಸಿರುವ ಕಾಮಗಾರಿಗಳಿಗೆ ಸೀಮಿತವಾದಂತೆ ನಿರ್ಧರಿಸಬೇಕಾಗುವುದು. ಇದಲ್ಲದೆ, ಸೆಕ್ಷನ್ 'ಎ' ಸ್ತರದ ಅನುಷ್ಠಾನವನ್ನು ನೀಸಲ್ ಸಂಸ್ಥೆಗೆ ವಹಿಸಿರುವ ಹಿನ್ನೆಲೆಯಲ್ಲಿ **Termination Purchase Price** ಅನ್ನು ಪ್ರತ್ಯೇಕ ಸ್ತರಗಳನ್ನು ನಿಗದಿಪಡಿಸಿ ಪ್ರತ್ಯೇಕ ಸಂಸ್ಥೆಗಳಿಗೆ ವಹಿಸಿದಲ್ಲಿ ಉಂಟಾಗುವ ಬಾಧ್ಯತೆಗಳಿಗೆ ಸೀಮಿತಗೊಳಿಸಬೇಕು ಎಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಈಗಿರುವ ಸಂದರ್ಭದ ಅನುಸಾರವಾಗಿ ಯೋಜನೆಯನ್ನು ಮೂರು ಸ್ತರಗಳಲ್ಲಿ ವಿಭಜಿಸಿರುವುದರಿಂದ ಅನುಷ್ಠಾನವಾಗುತ್ತಿರುವ ಸ್ತರಕ್ಕೆ ಹಾಗೂ ಅನುಷ್ಠಾನ ಮಾಡುತ್ತಿರುವ ನೀಸಲ್ ಕಂಪನಿಯ ಈಕ್ವಿಟಿ, ಸಾಲ ಹಾಗೂ ಹೂಡಿಕೆಯ ಮೇಲಿನ ಪ್ರತಿಫಲಕ್ಕೆ **Termination Purchase Price** ಸೀಮಿತವಾಗಬೇಕಾಗುತ್ತದೆ. ಪ್ರಸ್ತಾವಿತ ಅನುಚ್ಛೇಧದಲ್ಲಿ ಅನುದ್ದೇಶಿತ ಲಾಭ ಹಾಗೂ ಆದಾಯಗಳ ಬಗ್ಗೆ ಚರ್ಚಿಸಿರುವುದಿಲ್ಲ. ಈ ಹಿನ್ನೆಲೆಯಲ್ಲಿ, **Termination Purchase Price** ಇತ್ಯರ್ಥಗೊಳಿಸುವಲ್ಲಿ ಖಾಸಗಿ ಪಾಲುದಾರರ ವೈಫಲ್ಯತೆಯ ಹಿನ್ನೆಲೆಯಲ್ಲಿ ಮೌಲ್ಯಮಾಪನವನ್ನು ಮಾಡಬೇಕೆಂದು ಸಮಿತಿಯು ಶಿಫಾರಸ್ಸನ್ನು ಮಾಡುತ್ತದೆ. ಇದಲ್ಲದೆ, ಈ ವರದಿಯಲ್ಲಿ ಚರ್ಚಿಸಿರುವಂತೆ ಈ ಕೆಳಗೆ ನಮೂದಿಸಿರುವ ಅನುದ್ದೇಶಿತ ಅಥವಾ ಅನಪೇಕ್ಷಿತ ಸ್ವೀಕೃತಿ ಆದಾಯಗಳನ್ನು ಹೊಂದಾಣಿಕೆಯ ಮುಖಾಂತರ ಹಿಂಪಡೆಯಲು ಸರ್ಕಾರವು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

1. ಪೆರಿಫೆರಲ್ ರಸ್ತೆಗೆ ಅನ್ವಯಿಸುವಂತೆ ಕ್ರಿಯಾ ಒಪ್ಪಂದಕ್ಕೆ ವ್ಯತಿರಿಕ್ತವಾಗಿ ನೀಡಿರುವ ೨೮4 ಎಕರೆ ವಿಸ್ತೀರ್ಣದ ಜಮೀನಿನ ಮೌಲ್ಯ.
2. ಲಿಂಕ್ ರಸ್ತೆಗೆ ಅನ್ವಯಿಸುವಂತೆ ಕ್ರಿಯಾ ಒಪ್ಪಂದಕ್ಕೆ ವ್ಯತಿರಿಕ್ತವಾಗಿ 52 ಎಕರೆಗಳ ವಿಸ್ತೀರ್ಣದ ಜಮೀನಿನ ಮೌಲ್ಯ.
3. ಅನಧಿಕೃತ ಗಣಿಗಾರಿಕೆಯಿಂದಾಗಿ ಖಾಸಗಿ ಪಾಲುದಾರರ ಸರ್ಕಾರಕ್ಕೆ ಪಾವತಿಸಬೇಕಿರುವ ರಾಜಧನ ಹಾಗೂ ದಂಡದ ಮೌಲ್ಯ.

4. ಕ್ರಿಯಾ ಒಪ್ಪಂದವನ್ನು ಉಪೇಕ್ಷಿಸಿ ದಿನಾಂಕ 09.08.2002ರಂದು ಜಾರಿಗೊಳಿಸಲಾದ ಅನಧಿಕೃತ ತ್ರಿಪಕ್ಷೀಯ ಒಪ್ಪಂದದ ಆಧಾರದ ಮೇಲೆ ಸೆಕ್ಷನ್ 'ಎ' ವ್ಯಾಪ್ತಿಯಲ್ಲಿ ಜಾರಿಗೊಳಿಸಲಾದ ಜಂಟಿ ಅಭಿವೃದ್ಧಿ ಒಪ್ಪಂದ, ಪರಭಾರೆ ಹಾಗೂ ಮಾರಾಟಗಳ ಮುಖಾಂತರ ಜಾರಿಗೊಳಿಸಲಾದ ವಹಿವಾಟುಗಳ ನಿವ್ವಳ ಮೌಲ್ಯ.
5. 2004 ರಲ್ಲಿ ಅನುಮೋದಿಸಲಾದ ಓ.ಡಿ.ಪಿ. ಅನುಗುಣವಾಗಿ ವಾಣಿಜ್ಯ ಬಳಕೆಗಾಗಿ ನಿಗದಿಪಡಿಸಿರುವ ಜಮೀನಿನ ಪ್ರಮಾಣವನ್ನು ಪರಿಷ್ಕರಿಸಿರುವುದರಿಂದ ವಾಣಿಜ್ಯ ಬಳಕೆಗಾಗಿ 1994 ಎಕರೆಗಳನ್ನು ನಗರ ಸಮುಚ್ಛಯ ಅಭಿವೃದ್ಧಿಗೆ ಹೆಚ್ಚುವರಿಯಾಗಿ ನೀಡಲಾಗಿದೆ ಎಂದು ಸಮಿತಿಯು ಅಭಿಪ್ರಾಯ ಪಡುತ್ತದೆ.ಈ ಹಿನ್ನೆಲೆಯಲ್ಲಿ, ಈ ಹೆಚ್ಚುವರಿ ಸೌಲಭ್ಯದ ಮೌಲ್ಯಮಾಪನವನ್ನು ಸೆಕ್ಷನ್ 'ಬಿ' ಮತ್ತು 'ಸಿ' ಸ್ತರದ ಅನುಷ್ಠಾನದಲ್ಲಿ ಪರಿಗಣಿಸಬೇಕಾಗುವುದು.
6. ಖಾಸಗಿ ಪಾಲುದಾರರು ಯೋಜನಾ ತಾಂತ್ರಿಕ ವರದಿಯ ಮಾನದಂಡಗಳು, ಸರ್ಕಾರದ ನಿರ್ದೇಶನಗಳು ಹಾಗೂ ಟೋಲ್ ಕನ್ಸೆಷನ್ ಒಪ್ಪಂದವನ್ನು ಉಲ್ಲಂಘಿಸಿ ಈವರೆವಿಗೂ ಕಾಂಕ್ರೀಟ್ ರಸ್ತೆಯನ್ನು ನಿರ್ಮಿಸದೇ ಡಾಂಬರೀಕೃತ ರಸ್ತೆಯನ್ನು ನಿರ್ಮಿಸಿ ಟೋಲ್ ಸಂಗ್ರಹಣೆಗಳನ್ನು ಜಾರಿಗೊಳಿಸುತ್ತಿದ್ದಾರೆ. ಮೊದಲನೇ ಸ್ತರದಲ್ಲಿ ಟೋಲ್ ಸಂಗ್ರಹಣೆಯನ್ನು ಸ್ಥಗಿತಗೊಳಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಎರಡನೇ ಸ್ತರದಲ್ಲಿ ಯೋಜನಾ ತಾಂತ್ರಿಕ ವರದಿಯ ಮಾನದಂಡಗಳ ಅನುಗುಣವಾಗಿ ಡಾಂಬರೀಕೃತ ರಸ್ತೆಗೆ ದರಗಳನ್ನು ವಿಧಿಸಿ ಪ್ರಸಕ್ತವಾಗಿ ವಿಧಿಸುತ್ತಿರುವ ಟೋಲ್ ದರಗಳ ಹಿನ್ನೆಲೆಯಲ್ಲಿ ಅನಧಿಕೃತ ಆದಾಯವನ್ನು ನಿರ್ಧರಿಸಿ ವ್ಯತ್ಯಾಸದ ವಸೂಲಾತಿ ಕ್ರಮವನ್ನು ನಿರ್ವಹಿಸುವ ಅವಶ್ಯಕತೆ ಇರುತ್ತದೆ.
7. ಕೆ.ಎ.ಐ.ಡಿ.ಬಿ. ಅಧಿನಿಯಮದಲ್ಲಿ ಭೂ ಪರಿಹಾರ ಹಣದ ಪಾವತಿಯ ಬಗ್ಗೆ ನಿರ್ದಿಷ್ಟ ಮಾನದಂಡಗಳಿವೆ. ನೈಸಲ್ ಹಾಗೂ ನೀಸಲ್ ಈ ಮಾನದಂಡಗಳನ್ನು ಸಡಿಲಗೊಳಿಸಿ ಅವರಿಗೆ ಅನುಕೂಲವಾಗುವ ರೀತಿಯಲ್ಲಿ ಕಂತುಗಳಲ್ಲಿ ಪರಿಹಾರ ಪಾವತಿಯ ಸೌಲಭ್ಯವನ್ನು ನೀಡಲಾಗಿದೆ. ವಾಸ್ತವಿಕವಾಗಿ ಕಲಂ 28(1)ರ ಅಧಿಸೂಚನೆಯನ್ನು ಪರಿಹಾರ ಪಾವತಿಯ ಮೊತ್ತವನ್ನು ಸ್ವೀಕರಿಸದೆ ಜಾರಿಗೊಳಿಸಲಾಗಿದೆ. ಈ ವಿನಾಯಿತಿಯಿಂದ ಖಾಸಗಿ ಪಾಲುದಾರರಿಗೆ ಬಡ್ಡಿಯ ಬಾಧ್ಯತೆಯನ್ನು ಮಿತಿಗೊಳಿಸುವ ಅವಕಾಶ ನೀಡಲಾಗಿದೆ. ಈ ಸೌಲಭ್ಯದಿಂದ ಆಗಿರುವ ಅನುದ್ದೇಶಿತ ಲಾಭದ ಮೌಲ್ಯಮಾಪನವನ್ನು ಸರ್ಕಾರವು ಮಾಡಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

ಪ್ರಸ್ತಾವಿತ ಅನುದ್ದೇಶಿತ ಲಾಭ/ಸ್ವೀಕೃತಿಯಿಂದಾಗಿ ಯೋಜನೆಯ ಮೂಲ ಆರ್ಥಿಕ ಮೌಲ್ಯಮಾಪನವು ಅಸಮರ್ಪಕವಾಗಿವೆ. ಆದುದರಿಂದ, ಕ್ರಿಯಾ ಒಪ್ಪಂದದಲ್ಲಿ ಪ್ರತಿಪಾದಿಸಿರುವ

Carrying Cost, IRR ಹಾಗೂ NPVಗಳನ್ನು ಈ ವರದಿಯಲ್ಲಿ ಪ್ರತಿಪಾದಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕೂಡಲೇ ಪರಿಷ್ಕರಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಈ ಪರಿಷ್ಕರಣೆಯ ಫಲಿತಾಂಶದ ಆಧಾರಗಳ ಮೇಲೆ ಕ್ರಿಯಾ ಒಪ್ಪಂದದಲ್ಲಿ ಪ್ರತಿಪಾದಿಸಿರುವ Toll Concession Periodಅನ್ನು ಸೂಕ್ತ ಅನುಪಾತದಲ್ಲಿ ಪರಿಷ್ಕರಿಸಲು ಕಾನೂನು ರೀತ್ಯ ಕ್ರಮ ಜರುಗಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. (ಪುಟ ಸಂಖ್ಯೆ: 119 ರಿಂದ 122)

25. ಕ್ರಿಯಾ ಒಪ್ಪಂದದ ಅನುಚ್ಛೇಧ 17ಕ್ಕೆ ಸಂಬಂಧಿಸಿದಂತೆ ಸಮಿತಿಯ ಶಿಫಾರಸ್ಸುಗಳು :

ಈ ಅನುಚ್ಛೇಧದಡಿ ಸರ್ಕಾರದ ವತಿಯಿಂದ ಆಗುವ ವೈಫಲ್ಯತೆಗಳು, ವಿಳಂಬಗಳು, ಇದರಿಂದಾಗಿ ಉಂಟಾಗುವ ಬಾಧ್ಯತೆಯನ್ನು ಸರ್ಕಾರವು ಭರಿಸಬೇಕು ಎಂದು ತಿಳಿಸಲಾಗಿದೆ. ವಿಪರ್ಯಾಸವೆಂದರೆ ಖಾಸಗಿ ಪಾಲುದಾರರ ವೈಫಲ್ಯತೆಯಿಂದ ಆಗುವ ಬಾಧ್ಯತೆಯ ಬಗ್ಗೆ ಯಾವುದೇ ಪ್ರತಿಪಾದನೆಗಳಿರುವುದಿಲ್ಲ. ವಾಸ್ತವಿಕವಾಗಿ ಖಾಸಗಿ ಪಾಲುದಾರರು ಪೆರಿಫೆರಲ್ ರಸ್ತೆ, ಲಿಂಕ್ ರಸ್ತೆ ಹಾಗೂ ಎಕ್ಸ್‌ಪ್ರೆಸ್‌ವೇ ಭೂಸ್ವಾಧೀನಕ್ಕೆ ತಗಲಿರುವ ವೆಚ್ಚಗಳನ್ನು ಸಲ್ಲಿಸಿರುವುದಿಲ್ಲ. ನಿರ್ಮಾಣದ ವೆಚ್ಚಗಳು ಸಹ ಲಭ್ಯವಿರುವುದಿಲ್ಲ. ಈವರೆವಿಗೂ ಅನುಷ್ಠಾನಗೊಳಿಸಿರುವ ಕಾಮಗಾರಿಗಳಿಗೆ ಅನ್ವಯಿಸುವಂತೆ ಭರಿಸಿರುವ ಬಂಡವಾಳದ ವೆಚ್ಚದ ವಿವರಗಳನ್ನು ಅನುಚ್ಛೇಧ 22.2ರ ಅಡಿಯಲ್ಲಿ ಸಲ್ಲಿಸಲು ನಿರಾಕರಿಸಿರುತ್ತಾರೆ. ಈ ವರದಿಯ ವಿವಿಧ ಭಾಗಗಳಲ್ಲಿ ಚರ್ಚಿಸಿರುವಂತೆ ಖಾಸಗಿ ಪಾಲುದಾರರು ಕ್ರಿಯಾಶೀಲವಾಗಿ ಯೋಜನಾ ಅನುಷ್ಠಾನದಲ್ಲಿ ಕಾನೂನು ಸಂದಿಗ್ಧತೆಯನ್ನು ಸೃಷ್ಟಿಸಿರುತ್ತಾರೆ. ಅನುಚ್ಛೇಧ 6ರಡಿಯಲ್ಲಿ ಹಾಗೂ 1999ರ ಪೂರಕ ಒಪ್ಪಂದದ ಅನುಗುಣವಾಗಿ ಭೌತಿಕ ಪ್ರಗತಿಯನ್ನು ಸಾಧಿಸುವಲ್ಲಿ ವಿಫಲರಾಗಿರುತ್ತಾರೆ. ಈ ಅನುಚ್ಛೇದವು ಏಕಪಕ್ಷೀಯವಾಗಿರುವುದರಿಂದ ಸರ್ಕಾರವು ಈ ವರದಿಯ ವಿಶ್ಲೇಷಣೆಯ ಆಧಾರದ ಮೇಲೆ "Company Event of Default" ಅನ್ನು ನಿರ್ಧರಿಸಿ ಕ್ರಿಯಾ ಒಪ್ಪಂದದ ಉಲ್ಲಂಘನೆಯ ಆಧಾರದ ಮೇಲೆ ಕಾನೂನು ರೀತಿ ಕ್ರಮ ಜರುಗಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. (ಪುಟ ಸಂಖ್ಯೆ: 122)

26. ಕ್ರಿಯಾ ಒಪ್ಪಂದದ ಅನುಚ್ಛೇಧ 18 ರಡಿಯಲ್ಲಿ ಪರಸ್ಪರ ವಿಚಾರ ವಿನಿಮಯ ಅಥವಾ ಚರ್ಚೆಯ ಮುಖಾಂತರ ವಿವಾದಗಳನ್ನು ಇತ್ಯರ್ಥಗೊಳಿಸುವ ಅವಕಾಶವನ್ನು ಕಲ್ಪಿಸಲಾಗಿದೆ. ಮುಂದುವರೆದಂತೆ, ವಿವಾದ ಉದ್ಭವವಾದ 60 ದಿನಗಳೊಳಗಾಗಿ ಖಾಸಗಿ ಹಾಗೂ ಸರ್ಕಾರದ ಪಾಲುದಾರರು ಒಪ್ಪುವ ಪರಿಣಿತರ ಮುಖಾಂತರ ವಿವಾದದ ಬಗ್ಗೆ ಅಭಿಪ್ರಾಯ ಪಡೆದು

ಇತ್ಯರ್ಥಗೊಳಿಸಬಹುದಾಗಿದೆ. ಪರಿಣಿತರ ಅಭಿಪ್ರಾಯ ಸರ್ಕಾರ ಹಾಗೂ ಖಾಸಗಿ ಪಾಲುದಾರರಿಗೆ ಸಮಂಜಸವಲ್ಲ ಎಂದು ಅನಿಸಿದ ಪ್ರಕರಣಗಳಲ್ಲಿ ನೋಟಿಸ್‌ನ್ನು ಜಾರಿಗೊಳಿಸುವ ಮುಖಾಂತರ ವಿವಾದವನ್ನು ಆರ್ಬಿಟ್ರೇಷನ್‌ಗೆ ವಹಿಸಬಹುದಾಗಿದೆ. ಈ ಯಾವುದೇ ವಿಧಿವಿಧಾನಗಳನ್ನು ಖಾಸಗಿ ಪಾಲುದಾರರಾಗಲಿ ಅಥವಾ ಸರ್ಕಾರವಾಗಲಿ ಜಾರಿಗೊಳಿಸಿರುವ ಬಗ್ಗೆ ಸಮಿತಿಗೆ ಮಾಹಿತಿ ಇರುವುದಿಲ್ಲ. ಈ ಸೌಲಭ್ಯವನ್ನು ಪರಿಣಾಮಕಾರಿಯಾಗಿ ಬಳಸುವಲ್ಲಿ ಸರ್ಕಾರ ವಿಫಲವಾಗಿದ್ದು, ಇದರಿಂದಾಗಿ ಯೋಜನಾ ಅನುಷ್ಠಾನದ ವಿವಾದಾತ್ಮಕ ನಿರ್ಧಾರ ಹಾಗೂ ಅನುಷ್ಠಾನಗಳನ್ನು ನ್ಯಾಯಾಲಯಗಳ ಮುಖಾಂತರ ಇತ್ಯರ್ಥಗೊಳಿಸುವ ಪರಿಸ್ಥಿತಿ ಉದ್ಭವವಾಗಿದೆ ಎಂದು ಸಮಿತಿಯು ತೀರ್ಮಾನಿಸುತ್ತದೆ. (ಪುಟ ಸಂಖ್ಯೆ: 122 ರಿಂದ 124)

27. ಕ್ರಿಯಾ ಒಪ್ಪಂದದ ಅನುಚ್ಛೇಧ 21 ರ ಅಡಿಯಲ್ಲಿ ಖಾಸಗಿ ಹಾಗೂ ಸರ್ಕಾರಿ ಪಾಲುದಾರರು ಪರಸ್ಪರ ದಾಖಲಾತಿ ಹಾಗೂ ಮಾಹಿತಿಯನ್ನು ವಿನಿಮಯ ಮಾಡಿಕೊಳ್ಳುವ ಅವಕಾಶವನ್ನು ಕಲ್ಪಿಸಲಾಗಿದೆ. ಕ್ರಿಯಾ ಒಪ್ಪಂದದಲ್ಲಿ ನಮೂದಿಸಲಾಗಿರುವ ಕರ್ತವ್ಯಗಳನ್ನು ಪಾಲಿಸುವ ಹಿತದೃಷ್ಟಿಯಿಂದ ಈ ಅವಕಾಶವನ್ನು ಕಲ್ಪಿಸಲಾಗಿದೆ. ಆದರೆ ಕರ್ನಾಟಕ ಸರ್ಕಾರವು ನಿರ್ದಿಷ್ಟವಾಗಿ ಕೋರಿದ್ದಾಗ್ಯೂ ಸಹ ಈ ಕೆಳಕಂಡ ವಿವರಗಳನ್ನು ಖಾಸಗಿ ಪಾಲುದಾರರು ಸಲ್ಲಿಸಿರುವುದಿಲ್ಲ:

a. 29.03.2014 ರ ಫೈನಾನ್ಷಿಯಲ್ ಕ್ಲೋಷರ್ ದಾಖಲಾತಿ
b. ಲೆಕ್ಕಪರಿಶೋಧನೆಗೆ ಒಳಪಡಿಸಿದ ಬ್ಯಾಲೆನ್ಸ್ ಶೀಟ್‌ಗಳು 1997 ರಿಂದ 31.03.2016 ರ ಅವಧಿಗೆ
c. ಬಂಡವಾಳ ಹೂಡಿಕೆಗೆ ಆರ್ಥಿಕ ಬೆಂಬಲ ನೀಡಿರುವ ವಿವಿಧ ಸಂಸ್ಥೆಗಳಿಗೆ ಖಾತ್ರಿ ರೂಪದಲ್ಲಿ ಸಲ್ಲಿಸಿರುವ ದಾಖಲಾತಿಗಳ ವಿವರ – ಅನುಚ್ಛೇಧ 21 ರ ಅನುಗುಣವಾಗಿ
d. 03.11.2009 ರ ಮಾನ್ಯ ಸರ್ವೋಚ್ಛ ನ್ಯಾಯಾಲಯದ ನಿರ್ದೇಶನದ ಅನುಗುಣವಾಗಿ ಖಾಸಗಿ ಹಾಗೂ ಸರ್ಕಾರಿ ಜಮೀನಿನ ವಿವರಗಳು (ಸಿ.ಸಿ. ನಂ.96/2007), 41 ಕಿ.ಮೀ. ಪೆರಿಫೆರಲ್ ರಸ್ತೆಗೆ ಅವಶ್ಯಕವಿರುವ 2193 ಎಕರೆ ಜಮೀನಿನ ವಿವರಗಳು, ಲಿಂಕ್ ರಸ್ತೆಗೆ ಅವಶ್ಯಕವಿರುವ 228 ಎಕರೆ ಜಮೀನಿನ ವಿವರಗಳು, ಎಕ್ಸ್‌ಪ್ರೆಸ್ ಹೆದ್ದಾರಿಗೆ ಅವಶ್ಯಕವಿರುವ 4528 ಎಕರೆ ಜಮೀನಿನ ವಿವರಗಳು, ನಗರ ಸಮುಚ್ಛಯಗಳಿಗೆ ಅವಶ್ಯಕವಿರುವ 13,194 ಎಕರೆ ಜಮೀನಿನ ವಿವರಗಳು.
e. ಯೋಜನೆಯ ಸೆಕ್ಷನ್ 'ಎ' ಗೆ ಅನ್ವಯಿಸುವಂತೆ ಕ್ಲಡಸ್ಟಲ್ ಮ್ಯಾಪುಗಳು
f. ಕ್ರಿಯಾ ಒಪ್ಪಂದದ ಅನುಚ್ಛೇಧ 3.8.3 ರ ಅನುಗುಣವಾಗಿ ಸಲ್ಲಿಸಬೇಕಾದ ನಕ್ಷೆಗಳು

ಈ ಪ್ರಮುಖ ದಾಖಲಾತಿಗಳ ಅನುಪಸ್ಥಿತಿಯಲ್ಲಿ ಯೋಜನೆಯ ಆರ್ಥಿಕ ಮೌಲ್ಯಮಾಪನ ಹಾಗೂ ಭೂಮಿ ನಿರ್ವಹಣೆಯ ಅಂಶಗಳಿಗೆ ಸಂಬಂಧಿಸಿದ ವಿವಾದಗಳನ್ನು ತರ್ಕಬದ್ಧವಾಗಿ ಇತ್ಯರ್ಥಗೊಳಿಸಲಾಗುವುದಿಲ್ಲ ಎಂದು ಸಮಿತಿಯು ಅಭಿಪ್ರಾಯ ಪಡುತ್ತದೆ. ಆದುದರಿಂದ ಕ್ರಿಯಾ ಒಪ್ಪಂದದ ಅನುಚ್ಛೇದ 22 ರ ಉಲ್ಲಂಘನೆಯ ಆಧಾರದ ಮೇಲೆ ಖಾಸಗಿ ಪಾಲುದಾರರ ವಿರುದ್ಧ ಕಾನೂನು ರೀತ್ಯಾ ಕ್ರಮ ಜರುಗಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

28. ಕ್ರಿಯಾ ಒಪ್ಪಂದದ ಅನುಚ್ಛೇದ 21 ರ ಅನುಗುಣವಾಗಿ ಬಿ.ಎಂ.ಐ.ಸಿ. ಯೋಜನಾ ಅನುಷ್ಠಾನಕ್ಕೆ ಸಾಲವನ್ನು ನೀಡಿರುವ ಸಂಸ್ಥೆಗಳು ಯಾವುದೇ ರೀತಿಯ ವೈಫಲ್ಯತೆ ಯೋಜನಾ ಅನುಷ್ಠಾನದಲ್ಲಿ ಆದಲ್ಲಿ ಖಾಸಗಿ ಪಾಲುದಾರರನ್ನು ಕರ್ನಾಟಕ ಸರ್ಕಾರದ ಅನುಮತಿಯೊಂದಿಗೆ ಸ್ಥಾನಪಲ್ಲಟ ಮಾಡಿ ಬೇರೆ ಸಂಸ್ಥೆಯನ್ನು ನಾಮ ನಿರ್ದೇಶನ ಮಾಡುವ ಅಧಿಕಾರವನ್ನು ನೀಡಿದೆ. ಈ ರೀತಿ ನಾಮನಿರ್ದೇಶನ ಮಾಡಲಾದ ಸಂಸ್ಥೆಯು ಕಾನೂನು ಬದ್ಧವಾಗಿ ಹಾಗೂ ಅಧಿಕೃತವಾಗಿ ದೇಶದ ನಿಯಮಾವಳಿಗಳ ಅನುಸಾರವಾಗಿ ಸೃಜನೆ ಆಗಿರಬೇಕು ಹಾಗೂ ಈ ಒಪ್ಪಂದದ ಅನುಷ್ಠಾನವನ್ನು ನಿರ್ವಹಿಸುವ ಸಾಮರ್ಥ್ಯವನ್ನು ಹೊಂದಿರಬೇಕೆಂದು ಉಲ್ಲೇಖಿಸಲಾಗಿದೆ.

ನೈಸಲ್/ನೀಸಲ್ ಸಂಸ್ಥೆಗೆ ಈ ರೀತಿಯ ಖಾತ್ರಿಯನ್ನು ಸೃಜಿಸುವ ಅಧಿಕಾರವಿರುವುದನ್ನು ಸಮಿತಿಯು ಗಮನಿಸಿದೆ. ಆದರೆ, ಈ ಅಧಿಕಾರವು ಕ್ರಿಯಾ ಒಪ್ಪಂದದ ನಿರೂಪಣೆಗಳಿಗೆ ಅನುಗುಣವಾಗಿರಬೇಕಾಗುವುದು ಅವಶ್ಯಕವಾಗಿರುತ್ತದೆ. ಈ ಯೋಜನೆಯಡಿ ಸಾಲವನ್ನು 18.02.2002ರ ಅಸೈನ್ ಮೆಂಟ್ ಅಗ್ರಿಮೆಂಟ್ ಹಾಗೂ 09.03.2002ರ ತ್ರಿಪಕ್ಷೀಯ ಒಪ್ಪಂದ ಅಧಾರದ ಮೇಲೆ ನೀಡಿದ್ದಲ್ಲಿ ಈ ಕ್ರಮ ಕ್ರಿಯಾ ಒಪ್ಪಂದದ ಅನುಗುಣವಾಗಿರುವುದಿಲ್ಲ. ಈ ವರದಿಯಲ್ಲಿ ಪ್ರತಿಪಾದಿಸಿರುವಂತೆ ತ್ರಿಪಕ್ಷೀಯ ಒಪ್ಪಂದ ಕ್ರಿಯಾ ಒಪ್ಪಂದದ ಸ್ಪಷ್ಟ ಹಾಗೂ ನೇರ ಉಲ್ಲಂಘನೆಯಾಗಿರುತ್ತದೆ. ಈ ಹಿನ್ನಲೆಯಲ್ಲಿ ನೈಸಲ್/ನೀಸಲ್ ಸಂಸ್ಥೆಯು ತ್ರಿಪಕ್ಷೀಯ ಒಪ್ಪಂದ ಆಧಾರದ ಮೇಲೆ ಸೃಜಿಸಿರುವ ಖಾತ್ರಿಗಳ ಸಮರ್ಪಕತೆಯನ್ನು ದೃಢೀಕರಿಸಿಕೊಳ್ಳಲು ಸರ್ಕಾರವು ಕಾನೂನು ರೀತಿಯ ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತಿದೆ.

29. ಅನುಚ್ಛೇದ 22.1 ರ ಅಡಿಯಲ್ಲಿ ಪರಸ್ಪರ ಮಾಹಿತಿಯನ್ನು ವಿನಿಮಯ ಮಾಡಿಕೊಳ್ಳುವ ಅವಕಾಶವನ್ನು ಕಲ್ಪಿಸಲಾಗಿದೆ. ಈ ವರದಿಯಲ್ಲಿ ಚರ್ಚಿಸಿರುವಂತೆ ಯೋಜನಾ ಅನುಷ್ಠಾನದ ಪರಿಣಾಮಕಾರಿ ಪರಿವೀಕ್ಷಣೆಗೆ ಅಗತ್ಯವಾದ ಗುರುತರ ದಾಖಲಾತಿಗಳನ್ನು ಖಾಸಗಿ ಪಾಲುದಾರರು ನಿರಾಕರಿಸಿರುತ್ತಾರೆ. ಇದಲ್ಲದೆ, ಈ ಅನುಚ್ಛೇದದಡಿ ಸ್ಥಳ ಪರಿವೀಕ್ಷಣೆಯ ಸೌಲಭ್ಯವನ್ನು ಕಲ್ಪಿಸಲಾಗಿದ್ದು, ಈ ಸೌಲಭ್ಯವನ್ನು ಬಳಸುವಲ್ಲಿ ಸರ್ಕಾರ ಹಾಗೂ ಸರ್ಕಾರದ ಪ್ರತಿನಿಧಿತ್ವ ಹೊಂದಿರುವ ಸಂಸ್ಥೆಗಳು ಸಂಪೂರ್ಣವಾಗಿ ವಿಫಲವಾಗಿರುತ್ತವೆ. ಈ ಅನುಚ್ಛೇದದಡಿ ಪಂಕ್ತೀಕರಣ, ಜಮೀನಿನ ಅವಶ್ಯಕತೆ, ವಿಸ್ತೀರ್ಣ, ಸ್ಥಳ, ವಿನ್ಯಾಸ ಇತ್ಯಾದಿ ಮಾಹಿತಿಗಳನ್ನು ಸಲ್ಲಿಸಲು ಖಾಸಗಿ ಪಾಲುದಾರರು ಬದ್ಧರಾಗಿರುತ್ತಾರೆ. ಲೋಕೋಪಯೋಗಿ ಇಲಾಖೆಯು ಹಲವಾರು ಬಾರಿ ಕೋರಿದ್ದಾಗ್ಯೂ, ಅನುಚ್ಛೇದ 22.4 ರ ಅಡಿಯಲ್ಲಿ ಖಾಸಗಿ ಪಾಲುದಾರರು ಮಾಹಿತಿಯನ್ನು

ಸಲ್ಲಿಸಲು ನಿರಾಕರಿಸಿಯುತ್ತಾರೆ. ಅನುಚ್ಛೇದ 22.6 ಖಾಸಗಿ ಹಾಗೂ ಸರ್ಕಾರದ ಪ್ರತಿನಿಧಿಗಳು ಗೌಪ್ಯವೆಂದು ಸ್ವೀಕರಿಸುವ ಮಾಹಿತಿಯನ್ನು ಗೌಪ್ಯವಾಗಿ ನಿರ್ವಹಿಸುವ ಬಗ್ಗೆ ಪ್ರತಿಪಾದಿಸುತ್ತದೆ. ಅಂದರೆ ಗೌಪ್ಯ ಮಾಹಿತಿಯನ್ನು ಪ್ರಕಟಿಸುವುದನ್ನು ಅಥವಾ ಸ್ವಂತ ಬಳಕೆಗೆ ಬಳಸುವುದನ್ನು ನಿರ್ಬಂಧಿಸಲಾಗಿದೆ. ಆದರೆ ಖಾಸಗಿ ಪಾಲುದಾರರು ಪ್ರಮುಖ ಮಾಹಿತಿಗಳನ್ನು ಸರ್ಕಾರಕ್ಕೆ ಅಥವಾ ಸರ್ಕಾರದ ಪ್ರತಿನಿಧಿತ್ವ ಹೊಂದಿರುವ ಸಂಸ್ಥೆಗಳಿಗೆ ಮಾಹಿತಿಯನ್ನು ಸಲ್ಲಿಸುವುದನ್ನು ನಿರ್ಬಂಧಿಸಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಖಾಸಗಿ ಪಾಲುದಾರರ ನಿಲುವು ಕ್ರಿಯಾ ಒಪ್ಪಂದದ ಈ ಅನುಚ್ಛೇದದ ವ್ಯತಿರಿಕ್ತವಾಗಿರುವುದು ಸ್ಪಷ್ಟವಾಗಿದೆ. ಕ್ರಿಯಾ ಒಪ್ಪಂದದ ಈ ಅನುಚ್ಛೇದದಡಿಯಲ್ಲಿ ಗುರುತರ ಮಾಹಿತಿಯನ್ನು ಪಡೆಯಲು ಲೋಕೋಪಯೋಗಿ ಇಲಾಖೆ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. (ಪುಟ ಸಂಖ್ಯೆ: 134 ರಿಂದ 145)

ಮೇಲೆ ಉಲ್ಲೇಖಿಸಿರುವ ಅಂಶಗಳನ್ನು ಪರಿಗಣಿಸಿದಲ್ಲಿ ಕ್ರಿಯಾ ಒಪ್ಪಂದದ 22 ಅನುಚ್ಛೇದಗಳ ಪೈಕಿ 16 ಪ್ರಮುಖ ಅನುಚ್ಛೇದಗಳನ್ನು ಖಾಸಗಿ ಪಾಲುದಾರರು ಸ್ಪಷ್ಟವಾಗಿ ಹಾಗೂ ನೇರವಾಗಿ ಉಲ್ಲಂಘಿಸಿರುವುದು ಸಮಿತಿಗೆ ಸ್ಪಷ್ಟವಾಗಿದೆ. ಸೋಮಶೇಖರ ರೆಡ್ಡಿ ಪ್ರಕರಣದ ತೀರ್ಪು ಹಾಗೂ ಇದಕ್ಕೆ ಸಂಬಂಧಿಸಿದ ಸರ್ವೋಚ್ಛ ನ್ಯಾಯಾಲಯದ ಮೇಲ್ಮನವಿ ತೀರ್ಪುಗಳನ್ನೂ ಸಹ ನಿಯತಕಾಲಿಕವಾಗಿ ಉಲ್ಲಂಘಿಸಲಾಗಿದೆ. ಕ್ರಿಯಾ ಒಪ್ಪಂದವನ್ನು ತಾತ್ವಿಕವಾಗಿ ಅಥವಾ ಅಕ್ಷರಶಃ ಪಾಲಿಸುವಲ್ಲಿ ಖಾಸಗಿ ಪಾಲುದಾರರು ಪ್ರಾಮಾಣಿಕತೆಯನ್ನು ಪ್ರದರ್ಶಿಸಿರುವುದಿಲ್ಲ. ವರದಿಯಲ್ಲಿ ನಿರೂಪಿಸಿದ ಬೆಳವಣಿಗೆಗಳನ್ನು ಅವಲೋಕಿಸಿದಾಗ ಪೂರ್ವ ಯೋಜಿತ ರೀತಿಯಲ್ಲಿ ಕ್ರಿಯಾ ಒಪ್ಪಂದದ ನಿರ್ಬಂಧನೆಗಳನ್ನು ಉಲ್ಲಂಘಿಸಿರುವುದು ಸ್ಪಷ್ಟವಾಗಿದೆ. ಈ ಸ್ತರದಲ್ಲಿ ಖಾಸಗಿ ಪಾಲುದಾರರು ಜಮೀನಿನ ವಹಿವಾಟುಗಳ ಮೌಲ್ಯ ಯೋಜನಾ ವೆಚ್ಚಕ್ಕಿಂತ ಹೆಚ್ಚುವರಿಯಾಗಿದೆ. ಇದರಿಂದ ಅವರ ಆದ್ಯತೆಗಳು ಸ್ಪಷ್ಟವಾಗುತ್ತದೆ. ಯು.ಟಿ.ಐ. ಬ್ಯಾಂಕಿಗೆ ಸಲ್ಲಿಸಿರುವ ಯೋಜನಾ ವರದಿಯಲ್ಲಿ ಖಾಸಗಿ ಪಾಲುದಾರರ ಪ್ರಮುಖ ಪ್ರತಿಪಾದನೆ ಜಮೀನು ಮಾರಾಟದಿಂದ ಬರುವ ಆದಾಯವಾಗಿದೆ. ಖಾಸಗಿ ಪಾಲುದಾರರು ಸರ್ಕಾರಿ ಆದೇಶದ ಅನುಗುಣವಾಗಿ ನಗರ ಸಮುಚ್ಛಯಗಳಲ್ಲಿ ವಾಣಿಜ್ಯ ಬಳಕೆಯ ಪ್ರದೇಶವನ್ನು 28.03.2014 ರೊಳಗಾಗಿ 1999-2000 ದ ಮಾರ್ಗಸೂಚಿ ದರಗಳಲ್ಲಿ ಖರೀದಿಸಬೇಕಾಗಿರುವುದು. ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಈ ಯೋಜನೆಯಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿಗಿಂತ ರಿಯಲ್ ಎಸ್ಟೇಟ್ ವಹಿವಾಟುಗಳಿಗೆ ಆದ್ಯತೆ ನೀಡಿರುವುದು ಸ್ಪಷ್ಟವಾಗುತ್ತದೆ. ಬೆಂಗಳೂರು ನಗರದ ಪ್ರಮುಖ ವಾಹನ ದಟ್ಟಣೆಯನ್ನು ತಡುಗಿಸುವಲ್ಲಿ ಪೆರಿಫೆರಲ್ ಹಾಗೂ ಲಿಂಕ್ ರಸ್ತೆಗಳು ಪ್ರಮುಖ ಪಾತ್ರವನ್ನು ವಹಿಸುತ್ತಿವೆ. ಬೆಂಗಳೂರು-ಮೈಸೂರು ಪಥವನ್ನು ವಾಹನಗಳ ದಟ್ಟಣೆಯ ಪ್ರಗತಿಯ ಆಧಾರದ ಮೇಲೆ ಅಭಿವೃದ್ಧಿಪಡಿಸುವುದು ಅತ್ಯಾವಶ್ಯಕವಾಗಿದೆ.

20.11.1995 ರ ಸರ್ಕಾರಿ ಆದೇಶದ ಅನುಗುಣವಾಗಿ ಸರ್ಕಾರಕ್ಕೆ ಯಾವುದೇ ಆರ್ಥಿಕ ಬಾಧ್ಯತೆ ಇಲ್ಲದೆ ಈ ಯೋಜನೆಯನ್ನು ಅನುಷ್ಠಾನಗೊಳಿಸಬೇಕಾಗುವುದು. ಈ ವರದಿಯಲ್ಲಿ ಪ್ರತಿಪಾದಿಸಿರುವಂತೆ ಈ ಷರತ್ತಿಗೆ ವ್ಯತಿರಿಕ್ತವಾಗಿ ಖಾಸಗಿ ಪಾಲುದಾರರು ಕನಿಷ್ಠ ಪ್ರಮಾಣದಲ್ಲಿ ಹೂಡಿಕೆಯನ್ನು ಸ್ವಂತ ಸಂಪನ್ಮೂಲಗಳಲ್ಲದೆ ಸರ್ಕಾರಿ ಜಮೀನಿನ ಖಾತ್ರಿಯ ಮೇಲೆ ಪಡೆದಿರುವ ಸಾಲದ ಮುಖಾಂತರ ಮಾಡಿರುವುದು ಸ್ಪಷ್ಟವಾಗಿದೆ. ಭೂಸ್ವಾಧೀನಕ್ಕೆ ಅವಶ್ಯಕವಿರುವ ಪರಿಹಾರ ಮೊತ್ತ, ಸೇವಾ ಶುಲ್ಕ ಇತ್ಯಾದಿಗಳನ್ನು ಪಾವತಿಸುವುದರಿಂದ ಖಾಸಗಿ ಪಾಲುದಾರರಿಗೆ ಗುರುತರ ವಿನಾಯಿತಿ ಹಾಗೂ ರಿಯಾಯಿತಿಗಳನ್ನು ನೀಡಲಾಗಿದೆ. ಯೋಜನಾ ಅನುಷ್ಠಾನದ ವಿಳಂಬದಿಂದಾಗಿ ಖಾಸಗಿ ಪಾಲುದಾರರು ನೀಡಿರುವ ಸರಾಸರಿ ಪರಿಹಾರ ಮೊತ್ತವೂ ಸಹ ಪ್ರಸಕ್ತ ಮಾರುಕಟ್ಟೆ ದರಗಳಿಗೆ ಹೋಲಿಸಿದರೆ ಕನಿಷ್ಠ ಮಟ್ಟದಲ್ಲಿದೆ. ಬಹುತೇಕ ಭೂ ಮಾಲೀಕರು ಇದನ್ನು ಪ್ರಶ್ನಿಸಿ ನ್ಯಾಯಾಲಯಗಳಲ್ಲಿ ಪ್ರಕರಣಗಳನ್ನು ದಾಖಲಿಸಿದ್ದು, ಈ ಪ್ರಕರಣಗಳು ಇನ್ನೂ ಇತ್ಯರ್ಥವಾಗಬೇಕಾಗಿದೆ. ವಾಸ್ತವಿಕವಾಗಿ ಒಟ್ಟು ಭೂಮಾಲೀಕರ ಪೈಕಿ ಪ್ರತಿಶತ 58 ರಷ್ಟು ಭೂ ಮಾಲೀಕರು ಈವರೆವಿಗೂ ಭೂ ಪರಿಹಾರವನ್ನು ಸ್ವೀಕರಿಸಿರುವುದಿಲ್ಲ. ಸಂಪೂರ್ಣವಾಗಿ ಭೂ ಪರಿಹಾರವನ್ನು ಸ್ವೀಕರಿಸಿದವರ ಪ್ರಮಾಣ ಪ್ರತಿಶತ 27 ರಷ್ಟಿದೆ. ಪ್ರತಿಶತ 15 ರಷ್ಟು ಭೂ ಮಾಲೀಕರು ಭಾಗಶ: ಪರಿಹಾರವನ್ನು ಸ್ವೀಕರಿಸಿರುತ್ತಾರೆ. ಈ ಯೋಜನೆಯ ಅಡಿಯಲ್ಲಿ ಸ್ವಾಧೀನಪಡಿಸಿಕೊಂಡಿರುವ ಭೂಮಿಯ ಪೈಕಿ ಪ್ರತಿಶತ 91 ರಷ್ಟು ಭೂಮಿ ಕೃಷಿ ಜಮೀನಾಗಿರುತ್ತದೆ. ಐಸೆಕ್ ಮಾಡಿರುವ ಪರೀಕ್ಷಾರ್ಥ ತಪಾಸಣೆಯ ಅನುಗುಣವಾಗಿ ಪ್ರತಿಶತ 60ರಷ್ಟು ಯೋಜನಾ ಸಂತ್ರಸ್ತರು ದಿನಗೂಲಿ ನೌಕರರಾಗಿರುತ್ತಾರೆ. ಒಟ್ಟು ಸ್ವಾಧೀನಪಡಿಸಿಕೊಂಡಿರುವ ಜಮೀನಿನ ಪೈಕಿ ಪ್ರತಿಶತ 69 ರಷ್ಟು ಸಣ್ಣ ಹಾಗೂ ಅತೀ ಸಣ್ಣ ಹಿಡುವಳಿದಾರರಿಗೆ ಅನ್ವಯಿಸುತ್ತದೆ.ಖಾಸಗಿ ಪಾಲುದಾರರು ಭೂ ಪರಿಹಾರವನ್ನು ನೀಡಲು ಪಾವತಿಸಿರುವ ಮೊತ್ತ ಹಾಗೂ ಪಾವತಿಯ ದಿನಾಂಕಗಳನ್ನು ಪರಿಶೀಲಿಸಿದಾಗ 274.99 ಕೋಟಿ ರೂ.ಗಳ ಪೈಕಿ 141.99 ಕೋಟಿ ರೂ.ಗಳನ್ನು 2003 ರಿಂದ 2006 ರ ಅವಧಿಯಲ್ಲಿ 9 ಕಂತುಗಳಲ್ಲಿ ಪಾವತಿಸಿದ್ದು, ಉಳಿದ ಪ್ರತಿಶತ 48 ರಷ್ಟು ಅಂದರೆ 133 ಕೋಟಿ ರೂ.ಗಳನ್ನು 2011–12ನೇ ಸಾಲಿನಲ್ಲಿ ಒಂದೇ ಕಂತಿನಲ್ಲಿ ಪಾವತಿಸಿರುವುದು ಸ್ಪಷ್ಟವಾಗುತ್ತದೆ. 08/2006 ರಿಂದ 03/2011 ರ ಅವಧಿಯಲ್ಲಿ ಯಾವುದೇ ಪರಿಹಾರಕ್ಕಾಗಿ ಹಣವನ್ನು ಠೇವಣಿ ಮಾಡಿರುವುದಿಲ್ಲ. 5 ವರ್ಷಗಳವರೆಗೆ ಯಾವುದೇ ಪರಿಹಾರವನ್ನೂ ಪಾವತಿಸಿರುವುದಿಲ್ಲ. ಈ ವೈಫಲ್ಯತೆಗಳಿಂದಾಗಿ ಭೂ ಮಾಲೀಕರಿಗೆ ಕ್ರಮ ಬದ್ಧವಾಗಿ ಪರಿಹಾರ ಪಾವತಿ ಆಗದೇ ಇರುವುದು ಸ್ಪಷ್ಟವಾಗಿದೆ. ಈ ವರದಿಯಲ್ಲಿ ನಮೂದಿಸಿರುವಂತೆ ಪ್ರಾಥಮಿಕ ಅಧಿಸೂಚನೆಗೆ ಒಳಪಟ್ಟು ಅಂತಿಮ ಅಧಿಸೂಚನೆಗೆ ಒಳಪಡದೇ ಇರುವ ಜಮೀನಿನ ವಿಸ್ತೀರ್ಣ ಗುರುತರವಾಗಿದೆ. ಇದರಿಂದಾಗಿ ಭೂ ಮಾಲೀಕರು ಪರಿಹಾರವನ್ನೂ ಪಡೆಯದೆ ಭೂಮಿಯನ್ನು ಮಾರಾಟವನ್ನೂ ಮಾಡಲಾಗದೇ ಅತಂತ್ರ

ಸ್ಥಿತಿಯಲ್ಲಿದ್ದಾರೆ. ಪುನರ್ ವಸತಿ ಹಾಗೂ ಪುನರ್ ನಿರ್ಮಾಣ ಕ್ರಮಗಳನ್ನು ಕ್ರಿಯಾ ಒಪ್ಪಂದದ ಅನುಗುಣವಾಗಿ ಜಾರಿಗೊಳಿಸಿರುವುದಿಲ್ಲ. ಖಾಸಗಿ ಪಾಲುದಾರರ ಒತ್ತಾಯ ಪೂರ್ವಕ ಧೋರಣೆಯನ್ನು ಪ್ರತಿಭಟಿಸಿ ಸಂತ್ರಸ್ತರು ಮಾನವ ಹಕ್ಕು ಆಯೋಗದ ಮುಂದೆ ಪ್ರಕರಣ ದಾಖಲಿಸಿರುವ ಬಗ್ಗೆ ಸಮಿತಿಗೆ ಮಾಹಿತಿ ಇದೆ. ಈ ವರದಿಯಲ್ಲಿ ಪ್ರತಿಪಾದಿಸಿರುವಂತೆ ಸುಮಾರು 100 ಪ್ರಕರಣಗಳು ವಿವಿಧ ನ್ಯಾಯಾಲಯಗಳಲ್ಲಿ ದಾಖಲಾಗಿರುವುದು ಸ್ಪಷ್ಟವಾಗಿದೆ. ಕ್ರಿಯಾ ಒಪ್ಪಂದದ ಪಾಲನೆ ಹಾಗೂ ಭೂಮಿ ನಿರ್ವಹಣೆಗೆ ಅನ್ವಯಿಸುವಂತೆ ಹಲವಾರು ಸಾರ್ವಜನಿಕ ಹಿತಾಸಕ್ತಿ ಪ್ರಕರಣಗಳು ದಾಖಲಾಗಿವೆ. ಓ.ಡಿ.ಪಿ. ಪಂಕ್ತೀಕರಣಕ್ಕೆ ಸಂಬಂಧಿಸಿದಂತೆ ದಾಖಲಿಸಿರುವ ಪ್ರಕರಣ ಇತ್ಯರ್ಥವಾಗಬೇಕಾಗಿದೆ. ಮಾನ್ಯ ಸರ್ವೋಚ್ಛ ನ್ಯಾಯಾಲಯದ ಮುಂದೆ ಎರಡು ನ್ಯಾಯಾಂಗ ನಿಂದನಾ ಪ್ರಕರಣಗಳು ಬಾಕಿ ಇದೆ. ಇದರಿಂದ ಕಾನೂನು ಸಂದಿಗ್ಧತೆ ಉಂಟಾಗಿದೆ.

ಆರ್ಥಿಕ ಆಯಾಮಗಳಿಗೆ ಸಂಬಂಧಿಸಿದಂತೆ ಯೋಜನೆಯ ಪ್ರಾರಂಭದಲ್ಲಿ ಖಾಸಗಿ ಪಾಲುದಾರರು ಬಿಂಬಿಸಿರುವ ಐ.ಆರ್.ಆರ್. ಹಾಗೂ ಎನ್.ಪಿ.ವಿ. ಗಳು ಅಪ್ರಸ್ತುತವಾಗಿವೆ. ಖಾಸಗಿ ಪಾಲುದಾರರಿಗೆ ಆಗಿರುವ ಅನುದ್ದೇಶಿತ ಲಾಭ ಹಾಗೂ ಆದಾಯಗಳ ಹಿನ್ನೆಲೆಯಲ್ಲಿ ಹೂಡಿಕೆಯ ಮೇಲಿನ ಪ್ರತಿಫಲ ಮೂಲ ಒಪ್ಪಂದದ ಅನುಗುಣವಾಗಿ ಇರುವುದಿಲ್ಲ. ಹಲವಾರು ಪ್ರಕರಣಗಳಲ್ಲಿ ಕ್ರಿಯಾ ಒಪ್ಪಂದಕ್ಕೆ ಬಾಹಿರವಾದ ಸವಲತ್ತು ಅನುಕೂಲಗಳನ್ನು ಖಾಸಗಿ ಪಾಲುದಾರರಿಗೆ ವಿಸ್ತರಿಸಲಾಗಿದೆ. ಕ್ರಿಯಾ ಒಪ್ಪಂದದ ಪಾಲನೆಯ ಸಮಗ್ರ ನಿರ್ವಹಣೆಯ ಜವಾಬ್ದಾರಿ ಹೊಂದಿರುವ ಲೋಕೋಪಯೋಗಿ ಇಲಾಖೆ ಹಾಗೂ ಅಧಿಕಾರದತ್ತ ಸಮಿತಿ ಕರ್ತವ್ಯವನ್ನು ನಿರ್ವಹಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ.

ಈ ಯೋಜನೆಯಲ್ಲಿ ಯೋಜನಾ ಅನುಷ್ಠಾನದ ವಿವಿಧ ಸ್ತರಗಳಿಗೆ ಜವಾಬ್ದಾರಿಯುತವಾದ ಲೋಕೋಪಯೋಗಿ ಇಲಾಖೆ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಕಂದಾಯ ಇಲಾಖೆ, ನಗರಾಭಿವೃದ್ಧಿ ಇಲಾಖೆ, ಅರಣ್ಯ ಮತ್ತು ಪರಿಸರ ಇಲಾಖೆಗಳ ನಡುವೆ ವ್ಯಾಪಕ ಅಸಮನ್ವಯತೆಯಿರುವುದು ಸಮಿತಿಗೆ ಸ್ಪಷ್ಟವಾಗಿದೆ.

ಈ ಹಿನ್ನೆಲೆಯಲ್ಲಿ ಈ ಯೋಜನೆಯ ಅನುಷ್ಠಾನದಲ್ಲಿ ಸಮನ್ವಯತೆಯನ್ನು ನಿರ್ವಹಿಸುವ ಹಿತದೃಷ್ಟಿಯಿಂದ ತ್ರಿಸದಸ್ಯ ಸಮಿತಿಯನ್ನು ಸರ್ಕಾರವು ರಚಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಈ ಸಮಿತಿಯಲ್ಲಿ ತಾಂತ್ರಿಕ ಪರಿಣಿತರು, ಕಾನೂನು ತಜ್ಞರು ಹಾಗೂ ಸಮಗ್ರ ನಿರ್ವಹಣೆಯ ಅನುಭವವುಳ್ಳ ಆಡಳಿತ ತಜ್ಞರನ್ನು ನೇಮಿಸಬೇಕೆಂದು ಸಮಿತಿ ಶಿಫಾರಸ್ಸು ಮಾಡುತ್ತದೆ.

ಯೋಜನಾ ಅನುಷ್ಠಾನದಲ್ಲಿ ಹಲವಾರು ವೈಫಲ್ಯತೆಗಳಾಗಿದ್ದು, ಈ ವೈಫಲ್ಯತೆಗಳಲ್ಲಿ ಖಾಸಗಿ ಪಾಲುದಾರರ ಹಾಗೂ ಸರ್ಕಾರ/ಸರ್ಕಾರದ ಪ್ರತಿನಿಧಿತ್ವ ಹೊಂದಿರುವ ಸಂಸ್ಥೆಗಳ ಪಾತ್ರವನ್ನು ನಿರ್ದಿಷ್ಟವಾಗಿ ಗುರುತಿಸುವ ಅವಶ್ಯಕತೆಯಿರುತ್ತದೆ. ಏಕೆಂದರೆ, ಈ ವೈಫಲ್ಯತೆಗಳ ಹಿನ್ನೆಲೆಯಲ್ಲಿ ಸರ್ಕಾರವು ಮುಂದೆ ಅನುಷ್ಠಾನಗೊಳಿಸಲು ಇಚ್ಛಿಸುವ ಖಾಸಗಿ ಸಹಭಾಗಿತ್ವದ ಯೋಜನೆಯಲ್ಲಿ ಪರಿಹಾರ ಕ್ರಮವನ್ನು ಜಾರಿಗೊಳಿಸಲು ಈ ಪ್ರಕ್ರಿಯೆ ಬೆಂಬಲ ನೀಡುತ್ತದೆ. ಈ ಯೋಜನಾ ಅನುಷ್ಠಾನದಲ್ಲಿ ವಿದೇಶಿ ಸಮೂಹದ ಸಂಸ್ಥೆಗಳು ಪ್ರಾರಂಭಿಕ ಹಂತದಿಂದಲೇ ಭಾಗಿಯಾಗಿರುವುದರಿಂದ ಹಾಗೂ ವಿದೇಶಿ ನೇರ ಬಂಡವಾಳ ಹೂಡಿಕೆಯನ್ನು ಮಾಡುವುದಾಗಿ ಖಾಸಗಿ ಪಾಲುದಾರರು ಆಶ್ವಾಸನೆ ನೀಡಿರುವ ಹಿನ್ನೆಲೆಯಲ್ಲಿ ಈ ಯೋಜನೆಗೆ ಅಂತರ ರಾಷ್ಟ್ರೀಯ ಆಯಾಮಗಳು ಇರುವ ಹಿನ್ನೆಲೆಯಲ್ಲಿ ಅತೀ ಹೆಚ್ಚಿನ ತನಿಖೆಯ ಅವಶ್ಯಕತೆ ಇರುತ್ತದೆ. ಆದುದರಿಂದ ಬದಲಾಯಿತ ಸನ್ನಿವೇಶದಲ್ಲಿ ಸರ್ಕಾರವು ರಾಷ್ಟ್ರ ಮಟ್ಟದ ಸಂಸ್ಥೆಗಳಾದ ಸಿ.ಬಿ.ಐ., ಜಾರಿ ನಿರ್ದೇಶನಾಲಯ, ಕೇಂದ್ರ ಜಾಗೃತಿ ಆಯೋಗಗಳು ಅಥವಾ ತತ್ಸಮಾನ ಸಂಸ್ಥೆಗಳ ಮುಖಾಂತರ ಯೋಜನಾ ಅನುಷ್ಠಾನದ ವೈಫಲ್ಯತೆಗಳ ಬಗ್ಗೆ ಸಮಗ್ರ ತನಿಖೆ ನಡೆಸಲು ಸರ್ಕಾರವು ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

ಅಧ್ಯಕ್ಷರು,
ನೈಸ್ ಸದನ ಸಮಿತಿ

ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ ಸಚಿವಾಲಯ

ಬೆಳಗಾವಿ

ದಿನಾಂಕ 24.11.2016

# ಅನುಬಂಧಗಳು

251

NANDI INFRASTRUCTURE CORRIDOR ENTERPRISE LIMITED

NANDI IS NICE

# BANGALORE - MYSORE

***Infrastructure Corridor Project***

## FRAMEWORK AGREEMENT

3RD APRIL, 1997